ಆದ್ಯ ವಚನಕಾರ ಶ್ರೀ ದೇವರ ದಾಸಿಮಯ್ಯನವರು
ಕ್ರಿ.ಶ.980-1040 ಸಾ॥ ಮುದನೂರ ತಾ॥ ಸುರಪುರ ಜಿ॥ ಯಾದಗಿರಿ

ದೇವರ ದಾಸಿಮಯ್ಯನವರ ವಚನಗಳು

ಹಾಗೂ

ದಶೋಪನಿಷತ್ತು

ತೌಲನಿಕ ಅಧ್ಯಯನ

ಡಾ. ಈಶ್ವರಾನಂದ ಸ್ವಾಮಿ

ಅಂಕುರ ಪಬ್ಲಿಕೇಷನ್ಸ್

ಬನಶಂಕರಿ, ಬೆಂಗಳೂರು

Devara Daasimayyanavara Vachanagalu
Haagu
Dashopanishatthu
Written by
Dr. Eswarananda Swamy

Published by
Ankura Publications
No 72, 24th 'A' Cross,
Karesandra, BSK II Stage,
Bangalore - 560070

ಹಕ್ಕುಗಳು : ಲೇಖಕರದು
ಮೊದಲನೆಯ ಮುದ್ರಣ : ೨೦೧೪
ಬಳಸಿದ ಕಾಗದ : 70 GSM Maplitho
1/8 Demmy
ಪುಟಗಳು : ೨೭೪
ಪ್ರತಿಗಳು : ೧೦೦೦

ಬೆಲೆ : ರೂ. ೨೨೫

ಅಕ್ಷರ ಜೋಡಣೆ
ಕ್ರಿಯೇಟಿವ್ ಗ್ರಾಫಿಕ್ಸ್, ಬೆಂಗಳೂರು
ಮೊ : ೯೯೪೫೨೨೧೪೬೭

ಮುದ್ರಣ
ಸ್ಪ್ಯಾನ್ ಪ್ರಿಂಟ್
ಬೆಂಗಳೂರು – ೫೬೦ ೦೭೦

ಲೇಖಕರ ನುಡಿ

ಸತ್ಯ, ನ್ಯಾಯ, ಧರ್ಮಗಳ ಅಡಿಪಾಯದ ಮೇಲೆ ಬದುಕನ್ನು ಕಟ್ಟಿಕೊಂಡು ಪರಮಾತ್ಮನು ಪ್ರಸಾದಿಸಿರುವ ನಮ್ಮ ಪವಿತ್ರ ಜನ್ಮವನ್ನು ಮನುಕುಲದ ಮೇಲ್ಮೆಗಾಗಿ ದುಡಿದು ಧನ್ಯವಾಗಿಸಿಕೊಳ್ಳುವ ನಿಟ್ಟಿನಲ್ಲಿ ಹನ್ನರಡನೆಯ ಶತಮಾನದಲ್ಲಿ ನಡೆದ ವಚನಕ್ರಾಂತಿಯ ಪ್ರಭಾವವು ಇಪ್ಪತ್ತೊಂದಾದರೂ ಇನ್ನಷ್ಟು ಮತ್ತಷ್ಟು ಅಪ್ತವಾಗುತ್ತಿದೆ, ಆಪ್ಯಾಯವಾಗುತ್ತಿದೆ ಎಂದರೆ ಅವುಗಳಲ್ಲಿರುವ ವಾಸ್ತವ ಪ್ರಜ್ಞೆ, ವಸ್ತುನಿಷ್ಠ ಆಶಯ ಮತ್ತು ಸಮಾಜಮುಖಿ ಚಿಂತನೆಗಳೇ ಕಾರಣ.

ಬಸವಣ್ಣನವರು ಮತ್ತು ನೂರಾರು ಶರಣರು ನೀಡಿದ ಜೀವನ ಸಂವಿಧಾನ ನಮ್ಮೆಲ್ಲರ ವೈಯಕ್ತಿಕ ಬದುಕುಗಳಿಗಷ್ಟೇ ಅಲ್ಲದೆ ಎಲ್ಲ ಹಂತದ ಆಡಳಿತಕ್ಕೂ ಅರ್ಥಪೂರ್ಣವಾಗಿ ಅನ್ವಯಿಸುತ್ತದೆ. ಹನ್ನೆರಡನೆಯ ಶತಮಾನದಲ್ಲಿ ಜ್ವಾಲೆಯಾಗಿ ಭುಗಿಲೊಡೆದ ವಚನಕ್ರಾಂತಿಗೆ ಮೂಲತಃ ಕಿಡಿ ತಾಕಿದ್ದು ಅದಕ್ಕೆ ನೂರು ವರ್ಷಗಳ ಮುಂಚೆ – ನೇಕಾರ ವೃತ್ತಿಯಲ್ಲಿದ್ದ ದೇವರ ದಾಸಿಮಯ್ಯನವರಿಂದ ಎಂಬುದು ಸೂರ್ಯಚಂದ್ರರಿರುವಷ್ಟೇ ಸತ್ಯದ ವಿಷಯವಾಗಿದೆ. ಪತ್ನಿ ದುಗ್ಗಳೆಯ ವಿನಹ ಬೇರಾವ ವಚನಗಾರರೂ ದಾಸಿಮಯ್ಯರ ಬೆನ್ನಿಗಿರಲಿಲ್ಲ ಎಂಬುದು ಸಹ ಗಮನಿಸಬೇಕಾದ ಅಂಶ. ಅಂದರೆ ವಚನಗಳ ಪರಿಕಲ್ಪನೆ, ವಚನಗಳ ಸಾಹಿತ್ಯ, ವಚನಗಳ ಭಾಷೆ, ವಚನಗಳ ಭಾವ, ವಚನಗಳ ಆಶಯ, ವಚನಗಳ ಹಂಬಲ, ಇವುಗಳೆಲ್ಲದಕ್ಕೂ ನಾಂದಿ ಹಾಡಿದ ಪ್ರಪಿತಾಮಹ ದೇವರ ದಾಸಿಮಯ್ಯನವರೇ ಎಂಬುದು ಇಂದು ನಮಗೆಲ್ಲಾ ಸ್ಪಷ್ಟವಾಗಿ ಕಾಣುತ್ತಿರುವ ಕೈಗನ್ನಡಿಯಾಗಿದೆ. ಹೀಗಾಗಿ ವಚನಗಳನ್ನು ಬರೆಯುವ, ಹಾಡುವ, ಕೇಳುವ, ಅನುಭವಿಸುವ, ಅನುಭಾವಿಸುವ, ಅನುಸರಿಸುವ ಎಲ್ಲ ಹೃದಯದವರು ಮೊಟ್ಟಮೊದಲಿಗೆ ಒಂದು ಪ್ರಣಾಮವನ್ನು ದೇವರ ದಾಸಿಮಯ್ಯ ನವರಿಗೆ ಅರ್ಪಿಸಬೇಕಾದುದು ಅವಶ್ಯಕವೂ ಪುಣ್ಯಪ್ರದವೂ ಆಗಿದೆಯೆಂದರೆ ತಪ್ಪಿಲ್ಲ.

ಹೆತ್ತವರ ಪುಣ್ಯವೋ, ನನ್ನ ಸುಯೋಗವೋ ಬಾಲ್ಯದಿಂದಲೂ ನನಗೆ ಆಧ್ಯಾತ್ಮವೆಂದರೆ ಅಚ್ಚುಮೆಚ್ಚು, ಏನೋ ಒಂದು ಸೆಳೆತ. ಕಾರಣ ನನ್ನ ಇತಿಮಿತಿಗೆ ಮೀರಿದ ಯೋಗದ ಪ್ರಭಾವ. ಈ ಪ್ರಭಾವಲಯದಲ್ಲಿಯೇ ಮೈಸೂರು ವಿಶ್ವವಿದ್ಯಾನಿಲಯದಿಂದ

ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿ ಮುಗಿಸಿದ ನಂತರ ೨೦೧೨ರಲ್ಲಿ ನನ್ನ ಮನಸ್ಸಿಗೆ ಬಂದಿದ್ದು ಆದ್ಯ ವಚನಕಾರ ದೇವರ ದಾಸಿಮಯ್ಯನವರ ಬಗ್ಗೆ ದಶೋಪನಿಷತ್ತುಗಳನ್ನು ಅನ್ವಯಿಸಿ ಒಂದು ತೌಲನಿಕ ಅಧ್ಯಯನವನ್ನು ನಡೆಸಬೇಕೆಂಬ ಅಭೀಷ್ಟೆ. ಇದಕ್ಕೆ ಪೂರಕವಾಗಿ ನಿಂತವರು ಗುಲಬರ್ಗಾ ವಿಶ್ವವಿದ್ಯಾನಿಲಯದ ಸಂಸ್ಕೃತ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಪ್ರಾಧ್ಯಾಪಕರಾಗಿದ್ದ ನನ್ನ ನೆಚ್ಚಿನ ಗುರುವರ್ಯರಾದ ಡಾ. ಮೈಖೇಲ್‌ರವರು ಹಾಗೂ ಗುಲಬರ್ಗಾ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರಾಗಿದ್ದ ನನ್ನ ಮತ್ತೋರ್ವ ನೆಚ್ಚಿನ ಗುರುವರ್ಯರಾದ ಡಾ. ಡಿ.ಬಿ. ನಾಯಕ್ ಅವರು. ಇವರ ಜೊತೆಗೆ ತ್ರಿವೇಣಿ ಜ್ಞಾನ ಸಂಗಮದಂತೆ ಸೇರಿ ನನ್ನ ಹಂಬಲವನ್ನು ನನಸಾಗಿಸಿದವರು ಗುಲಬರ್ಗಾ ವಿಶ್ವವಿದ್ಯಾನಿಲಯದ ಸಂಸ್ಕೃತ ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನ ವಿಭಾಗದ ಮತ್ತೋರ್ವ ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರಾದ ಡಾ. ಪಿ.ಬಿ. ಸಂತಪ್ಪನವರ ಅವರು. ಈ ಮೂರೂ ಗುರುವರ್ಯರಿಗೆ ಈ ಮೂಲಕ ನನ್ನ ಶಿರಬಾಗಿದ ನಮನಗಳನ್ನು ಅರ್ಪಿಸುತ್ತೇನೆ.

ನನ್ನೆಲ್ಲ ಅಧ್ಯಯನಕ್ಕೆ ತಂಬು ಹೃದಯದಿಂದ ಆಶೀರ್ವಾದ ಮಾಡುತ್ತಿರುವ ನನ್ನ ಶ್ರೀಮಠದ ಆರಾಧ್ಯಗುರುಗಳಾದ ಶ್ರೀ ಪರಮಪೂಜ್ಯ ಸದಾನಂದ ಮಹಾಸ್ವಾಮೀಜಿ ಯವರಿಗೆ ನನ್ನ ಅನಂತ ಕೃತಜ್ಞತೆಗಳನ್ನು ಪ್ರಪ್ರಥಮವಾಗಿ ಸಮರ್ಪಿಸುತ್ತೇನೆ.

ಗುಳೇದಗುಡ್ಡದ ಬೃಹನ್ಮಠದ ಶ್ರೀ ಜಗದ್ಗುರು ಬಸವರಾಜ ಪಟ್ಟದಾರ್ಯ ಸ್ವಾಮೀಜಿಯವರು, ಗುಲಬರ್ಗಾ ಪರುಷ ಮಠದ ಶ್ರೀ ಷ.ಬ್ರ. ಅಭಿನವ ಚನ್ನಮಲ್ಲ ಶಿವಾಚಾರ್ಯರು ಕರುಣಿಸಿರುವ ಜ್ಞಾನ ದಾಸೋಹ, ಅನ್ನ ದಾಸೋಹಗಳು ಈ ಕಿರಿಯನ ಬದುಕನ್ನು ಬೆಳಗಿಸಿವೆ. ಈ ಇಬ್ಬರೂ ಪರಮಪೂಜ್ಯರಿಗೆ ನನ್ನ ಅನಂತ ಪ್ರಣಾಮಗಳು.

ನನ್ನದೀ ಸಾಮಾನ್ಯ ಬದುಕನ್ನು ವಿಶೇಷವೂ, ವಿಶಿಷ್ಟವೂ ಆಗಿ ಮಾರ್ಪಡಿಸುವ ನಿಟ್ಟಿನಲ್ಲಿ ಬಹಳ ದೊಡ್ಡ ಋಣಭಾರ, ಕಾರುಣ್ಯಧಾರೆ ನನ್ನ ಮೇಲೆ ಹರಿದಿದೆ. ಸಾಂಕೇತಿಕವಾಗಿಯಾದರೂ ಕೆಲವರನ್ನು ಸ್ಮರಿಸಲೇಬೇಕಾಗಿರುವುದು ನನ್ನ ಕರ್ತವ್ಯವಾಗಿದೆ.

ತುಮಕೂರಿನ ಡಾ. ಕೇಶವಮೂರ್ತಿಯವರು, ಹೊಳೇನರಸೀಪುರದ ಮಾತೃಶ್ರೀ ಜಿ.ಜೆ. ನಾಗವೇಣಿಯವರು, ಹಂಪಿಯ ನುಡಿ ಪತ್ರಿಕೆಯ ರಾಮಸ್ವಾಮಿಯವರು, ಅಮೃತಾ ಇನ್ಫೋ ಟೆಕ್ನಾಲಜಿಯ ರಾಷ್ಟ್ರೀಯ ಸೇವಾರತ್ನ ಎಂ.ವಿ.ಸಿ. ಹನುಮಂತಯ್ಯ ನವರು, ಹೊಸದುರ್ಗದ ಸಮಾಜಸೇವಕರು ಹಾಗೂ ಲೇಖಕರಾದ ಡಿ.ಟಿ. ಚಂದ್ರಶೇಖರ್‌ರವರು, ಗೆಳೆಯರುಗಳಾದ ಬಿ.ಆರ್. ಪದ್ಮನಾಭ, ಓಂಕಾರಮೂರ್ತಿ, ಮಧುಸೂದನ, ಎಚ್. ರಾಜಶೇಖರ್, ವಿ। ಗೌ.ತಿ. ವೆಂಕಟಾಚಲ, ದಿನೇಶ್, ರಂಗನಾಥ್

ಹೀಗೆ ನನ್ನಲ್ಲಿ ವಿನೂತನ ಶಕ್ತಿ ಸಂಚಲನಕ್ಕೆ ಕಾರಣರಾಗಿ, ಕಾರ್ಯಸಾಧನೆಗೆ ಸಹಕರಿಸಿರುವ ಎಲ್ಲಾ ಸ್ನೇಹಿತರಿಗೆ ನನ್ನ ಅಂತಃಕರಣಪೂರ್ವಕ ನಮಸ್ಕಾರಗಳು.

ಹಾಗೆಯೇ ಹಿರಿಯರುಗಳಾದ ಶ್ರೀ ಕೆ.ಆರ್. ಶ್ರೀನಿವಾಸ್, ಐಎಎಸ್, ಶ್ರೀ ಬಿ. ನಾಗರಾಜ್ ಕೆಎಎಸ್(ನಿ), ವಿಶೇಷ ಜಿಲ್ಲಾಧಿಕಾರಿಗಳು(ನಿ), ಶ್ರೀ ಎಂ.ಪಿ. ಉಮಾಶಂಕರ್, ಇಂಜಿನಿಯರ್ ಹಾಗೂ ಉದ್ಯಮಿ, ಶ್ರೀ ಡಾ. ಜಿ. ರಮೇಶ್, ಐಪಿಎಸ್, ಡಿಐಜಿಪಿ, ಶ್ರೀ ಜಿ.ಆರ್. ಮಂಜೇಶ್, ಕೆಎಎಸ್(ನಿ) ಹಾಗೂ ಶ್ರೀ ಎಸ್. ಗುರುಮೂರ್ತಿ ಅವರುಗಳಿಗೆ ನನ್ನ ಹೃತ್ಪೂರ್ವಕ ಪ್ರಣಾಮಗಳನ್ನು ಅರ್ಪಿಸುತ್ತೇನೆ.

ಕೃತಿ ಪ್ರಕಟಣೆಗೆ ಸಂಬಂಧಿಸಿದಂತೆ ಅತ್ಯಂತ ಉದಾತ್ತವಾದ ಉತ್ತೇಜನದಿಂದ ಬೆಂಬಲ ನೀಡಿರುವ ಸ್ಪ್ಯಾನ್ ಪ್ರಿಂಟ್ ಸಂಸ್ಥೆಯ ಸಹೃದಯಿ ಶ್ರೀ ಕೆ. ನಾರಾಯಣ್ ಮತ್ತು ಅವರ ಸಿಬ್ಬಂದಿ ವರ್ಗದವರಿಗೆ ವಿಶೇಷವಾದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಕೃತಿ ಈಗ ಅಭಿಮಾನಿ ಓದುಗರಾದ ನಿಮ್ಮ ಕೈನಲ್ಲಿದೆ. ಇದನ್ನು ಸ್ವೀಕರಿಸಿ ಓದಿ ನಿಮ್ಮ ಅನಿಸಿಕೆ, ಅಭಿಪ್ರಾಯಗಳನ್ನು ತಿಳಿಸಿದರೆ ನನ್ನ ಪ್ರಯತ್ನ ಸಾರ್ಥಕ.

ಇಂತು

ಬೆಂಗಳೂರು

ದಿನಾಂಕ : ೨೫/೫/೨೦೧೪

ಡಾ. ಈಶ್ವರಾನಂದಸ್ವಾಮಿ,

ಲೇಖಕರು.

ಪ್ರಕಾಶಕರ ಮಾತು

ವರ್ಗರಹಿತ, ವರ್ಣರಹಿತ, ಲಿಂಗತಾರತಮ್ಯವಿಲ್ಲದ, ಸರ್ವ ಸಮಾನತೆಯ, ಸತ್ಯಪೂರ್ಣವೂ, ಸೌಶೀಲ್ಯವೂ ಆದ ಬಾಳು ಮನುಕುಲಕ್ಕೆ ಚಿರಕಾಲ ಪ್ರಾಪ್ತವಾಗಬೇಕೆಂಬ ಸದಾಶಯದೊಂದಿಗೆ ಉನ್ನತ ವಿಚಾರಧಾರೆಗಳನ್ನು ಆಡುಭಾಷೆಯಲ್ಲಿ, ಸರಳಗನ್ನಡದಲ್ಲಿ ಬರೆದ ಕೀರ್ತಿ ೧೨ನೇ ಶತಮಾನದ ನಮ್ಮ ವಚನಕಾರರುಗಳದ್ದಾಗಿದೆ. ಜಾಗತಿಕ ಮಟ್ಟದಲ್ಲಿ ಇಂದು ನಾವು ಕಾಣುತ್ತಿರುವ ಸಂವಹನ ವ್ಯವಸ್ಥೆಯು ಆ ಕಾಲದಲ್ಲಿಯೇ ಇದ್ದಿದ್ದರೆ ಬಹುಶಃ ನಮ್ಮೆಲ್ಲಾ ವಚನಕಾರರ ಆಶಯಗಳು ಪ್ರಪಂಚದ ಮೂಲೆ ಮೂಲೆಗಳಲ್ಲಿ ಮುನ್ನುಗ್ಗಿ ತಮ್ಮ ಪ್ರಭಾವವನ್ನು ಬೀರಿ ಕನ್ನಡ ಭಾಷೆಯ ಅಂತಃಸ್ಸತ್ವವನ್ನು ಜಗಜ್ಜಾಹೀರುಗೊಳಿಸುತ್ತಿದ್ದವು.

೧೨ನೆಯ ಶತಮಾನದಲ್ಲಿ ವಚನಕ್ರಾಂತಿ ಪ್ರಾರಂಭವಾಯಿತೆಂದೇ ಎಲ್ಲ ಕಡೆ ಪ್ರಚಲಿತವಿದೆ. ಆದರೆ ಅದಕ್ಕಿಂತಲೂ ಸುಮಾರು ನೂರು ವರ್ಷಗಳಿಗಿಂತಲೂ ಮುಂಚಿತವಾಗಿಯೇ ಒಬ್ಬ ನೇಕಾರ ವೃತ್ತಿನಿರತ ಕರ್ಮಯೋಗಿ, ಸೇವಾನಿಷ್ಠ, ಗೃಹಸ್ಥಾಶ್ರಮ ತಪೋಯೋಗಿಯೊಬ್ಬರು ಈ ವಚನ ಸಾಹಿತ್ಯಕ್ಕೆ ಮೂಲ ಆಕರವನ್ನು ನೀಡಿ ಮುಂದಿನ ಶತಮಾನದ ಬಂಗಾರದ ಬೆಳಸಿಗೆ ಕಾರಣರಾದರು ಎಂಬ ಸತ್ಯವನ್ನು ಕೇಳಿದಾಗ ಸ್ವಾಭಾವಿಕವಾಗಿಯೇ ಮನಸ್ಸು ಮುದಗೊಂಡು ಉತ್ಸಾಹ ಗರಿಗೆದರುತ್ತದೆ.

ಅಂತಹದೊಂದು ಅನುಭವ ನಮಗೆ ಉಂಟಾದ ಪರಿಣಾಮವಾಗಿಯೇ ಇಂದು ನಿಮ್ಮ ಕೈನಲ್ಲಿದೆ ಈ ಗ್ರಂಥ. ರಾಮಾಯಣ, ಮಹಾಭಾರತ, ಭಗವದ್ಗೀತಾ, ವೇದಾಂಗಗಳು ಹೀಗೆ ಇವೆಲ್ಲಾ ಸಾರಸ್ವತ ಚೈತನ್ಯಗಳಿಗೆ ಸಂಕೇತವಾಗಿರುವುದೇ ವಚನಗಳು. ವಿಶೇಷವಾಗಿ ದಶೋಪನಿಷತ್ತನ್ನು ಮುಖ್ಯ ಭೂಮಿಕೆಯಲ್ಲಿಟ್ಟುಕೊಂಡು ಅದರ ಪ್ರಭಾವಲಯದಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ದೇವರದಾಸಿಮಯ್ಯ ನವರ ವಚನಗಳು ರೂಪುಗೊಂಡ ಬಗೆಯನ್ನು ಆರೋಗ್ಯಕರ ಹಿನ್ನೆಲೆಯಲ್ಲಿ ಅನ್ವೇಷಿಸುವ ಒಂದು ನಿರಾಗ್ರಹಪೂರ್ವಕವಾದ ಪ್ರಯತ್ನವೇ ಈ ಕೃತಿಯಾಗಿದೆ.

ನಮ್ಮ ಈ ಪ್ರಯತ್ನವು ನಾಡಿನ ಸಮಸ್ತ ಓದುಗ ಬಂಧುಗಳಿಗೆ ಇಷ್ಟವಾಗಬಹುದೆಂದು ಆಶಿಸುತ್ತಾ, ತಮ್ಮೆಲ್ಲ ಅಭಿಪ್ರಾಯ, ಅನಿಸಿಕೆಗಳಿಗೆ ಆತ್ಮೀಯ ಸ್ವಾಗತವಿದೆ ಎಂದು ತಿಳಿಸಬಯಸುತ್ತೇನೆ.

ಸರ್ವಂ ಶುಭಪ್ರದಂ

ಬೆಂಗಳೂರು
೨೫-೦೫-೨೦೧೪

ಪ್ರಕಾಶಕರು
ಅಂಕುರ ಪಬ್ಲಿಕೇಷನ್ಸ್

ಪರಿವಿಡಿ

ಅಧ್ಯಾಯ 1

ಪೀಠಿಕೆ

ಪ್ರಸ್ತಾವನೆ, ಉದ್ದೇಶ, ವ್ಯಾಪ್ತಿ.

ಅಧ್ಯಾಯ 2

ವೈದಿಕ ಸಾಹಿತ್ಯ ಪರಿಚಯ

2.1 ವೇದ, 2.2 ವೇದಗಳ ಉಗಮ, 2.3 ವೇದಗಳ ವಿಭಜನೆ, 2.4 ವೇದಗಳ ಕಾಲ, 2.5 ಋಗ್ವೇದ ಸಂಹಿತೆ, 2.6 ಯಜುರ್ವೇದ ಸಂಹಿತೆ, 2.7 ಸಾಮವೇದ ಸಂಹಿತೆ, 2.8 ಅಥರ್ವವೇದ ಸಂಹಿತೆ, 2.9 ವೇದಾಂಗಗಳು, 2.10 ಬ್ರಾಹ್ಮಣಗಳು, 2.11 ಅರಣ್ಯಕಗಳು, 2.12 ಉಪನಿಷತ್ತು, 2.13 ಉಪನಿಷತ್ತುಗಳ ಕಾಲ, 2.14 ಉಪನಿಷತ್ತುಗಳ ಸಂಖ್ಯೆ, 2.15 ದಶೋಪನಿಷತ್ತುಗಳ ಸಂಕ್ಷಿಪ್ತ ಪರಿಚಯ.

ಅಧ್ಯಾಯ 3

ವಚನಸಾಹಿತ್ಯದ ಪರಿಚಯ ಮತ್ತು ದೇವರ ದಾಸಿಮಯ್ಯನವರ ಬದುಕು, ಬರಹ

3.1 ವಚನಸಾಹಿತ್ಯದ ಪರಿಚಯ, 3.2 ವಚನಗಳ ಇತಿಹಾಸ, 3.3 ವಚನವಾಙ್ಮಯ, 3.4 ವಚನ ಪದದ ನಿಷ್ಪತ್ತಿ, 3.5 ವಚನ ರಚನಾ ಶೈಲಿ ಹಾಗೂ ತಂತ್ರ, 3.6 ವಚನಸಾಹಿತ್ಯದ ಉಗಮ, 3.7 ಶಾಕ್ತಪಂಥದ ನಂಟು, 3.8 ವಚನ ಪಂಥ 3.9 ವಚನಸಾಹಿತ್ಯದ ಸ್ವರೂಪ, 3.10 ವಚನಸಾಹಿತ್ಯದ ಹಿನ್ನೆಲೆ, 3.11 ವಚನಸಾಹಿತ್ಯದ ವೈಶಿಷ್ಟ್ಯ, 3.12 ದೇವರ ದಾಸಿಮಯ್ಯನವರ ಜೀವನ ಮತ್ತು ಸಾಹಿತ್ಯ, 3.12.1 ಜನನ ಮತ್ತು ಸ್ಥಳ, 3.12.2 ಬಾಲ್ಯ ಮತ್ತು ವಿದ್ಯಾಭ್ಯಾಸ, 3.12.3 ವಿವಾಹ, 3.12.4 ಸಂಸಾರ ಶ್ರೇಷ್ಠವೋ? ಸಂನ್ಯಾಸ ಶ್ರೇಷ್ಠವೋ?, 3.12.5 ಕಾಯಕ, 3.12.6 ತವನಿಧಿ, 3.12.7 ಜೈನರು ಶೈವರಾದರು, 3.13 ದೇವರ ದಾಸಿಮಯ್ಯನವರ ಕಾಲ, 3.14 ಜೇಡರ ದಾಸಿಮಯ್ಯ ಮತ್ತು ದೇವರ ದಾಸಿಮಯ್ಯ, 3.15 ಆದ್ಯವಚನಕಾರ, 3.16 ದೇವರ ದಾಸಿಮಯ್ಯನವರ ಸಾಹಿತ್ಯ, 3.17 ದೇವರ ದಾಸಿಮಯ್ಯನವರ

ವಚನಗಳ ಪ್ರಕಟಣೆಯ ಇತಿಹಾಸ, 3.18 ಅಂಕಿತನಾಮ, 3.19 ಬಸವಾದಿ ಶರಣರ ಮೇಲೆ ದೇವರ ದಾಸಿಮಯ್ಯನವರ ವಚನಗಳ ಪ್ರಭಾವ, 3.20 ಬಸವಾದಿ ಶರಣರ ದೃಷ್ಟಿಯಲ್ಲಿ ದೇವರ ದಾಸಿಮಯ್ಯನವರು, 3.21 ವಚನ ಚಳುವಳಿಯಲ್ಲಿ ದೇವರ ದಾಸಿಮಯ್ಯನವರ ಪಾತ್ರ, 3.22 ವಚನಸಾಹಿತ್ಯದ ಸಾರ್ವಭೌಮ ದೇವರ ದಾಸಿಮಯ್ಯನವರು.

ಅಧ್ಯಾಯ 4

ದಶೋಪನಿಷತ್ತುಗಳ ತಾತ್ತ್ವಿಕ ಅಧ್ಯಯನ
4.1 ಬ್ರಹ್ಮ, 4.2 ಜೀವ, 4.3 ಜಗತ್ತು, 4.4 ಆತ್ಮ, 4.5 ಮೋಕ್ಷ.

ಅಧ್ಯಾಯ 5

ದೇವರ ದಾಸಿಮಯ್ಯನವರ ವಚನಗಳ ತಾತ್ತ್ವಿಕ ಅಧ್ಯಯನ
5.1 ಈಶ್ವರ, 5.2 ಜೀವ, 5.3 ಜಗತ್ತು, 5.4 ಆತ್ಮ, 5.5 ಮೋಕ್ಷ.

ಅಧ್ಯಾಯ 6

ದಶೋಪನಿಷತ್ತು ಮತ್ತು ದೇವರ ದಾಸಿಮಯ್ಯನವರ ವಚನಗಳ ತೌಲನಿಕ ಅಧ್ಯಯನ 6.1 ಬ್ರಹ್ಮ, 6.2 ಆತ್ಮ, 6.3 ಜೀವ, 6.4 ಜಗತ್ತು, 6.5 ಮೋಕ್ಷ, 6.6 ಶಾಂತಿ ಮಂತ್ರಗಳು 6.7 ಗುರು–ಶಿಷ್ಯರ ಸಂಬಂಧ 6.8 ನೈತಿಕಾಚರಣೆಗಳು, 6.9 ಸ್ತ್ರೀಯರ ಸ್ಥಾನ–ಮಾನ.

ಅಧ್ಯಾಯ 7

ಉಪಸಂಹಾರ.

ಗ್ರಂಥಋಣ

ಸಂಕ್ಷಿಪ್ತಾಕ್ಷರಗಳ ಸೂಚಿ

1.	ಈಶಾವಾಸ್ಯೋಪನಿಷತ್	–	ಈಶ.
2.	ಕೇನೋಪನಿಷತ್	–	ಕೇನ.
3.	ಕಠೋಪನಿಷತ್	–	ಕಠ.
4.	ಪ್ರಶ್ನೋಪನಿಷತ್	–	ಪ್ರಶ್ನ.
5.	ಮುಂಡಕೋಪನಿಷತ್	–	ಮುಂಡಕ.
6.	ಮಾಂಡೂಕ್ಯೋಪನಿಷತ್	–	ಮಾಂಡೂಕ.
7.	ತೈತ್ತಿರೀಯೋಪನಿಷತ್	–	ತೈತ್ತಿರೀಯ.
8.	ಐತರೇಯೋಪನಿಷತ್	–	ಐತರೇಯ.
9.	ಛಾಂದೋಗ್ಯೋಪನಿಷತ್	–	ಛಾಂದೋಗ್ಯ.
10.	ಬೃಹದಾರಣ್ಯಕೋಪನಿಷತ್	–	ಬೃಹದಾರಣ್ಯಕ.
11.	ಶ್ವೇತಾಶ್ವತರೋಪನಿಷತ್	–	ಶ್ವೇತ.
12.	ವೈದಿಕ ಸಾಹಿತ್ಯ ಚರಿತ್ರೆ	–	ವೈ.ಸಾ.ಚ.
13.	ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ	–	ಸಂ.ಭಾ.ಸಾ.ಚ.
14.	ಉಪನಿಷತ್ ಭಾವಧಾರೆ	–	ಉ.ಭಾ.
15.	ವೇದ–ವೇದಾಂಗ	–	ವೇ.ವೇ.
16.	ಉಪನಿಷತ್ತುಗಳ ಸಂದೇಶ	–	ಉ.ಸಂ.
17.	ಉಪನಿಷತ್ತುಗಳ ತತ್ತ್ವ	–	ಉ.ತತ್ತ್ವ.
18.	ಉಪನಿಷತ್ತುಗಳ ಸಾರ ಸಂಗ್ರಹ	–	ಉ.ಸಾ.ಸಂ
19.	ವೈದಿಕ ಸಾಹಿತ್ಯ ಕಾ ಇತಿಹಾಸ	–	ವೈ.ಸಾ.ಇ.
20.	ವೇದಾಂತ ಸಾರ	–	ವೇ.ಸಾ.
21.	ಭಗವದ್ಗೀತೆ	–	ಗೀತೆ.
22.	ಋಗ್ವೇದ ಭಾಷ್ಯ ಭೂಮಿಕಾ	–	ಋ.ಭಾ.ಭೂ.
23.	ಮನುಸ್ಮೃತಿ	–	ಮನು.

24.	ಉಪನಿಷತ್ತು ಮತ್ತು ವಚನಗಳು ತೌಲನಿಕ ಅಧ್ಯಯನ	–	ಉ.ವ.ತೌ.ಅ.
25.	ಸಮಗ್ರ ವಚನ ಸಂಪುಟ	–	ಸ.ವ.ಸಂ.
26.	ಶ್ರೀ ದೇವರ ದಾಸಿಮಾರ್ಯ ಪುರಾಣಮ್	–	ದೇ.ದಾ.ವ.
27.	ಶರಣ ಚರಿತಾಮೃತ	–	ಶ.ಚ.
28.	ವಚನ ಧರ್ಮಸಾರ	–	ವ.ಧ.ಸಾ.
29.	ದೇವರ ದಾಸಿಮಯ್ಯನ ಜೀವನ ಮತ್ತು ಸಾಹಿತ್ಯ	–	ದೇ.ದಾ.ಜೀ.ಸಾ.
30.	ಸಗರನಾಡಿನ ಶಿವಶರಣರು	–	ಸ.ಶಿ.
31.	ವಚನ ಚಳುವಳಿ	–	ವ.ಚ.
32.	ಬಸವೇಶ್ವರ ವಚನ ದೀಪಿಕೆ	–	ಬ.ವ.ದೀ.
33.	ಕನ್ನಡ ಸಾಹಿತ್ಯ ಚರಿತ್ರೆ	–	ಕ.ಸಾ.ಚ.
34.	ಶಾಸನಗಳಲ್ಲಿ ಶಿವಶರಣರು	–	ಶಾ.ಶಿ.
35.	ಅಲ್ಲಮನ ವಚನ ಚಂದ್ರಿಕೆ	–	ಅ.ವ.ಚಂ.
36.	ವಚನ ಪರಿಸರ	–	ವ.ಪ.
37.	ವಚನ ಸಾಹಿತ್ಯ ಒಂದು ಇಣುಕು ನೋಟ	–	ವ.ಸಾ.ಇ.ನೋ.
38.	ದೇವರ ದಾಸಿಮಾರ್ಯ ಪ್ರಶಸ್ತಿ	–	ದೇ.ದಾ.ಪ್ರ.
39.	ಲಿಂಗಾಯತ ಅಧ್ಯಯನ	–	ಲಿಂ.ಅ.
40.	ದೇವಾಂಗ ಪುರಾಣ	–	ದೇ.ಪು.
41.	ಕೆಲವು ವಚನಕಾರರು	–	ಕೆ.ವ.
42.	ಜೇಡರ ದಾಸಿಮಯ್ಯನ ವಚನಗಳು	–	ಜೇ.ದಾ.ವ.
43.	ಮುದನೂರು ದಾಸಿಮಯ್ಯ ಒಂದು ಅಧ್ಯಯನ	–	ಮು.ದಾ.ಅ.
44.	ಜೇಡರ ದಾಸಿಮಯ್ಯ	–	ಜೇ.ದಾ.
45.	ದೇವರ ದಾಸಿಮಯ್ಯ ವಚನ ದರ್ಪಣ	–	ದೇ.ದಾ.ವ.ದ.
46.	ಲಾಕ್ಷಣಿಕ ರತ್ನಮಾಲೆ	–	ಲಾ.ರ.
47.	ಬಸವಣ್ಣನವರ ಷಟ್ಸ್ಥಲದ ವಚನಗಳು	–	ಬ.ಷ.ವ.
48.	ಸರ್ವಜ್ಞನ ವಚನಗಳು	–	ಸ.ವ.

ಅಧ್ಯಾಯ–1

ಪೀಠಿಕೆ

ಅಧ್ಯಾಯ – 1

ಪೀಠಿಕೆ – ಕೃತಿ ಪರಿಚಯ

1.1 ಪ್ರಸ್ತಾವನೆ

ವೇದಗಳು ನಾಲ್ಕು. ಪ್ರತಿಯೊಂದು ವೇದದಲ್ಲಿಯೂ ಮಂತ್ರ, ಬ್ರಾಹ್ಮಣ, ಆರಣ್ಯಕ ಮತ್ತು ಉಪನಿಷತ್ತುಗಳೆಂಬ ನಾಲ್ಕು ಭಾಗಗಳಿವೆ. ಮಂತ್ರವು ವೇದಗಳ ಆದಿಯಲ್ಲಿ ಬಂದರೆ, ಉಪನಿಷತ್ತುಗಳು ಅಂತ್ಯದಲ್ಲಿ ಬರುತ್ತವೆ. ಇವು ಕೇವಲ ಗ್ರಂಥಗಳಲ್ಲ, ರಸವತ್ತಾದ ಮೌಲ್ಯ, ತ್ರಿಕಾಲಾಬಾಧಿತವಾದ ತತ್ತ್ವಗಳುಳ್ಳ ಸದ್ಗ್ರಂಥಗಳಾಗಿವೆ. ಮಾನವ ಜೀವನದ ಪರಮೋನ್ನತವಾದ ತತ್ತ್ವಕ್ಕೆ ಕರೆದೊಯ್ಯುವ ವಿದ್ಯೆಯೇ ಆಗಿವೆ.

ಭಾರತೀಯ ಅಧ್ಯಾತ್ಮಿಕ ಪರಂಪರೆಯಲ್ಲಿ ತತ್ತ್ವಶಾಸ್ತ್ರವನ್ನು ಬೋಧಿಸುವ ಉಪನಿಷತ್ತುಗಳು "ಬ್ರಹ್ಮವಿದ್ಯೆ"ಯ ಚಿಂತನಾಪರ ಗ್ರಂಥಗಳಾಗಿವೆ. ಜೀವ, ಜಗತ್ತು ಮತ್ತು ಈಶ್ವರ ವಿಷಯಕವಾಗಿ ಬೋಧನಾಯುಕ್ತ ಎನಿಸಿವೆ ಹಾಗೂ ಜ್ಞಾನಪರ ಗ್ರಂಥಗಳಾಗಿವೆ. ಇವು ವೇದಗಳ ಕೊನೆಯ ಭಾಗವಾದುದರಿಂದ ವೇದಾಂತ ಗ್ರಂಥಗಳೆಂದು ಕರೆಯುತ್ತಾರೆ.

ವೇದ ಶಬ್ದವು **'ವಿದ್ ಜ್ಞಾನೇ'** ಧಾತುವಿನಿಂದ ವ್ಯುತ್ಪತ್ತಿಯಾಗಿದೆ. 'ವೇದ' ಎಂದರೆ ಜ್ಞಾನ, ತಿಳಿ ಮೊದಲಾದ ಅರ್ಥಗಳನ್ನು ಹೇಳಲಾಗುತ್ತದೆ. ಜ್ಞಾನ ಬೋಧಕ ಶಬ್ದರಾಶಿಗೂ ವೇದ ಎಂದು ಕರೆಯುತ್ತಾರೆ. ವೇದಗಳು ಯಾರಿಂದಲೂ ರಚಿತವಾದವುಗಳಲ್ಲ. ಅವು ನಿತ್ಯ ಸತ್ಯರೂಪಿಯಾದ ಈಶ್ವರನ ವಾಣಿಯಾದುದರಿಂದ ಅಪೌರುಷೇಯ ವಾಕ್ಯವೆಂದು ಹೇಳುವ ಸಂಪ್ರದಾಯವಿದೆ. ಬೃಹದಾರಣ್ಯಕೋಪನಿಷತ್ತು ಸಹ **"ಅಸ್ಯ ಮಹತೋ ಭೂತಸ್ಯ ನಿಶ್ವಸಿತಮೇತದ್ಯದೃಗ್ವೇದೋ ಯಜುರ್ವೇದಃ ಸಾಮವೇದೋऽಥರ್ವಾಂಗಿ ರಸ"**[1] ಎಂದು ವ್ಯಕ್ತಪಡಿಸಿದೆ.

ವೇದ ಮೊದಲು ಒಂದೇ ಆಗಿತ್ತು, ದೀರ್ಘಕಾಲದ ನಂತರ ಸುಲಭ ಅಧ್ಯಯನದ ಉದ್ದೇಶದಿಂದ ವ್ಯಾಸರು ಇದನ್ನು ವಿಂಗಡಿಸಿ ನಾಲ್ಕು ಭಾಗಗಳಾಗಿ ವಿಂಗಡಿಸಿದರು. ವ್ಯಾಸ ಪದದ ವ್ಯುತ್ಪತ್ತಿ **"ವ್ಯಸ್ಯತಿ ವೇದಾನ್ ಇತಿ ವ್ಯಾಸ"**[2] ಎಂದು ಆಗಿದೆ.

ವೇದಗಳ ಮಂತ್ರ ಭಾಗದಲ್ಲಿ ಇಂದ್ರ, ವರುಣ, ವಾಯು, ಅಗ್ನಿ ಮೊದಲಾದ ದೇವತೆಗಳ ಸ್ತುತಿಪರ ಮಂತ್ರಗಳಿವೆ. ಋಷಿಗಳು ಪ್ರಾರಂಭದಲ್ಲಿ ಸೃಷ್ಟಿಯ ಶಕ್ತಿಯನ್ನು ಕಂಡು ಬೆರಗಾಗಿ ಪ್ರಕಾಶಮಾನವಾದ ಸೂರ್ಯನನ್ನು, ತಂಪಾದ ಬೆಳಕನ್ನು ನೀಡುವ ಚಂದ್ರನನ್ನು, ರೋಮಾಂಚಕವಾದ ಗುಡುಗು, ಮಿಂಚು, ನದಿ, ಸಮುದ್ರ ಮೊದಲಾದವುಗಳು ನೋಡಿ ಅವುಗಳನ್ನು ಮಂತ್ರಗಳ ಮೂಲಕ ಸ್ತುತಿಸಿದರು. ಅವುಗಳೇ ಋಗ್ವೇದಾದಿ ಸಂಹಿತೆಗಳಾದವು. ವೇದಗಳ ಎರಡನೆಯ ಭಾಗವೇ ಬ್ರಾಹ್ಮಣಗಳು. ಇದರಲ್ಲಿ ಯಜ್ಞಯಾಗಾದಿಗಳ ಕ್ರಿಯಾ ವಿಧಾನಗಳನ್ನು ತಿಳಿಸಲಾಗಿದೆ. ವೇದಗಳ ಮೂರನೆಯ ಭಾಗ ಅರಣ್ಯಕಗಳಾಗಿದ್ದು, ಅಧ್ಯಾತ್ಮಿಕ ಜ್ಞಾನವನ್ನು ಬೋಧಿಸುತ್ತವೆ. ಸಂಸಾರ ಗೊಂದಲದಿಂದ ದೂರವಿದ್ದು, ಅರಣ್ಯದಲ್ಲಿ ಏಕಾಂತವಾಗಿ ಅಧ್ಯಯನ ಮಾಡುವ ಗ್ರಂಥಗಳಿಗೆ ಅರಣ್ಯಕಗಳೆಂದು ಕರೆಯಲಾಗಿದೆ. ಅರಣ್ಯಕಗಳ ಮುಂದುವರೆದ ಅಥವಾ ವೇದದ ಕೊನೆಯ ಭಾಗವೇ ಉಪನಿಷತ್ತುಗಳಾಗಿವೆ. ಇವು ವಿಶ್ವದ ಜ್ಞಾನ ಭಂಡಾರವಾಗಿ ಜ್ಯೋತಿರ್ಮಯ ಸ್ವರೂಪವಾದ ಆತ್ಮ ತತ್ತ್ವವನ್ನು ಬೋಧಿಸುವ ಕೃತಿರತ್ನಗಳಾಗಿವೆ. ಋಷಿಗಳ ಅಂತರ್ ದೃಷ್ಟಿಗೆ ಗೋಚರವಾದ ಪರಬ್ರಹ್ಮ ವಸ್ತುವಿನ ಸ್ವರೂಪವನ್ನು ನಿರೂಪಿಸುವ ಗ್ರಂಥಗಳೇ ಉಪನಿಷತ್ತುಗಳಾಗಿವೆ. ಇವು ತತ್ತ್ವಶಾಸ್ತ್ರದ ರತ್ನಖಚಿತವಾದ ಸಿಂಹಾಸನವನ್ನು ಅಲಂಕರಿಸಿವೆ.

ದೇವತಾ ಪ್ರಾರ್ಥನೆ ಮತ್ತು ವರ್ಣನೆಗಳನ್ನು ಪ್ರಧಾನವಾಗಿ ಹೇಳುವ ಛಂದೋಬದ್ಧವಾದ ಋಕ್ಕುಗಳ ಸಂಗ್ರಹವೇ ಋಗ್ವೇದ ಸಂಹಿತೆಯಾಗಿದೆ. ಈ ಸಂಹಿತೆಯು ವೇದಸಂಹಿತೆಗಳಲ್ಲಿಯೇ ಅತ್ಯಂತ ಪ್ರಾಚೀನ ಮತ್ತು ಪ್ರಧಾನ ಗ್ರಂಥವಾಗಿದೆ. ಋಗ್ವೇದ ಸಂಹಿತೆಯನ್ನು ಎರಡು ರೀತಿಯಾಗಿ ವಿಂಗಡಿಸಿದ್ದಾರೆ. ಮೊದಲನೆಯ ವಿಭಾಗದಲ್ಲಿ 10 ಮಂಡಲ 85 ಅನುವಾಕಗಳಿವೆ. ಒಂದೊಂದು ಅನುವಾಕದಲ್ಲಿ ಹಲವಾರು ಸೂಕ್ತಗಳಿವೆ. ಒಟ್ಟು 1028 ಸೂಕ್ತಗಳಿವೆ. ಒಂದೊಂದು ಸೂಕ್ತದಲ್ಲೂ ಹಲವಾರು ಮಂತ್ರಗಳಿವೆ. ಅವುಗಳ ಸಂಖ್ಯೆ 10,552. ಋಗ್ವೇದ ಸಂಹಿತೆಯ ಎರಡನೆಯ ವಿಭಾಗಕ್ರಮದಲ್ಲಿ 8 ಅಷ್ಟಕಗಳು, ಹಾಗೂ ಈ ಎಲ್ಲಾ ಅಷ್ಟಕಗಳಲ್ಲಿ ಎಂಟೆಂಟರಂತೆ 64 ಅಧ್ಯಾಯಗಳಿವೆ. ಅವುಗಳಲ್ಲಿ 2024 ವರ್ಗ ಮತ್ತು 10552 ಮಂತ್ರಗಳಿವೆ.

ಋಗ್ವೇದದ ಹತ್ತು ಮಂಡಲದಲ್ಲಿ ಎರಡನೆಯ ಮಂಡಲದಿಂದ ಏಳನೆಯ ಮಂಡಲದವರೆಗಿನ ಮಂಡಲಗಳಿಗೆ ವಂಶೀಯ ಮಂಡಲಗಳೆಂದು ಕರೆಯುತ್ತಾರೆ. ಈ ಆರು ಮಂಡಲಗಳು ಅನುಕ್ರಮವಾಗಿ ಗೃತ್ಸಮದ, ವಿಶ್ವಾಮಿತ್ರ, ವಾಮದೇವ, ಅತ್ರಿ, ಭಾರದ್ವಾಜ ಮತ್ತು ವಸಿಷ್ಠ ಋಷಿಗಳಿಂದ ದ್ರಷ್ಟವಾಗಿವೆ. ಉಳಿದ ಮಂಡಲಗಳಲ್ಲಿ 1ನೆಯ

ಮಂಡಲವನ್ನು ಶತರ್ಚಿನ 8ನೆಯ ಮಂಡಲಕ್ಕೆ ಪ್ರಗಾಥಾ, 9ನೆಯ ಮಂಡಲಕ್ಕೆ ಪಾವಮಾನ್ಯ, 10ನೆಯ ಮಂಡಲಕ್ಕೆ ಕ್ಷುದ್ರಸೂಕ್ತ ಮತ್ತು ಮಹಾಸೂಕ್ತ ಎಂದು ಕರೆಯುತ್ತಾರೆ.

ಯಜ್ಞಸಾಧನೆಯ ಅನುಷ್ಠಾನ ಕ್ರಮವೇ ಮುಂತಾದ ವಿಷಯಗಳನ್ನು ಹೊಂದಿರುವ, ಗದ್ಯಾತ್ಮಕ ರೂಪವಾದ, ಯಜುಸ್ಸುಗಳ ಸಂಗ್ರಹವೇ ಯಜುರ್ವೇದ ಸಂಹಿತೆ. ಈ ಸಂಹಿತೆ ಯಜ್ಞದ ದೃಷ್ಟಿಯಿಂದ ಅಧ್ವರ್ಯುವಿನ ಉಪಯೋಗಕ್ಕಾಗಿ ಸಂಗ್ರಹವಾಗಿದೆ. "ಅನಿಯತಾಕ್ಷರಾವಸಾನೋ ಯಜುಃ", "ಗದ್ಯಾತ್ಮಕೋಯಜುಃ"[3] ಎಂಬ ವಾಕ್ಯಗಳಂತೆ ಗದ್ಯರೂಪವಾದ ವೇದ ವಚನಕ್ಕೆ 'ಯಜುಸ್' ಎಂದು ಕರೆಯುತ್ತಾರೆ.

ಯಜುರ್ವೇದವು ಶುಕ್ಲಯಜುರ್ವೇದ ಸಂಹಿತೆ ಮತ್ತು ಕೃಷ್ಣಯಜುರ್ವೇದ ಸಂಹಿತೆ ಎಂಬ ಎರಡು ವಿಭಾಗಗಳನ್ನು ಹೊಂದಿದೆ. ಪದ್ಯಗಳನ್ನು ಮಾತ್ರ ಹೊಂದಿರುವ ಅಥವಾ ಶುದ್ಧವಾದ ಮಂತ್ರಗಳ ಸಂಗ್ರಹವೇ ಶುಕ್ಲಯಜುರ್ವೇದ ಸಂಹಿತೆ ಎಂದು, ಗದ್ಯಪದ್ಯಗಳ ಮಿಶ್ರಣ ಅಥವಾ ಮಂತ್ರ ಮತ್ತು ಬ್ರಾಹ್ಮಣ ಭಾಗಗಳು ಮಿಶ್ರಿತವಾಗಿರುವುದಕ್ಕೆ ಕೃಷ್ಣಯಜುರ್ವೇದ ಸಂಹಿತೆಯೆಂದು ಕರೆಯುತ್ತಾರೆ.

ಸಂಗೀತಕ್ಕನುಗುಣವಾಗಿ ಸ್ವರಗಳಿಂದ ಶೋಭಿಸುವ ಮಂತ್ರರಾಶಿಯೇ ಸಾಮವೇದ ಸಂಹಿತೆ ಯಜ್ಞದಲ್ಲಿ ಉದ್ಗಾತೃವಿಗೆ ಸೇರಿದ ವಿವಿಧ ಮಂತ್ರಗಳ ಸಮೂಹವೇ ಈ ಸಂಹಿತೆಯಾಗಿದೆ. "ಗೀತೀಷು ಸಾಮಾಖ್ಯಾ"[4] ಎಂಬ ಜೈಮಿನಿಯ ಸೂತ್ರದಂತೆ ಗಾನ ಪ್ರಧಾನವಾದುದು ಸಾಮವೇದ ಸಂಹಿತೆಯಾಗಿದೆ. ಸಾಕ್ಷಾತ್ ಕೃಷ್ಣನೇ ಭಗವದ್ಗೀತೆಯಲ್ಲಿ "ವೇದಾನಾಂ ಸಾಮವೇದೋsಸ್ಮಿ"[5] ಎಂದು ಹೇಳಿರುವ ವಾಕ್ಯದಿಂದ ಸಾಮವೇದದ ಪ್ರಾಶ್ಯಸ್ತದ ಅರಿವು ಉಂಟಾಗುತ್ತದೆ.

ಸಾಮವೇದದಲ್ಲಿ ಪೂರ್ವಾರ್ಚಿಕಾ ಮತ್ತು ಉತ್ತರಾರ್ಚಿಕಾ ಎಂದು ಎರಡು ಭಾಗಗಳಿವೆ. ಅರ್ಚಿಕಾ ಎಂದರೆ ಋಕ್ಕುಗಳ ಸಮೂಹ ಎಂದರ್ಥ. ಪೂರ್ವಾರ್ಚಿಕೆಯಲ್ಲಿ 650 ಮಂತ್ರಗಳು, ಉತ್ತರಾರ್ಚಿಕೆಯಲ್ಲಿ 1225 ಮಂತ್ರಗಳಿವೆ.

ಭೃಗು ಮತ್ತು ಅಂಗಿರಸರಿಂದ ದ್ರಷ್ಟವಾದುದೇ ಈ ಅಥರ್ವವೇದ ಸಂಹಿತೆ. ಇದನ್ನು ಬ್ರಹ್ಮನೆಂಬ ಋತ್ವಿಕಜನು, ಯಜ್ಞದಲ್ಲಿ ಉಪಯೋಗಿಸುತ್ತಾನೆ. ಈ ವೇದ ಸಂಹಿತೆಗೆ ಅಂಗಿರೋವೇದ, ಅಥರ್ವಣ, ಭೃಗ್ವಂಗಿರಸ, ಅಥರ್ವಾಂಗಿರಸ, ಬ್ರಹ್ಮವೇದ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ.

ಸಾಮಾನ್ಯವಾಗಿ 'ವಚನ' ಎಂದರೆ 'ಮಾತು' ಎಂದರ್ಥವಾಗುತ್ತದೆ. 'ವಚನಕೊಡು, 'ಭಾಷೆಕೊಡು', 'ಪ್ರತಿಜ್ಞೆಮಾಡು' ಎಂಬ ಹಲವಾರು ಪದಗಳು 'ವಚನ' ಎಂಬ ಪದದ ಸಮಾನಾರ್ಥಗಳಾಗಿವೆ. ವಚನ ರಚನಾಕಾರರಾದ ಶಿವಶರಣರು "ಮೃದು ವಚನವೇ ಸಕಲ ಜಪಂಗಳಯ್ಯ, ಮೃದು ವಚನವೇ ಸಕಲ ತಪಂಗಳಯ್ಯ"[6] ಎಂಬುದಾಗಿ

ಹೇಳಿ ರಚಿಸಿದ ಶಿವಶರಣರೇ ವಚನ ಎಂದರೆ ಮಾತು ಎಂಬರ್ಥದಲ್ಲಿ ಈ ಶಬ್ದವನ್ನು ಬಳಸಿದ್ದಾರೆ. ಆದರೆ ಆಡುವ ಎಲ್ಲಾ ಮಾತುಗಳು 'ವಚನ'ವಲ್ಲ. ಮಾತು ಬೇರೆ, ವಚನ ಬೇರೆ. ಅಲ್ಲಮಪ್ರಭುದೇವರು "ಮಾತೆಂಬುದು ಜ್ಯೋತಿರ್ಲಿಂಗ"[7]ವೆಂದು, ಬರೀ ಮಾತಿಗೆ ಜ್ಯೋತಿರ್ಲಿಂಗವೆಂದು ಹೇಳಿಲ್ಲ. ಅಂತೆಯೇ 'ವಚನ' ಎಂಬ ಪದಕ್ಕೆ ಅತ್ಯುನ್ನತ ಮಾತುಗಳು, ಸರ್ವಶ್ರೇಷ್ಠ ಹಾಗೂ ಪವಿತ್ರ ಮಾತುಗಳೆಂದು ಅರ್ಥೈಸಬಹುದು.

ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಣ್ಬುದೆ?
ಕಡೆಗೀಲು ಬಂಡಿಗಾಧಾರ.
ಈ ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಢಭಕ್ತರ ನುಡಿಗಡಣವೆ ಕಡೆಗೀಲು ಕಾಣಾ ರಾಮಾನಾಥ.[8]

ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ,
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ,
ನಿಮ್ಮ ಶರಣರ ಸೂಳ್ನುಡಿಯ ಒಂದರೆಘಳಿಗೆಯಿತ್ತಡೆ
ನಿನ್ನನಿತ್ತೆ ಕಾಣಾ! ರಾಮನಾಥ.[9]

ದೇವರ ದಾಸಿಮ್ಮನವರ ಈ ಮೇಲಿನ ವಚನಗಳನ್ನು ಗಮನಿಸಿದರೆ 'ವಚನ' ಎಂಬ ಪದಕ್ಕೆ 'ನುಡಿಗಡಣ' ಮತ್ತು 'ಸೂಳ್ನುಡಿ' ಎಂಬ ಪದಗಳನ್ನು ಬಳಸಿದ್ದಾರೆ. 'ನುಡಿಗಡಣ' ಅಥವಾ 'ಸೂಳ್ನುಡಿ' ಎಂದರೆ ಒಂದಾದ ಮೇಲೊಂದರಂತೆ ಸರದಿ ಪ್ರಕಾರ ಆಡುವ ಮಾತು. ಅದು ತನ್ನಷ್ಟಕ್ಕೆ ತಾನೇ ಮಾತಾಡಿಕೊಂಡಿದ್ದು ಅಥವಾ ಇನ್ನೊಬ್ಬರಿಗೆ ಹೇಳುವ ಮಾತಾಗಿರಬಹುದು ಇಲ್ಲವೆ ಪ್ರಶ್ನೋತ್ತರಗಳ ಮೂಲಕ ಸಂಭಾಷಣೆ ರೂಪದಲ್ಲಿ ಇರಬಹುದು. ಎಂಬೆಲ್ಲಾ ಅರ್ಥಗಳು ಬರುತ್ತವೆ. ಶರಣರ ಲೋಕಾನುಭವ, ಶಿವಾನುಭವದ ವಿಚಾರ ಬಿಂದುಗಳು ಗದ್ಯ ಪದ್ಯವೆರಡರ ಲಕ್ಷಣಗಳನ್ನು ಮೈಗೂಡಿಸಿಕೊಂಡು 'ವಚನ' ರೂಪತಾಳಿ ಹೊರಬಂದವು ಎನ್ನಬಹುದು.

1.2 ಅಧ್ಯಯನದ ಉದ್ದೇಶ

ಉಪನಿಷತ್ತು ಮತ್ತು ವಚನಸಾಹಿತ್ಯಗಳೆರಡು ಜ್ಞಾನದ ಗಣಿಯಾಗಿವೆ. ಸಂಸ್ಕೃತ ಹಾಗೂ ಕನ್ನಡ ಸಾಹಿತ್ಯವನ್ನು ಸಾಹಿತ್ಯಿಕ ದೃಷ್ಟಿಯಿಂದ ಅಧ್ಯಾತ್ಮಿಕತೆಯನ್ನು ಅರ್ಥೈಸುವ ಪರಂಪರೆ ಆರಂಭವಾದದ್ದು ತೀರಾ ಇತ್ತೀಚೆಗೆಂದು ಹೇಳಬಹುದು. ಸಂಸ್ಕೃತ ಸಾಹಿತ್ಯದಲ್ಲಿ ಜ್ಞಾನಮಾರ್ಗವನ್ನು ಬೋಧಿಸುವ ಉಪನಿಷತ್ತುಗಳ ಕರ್ತೃಗಳನ್ನು ಮಂತ್ರದ್ರಷ್ಟಾರರೆಂದು ಕರೆದರೆ, ಕನ್ನಡ ಸಾಹಿತ್ಯದಲ್ಲಿ ಕನ್ನಡದ ಉಪನಿಷತ್ತೆಂದೇ ಕರೆಯಿಸಿಕೊಳ್ಳುವ ವಚನಗಳನ್ನು ರಚಿಸಿದವರನ್ನು ಶರಣರು ಎಂದು ಕರೆಯುತ್ತಾರೆ. ಈ ಎರಡೂ ಸಾಹಿತ್ಯವನ್ನು ತಾತ್ತ್ವಿಕ ಅಂಶಗಳ ನೆಲೆಯಲ್ಲಿ ಸೂಕ್ಷ್ಮವಾಗಿ ನೋಡದೇ ಇರುವುದು ನಿಜಕ್ಕೂ ಆಶ್ಚರ್ಯಕರ. ಅಂತೆಯೇ ಬಸವಾದಿ ಪ್ರಮಥರಿಗೆ ಭದ್ರ

ಬುನಾದಿಯನ್ನು ಹಾಕಿಕೊಟ್ಟ ವಿಶ್ವಮಾನ್ಯ ಆದ್ಯವಚನಕಾರ ದೇವರ ದಾಸಿಮಯ್ಯನವರ ವಚನಗಳು ಮತ್ತು ನೂರಾರು ಉಪನಿಷತ್ತುಗಳಿದ್ದರೂ ಅವುಗಳಲ್ಲಿ ಪ್ರಧಾನ ಎಂದು ಹೇಳಲಾಗಿರುವ ಅನೇಕ ಪ್ರಸಿದ್ಧ ವಿದ್ವಾಂಸರು ಒಪ್ಪಿಕೊಂಡಿರುವ ಹತ್ತು ಉಪನಿಷತ್ತುಗಳ ಜೊತೆಗೆ ತಾತ್ವಿಕ ದೃಷ್ಟಿಯಿಂದ ತೌಲನಿಕ ಅಧ್ಯಯನ ಮಾಡುವುದು ಈ ಮಹಾಪ್ರಬಂಧದ ಉದ್ದೇಶವಾಗಿರುತ್ತದೆ.

1.3 ಅಧ್ಯಯನದ ವ್ಯಾಪ್ತಿ

ನೂರಾರು ವಚನಕಾರರು ಮತ್ತು ಅವರು ರಚಿಸಿರುವ ವಚನಗಳು ಅಪಾರ. ಇಂಥ ನಿಸ್ಸೀಮ ಸ್ವರೂಪಿ ವಚನಗಳನ್ನು ಇಡಿಯಾಗಿ ಅಧ್ಯಯನಕ್ಕೊಳಪಡಿಸುವುದು ಕಷ್ಟದ ಕೆಲಸ. ಆದ್ದರಿಂದ ಅಧ್ಯಯನದ ಔಚಿತ್ಯದ ದೃಷ್ಟಿಯಿಂದ ಇದಕ್ಕೆ ನಿರ್ದಿಷ್ಟ ಸೀಮೆಯನ್ನು ಹಾಕಿಕೊಳ್ಳಲಾಗಿದೆ. ವಚನಕಾರರಲ್ಲಿ ಆದ್ಯವಚನಕಾರರೆಂದೇ ಪ್ರಸಿದ್ಧಿ ಪಡೆದಿರುವ ಶರಣ ದೇವರ (ಜೇಡರ) ದಾಸಿಮಯ್ಯನವರ ವಚನಗಳನ್ನು ಪ್ರಧಾನವಾಗಿಟ್ಟುಕೊಂಡಿದ್ದರೂ ಅದಕ್ಕೆ ಪೂರಕವಾಗಿ ಬಸವಾದಿ ಶರಣರ ವಚನಗಳನ್ನು ಬಳಸಿಕೊಳ್ಳಲಾಗಿದೆ.

ಹಾಗೆಯೇ ನೂರಾರು ಉಪನಿಷತ್ತುಗಳಿದ್ದರೂ ಅವುಗಳಲ್ಲಿ ಪ್ರಾಚೀನ ಹಾಗೂ ಪ್ರಮುಖ ಹತ್ತು ಉಪನಿಷತ್ತುಗಳೆಂದು ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಅವುಗಳಿಗೆ ಆಚಾರ್ಯರು ಭಾಷ್ಯವನ್ನು ಬರೆದು ತಮ್ಮತಮ್ಮ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾರೆ. ಆದುದರಿಂದ ಈಶ, ಕೇನ, ಕಠ, ಮುಂಡಕ, ಮಾಂಡೂಕ್ಯ, ಪ್ರಶ್ನ, ತೈತ್ತಿರೀಯ, ಐತರೇಯ, ಛಾಂದೋಗ್ಯ ಮತ್ತು ಬೃಹದಾರಣ್ಯಕ ಉಪನಿಷತ್ತುಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದೇನೆ. ಜೊತೆಗೆ ಶ್ವೇತಾಶ್ವತರ ಮೊದಲಾದ ಉಪನಿಷತ್ತುಗಳನ್ನೂ ಸಹ ಅಲ್ಲಲ್ಲಿ ಸಾಂದರ್ಭಿಕವಾಗಿ ಬಳಸಿಕೊಳ್ಳಲಾಗಿದೆ.

ವೈದಿಕಸಾಹಿತ್ಯ ಮತ್ತು ವಚನಸಾಹಿತ್ಯಗಳು ಕೇವಲ ಸಾಹಿತ್ಯಿಕವಾಗಿ ಉಳಿಯದೆ ಸಮೃದ್ಧವಾಗಿ ಅನೇಕ ಮುಖಗಳಲ್ಲಿ ಬೆಳೆದು ಜೀವಂತವಾಗಿ ನೆಲೆನಿಂತಿವೆ. ಇವು ಸಾವಿರಾರು ವರ್ಷಗಳ ಹಿಂದೆಯೇ ಎಲ್ಲಾ ರೀತಿಯಿಂದಲೂ ಬೆಳೆದು ಜನಮನವನ್ನು ಸೂರೆಗೊಂಡು ಅಪ್ರತಿಮ ಪ್ರಭಾವ ಬೀರಿವೆ. ಉಳಿದೆಲ್ಲ ಸಾಹಿತ್ಯ ಅಧ್ಯಯನಕ್ಕಿಂತ ಉಪನಿಷತ್ ಸಾಹಿತ್ಯ ಮತ್ತು ವಚನ ಸಾಹಿತ್ಯವು ತಾತ್ತ್ವಿಕ ದೃಷ್ಟಿಯಿಂದ ಗಮನ ಸೆಳೆದಿವೆ. ಅದುದರಿಂದ ದಶೋಪನಿಷತ್ತು ಮತ್ತು ದೇವರ ದಾಸಿಮಯ್ಯರವರ ವಚನಗಳನ್ನು ತಾತ್ತ್ವಿಕ ನೆಲೆಯಲ್ಲಿ ತೌಲನಿಕ ಅಧ್ಯಯನಕ್ಕೊಳಪಡಿಸುವುದು ಸಮಂಜಸವಾಗಿದೆ.

"ದಶೋಪನಿಷತ್ತು ಮತ್ತು ದೇವರ ದಾಸಿಮಯ್ಯನವರ ವಚನಗಳು ಒಂದು ತೌಲನಿಕ ಅಧ್ಯಯನ" ಎಂಬ ಈ ಮಹಾಪ್ರಬಂಧವನ್ನು ಏಳು ಅಧ್ಯಾಯಗಳಲ್ಲಿ ವಿಭಾಗಿಸಲಾಗಿದೆ. ಪೀಠಿಕಾರೂಪದ ಮೊದಲನೆಯ ಅಧ್ಯಾಯದಲ್ಲಿ ಈಗಾಗಲೇ ನಿರೂಪಿಸಿದಂತೆ "ದಶೋಪನಿಷತ್ತು ಮತ್ತು ದೇವರ ದಾಸಿಮಯ್ಯನವರ ವಚನಗಳು

ಒಂದು ತೌಲನಿಕ ಅಧ್ಯಯನ" ಕುರಿತ ಪ್ರಸ್ತಾವನೆ, ಅಧ್ಯಯನ ವಿಷಯ, ವಿಷಯದ ಆಯ್ಕೆ, ಉದ್ದೇಶ, ವ್ಯಾಪ್ತಿ, ಮೊದಲಾದ ವಿಷಯವನ್ನು ಹೇಳಲಾಗಿದೆ.

ಎರಡನೆಯ ಅಧ್ಯಾಯವು ವೈದಿಕ ಸಾಹಿತ್ಯದ ಪರಿಚಯವನ್ನು ಒಳಗೊಂಡಿದೆ. ಇಲ್ಲಿ ವೇದ, ವೇದಾಂಗ, ಉಪನಿಷತ್ತುಗಳ ಬಗ್ಗೆ ಚರ್ಚಿಸಲಾಗಿದೆ. ಉಪನಿಷತ್ತಿನ ಅರ್ಥ, ವ್ಯಾಖ್ಯಾನ, ಸಂಖ್ಯೆ, ಕಾಲ, ಮತ್ತು ಪ್ರಮುಖ ಉಪನಿಷತ್ತುಗಳ ಬಗ್ಗೆ ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ವಚನಸಾಹಿತ್ಯದ ಪರಿಚಯ ಮತ್ತು ದೇವರ ದಾಸಿಮಯ್ಯನವರ ಬದುಕು ಬರಹ ಕುರಿತು ಅಧ್ಯಯನ ಮಾಡಲಾಗಿದೆ. ವಚನ ಸಾಹಿತ್ಯದ ಪರಿಚಯ, ವಚನ ಪದದ ಅರ್ಥ, ಉಗಮ, ಸ್ವರೂಪ, ಹಿನ್ನೆಲೆ, ಮೊದಲಾದ ವಿಷಯಗಳನ್ನು ಚರ್ಚಿಸಲಾಗಿದೆ. ಹಾಗೂ ದೇವರ ದಾಸಿಮಯ್ಯನವರ ಜೀವನ ಮತ್ತು ಸಾಹಿತ್ಯ ಕುರಿತು, ಅವರ ಜನನ, ಜನ್ಮಸ್ಥಳ, ಕಾಲ, ಜೀವನದ ಸನ್ನಿವೇಶಗಳು, ಪವಾಡಗಳು, ಅವರ ಸಾಹಿತ್ಯ, ಸಾಹಿತ್ಯದಲ್ಲಿ ಅವರ ಪಾತ್ರ, ಅಂಕಿತನಾಮ, ಬಸವಾದಿ ಶರಣರ ಮೇಲೆ ಇವರ ಪ್ರಭಾವ, ಈ ಮುಂತಾದ ವಿಷಯಗಳನ್ನು ಚರ್ಚಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ದಶೋಪನಿಷತ್ತುಗಳ ತಾತ್ತ್ವಿಕ ಅಧ್ಯಯನ ಮಾಡ ಲಾಗಿದೆ. ಈ ಅಧ್ಯಾಯದಲ್ಲಿ ಉಪನಿಷತ್ತಿನಲ್ಲಿ ಬರುವ ಅತ್ಯಂತ ಮಹತ್ವದ ಅಂಶಗಳಾದ ಬ್ರಹ್ಮ, ಜೀವ, ಜಗತ್ತು, ಆತ್ಮ, ಮತ್ತು ಮೋಕ್ಷಗಳನ್ನು ಕುರಿತು ಚರ್ಚಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ದೇವರ ದಾಸಿಮಯ್ಯನವರ ವಚನಗಳ ತಾತ್ತ್ವಿಕ ಅಧ್ಯಯನವನ್ನು ಕೈಗೊಳ್ಳಲಾಗಿದೆ. ವಚನಗಳಲ್ಲಿ ಬರುವ ಈಶ್ವರ, ಜೀವ, ಜಗತ್ತು, ಆತ್ಮ, ಮತ್ತು ಮೋಕ್ಷಗಳನ್ನು ಕುರಿತು ವಿವೇಚಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ದಶೋಪನಿಷತ್ತು ಮತ್ತು ದೇವರ ದಾಸಿಮಯ್ಯನವರ ವಚನಗಳ ತೌಲನಿಕ ಅಧ್ಯಯನ ಮಾಡಲಾಗಿದೆ. ಹಿಂದಿನ ನಾಲ್ಕು ಮತ್ತು ಐದನೆಯ ಅಧ್ಯಾಯಗಳಲ್ಲಿ ಮಂಡಿಸಿದ ತಾತ್ವಿಕ ಅಧ್ಯಯನವನ್ನು ಈ ಅಧ್ಯಾಯದಲ್ಲಿ ತೌಲನಿಕವಾಗಿ ಚರ್ಚಿಸಲಾಗಿದೆ. ಇಲ್ಲಿ ಸಹ ಬ್ರಹ್ಮ, ಜೀವ, ಜಗತ್ತು, ಮೊದಲಾದ ವಿಷಯಗಳನ್ನು ಚರ್ಚಿಸಲಾಗಿದೆ.

ಉಪಸಂಹಾರರೂಪದ ಏಳನೆಯ ಅಧ್ಯಾಯದಲ್ಲಿ ಮಹಾಪ್ರಬಂಧದ ಅಧ್ಯಯನದ ಫಲಶ್ರುತಿಯ ಸಾರಾಂಶವನ್ನು ನೀಡಲಾಗಿದೆ. **ಉಪಸಂಹಾರವು ಹಿಂದಿನ ಆರು ಅಧ್ಯಾಯಗಳ ಸಾರರೂಪವಾಗಿದೆ. ಇಲ್ಲಿ ಎಲ್ಲಾ ಅಧ್ಯಾಯಗಳ ಸಂಕ್ಷಿಪ್ತ ಪರಿಚಯ ಹಾಗೂ ಪುನರಾವಲೋಕನ ಮಾಡಲಾಗಿದೆ.**

ಈ ಮಹಾಪ್ರಬಂಧದ ಆರಂಭದಲ್ಲಿ ಪರಿವಿಡಿ, **ಸಂಶೋಧಕರ ಪ್ರಮಾಣಪತ್ರ,** ಮಾರ್ಗದರ್ಶಕರ **ಪ್ರಮಾಣಪತ್ರ,** ಸಂಕ್ಷಿಪ್ತಾಕ್ಷರಗಳ ಸೂಚಿ, ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ ಅಡಿಟಿಪ್ಪಣಿಗಳು ಮತ್ತು ಕೊನೆಯಲ್ಲಿ ಗ್ರಂಥಋಣವನ್ನು ಒದಗಿಸಲಾಗಿದೆ.

ಅಡಿಟಿಪ್ಪಣಿಗಳು

1. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮುದ್ರಾಣಾಲಯ ಶ್ರೀರಂಗಮ್, 1964. ಬೃಹದಾರಣ್ಯಕ 2.4.10. ಪುಟ–205.
2. ವಿದ್ವಾನ್. ಎಚ್. ವ್ಹಿ. ನಾಗರಾಜ, 'ವೇದ–ವೇದಾಂಗ' ಭವನದ ಗಾಂಧಿ ಕೇಂದ್ರ, ಬೆಂಗಳೂರು–01, 2002. ಪುಟ–2.
3. ಡಾ. ಕೆ. ಕೃಷ್ಣಮೂರ್ತಿ, 'ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ' ಕರ್ನಾಟಕ ಸರ್ಕಾರ ಪಠ್ಯಪುಸ್ತಕ ಇಲಾಖೆ ಬೆಂಗಳೂರು, 1997. ಪುಟ–78.
4. ವಿದ್ವಾನ್. ಎಚ್. ವ್ಹಿ. ನಾಗರಾಜ, 'ವೇದ–ವೇದಾಂಗ' ಭವನದ ಗಾಂಧಿ ಕೇಂದ್ರ, ಬೆಂಗಳೂರು–01, 2002. ಪುಟ–2.
5. 'ಶ್ರೀಮದ್ಭಗವದ್ಗೀತಾ' ಗೀತಾಪ್ರೇಸ್, ಗೋರಖಪುರ, ವಿ.ಶ 2057, 10.22 ಪುಟ–49.
6. ಸಂ. ಡಾ. ಎಲ್. ಬಸವರಾಜು, 'ಬಸವಣ್ಣನವರ ಷಟ್ಸ್ಥಲದ ವಚನಗಳು' ಶ್ರೀ ಶರಣ ಬಸವೇಶ್ವರ ಗ್ರಂಥ ವಿಶ್ವವಿದ್ಯಾಲಯ ಗುಲಬರ್ಗಾ, 1990. ವಚನ ಸಂಖ್ಯೆ–245, ಪುಟ–83.
7. ಸಂ. ಡಾ. ಬಿ. ವ್ಹಿ. ಮಲ್ಲಾಪುರ, 'ಅಲ್ಲಮಪ್ರಭು ವಚನ ಸಂಪುಟ, ಸಮಗ್ರ ವಚನ ಸಂಪುಟ–2' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಂಖ್ಯೆ–1463, ಪುಟ–433.
8. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಂಖ್ಯೆ–767, ಪುಟ–242.

ಅಧ್ಯಾಯ–2
ವೈದಿಕ ಸಾಹಿತ್ಯ ಪರಿಚಯ

ಅಧ್ಯಾಯ-2

ವೈದಿಕ ಸಾಹಿತ್ಯ ಪರಿಚಯ

2.1 ವೇದ

2.2 ವೇದಗಳ ಉಗಮ

2.3 ವೇದಗಳ ವಿಭಜನೆ

2.4 ವೇದಗಳ ಕಾಲ

2.5 ಋಗ್ವೇದ ಸಂಹಿತೆ

2.6 ಯಜುರ್ವೇದ ಸಂಹಿತೆ

2.7 ಸಾಮವೇದ ಸಂಹಿತೆ

2.8 ಅಥರ್ವವೇದ ಸಂಹಿತೆ

2.9 ವೇದಾಂಗಗಳು

2.10 ಬ್ರಾಹ್ಮಣಗಳು

2.11 ಆರಣ್ಯಕಗಳು

2.12 ಉಪನಿಷತ್ತು

2.13 ಉಪನಿಷತ್ತುಗಳ ಕಾಲ

2.14 ಉಪನಿಷತ್ತುಗಳ ಸಂಖ್ಯೆ

2.15 ದಶೋಪನಿಷತ್ತುಗಳ ಸಂಕ್ಷಿಪ್ತ ಪರಿಚಯ

ಅಧ್ಯಾಯ 2

ವೈದಿಕ ಸಾಹಿತ್ಯ ಪರಿಚಯ

ವೇದ ಸಾಹಿತ್ಯವು ಅನಾದಿಕಾಲದಿಂದಲೂ ತನ್ನ ವಿಶಿಷ್ಟಸ್ಥಾನವನ್ನು ಉಳಿಸಿಕೊಂಡಿದೆ. ಜಗತ್ತಿನ ಪ್ರಾಚೀನ ಸಾಹಿತ್ಯವೆನಿಸಿಕೊಂಡಿದೆ. ಪ್ರಾಚೀನ ಆಧ್ಯಾತ್ಮಿಕ ಸಾಹಿತ್ಯೋಪಾಸಕರಿಗೆ ಅಮೂಲ್ಯನಿಧಿಯಾಗಿದೆ. ಜಗತ್ತಿನ ಸರ್ವ ತತ್ವಶಾಸ್ತ್ರ ಜಿಜ್ಞಾಸುಗಳಿಗೆ ಆಕರಗ್ರಂಥವಾಗಿದೆ.

2.1 ವೇದ

'ವೇದ' ಎಂಬ ಶಬ್ದವು **'ವಿದ್ ಜ್ಞಾನೇ'** ಧಾತುವಿನಿಂದ ನಿಷ್ಪನ್ನಗೊಂಡಿದೆ. ಆದ್ದರಿಂದ ವೇದ ಎಂದರೆ ಜ್ಞಾನ ಪ್ರತಿಪಾದಕ ಗ್ರಂಥ ಎಂಬ ಅರ್ಥ ಹೊಂದುತ್ತದೆ. ವೇದದಲ್ಲಿ ಗೂಢವಾದ ಬ್ರಹ್ಮಜ್ಞಾನ ಅಡಗಿದೆ. **'ವೇದ'** ಶಬ್ದದ ಅರ್ಥವನ್ನು ಕುರಿತು ವಿವಿಧ ವಿದ್ವಾಂಸರು ವಿಭಿನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಸಾಯಣಾಚಾರ್ಯರು ತಮ್ಮ ವೇದ ಭಾಷ್ಯ ಭೂಮಿಕೆಯಲ್ಲಿ ವೇದದ ಸ್ವರೂಪ, ಅರ್ಥವನ್ನು ಸ್ಪಷ್ಟವಾಗಿ ಹೇಳುವುದು ಕಷ್ಟವೆಂದು ಪೂರ್ವಪಕ್ಷ ಮಾಡಿ ಉತ್ತರರೂಪವಾಗಿ **"ಮಂತ್ರಬ್ರಾಹ್ಮಣಾತ್ಮಕಃ ಶಬ್ದರಾಶಿರ್ವೇದ।"**[1] ಮಂತ್ರ ಬ್ರಾಹ್ಮಣಗಳ ಸಮುದಾಯವೇ **'ವೇದ'** ಎಂದು ತಿಳಿಸಿದ್ದಾರೆ. ಶಾಸ್ತ್ರಗಳೆಲ್ಲದರ ಗುರಿಯೂ ಜ್ಞಾನವೇ ಆಗಿರುವುದರಿಂದ **'ವೇದ'** ಎಂಬುದಕ್ಕೆ 'ವೇದಾರ್ಥ ಪ್ರಕಾಶ'ದಲ್ಲಿ **"ಇಷ್ಟ ಪ್ರಾಪ್ತ್ಯನಿಷ್ಟಪರಿಹಾರಯೋಃ ಅಲೌಕಿಕಮುಪಯಂ ಯೋ ಗ್ರಂಥ ವೇದಯತಿ ಸ ವೇದಃ।"**[2] 'ಸಂಸಾರ' ವೆಂಬ ಜನನ–ಮರಣಗಳ ಚಕ್ರಪರಿವರ್ತನೆಯ ಅನಿಷ್ಟವನ್ನು ಪರಿಹರಿಸಿ ಪರಬ್ರಹ್ಮ ಪ್ರಾಪ್ತಿ ಎಂಬ ಇಷ್ಟಾರ್ಥವನ್ನು ಪಡೆಯಲು ಮಾನವ ಕೋಟಿ ಅನುಸರಿಸಬೇಕಾದ ವಿಧಾನವನ್ನು ತಿಳಿಸುವ ಗ್ರಂಥವೇ **'ವೇದ'** ಎಂದು ಮಾಧವಾಚಾರ್ಯರು ಹೇಳಿದ್ದಾರೆ. ಭಟ್ಟ ಭಾಸ್ಕರರು

"ವಿದ್ಯತೇ ಲಭ್ಯತೇ ಅನೇನ ಇತಿ ವೇದಃ।"[3] ಬ್ರಹ್ಮ ಸಾಕ್ಷಾತ್ಕಾರ ಆತ್ಮ ಜ್ಞಾನದ ಸಾಧನವೇ **'ವೇದ'** ಎಂದು ಅಭಿಪ್ರಾಯ ಪಟ್ಟಿದ್ದಾರೆ.

ಸರ್ವಾನಂದರು **"ವಿದಂತ್ಯನೇನ ಧರ್ಮಂ ವೇದಃ।"**[4] ಧರ್ಮದ ಅರಿವಿನ ಸಾಧನವೇ **ವೇದ"**ವೆಂದು ಹೇಳಿದ್ದಾರೆ. ಇದನ್ನೇ ಹೇಮಚಂದ್ರರು **"ವಿದಂತ್ಯನೇನ ಪ್ರಮಾಣವೇದ್ಯಂ ಧರ್ಮಲಕ್ಷಣಂ ಅಸ್ಮಾತ ಇತಿ ವೇದಃ।"**[5] ಅನನ್ಯ ಪ್ರಮಾಣವೇದ್ಯವಾದ ಧರ್ಮಲಕ್ಷಣವು ಯಾವುದರಿಂದ ತಿಳಿಸಲ್ಪಡುತ್ತದೆಯೋ ಅದೇ **'ವೇದ'** ಎಂದು ಹೇಳಿದ್ದಾರೆ. ಮೇಧಾತಿಥಿಗಳು **"ನಿಃಶ್ರೇಯಸ ಕರಾಣಿ ಕರ್ಮಾಣಿ ಆವೇದಯಂತೀತಿ ವೇದಾಃ।"**[6] ಮೋಕ್ಷಕ್ಕೆ ಸಾಧನವಾದ ಕರ್ಮಗಳನ್ನು ತಿಳಿಸುವ ಗ್ರಂಥಕ್ಕೆ **'ವೇದ'**ವೆಂದು ಅಭಿಪ್ರಾಯ ಪಟ್ಟಿದ್ದಾರೆ. ದಯಾನಂದ ಸರಸ್ವತಿಯವರು **"ವಿದಂತಿ ಜಾನಂತಿ, ವಿದ್ಯಂತೇ ಭವಂತಿ, ವಿಂದಂತಿ ಅಥವಾ ವಿಂದಂತೇ ಲಭಂತೇ, ವಿಂದಂತಿ ವಿಚಾರಯಂತಿ ಸರ್ವೇ ಮನುಷ್ಯಾಃ ಸರ್ವಾ ಸತ್ಯವಿದ್ಯಾಃ ಯೈಃ ಯೇಷು ವಾ ತಥಾ ವಿದ್ವಾಂಸಶ್ಚ ಭವಂತಿ ತೇ ವೇದಾಃ।"**[7] ಎಲ್ಲಾ ಮನುಷ್ಯರು ಎಲ್ಲಾ ವಿದ್ಯೆಗಳನ್ನು ಯಾವುದರಿಂದ ಮನನ ಮಾಡುವರೋ, ತಿಳಿಯುವರೋ, ಹೊಂದುವರೋ ಮತ್ತು ಯಾವುದರಲ್ಲಿ ಎಲ್ಲಾ ವಿದ್ಯೆಗಳೂ ಇರುವವೋ, ಹಾಗೆ ವಿದ್ವಾಂಸರೂ ಆಗುವರೋ ಅದೇ **'ವೇದ'** ಎಂದು ಹೇಳಿದ್ದಾರೆ. ಅಂದರೆ ಸತ್ಯ ವಿದ್ಯೆಯ ಸಾಧನವೇ ವೇದ ಎಂಬುದು ಇವರ ಅಭಿಪ್ರಾಯವಾಗಿದೆ.

ಆದುದರಿಂದ **'ವೇದ'**ಶಬ್ದದ ಅರ್ಥವು ಅರಿವು, ಜ್ಞಾನ, ವಿಶಿಷ್ಟ ಶಬ್ದಪುಂಜ, ಮೊದಲಾಗಿ ಹೊಂದುವುದರಿಂದ ವೇದ ಎಂಬುದು ಸಾಮಾನ್ಯ ಜ್ಞಾನಕ್ಕನ್ವಯಿಸದೇ ಬ್ರಹ್ಮಜ್ಞಾನ ಪ್ರತಿಪಾದಕ ಅರ್ಥವನ್ನು ಹೊಂದಿದೆ ಎಂದು ತಿಳಿಯುತ್ತದೆ.

2.2 ವೇದಗಳ ಉಗಮ

ವೇದಗಳು ಜೀವನದ ಪರಮ ಸಾಧನವೆಂದು ಅನೇಕ ಋಷಿಗಳು ವೇದದ ಪವಿತ್ರ ಆಚರಣೆಯಲ್ಲಿ ತೊಡಗಿದ್ದರು. ಇಂದಿಗೂ ಅನೇಕ ಸಂಪ್ರದಾಯಗಳು ವೈದಿಕ ಅನುಷ್ಠಾನದಲ್ಲಿ ತೊಡಗಿವೆ.

ಸಂಪ್ರದಾಯದನ್ವಯ ವೇದಗಳು ಮಾನವನಿಂದ ರಚಿತವಾದವುಗಳಲ್ಲ. ಅವುಗಳು ನಿತ್ಯ ಸತ್ಯ ರೂಪಿಯಾದ, ಸರ್ವಜ್ಞನಾದ ಈಶ್ವರನ ವಾಣಿಯಾದುದರಿಂದ ಅಪೌರುಷೇಯ ವಾಕ್ಯ 'ವೇದ'ವೆಂದು ಹೇಳಲಾಗುತ್ತದೆ.

"ಅಸ್ಯ ಮಹತೋ ಭೂತಸ್ಯ ನಿಶ್ವಸಿತಮೇತದ್ಯದೃಗ್ವೇದೋ ಯಜುರ್ವೇದಃ ಸಾಮವೇದೋಽಥರ್ವಾಂಗಿರಸ।"[8] ಎಂದು ಬೃಹದಾರಣ್ಯಕ ಉಪನಿಷತ್ತು ಸಹ, ಈಶ್ವರನ ನಿಃಶ್ವಾಸ ರೂಪವಾಗಿ ನಾಲ್ಕು ವೇದಗಳೂ ಜನಿಸಿವೆ ಎಂದು ತಿಳಿಸಿದೆ. ಸಾಯಣಾಚಾರ್ಯರು

ವೇದ ಭಾಷ್ಯ ಭೂಮಿಕೆಯ ಆರಂಭದಲ್ಲಿ ವೇದವನ್ನು ಕುರಿತು **ಯಸ್ಯ ನಿಃಶ್ವಸಿತಂ ವೇದಾ ಯೋ ವೇದೇಭ್ಯೋಽಖಿಲಂ ಜಗತ್ ನಿರ್ಮಮೇ ತಮಹಂ ವಂದೇ ವಿದ್ಯಾತೀರ್ಥ ಮಹೇಶ್ವರಮ್॥"**[9] ವೇದವು ಈಶ್ವರನ ನಿಃಶ್ವಾಸವಾಗಿದೆ. ಅದರಿಂದಲೇ ಸಂಪೂರ್ಣ ಜಗತ್ತು ನಿರ್ಮಾಣಗೊಂಡಿದೆ. ವಿದ್ಯಾಸ್ವರೂಪನಾದ ಈಶ್ವರನನ್ನು ನಮಿಸುತ್ತೇನೆ ಎಂದು ಹೇಳಿದ್ದಾರೆ. ಋಗ್ವೇದದ ಪುರುಷ ಸೂಕ್ತದಲ್ಲಿ ವೇದಗಳ ಉಗಮದ ಬಗ್ಗೆ ವಿವರಿಸುತ್ತ **"ತಸ್ಮಾದ್ಯಜ್ಞಾತ್ ಸರ್ವಹುತಃ ಋಚಃ ಸಾಮಾನಿ ಜಜ್ಞಿರೇ।"**[10] ಸಕಲ ಸೃಷ್ಟಿಗೂ ಆದಿಕಾರಣನಾದ ಪುರುಷನಿಂದಲೇ ಋಗ್ವೇದಾದಿಗಳು ಹುಟ್ಟಿವೆ. ಅಥರ್ವವೇದವು **"ಕಾಲಾದೃಚಃ ಸಮಭವನ್ ಯಜುಃ ಕಾಲಾದಜಾಯತ।"**[11] ನಿತ್ಯನಾದ ಕಾಲನಿಂದ ವೇದಗಳು ಜನಿಸಿವೆ ಎಂದು ಹೇಳಿದೆ.

ಶತಪಥ ಬ್ರಾಹ್ಮಣವು **"ತೇಭ್ಯಸ್ತಪ್ತೇಭ್ಯಸ್ತ್ರಯೋ ವೇದಾ ಅಜಯಂತ। ಅಗ್ನೇರ್ಋಗ್ವೇದೋ ವಾಯೋರ್ಯಜುರ್ವೇದಃ ಸೂರ್ಯಾತ್ಸಾಮವೇದಃ॥"**[12] ಪ್ರಜಾಪತಿಯು ತಪಸ್ಸುಗೈದಾಗ ಅಗ್ನಿ, ವಾಯು ಮತ್ತು ಸೂರ್ಯ ದೇವತೆಗಳು, ಅವರಿಂದ ಋಗ್ವೇದ, ಯಜುರ್ವೇದ ಮತ್ತು ಸಾಮವೇದಗಳು ಜನಿಸಿವೆ ಎಂದು ತಿಳಿಸಿದೆ. ಮನುಸ್ಮೃತಿಯೂ ಸಹ **"ಅಗ್ನಿವಾಯುರವಿಭ್ಯಸ್ತು ತ್ರಯಂ ಬ್ರಹ್ಮ ಸನಾತನಮ್। ದಂದೋಹ ಯಜ್ಞಸಿದ್ಧ್ಯರ್ಥಮೃಗ್ಯಜುಃ ಸಮ ಲಕ್ಷಣಮ್॥"**[13] ಅಗ್ನಿ ಮೊದಲಾದ ದೇವತೆಗಳಿಂದಲೇ ಋಗ್ವೇದಾದಿ ಮೂರು ವೇದಗಳು ಜನಿಸಿವೆ ಎಂದು ಹೇಳಿದೆ. ಭಾಗವತ ಪುರಾಣವು **"ಸ ತೇನಾಸೌ ಚತುರೋ ವೇದಾಂಶ್ಚಚುರ್ಭಿವದವೈಃ ಪ್ರಭುಃ।"**[14] ಪ್ರಜಾಪತಿಯ ಚರ್ತುಮುಖಗಳಿಂದ ಚತುರ್ವೇದಗಳು ಜನಿಸಿವೆ ಎಂದು ತಿಳಿಸುತ್ತದೆ. ವಿಷ್ಣು ಪುರಾಣವು **"ನಾಮರೂಪಂ ಚ ಭೂತಾನಾಂ ಕೃತ್ಯಾನಾಂ ಚ ಪ್ರವತನಮ್। ವೇದ ಶಬ್ದೇಭ್ಯ ಏವಾ ದೌ ದೇವಾದೀನಾಂ ಚಕಾರ ಸಃ॥**[15] ಭೂತಗಳ ಸಕಲ ನಾಮರೂಪಗಳಿಗೂ, ಕರ್ಮಗಳಿಗೂ ದೇವತೆಗಳಿಗೂ ಸಹ ವೇದಗಳೇ ಮೂಲ ಎನ್ನುವುದು.

2.3 ವೇದಗಳ ವಿಭಜನೆ

ಮೊದಲು ವೇದವು ಒಂದೇ ಆಗಿತ್ತು. ಅನಂತರ ಯಾಗದಲ್ಲಿ ಹ್ರೋತೃ, ಅಧ್ವರ್ಯು, ಉದ್ಗಾತೃ ಮತ್ತು ಬ್ರಹ್ಮ ಎಂಬ ಪುರೋಹಿತರು ಉಪಯೋಗಿಸುವ ಕ್ರಮಕ್ಕನುಸಾರವಾಗಿ ನಾಲ್ಕಾಗಿ ವಿಭಜಿತವಾಯಿತು. ಆಪಸ್ತಂಭರು **"ಋಗ್ವೇದೇನ ಹೋತಾ ಕರೋತಿ। ಯಜುರ್ವೇದೇನಾಧ್ವರ್ಯುಃ। ಸಾಮವೇದೇನೋದ್ಗಾತಾ। ಸರ್ವೈ ಬ್ರಹ್ಮಾ।"**[16] ಎಂದು ಹೇಳಿದ್ದಾರೆ.

ಐತರೇಯ ಬ್ರಾಹ್ಮಣವು **"ಯದೃಚೈವ ಹೋತ್ರಂ ಕ್ರಿಯತೇ ಯಜುಷಾಧ್ವರ್ಯವಂ ಸಾಮ್ನೋದ್ಗೀತಂ ವ್ಯಾರಬ್ಧಾ ತ್ರಯೀ ವಿದ್ಯಾ ಭವತಿ। ಅಥಃ ಕೇನ ಬ್ರಹ್ಮತ್ವಂ ಕ್ರಿಯತೇ ಇತಿ**

त्रय्या विद्ययाऽ इति ब्रूयात्।"[17] ಎಂದು ಹೇಳಿದೆ. ಶುಕ್ಲಯಜುರ್ವೇದದ ವಾಜಸನೇಯ ಸಂಹಿತೆಯಲ್ಲಿ ವ್ಯಾಖ್ಯಾನಾರಂಭದಲ್ಲಿ ಮಹೀಧರರು "ವ್ಯಾಸ ಮಹರ್ಷಿಗಳು ಒಟ್ಟಾಗಿದ್ದ ವೇದಗಳನ್ನು ನಾಲ್ಕಾಗಿ ವಿಂಗಡಿಸಿ, ತಮ್ಮ ನಾಲ್ಕು ಜನ ಶಿಷ್ಯರಾದ ಪೈಲವ, ವೈಶಂಪಾಯನ, ಜೈಮಿನಿ ಮತ್ತು ಸುಮಂತು ಇವರಿಗೆ ಅನುಕ್ರಮವಾಗಿ ಬೋಧಿಸಿದರು"[18] ಎಂದು ಹೇಳಿದ್ದಾರೆ.

"व्यस्यति वेदान् इति व्यासः, विव्यास वेदान्यस्मात् सः वेदव्यास इतीरितः।"[19] ಎಂಬ ವ್ಯುತ್ಪತ್ತಿಯು ವೇದವನ್ನು ವಿಭಾಗಿಸಿರುವುದರಿಂದ ವ್ಯಾಸರು 'ವೇದವ್ಯಾಸ'ರೆಂದೆನಿಸಿದ್ದಾರೆಂದು ಹೇಳುತ್ತದೆ. ಇವರು ವೇದವನ್ನು ವಿಭಾಗಿಸಿದ ನಂತರ ಋಗ್ವೇದ, ಯಜುರ್ವೇದ, ಸಾಮವೇದ ಮತ್ತು ಅಥರ್ವವೇದಗಳೆಂಬ ನಾಲ್ಕು ವೇದ ಸಂಹಿತೆಗಳು ಪ್ರಸಿದ್ಧ ಹೊಂದಿದವು. ಇದನ್ನು **"सोऽयमेकोऽ यथा वेदतरुस्तेन पृथक्कृतः। चतुर्धाऽथ ततोऽ जातं वेदपादपकाननम्॥**[20] ಒಂದಾಗಿದ್ದ ವೇದವೆಂಬ ಮರವನ್ನು ವ್ಯಾಸರು ನಾಲ್ಕು ಭಾಗವಾಗಿ ವಿಂಗಡಿಸಿದರು, ಅನಂತರ ವೇದ ವೃಕ್ಷಗಳ ಅರಣ್ಯವೇ ಬೆಳೆಯಿತು. ಎಂಬ ವಿಷ್ಣು ಪುರಾಣದ ಮಾತು ಸಮರ್ಥಿಸುತ್ತದೆ.

2.4 ವೇದಗಳ ಕಾಲ

ವೇದವು ಅಪೌರುಷೇಯವಾದುದರಿಂದ ಅದರ ಕಾಲವನ್ನು ಗುರ್ತಿಸುವುದು ಕಷ್ಟವೇ ಸರಿ. ವೇದಗಳನ್ನು ನಾಲ್ಕು ಭಾಗಗಳನ್ನಾಗಿ ವಿಂಗಡಿಸಿದ ಮೇಲೆಯಂತೂ ಪ್ರತಿಯೊಂದು ವೇದದ ಕಾಲದಲ್ಲಿ ವ್ಯತ್ಯಾಸ ಕಂಡು ಬರುತ್ತದೆ. ಈ ಬಗ್ಗೆ ಭಾರತೀಯ ಮತ್ತು ಪಾಶ್ಚಾತ್ಯ ದೇಶದ ವಿದ್ವಾಂಸರು ತಮ್ಮದೇ ಆದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. "ವೇದಗಳ ಕಾಲ ವಿಚಾರವನ್ನು ಮ್ಯಾಕ್ಸ್‌ಮುಲ್ಲರ್ ಮೊಟ್ಟಮೊದಲಾಗಿ ಪ್ರತಿಪಾದಿಸಿದನು. ಬೌದ್ಧ ಧರ್ಮದ ಉದಯಕ್ಕೂ ಮೊದಲೇ ಈ ವಿರಾಟ್ ಸಾಹಿತ್ಯ ಪೂರ್ಣವಾಗಿತ್ತೆಂದೂ ಏನೆಂದರೂ ಇದು ಕ್ರಿ.ಪೂ.500ಕ್ಕೂ ಹಿಂದಿನದೆಂದೂ ಅವನ ಅಭಿಪ್ರಾಯ. ಸೂತ್ರಗಳ ಕಾಲ ಕ್ರಿ.ಪೂ. 600 ರಿಂದ ಕ್ರಿ.ಪೂ.200 ಎಂದೂ, ಬ್ರಾಹ್ಮಣ ಗ್ರಂಥಗಳ ಕಾಲ ಕ್ರಿ.ಪೂ.800 ರಿಂದ ಕ್ರಿ.ಪೂ.600 ಎಂದೂ, ಸಂಹಿತೆಗಳು ಇವೆಲ್ಲಕ್ಕೂ ಹಿಂದಿನ ಕಾಲಕ್ಕೆ ಅಂದರೆ ಕ್ರಿ.ಪೂ. 1200 ರಿಂದ ಕ್ರಿ.ಪೂ. 1000ಕ್ಕೆ ಸೇರಿವೆ ಎಂದು ಮ್ಯಾಕ್ಸಮುಲ್ಲರ್ ಸೂಚಿಸಿದನು. ಮ್ಯಾಕ್ಸ್‌ಮುಲ್ಲರ್ ವೇದ ಕಾಲದ ಬಗೆಗೆ ಕ್ರಿ.ಪೂ. 1200 ಎಂದು ಸಿದ್ಧಾಂತ ಮಾಡಿದ್ದಾನೆಂದು ಮುಂದಿನವರು ಹೇಳುವ ಅಭ್ಯಾಸ ಮಾಡಿದರು. ಷೇಡರ್ ಮೊದಲಾದವರೂ ಸಹ ವೇದಗಳ ಕಾಲವನ್ನು ಕ್ರಿ.ಪೂ. 1500 ಅಥವಾ ಕ್ರಿ.ಪೂ. 2000 ಎಂದು ಬಹಳ ಅಂಜಿಕೆಯಿಂದಲೇ ಹೇಳಿದರು. ಡಾ. ಯಾಕೋಬಿ ಮತ್ತು ಬಾಲಗಂಗಾಧರ ತಿಲಕರವರು ಖಗೋಳ ಶಾಸ್ತ್ರದ ಆಧಾರದಿಂದ ಋಗ್ವೇದ ಕಾಲ ಕ್ರಿ.ಪೂ.

4500 ಎಂದು ಹೇಳಿದಾಗ ಪಾಶ್ಚಾತ್ಯ ಪಂಡಿತರಿಗೆ ಗಾಬರಿಯೇ ಆಯಿತು. ಅದುವರೆಗೆ ಅವರು ಒಪ್ಪಿದ ಕಾಲ ಯಾವ ಆಧಾರದ ಮೇಲೆ ನಿಂತಿದೆ ಎಂಬುದನ್ನು ಅವರು ಮರೆತರು."[21]

ಡಾ.ಸಿ.ವಿ. ರಂಗಸ್ವಾಮಿಯವರು ತಮ್ಮ ಗ್ರಂಥದಲ್ಲಿ "ಆರ್ಯರು ಮೂಲತಃ ಬೇರೆ ಕಡೆಯಿಂದ ಭಾರತಕ್ಕೆ ವಲಸೆ ಬಂದವರು. ಇವರು ಸುಮಾರು ಕ್ರಿ.ಪೂ. 2500 ವರ್ಷಗಳ ಹಿಂದೆ ತಮ್ಮ ಮೂಲಸ್ಥಾನವನ್ನು ಬಿಟ್ಟು ಚದುರಿ ಹೋಗಿದ್ದಾರೆ. ಇವರ ಒಂದು ತಂಡವು ನಾರ್ವೆ ಸ್ವೀಡನ್, ಡೆನ್ಮಾರ್ಕ್ ಕಡೆಗೂ ಮತ್ತೊಂದು ಗ್ರೀಸ್, ಇಟಲಿಗಳ ಕಡೆಗೂ ಮತ್ತೊಂದು ಅರೇಬಿಯಾ, ಪರ್ಶಿಯಾ, ಅಪಘಾನಿಸ್ತಾನ ಮತ್ತು ಹಿಂದೂಸ್ಥಾನಕ್ಕೂ ಬಂದಿತೆಂದು ಹೇಳಲಾಗಿದೆ. ಭಾರತದ ಕಡೆಗೆ ಬಂದವರು ಸಿಂಧೂ ನದಿ ತೀರದಲ್ಲಿ ಫಲವತ್ತಾದ ಭೂಮಿ ಸಿಕ್ಕಿದುದರಿಂದ ಅಲ್ಲಿಯೇ ತಳವೂರಿದರು. ಇಲ್ಲಿಯೇ ಋಗ್ವೇದವು ಸುಮಾರು ಕ್ರಿ.ಪೂ. 1200ರಲ್ಲಿ ರಚಿತವಾಯಿತು. ಚತುರ್ವೇದಗಳು ಸುಮಾರು ಕ್ರಿ.ಪೂ. 2500–1500ರಲ್ಲಿ ರಚಿತವಾದವು. ಇವುಗಳ ಭಾಗವಾದ ಬ್ರಾಹ್ಮಣ ಮತ್ತು ಅರಣ್ಯಕಗಳು ಸುಮಾರು ಕ್ರಿ.ಪೂ.1500–1200ರಲ್ಲಿ ರಚಿತವಾದವು. ಮತ್ತು ಉಪನಿಷತ್ತುಗಳು ಕ್ರಿ.ಪೂ. 800–500ರಲ್ಲಿ ರಚಿತವಾದ"[22]ವೆಂದು ವಿದ್ವಾಂಸರು ಹೇಳಿದ್ದಾರೆ. ವೇದಗಳ ಕಾಲವನ್ನು ಕುರಿತು ವಿದ್ವಾಂಸರ ಅಭಿಪ್ರಾಯಗಳಲ್ಲಿ ನಿರ್ದಿಷ್ಟತೆಗಳಿಲ್ಲ. ಆದರಿದು ಉಪಲಬ್ಧ ಸಾಹಿತ್ಯ ರಾಶಿಯಲ್ಲಿ ಅತ್ಯಂತ ಪ್ರಾಚೀನವೆಂಬುದಂತೂ ನಿರ್ವಿವಾದ ಸಂಗತಿಯಾಗಿದೆ.

2.5 ಋಗ್ವೇದ ಸಂಹಿತೆ

ದೇವತಾ ಪ್ರಾರ್ಥನೆ ಮತ್ತು ವರ್ಣನೆಗಳನ್ನು ಪ್ರಧಾನವಾಗಿ ಹೇಳುವ ಛಂದೋಬದ್ಧವಾದ ಋಕ್ಕುಗಳ ಸಂಗ್ರಹವೇ ಋಗ್ವೇದ ಸಂಹಿತೆಯಾಗಿದೆ. ಈ ಸಂಹಿತೆಯು ವೇದ ಸಂಹಿತೆಗಳಲ್ಲಿಯೇ ಅತ್ಯಂತ ಪ್ರಾಚೀನ ಮತ್ತು ಪ್ರಧಾನ ಗ್ರಂಥವಾಗಿದೆ. ಇದು ಹಲವಾರು ಋಷಿಗಳಿಂದ ಬೇರೆಬೇರೆ ಕಾಲಗಳಲ್ಲಿ ದೃಷ್ಟವಾದ ಅನೇಕ ಸೂಕ್ತಗಳಿಂದ ಕೂಡಿದೆ.

ಋಗ್ವೇದ ಸಂಹಿತೆಯನ್ನು ಎರಡು ರೀತಿಯಾಗಿ ವಿಭಾಗ ಮಾಡಲಾಗಿದೆ. ಮೊದಲನೆಯ ವಿಭಾಗ ಕ್ರಮದಲ್ಲಿ ಅಷ್ಟಕ, ಅಧ್ಯಾಯ, ವರ್ಗ ಮತ್ತು ಮಂತ್ರಗಳೆಂದು ವಿಭಾಗ ಮಾಡಲಾಗಿದೆ. ಇಡೀ ಋಗ್ವೇದವನ್ನು ಎಂಟು ಅಷ್ಟಕಗಳನ್ನಾಗಿಯೂ, ಪ್ರತಿಯೊಂದು ಅಷ್ಟಕವನ್ನು ಎಂಟೆಂಟು ಅಧ್ಯಾಯಗಳಾಗಿಯೂ, ಪ್ರತಿಯೊಂದು ಅಧ್ಯಾಯವನ್ನು ಹಲವಾರು ವರ್ಗಗಳನ್ನಾಗಿಯೂ ವಿಭಾಗಿಸಲಾಗಿದೆ ಪ್ರತಿಯೊಂದು ವರ್ಗದಲ್ಲಿ ಅನೇಕ ಮಂತ್ರಗಳಿವೆ.

ಋಗ್ವೇದ ಸಂಹಿತೆಯನ್ನು ಅಧ್ಯಯನದ ಅನುಕೂಲತೆಗಾಗಿ ಎರಡನೆಯ ವಿಭಾಗ ಕ್ರಮದಲ್ಲಿ ಮಂಡಲ, ಅನುವಾಕ, ಸೂಕ್ತ ಮತ್ತು ಮಂತ್ರಗಳೆಂದು ವಿಭಜಿಸಲಾಗಿದೆ. ಈ

ವಿಭಜನಾಕ್ರಮಾನುಸಾರ ಋಗ್ವೇದ ಸಂಹಿತೆಯು ಹತ್ತು ಮಂಡಲಗಳು, 85 ಅನುವಾಕಗಳು, 1028 ಸೂಕ್ತಗಳು ಹಾಗೂ 10552 ಮಂತ್ರಗಳನ್ನು ಒಳಗೊಂಡಿದೆ.

ಋಗ್ವೇದ ಸಂಹಿತೆಯ ಹತ್ತು ಮಂಡಲಗಳಲ್ಲಿ ಎರಡನೆಯ ಮಂಡಲದಿಂದ ಏಳನೆಯ ಮಂಡಲದವರೆಗಿನ ಮಂಡಲಗಳಿಗೆ ವಂಶೀಯ ಮಂಡಲಗಳೆಂದು ಹೆಸರು. ಇಲ್ಲಿರುವ ಎಲ್ಲಾ ಮಂಡಲಗಳು ಒಬ್ಬೊಬ್ಬ ಋಷಿಯಿಂದ ದ್ರಷ್ಟವಾಗಿವೆ. **"ಅಥ ಋಷಯಃ ಶತರ್ಚಿನೋ ಮಧ್ಯಮಾಗೃತ್ಸಮದೋ, ವಿಶ್ವಮಿತ್ರೋ ವಾಮದೇವೋೞತ್ರಿಭರದ್ವಾಜಾ ವಶಿಷ್ಠಃ ಪ್ರಗಾಥಾ ಪಾವಮಾನ್ಯಃ ಕ್ಷುದ್ರಸೂಕ್ತ ಮಹಾಸೂಕ್ತಾ ಇತಿ॥"**[23] ಅನುಕ್ರಮವಾಗಿ ಗೃತ್ಸಮದ, ವಿಶ್ವಾಮಿತ್ರ, ವಾಮದೇವ, ಅತ್ರಿ, ಭಾರದ್ವಾಜ ಮತ್ತು ವಸಿಷ್ಟರು ಈ ಮಂಡಲಗಳ ದ್ರಷ್ಟಾರರು. ಮೊದಲನೆಯ ಮಂಡಲವನ್ನು "ಶತರ್ಚಿನ" ಎಂದು, ಎಂಟನೆಯ ಮಂಡಲವನ್ನು 'ಪ್ರಗಾಥ'ವೆಂದು ಒಂಭತ್ತನೆಯ ಮಂಡಲವನ್ನು "ಪಾವಮಾನ್ಯಃ"ವೆಂದು ಹತ್ತನೆಯ ಮಂಡಲವನ್ನು "ಕ್ಷುದ್ರಸೂಕ್ತಾಃ ಮಹಾಸೂಕ್ತಾಃ" ಎಂದು ಅಶ್ವಾಲಾಯನರು ಗೃಹ್ಯಸೂತ್ರದಲ್ಲಿ ಹೇಳಿದ್ದಾರೆ. ಹಾಗೂ **"ಪ್ರಥಮೇ ಮಂಡಲೇ ಜ್ಞೇಯಾಃ ಋಷಯಸ್ತು ಶತರ್ಚಿನಃ। ಕ್ಷುದ್ರಸೂಕ್ತ ಮಹಾಸೂಕ್ತಾ ಅನ್ಯೇ ಮಧ್ಯೇಷು ಮಧ್ಯಮಾಃ॥"** ಬೃಹದ್ದೇವತೆಯಲ್ಲಿಯೂ ಸಹ ಮಂಡಲಗಳನ್ನು ವಿಭಾಗಿಸಿ ಹೆಸರಿಸಿರುವುದನ್ನು ಕಾಣುತ್ತೇವೆ.[24]

ಅಧ್ಯಯನ ಮತ್ತು ವಿಷಯವಸ್ತುವಿನ ದೃಷ್ಟಿಯಿಂದ ಋಗ್ವೇದ ಸಂಹಿತೆಯ ಸೂಕ್ತಗಳ ವೈವಿಧ್ಯತೆಯನ್ನು ಗಮನಿಸಿ ಡಾ. ಕೆ. ಕೃಷ್ಣಮೂರ್ತಿಯವರು ಈ ರೀತಿಯಾಗಿ ವಿಂಗಡಿಸಿದ್ದಾರೆ. 1.ದೇವತಾ ಸೂಕ್ತಗಳು, 2.ಆಪ್ರೀ ಸೂಕ್ತಗಳು, 3.ಸಂಸ್ಕಾರ ಸೂಕ್ತಗಳು, 4.ಅಧ್ಯಾತ್ಮಿಕ ಸೂಕ್ತಗಳು, 5.ಆಖ್ಯಾನ ಸೂಕ್ತಗಳು, 6.ಮಾಂತ್ರಿಕ ಸೂಕ್ತಗಳು, 7.ಲೌಕಿಕ ಸೂಕ್ತಗಳು, 8.ದಾನಸ್ತುತಿ ಸೂಕ್ತಗಳು, ಮತ್ತು 9.ಕೂಟ ಸೂಕ್ತಗಳು[25] ಅಲ್ಲದೆ ಅನಂತರಂಗಾಚಾರ್ಯರು ಋಗ್ವೇದ ಸಂಹಿತೆಯಲ್ಲಿರುವ ಲೌಕಿಕ ವಿಷಯಗಳ ಸೂಕ್ತಗಳನ್ನು ಹೀಗೆ ವಿಂಗಡಿಸಿದ್ದಾರೆ. 1.ದಾನಸ್ತುತಿಗಳು, 2.ಮಂಡೂಕ ಸೂಕ್ತ, 3.ಔರ್ಧ್ವದೈಹಿಕ ಸೂಕ್ತಗಳು, 4.ಅಕ್ಷಸೂಕ್ತ, 5.ಸಂವಾದ ಸೂಕ್ತ, 6.ವಿವಾಹ ಸೂಕ್ತ, 7.ಐತಿಹಾಸಿಕ ಸೂಕ್ತಗಳು, 8.ಅಭಿಚಾರಕ ಸೂಕ್ತಗಳು, ಮತ್ತು 9.ಬ್ರಹ್ಮೋದ್ಯಗಳು.[26]

ಋಗ್ವೇದ ಸಂಹಿತೆಯಲ್ಲಿ ಹಲವಾರು ದೇವತೆಗಳು ಸ್ತುತಿಗಳನ್ನು ಕಾಣುತ್ತೇವೆ. "ವೇದ ದೇವತೆಗಳ ಸಂಖ್ಯೆ 33. ಈ ಸಂಖ್ಯೆ ಇರಾನಿನಲ್ಲಿ ಪ್ರಸಿದ್ಧವಿದೆ. ಬ್ರಾಹ್ಮಣ ಗ್ರಂಥಗಳಲ್ಲಿ ಅದನ್ನು ಅಷ್ಟ ವಸುಗಳು, ಏಕಾದಶ ರುದ್ರರು, ದ್ವಾದಶಾದಿತ್ಯರು ಮತ್ತು ಇನ್ನಿಬ್ಬರು (ಅನಿರ್ದಿಷ್ಟರು) ಎಂದು ವಿಭಾಗಿಸಲಾಗಿದೆ. ಆದರೆ ಯಾಸ್ಕನ ನಿರುಕ್ತದಲ್ಲಿ ಪೃಥ್ವೀ ಸ್ಥಾನದವರು, ಅಂತರಿಕ್ಷ ಸ್ಥಾನದವರು ದ್ಯುಃಸ್ಥಾನದವರು ಎಂದು ಮೂರು

ಗುಂಪಾಗಿ ದೇವತೆಗಳನ್ನು ವಿಂಗಡಿಸಲಾಗಿದೆ.[27] "ಅಗ್ನಿ, ಇಂದ್ರ, ಸೋಮ, ವಾಯು, ಸೂರ್ಯ, ಬೃಹಸ್ಪತಿ, ಚಂದ್ರ, ವಿಷ್ಣು, ಪರ್ಜನ್ಯ, ಪೂಷಾ, ಅಶ್ವಿನಿ, ಪೃಥ್ವೀ, ಪ್ರಜಾಪತಿ, ಮಿತ್ರ, ವರುಣ ಮೊದಲಾದ ದೇವತೆಗಳು ಋಷಿಗಳ ಸ್ತೋತ್ರಗಳಿಗೆ ಪಾತ್ರರಾಗಿದ್ದಾರೆ. ಇವರಲ್ಲಿ ಪೃಥ್ವೀಸ್ಥಾನಕ್ಕೆ ಅಗ್ನಿ, ಅಂತರಿಕ್ಷ ಸ್ಥಾನಕ್ಕೆ ಇಂದ್ರ, ಮತ್ತು ದ್ಯುಃಸ್ಥಾನಕ್ಕೆ ಸೂರ್ಯರು ಪ್ರಧಾನ ದೇವತೆಗಳಾಗಿದ್ದಾರೆ. ಅಷ್ಟೇ ಅಲ್ಲದೆ ಉಷಸ್ಸು, ಸರಸ್ವತೀ, ಪೃಥ್ವೀ, ರಾತ್ರೀ, ವಾಕ್, ಇಳಾ, ಮೊದಲಾದ ಸ್ತ್ರೀ ದೇವತೆಗಳ ಸ್ತುತಿಗಳು, ಇಂದ್ರಾಗ್ನೀ, ಇಂದ್ರಾವರಣೌ, ಇಂದ್ರವಾಯೂ, ದ್ಯಾವಾಪೃಥ್ವೀ, ಇಂದ್ರಸೋಮೌ, ಅಗ್ನಾವಿಷ್ಣೌ, ಮಿತ್ರಾವರುಣೌ ಮೊದಲಾದ ದ್ವಿತ್ವ ದೇವತೆಗಳ ಸ್ತುತಿಗಳು ಹಾಗೂ ಅನೇಕ ದೇವತೆಗಳನ್ನು ಒಟ್ಟಿಗೆ ಸ್ತುತಿಸುವ ಸ್ತೋತ್ರಗಳನ್ನು ಋಗ್ವೇದ ಸಂಹಿತೆಯಲ್ಲಿ ಕಾಣುತ್ತೇವೆ. ದೇವತೆಗಳ ಕೃತಿ, ವೈಶಿಷ್ಟ್ಯ ಮತ್ತು ಲಕ್ಷಣಗಳನ್ನು ಗುರ್ತಿಸಿ ಅಧಿರಾಜ ದೇವತೆಗಳು, ಯುದ್ಧವೀರ ದೇವತೆಗಳು, ಪ್ರಕಾಶ ದೇವತೆಗಳು, ಯಜ್ಞ ದೇವತೆಗಳು ಮತ್ತು ಅಪ್ರಧಾನ ದೇವತೆಗಳೆಂದು" ಡಾ. ಕೆ. ಕೃಷ್ಣಮೂರ್ತಿಯವರು ವಿಭಾಗಿಸಿದ್ದಾರೆ.[28]

ಸಂಹಿತೆಯ ಪ್ರತಿಯೊಂದು ಸೂಕ್ತಕ್ಕೂ ಸಂಬಂಧಿಸಿದ ಋಷಿ, ದೇವತೆ ಮತ್ತು ಛಂದಸ್ಸುಗಳನ್ನು ತಿಳಿದುಕೊಂಡೇ ಸೂಕ್ತಗಳನ್ನು ಹೇಳಬೇಕೆಂದು ಸಂಪ್ರದಾಯವಿದೆ. ಇದಕ್ಕೆ ತಪ್ಪಿದರೆ ಅನರ್ಥ ಉಂಟಾಗುತ್ತದೆಂದು ಹೇಳಿದ್ದಾರೆ.

ಅವಿದಿತ್ವಾ ಋಷಿಂ ಛಂದಃ ದೈವತಂ ಯೋಗಮೇವ ಚ।
ಯೋऽಧ್ಯಾಪಯೇಜ್ಜಪೆದ್ವಾಪಿ ಪಾಪಿಯಾನ್ ಜಾಯತೇ ತು ಸಃ ॥[29]

ಕಾತ್ಯಾಯನರು ತಮ್ಮ 'ಸರ್ವಾನುಕ್ರಮಣಿಕೆ'ಯಲ್ಲಿ **"ಯಸ್ಯ ವಾಕ್ಯಂ ಸ ಋಷಿಃ ಯತೇನೋಚ್ಯತೇ ಸಾ ದೇವತಾ । ಯದಕ್ಷರಪರಿಮಾಣಂ ತಚ್ಛಂದಃ।"** "ಮಂತ್ರ ದ್ರಷ್ಟಾರರು ಋಷಿಗಳು, ಮಂತ್ರದಿಂದ ಯಾರನ್ನು ಸ್ತುತಿಸುತ್ತೇವೆಯೋ ಅದು ದೇವತೆ. ಅಕ್ಷರ ಪರಿಮಾಣವುಳ್ಳದ್ದು ಛಂದಸ್ಸು"[30] ಎಂದು ಹೇಳಿದ್ದಾರೆ. ಗೃತ್ಸಮದ, ವಾಮದೇವ, ಅತ್ರಿ, ಭರದ್ವಾಜ, ವಿಶ್ವಾಮಿತ್ರ ಮೊದಲಾದ ಋಷಿಗಳಿಂದ ಸೂಕ್ತಗಳು ದ್ರಷ್ಟವಾಗಿವೆ.

ಋಗ್ವೇದ ಸಂಹಿತೆಯು ಮಂತ್ರಗಳೆಲ್ಲಾ ಛಂದೋಬದ್ಧವಾಗಿವೆ. **"ಯದಕ್ಷರಪರಿಮಾಣಂ ತಚ್ಛಂದಃ"**[31] ಎಂಬ ಲಕ್ಷಣದನ್ವಯ ಸಂಹಿತೆಯ ಸೂಕ್ತಗಳೆಲ್ಲಾ ಅಕ್ಷರ ಸಂಖ್ಯೆಯನ್ನವಲಂಬಿಸಿವೆ. ಗಾಯತ್ರಿ, ಉಷ್ಣಿಕ್, ಅನುಷ್ಟುಪ್, ಬೃಹತಿ ಮೊದಲಾದ ಛಂದಸ್ಸುಗಳಿಂದ ಸಂಹಿತೆಯ ಮಂತ್ರಗಳು ಕೂಡಿವೆ.

ಋಗ್ವೇದ ಸಂಹಿತೆಯಲ್ಲಿ 21 ಶಾಖೆಗಳಿದ್ದವೆಂದು ಪತಂಜಲಿಯವರು ಹೇಳಿದ್ದಾರೆ.[32] ಆದರೆ ಅವುಗಳಲ್ಲಿ ನಮಗೆ ಶಾಕಲ, ಭಾಷ್ಕಲ, ಆಶ್ವಾಲಾಯನ ಮತ್ತು ಸಾಂಖ್ಯಾಯನ ಮಾತ್ರ ಉಪಲಬ್ಧವಾಗಿವೆ.

2.6 ಯಜುರ್ವೇದ ಸಂಹಿತೆ

ಯಜ್ಞ ಸಾಧನೆಯ ಅನುಷ್ಠಾನ ವಿಷಯವನ್ನು ಹೊಂದಿರುವ ಗದ್ಯಾತ್ಮಕ ರೂಪವಾದ ಯಜಸ್ಸುಗಳ ಸಂಗ್ರಹವೇ ಯಜುರ್ವೇದ ಸಂಹಿತೆ. ಇದು ಯಜ್ಞದ ದೃಷ್ಟಿಯಿಂದ ಅಧ್ವರ್ಯುವಿನ ಉಪಯೋಗಕ್ಕಾಗಿ ಸಂಗ್ರಹವಾಗಿದೆ. **"ಅನಿಯಾತಾಕ್ಷರಾವಸಾನೋ ಯಜುಃ, ಗದ್ಯಾತ್ಮಕೋ ಯಜುಃ"**[33] ಎಂಬ ವಾಕ್ಯಗಳಂತೆ ಗದ್ಯರೂಪವಾದ ವೇದ ವಚನಕ್ಕೆ ಅಥವಾ ಋಗ್ವೇದ ಹಾಗೂ ಸಾಮವೇದ ಸಂಹಿತೆಗಳಿಗಿಂತ ಭಿನ್ನವಾದ ಮಂತ್ರಗಳ ಸಂಗ್ರಹಕ್ಕೆ ಯಜುರ್ವೇದ ಸಂಹಿತೆಯೆಂದು ಕರೆಯುತ್ತೇವೆ.

ಯಜುರ್ವೇದ ಸಂಹಿತೆಯು ಶುಕ್ಲಯಜುರ್ವೇದ ಸಂಹಿತೆ ಮತ್ತು ಕೃಷ್ಣಯಜುರ್ವೇದ ಸಂಹಿತೆ ಎಂಬ ಎರಡು ಶಾಖೆಗಳನ್ನು ಹೊಂದಿದೆ. ಶತಪಥ ಬ್ರಾಹ್ಮಣವು **"ಆದಿತ್ಯಾನೀಮಾನಿ ಶುಕ್ಲಾನಿ ಯಜೂಂಷಿ ವಾಜಸನೇಯೇನ ಯಾಜ್ಞವಲ್ಕ್ಯೇನ ಆಖ್ಯಾಯಂತೇ।"**[34] ಶುಕ್ಲ ಯಜುರ್ವೇದ ಸಂಹಿತೆಯು ಆದಿತ್ಯ ಸಂಪ್ರದಾಯಕ್ಕೆ, ಕೃಷ್ಣಯಜುರ್ವೇದ ಸಂಹಿತೆಯು ಬ್ರಹ್ಮ ಸಂಪ್ರದಾಯಕ್ಕೆ ಸೇರಿವೆ. ಎಂದು ಹೇಳಿದೆ.

ದರ್ಶಪೂರ್ಣಮಾಸಾದಿ ಯಾಗಗಳಿಗೆ ಸಂಬಂಧಿಸಿದ ಪದ್ಯಗಳನ್ನು ಮಾತ್ರ ಹೊಂದಿರುವ ಅಥವಾ ಶುದ್ಧವಾದ ಮಂತ್ರಗಳ ಸಂಗ್ರಹಕ್ಕೆ ಶುಕ್ಲಯರ್ಜುವೇದ ಸಂಹಿತೆ ಎಂದೂ, ಗದ್ಯ–ಪದ್ಯಗಳ ಮಿಶ್ರಣ ಅಥವಾ ಮಂತ್ರ ಮತ್ತು ಬ್ರಾಹ್ಮಣ ಭಾಗಗಳು ಮಿಶ್ರಿತವಾಗಿರುವುದಕ್ಕೆ ಕೃಷ್ಣಯರ್ಜುವೇದ ಸಂಹಿತೆ ಎಂದು ಕರೆಯಲಾಗಿದೆ.

ಯಜುರ್ವೇದ ಸಂಹಿತೆಯು ನೂರೊಂದು ಶಾಖೆಗಳನ್ನು ಹೊಂದಿದೆ **"ಏಕಶತಮಧ್ವರ್ಯು ಶಾಖಾಃ"**[35] ಎಂದು ಪತಂಜಲಿಯವರು ಹೇಳಿದರೂ ಅವುಗಳಲ್ಲಿ ಈಗ ನಮಗೆ ಆರು ಶಾಖೆಗಳು ಮಾತ್ರ ಉಪಲಬ್ಧವಾಗಿವೆ.

ಶುಕ್ಲಯಜುರ್ವೇದ ಸಂಹಿತೆಯಲ್ಲಿ ವಾಜಸನೇಯೀ ಕಣ್ವಶಾಖೆ, ಮಾಧ್ಯಂದಿನ ಶಾಖೆ, ಕೃಷ್ಣಯಜುರ್ವೇದ ಸಂಹಿತೆಯಲ್ಲಿ ಕಾಠಕ, ಕಪಿಷ್ಠಲ, ಮೈತ್ರಾಮಣೀಯ ಮತ್ತು ತೈತ್ತರೀಯ ಎಂಬ ಒಟ್ಟು ಆರು ಶಾಖೆಗಳು ಉಪಲಬ್ಧವಾಗಿವೆ.

2.7 ಸಾಮವೇದ ಸಂಹಿತೆ

ಸಂಗೀತಕ್ಕನುಗುಣವಾಗಿರುವ ಮಂತ್ರರಾಶಿಯೇ ಸಾಮವೇದ ಸಂಹಿತೆಯಾಗಿದೆ. ಯಾಗದಲ್ಲಿ ಋತ್ವಿಕನಾದ ಉದ್ಗಾತೃವಿನ ಉಪಯೋಗಕ್ಕಾಗಿ ಸಾಮವೇದ ಸಂಹಿತೆಯು ಸಂಕಲನಗೊಂಡಿದೆ. **"ಗೀತಿಷು ಸಾಮಾಖ್ಯಾ"**[36] ಎಂಬ ಜೈಮಿನಿಯ ಸೂತ್ರದಂತೆ ಗಾನ ಪ್ರಧಾನವಾದುದಕ್ಕೆ ಸಾಮವೇದ ಸಂಹಿತೆ ಎನ್ನಲಾಗುತ್ತದೆ. ಬೃಹದಾರಣ್ಯಕೋಪನಿಷತ್ತು 'ಸಾಮ' ಶಬ್ದದ ನಿರ್ವಚನವನ್ನು ಹೀಗೆ ಹೇಳುತ್ತದೆ – **"ಸಾಚ ಅಮಶ್ಚೇತಿ ತತ್ಸಾಮ್ನಃ**

ಸಾಮತ್ವಮ್। ಸಾ ಋಕ್। ತಯಾ ಸಹ ಸಂಬಂಧಃ ಅಮೋ ನಾಮ ಸ್ವರೋ ಯತ್ರ ವರ್ತತೇ ತತ್ಸಾಮ।"[37] 'ಸಾ' ಮತ್ತು 'ಅಮ್' ಗಳು ಸೇರಿ 'ಸಾಮ' ಎಂಬ ಶಬ್ದ ಉತ್ಪತ್ತಿಯಾಗಿವೆ. 'ಸಾ' ಎಂದರೆ ಋಕ್ಕುಗಳು 'ಅಮ್' ಎಂದರೆ ಷಡ್ಜ, ಋಷಭ, ಗಾಂಧಾರ ಮೊದಲಾದ ಸಪ್ತ ಸ್ವರಗಳು. ಯಾಸ್ಕಾಚಾರ್ಯರು ತಮ್ಮ ಗ್ರಂಥವಾದ ನಿರುಕ್ತದಲ್ಲಿ 'ಸಾಮ' ಎಂಬ ಶಬ್ದದ ನಿರ್ವಚನವನ್ನು **"ಸಾಮ ಸಂಹಿತಂ ಋಚಾ ಅಸ್ಯತೇ ವಾ ಸ್ಯತೇ, ವಾ ಋಚಾ ಸಮಂ ಮೇನೇ ಇತಿ ವೈದಾನಕ।"**[38] ಎಂದು ಹೇಳಿದ್ದಾರೆ. ಅಂದರೆ ಪರಿಣಾಮದಲ್ಲಿ ಋಕ್ಕಿನಿಂದ ಕೂಡಿದ್ದು ಸಾಮ, ಋಕ್ಕಿನಿಂದ ಸಂಕ್ಷಿಪ್ತವಾದುದರಿಂದ ಇದಕ್ಕೆ ಸಾಮವೆನ್ನಲಾಗುತ್ತದೆ. ಬೃಹದಾರಣ್ಯಕ ಉಪನಿಷತ್ತು ಸಹ **"ಸಾಮಾಹಮಸ್ಮಿ ಋಕ್ ತ್ವಮ್।"**[39] ಎಂದು ಹೇಳಿದೆ. ಅಲ್ಲದೆ ಛಾಂದೋಗ್ಯವು **"ಋಚ್ಯಾದ್ಯೂಡಂ ಸಾಮ"**[40] ಎಂದಿದೆ. ಸಾಮಕ್ಕೆ ಋಗ್ವೇದ ಮಂತ್ರಗಳೇ ಆಧಾರವಾಗಿವೆ. ಎಂದು ಸ್ಪಷ್ಟ ಪಡಿಸುತ್ತದೆ. ಆದುದರಿಂದ ಸ್ವರಬದ್ಧವಾಗಿ ಹಾಡುವ ಋಙ್ಮಂತ್ರಗಳ ಸಂಕಲನಕ್ಕೆ ಸಾಮವೇದ ಸಂಹಿತೆ ಎಂದು ಕರೆಯಲಾಗಿದೆ.

ಸಾಮವೇದ ಸಂಹಿತೆಯಲ್ಲಿ ಪೂರ್ವಾರ್ಚಿಕಾ ಮತ್ತು ಉತ್ತರಾರ್ಚಿಕಾ ಎಂಬ ಎರಡು ವಿಭಾಗಗಳಿವೆ. ಅರ್ಚಿಕಾ ಎಂದರೆ ಋಕ್ಕುಗಳ ಸಮೂಹ ಎಂದರ್ಥ. ಪೂರ್ವಾರ್ಚಿಕೆಯಲ್ಲಿ 650 ಮಂತ್ರಗಳು, ಉತ್ತರಾರ್ಚಿಕೆಯಲ್ಲಿ 1225 ಮಂತ್ರಗಳಿವೆ. ಪೂರ್ವಾರ್ಚಿಕೆಯಲ್ಲಿ ಆರು ಅಧ್ಯಾಯ ಅಥವಾ ಪ್ರಪಾಠಕಗಳಿವೆ. ಒಂದೊಂದು ಪ್ರಪಾಠಕಗಳನ್ನು ಒಂದೊಂದು ಹೆಸರಿನ ಖಂಡದಿಂದ ಕರೆಯಲಾಗುತ್ತದೆ. ಇದರಲ್ಲಿ ಒಂದೊಂದು ದಶತಿ ಇದ್ದು ಇವುಗಳಲ್ಲಿ ಅನೇಕ ಋಕ್ಕುಗಳಿವೆ. ಉತ್ತರಾರ್ಚಿಕೆಯಲ್ಲಿ ಒಂಭತ್ತು ಪ್ರಪಾಠಕಗಳಿವೆ. ಮೊದಲಿನ ಮೂರ್ಮೂರು ಪ್ರಪಾಠಾಕಾರ್ಧಗಳಿವೆ.

ಸಾಮಗಾನವು 1. ಗ್ರಾಮಗೇಯ ಗಾನ ಅಥವಾ ಪ್ರಕೃತಿ ಗಾನ, 2. ಆರಣ್ಯಕ ಗಾನ, 3. ಊಹಗಾನ ಮತ್ತು 4. ಊಹ್ಯಗಾನ ಅಥವಾ ರಹಸ್ಯಗಾನಗಳೆಂಬ ನಾಲ್ಕು ಪ್ರಬೇಧಗಳನ್ನು ಹೊಂದಿದೆ.

ಪತಂಜಲಿಯವರು **"ಸಹಸ್ರವರ್ತ್ಮಾ ಸಾಮವೇದ"** ಅಂದರೆ ಸಾಮವೇದ ಸಂಹಿತೆಗೆ ಸಹಸ್ರ ಶಾಖೆಗಳಿದ್ದವೆಂದು ಹೇಳಿದ್ದಾರೆ. ಅಲ್ಲದೆ ಸಹಸ್ರ ಶಾಖೆಗಳ ಬಗ್ಗೆ ಚರಣವ್ಯೂಹದಲ್ಲಿ ಉಲ್ಲೇಖವಿದ್ದರೂ ಅವೆಲ್ಲ ನಮಗೆ ಉಪಲಬ್ಧವಾಗಿಲ್ಲ ಮತ್ತು ಜೈಮಿನಿಯ ಗೃಹ್ಯ ಸೂತ್ರದಲ್ಲಿ ಹದಿಮೂರು ಶಾಖೆಗಳ ಹೆಸರುಗಳು ಮಾತ್ರ ದೊರೆಯುತ್ತವೆ. ಇವುಗಳಲ್ಲಿ ಈಗ ರಾಣಾಯನೀಯ, ಕೌಥುಮ ಮತ್ತು ಜೈಮಿನೀಯಗಳೆಂಬ ಮೂರು ಶಾಖೆಗಳು ಮಾತ್ರ ಉಪಲಬ್ಧವಾಗಿವೆ.[41]

ಭಗವದ್ಗೀತೆಯ **"ವೇದಾನಾಂ ಸಾಮವೇದೋಽಸ್ಮಿ"**[42] ಎಂಬ ವಾಣಿಯು ಸಾಮವೇದದ ಮಹತ್ವವನ್ನು ಸಾರುತ್ತದೆ. ಅಲ್ಲದೆ. ಋಗ್ವೇದ ಹಾಗೂ ಅಥರ್ವವೇದ ಸಂಹಿತೆಗಳಲ್ಲಿಯೂ ಸಾಮವೇದದ ಬಗ್ಗೆ ಉಲ್ಲೇಖವನ್ನು ಕಾಣುತ್ತೇವೆ.

ಯೋ ಜಾಗರ ತಮು ಸಾಮಾನಿ ಯಂತಿ।
ಉದ್ಗಾತೇನ ಶಕುನೇ ಸಾಮ ಗಾಯಸಿ।
ಬ್ರಹ್ಮ ಪುತ್ರ ಇವ ಸವನೇಷು ಶಂಸಸಿ॥
ದೇವಾಃ ಅಂಗಿರಸಾಂ ಸಾಮಭಿಃ ಸ್ತೂಯಮಾನಾಃ।
ಋಚಃ ಸಾಮಾನಿ ಚಂದಾಂಸಿ. . . . . .
. . . . . .ಉಚ್ಚಿಷ್ಟಾತ್ತು ಜಜ್ಞಿರೇ ಸರ್ವೇ।[43]

2.8 ಅಥರ್ವವೇದ ಸಂಹಿತೆ

ಭೃಗು ಮತ್ತು ಅಂಗಿರಸದಿಂದ ದ್ರಷ್ಟವಾದುದೇ ಅಥರ್ವವೇದ ಸಂಹಿತೆ. ಇದನ್ನು ಬ್ರಹ್ಮನೆಂಬ ಋತ್ವಿಜನು ಯಜ್ಞದಲ್ಲಿ ಉಪಯೋಗಿಸುತ್ತಾನೆ. ಈ ವೇದ ಸಂಹಿತೆಗೆ ಅಂಗಿರೋವೇದ, ಅಥರ್ವಣ, ಭೃಗ್ವಂಗಿರಸ, ಅಥರ್ವಾಂಗಿರಸ, ಬ್ರಹ್ಮವೇದ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ.

ಅಥರ್ವವೇದ ಸಂಹಿತೆಯಲ್ಲಿ "760 ಸೂಕ್ತಗಳೂ ಸುಮಾರು 6000 ಋಕ್ಕುಗಳೂ ಇವೆ. ಇವುಗಳಲ್ಲಿ ಏಳನೆಯ ಒಂದರಷ್ಟು ಸೂಕ್ತಗಳು ಋಗ್ವೇದದಿಂದ ತೆಗೆದುಕೊಂಡವೇ ಆಗಿವೆ. ಇದರಲ್ಲಿ ಒಟ್ಟು 20 ಕಾಂಡಗಳು ಮತ್ತು 48 ಪ್ರಪಾಠಕಗಳಿವೆ"[44]

ಮಹಾಭಾಷ್ಯದಲ್ಲಿ ಪತಂಜಲಿಯವರು ಅಥರ್ವವೇದ ಸಂಹಿತೆಯಲ್ಲಿ **"ನವಧಾ ಅಥರ್ವಣೋ ವೇದಃ।"** ಒಂಬತ್ತು ಶಾಖೆಗಳು ಇದ್ದವೆಂದು ಹೇಳಿದ್ದಾರೆ. ಸಾಯಣಾಚಾರ್ಯರು ತಮ್ಮ ಭಾಷ್ಯದಲ್ಲಿ ಪಿಪ್ಪಲಾದ, ಸ್ತೌದ, ಮೌದ, ಶೌನಕೀಯ, ಜಾಬಲ, ಜಲದ, ಬ್ರಹ್ಮವದ, ದೇವದರ್ಶ ಮತ್ತು ಚಾರಣ ವೈದ್ಯ ಎಂಬ ಒಂಬತ್ತು ಶಾಖೆಗಳ ಹೆಸರುಗಳನ್ನು ಹೇಳಿದ್ದಾರೆ. ಇವುಗಳಲ್ಲಿ ಪಿಪ್ಪಲಾದ ಮತ್ತು ಶೌನಕೀಯ ಎಂಬ ಎರಡು ಶಾಖೆಗಳು ಮಾತ್ರ ಈಗ ಉಪಲಬ್ಧವಾಗಿವೆ.[45]

ಅಧ್ಯಯನ ಮತ್ತು ವಿಷಯ ವಸ್ತುವಿನ ಆಧಾರದಿಂದ ಅಥರ್ವವೇದ ಸಂಹಿತೆಯ ಸೂಕ್ತಗಳನ್ನು ಹತ್ತು ವರ್ಗಗಳಲ್ಲಿ ವಿಂಗಡಿಸಲಾಗಿದೆ.[46] 1.ಭೈಷಜ್ಯ ಸೂಕ್ತಗಳು, 2.ಆಯುಷ್ಯ ಸೂಕ್ತಗಳು, 3.ಪೌಷ್ಟಿಕ ಸೂಕ್ತಗಳು, 4.ಆಭಿಚಾರ ಸೂಕ್ತಗಳು, 5.ಪ್ರಾಯಶ್ಚಿತ್ತ ಸೂಕ್ತಗಳು, 6.ಸ್ತ್ರೀಕರ್ಮ ಸೂಕ್ತಗಳು, 7.ರಾಜಕರ್ಮ ಸೂಕ್ತಗಳು, 8.ಸೌಮನಸ್ಯ ಸೂಕ್ತಗಳು, 9.ಪಾಪನಿರ್ಹರಣ ಸೂಕ್ತಗಳು ಮತ್ತು 10.ಬ್ರಾಹ್ಮಣ ಸೂಕ್ತಗಳು.

ಅಥರ್ವವೇದ ಸಂಹಿತೆಯು ಜನ ಜೀವನ ದೃಷ್ಟಿಯಿಂದ ಬಹಳ ಮಹತ್ವದ್ದಾಗಿದೆ. ವಿಘ್ನ, ಶಾಂತಿ ಮತ್ತು ದೇವತಾ ಪುಷ್ಟಿ ಇವುಗಳ ಪ್ರಯೋಜನಗಳ ಬಗ್ಗೆ ಈ ಸಂಹಿತೆಯು ತಿಳಿಸಿಕೊಡುವುದು. ಅಂದರೆ ಮಾರಣ, ಮೋಹನ, ಉಚ್ಚಾಟನ ಮೊದಲಾದ ಅಭಿಚಾರ ಕರ್ಮಗಳಿಗೂ, ಶಾಂತಿ ಕರ್ಮಗಳಿಗೂ ಸಾಧಕವಾದುದೇ ಅಥರ್ವವೇದ

ಸಂಹಿತೆಯಾಗಿದೆ. ಈ ಸಂಹಿತೆಯು ಆದಿದೈವಿಕ, ಆಧ್ಯಾತ್ಮಿಕ ವಿಷಯಗಳಿಗಿಂತ ಆಧಿಭೌತಿಕ ವಿಷಯಕ್ಕೆ ಹೆಚ್ಚಿನ ಮಹತ್ವ ಹಾಗೂ ಪ್ರಾಧಾನ್ಯತೆಯನ್ನು ಕೊಟ್ಟಿದೆ. ಒಟ್ಟಿನಲ್ಲಿ ಈ ಸಂಹಿತೆಯು ಲೌಕಿಕ ಜೀವನದ ಸಮೃದ್ಧಿಗಾಗಿ ಅವಶ್ಯಕವಾದ ಆರೋಗ್ಯ ಮೊದಲಾದ ವಿಷಯಗಳನ್ನು ಒಳಗೊಂಡಿರುವುದರಿಂದ ನಾಲ್ಕು ವೇದಗಳಲ್ಲಿ ಇದು ವಿಶಿಷ್ಟವಾದ ಸ್ಥಾನ ಪಡೆದಿದೆ.

2.9 ವೇದಾಂಗಗಳು

ಸಂಹಿತೆಗಳ ಅರ್ಥವನ್ನು ವಿಸ್ತೃತವಾಗಿ ತಿಳಿಯುವ ಸಲುವಾಗಿ ವೇದಾಂಗಗಳು ರಚನೆಗೊಂಡವು. ಅಂದರೆ ವೇದಗಳ ಅರ್ಥವನ್ನು ಅರಿಯಲು ಸಹಾಯ ಮಾಡುವ ಶಾಸ್ತ್ರ ಗ್ರಂಥಗಳಿಗೆ ವೇದಾಂಗವೆಂದು ಹೇಳುವುದು. ಆ ವೇದಾಂಗಗಳು ಆರು ಎಂದು ಪ್ರಖ್ಯಾತಗೊಂಡಿವೆ. ಅವು ಹೀಗಿವೆ.

ಶಿಕ್ಷಾ ವ್ಯಾಕರಣಂ ಛಂದೋ ನಿರುಕ್ತಂ ಜ್ಯೋತಿಷಂ ತಥಾ।
ಕಲ್ಪಶ್ಚೇತಿ ಷಡಂಗಾನಿ ವೇದಸ್ಯಾಹುರ್ಮನೀಷಿಣಃ॥[47]

ಶಿಕ್ಷಾ, ವ್ಯಾಕರಣ, ಛಂದಸ್ಸು, ನಿರುಕ್ತ, ಜ್ಯೋತಿಷ ಮತ್ತು ಕಲ್ಪ ಎಂದು ಆರು ವೇದಾಂಗಗಳನ್ನು ಹೆಸರಿಸಲಾಗಿದೆ. ಇವುಗಳನ್ನು ವೇದ ರೂಪಿಯಾದ ಅಂಗಾಂಗ ಗಳೆಂದು ತಿಳಿಯಲಾಗುತ್ತದೆ. ಪಾಣಿನೀಯ ಶಿಕ್ಷಾ ಗ್ರಂಥದಲ್ಲಿ ವೇದಾಂಗಗಳನ್ನು ಹೀಗೆ ವರ್ಣಿಸಲಾಗಿದೆ.–

ಛಂದಃ ಪಾದೌ ತು ವೇದಸ್ಯ ಹಸ್ತೌ ಕಲ್ಪೋSಥ ಪಠ್ಯತೇ
ಜ್ಯೋತಿಷಾಮಯನಂ ಚಕ್ಷುರ್ನಿರುಕ್ತಂ ಶ್ರೋತ್ರಮುಚ್ಯತೇ॥

ಶಿಕ್ಷಾ ಘ್ರಾಣಂ ತು ವೇದಸ್ಯ ಮುಖಂ ವ್ಯಾಕರಣಂ ಸ್ಮೃತಮ್।
ತಸ್ಮಾತ್ ಸಾಂಗಮಧೀತ್ಯೈವ ಬ್ರಹ್ಮಲೋಕೇ ಮಹೀಯತೇ॥[48]

ಅಂದರೆ ವೇದಕ್ಕೆ ಛಂದಸ್ಸೇ ಪಾದಗಳು, ಕಲ್ಪ ಸೂತ್ರಗಳೇ ಕೈಗಳು, ಜ್ಯೋತಿಷವೇ ಕಣ್ಣು, ನಿರುಕ್ತವೇ ಕಿವಿ, ಶಿಕ್ಷಾ ಶಾಸ್ತ್ರವು ಮೂಗು, ವ್ಯಾಕರಣವೇ ಮುಖ, ಅಂಗಸಹಿತವಾಗಿ ವೇದವನ್ನು ಓದಿದವನು ಬ್ರಹ್ಮಲೋಕದಲ್ಲಿ ಪೂಜ್ಯನಾಗುತ್ತಾನೆ ಎಂದು.

ವೇದಾಂಗ ಶಬ್ದದ ವ್ಯುತ್ಪತ್ತಿಯನ್ನು **"ಅಂಗ್ಯಂತೇ ಜ್ಞಾಯಂತೇ ಅಮೀಭಿರಿತಿ ಅಂಗಾನಿ"**[49] ಉಪಕಾರ ಮಾಡುವ ಶಾಸ್ತ್ರಕ್ಕೆ ಅಂಗವೆಂದು ಹೇಳಲಾಗುತ್ತದೆ. ಮುಂಡಕ ಉಪನಿಷತ್ತು ಪರ ಮತ್ತು ಅಪರ ವಿದ್ಯೆಯ ಬಗೆಗೆ ವಿವರಿಸುವಾಗ ವೇದ–ವೇದಾಂಗಗಳ ವಿವರಣೆಯನ್ನು ಹೀಗೆ ಕಾಣುತ್ತೇವೆ.–

ತತ್ರಾಪರಾ ಋಗ್ವೇದೋ ಯಜುರ್ವೇದಃ ಸಾಮವೇದೋSಥರ್ವವೇದಃ।
ಶಿಕ್ಷಾ ಕಲ್ಪೋ ವ್ಯಾಕರಣಂ ನಿರುಕ್ತಂ ಛಂದೋ ಜ್ಯೋತಿಷಮಿತಿ॥[50]

2.9.1 ಶಿಕ್ಷಾ

ಸಾಯಣಾಚಾರ್ಯರು ತಮ್ಮ ಋಗ್ವೇದ ಭಾಷ್ಯ ಭೂಮಿಕೆಯಲ್ಲಿ **"ಸ್ವರ ವರ್ಣಾದ್ಯುಚ್ಚಾರಣ ಪ್ರಕಾರೋ ಯತ್ರ ಶಿಷ್ಯತೇ ಉಪದಿಶ್ಯತೇ ಸಾ ಶಿಕ್ಷಾ"**[51] ಯಾವುದರ ಮುಖಾಂತರ ವೇದ, ವೇದ ಮಂತ್ರಗಳನ್ನು ಶುದ್ಧಾತಿಶುದ್ಧವಾಗಿ ಉಚ್ಚರಿಸಲು ಸಹಾಯವಾಗುತ್ತದೆಯೋ ಅದನ್ನು ಶಿಕ್ಷಾ ಎಂದು ಹೇಳುತ್ತಾರೆ. ಇದನ್ನು ವೇದಪುರುಷನ 'ಪ್ರಾಣ'ವೆಂದು **"ಶಿಕ್ಷಾ ಘ್ರಾಣಂತು ವೇದಸ್ಯ"**[52] ಹೇಳಲಾಗಿದೆ. ತೈತ್ತರೀಯೋಪನಿಷತ್ತಿನಲ್ಲಿ "ಶಿಕ್ಷಾವಲ್ಲಿ" ಎಂಬ ಭಾಗವಿದೆ. ಇದರಲ್ಲಿ ಶಿಕ್ಷಾಶಾಸ್ತ್ರದ ಮೂಲತತ್ವಗಳನ್ನು ಹೇಳಲಾಗಿದೆ; **"ಅಥ ಶಿಕ್ಷಾಂ ವ್ಯಾಖ್ಯಾಸ್ಯಾಮಃ। ವರ್ಣ ಸ್ವರಃ। ಮಾತ್ರಾ ಬಲಂ ಸಾಮಃ ಸಂತಾನಃ। ಇತ್ಯುಕ್ತಃ ಶಿಕ್ಷಾಧ್ಯಾಯಃ।"**[53] ಎಂಬ ಮಂತ್ರದಲ್ಲಿ ವರ್ಣ, ಸ್ವರ, ಮಾತ್ರಾ, ಬಲಂ, ಸಾಮ, ಸಂತಾನ, ಎಂಬುದರ ಅರ್ಥ ಪರಿಕಲ್ಪನೆಗಳನ್ನು ಕಾಣಬಹುದು.

ಪಾಣಿನಿಯು ತನ್ನ "ಶಿಕ್ಷಾ" ಗ್ರಂಥದಲ್ಲಿ ವೇದ ಮಂತ್ರಗಳನ್ನು ಉದಾತ್ತಾನುದಾತ್ತ ಮತ್ತು ಸ್ವರಿತ ಸ್ವರಸಹಿತವಾಗಿ ಉಚ್ಚರಿಸಬೇಕೆಂದು ಹೇಳುತ್ತಾನೆ. **"ಉಚ್ಚೈರುದಾತ್ತಃ, ನೀಚೈರನುದಾತ್ತಃ, ಸಮಾಹಾರಃ ಸ್ವರಿತಃ"**[54] ಎಂದು ವ್ಯಾಕರಣ ಗ್ರಂಥದಲ್ಲಿ ಸೂತ್ರರೂಪವಾಗಿ ವಿವರಿಸಲಾಗಿದೆ. ವೈದಿಕ ಸಾಹಿತ್ಯದಲ್ಲಿ ಸ್ವರ ಪ್ರಕ್ರಿಯೆಯು ಅತ್ಯಂತ ಮಹತ್ವವುಳ್ಳದ್ದಾಗಿದೆ. ಅಕ್ಷರಗಳ ಉಚ್ಚಾರಣೆಯನ್ನು ಹುಲಿ ತನ್ನ ಮರಿಯನ್ನು ಬಾಯಲ್ಲಿ ಹಿಡಿದಂತೆ ಉಚ್ಚಾರ ಮಾಡಬೇಕೆಂದಿದ್ದಾನೆ.

ವ್ಯಾಘ್ರೀ ಯಥಾ ಹರೆದ್ವತ್ಸಂ ದಂಷ್ಟ್ರಾಭ್ಯಾಂ ನ ಚ ಪೀಡಯೇತ್।
ಭೀತಾ ಪತನಭೇದಾಭ್ಯಾಂ ತದ್ವದ್ವರ್ಣನ್ಪ್ರಯೋಜಯೇತ್॥[55]

ವೇದ ಪಾಠದಲ್ಲಿ ಉಚ್ಚಾರಣೆ ಶುದ್ಧಿಗೆ ಹೆಚ್ಚಿನ ಮಹತ್ವವನ್ನು ಕೊಡಲಾಗಿದೆ. ಸ್ವರಗಳ ಉಚ್ಚಾರಣೆಯಿಂದ ಅರ್ಥ ಅನರ್ಥವಾಗಬಹುದು ವೃತ್ರಾಸುರನು ಇಂದ್ರನನ್ನು ನಾಶಮಾಡುವ ಸಲುವಾಗಿ ಯಜ್ಞವನ್ನು ಮಾಡುತ್ತಿದ್ದನು. **"ಇಂದ್ರಶತ್ರುರ್ವರ್ಧಸ್ವ"** ಎಂಬುದರ ಉಚ್ಚಾರಣೆ ಮಾಡಲು ಇಂದ್ರ ಶತ್ರು ಎಂದು ತತ್ಪುರುಷ ಸಮಾಸವನ್ನು ಉಚ್ಚಾರಣೆ ಮಾಡಬೇಕಿತ್ತು. ಇದರಲ್ಲಿ ಅಂತಿಮ ವರ್ಣ ಉದಾತ್ತವಾಗುತ್ತದೆ. ಆರಂಭದ ವರ್ಣವನ್ನು ಉದಾತ್ತ ಮಾಡಿದಾಗ ಬಹುವ್ರೀಹಿ ಸಮಾಸವಾಗುತ್ತದೆ. ಈ ಕಾರಣದಿಂದ ವೃತ್ರಾಸುರನಿಗೆ ಫಲವುಂಟಾಗಲಿಲ್ಲವೆಂದು ಪಾಣಿನಿಯ ಶಿಕ್ಷಾ ಗ್ರಂಥದಲ್ಲಿ ಹೀಗೆ ಹೇಳಲಾಗಿದೆ.

ಮಂತ್ರೋ ಹೀನಃ ಸ್ವರತೋ ವರ್ಣತೋ ವಾ ಮಿಥ್ಯಾ ಪ್ರಯುಕ್ತೋ ನ ತಮರ್ಥಮಾಹ।
ಸ ವಾಗ್ವಜ್ರೋ ಯಜಮಾನಂ ಹಿನಸ್ತಿ ಯಥೇಂದ್ರಶತ್ರುಃ ಸ್ವರತೋSಪರಾಧಾತ್॥[56]

ಪಾಠಕರ ವೇದ ಮಂತ್ರ ಉಚ್ಚಾರಣೆಯ ಬಗ್ಗೆ ಪಾಣಿನಿ ಆರು ಉತ್ತಮ ಗುಣ ಮತ್ತು ಆರು ದೋಷಗಳನ್ನು ಕುರಿತು ಹೇಳಿದ್ದಾನೆ.

ಗೀತೀ ಶೀಘ್ರೀ ಶಿರಃ ಕಂಪೀ ತಥಾ ಲಿಖಿತ ಪಾಠಕಃ
ಅನರ್ಥಜ್ಞೋಽಲ್ಪಕಂಠಶ್ಚ ಷಡೇತೇ ಪಾಠಕಾಧಮಾಃ॥

ಮಾಧುರ್ಯಮಕ್ಷರ ವ್ಯಕ್ತಿಃ ಪದಚ್ಛೇದಸ್ತು ಸುಸ್ವರಃ
ಧೈರ್ಯಂ ಲಯಸಮರ್ಥಂಚ ಷಡೇತೇ ಪಾಠಕಾ ಗುಣಾಃ॥[57]

2.9.2 ವ್ಯಾಕರಣ

ವೇದಾಂಗಗಳಲ್ಲಿ ವ್ಯಾಕರಣವು ಪ್ರಮುಖವಾದ ಅಂಗವಾಗಿದೆ. ಇದು ಪ್ರಕೃತಿ ಮತ್ತು ಪ್ರತ್ಯಯಗಳ ವಿಚಾರಗಳನ್ನು ವಿವೇಚಿಸಿ, ಪದಗಳ ಸ್ವರೂಪ ಮತ್ತು ಅರ್ಥವನ್ನು ನಿರ್ಣಯಿಸುತ್ತದೆ. **"ವ್ಯಾಕ್ರೀಯಂತೇ ಶಬ್ದಾಃ ಅನೇನ ಇತಿ ವ್ಯಾಕರಣಮ್"**[58] ಎಂದು ವ್ಯಾಕರಣ ಶಬ್ದದ ವ್ಯುತ್ಪತ್ತಿ. ಇದು ವೇದ ಪುರುಷನ ಮುಖ. **"ಮುಖಂ ವ್ಯಾಕರಣಂ ಸ್ಮೃತಮ್"**[59] ಎಂದು ಇದರ ಮಹತ್ವಯನ್ನು ಸಾರಿದೆ. ವ್ಯಾಕರಣದ ಜ್ಞಾನವಿಲ್ಲದೆ ವೇದವಾಙ್ಮಯದ ರಕ್ಷಣೆ ಆಗದು. ಆದುದರಿಂದ ಇದರ ತಿಳಿವಳಿಕೆ ಅವಶ್ಯಕವಾಗಿದೆ. ಮಂತ್ರಗಳಲ್ಲಿನ ಪದಸ್ವರೂಪ, ಅರ್ಥ, ಮಂತ್ರ ವಿನಿಯೋಗವನ್ನು ಸಾಧಿಸಲು ವ್ಯಾಕರಣ ಸಹಾಯ ಅವಶ್ಯಕ. ಯಜ್ಞದ ಸಂದರ್ಭದಲ್ಲಿ ಮಂತ್ರಗಳಲ್ಲಿ ಬರುವ ಶಬ್ದಗಳನ್ನು ಬೇರೆ-ಬೇರೆ ವಿಭಕ್ತಿ, ಲಿಂಗಗಳಲ್ಲಿ ಬಳಸಬೇಕಾಗುತ್ತದೆ. ಇದು ವ್ಯಾಕರಣ ಜ್ಞಾನ ಇದ್ದವರಿಗೆ ಮಾತ್ರ ಸಾಧ್ಯ.

ಋಕ್ಸಂಹಿತೆಯಲ್ಲಿ ವ್ಯಾಕರಣ ಶಾಸ್ತ್ರದ ಪ್ರಶಂಸೆ ಹೀಗಿದೆ-

ಚತ್ವಾರಿ ಶೃಂಗಾ ತ್ರಯೋ ಅಸ್ಯ ಪಾದಾ
ದ್ವೇ ಶೀರ್ಷೇ ಸಪ್ತಹಸ್ತಾಸೋ ಅಸ್ಯ।

ತ್ರಿಧಾ ಬದ್ಧೋ ವೃಷಭೋ ರೋರವೀತಿ
ಮಹೋದೇವೋ ಮರ್ತ್ಯಾ ಆವಿವೇಶ॥[60]

ಎಂಬ ಮಂತ್ರವು ವ್ಯಾಕರಣಕ್ಕೆ 'ವೃಷಭ'ನೆಂದು ಕರೆದಿದೆ. ಇದಕ್ಕೆ ನಾಮ, ಆಖ್ಯಾತ, ಉಪಸರ್ಗ ಮತ್ತು ನಿಪಾತಗಳೆಂಬ ನಾಲ್ಕು ಶೃಂಗಗಳಿವೆ. ಭೂತ, ವರ್ತಮಾನ ಮತ್ತು ಭವಿಷ್ಯವೆಂಬ ಮೂರು ಪಾದಗಳಿವೆ. ಸುಪ್ ಮತ್ತು ತಿಙ್ ಎಂಬೆರಡು ಶಿರಸ್ಸುಗಳಿವೆ. ಪ್ರಥಮಾದಿ ಸಪ್ತ ವಿಭಕ್ತಿಗಳೆಂಬ ಹಸ್ತಗಳಿವೆ. ಇದು ಉರಸ್ಸು, ಕಂಠ ಮತ್ತು ಶಿರಸ್ಸು ಎಂಬ ಮೂರು ಸ್ಥಾನಗಳಲ್ಲಿ ಬದ್ಧವಾಗಿದೆ.

ಇನ್ನೊಂದು ಮಂತ್ರದಲ್ಲಿ ವಿಶೇಷವಾಗಿ ಪ್ರಶಂಸೆ ಮಾಡಿರುವುದನ್ನು ಕಾಣುತ್ತೇವೆ-

ಉತ ತ್ವಃ ಪಶ್ಯನ್ ನ ದದರ್ಶ ವಾಚಂ
ಉತ ತ್ವಃ ಶೃಣ್ವನ್ ನ ಶೃಣೋತ್ಯೇನಾಮ್।

ಉತೋ ತ್ವಸ್ಮೈ ತನ್ವಂ ವಿಸ್ರಸೇ
ಜಾಯೇವ ಪತ್ಯೇ ಉಶತಿ ಸುವಾಸಾಃ॥[61]

ವ್ಯಾಕರಣವನ್ನರಿಯದವನು ವಾಣಿಯನ್ನು ನೋಡಿದರೂ ನೋಡಲಾರ, ಕೇಳಿದರೂ ಕೇಳುವುದಿಲ್ಲ, ಆದರೆ ವ್ಯಾಕರಣವನ್ನು ತಿಳಿದವನಿಗೆ ವಾಣಿಯು ಅದೇ ರೂಪದಲ್ಲಿ ಸಾಕ್ಷಾತ್ಕರಿಸುವಳು. ಋಗ್ವೇದದ ಈ ಮಂತ್ರಗಳು ವ್ಯಾಕರಣದ ಮಹತ್ವವನ್ನು ವಿವರಿಸಿವೆ.

2.9.3 ಛಂದಸ್ಸು

ಛಂದಸ್ಸು ಕೂಡಾ ವೇದಾಂಗಗಳಲ್ಲಿ ಪ್ರಮುಖ ಅಂಗವಾಗಿದೆ. ವೇದದ ಎಲ್ಲ ಮಂತ್ರಗಳು ಛಂದೋಬದ್ಧವಾಗಿವೆ. ಅಕ್ಷರ ಪರಿಮಾಣಕ್ಕೆ ಛಂದಸ್ಸೆಂದು ಕರೆಯಲಾಗಿದೆ. ಋಗ್ವೇದ ಸಂಹಿತೆಯನ್ನು ಅಧ್ಯಯನ ಮಾಡಬೇಕಾದರೆ, ಪ್ರತಿಯೊಂದು ಸೂಕ್ತದ ಋಷಿ, ಛಂದಸ್ಸು ಮತ್ತು ದೇವತೆಗಳನ್ನು ತಿಳಿದುಕೊಂಡೇ ಆಯಾ ಸೂಕ್ತವನ್ನು ಹೇಳಬೇಕೆಂಬ ಪರಂಪರೆ ಇದೆ. ಅವುಗಳ ತಿಳಿವಳಿಕೆ ಇಲ್ಲದೆ ಯಾಗ ಮಾಡುವುದಾಗಲಿ ಅಥವಾ ಮಾಡಿಸುವುದಾಗಲಿ ಮಾಡಿದರೆ ಅದೆಲ್ಲವೂ ವ್ಯರ್ಥವೆಂದು ಅನುಕ್ರಮಣಿಕೆಯಲ್ಲಿ ತಿಳಿಸಲಾಗಿದೆ. ಆದುದರಿಂದ ವೇದಮಂತ್ರಗಳನ್ನು ಉಚ್ಚರಿಸಲು ಛಂದಸ್ಸಿನ ಜ್ಞಾನ ಅನಿವಾರ್ಯವಾಗಿದೆ.

ಛಂದಸ್ಸನ್ನು ಕುರಿತು ಪಾಣಿನಿ **"ಛಂದಃ ಪಾದೌತು ವೇದಸ್ಯ:"**[62] ವೇದ ಪುರುಷನ ಪಾದಗಳೇ ಛಂದಸ್ಸು ಎಂದಿದ್ದಾನೆ. ನಿರುಕ್ತದಲ್ಲಿ ಯಾಸ್ಕನು **"ಛಂದಾಂಸಿ ಛಾದನಾತ್"**[63] ಎಂಬ ಶಬ್ದ ವ್ಯುತ್ಪತ್ತಿಯನ್ನು ವಿವರಿಸಿದ್ದಾನೆ. **"ಯದಕ್ಷರ ಪರಿಮಾಣಂ ತಚ್ಛಂದಃ"**[64] ಎಂದು ಕಾತ್ಯಾಯನನು ತನ್ನ ಸರ್ವಾನುಕ್ರಮಣಿಕೆಯಲ್ಲಿ ಹೇಳಿರುತ್ತಾನೆ. ಅಕ್ಷರಗಳ ವಿನಃ ಗಣನೆಗೆ ಅನುಸರಿಸಿ ಛಂದಸ್ಸನ್ನು ಹೇಳಲಾಗುತ್ತದೆ. ವಿನಃ "ಗುರು–ಲಘುಗಳ ನಿಯಮಕ್ಕಲ್ಲ" ಲಘು–ಗುರುಗಳ ನಿಯಮವು ಕಟ್ಟು–ನಿಟ್ಟಾಗಿ ಬೆಳೆದು ಬಂದದ್ದು ಲೌಕಿಕ ಸಂಸ್ಕೃತದಲ್ಲಿ – ಲೌಕಿಕ ಸಂಸ್ಕೃತದಲ್ಲಿ ಪದ್ಯಮಾತ್ರಕ್ಕೆ ಛಂದಸ್ಸು ಹೇಳಿದರೆ. ವೈದಿಕ ಸಂಸ್ಕೃತ ಸಾಹಿತ್ಯದಲ್ಲಿ ಗದ್ಯ–ಪದ್ಯಗಳೆರಡಕ್ಕೂ ಹೇಳಿದೆ. ಆದುದರಿಂದಲೇ ವೈದಿಕ ಸಾಹಿತ್ಯವನ್ನು ಛಂದಸ್ಸು ಎಂದು ಕರೆದಿರುವುದನ್ನು ಕಾಣುತ್ತೇವೆ. ಅಲ್ಲದೆ ವೈದಿಕ ಸಂಹಿತೆಗಳನ್ನು **"ಛಂದೋಮಯೀ ವಾಕ್"**[65] ಎಂದು ಕರೆದಿದ್ದಾರೆ.

ಛಂದಸ್ ಶಾಸ್ತ್ರವನ್ನು ಕುರಿತು ಪಿಂಗಳಾಚಾರ್ಯನು, "ಛಂದಸ್ಸೂತ್ರ" ಎಂಬ ಗ್ರಂಥವನ್ನು ರಚಿಸಿದ್ದಾನೆ. ಪ್ರಧಾನವಾದ ಛಂದಸ್ಸುಗಳು ಗಾಯತ್ರಿ, ಉಷ್ಣಿಕ್, ಅನುಷ್ಟುಪ್, ಬೃಹತಿ, ಪಂಕ್ತಿ, ತ್ರಿಷ್ಟುಪ್, ಜಗತಿ ಮೊದಲಾದವುಗಳು. ಇವುಗಳೆಲ್ಲ ಗುರು–ಲಘು ಗಣನೆಗಿಂತ ಅಕ್ಷರ ಗಣನೆಯ ಮೇಲೆ ಆಧರಿತಗೊಂಡಿವೆ. ಉದಾಹರಣೆಗೆ–ಗಾಯತ್ರಿ

ಎಂಟು ಅಕ್ಷರದ ಮೂರು ಚರಣಗಳು, ಉಷ್ಣಿಕ್ ಎಂಟು ಅಕ್ಷರ, 2 ಚರಣ, 12 ಅಕ್ಷರದ ಒಂದು ಚರಣ, ಅನುಷ್ಟುಪ್ 8 ಅಕ್ಷರ, 4 ಚರಣ, ಪಂಕ್ತಿ 8 ಅಕ್ಷರ 5 ಚರಣ, ತ್ರಿಷ್ಟುಪ್ 11 ಅಕ್ಷರ, 4 ಚರಣ, ಮತ್ತು ಜಗತೀ 11 ಅಕ್ಷರ, ನಾಲ್ಕು ಚರಣ ಇತ್ಯಾದಿ.

2.9.4 ನಿರುಕ್ತ

'ನಿರುಕ್ತ'ವು 'ನಿಘಂಟು'ವಿನ ಮೇಲೆ ಬರೆದ 'ಟೀಕಾ'ವಾಗಿದೆ. ಇದು ವೈದಿಕ ಪದಗಳ ನಿರುಕ್ತಿ (ವ್ಯುತ್ಪತ್ತಿ)ಯನ್ನು ತಿಳಿಸುತ್ತದೆ. ಇದು ವೇದಾಂಗಗಳಲ್ಲೆಲ್ಲಾ ಅತೀ ಪ್ರಮುಖವಾಗಿದೆ. ವೇದ ಮಂತ್ರಗಳ ಅರ್ಥಾನುಸಂಧಾನವೇ ಇದರ ಗುರಿಯಾಗಿದೆ. ವೈದಿಕ ಕ್ಲಿಷ್ಟ ಶಬ್ದಗಳನ್ನು ಸಂಗ್ರಹಿಸಿ, ಅವುಗಳ ಅರ್ಥ ವಿವರಣೆಯನ್ನು ಇಲ್ಲಿ ಮಾಡಲಾಗಿದೆ. ಈ ಸಂಗ್ರಹಕ್ಕೆ ನಿಘಂಟು ಎಂದು ಕರೆಯಲಾಗಿದೆ. ನಿಘಂಟು ಐದು ಅಧ್ಯಾಯಗಳನ್ನು ಒಳಗೊಂಡಿದ್ದು ಮೊದಲ ಮೂರು ಅಧ್ಯಾಯಗಳಿಗೆ ನೈಘಂಟುಕ ಕಾಂಡವೆಂದೂ, ನಾಲ್ಕನೆಯ ಅಧ್ಯಾಯಕ್ಕೆ ನೈಗಮ ಕಾಂಡವೆಂದೂ, ಐದನೆಯ ಅಧ್ಯಾಯಕ್ಕೆ ದೈವತಕಾಂಡ ಎಂದು ಕರೆಯುತ್ತಾರೆ.

ವರ್ಣಾಗಮೋ ವರ್ಣವಿಪರ್ಯಯಶ್ಚ ದ್ವೌ ಚಾಪರೌ ವರ್ಣವಿಕಾರನಾಶೌ।
ಧಾತೋಸ್ತದರ್ಥಾತಿಶಯೇನ ಯೋಗಃ ಯದುಚ್ಚತೇ ಪಂಚವಿಧಂ ನಿರುಕ್ತಮ್॥[66]

ವರ್ಣಾಗಮ, ವರ್ಣವಿಪರ್ಯಯ ಎರಡು ಹಾಗೂ ಬೇರೆ ವರ್ಣಗಳ ವಿಕಾರ ವರ್ಣನಾಶ ಮತ್ತು ಧಾತುವಿನ ಅರ್ಥಗಳ ಜೊತೆಗೆ ನಿರುಕ್ತ ಯೋಗವಿದೆ.

ನಿರುಕ್ತವು ಶಬ್ದಗಳ ವ್ಯುತ್ಪತ್ತಿ ಬಗ್ಗೆ ತಿಳಿಸಿಕೊಡುವ ಶಾಸ್ತ್ರವಾಗಿದೆ. ಶಬ್ದಗಳ ಮೂಲ ಅರ್ಥವನ್ನು ತಿಳಿಸಿಕೊಡುವುದರ ಜೊತೆಗೆ ಸೂಕ್ಷ್ಮ ಜ್ಞಾನವನ್ನುಂಟು ಮಾಡುತ್ತದೆ. ವೇದಾಂಗಗಳೆಲ್ಲವು ಬಹಿರಂಗ ಜ್ಞಾನವನ್ನು ತಿಳಿಸಿಕೊಟ್ಟರೆ. ಇದು ಮಾತ್ರ ಅಂತರಂಗದ ಜ್ಞಾನವನ್ನು ತಿಳಿಸುತ್ತದೆ. ಇದು ಅಮರಕೋಶ ಶೈಲಿಯಲ್ಲಿ ರಚಿಸಲ್ಪಟ್ಟ ನಿಘಂಟು. ಹಾಗಾಗಿ ನಿರುಕ್ತವು ವೈದಿಕ ಕೋಶ ಭಾಷ್ಯವಾಗಿದೆ.

2.9.5 ಜ್ಯೋತಿಷ

ವೇದಗಳು ಯಜ್ಞ–ಯಾಗಾದಿಗಳಿಗೆ ಹೆಚ್ಚಿನ ಪ್ರಾಮುಖ್ಯವನ್ನು ಕೊಡುತ್ತವೆ. ಈ ಯಜ್ಞ–ಯಾಗಾದಿಗಳನ್ನು ಪ್ರಾರಂಭಿಸಲು ಜ್ಯೋತಿಷದ ಅವಶ್ಯವಿದೆ. ಕಾಲ, ಋತು, ನಕ್ಷತ್ರ ಮೊದಲಾದವುಗಳ ಜ್ಞಾನ ಅವಶ್ಯಕವಿದೆ. ಏಕೆಂದರೆ ವೈದಿಕ ಸಾಹಿತ್ಯದಲ್ಲಿ ಸಂವತ್ಸರ ಕಾಲ, ನಕ್ಷತ್ರ ಮೊದಲಾದವುಗಳ ಉಲ್ಲೇಖವನ್ನು ಕಾಣುತ್ತೇವೆ. ಅಲ್ಲದೆ ಸಂವತ್ಸರದ ಬೇರೆ–ಬೇರೆ ಋತುಗಳಲ್ಲಿ ಬೇರೆ–ಬೇರೆ ವರ್ಣದವರು ವಿಶಿಷ್ಟವಾದ ಕರ್ಮಗಳನ್ನು ಮಾಡಬೇಕೆಂದು ತೈತ್ತರೇಯ ಬ್ರಾಹ್ಮಣವು ವಿಧಿಸುತ್ತದೆ.– **"ಕೃತ್ತಿಕಾಸ್ವಗ್ನಿಮಾದಧೀತ। ವಸಂತೇ ಬ್ರಹ್ಮಣ ಅಗ್ನಿ ಮಾದಧೀತ, ಗ್ರೀಷ್ಮೇ ರಾಜನ್ಯಃ ಆದಧೀತಃ ಶರಧಿ ವೈಶ್ಯಃ ಆದಧೀತ।"**[67] ಕೃತಿಕಾ ನಕ್ಷತ್ರದಲ್ಲಿ

ಅಗ್ನಿಯನ್ನು ಸ್ಥಾಪಿಸು ವಸಂತ ಋತುವಿನಲ್ಲಿ ಬ್ರಾಹ್ಮಣ, ಗ್ರೀಷ್ಮದಲ್ಲಿ ಕ್ಷತ್ರೀಯ. ಶರದ್ ಋತುವಿನಲ್ಲಿ ವೈಶ್ಯರು ಅಗ್ನಿಯನ್ನು ಸ್ಥಾಪಿಸಬೇಕು. ದೀಕ್ಷಾ ವಿಧಾನವನ್ನು **"ಏಕಾಷ್ಟಕಾಯಾಂ ದೀಕ್ಷೇರನ್ ಫಲ್ಗುನಿ ಪೂರ್ಣಮಾಸೇ ದೀಕ್ಷೇರನ್"**[68] ಎಂದು ತಿಳಿಸಿದೆ. ನಕ್ಷತ್ರ, ತಿಥಿ, ಪಕ್ಷ, ಮಾಸ, ಋತು, ಹಾಗೆಯೇ ಸಂವತ್ಸರಗಳ ಉಲ್ಲೇಖಮಾಡಿ ಆಯಾ ಕಾಲದಲ್ಲಿ ಯಾಗಗಳನ್ನು ಮಾಡಬೇಕೆಂದು ವೇದದಲ್ಲಿ ವಿಧಿಸಿದೆ.

ವೇದಾ ಹಿ ಯಜ್ಞಾರ್ಥಮಭಿಪ್ರವೃತ್ತಾಃ
ಕಾಲಾನಿ ಪೂರ್ವಾ ವಿಹಿತಾಶ್ಚ ಯಜ್ಞಾಃ।
ತಸ್ಮಾದಿದಂ ಕಾಲವಿಧಾನ ಶಾಸ್ತ್ರಂ
ಯೋ ಜ್ಯೋತಿಷಂ ವೇದ ಸ ವೇದ ಯಜ್ಞಮ್ ॥[69]

ಆದುದರಿಂದ ಯಾಗಾದಿಕರಣದ ಕಾಲವನ್ನು ಅರಿಯಲು ಜ್ಯೋತಿಷ್ಯ ಶಾಸ್ತ್ರದ ಅವಶ್ಯಕತೆ ಇರುವುದರಿಂದ ಇದನ್ನು ವೇದಾಂಗವೆಂದು ಗುರ್ತಿಸಲಾಗಿದೆ. ಯಾರಿಗೆ ಜ್ಯೋತಿಷದ ಜ್ಞಾನವಿರುತ್ತದಯೋ ಅವರಿಗೆ ಯಜ್ಞದ ಜ್ಞಾನವಿರುತ್ತದೆ ಎಂದು ವೇದಾಂಗ ಜ್ಯೋತಿಷವು ಹೇಳಿದೆ.

ಜ್ಯೋತಿಷವನ್ನು ವೇದ ಪುರುಷನ ಚಕ್ಷು **"ಜ್ಯೋತಿಷಾಮಯನಂ ಚಕ್ಷುಃ"**[70] ಎಂದು ವರ್ಣಿಸಲಾಗಿದೆ. ಜ್ಯೋತಿಷ ಶಾಸ್ತ್ರದ ಕರ್ತೃ 'ಲಗದ' ಎಂಬುವನು. ಇವನು ಯಾರು, ಯಾವ ಕಾಲದವನು ಎಂಬುದು ತಿಳಿದಿಲ್ಲ. ಆದರೆ ಇವನ ಹೆಸರು **"ಆರ್ಚ ಜ್ಯೋತಿಷ್ಯ"** ದಿಂದ ತಿಳಿದು ಬರುತ್ತದೆ.

ಪ್ರಣಮ್ಯ ಶಿರಸಾ ಕಾಲಮಭಿವಾದ್ಯ ಸರಸ್ವತೀಮ್।
ಕಾಲಜ್ಞಾನಂ ಪ್ರವಕ್ಷ್ಯಾಮಿ ಲಗದಸ್ಯ ಮಹಾತ್ಮನಃ॥[71]

ಜ್ಯೋತಿಷದ ಮಹತ್ವವನ್ನು ಕುರಿತು ವೇದಾಂಗ ಜ್ಯೋತಿಷದಲ್ಲಿ

ಯಥಾ ಶಿಕಾಮಯೂರಾಣಾಂ ನಾಗಾನಾಂ ಮಣಯೋ ಯಥಾ
ತದ್ವದ್ ವೇದಾಂಗ ಶಾಸ್ತ್ರಾಣಾಂ ಗಣಿತಂ ಮೂರ್ಧಾನಿ ಸ್ಥಿತಮ್॥[72]

ನವಿಲಿಗೆ ಶಿಖೆಯು, ನಾಗರಾಜನಿಗೆ ಮಣಿ ಶೋಭಿಸುವಂತೆ ವೇದಾಂಗ ಶಾಸ್ತ್ರಗಳಲ್ಲಿ ಜ್ಯೋತಿಷವು ಶೋಭಿಸುತ್ತದೆ.

2.9.6 ಕಲ್ಪ

ವೇದ ವಿಹಿತವಾದ ಕರ್ಮಗಳನ್ನು ಕ್ರಮಪೂರ್ವಕವಾಗಿ, ವ್ಯವಸ್ಥಿತವಾಗಿ ವಿವರಿಸುವ ಶಾಸ್ತ್ರಕ್ಕೆ 'ಕಲ್ಪ' ಎನ್ನುವರು. **"ಕಲ್ಪೋ ವೇದವಿಹಿತಾನಾಂ ಕರ್ಮಾಣಾಂ ಆನುಪೂರ್ವೇಣ ಕಲ್ಪನಾಶಾಸ್ತ್ರಮ್।"**[73] ಎಂದು ಇದರ ಮಹತ್ವವನ್ನು ಸಾರುತ್ತದೆ. ವೈದಿಕ ಯಜ್ಞಾನುಷ್ಠಾನವನ್ನು ವ್ಯಾಪಕವನ್ನಾಗಿ ಬೆಳೆದಿರುವುದನ್ನು ಸಂಕ್ಷಿಪ್ತ ಸೂತ್ರ ಬದ್ಧವಾಗಿ

ಹೇಳಲು ಅವಶ್ಯಕತೆ ಇರುವುದರಿಂದ ಕಲ್ಪ ಸೂತ್ರಗಳು ಹುಟ್ಟಿಕೊಂಡವು "ಕಲ್ಪ" ಶಬ್ದ ವ್ಯುತ್ಪತ್ತಿ **"ಕಲ್ಪ್ಯಂತೆ ಸಮರ್ಥ್ಯಂತೆ ಯಜ್ಞಯಾಗಾದಿ ಪ್ರಯೋಗಾಃ ಯತ್ರ ಇತಿ ಕಲ್ಪಃ"**[74] ಅಂದರೆ ಯಜ್ಞದ ಪ್ರಯೋಗವು ಸಾಮರ್ಥ್ಯವನ್ನು ಹೊಂದಲು ಬಳಸುವ ವೇದಾಂಗವನ್ನು ಕಲ್ಪವೆನ್ನುವರು.

ಕಲ್ಪ ಸೂತ್ರವು ಎರಡು ರೀತಿಯ ವಿಭಜನೆಯನ್ನು ಹೊಂದಿದೆ. 1.ಶ್ರೌತಸೂತ್ರ ಮತ್ತು 2.ಸ್ಮಾರ್ತಸೂತ್ರ ಎಂದು, ಶ್ರೌತಸೂತ್ರವು ವೇದಕ್ಕೆ ಸಂಬಂಧಿಸಿದ ಯಜ್ಞ ಯಾಗಾದಿಗಳ ಅರ್ಥವನ್ನು ತಿಳಿಸಿದೆ. ಈ ಶ್ರೌತಸೂತ್ರದಲ್ಲಿ ಮೂರು ಪ್ರಕಾರದ ಅಗ್ನಿಗಳಾದ ಆಹವನೀಯ, ಗಾರ್ಹಪತ್ಯ ಮತ್ತು ದಕ್ಷಿಣಾಗ್ನಿಗಳು. ಆಧಾನ–ದರ್ಶ–ಪೂರ್ಣಮಾಸ ಮೊದಲಾದವುಗಳ ವರ್ಣನೆ ಬಂದಿದೆ.

ಸ್ಮಾರ್ತ ಸೂತ್ರವು ಗೃಹ್ಯಸೂತ್ರ ಮತ್ತು ಧರ್ಮಸೂತ್ರವೆಂಬ ಎರಡು ವಿಧಗಳನ್ನು ಹೊಂದಿದೆ. ಗೃಹ್ಯಸೂತ್ರವು ಸಾಮಾಜಿಕ ವ್ಯವಸ್ಥೆಯನ್ನು ಒಳಗೊಂಡ ಶಾಸ್ತ್ರವಾಗಿದೆ. ಹಿಂದೂ ಸಮಾಜದ ಮಹತ್ವಪೂರ್ಣ ಆಚಾರ–ವಿಚಾರವನ್ನು ಇದು ಒಳಗೊಂಡಿದೆ. ವಿವಾಹ ಉಪನಯನಾದಿ ಷೋಡಷ ಸಂಸ್ಕಾರಗಳನ್ನು ತಿಳಿಸುತ್ತದೆ.

ಧರ್ಮಸೂತ್ರದಲ್ಲಿ ವರ್ಣಾಶ್ರಮಗಳ ಕರ್ತವ್ಯವನ್ನು ನಿರ್ದೇಶಿಸಲಾಗಿದೆ. ಇದು ಹಿಂದು ಧರ್ಮದ ಕಾನೂನು ಶಾಸ್ತ್ರವಾಗಿದೆ. ಮನು ಪರಾಶರ, ಯಾಜ್ಞವಲ್ಕ್ಯ ಮೊದಲಾದ ಋಷಿಗಳು ಇದನ್ನು ಆಧಾರವಾಗಿಟ್ಟುಕೊಂಡು ಗ್ರಂಥಗಳನ್ನು ರಚಿಸಿದ್ದಾರೆ.

ಪ್ರತಿಯೊಂದು ವೇದಕ್ಕೆ ಸಂಬಂಧಿಸಿದಂತೆ ಕಲ್ಪ ಸೂತ್ರಗಳಿವೆ. ಉದಾಹರಣೆಗೆ ಋಗ್ವೇದದಲ್ಲಿ ಅಶ್ವಲಾಯನ, ಶಾಂಖಾಯನಗಳು, ಶುಕ್ಲಯಜುರ್ವೇದದಲ್ಲಿ ಕಾತ್ಯಾಯನ, ಪರಾಶರಗಳು, ಕೃಷಯಜುರ್ವೇದದಲ್ಲಿ ಬೋಧಾಯನ, ಆಪಸ್ತಂಭ, ಭಾರದ್ವಾಜ, ಸಾಮವೇದದಲ್ಲಿ ಲಾಟ್ಯಾಯನ, ದ್ರಾಪಾಯಣ, ಜೈಮಿನಿಯ ಗೋಭಿಲ ಮತ್ತು ಅಥರ್ವವೇದದಲ್ಲಿ ವೈತಾನ, ಕೌಶಿಕಗಳೆಂಬ ಕಲ್ಪ ಸೂತ್ರಗಳಿವೆ.

2.10. ಬ್ರಾಹ್ಮಣಗಳು

"ಮಂತ್ರ ಬ್ರಾಹ್ಮಣಯೋರ್ವೇದನಾಮಧೇಯಮ್"[75] ಎಂದು ಆಪಸ್ತಂಭರು ಹೇಳಿರುವಂತೆ ಸಂಹಿತೆಗಳ ಜೊತೆಗೆ ಬ್ರಾಹ್ಮಣಗಳಲ್ಲಿ ಸೇರಿ ವೇದ ಶಬ್ದ ವಾಚ್ಯವಾಗಿದೆ. ಸಾಯಣಾಚಾರ್ಯರು – ಪರಂಪರಾಯುಕ್ತವಾದ ಮಂತ್ರವಲ್ಲದ್ದು ಬ್ರಾಹ್ಮಣ, ಹಾಗೂ ಬ್ರಾಹ್ಮಣವಲ್ಲದ್ದು ಮಂತ್ರವೆಂದು ಅಭಿಪ್ರಾಯ ಪಟ್ಟಿದ್ದಾರೆ. 'ಬ್ರಹ್ಮ' ಎಂಬ ಶಬ್ದಕ್ಕೆ ವೇದ, ಮಂತ್ರ, ಯಜ್ಞ ಮೊದಲಾದ ಅರ್ಥಗಳಿವೆ. ವೈದಿಕ ಮಂತ್ರಗಳ ವ್ಯಾಖ್ಯಾನ ಮಾಡುವುದರಿಂದ ಬ್ರಾಹ್ಮಣ ಎಂದೂ ಕರೆಯಲಾಗಿದೆ. **"ಬ್ರಹ್ಮಣಂ ವೇದಾನಾಮಿಮಾನ ವ್ಯಾಖ್ಯಾನಾನಿ ಬ್ರಹ್ಮಣಾನಿ"**[76] ಅಂದರೆ ಮಂತ್ರ ರೂಪವಾದ ಬ್ರಹ್ಮಕ್ಕೆ (ವೇದ) ವ್ಯಾಖ್ಯಾನ

ರೂಪಗಳೇ ಬ್ರಾಹ್ಮಣಗಳು ಎಂದರ್ಥ. ಬ್ರಾಹ್ಮಣ ಶಬ್ದವು ಗ್ರಂಥವಾಚಿಯಾದುದರಿಂದ ಇದನ್ನು ನಪುಂಸಕ ಲಿಂಗದಲ್ಲಿಯೇ ಹೇಳಲಾಗಿದೆ. "ಮೇದಿನೀಕೋಶವು **"ಬ್ರಾಹ್ಮಣಂ ಬ್ರಹ್ಮ ಸಂಘಾತೇ ವೇದ ಭಾಗೇ ನಪುಂಸಕಮ್"** ಎಂದಿದೆ. ಇದೇ ಅರ್ಥವನ್ನು ಪಾಣಿನಿ ಮಹರ್ಷಿಯು ತಮ್ಮ ಅಷ್ಟಾಧ್ಯಾಯಿಯಲ್ಲಿ ತಿಳಿಸಿದ್ದಾರೆ. ಬ್ರಾಹ್ಮಣ ಗ್ರಂಥಗಳಲ್ಲಿ ಬರುವ **"ಇತಿ ಬ್ರಹ್ಮಣಂ, ತಸ್ಯೋಕ್ತಂ ಬ್ರಾಹ್ಮಣಮ್"** ಎಂಬ ವಾಕ್ಯಗಳಲ್ಲಿ 'ಬ್ರಾಹ್ಮಣ'ಪದವು ನಪುಂಸಕ ಲಿಂಗದಲ್ಲಿ ಪ್ರಯೋಗವಾಗಿರುವುದನ್ನು ಕಾಣುತ್ತೇವೆ. ಅಲ್ಲದೆ ನಿರುಕ್ತದಲ್ಲಿ ಯಾಸ್ಕಚಾರ್ಯರು ಬ್ರಾಹ್ಮಣ ಶಬ್ದವನ್ನು ನಪುಂಸಕ ಲಿಂಗದಲ್ಲಿಯೇ ಉಪಯೋಗಿಸಿರುತ್ತಾರೆ."[77]

ಭಟ್ಟಭಾಸ್ಕರರು **"ದ್ವಿವಿಧಂ ಬ್ರಾಹ್ಮಣಂ ಕರ್ಮಬ್ರಾಹ್ಮಣಂ ಕಲ್ಪಬ್ರಾಹ್ಮಣಂ ಚೇತಿ।"**[78] ಎಂದು ಬ್ರಾಹ್ಮಣಗಳನ್ನು ಕರ್ಮ ಬ್ರಾಹ್ಮಣ ಮತ್ತು ಕಲ್ಪ ಬ್ರಾಹ್ಮಣಗಳೆಂದು ಎರಡು ವಿಧವಾಗಿ ವಿಂಗಡಿಸಿದ್ದಾರೆ. ಕರ್ಮ ವಿಧಾನಗಳನ್ನು ಮಂತ್ರವಿನಿಯೋಗವನ್ನು ತಿಳಿಸುವ ಗ್ರಂಥಗಳಿಗೆ ಕರ್ಮ ಬ್ರಾಹ್ಮಣವೆಂದು, ಮಂತ್ರಪಾಠ ಮಾತ್ರ ತಿಳಿಸುವ ಗ್ರಂಥಗಳಿಗೆ ಕಲ್ಪ ಬ್ರಾಹ್ಮಣಗಳೆಂದು ಕರೆಯುತ್ತಾರೆ. ಇವುಗಳ ಗದ್ಯರೂಪದಲ್ಲಿವೆ. ಇವುಗಳಲ್ಲಿ ಹಲವು ಆಖ್ಯಾನಗಳಿದ್ದು ಅಲ್ಲಲ್ಲಿ ಅನೇಕ ಗಾಥೆಗಳಿವೆ. ಶಬರ ಭಾಷ್ಯವು ಬ್ರಾಹ್ಮಣಗಳ ವಿಧಿಯನ್ನು ಹತ್ತು ವಿಧಗಳನ್ನಾಗಿ ವಿಂಗಡಿಸಿ ತಿಳಿಸಿದೆ–

ಹೇತುರ್ನಿರ್ವಚನಂ ನಿಂದಾ ಪ್ರಶಂಸಾ ಸಂಶಯೋ ವಿಧಿಃ।
ಪರಕ್ರಿಯಾ ಪುರಾಕಲ್ಪೋ ವ್ಯವಧಾರಣ ಕಲ್ಪನಾ।
ಉಪಮಾನಂ ದಶೈತೇ ತು ವಿಧಯೋ ಬ್ರಹ್ಮಣಸ್ಯ ತು॥[79]

ಹೇತು ಎಂದರೆ ಕಾರಣ, ನಿರ್ವಚನ ಎಂದರೆ ಸಮರ್ಥನೆ, ನಿಂದಾ ಎಂದರೆ ದೋಷಾರೋಪಣೆ, ಪ್ರಶಂಸಾ ಎಂದರೆ ಸ್ತುತಿ, ಸಂಶಯ ಎಂದರೆ ಸಂದೇಹ, ವಿಧಿ ಎಂದರೆ ಆಜ್ಞೆ, ಪರಕ್ರಿಯಾ ಎಂದರೆ ಇನ್ನೊಂದು ವಿಷಯವನ್ನು ಹೇಳುವುದು, ಪುರಾಕಲ್ಪ ಎಂದರೆ ಹಿಂದಿನ ಇತಿಹಾಸ, ವ್ಯವಧಾರಣ ಕಲ್ಪನಾ ಎಂದರೆ ಹೀಗೆ ಮಾಡಿದರೆ ಈ ಫಲ ಎಂದು ವಿಷಯದ ನಿರೂಪಣೆ. ಬ್ರಾಹ್ಮಣಗಳು ಮುಖ್ಯವಾಗಿ 'ವಿಧಿ'ಯನ್ನು ತಿಳಿಸುತ್ತದೆ. **"ವಿಧಾಯಕಂ ವಾಕ್ಯಂ ಬ್ರಾಹ್ಮಣಮ್"**[80] ಎಂಬ ಉಕ್ತಿಯು ವಿಧಿ–ನಿಯಮಗಳನ್ನು ತಿಳಿಸುವ ಗ್ರಂಥಗಳೇ 'ಬ್ರಾಹ್ಮಣ' ಎಂದು ತಿಳಿಸುತ್ತದೆ. ಯಜ್ಞ–ಯಾಗಾದಿಗಳನ್ನು ಯಾವಾಗ ಮಾಡಬೇಕು? ಹೇಗೆ ಮಾಡಬೇಕು? ಯಾವ ಸಾಧನಗಳಿರಬೇಕು? ಅದಕ್ಕೆ ಬೇಕಾದ ಅವಶ್ಯಕತೆಗಳೇನು? ಯಜ್ಞಕ್ಕೆ ಅಧಿಕಾರಿಗಳು ಯಾರು? ಯಾವ ಯಜ್ಞಗಳಿಗೆ ಯಾವ ತಂತ್ರಗಳನ್ನು ಉಪಯೋಗಿಸಬೇಕು? ಈ ಮೊದಲಾದ ಹತ್ತು–ಹಲವಾರು ವಿಷಯಗಳನ್ನು ಬ್ರಾಹ್ಮಣ ಗ್ರಂಥಗಳು ಬೋಧಿಸುತ್ತವೆ. ಬ್ರಾಹ್ಮಣ ಗ್ರಂಥಗಳು ಯಜ್ಞದ ಪ್ರಕ್ರಿಯೆಯ ಅರಿವನ್ನು ವಿಧಿಪೂರ್ವಕವಾಗಿ ಬೋಧಿಸಿ ಅದಕ್ಕೆ ಒದಗಬಹುದಾದ

ವಿರೋಧವನ್ನು ಪರಿಹರಿಸುತ್ತವೆ. ಮಂತ್ರ, ಕರ್ಮ ಮತ್ತು ವಿನಿಯೋಗಗಳ ವ್ಯಾಖ್ಯಾನವನ್ನು ಬ್ರಾಹ್ಮಣ ಗ್ರಂಥಗಳು ಮಾಡುತ್ತವೆ. ಆದುದರಿಂದ ಬ್ರಾಹ್ಮಣಗಳು ಸಂಹಿತೆಗಳಿಗಿಂತ ಸ್ವರೂಪದಲ್ಲಿಯೂ, ವಿಷಯ ವಿವೇಚನೆಯಲ್ಲಿಯೂ ವಿಶಿಷ್ಟ ಸ್ಥಾನ ಪಡೆದಿವೆ.

ಉಪಲಬ್ಧವಿರುವ ಬ್ರಾಹ್ಮಣಗಳು ಆಯಾ ವೇದಕ್ಕೆ ಸಂಬಂಧಿಸಿದಂತೆ ಹೀಗಿವೆ

ಋಗ್ವೇದಕ್ಕೆ ಸೇರಿದ ಬ್ರಾಹ್ಮಣಗಳು	1. ಐತರೇಯ ಬ್ರಾಹ್ಮಣ, 2. ಕೌಶೀತಕೀ ಬ್ರಾಹ್ಮಣ
ಯಜುರ್ವೇದಕ್ಕೆ ಸೇರಿದ ಬ್ರಾಹ್ಮಣಗಳು–	1. ತೈತ್ತಿರೀಯ ಬ್ರಾಹ್ಮಣ 2. ಶತಪಥ ಬ್ರಾಹ್ಮಣ
ಸಾಮವೇದಕ್ಕೆ ಸೇರಿದ ಬ್ರಾಹ್ಮಣಗಳು	1. ತಾಂಡ್ಯ ಬ್ರಾಹ್ಮಣ, 2. ಷಡ್ವಿಂಶ ಬ್ರಾಹ್ಮಣ 3. ಸಾಮ ವಿಧಾನ ಬ್ರಾಹ್ಮಣ 4. ಆರ್ಷೇಯ ಬ್ರಾಹ್ಮಣ 5. ದೈವತ ಬ್ರಾಹ್ಮಣ 6. ಉಪನಿಷದ್ ಬ್ರಾಹ್ಮಣ 7. ಸಂಹಿತೋಪನಿಷದ್ ಬ್ರಾಹ್ಮಣ 8. ವಂಶ ಬ್ರಾಹ್ಮಣ 9. ಜೈಮಿನೀಯ ಬ್ರಾಹ್ಮಣ.
ಅಥರ್ವವೇದಕ್ಕೆ ಸೇರಿದ ಬ್ರಾಹ್ಮಣ	1. ಗೋಪಥ ಬ್ರಾಹ್ಮಣ

2.11 ಆರಣ್ಯಕಗಳು

ಆಧ್ಯಾತ್ಮಿಕ ಜ್ಞಾನವನ್ನು ಶ್ರವಣ, ಮನನ ಮತ್ತು ನಿಧಿಧ್ಯಾಸನ ಮಾಡುವುದಕ್ಕೋಸ್ಕರ ನಗರಗಳ ಗೊಂದಲದಿಂದ ದೂರದಲ್ಲಿದ್ದು ಶಾಸ್ತ್ರಗಳು ವಿಧಿಸಿದ ರೀತಿಯ ಆಚಾರವುಳ್ಳವರಾಗಿ ಅರಣ್ಯ ಅಥವಾ ಏಕಾಂತದಲ್ಲಿದ್ದು ಅಧ್ಯಯನ ಮಾಡುವ ಗ್ರಂಥಗಳಿಗೆ ಆರಣ್ಯಕಗಳೆನ್ನುವರು. ಆಚಾರ್ಯ ಸಾಯಣರು ಐತರೇಯ ಬ್ರಾಹ್ಮಣದ ಭಾಷ್ಯದಲ್ಲಿ ಆರಣ್ಯಕವನ್ನು ಕುರಿತು **"ಅರಣ್ಯ ಏವ ಪಠ್ಯತ್ವಾದಾರಣ್ಯಕಮಿತಿರ್ಯತೇ"**[81] ಅಂದರೆ ಆಧ್ಯಾತ್ಮಿಕ ವಿದ್ಯೆಯ ಅಧ್ಯಯನವನ್ನು ಅರಣ್ಯದಲ್ಲಿ ಮಾಡುವುದರಿಂದ 'ಆರಣ್ಯಕ' ಎಂದು ಸ್ಪಷ್ಟವಾಗಿ ಕರೆದಿದ್ದಾರೆ. ಇವರೇ ತೈತ್ತಿರೀಯಾರಣ್ಯಕ ಭಾಷ್ಯೆಯಲ್ಲಿಯೂ ಸಹ ಹೀಗೆ ಹೇಳಿದ್ದಾರೆ–

ಅರಣ್ಯಾಧ್ಯಯನಾದೇತತ್ ಆರಣ್ಯಕಮಿತಿರ್ಯತೇ
ಅರಣ್ಯ ತಧದೀಯೀತೇತ್ಯೇವಂ ವಾಕ್ಯಂ ಪ್ರವಕ್ಷ್ಯತೇ॥[82]

ಆರಣ್ಯಕವೆಂಬ ಶಬ್ದಕ್ಕೆ ಬೇರೆ ಅರ್ಥವನ್ನು ಕೊಟ್ಟ ಪಾಣಿನಿ ಕಾಡಿನಲ್ಲಿ ವಾಸಿಸುವವನು ಎಂದು ಅರ್ಥವನ್ನು ಹೇಳುವರು. ವರರುಚಿ ತಮ್ಮ ವಾರ್ತಿಕೆಯಲ್ಲಿ ಆರಣ್ಯಕ ಶಬ್ದಕ್ಕೆ ಗ್ರಂಥ, ವನ್ಯಮಾರ್ಗ, ಗಜ ಎಂಬ ಅರ್ಥಗಳುಂಟೆಂದು ಹೇಳುತ್ತಾರೆ.

ಆರಣ್ಯಕವನ್ನು "ಅರಣ" ಎಂದೂ ಕರೆಯುವುದುಂಟು. ತೈತ್ತಿರೀಯ ಆರಣ್ಯಕ ದಲ್ಲಿ **"ಬ್ರಹ್ಮಣಃ ಉದರಣಮಸಿ"**[83] ಎಂದು ಹೇಳಿದೆ. "ಋ" ಎಂಬ ಗತ್ಯರ್ಥಕವಾದ ಧಾತುವಿನಿಂದ ಈ ಶಬ್ದ ಬಂದಿದೆ. ಗತ್ಯರ್ಥಕವಾದುದು ಜ್ಞಾನಾರ್ಥಕವೂ ಆದಕಾರಣ ಅರಣ್ಯ ಶಬ್ದಕ್ಕೆ ಜ್ಞಾನ ಪ್ರತಿಪಾದಕತ್ವವೆಂಬ ಅರ್ಥ ಬರುತ್ತದೆ. ಹೀಗೆ ಆರಣ್ಯಕಗಳು ಆಧ್ಯಾತ್ಮಿಕ ತತ್ವಗಳನ್ನು ಪ್ರತಿಪಾದಿಸುವ ಗ್ರಂಥ ಭಾಗಗಳಾಗಿವೆ. ಇವು ಅರಣ್ಯದಲ್ಲಿ ಅಧ್ಯಯನ ಮಾಡಬೇಕಾದವು ಎಂಬ ಅಂಶ ಗ್ರಂಥ ಪರಿಶೀಲನೆಯಿಂದ ಗೋಚರಿಸುವುದಿಲ್ಲ. ಗ್ರಾಮದಲ್ಲಿಯೇ ಸ್ವಾಧ್ಯಾಯ ನಡೆಯಬೇಕೆಂದು 'ಶೌಚ ಆನ್ಹೆಯ'ರು ವಿಧಿಸಿದ್ದಾರೆ. **"ಗ್ರಾಮೇ ಮನಸಾ ಸ್ವಧ್ಯಾಯಮಧೀಯಿತ ದಿವಾನಕ್ತಂ ವಾ ಇತಿ ಹಸ್ಮಾಹ ಶೌಚ ಅನ್ಹೆಯ"** ಆರಣ್ಯಕದ ಮೂರನೇ ಅಧ್ಯಾಯದಲ್ಲಿ "ಚಿತ್ತಿ"ಯಲ್ಲಿ ಬರುವುದು ಪುರುಷಸೂಕ್ತ. ಇದನ್ನು ಕಾಡಿನಲ್ಲಿ ಅಧ್ಯಯನ ಮಾಡಬೇಕೆಂಬ ಸೂಚನೆ ಎಲ್ಲಿಯೂ ಇಲ್ಲ. ಆದರೆ ಇವುಗಳನ್ನು ಅರಣ್ಯದಲ್ಲಿ ಕಲಿಯಬೇಕು ಹಾಗೂ ಹೇಳಬೇಕು ಎಂಬ ಭಾವನೆ ಈಗ ಜನರಲ್ಲಿ ಬೇರೂರಿದೆ."[84] ಆದುದರಿಂದ ಆರಣ್ಯಕಗಳ ಮುಖ್ಯ ಉದ್ದೇಶ ಯಜ್ಞ ಪ್ರಕ್ರಿಯೆಯಲ್ಲಿ ಯಜ್ಞಾಂತರ್ಗತವಾದ ಆಧ್ಯಾತ್ಮಿಕ ತತ್ತ್ವವಿಚಾರ, ಮತ್ತು ಅವುಗಳಲ್ಲಿ ಅಡಗಿರುವ ದಾರ್ಶನಿಕ ವಿಷಯಗಳನ್ನು ಬೋಧಿಸುವುದಾಗಿದೆ.

ಪ್ರಮುಖ ಹಾಗೂ ಉಪಲಬ್ಧವಿರುವ ಆರಣ್ಯಕಗಳು ಹೀಗಿವೆ

ಋಗ್ವೇದಕ್ಕೆ ಸೇರಿದ ಆರಣ್ಯಕಗಳು	1. ಐತರೇಯ ಆರಣ್ಯಕ
	2. ಕೌಷೀತಕಿ ಆರಣ್ಯಕ
ಯಜುರ್ವೇದಕ್ಕೆ ಸೇರಿದ ಆರಣ್ಯಕಗಳು	
ಕೃಷ್ಣಯಜುರ್ವೇದ	1. ತೈತ್ತಿರೀಯ ಆರಣ್ಯಕ
	2. ಮೈತ್ರಾಯಣೀಯಾರಣ್ಯಕ.
ಶುಕ್ಲಯಜುರ್ವೇದ	1. ಬೃಹದಾರಣ್ಯಕ
ಸಾಮವೇದಕ್ಕೆ ಸೇರಿದ ಆರಣ್ಯಕ	1. ತಲವಕಾರ ಆರಣ್ಯಕ.

2.12. ಉಪನಿಷತ್ತು :–

ಉಪನಿಷತ್ ಬಗ್ಗೆ ಶ್ರೀ ಶಂಕರರು ಕಠೋಪನಿಷದ್ಭಾಷ್ಯದಲ್ಲಿ ಹೇಳಿರುವ ಭಾವಾರ್ಥ ಹೀಗಿದೆ : "ವಿಶರಣ, ಗತಿ, ಅವಸಾದನ, ಎಂಬ ಅರ್ಥಗಳುಳ್ಳ 'ಸದ್' ಧಾತುವಿನ ಹಿಂದೆ 'ಉಪ', 'ನಿ' ಎಂಬ ಉಪಸರ್ಗಗಳು, 'ಕ್ವಿಪ್' ಎಂಬ ಪ್ರತ್ಯಯವೂ

ಬಂದು 'ಉಪನಿಷತ್' ಎಂಬರೂಪವು ಆಗಿರುತ್ತದೆ. ಉಪನಿಷತ್ ಎಂಬ ಶಬ್ದಕ್ಕೆ ಬ್ರಹ್ಮ ವಿಷಯವಾದ ವಿದ್ಯೆ ಎಂದರ್ಥ. ವಿರಕ್ತರೂ ಬ್ರಹ್ಮವಿದ್ಯಾನಿಷ್ಠರೂ ಆದ ಮುಮುಕ್ಷುಗಳ ಸಂಸಾರ ಬೀಜವಾದ ಅವಿದ್ಯಾದಿಗಳನ್ನು ನಾಶಗೊಳಿಸುವುದು (ಸದ್–ವಿಶರಣ) ಎಂಬ ಅರ್ಥಯೋಗದಿಂದ ಬ್ರಹ್ಮ ವಿದ್ಯೆಯು ಉಪನಿಷತ್ ಎನಿಸುತ್ತದೆ. ಇದು ಧಾತುವಿನ ಮೊದಲನೆಯ ಅರ್ಥ. ಮುಮುಕ್ಷುಗಳನ್ನು ಬ್ರಹ್ಮದಲ್ಲಿ ಸೇರಿಸುವುದು (ಸದ್–ಗತಿ) ಎಂಬ ಅರ್ಥಯೋಗದಿಂದ ಈ ವಿದ್ಯೆಯು ಉಪನಿಷತ್ ಎನಿಸುತ್ತದೆ. ಇದು ಧಾತುವಿನ ಎರಡನೆಯ ಅರ್ಥ. ಗರ್ಭವಾಸ, ಜನ್ಮ, ಮುಪ್ಪು ಮೊದಲಾದ ಉಪದ್ರವ ಸಮೂಹವನ್ನು ಶಿಥಿಲ ಮಾಡುವುದು (ಸದ್–ಅವಸಾದನ) ಎಂಬ ಅರ್ಥಯೋಗದಿಂದ ಇದು ಉಪನಿಷತ್ ಎನಿಸುತ್ತದೆ. ಇದು ಧಾತುವಿನ ಮೂರನೆಯ ಅರ್ಥ"[85] ಹೀಗೆ 'ಸದ್' ಧಾತು 'ವಿಶರಣ', 'ಗತಿ', ಮತ್ತು 'ಅವಸಾದನ' ಎಂದು ಮೂರು ಅರ್ಥವನ್ನು ಹೊಂದುತ್ತದೆ. ವಿಶರಣವೆಂದರೆ ನಾಶವಾಗು, 'ಗತಿ' ಎಂದರೆ ಪ್ರಾಪ್ತವಾಗು, ಮತ್ತು ಅವಸಾದನವೆಂದರೆ ಶಿಥಿಲವಾಗು ಎಂದರ್ಥ. ಇಲ್ಲಿ ಸದ್ ಧಾತು ಮೂರು ಅರ್ಥವನ್ನು ಹೊಂದಿರುವುದರಿಂದ ಪ್ರಶ್ನೆ (ಶಂಕೆ) ಏಳಬಹುದು. 'ಗತಿ' ಎಂದರೆ ಪ್ರಾಪ್ತವಾಗು, ಯಾವುದು? ಏನು? ಎಂದು ಪ್ರಶ್ನಿಸಿದರೆ ಅದಕ್ಕೆ ಉತ್ತರ ಬ್ರಹ್ಮಜ್ಞಾನ ಪ್ರಾಪ್ತಿ ಎಂದು. 'ವಿಶರಣ'ವೆಂದರೆ ನಾಶ, ಯಾವುದರ ನಾಶ ಎಂದು ಶಂಕಿಸಿದರೆ, 'ಅಜ್ಞಾನ' ನಾಶ ಎಂದು, ಅಂದರೆ ಬ್ರಹ್ಮಜ್ಞಾನ ಪ್ರಾಪ್ತಿಯಾಗುವುದರಿಂದ ಅವಿದ್ಯಾ ಅಥವಾ ಅಜ್ಞಾನ ನಾಶವಾಗುವುದು. 'ಅವಸಾದನ' ವೆಂದರೆ 'ಶಿಥಿಲ'. ಯಾವುದರ ಶಿಥಿಲ ಎಂದು ಶಂಕೆ ಬಂದರೆ. ಜನನ–ಮರಣಗಳೆಂಬ ಬಂಧನ (ದುಃಖ)ದಿಂದ ಶಿಥಿಲ (ಬಿಡುಗಡೆ) ಆಗುತ್ತದೆಂದು ಅರ್ಥೈಸಲಾಗುತ್ತದೆ. ಒಟ್ಟಿನಲ್ಲಿ ಬ್ರಹ್ಮಜ್ಞಾನ ಅಥವಾ ಬ್ರಹ್ಮವಿದ್ಯೆಯ ಮುಖಾಂತರ ಅಜ್ಞಾನಾಂಧಕಾರವು ನಾಶವಾಗಿ ಬ್ರಹ್ಮಜ್ಞಾನವುಂಟಾಗಿ ಭವ–ಬಂಧನದಿಂದ ಮುಕ್ತಿ ಹೊಂದಲು ಸಾಧನವಾಗುವುದು. ಆದುದರಿಂದ ಉಪನಿಷತ್ತುಗಳು **"ಭಿದ್ಯತೇ ಹೃದಯಗ್ರಂಥಿಃ ಛಿದ್ಯಂತೇ ಸರ್ವಸಂಶಯಾಃ"**[86] ಹೃದಯದಲ್ಲಿದ್ದ ಅಜ್ಞಾನ, ಸಂಶಯನಾಶ ಮಾಡುವುದೇ ಬ್ರಹ್ಮಜ್ಞಾನ, ಅದುವೇ ಉಪನಿಷತ್ ಎಂದು ಹೇಳುತ್ತವೆ.

ಗುರುವಿನ ಹತ್ತಿರ ಶಿಷ್ಯನು ಕುಳಿತು ಪಡೆದ ಜ್ಞಾನಕ್ಕೂ 'ಉಪನಿಷತ್ತು' ಎನ್ನಲಾಗಿದೆ. ಇಲ್ಲಿ ಜ್ಞಾನವೆಂದರೆ, ಸಾಮಾನ್ಯ ಜ್ಞಾನವಲ್ಲ, ಆತ್ಮಜ್ಞಾನ ಅಥವಾ ಬ್ರಹ್ಮಜ್ಞಾನ. ಪ್ರಾಚೀನ ಕಾಲದಲ್ಲಿ ಉಪನಿಷತ್ತಿನ ಅರ್ಥವು ಇದನ್ನೇ ಹೊಂದಿದೆ. ಏಕೆಂದರೆ ಜಿಜ್ಞಾಸು ತನ್ನ ಆತ್ಮೋನ್ನತಿಗಾಗಿ ಗುರುವಿನ ಹತ್ತಿರ ಹೋಗಿ ಪ್ರಶ್ನಿಸುವುದರ ಮೂಲಕ ಬ್ರಹ್ಮಜ್ಞಾನ ಪಡೆಯುವುದಕ್ಕೆ ಕೇನೋಪನಿಷತ್, ಪ್ರಶ್ನೋಪನಿಷತ್, ಮೊದಲಾದ ಉಪನಿಷತ್ತುಗಳೇ ಆಧಾರ. ಇವುಗಳಿಗೆ 'ಕೇನೋಪನಿಷತ್' ಎಂದಾಗಲಿ, 'ಪ್ರಶ್ನೋಪನಿಷತ್' ಎಂದಾಗಲಿ ಹೆಸರು ಬಂದಿದ್ದು ಶಿಷ್ಯನು ಪ್ರಶ್ನಿಸುವುದರ ಮೂಲಕ ಪ್ರಶ್ನೆ ಮತ್ತು ಉತ್ತರ ರೂಪಗಳ ಪ್ರತಿಪಾದನೆಯನ್ನು ಉಪನಿಷತ್ತುಗಳಲ್ಲಿ ಕಾಣುತ್ತೇವೆ.

'ಉಪನಿಷತ್' ಶಬ್ದ ರಹಸ್ಯಮಯ ಅಥವಾ ಗುಹ್ಯವಿದ್ಯೆ ಎಂಬ ಅರ್ಥವನ್ನು ಕೊಡುತ್ತದೆ. ಉಪನಿಷತ್ತಿನಲ್ಲಿ ಬ್ರಹ್ಮ, ಜೀವ ಹಾಗೂ ಜಗತ್ತುಗಳ ವರ್ಣನೆ ರಹಸ್ಯಮಯವಾಗಿದೆ. ಉಪನಿಷತ್ತಿನಲ್ಲಿ ಬ್ರಹ್ಮ ಸ್ವರೂಪ ಹಾಗೂ ಜೀವ ಜಗತ್ತಿನ ಸಂಬಂಧ ಕುರಿತು ಅನೇಕ ಸುಂದರವಾದ ಕುತೂಹಲಕಾರವಾದ ಅಂಶಗಳನ್ನು ರಹಸ್ಯಮಯವಾಗಿ ಪ್ರತಿಪಾದಿಸಲಾಗಿದೆ. ಆದ್ದರಿಂದ ಇದಕ್ಕೆ ಉಪನಿಷತ್ತೆಂಬುದು ಸಾರ್ಥಕ ನಾಮಧೇಯವಾಗಿದೆ.

ಕೇನೋಪನಿಷತ್ತಿನಲ್ಲಿ **"ಸರ್ವಂ ಬ್ರಹ್ಮೌಪನಿಷದಂ ಮಾಹಂ ಬ್ರಹ್ಮ ನಿರಾಕುರ್ಯಾಂ ಮಾ ಮಾ ಬ್ರಹ್ಮ ನಿರಾಕರೋದನಿರಾಕರಣಮಸ್ತ್ವನಿರಾಕರಣಂ ಮೇऽಸ್ತು ತದಾತ್ಮನಿ ನಿರತೇ ಯ ಉಪನಿಷತ್ಸು ಧರ್ಮಾಃ"**[87] ಅಂದರೆ ಸಕಲ ವಿಶ್ವವು ಉಪನಿಷತ್ ವೇದ್ಯವಾದ ಬ್ರಹ್ಮರೂಪವಾಗಿದೆ. ಇಂತಹ ಬ್ರಹ್ಮನನ್ನು ನಿರಾಕರಿಸದೆ ನಾನು ಬ್ರಹ್ಮನನ್ನು ನಿರಾಕರಿಸದೆ ಇವೆರಡರ ಅನ್ಯೋನ್ಯ ಸಂಬಂಧದ ಧರ್ಮವು ನನ್ನ ಆತ್ಮದಲ್ಲಿ ನೆಲೆಗೊಳ್ಳಲಿ. ಎಂದರೆ ಇಲ್ಲಿ ಉಪನಿಷತ್ತಿಗೂ ವಿಶ್ವರೂಪಿಯಾದ ಬ್ರಹ್ಮತತ್ವಕ್ಕೂ ಅವಿನಾಭಾವದ ಸಂಬಂಧವಿರುವದರಿಂದ ಬ್ರಹ್ಮತತ್ವವೇ ಉಪನಿಷತ್ತೆಂದು ಹೇಳಲಾಗಿದೆ.

"ಉಪನಿಷದಂ ಭೋ ಬ್ರೂಹೀತ್ಯುಕ್ತಾ ತ ಉಪನಿಷದ್ಬ್ರಾಹ್ಮೀಂ ವಾವ ತ ಉಪನಿಷದಮಬ್ರೂಯೇತಿ"[88] ಗುರುಗಳೇ ಉಪನಿಷತ್ತು ಹೇಳಿರಿ, ಎಂದು ಹಿಂದೆ ನೀನು ಕೇಳಿದುದಕ್ಕೆ ನಾನು ಉಪನಿಷತ್ತನ್ನು ಉಪದೇಶಿಸಿದೆ. "ಬ್ರಹ್ಮ ಸಂಬಂಧವಾದ ಉಪನಿಷತ್ತನ್ನೇ ನಿನಗೆ ಹೇಳಿದ್ದೇನೆ." ಇಲ್ಲಿ ಶಿಷ್ಯ ಗುರುಗಳನ್ನು ಕುರಿತು **"ಉಪನಿಷದಂ ಭೋ ಬ್ರೂಹಿ"** ಗುರುಗಳೇ ಉಪನಿಷತ್ತನ್ನು ಹೇಳಿರಿ ಎಂದು ಪ್ರಾರ್ಥಿಸುವಲ್ಲಿ ಹಾಗೂ ಗುರುಗಳು **"ಇತ್ಯುತ್ಕಾತ್ ಉಪನಿಷದ್ಬ್ರಾಹ್ಮೀಂ ವಾವ ತ ಉಪನಿಷದಮಬ್ರೂಯೇತಿ"** ಬ್ರಹ್ಮ ಸಂಬಂಧವಾದ ಉಪನಿಷತ್ತನ್ನು ನಿನಗೆ ಹೇಳಿರುತ್ತೇನೆ ಎನ್ನುವಲ್ಲಿ ಗುರು–ಶಿಷ್ಯರ ಸಂವಾದ ರೂಪವನ್ನು ಗಮನಿಸಿದರೆ, ಶಿಷ್ಯನು ಗುರುವಿನ ಹತ್ತಿರ ಕುಳಿತು ಪಡೆಯುವ ವಿದ್ಯೆಗೆ, ಜ್ಞಾನಕ್ಕೆ 'ಉಪನಿಷತ್' ಎಂದು ಅರ್ಥೈಸಲಾಗಿದೆ.

ತೈತ್ತಿರೀಯೋಪನಿಷತ್ತಿನಲ್ಲಿ **"ಯತೋ ವಾಚೋ ನಿವರ್ತಂತೇ। ಅಪ್ರಾಪ್ಯ ಮನಸಾ ಸಹ। ಆನಂದಂ ಬ್ರಹ್ಮಣೋ ವಿದ್ವಾನ್"**[89] ಎಂದರೆ ಪರಬ್ರಹ್ಮನ ಇರುವಿಕೆ ಮಾತು–ಮನಗಳಿಗೆ ನಿಲುಕದ ಆನಂದ ಸ್ಥಿತಿಯಲ್ಲಿದೆ. ಇದನ್ನು ತಿಳಿದುಕೊಂಡ ಆತ್ಮಸ್ವರೂಪವನ್ನು ಉಪನಿಷತ್ತು ಬೋಧಿಸುತ್ತದೆ. ಆದುದರಿಂದ ಆತ್ಮಸ್ವರೂಪವನ್ನು ಬೋಧಿಸುವ ವಿದ್ಯೆಗೆ ಉಪನಿಷತ್ತೆಂದು ಹೇಳಬಹುದು. ಉಪನಿಷತ್ತಿನಿಂದ ಉಂಟಾದ **"ಅಹಂ ಬ್ರಹ್ಮಾಸ್ಮಿ"**[90] ಎಂಬ ಬ್ರಹ್ಮಾತ್ಮತತ್ವ ಜ್ಞಾನ ಅಂದರೆ ಬ್ರಹ್ಮವೇ ಆತ್ಮ (ಜೀವ), ಆತ್ಮವೇ ಬ್ರಹ್ಮ ಎಂಬ ಅಭೇದ ಜ್ಞಾನವನ್ನು ಉಪದೇಶಿಸುವುದರಿಂದ ಇದು **"ಉಪನಿಷತ್"** ಎನಿಸಿಕೊಂಡಿದೆ.

"ಶ್ವೇತಾಶ್ವತರ ಉಪನಿಷತ್ತಿನಲ್ಲಿ **"ಆತ್ಮವಿದ್ಯಾ ತಪೋಮೂಲಂ ತದ್‌ಬ್ರಹ್ಮೋಪನಿಷತ್ ಪರಮ್। ತದ್‌ಬ್ರಹ್ಮೋಪನಿಷತ್ ಪರಮ್।"** ಆತ್ಮ ವಿದ್ಯೆಗೆ ತಪಸ್ಸು ಮೂಲ. ಆತ್ಮವಿದ್ಯೆ ಎಂದರೆ ಬ್ರಹ್ಮನನ್ನು ತಿಳಿಯುವುದು, ಇದನ್ನು ತಿಳಿಯುವ ಶ್ರೇಯಸ್ಸಿನ ಮಾರ್ಗವೇ ಉಪನಿಷತ್."[91] ಆದ್ದರಿಂದ ಇಲ್ಲಿ 'ಉಪನಿಷತ್' ಎಂದರೆ ಪರಶ್ರೇಯಸ್ಸಿಗೆ ಮೂಲವಾದ ವಿದ್ಯೆ ಎಂದರ್ಥ.

"ನಮ್ಮ ಪೂರ್ವಜರಾದ ಋಷಿಗಳು ದಿವ್ಯಾನುಭವಿಗಳಾಗಿದ್ದು, ಅವರ ಸಂಪತ್ತು ಅಲೌಕಿಕವಾದ ಆತ್ಮವಿದ್ಯೆ, ಬ್ರಹ್ಮಜ್ಞಾನ, ವಿರಕ್ತಿ, ವಿವೇಕ, ಸಮಾಧಾನ ಮುಂತಾದ ಸಾಧನೆಗಳ ಮೂಲಕ ಹೃದಯ ಹದಗೊಳಿಸಿ ತದೇಕತಾನತಾರೂಪ ಧ್ಯಾನವನ್ನು ಸಾಧಿಸಿ ಆ ಬ್ರಹ್ಮಬೋಧ ಸಂಪದವನ್ನವರು ಪಡೆದರು. ಅದನ್ನು ಪವಿತ್ರ ಶಬ್ದಗಳಲ್ಲಿ ಮೂಡಿಸಿದರು. ಹಾಗೆ ಮೂಡಿದ ಆತ್ಮವಿದ್ಯೆಯ ಶಬ್ದರೂಪವೇ ಉಪನಿಷತ್ತು."[92] ಎಂದು ಶ್ರೀ ಸಿದ್ದೇಶ್ವರ ಸ್ವಾಮಿಗಳು ಅಭಿಪ್ರಾಯ ಪಟ್ಟಿದ್ದಾರೆ.

ಹಾಗೆಯೇ ಉಪನಿಷತ್ತಿನ ಅರ್ಥವನ್ನು ಕುರಿತು ಡಾ.ಶಿವಕುಮಾರ ಶಿವಾಚಾರ್ಯ ಸ್ವಾಮಿಗಳು ತಮ್ಮ ಸಂಶೋಧನಾ ಪ್ರಬಂಧದಲ್ಲಿ ಹೀಗೆ ಹೇಳಿದ್ದಾರೆ. 1.ಆತ್ಮವಿದ್ಯೆ – ಬ್ರಹ್ಮವಿದ್ಯೆ, 2.ಯೋಗವಿದ್ಯೆ, 3.ಸಾನಿಧ್ಯ ವಿದ್ಯೆ, ಇಲ್ಲಿ ಬ್ರಹ್ಮತತ್ವದ ಸಾನಿಧ್ಯವೆಂದೂ ಅಲ್ಲದೆ ಗುರುಸಾನಿಧ್ಯದಲ್ಲಿ ಉಳಿದು ಅರಸುವ ವಿದ್ಯೆಯೆಂತಲೂ ಅರ್ಥಮಾಡಬಹುದು. 4.ರಹಸ್ಯ–ಗೌಪನೀಯ ವಿದ್ಯೆ, 5.ಆಶ್ರಮ ಅಥವಾ ನಿಸರ್ಗಾವರಣ ವಿದ್ಯೆ, 6.ವ್ರತ–ನಿಯಮ ವಿದ್ಯೆ, 7.ವೇದಾಂತ ವಿದ್ಯೆ ಹೀಗೆ ಉಪನಿಷತ್ತಿನ ಬಗ್ಗೆ ತಮ್ಮದೆಯಾದ ವಿಚಾರಗಳನ್ನು ವ್ಯಕ್ತಪಡಿಸಿದ್ದಾರೆ.[93]

ಒಟ್ಟಿನಲ್ಲಿ ಉಪನಿಷತ್ತು ಎಂದರೆ ಗುರುವಿನ ಸಾಮೀಪ್ಯದಲ್ಲಿ ಕುಳಿತು ತಿಳಿಯಬೇಕಾದ ರಹಸ್ಯವಿದ್ಯೆಯೇ ಆಗಿದೆ. ಬ್ರಹ್ಮ ಸಂಪನ್ನನಾದ ಗುರುವನ್ನು ಆಶ್ರಯಿಸಿ, ರಹಸ್ಯೋಪದೇಶದಿಂದ ಅಜ್ಞಾನವನ್ನು ಕಳೆದುಕೊಂಡು, ಬ್ರಹ್ಮಜ್ಞಾನ ಪಡೆದು, ಸಂಸಾರ ಪಾಶದಿಂದ ಮುಕ್ತನನ್ನಾಗಿ ಮಾಡುವ ವಿದ್ಯೆಯನ್ನು ಉಪನಿಷತ್ತೆಂದು ಕರೆಯಲಾಗುತ್ತದೆ.

2.13 ಉಪನಿಷತ್ತುಗಳ ಕಾಲ

ಉಪನಿಷತ್ತುಗಳು ವೇದಗಳ ಕೊನೆಯ ಭಾಗವಾಗಿ ಮತ್ತು ಅವುಗಳ ಸಾರರೂಪವಾಗಿ ಬರುವುದರಿಂದ ಅವುಗಳನ್ನು ಜ್ಞಾನಕಾಂಡವೆಂದು ಪರಿಗಣಿಸಲಾಗಿದೆ. ಈ ಎಲ್ಲ ಉಪನಿಷತ್ತುಗಳು ಒಂದೇ ಕಾಲಕ್ಕೆ ನಿರ್ಮಾಣವಾದವೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ ವೇದಗಳು ಮೊದಲಿಗೆ ಒಂದೇ ಒಂದು ಆಗಿತ್ತೆಂದು, ಆನಂತರ ನಾಲ್ಕು ಭಾಗವಾಗಿ ವ್ಯಾಸ ಮಹರ್ಷಿಗಳು ವಿಂಗಡಿಸಿದ್ದಾರೆಂದು ಈಗಾಗಲೇ ನೋಡಿದ್ದೇವೆ. ವೇದವು ಮೂಲದಲ್ಲಿ ಒಂದೇ ಆಗಿದ್ದರೂ ಅದು ಒಂದೇ ಕಾಲದಲ್ಲಿ ಸಂಪೂರ್ಣವಾಗಿ ನಿರ್ಮಾಣಗೊಂಡಿಲ್ಲ. ಹಾಗೂ ಒಬ್ಬ ಋಷಿಯಿಂದ ರಚನೆಗೊಳ್ಳದೆ ಅನೇಕ ಋಷಿಗಳಿಂದ

ಬೇರೆ ಬೇರೆ ಕಾಲದಲ್ಲಿ ರಚನೆಗೊಂಡಿದೆ. ಅವರ ತಪಸ್ಸಿನ ಫಲವಾಗಿ ಅಗೋಚರವಾದ ದಿವ್ಯಶಕ್ತಿಯು ಅವರ ಹೃದಯದಿಂದ ಅಮೃತವಾಣಿಯಾಗಿ ಉದ್ಭವಿಸಿ ಮಂತ್ರಗಳಾಗಿ ಹೊರಹೊಮ್ಮಿವೆ. ಋಷಿವಾಣಿಯೇ ಮಂತ್ರ ಇಲ್ಲವೆ ಶ್ರುತಿಗಳಾದವು. ಈ ಮಂತ್ರಗಳೆಲ್ಲ ಒಟ್ಟಿಗೆ ಸೇರಿ ಒಂದು ಬೃಹತ್ ಗಾತ್ರದ ವೇದವಾಗಿ ಪರಿಣಮಿಸಿತು. ಈ ಬೃಹತ್ ವೇದವನ್ನು ಅಧ್ಯಯನದ ಅನುಕೂಲಕ್ಕಾಗಿ ನಾಲ್ಕು ವಿಭಾಗಗಳನ್ನಾಗಿ ವಿಂಗಡಿಸಲಾಯಿತು. ಹಾಗೆಯೇ ಮೂಲದಲ್ಲಿದ್ದ ಪ್ರಮುಖ ಉಪನಿಷತ್ತುಗಳು 'ಹತ್ತು' ಎಂದರೂ, ಇವೆಲ್ಲ ಒಂದೇ ಕಾಲಕ್ಕೆ ನಿರ್ಮಾಣಗೊಂಡಿಲ್ಲ. ಇವುಗಳು ಬೇರೆ–ಬೇರೆ ಕಾಲದಲ್ಲಿ ಬೇರೆ–ಬೇರೆ ಋಷಿಗಳಿಂದ ಆವಿರ್ಭಾವಗೊಂಡಿವೆ.

ಉಪನಿಷತ್ತುಗಳೆಲ್ಲವೂ ಪ್ರಾಚೀನ ಎಂದು ಒಪ್ಪಿಕೊಳ್ಳಲಾಗುವುದಿಲ್ಲ. ಅವುಗಳಲ್ಲಿ ಕೆಲವು ಹಳೆಯವಾದರೆ ಮತ್ತು ಕೆಲವು ಇಚಿನವುಗಳೆಂದು ವಿಮರ್ಶಕರು ನಿರ್ಣಯಿಸಿ, ಅದಕ್ಕೆ ಅನೇಕ ಕಾರಣಗಳನ್ನು ಕೊಟ್ಟಿದ್ದಾರೆ. ಅವುಗಳ ಭಾಷೆ, ಶೈಲಿ, ವ್ಯಾಕರಣ ವಿಶೇಷ, ವಿಷಯ ನಿದರ್ಶನ, ಯಜ್ಞಗಳ ಮೇಲೆ ಬ್ರಾಹ್ಮಣ ಗ್ರಂಥಗಳ ಪ್ರಭಾವ, ಮಂತ್ರ, ವ್ರತ, ಫಲಶ್ರುತಿ, ತತ್ತ್ವಾಭಿಪ್ರಾಯಗಳ ಐತಿಹಾಸಿಕ ಪ್ರಗತಿ ಮೊದಲಾದ ಕಾರಣಗಳಿಂದ ಉಪನಿಷತ್ತುಗಳನ್ನು ಪ್ರಾಚೀನ ಮತ್ತು ಅರ್ವಾಚೀನ ಎಂದು ಗುರುತಿಸಿದ್ದಾರೆ. ಪ್ರಾಚೀನ ಉಪನಿಷ್ತುಗಳು 'ಹತ್ತು' ಎಂದು ಅನೇಕರು ಒಪ್ಪಿಕೊಂಡಿದ್ದರೂ ಮತ್ತೆ ಕೆಲವರು ನಾಲ್ಕು ಉಪನಿಷತ್ತುಗಳನ್ನು ಸೇರಿಸಿ ಹದಿನಾಲ್ಕು ಎಂದು ಗುರುತಿಸಿದ್ದಾರೆ. ಉಪನಿಷತ್ತುಗಳನ್ನು ಮೇಲಿನ ಹಲವಾರು ಅಂಶಗಳನ್ನು ಎದುರಿಟ್ಟುಕೊಂಡು ಅವುಗಳ ಪೂರ್ವಾಪರವನ್ನು ಡಾ. ಶಿವಕುಮಾರ ಶಿವಚಾರ್ಯ ಸ್ವಾಮಿಗಳು ಹೀಗೆ ನಿರ್ಣಯಿಸಿದ್ದಾರೆ– "ಬೃಹದಾರಾಣ್ಯಕ, ಛಾಂದಾಗ್ಯ, ತೈತ್ತಿರೀಯ, ಕೌಷೀತಕ, ಕೇನ, ಕಠ, ಈಶ, ಮುಂಡಕ, ಪ್ರಶ್ನ, ಮಾಂಡೂಕ್ಯ, ಶ್ವೇತಾಶ್ವತರ, ಮೈತ್ರೇಯ ಎಂದು ಮತ್ತೆ ಇವುಗಳಲ್ಲಿ ಮೊದಲಿನ ಆರು ಅತ್ಯಂತ ಪ್ರಾಚೀನವೆಂದು ಹೇಳಲಾಗಿದೆ. ಇವುಗಳನ್ನು ಪ್ರಾಚೀನ ಕಾಲವನ್ನು ಅನುಸರಿಸಿ ಕ್ರಮವನ್ನು ಸೂಚಿಸಿದ್ದಾರೆ. ಇವುಗಳಲ್ಲಿ ಕೆಲವು ಕ್ರಿ.ಶ. ಪೂ. 600 ವರ್ಷಗಳ ಹಿಂದೆ ಇದ್ದವೆಂದೂ ಮತ್ತೆ ಕೆಲವರು ಸುಮಾರು ಕ್ರಿ.ಶ.ಪೂ 1000 ವರ್ಷವೆಂದು ಅಭಿಪ್ರಾಯಪಟ್ಟಿದ್ದಾರೆ."[94]

ಒಟ್ಟಿನಲ್ಲಿ ಉಪನಿಷತ್ತುಗಳ ಕಾಲವನ್ನು ನಿರ್ದಿಷ್ಟವಾಗಿ ಹೇಳದೆ ವಿದ್ವಾಂಸರು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಆದರೆ ಡಾ.ಶಿವಕುಮಾರ ಸ್ವಾಮಿಗಳು ತಮ್ಮ ಗ್ರಂಥದಲ್ಲಿ ಉಪನಿಷತ್ತುಗಳ ಕಾಲದ ಬಗ್ಗೆ ಹೀಗೆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. "ಬುದ್ದನ ಕಾಲಕ್ಕಿಂತ ಹಿಂದಿನವು ಎಂಬುದರಲ್ಲಿ ಭಿನ್ನಾಭಿಪ್ರಾಯಕ್ಕೆ ಅವಕಾಶವಿಲ್ಲ. ಬೃಹದಾರಣ್ಯಕ, ಛಾಂದೋಗ್ಯ, ಐತರೇಯ, ತೈತ್ತಿರೀಯ, ಕೇನ, ಕಠ, ಮುಂತಾ ಹಳೆಯ ಉಪನಿಷತ್ತುಗಳ ಕಾಲ ಕ್ರಿ.ಪೂ. ಏಳು ಅಥವಾ ಎಂಟನೆಯ ಶತಮಾನಗಳು ಎಂಬುದಕ್ಕೆ ಬಹುಮತ ದೊರೆತಿದೆ. ಇವುಗಳ ನಂತರ ಕಾಲಕ್ರಮೇಣ ಉಪೋಪನಿಷತ್ತುಗಳು ರಚನೆಯಾಗುತ್ತ

ಸಾಗಿವೆ.” ಈ ದಶೋಪನಿಷತ್ತುಗಳ ಕಾಲವಂತೂ ರಾಮಾಯಣ ಮತ್ತು ಮಹಾಭಾರತ ಕಾಲದವರೆಗೂ ಚಾಚಿಕೊಳ್ಳುತ್ತದೆ. ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.[95]

ಋಗ್ವೇದ ಸಂಹಿತೆಯ ಸಂಕಲನಾನಂತರ ಉಪನಿಷತ್ತುಗಳ ಕಾಲವನ್ನು ಹೇಳಬೇಕಾಗುತ್ತದೆ. ಪಾಶ್ಚಾತ್ಯ ಪಂಡಿತರಾದ ಷೇಡರ್, ಮ್ಯಾಕ್ಸಮುಲ್ಲರರು ಕ್ರಿ.ಪೂ. 1200ನ್ನು ಋಗ್ವೇದ ಸಂಕಲನ ಕಾಲವೆಂದು ಒಪ್ಪುವುದರಿಂದ ಉಪನಿಷತ್ತುಗಳು ಕ್ರಿ.ಪೂ. 1200 ಹಾಗೂ ಕ್ರಿ.ಪೂ. 600ರ ಮಧ್ಯ ಕಾಲಕ್ಕೆ ಸೇರುತ್ತವೆ.

2.14 ಉಪನಿಷತ್ತುಗಳ ಸಂಖ್ಯೆ

ಉಪನಿಷತ್ತುಗಳ ಸಂಖ್ಯೆಯ ವಿಚಾರದಲ್ಲಿ ಭಿನ್ನಾಭಿಪ್ರಾಯಗಳಿವೆ. ಮುಕ್ತಿಕೋಪನಿಷತ್ತಿನಲ್ಲಿ 108 ಉಪನಿಷತ್ತುಗಳ ಪಟ್ಟಿಯೇ ಇದೆ. ಈ ಉಪಲಬ್ಧವಾಗಿರುವ ಉಪನಿಷತ್ತುಗಳಲ್ಲಿ ಅತ್ಯಂತ ಪ್ರಾಚೀನವೂ, ಮಹತ್ವಪೂರ್ಣವೂ ಆದ ಉಪನಿಷತ್ತುಗಳು ಹದಿಮೂರು ಎಂದು ಕೆಲವರು ಹೇಳಿದರೆ, ಇನ್ನು ಕೆಲವರು ಹದಿನಾಲ್ಕು ಎಂದು ಹೇಳುತ್ತಾರೆ. ದಶೋಪನಿಷತ್ತುಗಳೆಂದು ಪ್ರಸಿದ್ಧವಾದ ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕ ಈ ಉಪನಿಷತ್ತುಗಳ ಜೊತೆಗೆ ಕೌಷಿತಕೀ, ಶ್ವೇತಾಶ್ವತರ, ಮೈತ್ರಾಯಣೀಯ ಮತ್ತು ನಾರಾಯಣೀಯ ಉಪನಿಷತ್ತುಗಳು ಸೇರುತ್ತವೆ. “ದಾರಾಷುಕೋ ಮಾಡಿಸಿದ ಪರ್ಷಿಯನ್ ಭಾಷಾಂತರದಲ್ಲಿ ಐವತ್ತು ಉಪನಿಷತ್ತುಗಳಿವೆ. ಮ್ಯಾಕ್ಸ್‌ಮುಲ್ಲರ್ ಮಾಡಿದ ಒಂದು ಅಕಾರಾದಿ ಪಟ್ಟಿಯ ಉಪನಿಷತ್ತುಗಳ ಸಂಖ್ಯೆ 149. ಡಾಕ್ಟರ್ ಬರ್ನೆಲ್ ಮಹಾಶಯನ ಪಟ್ಟಿಯಲ್ಲಿ 151 ಉಪನಿಷತ್ತುಗಳೂ, ಪ್ರೊಫೆಸರ್ ಹೌಗ್‌ರ ಪಟ್ಟಿಯಲ್ಲಿ 170 ಉಪನಿಷತ್ತುಗಳೂ ಕಂಡು ಬರುತ್ತವೆ.”[96]

ಶಂಕರಾಚಾರ್ಯರಿಂದ ವಿದ್ಯಾರಣ್ಯರವರೆಗೆ ಮುಖ್ಯ ಉಪನಿಷತ್ತುಗಳೆಂದು ಕರೆದಿರುವ ಉಪನಿಷತ್ತುಗಳ ಸಂಖ್ಯೆ ಹನ್ನೊಂದರಿಂದ ಹದಿನೆಂಟರವರೆಗೆ ಇವೆ. ಶಂಕರಾಚಾರ್ಯರು ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತರೀಯ, ಐತರೇಯ, ಛಾಂದೋಗ್ಯ, ಬೃಹದಾರಣ್ಯಕ, ಶ್ವೇತಾಶ್ವತರ ಎಂಬ ಹನ್ನೊಂದು ಉಪನಿಷತ್ತುಗಳ ಮೇಲೆ ಭಾಷ್ಯಗಳನ್ನು ಬರೆದಿರುತ್ತಾರೆ. ತಮ್ಮ ಬ್ರಹ್ಮಸೂತ್ರ ಭಾಷ್ಯದಲ್ಲಿ ಕೌಷಿತಕೀ ಚೌಪಾಲ, ಮಹಾನಾರಾಯಣ ಮತ್ತು ಪೈಂಗಲ ಉಪನಿಷತ್ತುಗಳನ್ನು ಪ್ರಸ್ತಾಪಿಸಿರುತ್ತಾರೆ. ರಾಮಾನುಜರು ಇವುಗಳನ್ನಲ್ಲದೆ ಮೈತ್ರಿಉಪನಿಷತ್, ಸುಬಾಲ, ಮತ್ತು ಚೂಲಿಕಾ ಉಪನಿಷತ್ತುಗಳನ್ನು ಉಪಯೋಗಿಸಿ ಕೊಂಡಿರುತ್ತಾರೆ. ಅಲ್ಲಲ್ಲಿ ಗರ್ಭ, ಚೌಬಾಲ, ಮತ್ತು ಮಹಾಉಪನಿಷತ್ತುಗಳನ್ನು ಹೆಸರಿಸಿರುತ್ತಾರೆ. ವಿದ್ಯಾರಣ್ಯರು ತಮ್ಮ ಮಹಾಉಪನಿಷತ್ತುಗಳನ್ನು ಹೆಸರಿಸಿರುತ್ತಾರೆ. ವಿದ್ಯಾರಣ್ಯರು ತಮ್ಮ ಸರ್ವೋಪನಿಷತ್ತುಗಳನ್ನು ಹೆಸರಿಸಿರುತ್ತಾರೆ. ವಿದ್ಯಾರಣ್ಯರು ತಮ್ಮ ಸರ್ವೋಪನಿಷತ್

ಅರ್ಥಾನುಭೂತಿ ಪ್ರಕಾಶಿಕೆಯಲ್ಲಿ ನೃಸಿಂಹೋತ್ತರತಾಪನೀ ಉಪನಿಷತ್ತನ್ನು ಮುಖ್ಯ ಉಪನಿಷತ್ತುಗಳಲ್ಲೊಂದಾಗಿ ಸೇರಿಸಿರುತ್ತಾರೆ.[97]

ಮುಕ್ತಿಕೋಪನಿಷತ್ತಿನಲ್ಲಿ ಉಲ್ಲೇಖಿಸಿದ 108 ಉಪನಿಷತ್ತುಗಳ ಪಟ್ಟಿ ಈ ಕೆಳಗಿನಂತೆ ಮಾಡಲಾಗಿದೆ.

1.ಈಶ, 2.ಕೇನ, 3.ಕಠ, 4.ಪ್ರಶ್ನ, 5.ಮುಂಡಕ, 6.ಮಾಂಡೂಕ್ಯ, 7.ತೈತ್ತಿರೀಯ, 8.ಐತರೇಯ, 9.ಛಾಂದೋಗ್ಯ, 10.ಬೃಹದಾರಣ್ಯಕ, 11.ಶ್ವೇತಾಶ್ವತರ, 12.ಬ್ರಹ್ಮಬಿಂದು, 13.ಕೈವಲ್ಯ, 14.ಜಾಬಾಲ, 15.ಹಂಸ, 16.ಅರುಣಿಕ, 17.ಗರ್ಭ, 18.ನಾರಾಯಣ, 19.ಪರಮಹಂಸ, 20.ಬ್ರಹ್ಮ, 21.ಅಮೃತನಾದ, 22.ಅಥರ್ವಶಿರ, 23.ಅಥರ್ವಶಿಖ, 24.ಮೈತ್ರಾಯಣಿ, 25.ಕೌಷಿತಕೀಬ್ರಹ್ಮಣ, 26.ಬೃಹಜ್ಜಾಬಾಲ, 27.ನೃಸಿಂಹಪೂರ್ವ ತಾಪಿನ್ಯುಪನಿಷತ್ ನೃಸಿಂಹೋತ್ತರತಾಪಿನ್ಯುಪನಿಷತ್, 28.ಕಾಲಾಗ್ನಿರುದ್ರ, 29.ಮೈತ್ರೇಯ, 30.ಸುಬಾಲ, 31.ಕ್ಷುರಿಕ, 32.ಯಂತ್ರಿಕ, 33.ಸರ್ವಸಾರೋಪನಿಷತ್, 34.ನಿರಾಲಂಬ, 35.ಶುಕರಹಸ್ಯ, 36.ವಜ್ರಸೂಚಿಕ, 37.ತೇಜೋಬಿಂದು, 38.ನಾದಬಿಂದು, 39.ಧ್ಯಾನಬಿಂದು, 40.ಬ್ರಹ್ಮವಿದ್ಯೆ, 41.ಯೋಗತತ್ತ್ವ, 42.ಆತ್ಮಬೋಧ, 43.ನಾರದಪರಿವ್ರಾಜಕ, 44.ಲೇಶಿಖಿಬ್ರಾಹ್ಮಣ, 45.ಸೀತೋಪನಿಷತ್, 46.ಯೋಗಚೂಡಾಮಣಿ, 47.ನಿರ್ವಾಣ, 48.ಮಂಡಲಬ್ರಾಹ್ಮಣ, 49.ದಕ್ಷಿಣಾಮೂರ್ತಿ, 50.ಶರಭ, 51.ಸ್ಕಂದ, 52.ತ್ರಿಪಾದ್ವಿಭೂತಿಮಹಾನಾರಾಯಣ, 53.ಅದ್ವಯತಾರಕ, 54.ರಾಮರಹಸ್ಯ, 55.ರಾಮಪೂರ್ವತಾಪಿನ್ಯುಪನಿಷತ್ ರಾಮೋತ್ತರತಾಪಿನ್ಯುಪನಿಷತ್, 56ವಾಸುದೇವ, 57.ಮುದ್ಗಲ, 58.ಶಾಂಡಿಲ್ಯ, 59.ಪೈಂಗಲ, 60.ಭಿಕ್ಷುಕ, 61.ಮಹೋಪನಿಷತ್, 62.ಶಾರೀರಿಕ, 63.ಯೋಗಶಿಖ, 64.ತುರಿಯಾತೀತ, 65.ಸಂನ್ಯಾಸ, 66.ಪರಮಹಂಸಪರಿವ್ರಾಜಕೋಪನಿಷತ್, 67.ಅಕ್ಷಮಾಲಾ, 68.ಅವ್ಯಕ್ತ, 69.ಏಕಾಕ್ಷರ, 70.ಅನ್ನಪೂರ್ಣೆ, 71.ಸುರ್ಯೇ, 72.ಅಕ್ಷುಪನಿಷತ್, 73.ಅಧ್ಯಾತ್ಮ, 74.ಕುಂಡಿಕ, 75.ಸಾವಿತ್ರಿ, 76.ಆತ್ಮ, 77.ಪಾಶುಪತಬ್ರಹ್ಮ, 78ಪರಬ್ರಹ್ಮೋಪನಿಷತ್, 79.ಅವಧೂತ, 80.ತ್ರಿಪುರಾಪಿನ್, 81.ದೇವ್ಯುಪನಿಷತ್, 82.ತ್ರಿಪುರ, 83.ಕಠರುದ್ರ, 84.ಭಾವನ, 85.ರುದ್ರಹೃದಯ, 86.ಯೋಗಕುಂಡಲ, 87.ಭಸ್ಮಜಾಬಾಲ, 88.ರುದ್ರಾಕ್ಷಜಾಬಾಲ, 89ಗಣಪತ್ಯುಪನಿಷತ್, 90ಜಾಬಾಲದರ್ಶನ, 91.ತಾರಾಸಾರ, 92.ಮಹಾವಾಕ್ಯ, 93.ಪಂಚಬ್ರಹ್ಮ, 94.ಪ್ರಾಣಾಗ್ನಿಹೋತ್ರ, 95.ಗೋಪಾಲಪೂರ್ವ ತಾಪಿನ್ಯುಪನಿಷತ್ ಗೋಪಾಲೋತ್ತರತಾಪಿನ್ಯುಪನಿಷತ್, 96.ಕೃಷ್ಣ, 97.ಯಾಜ್ಞವಲ್ಕ್ಯ, 98.ವರಹ, 99.ಶಾಠ್ಯಾಯನೀಯ, 100.ಹಯಗ್ರಿವ, 101.ದತ್ತಾತ್ರೇಯ, 102.ಗರುಡ, 103.ಕಾಲಿಸಂತರಣ, 104.ಜಾಬಾಲ, 105.ಸೌಭಾಗ್ಯಲಕ್ಷ್ಮಿಉಪನಿಷತ್, 106.ಸರಸ್ವತಿರಹಸ್ಯ, 107.ಬಹ್ವೃಚೋಪನಿಷತ್, 108.ಮುಕ್ತಿಕೋಪನಿಷತ್,

ಈಶ ಮೊದಲಾದ ದಶೋಪನಿಷತ್ತುಗಳು ತತ್ತ್ವ ದೃಷ್ಟಿಯಿಂದ ಅತೀ ಮುಖ್ಯವೆಂದು ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಇವುಗಳಲ್ಲಿ ಆಧ್ಯಾತ್ಮಿಕ ಭಾವನೆಗಳೇ ಪ್ರಧಾನವಾಗಿದ್ದು ತಮಗುಂಟಾದ ದಿವ್ಯ ಅನುಭವವನ್ನು ನಿರೂಪಿಸುವುದೇ ಋಷಿಗಳ ಉದ್ದೇಶವಾಗಿದೆ. ಇವುಗಳೆಲ್ಲವು ತಾತ್ತ್ವಿಕ ದೃಷ್ಟಿಯಿಂದ ಸಾಕ್ಷಾತ್ಕಾರ ಮಾಡಿಕೊಂಡ ವಿಚಾರಗಳಾಗಿವೆ. ಆದುದರಿಂದ ಮಾನವ ಜೀವನದ ಮಧುರ ಮತ್ತು ಪವಿತ್ರವಾದ ಸಂದೇಶಗಳಾಗಿವೆ. ಮೂಲ ಉಪನಿಷತ್ತುಗಳ ಸಂಖ್ಯಾವಿಚಾರದಲ್ಲಿ ವಿದ್ವಾಂಸರಲ್ಲಿ ಏಕಮತವಿಲ್ಲ. ಯಾರೂ ಖಚಿತವಾಗಿ ಇಷ್ಟೆ ಇವೆ ಎಂದು ಹೇಳಲಾರದ್ದರಿಂದ ಇವುಗಳ ಸಂಖ್ಯಾ ನಿರ್ದೇಶನ ತೊಡಕಿನದಾಗಿದೆ. ಆದರೆ ಆಚಾರ್ಯರು ಭಾಷ್ಯ, ವ್ಯಾಖ್ಯಾನ ಬರೆದಿರುವ ಉಪನಿಷತ್ತುಗಳಲ್ಲಿ ಹತ್ತು ಉಪನಿಷತ್ತುಗಳು ಪ್ರಾಚೀನ ಹಾಗೂ ಪ್ರಮುಖವೆಂದು ವಿದ್ವಾಂಸರು ಒಪ್ಪಿಕೊಂಡಿದ್ದಾರೆ.

ದಶೋಪನಿಷತ್ತುಗಳಿಗೆ ಸಂಬಂಧಿಸಿದ ವೇದ, ವೇದಶಾಖೆ ಮಂತ್ರಗಳ ಸಂಖ್ಯೆಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು.

ಅ.ಕ್ರ.	ಉಪನಿಷತ್ತು	ವೇದ	ಶಾಖೆ	ಅಧ್ಯಾಯ/ಖಂಡ/ವಲ್ಲಿ	ಮಂತ್ರಸಂಖ್ಯೆ
1.	ಈಶ	ಶುಕ್ಲಯಜುರ್ವೇದ	ವಾಜಸನೇಯ		18
2.	ಕೇನ	ಸಾಮವೇದ	ತಲವಕಾರ	4ಖಂಡ	35
3.	ಕಠ	ಕೃಷ್ಣಯಜುರ್ವೇದ	ತೈತ್ತಿರೀಯ	2ಖಂಡ, 6ವಲ್ಲಿ	119
4.	ಪ್ರಶ್ನ	ಅಥರ್ವವೇದ	ಶೌನಕ	6ಪ್ರಶ್ನ	67
5.	ಮುಂಡಕ	ಅಥರ್ವವೇದ	ಶೌನಕ	3ಅಧ್ಯಾಯ, 6ಖಂಡ	65
6.	ಮಾಂಡೂಕ್ಯ	ಅಥರ್ವವೇದ	ಶೌನಕ		12
7.	ತೈತ್ತಿರೀಯ	ಕೃಷ್ಣಯಜುರ್ವೇದ	ತೈತ್ತಿರೀಯ	3ವಲ್ಲಿ	31ಅನುವಾಕ
8.	ಐತರೇಯ	ಋಗ್ವೇದ	ಐತರೇಯ	4ಅಧ್ಯಾಯ,4ಖಂಡ	30
9.	ಛಾಂದೋಗ್ಯ	ಸಾಮವೇದ	ಛಾಂದೋಗ್ಯ ಬ್ರಾಹ್ಮಣ	8ಅಧ್ಯಾಯ,154ಖಂಡ	628
10.	ಬೃಹದಾರಣ್ಯಕ	ಶುಕ್ಲಯಜುರ್ವೇದ	ಶತಪಥಬ್ರಾಹ್ಮಣ	6ಅಧ್ಯಾಯ,47ಖಂಡ	435

2.15 ದಶೋಪನಿಷತ್ತುಗಳ ಸಂಕ್ಷಿಪ್ತ ಪರಿಚಯ

ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತರೀಯ, ಐತರೇಯ, ಛಾಂದೋಗ್ಯ ಮತ್ತು ಬೃಹದಾರಣ್ಯಕ ಉಪನಿಷತ್ತುಗಳು ಪ್ರಮುಖ ಮೂಲ ಉಪನಿಷತ್ತು ಗಳಾಗಿವೆ. ಇವುಗಳ ಸಂಕ್ಷಿಪ್ತ ಪರಿಚಯವನ್ನು ಈ ಮುಂದಿನಂತೆ ನೋಡಬಹುದು.

2.15.1 ಈಶಾವಾಸ್ಯೋಪನಿಷತ್

ಈಶಾವಾಸ್ಯೋಪನಿಷತ್ತು ಯಜುರ್ವೇದ ಶಾಖೆಯಾದ ಶುಕ್ಲಯಜುರ್ವೇದದ ವಾಜಸನೇಯ ಸಂಹಿತೆಯ 40ನೇಯ ಅಧ್ಯಾಯಕ್ಕೆ ಸೇರಿದೆ. ಈ ಉಪನಿಷತ್ತು **"ಈಶಾ ವಾಸ್ಯಮಿದಂ ಸರ್ವಂ"** ಎಂಬ ಮಂತ್ರದಿಂದ ಪ್ರಾರಂಭವಾಗಿರುವುದರಿಂದ ಇದಕ್ಕೆ 'ಈಶಾವಾಸ್ಯೋಪನಿಷತ್ತು' ಅಥವಾ 'ಈಶೋಪನಿಷತ್ತು' ಎಂದು ಕರೆಯಲಾಗಿದೆ. ವಾಜಸನೇಯ ಸಂಹಿತೆಗೆ ಸೇರಿದುದರಿಂದ ಇದಕ್ಕೆ. "ವಾಜಸನೇಯ ಸಂಹಿತೋಪನಿಷತ್" ಎಂದೂ ಕರೆಯುತ್ತಾರೆ.

ಈ ಉಪನಿಷತ್ತು ಅತೀ ಚಿಕ್ಕದಾದರೂ ಅರ್ಥಗಾಂಭೀರ್ಯತೆಯಲ್ಲಿ ಮಹತ್ವದ ಪಾತ್ರವಹಿಸಿದೆ. ಇದು ಕರ್ಮ ಮತ್ತು ಜ್ಞಾನಯೋಗಗಳ ಸಮುಚ್ಚಯವಾಗಿದೆ. ಇಲ್ಲಿನ ಪ್ರತ್ಯೇಕ ಮಂತ್ರಗಳು ಅಜ್ಞಾನವನ್ನು ಕಳೆಯುವಂಥವುಗಳಾಗಿವೆ. ಇದು ಭಗವದ್ಗೀತೆಯ 18 ಅಧ್ಯಾಯಗಳಿಗೆ ಇಲ್ಲಿ 18 ಮಂತ್ರಗಳು ಸಂವಾದಿಯಾಗಿವೆ ಎಂದು ವಿದ್ವಾಂಸರು ಭಾವಿಸುತ್ತಾರೆ.[98]

ಈಶಾವಾಸ್ಯೋಪನಿಷತ್ತು ಆತ್ಮನ ಸ್ವರೂಪ, ಆತ್ಮ ಸಾಕ್ಷಾತ್ಕಾರದ ಮಾರ್ಗ ಮತ್ತು ಪರಮ ಪುರುಷಾರ್ಥವಾದ ಮುಕ್ತಿಯ ಸ್ವರೂಪವನ್ನು ಬಲು ಸುಂದರವಾಗಿ ಪ್ರತಿಪಾದಿಸುತ್ತದೆ.

ಬ್ರಹ್ಮಾರ್ಪಣಂ ಬ್ರಹ್ಮಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಮ್।
ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮ ಸಮಾಧಿನಾ॥[99]

ಎಂಬ ಗೀತೆಯ ಶ್ಲೋಕಾರ್ಥದ ಭಾವವನ್ನು ಹೊಂದಿ, ಜಗತ್ತಿನಲ್ಲಿರುವ ವಸ್ತುಗಳನ್ನು ಅನುಭೋಗಿಸುತ್ತಿದ್ದರೆ. ಮಾನವನಿಗೆ ಯಾವುದೇ ರೀತಿಯ ದುಃಖ ಕರ್ಮಗಳು ತಾಕಲಾರವು. ಈಶ್ವರನನ್ನು ಸ್ಮರಿಸಿದೆ ಮರೆತು ಹೋದರೆ ಅಮೃತವು ವಿಷವಾಗಿ ದುಃಖಕ್ಕೆಡೆ ಮಾಡುತ್ತದೆ. ಈ ಉಪನಿಷತ್ತು ತ್ಯಾಗಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿರುವುದು ಕಂಡು ಬರುತ್ತದೆ. **"ತೇನ ತ್ಯಕ್ತೇನ ಭುಂಜೀಥಾ"** ಎನ್ನುವಲ್ಲಿ ನಮಗಾಗಿ ಸಂಪಾದಿಸುವುದರಲ್ಲಿ ಎಷ್ಟು ಆನಂದ, ಸಂತೋಷವಿದೆಯೋ ಅಷ್ಟೇ ಸಂತೋಷ ತ್ಯಾಗ ಮಾಡುವುದರಲ್ಲಿದೆ ಎಂದು ತಿಳಿಸುತ್ತದೆ.

ಈ ಜಗತ್ತು ಕರ್ಮಭೂಮಿಯಾಗಿದೆ. ಕರ್ಮಭೂಮಿಯಾದ ಇಲ್ಲಿ ಕರ್ಮವನ್ನು ನಿಷ್ಕಾಮದಿಂದ ಮಾಡುತ್ತ, ನೂರು ವರ್ಷಗಳವರೆಗೆ ಬಾಳಲು ಮಾರ್ಗದರ್ಶನ ನೀಡುವುದು **"ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾಃ।"**[100] ಶಾಸ್ತ್ರ ವಿರುದ್ಧವಲ್ಲದ ಕರ್ಮವನ್ನು ಎಲ್ಲರೂ ಒಪ್ಪುವಂತೆ ಮಾಡಿ ಅಹುದೆನಿಸಿಕೊಂಡರೆ ಸಾಕು.

ಈಶಾವಾಸ್ಯೋಪನಿಷತ್ತು ಇಡೀ ಜಗತ್ತು ಈಶ್ವರನಿಂದ ವ್ಯಾಪ್ತವಾಗಿದೆ. ಮನುಷ್ಯ ತಾನು ಮಾಡುವ ಕರ್ಮಗಳನ್ನು ತನ್ನ ಕರ್ತವ್ಯವೆಂದು ಮಾಡುತ್ತ ನೂರು ವರ್ಷಗಳ

ಕಾಲ ಜೀವಿಸಬೇಕು. ಯಾರು ಆತ್ಮನ ಸ್ವರೂಪವನ್ನು ತಿಳಿದು, ಆತ್ಮವನ್ನು ಸಾಕ್ಷಾತ್ಕಾರ ಮಾಡಿಕೊಂಡು, ಇತರರಲ್ಲಿ ಆತ್ಮವನ್ನೇ ಕಾಣುವನೋ ಅವನು ಶೋಕ ಮತ್ತು ಮೋಹಗಳಿಂದ ಮುಕ್ತನಾಗುತ್ತಾನೆ ಎಂದು ಬೋಧಿಸುತ್ತದೆ.

2.15.2 ಕೇನೋಪನಿಷತ್

ಸಾಮವೇದಕ್ಕೆ ಸೇರಿದ ಈ ಉಪನಿಷತ್ತು 'ಕೇನ' ಎಂಬ ಪದದಿಂದ ಪ್ರಾರಂಭವಾಗುವುದರಿಂದ ಇದನ್ನು ಕೇನೋಪನಿಷತ್ತೆಂದು ಕರೆಯಲಾಗುತ್ತದೆ. ಇದು ಸಾಮವೇದದ ಜೈಮಿನೀಯ ಪರಂಪರೆಯ ತಲವಕಾರ ಬ್ರಾಹ್ಮಣದ ಭಾಗವಾಗಿರುವುದರಿಂದ ಇದಕ್ಕೆ ತವಲಕಾರೋಪನಿಷತ್ತೆಂದೂ ಕರೆಯುತ್ತಾರೆ.

ಇದನ್ನು ನಾಲ್ಕು ಖಂಡಗಳಾಗಿ ವಿಭಜಿಸಲಾಗಿದೆ. ಮೊದಲಿನ ಎರಡು ಖಂಡಗಳು ಪದ್ಯರೂಪದಲ್ಲಿ ನಂತರದವರೆಡು ಗದ್ಯರೂಪದಲ್ಲಿವೆ. ಮಂತ್ರಗಳ ಸಂಖ್ಯೆ ಹದಿಮೂರು, ಗದ್ಯಗಳ ಸಂಖ್ಯೆ ಇಪ್ಪತ್ತೊಂದು ಇರುತ್ತದೆ.

ಕೇನೋಪನಿಷತ್ತಿನ ಪ್ರಥಮ ಖಂಡವು ಮನಸ್ಸು, ಪ್ರಾಣ, ಮಾತು, ಚಕ್ಷುಶೋತ್ರ ಮೊದಲಾದವುಗಳು ಯಾರಿಂದ ಪ್ರೇರಿತವಾಗಿ ಕಾರ್ಯಚಟುವಟಿಕೆಯಲ್ಲಿ ತೊಡಗುತ್ತವೆ ಎಂಬ ಪ್ರಶ್ನೆಯಿಂದ ಪ್ರಾರಂಭವಾಗಿ, ಬ್ರಹ್ಮನು ಇವೆಲ್ಲಕ್ಕೂ ಕಾರಣ, ಪ್ರೇರಣವೆಂದೂ ಅವನು ಕಿವಿಗಳಿಗೆ ಕಿವಿಯಾಗಿ, ಮನಸ್ಸಿಗೆ ಮನಸ್ಸಾಗಿ, ವಾಕ್ಕಿಗೆ ವಾಕಾಗಿದ್ದಾನೆಂದು ಮೊದಲಾದ ಉಪದೇಶವನ್ನು ಕಾಣುತ್ತೇವೆ. ಯಾವುದು ಮಾತಿನಿಂದ ವ್ಯಕ್ತವಾಗುವುದಿಲ್ಲವೋ ಯಾವುದರಿಂದ ಮಾತು ವ್ಯಕ್ತವಾಗುವುದಿಲ್ಲವೋ ಅದನ್ನು ನೀನು ಬ್ರಹ್ಮವೆಂದು ತಿಳಿ. ಯಾವುದನ್ನು ಮನಸ್ಸಿನಿಂದ ಮನನ ಮಾಡಲು ಆಗುವುದಿಲ್ಲವೋ ಯಾವುದರಿಂದ ಮನಸ್ಸನು ಮನನ ಮಾಡಲ್ಪಟ್ಟಿದೆ ಎಂದು ಹೇಳುವರೋ ಅದನ್ನೇ ನೀನು ಬ್ರಹ್ಮವೆಂದು ತಿಳಿ. ಯಾವುದನ್ನು ಕಣ್ಣಿನಿಂದ ನೋಡುವುದಕ್ಕೆ ಆಗುವುದಿಲ್ಲವೋ, ಯಾವುದನ್ನು ಕಣ್ಣುಗಳಿಂದ ನೋಡುತ್ತಾನೆಯೋ ಅದನ್ನೇ ನೀನು ಬ್ರಹ್ಮವೆಂದು ತಿಳಿ, ಯಾವುದನ್ನು ಕಿವಿಯಂದ ಕೇಳುವುದಕ್ಕೆ ಆಗುವುದಿಲ್ಲವೋ ಯಾವುದರಿಂದ ಕಿವಿ ಕೇಳಲ್ಪಡುವುದೋ ಅದನ್ನೇ ನೀನು ಬ್ರಹ್ಮವೆಂದು ತಿಳಿ. ಯಾವುದನ್ನು ಘ್ರಾಣದಿಂದ ಮೂಸುವುದಕ್ಕೆ ಆಗುವುದಿಲ್ಲವೋ ಯಾವುದರಿಂದ ಘ್ರಾಣ ಗ್ರಹಿಸಬಹುದೋ ಅದನ್ನೇ ನೀನು ಬ್ರಹ್ಮವೆಂದು ತಿಳಿ. ಎಂದು ಮೊದಲ ಖಂಡದಲ್ಲಿ ನಿರೂಪಿಸಲಾಗಿದೆ.

ದ್ವಿತೀಯ ಖಂಡದಲ್ಲಿ ಬ್ರಹ್ಮನನ್ನು ಕುರಿತು ನಾನು ತಿಳಿದುಕೊಂಡಿದ್ದೇನೆ ಎಂದರೆ ಇನ್ನೂ ತಿಳಿದಿಲ್ಲವೆಂದು. ತಿಳಿದಿಲ್ಲವೆಂದರೆ ತಿಳಿದಿದ್ದಾನೆಂಬ ದ್ವಿರುಕ್ತಿಯನ್ನು ಕಾಣುತ್ತೇವೆ. ಬ್ರಹ್ಮಜ್ಞಾನ ಹೊಂದುವುದು ಕಷ್ಟಕರ. ನಾವು ತಿಳಿದದ್ದು ಅಲ್ಪವೇ ಆಗಿದೆ ಎಂದು ತಿಳಿಸುತ್ತದೆ. ಹಾಗೆಯೇ ಅವನ ಅರಿವು ಇಲ್ಲಿಯೇ ಮಾಡಿಕೊಂಡರೇ ಉತ್ತಮ. ತಿಳಿದುಕೊಳ್ಳದಿದ್ದರೆ ವಿನಾಶ. ಧೀರರು ಪ್ರತಿಯೊಂದು ಜೀವರಾಶಿಗಳಲ್ಲಿಯೂ ಬ್ರಹ್ಮನನ್ನು

ಕಂಡು ಈ ಲೋಕದಿಂದ ಬಿಡುಗಡೆ ಹೊಂದಿ ಅಮೃತರಾಗುತ್ತಾರೆ ಎಂಬ ಉಪದೇಶವು ಇಲ್ಲಿದೆ.

ತೃತೀಯ ಹಾಗೂ ಚತುರ್ಥ ಖಂಡಗಳಲ್ಲಿ ಉಮಾ–ಹೈಮವತಿಯು ರೋಚಕವಾದ ಆಖ್ಯಾನಗಳ ಪರಬ್ರಹ್ಮದ ಶಕ್ತಿ ಹಾಗೂ ದೇವತೆಗಳ ಅಲ್ಪ ಶಕ್ತಿಯ ಸುಂದರ ನಿದರ್ಶನವನ್ನು ಕಾಣುತ್ತೇವೆ. ದೇವಾಸುರರ ಯುದ್ಧದಲ್ಲಿ ದೇವತೆಗಳಿಗೆ ಬ್ರಹ್ಮದ ಸಹಾಯದಿಂದ ಜಯ ಲಭಿಸುತ್ತದೆ. ಆದರೆ ದೇವತೆಗಳು ತಮ್ಮ ಸ್ವಪ್ರಯತ್ನದಿಂದಲೇ ಅದನ್ನು ಪಡೆದೆವು ಎಂಬ ತಪ್ಪು ಭಾವಿಸುವರು. ಇವರ ತಪ್ಪನ್ನು ತಿದ್ದುವುದಕ್ಕಾಗಿ ಬ್ರಹ್ಮ ಒಂದು ಅದ್ಭುತವಾದ ರೂಪವನ್ನು ಧರಿಸಿ ಇವರ ಮುಂದೆ ನಿಂತನು. ದೇವತೆಗಳು ಒಬ್ಬೊಬ್ಬರಾಗಿ ಅದನ್ನು ತಿಳಿಯಲು ಪ್ರಯತ್ನಪಟ್ಟು, ಕೊನೆಗೆ ಸೋತು ಇಂದ್ರನೇ ಅದನ್ನು ತಿಳಿಯಲು ಹೋಗುವನು. ಆಗ ಆ ಸ್ವರೂಪ ಮಾಯವಾಗಿ ಅಲ್ಲೊಂದು ಸುಂದರವಾದ ಪ್ರತಿಮೆಯಾಗಿ ದೇವಿ ನಿಲ್ಲುವಳು. ಅವಳೇ ಉಮಾಹೈಮಾವತಿ. ಅವಳು ದೇವತೆಗಳಿಗೆ ಬ್ರಹ್ಮನ ದಯೆಯಿಂದ ಅವರಿಗೆ ವಿಜಯ ಲಭಿಸಿದೆ ಎಂದು ಹೇಳುವಳು.

2.15.3 ಕಠೋಪನಿಷತ್

ಕೃಷ್ಣಯಜುರ್ವೇದದ ಕಾಠಕ ಶಾಖೆಗೆ ಸೇರಿದುದರಿಂದ ಈ ಉಪನಿಷತನ್ನು ಕಠೋಪನಿಷತ್ತು ಅಥವಾ ಕಾಠಕೋಪನಿಷತ್ ಎಂದು ಕರೆಯುತ್ತಾರೆ. ಈ ಉಪನಿಷತ್ತು ಅತ್ಯಂತ ಪ್ರಸಿದ್ಧವೂ ಆದರಣೀಯವೂ ಆಗಿದೆ. ಭಾರತೀಯ ಆಧ್ಯಾತ್ಮ ರಹಸ್ಯವನ್ನು ವಿವರಿಸುವ ವಿಶಿಷ್ಟ ಉಪನಿಷತ್ತೆನಿಸಿದೆ.

ಈ ಉಪನಿಷತ್ತಿನಲ್ಲಿ ಮೂರು–ಮೂರು ವಲ್ಲಿಗಳನ್ನೊಳಗೊಂಡ ಎರಡು ಅಧ್ಯಾಯಗಳಿವೆ. ಈ ಉಪನಿಷತ್ತನ್ನು ನಚಿಕೇತೋಪಾಖ್ಯಾನದ ಮೂಲಕ ವಿವರಿಸ ಲಾಗಿದೆ. ಈ ಉಪನಿಷತ್ತು ಒಂದು ನಾಟಕದಂತೆ ಪ್ರಾರಂಭವಾಗುತ್ತದೆ. ಉದ್ದಾಲಕನು ವಿಶ್ವಜಿತ್ ಯಾಗವನ್ನು ಮಾಡಿ, ಯಜ್ಞದ ನಂತರ ತನ್ನದೆಂಬ ಉತ್ತಮೋತ್ತಮ ವಸ್ತುಗಳನ್ನು ದಾನವನ್ನು ಕೊಡಬೇಕಾಗುತ್ತದೆ. ಅದರೆ ಉದ್ದಾಲಕನು ಉಪಯೋಗ ವಿಲ್ಲದ ಅನುತ್ತಮವಾದ ವಸ್ತುಗಳನ್ನು ದಾನವಾಗಿ ನೀಡುವನು. **"ಪೀತೋದಕಾ ಜಗ್ಧತೃಣಾ ದುಗ್ಧದೋಹಾ ನಿರಿಂದ್ರಿಯಾಃ"**[101] ವೆಂಬುದಾಗಿರುವ ಹಸುಗಳನ್ನು ದಾನರೂಪವಾಗಿ ಕೊಡುತ್ತಿರುವುದನ್ನು ನಚಿಕೇತನು ಗಮನಿಸಿ, ತನ್ನ ತಂದೆಯು ಮಾಡುತ್ತಿರುವ ದಾನದಿಂದ ಇಷ್ಟಾರ್ಥ ಸಿದ್ಧಿಯಾಗುವುದಿಲ್ಲವೆಂದು ತಿಳಿದು "ನನ್ನನ್ನು ಯಾರಿಗೆ ದಾನವಾಗಿ ಕೊಡುವಿ?" ಎಂದು ತಂದೆಯನ್ನು ಕೇಳುತ್ತಾನೆ. ನಚಿಕೇತ ಬಿಡದೆ ಕೇಳಿದಾಗ ಕೊಪಗೊಂಡ ತಂದೆ ನಿನ್ನನ್ನು ಮೃತ್ಯುವಿಗೆ ಕೊಡುತ್ತೇನೆ **"ಮೃತ್ಯವೇ ತ್ವಾಂ ದದಾಮಿ"**[102] ಎನ್ನುತ್ತಾನೆ.

ತಂದೆಯ ಆಜ್ಞೆಯ ಪ್ರಕಾರ ಯಮನ ಹತ್ತಿರ ಹೋದನು. ಯಮನು ಎಲ್ಲಿಯೋ ಹೋಗಿದ್ದುದರಿಂದ ನಚಿಕೇತನು ಮೂರು ದಿವಸಗಳ ಕಾಲ ಊಟಮಾಡದೆ ಕಳೆದನು. ಯಮನು ಹಿಂದಿರುಗಿ ಬಂದು ಗಮನಿಸಿದಾಗ ನಮಸ್ಕಾರಕ್ಕೆ ಅರ್ಹನಾದ ಅತಿಥಿಯು ತನ್ನ ಮನೆಯಲ್ಲಿ ಮೂರು ದಿನಗಳು ಊಟ ಮಾಡದೆ ಇದ್ದುದರ ದೋಷ ಪರಿಹಾರಕ್ಕೆ ಮೂರು ವರಗಳನ್ನು ಅನುಗ್ರಹಿಸುವನು. ನಚಿಕೇತನು ಪ್ರಥಮವರದಲ್ಲಿ ತನ್ನ ತಂದೆಯು ತನ್ನ ವಿಷಯದಲ್ಲಿ ಪ್ರಸನ್ನನಾಗಿರಬೇಕು. ದ್ವಿತೀಯ ವರದಲ್ಲಿ ಸ್ವರ್ಗಕ್ಕೆ ಸಾಧನವಾದ ಅಗ್ನಿ ವಿದ್ಯೆಯನ್ನು ಮತ್ತು ತೃತೀಯ ವರದಲ್ಲಿ ಆತ್ಮತತ್ತ್ವವನ್ನು ಕುರಿತು ಉಪದೇಶ ಮಾಡಬೇಕೆಂದು ಕೇಳಿದನು. ದೇಹಾವಸಾನವಾದ ನಂತರ ಆತ್ಮನು ಇದ್ದಾನೆಯೇ ಅಥವಾ ಇಲ್ಲವೇ ಎಂಬುದು ನಚಿಕೇತನ ಪ್ರಶ್ನೆಯಾಗಿದೆ. ನಚಿಕೇತನು ಆತ್ಮತತ್ತ್ವವನ್ನು ತಿಳಿದುಕೊಳ್ಳಲು ಅರ್ಹನೋ ಎಂಬುದನ್ನು ತಿಳಿದುಕೊಳ್ಳಲು ಯಮನು ಇವನನ್ನು ನಾನಾ ಬಗೆಯ ಭೋಗದ ಆಶೆಗಳಿಂದ ಪ್ರಲೋಭನಗೊಳಿಸಲು ಪ್ರಯತ್ನಿಸಿದನು. ಆದರೆ ನಚಿಕೇತನು ಇಂದ್ರಿಯಗಳನ್ನು ಕ್ಷೀಣಿಸುವ ಸುಖವನ್ನು ಬಯಸದೆ ಆತ್ಮಾನಂದ ಹೊಂದಲು ಬಯಸಿದನು.

ಎರಡನೆಯ ವಲ್ಲಿಯಲ್ಲಿ ನಚಿಕೇತನು ಬ್ರಹ್ಮ ವಿದ್ಯೆಗೆ ಅರ್ಹನೆಂದು ಅರಿತು ಯಮನು ಹೀಗೆ ಉಪದೇಶ ಮಾಡಿದನು. ವಿದ್ಯೆಯಲ್ಲಿ ಎರಡು ವಿಧ, ಒಂದು ಶ್ರೇಯಸ್ಸು, ಇನ್ನೊಂದು ಪ್ರೇಯಸ್ಸು ಅವಿವೇಕಿಯು ಲೌಕಿಕ ಸುಖಕ್ಕಾಗಿ ಪ್ರೇಯಸ್ಸನ್ನೇ ಆರಿಸಿಕೊಂಡು ಸಂಸಾರ ಬಂಧನದಲ್ಲಿ ಸಿಲುಕಿಕೊಳ್ಳುತ್ತಾನೆ. ಧೀಮಂತನು ಶ್ರೇಯಸ್ಸನ್ನೇ ಆರಿಸಿಕೊಂಡು ಮೋಕ್ಷ ಹೊಂದುವನು. ಆತ್ಮಪ್ರಾಪ್ತಿಗೆ ಸದಾಚಾರ, ಇಂದ್ರಿಯ ನಿಗ್ರಹ ಅತ್ಯಂತ ಅವಶ್ಯಕವೆಂದು ಉಪದೇಶಿಸುವನು.

ಮೂರನೆಯ ವಲ್ಲಿಯಲ್ಲಿ ಶರೀರವನ್ನು ರಥಕ್ಕೆ ಹೋಲಿಸಿ, ಆತ್ಮನೆ ರಥದ ಒಡೆಯ, ಬುದ್ಧಿ ಅದರ ಸಾರಥಿ, ಮನಸ್ಸು ಕಡಿವಾಣ, ಇಂದ್ರಿಯಗಳು ಕುದುರೆಗಳು, ಶಬ್ದಾದಿ ವಿಷಯಗಳು ಆ ಕುದುರೆಗಳು ಹೋಗುವ ದಾರಿಗಳು. ಯಾವನು ತನ್ನ ಇಂದ್ರಿಯಗಳನ್ನು ತನ್ನ ಹತೋಟಿಯಲ್ಲಿಟ್ಟುಕೊಳ್ಳುವನೋ ಅವನು ಪರಮಪದವನ್ನು ಮುಟ್ಟುತ್ತಾನೆಂದು ಯಮನು ಉಪದೇಶ ಮಾಡುವನು.

ಎರಡನೇ ಅಧ್ಯಾಯದ ಮೊದಲನೆಯ ವಲ್ಲಿಯಲ್ಲಿ ಇಂದ್ರಿಯಗಳ ಸ್ವಭಾವ ಹೇಳುತ್ತ ಅವು ಅಂತರಾತ್ಮವನ್ನು ನೋಡದೆ ವಿಷಯಗಳತ್ತ ಮುಖಮಾಡಿ ಬಾಹ್ಯದಲ್ಲಿಯೇ ಇರುತ್ತವೆ. ಅಮೃತತ್ತ್ವವನ್ನು ಬಯಸುವವ ಮಾತ್ರ ಇಂದ್ರಿಯಗಳನ್ನು ಪ್ರತ್ಯಾಗಾತ್ಮವನ್ನು ನೋಡುವಂತೆ ಮಾಡುತ್ತಾನೆ. ಆತ್ಮನು ಅಂಗುಷ್ಟ ಮಾತ್ರ ಪ್ರಮಾಣ ವುಳ್ಳವನಾಗಿದ್ದಾನೆ. ಇವನೇ ಭೂತ–ಭವಿಷ್ಯತ್ತುಗಳ ಒಡೆಯನು. ಇಂದು, ನಾಳೆ ಎಂದಿಗೂ ಬದಲಾವಣೆಯನ್ನು ಕಾಣದವನು. ತಿಳಿಯಾದ ನೀರಿನಲ್ಲಿ ತಿಳಿನೀರು ಹಾಕಿದರೆ ಒಂದಾಗುವಂತೆ, ಜ್ಞಾನಿಯು ಆತ್ಮನಲ್ಲಿ ಒಂದಾಗುವನು.

ಎರಡನೆಯ ವಲ್ಲಿಯಲ್ಲಿ ಬ್ರಹ್ಮನ ಸ್ವರೂಪವನ್ನೇ ಕುರಿತಾದ ವಿಸ್ತಾರವಾದ ಉಪದೇಶವನ್ನು ಕಾಣುತ್ತೇವೆ. ಶರೀರವೆಂಬ ಪುರದಲ್ಲಿ ಆತ್ಮನು ಇರುವುದರಿಂದ ಪುರುಷನೆಂದು ಕರೆಯಿಸಿಕೊಳ್ಳುತ್ತಾನೆ. ಅವನು ಸರ್ವವ್ಯಾಪಕನೂ ಹೌದು. ಒಂದು ಪುರದಲ್ಲಿ ಮಾತ್ರವಲ್ಲ ಇಂದ್ರಿಯ ಪ್ರಾಣಗಳ ಕಾರ್ಯಗಳು ಆತನಿಂದಲೇ ನಡೆಯುತ್ತಿರುತ್ತವೆ. ಇವನನ್ನು ಮೀರಲು ಯಾರಿಗೂ ಸಾಧ್ಯವಿಲ್ಲ. ಮರಣ ಹೊಂದಿದ ಮೇಲೆ ಅದರ ಕರ್ಮ ಹಾಗೂ ಜ್ಞಾನಕ್ಕನುಗುಣವಾಗಿ ಶರೀರವನ್ನು ಹೊಂದುತ್ತಾರೆ.

ಮೂರನೆಯ ವಲ್ಲಿಯಲ್ಲಿ ಸಂಸಾರ ಸ್ವರೂಪ ವಿವರಿಸುವುದರ ಮೂಲಕ ಬ್ರಹ್ಮ ಸ್ವರೂಪ ನಿರ್ಧರಿಸುತ್ತದೆ. ಸಂಸಾರ ವೃಕ್ಷಕ್ಕೆ ಬ್ರಹ್ಮನೇ ಮೂಲ. ಅವನ ಶಕ್ತಿಯ ನಿಯಮಾನುಸಾರದಿಂದ ಸೂರ್ಯ, ಚಂದ್ರ, ಅಗ್ನಿ, ವಾಯುಗಳು ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತವೆ. ಬ್ರಹ್ಮಸ್ವರೂಪವು ಕಣ್ಣಿಂದ ನೋಡಲಾಗದು. ಮನಸ್ಸಿನಿಂದ ಮನನ ಮಾಡಲು ಆಗದು, ಹೀಗೆ ಮೊದಲಾಗಿ ಯಮನು ನಚಿಕೇತನಿಗೆ ಆತ್ಮವಿದ್ಯೆಯನ್ನು ಉಪದೇಶ ಮಾಡಿದ್ದಾನೆ.

2.15.4 ಪ್ರಶ್ನೋಪನಿಷತ್

ಹೆಸರೇ ಸೂಚಿಸಿರುವಂತೆ ಈ ಉಪನಿಷತ್ತು ಪ್ರಶ್ನೆಗಳಿಂದ ಕೂಡಿದೆ, ಸಂಪೂರ್ಣ ಗದ್ಯಮಯವಾದ ಈ ಉಪನಿಷತ್ತು ಅಥರ್ವವೇದಕ್ಕೆ ಸೇರಿದೆ. ಇಲ್ಲಿ ಆರು ಜನ ಜಿಜ್ಞಾಸು ಶಿಷ್ಯರು ಗುರುಗಳಾದ ಪಿಪ್ಪಲಾದ ಮಹರ್ಷಿಯೊಡನೆ ಮಾಡಿದ ಸಂವಾದ ರೂಪದ ಪ್ರಶ್ನೋತ್ತರಗಳನ್ನು ಈ ಉಪನಿಷತ್ತು ಹೊಂದಿದೆ.

ಮೊದಲನೆಯ ಪ್ರಶ್ನೆ ಕಬಂಧಿ, ಕಾತ್ಯಾಯನನು **"ಕುತೋ ಹ ವಾ ಇಮಾಃ ಪ್ರಜಾಃ ಪ್ರಜಾಯಂತ ಇತಿ"**[103] ಲೋಕದಲ್ಲಿ ಪ್ರಜೆಗಳು ಹೇಗೆ ಎಲ್ಲಿಂದ ಜನಿಸುತ್ತಾರೆ? ಎಂದು ಪ್ರಶ್ನಿಸುವರು. ಗುರುವಾದ ಪಿಪ್ಪಲಾದ ಮಹರ್ಷಿ ಅದಕ್ಕೆ ಪ್ರಜಾಪತಿಯ ತಪಸ್ಸಿನ ಫಲವಾಗಿ ಆದಿತ್ಯನೂ ಚಂದ್ರನೂ ಸೃಷ್ಟಿಯಾಗಿ ಅವರಿಂದ ಪ್ರಜಾಸೃಷ್ಟಿಯಾಯಿತು. ಎಂದು ಉತ್ತರಿಸುತ್ತಾನೆ.

ಎರಡನೇ ಪ್ರಶ್ನೆ **"ಕತ್ಯೇವ ದೇವಾಃ ಪ್ರಜಾಂ ವಿಧಾರಯಂತೇ ಕತರ ಏತತ್ ಪ್ರಕಾಶಯಂತೇ ಕಃ ಪುನರೇಷಾಂ ವರಿಷ್ಠ ಇತಿ"**[104] ದೇವತೆಗಳೆಷ್ಟು ಜನರಿದ್ದಾರೆ? ಪ್ರಜೆಗಳಿಗೆ ಆಧಾರಭೂತರು ಯಾರು? ಅವರಲ್ಲಿ ವರಿಷ್ಠರು ಯಾರು? ಎಂದು ಭಾರ್ಗವ, ವೈದರ್ಭಿಯರು ಕೇಳಿದರು. ಆಕಾಶ ವಾಯು, ಅಗ್ನಿ, ಕಾಲ, ಪೃಥ್ವೀ, ಮನಸ್ಸು, ಚಕ್ಷು, ಶ್ರೋತ್ರ ಇವರು ದೇವತೆಗಳು, ಇವರಲ್ಲಿ ವರಿಷ್ಠ 'ಪ್ರಾಣ', ಎಂದು ಉತ್ತರಿಸುವನು. ಈ ಪ್ರಶ್ನೆಯು ಅಷ್ಟ ದೇವತೆಗಳ ಜನನ ವಿಚಾರ ಹಾಗೂ ಕೊನೆಯಲ್ಲಿ ಪ್ರಾಣ ಸ್ವರೂಪಿ ಬ್ರಹ್ಮನ ಸ್ತುತಿಯನ್ನು ಒಳಗೊಂಡಿದೆ.

ಮೂರನೆಯ ಪ್ರಶ್ನೆ **"ಕುತ ಏಷ ಪ್ರಾಣೋ ಜಾಯತೇ"**[105] ಈ ಪ್ರಾಣವು ಎಲ್ಲಿಂದ ಜನಿಸಿದೆ? ಎಂದು ಅಶ್ವಲಾಯನ ಪ್ರಶ್ನಿಸಿದನು. ಇದಕ್ಕೆ ಉತ್ತರ ಸಾಮ್ರಾಟನಾದವನು ಬೇರೆ ಬೇರೆ ಗ್ರಾಮಗಳಲ್ಲಿ ಅಧಿಕಾರಿಗಳನ್ನು ನಿಯೋಜಿಸುವಂತೆ ಇದು ಇತರ ಪ್ರಾಣಗಳನ್ನು ನಿಯೋಜಿಸುತ್ತದೆ. ಪುಣ್ಯಾಧಿಕ್ಯವಾದರೆ ದೇವಲೋಕಕ್ಕೆ, ಪಾಪಾಧಿಕ್ಯವಾದರೆ ನರಕಕ್ಕೂ ಮೇಲ್ಮುಖವಾದ ನಾಡಿಯಿಂದ ಇದು ಉತ್ಕ್ರಮಿಸುತ್ತದೆ.

ನಾಲ್ಕನೆಯ ಪ್ರಶ್ನೆ ಸೌರ್ಯಾಯಣಿ, ಗಾರ್ಗ್ಯರದು **"ಏತಸ್ಮಿನ್ ಪುರುಷೇ ಕಾನಿ ಸ್ವಪಂತಿ? ಕಾನ್ಯಸ್ಮಿಂ ಜಾಗ್ರತಿ? ಕತರ ಏಷ ದೇವಃ ಸ್ವಪ್ನಾನ್ ಪಶ್ಯತಿ? ಕಸ್ಯೈತತ್ ಸುಖಂ ಭವತಿ? ಕಸ್ಮಿನ್ನು ಸರ್ವೇ ಸಂಪ್ರತಿಷ್ಠಿತಾ ಭವಂತೀತಿ?"**[106] ಈ ಪುರುಷನಲ್ಲಿ ನಿದ್ರಿಸುವರಾರು ಜಾಗ್ರತರಾಗಿರುವವರಾರು? ಸ್ವಪ್ನಗಳನ್ನು ಅನುಭವಿಸುವವರಾರು? ಯಾರಲ್ಲಿ ಎಲ್ಲರೂ ಸಂಪ್ರತಿಷ್ಠಿತರಾಗುತ್ತಾರೆ? ಎಂಬುದಕ್ಕೆ ಉತ್ತರ ಶ್ರೋತ್ರಾದಿ ಇಂದ್ರಿಯಗಳು ಮನಸ್ಸಿನಲ್ಲಿ ಏಕೀಭವಿಸಿ ನಿದ್ರಿಸುವವು. ಪ್ರಾಣಾದಿ ಪಂಚವಾಯುಗಳು ಎಚ್ಚರವಾಗಿರುವವು. ಮನಸ್ಸೆ ದೇವ? ಸ್ವಪ್ನಗಳನ್ನು ಕಾಣುವಾತ ಪಕ್ಷಿಗಳು ವೃಕ್ಷದಲ್ಲಿರುವಂತೆ ಅಕ್ಷರ ರೂಪಿಯಾದ ಪರಮಾತ್ಮನಲ್ಲಿ ಎಲ್ಲರೂ ಸಂಪ್ರತಿಷ್ಠಿತರಾಗುತ್ತಾರೆ. ಎಂಬುದಕ್ಕೆ ಉತ್ತರ ಶ್ರೋತ್ರಾದಿ ಇಂದ್ರಿಯಗಳು ಮನಸ್ಸಿನಲ್ಲಿ ಏಕೀಭವಿಸಿ ನಿದ್ರಿಸುವವು. ಪ್ರಾಣಾದಿ ಪಂಚವಾಯುಗಳು ಎಚ್ಚರವಾಗಿರುವವು. ಮನಸ್ಸೆ ದೇವ ಸ್ವಪ್ನಗಳನ್ನು ಕಾಣುವಾತ. ಪಕ್ಷಿಗಳು ವೃಕ್ಷದಲ್ಲಿರುವಂತೆ ಅಕ್ಷರ ರೂಪಿಯಾದ ಪರಮಾತ್ಮನಲ್ಲಿ ಎಲ್ಲರೂ ಸಂಪ್ರತಿಷ್ಠಿತರಾಗುತ್ತಾರೆ.

ಐದನೆಯ ಪ್ರಶ್ನೆ ಶೈಬ್ಯ ಸತ್ಯಕಾಮನದು **"ಓಂಕಾರಮಭಿದ್ಯಾಯೀತ ಕತಯಂ ವಾವ ಸ ತೇನ ಲೋಕಂ ಜಯತೀತಿ?"**[107] ಪ್ರಣವೋಪಾಸಕ ಯಾವ ಲೋಕವನ್ನು ಸೇರುತ್ತಾನೆ? ಎಂಬುದು. ಉತ್ತರವಾಗಿ ಅವನು ಸೂರ್ಯನಲ್ಲಿ ಸಂಗತವಾಗಿ ಪಾಪವಿಮುಕ್ತನಾಗಿ ಬ್ರಹ್ಮಲೋಕವನ್ನು ಸೇರುತ್ತಾನೆಂದು ಪಿಪ್ಪಲಾದ ಋಷಿ ಹೇಳುತ್ತಾನೆ.

ಕೊನೆಯ ಪ್ರಶ್ನೆ ಸುರೇಶ, ಭಾರದ್ವಾಜರು **"ಷೋಡಶ ಕಲಂ ಭಾರದ್ವಾಜ ಪುರುಷಂ ವೇತ್ಥ?"**[108] ಷೋಡಶಕಲ ಪುರುಷನ ವಿಚಾರವಾಗಿ ಕೇಳಿದರು. ಷೋಡಶ ಕಲೆಗಳು ಹೃದಯ ಪುಂಡರೀಕಾಕಾಶದ ಮಧ್ಯದಲ್ಲಿ ಸಂಭವಿಸುವುದರಿಂದ ಆ ಪುರುಷ ಶರೀರದೊಳಗಿದ್ದಾನೆಂಬ ಉತ್ತರವಿದೆ. ಸಮಾಧಾನ ಹೊಂದಿದ ಆರು ಜನ ಶಿಷ್ಯರು ತಮ್ಮ ಅಜ್ಞಾನವನ್ನು ಹೋಗಲಾಡಿಸಿದ ಗುರುಗಳಿಗೆ "ಅವಿದ್ಯೆಯಿಂದ ಪಾರು ಮಾಡಿದ ನೀನೇ ನಮ್ಮ ತಂದೆ" ಎಂದು ವಂದಿಸಿ ಕೊಂಡಾಡುತ್ತಾ ಹೊರಟರು.

2.15.5 ಮುಂಡಕೋಪನಿಷತ್

ಈ ಉಪನಿಷತ್ತು ಅಥರ್ವವೇದದ ಶೌನಕ ಶಾಖೆಗೆ ಸೇರಿದೆ. ಶಬ್ದಗಾಂಭೀರ್ಯ, ಲಲಿತವಾದ ಛಂದಸ್ಸುಗಳು ಮೊದಲಾದ ಗುಣಗಳನ್ನು ಹೊಂದಿ ಈ ಉಪನಿಷತ್ತು ರಮಣೀಯವಾಗಿದೆ. ಪ್ರತಿಯೊಂದು ಮಂತ್ರವು ಮನೋಹರವಾಗಿವೆ. ಕ್ಷೌರ ಮಾಡಿ

ಕೊಂಡ ತಲೆಗೆ ಮುಂಡ ಎಂದು ಕರೆಯುವುದರಿಂದ ಈ ಉಪನಿಷತ್ತಿಗೆ ಮುಂಡಕೋಪ ನಿಷತ್ತು ಹೆಸರು ಬಂದಿರಬಹುದು. ಅಥವಾ ಮುಂಡನ ಮಾಡಿಸಿಕೊಂಡವು ಮಾತ್ರ ಓದಲು ಮೀಸಲಾಗಿರಬಹುದು. ಅಂದರೆ ಸಂನ್ಯಾಸಿಗಳೇ ಈ ಉಪನಿಷತ್ತು ಓದಲು ಅರ್ಹರೆಂದರ್ಥ.

ಪ್ರಾರಂಭದಲ್ಲಿ ಉಪನಿಷತ್ತು ಹೇಗೆ ಬೆಳೆದು ಬಂದಿದೆ ಎಂಬುದು ಸೂಚಿತ ವಾಗುತ್ತದೆ. ಬ್ರಹ್ಮ, ದೇವತೆಗಳಿಗೆ ಮೊದಲನೆಯವನಾಗಿ ವಿಶ್ವಕ್ಕೆ ಕರ್ತನಾಗಿ ಭುವನಕ್ಕೆ ರಕ್ಷಕನಾಗಿ ವ್ಯಕ್ತನಾದನು. ಅವನು ಸರ್ವ ವಿದ್ಯೆಗಳಿಗೆ ಆಶ್ರಮವಾಗಿರುವ ಬ್ರಹ್ಮವಿದ್ಯೆಯನ್ನು ಅಥರ್ವಣನೆಂಬ ಹಿರಿಯ ಮಗನಿಗೆ ಹೇಳಿದನು. ಅಥರ್ವಣನು ಅಂಗಿರಸನಿಗೆ ಹೇಳಿದನು. ಇವನು ಭಾರದ್ವಾಜ ಗೋತ್ರಕ್ಕೆ ಸೇರಿದ ಸತ್ಯವಹನಿಗೆ ಹೇಳಿದನು. ಪರಾವರವಾದ ವಿದ್ಯೆಯನ್ನು ಭಾರದ್ವಾಜನು ಅಂಗಿರಸನಿಗೆ ಹೇಳಿದನು. ಅಂಗಿರಸನು ಶೌನಕನಿಗೆ ಹೇಳುತ್ತಾನೆ.

ಈ ಉಪನಿಷತ್ತು ಮೂರು ಅಧ್ಯಾಯ ಅಥವಾ ಮುಂಡಕಗಳಿಂದ ಕೂಡಿದೆ. ಒಂದೊಂದು ಮುಂಡಕದಲ್ಲಿಯೂ ಎರಡೆರಡು ಖಂಡಗಳಿದ್ದು ಒಟ್ಟು 64 ಮಂತ್ರಗಳಿವೆ.

ಮೊದಲನೆಯ ಮುಂಡಕದಲ್ಲಿ ಎರಡು ವಿದ್ಯೆಗಳನ್ನು ತಿಳಿದುಕೊಳ್ಳಬೇಕೆಂದು ಬ್ರಹ್ಮಜ್ಞಾನಿಗಳು ಹೇಳುತ್ತಾರೆ. ಅವು ಪರಾ ಮತ್ತು ಅಪರಾ ವಿದ್ಯೆಗಳೆಂದು. ಬ್ರಹ್ಮ ವಿದ್ಯೆಯು ಪರಾವಿದ್ಯೆ ಮತ್ತು ಬ್ರಹ್ಮೇತರ ಅಂದರೆ ಲೌಕಿಕ ಜ್ಞಾನವು ಅಪರಾ ವಿದ್ಯೆಯೆಂದು ಹೇಳಿ, ಅವುಗಳ ವಿವರಣೆಯನ್ನು ಕೊಡುತ್ತದೆ. ಪರಾ ವಿದ್ಯೆಗಳು– ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಶಿಕ್ಷಾ, ಕಲ್ಪ, ವ್ಯಾಕರಣ, ನಿರುಕ್ತ, ಛಂದಸ್ಸು ಮತ್ತು ಜ್ಯೋತಿಷಗಳು ಯಾವುದರಿಂದ ಪರಬ್ರಹ್ಮನನ್ನು ಪಡೆಯಬಹುದೋ ಅದು ಇಲ್ಲಿ ಪರಾವಿದ್ಯೆಯೆಂದು ಕರೆಯಲ್ಪಟ್ಟಿದೆ. ಇಲ್ಲಿ ಕರ್ಮಕಾಂಡದ ನಿರಾಕರಣೆ, ಜ್ಞಾನಕಾಂಡದ ಪ್ರಾಧಾನ್ಯವನ್ನು ಕೊಡಲಾಗಿದೆ.

ದ್ವಿತೀಯ ಮುಂಡಕದಲ್ಲಿ ವೈದಿಕಾಚರಣೆಗಳನ್ನು ಸಾಧಕನು ಬಿರುಕು ಬಿಟ್ಟ ದೋಣಿಯಂತೆ ತೊರೆದು, ತ್ಯಾಗಜೀವನವನ್ನು ಸ್ವೀಕರಿಸಿ, ಬ್ರಹ್ಮವಿದ್ಯೆಯನ್ನು ಪಡೆಯಲು ಸಮರ್ಥನಾದ ಗುರುವಿನ ಹತ್ತಿರ ಸಾಗಬೇಕು. ಪ್ರಣವದ ಸಹಾಯದ ಮೂಲಕ ಬ್ರಹ್ಮನ ಉಪಾಸನೆಯ ವಿಧಾನವನ್ನು ಬಿಲ್ಲು–ಬಾಣಗಳ ಉಪಮೆಯ ಮೂಲಕ ಕಣ್ಣಿಗೆ ಕಟ್ಟುವಂತೆ ಇಲ್ಲಿ ಚಿತ್ರಿಸಲಾಗಿದೆ. ಜೀವಿಯ ಹೃದಯವನ್ನು ಬಂಧಿಸುವ ಅಜ್ಞಾನದ ಗ್ರಂಥಿಗಳೆಲ್ಲ ಆತ್ಮಸಾಕ್ಷಾತ್ಕಾರದಿಂದ ಕೊನೆಗೊಳ್ಳುವವು.

ಪ್ರಾಣ, ಮನಸ್ಸು, ಇಂದ್ರಿಯಗಳು, ಆಕಾಶ, ವಾಯು, ಅಗ್ನಿ, ನೀರು ಎಲ್ಲವನ್ನು ಧರಿಸಿರುವ ಪೃಥ್ವೀ ಇವುಗಳೆಲ್ಲ ಪುರುಷನಿಂದ ಸೃಷ್ಟಿಯಾಗಿವೆ. ಸೃಷ್ಟಿ, ಸ್ಥಿತಿ ನಾಶಗಳಿಗೆ ಸರ್ವಭೂತಾಂತರಾತ್ಮವಾದ ಬ್ರಹ್ಮ ವಸ್ತುವೇ ಕಾರಣವೆಂದು ತಿಳಿಸಿ, ಅಮೃತತ್ವಕ್ಕೆ

ಸೇತುವಾದ ಆ ಪರಮಾತ್ಮನೊಬ್ಬನನ್ನೇ ತಿಳಿಯಬೇಕೆಂದು ಹಾಗೂ ಇತರ ವಿಷಯಗಳಲ್ಲಿ ವಿರಕ್ತಿ ಹೊಂದಿರಬೇಕೆಂದು ಉಪದೇಶಗೈಯುವುದು.

ಮೂರನೆಯ ಮುಂಡಕವು ಕಾವ್ಯಾತ್ಮಕವಾಗಿ ಉಪಮಾ, ರೂಪಕಗಳಿಂದ ಉಪದೇಶಿಸುತ್ತದೆ. ವೇದಾಂತ ದರ್ಶನದ ವಿಚಾರವನ್ನು ಪ್ರತಿಪಾದಿಸುತ್ತದೆ. ಜೀವಾತ್ಮ ಮತ್ತು ಪರಮಾತ್ಮರನ್ನು ದೇಹವೆಂಬ ಒಂದೇ ಮರದಲ್ಲಿ ಕುಳಿತ ಎರಡು ಪಕ್ಷಿಗಳಿಗೆ ಹೋಲಿಸಲಾಗಿದೆ. ಒಂದು ಪಕ್ಷಿ ಕರ್ಮವೆಂಬ ಬಂಧನದಲ್ಲಿದ್ದರೆ ಇನ್ನೊಂದು ಮುಕ್ತವಾಗಿದೆ. ಯಾವನು ಪರಮಾತ್ಮನನ್ನು ಸಾಕ್ಷಾತ್ಕರಿಸಿಕೊಳ್ಳುವನೋ ಅವನು ಒಳಿತು-ಕೆಡಕುಗಳನ್ನು ಮೀರಿ ನಿಲ್ಲುತ್ತಾನೆ. ಅವನು ಪರಮಾತ್ಮನಲ್ಲಿ ಒಂದಾಗುತ್ತಾನೆ. **"ಸತ್ಯಮೇವ ಜಯತೇ ನಾನೃತಂ"**[109] ಸತ್ಯವೊಂದೇ ಗೆಲ್ಲುವುದು ಸುಳ್ಳಲ್ಲ, ಎಂಬ ಪ್ರಸಿದ್ಧವಾದ ಉಕ್ತಿಯನ್ನು ಈ ಉಪನಿಷತ್ತಿನಲ್ಲಿ ಕಾಣುತ್ತೇವೆ.

2.15.6 ಮಾಂಡೂಕ್ಯೋಪನಿಷತ್

ಇದು ಉಪನಿಷತ್ತುಗಳೆಲೆಲ್ಲಾ ಅತ್ಯಂತ ಚಿಕ್ಕದು. ಇದು ಕೇವಲ ಹನ್ನೆರಡು ಮಂತ್ರಗಳನ್ನು ಹೊಂದಿದೆ. ಇದು ಅಥರ್ವವೇದಕ್ಕೆ ಸೇರಿದೆ. ಶ್ರೀ ಶಂಕರರು ಇದಕ್ಕೆ ಭಾಷ್ಯ ಬರೆಯುವಾಗ **"ವೇದಾಂತಸಾರಸಂಗ್ರಹ"** ಎಂದು ಕರೆದಿದ್ದಾರೆ. ಮುಮುಕ್ಷುಗಳಿಗೆ ಮಾಂಡೂಕ್ಯೋಪನಿಷತ್ತು ಒಂದೇ ಸಾಕು, ಎಂಬ ವಾಡಿಕೆಯಾಗಿದೆ. ತಾತ್ತ್ವಿಕ ದೃಷ್ಟಿಯಿಂದ ಅತಿ ಪ್ರಮುಖವೆನಿಸಿದೆ. ಶ್ರೀ ಶಂಕರರ ಗುರುಗಳಾದ ಗೌಡಪಾದರು ಇದಕ್ಕೆ ಕಾರಿಕೆ ಬರೆದಿದ್ದಾರೆ. ಇದರ ಮೇಲೆ ಶಂಕರರು ಭಾಷ್ಯ ಬರೆದಿದ್ದಾರೆ.

ಎಲ್ಲ ಉಪನಿಷತ್ತುಗಳ ಗುರಿ ಬ್ರಹ್ಮಜ್ಞಾನ ಪಡೆಯುವುದಾದರೂ ಈ ಉಪನಿಷತ್ತಿನ ಮಾರ್ಗ ನೂತನತೆಯಿಂದ ಕೂಡಿದೆ. ನಿರಾಕಾರ ನಿರ್ಗುಣನಾದ ಈಶ್ವರನನ್ನು ಓಂಕಾರ ರೂಪವಾಗಿ ಕಾಣಬೇಕು. ಈ ಓಂಕಾರವು **"ಭೂತಂ ಭವದ್ಭವಿಷ್ಯದಿತಿ ಸರ್ವಮೊಂಕಾರ ಏವ"** ಆದಿಯಲ್ಲಿಯೂ ಈಗಲೂ, ಮುಂದೆಯೂ ಇರುವುದಷ್ಟೇ ಎಂದಿದೆ.

ಓಮಿತ್ಯೇತದಕ್ಷರಮಿದಂ ಸರ್ವಂ ತಸ್ಯೋಪವ್ಯಾಖ್ಯಾನಂ ಭೂತಂ ಭವದ್ಭವಿಷ್ಯದಿತಿ ಸರ್ವಮೊಂಕಾರ ಏವ। ಯಚ್ಚಾನ್ಯತ್ ತ್ರಿಕಲಾತೀತಂ ತದಪ್ಯೊಂಕಾರ ಏವ।[110]

ಈ ಉಪನಿಷತ್ತು ಬ್ರಹ್ಮ ವಾಚಕವಾದ ಓಂಕಾರ ಪ್ರಣವ ಕುರಿತು ಉಪದೇಶಿಸುತ್ತದೆ. ಈ ಪ್ರಣವಾಕ್ಷರದಲ್ಲಿಯೇ ಎಲ್ಲವು ಅಡಗಿದೆ. ಇದುವೇ ಸರ್ವಸ್ವವೆನ್ನುವುದು. ಜಗತ್ತಿನ ಸೃಷ್ಟಿ, ಸ್ಥಿತಿ, ಲಯವು ಓಂಕಾರವೇ ಆಗಿದೆ ಎಂದು ಈ ಉಪನಿಷತ್ತು ಪ್ರತಿಪಾದಿಸುತ್ತದೆ. ಭೂತ-ವರ್ತಮಾನ- ಭವಿಷ್ಯತ್ತುಗಳೆಲ್ಲವೂ ಓಂಕಾರದಲ್ಲಿಯೇ ಇವೆ ಎಂದು ಹೇಳಿ ಜೀವಾತ್ಮನ ನಾಲ್ಕು ಅವಸ್ಥೆಗಳನ್ನು ತಿಳಿಸುತ್ತದೆ.

1. ಬಹಿಃ ಪ್ರಜ್ಞವಾದ ಜಾಗ್ರತ ಸ್ಥಿತಿಯನ್ನು ವೈಶ್ವಾನರ,

2. ಅಂತಃ ಪ್ರಜ್ಞವಾದ ಸ್ವಪ್ನಸ್ಥಿತಿಯನ್ನು ತೈಜಸ,

3. ಸ್ವಪ್ನವಿಲ್ಲದ ಸುಷುಪ್ತಿ ಸ್ಥಿತಿಯನ್ನು ಪ್ರಾಜ್ಞ,

4.ಮೇಲಿನ ಯಾವ ಸ್ಥಿತಿಯಿಲ್ಲದ ಶಾಂತಸ್ಥಿತಿಯನ್ನು ಆತ್ಮಸ್ಥಿತಿ ಎಂದು ಕರೆಯಲಾಗಿದೆ.

ಒಟ್ಟಿನಲ್ಲಿ ಈ ಉಪನಿಷತ್ತು ಜಾಗ್ರತ್, ಸ್ವಪ್ನ, ಸುಷುಪ್ತಿ ಎಂಬ ಮೂರು ಅವಸ್ಥೆಗಳ ಮೂಲಕ ಆತ್ಮನ ಅಸ್ತಿತ್ವ ಹಾಗೂ ಅವನ ಸ್ವರೂಪವನ್ನು ವಿಶ್ಲೇಷಿಸುತ್ತದೆ. ಆತ್ಯಾಂತಿಕ ವಿಶ್ಲೇಷಣೆಯಿಂದ ನೋಡಿದಾಗ ಆತ್ಮನೂ ಸಮಷ್ಟಿ ಸತ್ಯವಾಗಿರುವ ಬ್ರಹ್ಮನೂ ಒಂದೇ. ಅವನ ಸ್ವರೂಪವನ್ನು ವಿವರಿಸಲಾಗದು. ಏಕೆಂದರೆ ಅವನೂ ಅಚಿಂತ್ಯನೂ, ಅಲಕ್ಷಣನೂ ಆಗಿದ್ದಾನೆ ಪ್ರಣವದ ಉಪಾಸನೆಯಿಂದ ಆತ್ಮ ಸಾಕ್ಷಾತ್ಕಾರವನ್ನು ಈ ಉಪನಿಷತ್ತು ಬೋಧಿಸುತ್ತದೆ.

2.15.7 ತೈತ್ತಿರೀಯೋಪನಿಷತ್

ಈ ಉಪನಿಷತ್ತು ಕೃಷ್ಣಯಜುರ್ವೇದಕ್ಕೆ ಸೇರಿದೆ. ಈ ಉಪನಿಷತ್ತನ್ನು ಮೂರು ವಲ್ಲಿಗಳಿಂದ ವಿಭಜಿಸಲಾಗದೆ. 1. ಶಿಕ್ಷಾವಲ್ಲಿ, 2. ಬ್ರಹ್ಮಾನಂದವಲ್ಲಿ ಮತ್ತು 3. ಭೃಗುವಲ್ಲಿ ಎಂದು. ಈ ಮೂರು ವಲ್ಲಿಗಳೂ ಗದ್ಯಾತ್ಮಕವಾಗಿವೆ. ಇಲ್ಲಿ ಶಿಕ್ಷಾವಲ್ಲಿ, ಬ್ರಹ್ಮಾನಂದವಲ್ಲಿ ಹಾಗೂ ಭೃಗುವಲ್ಲಿ ಎಂದು ಆಯಾವಲ್ಲಿಗಳ ಪ್ರಾರಂಭದಲ್ಲಿ ಪದವನ್ನು ಅನುಸರಿಸಿಯೇ ಹೆಸರಿಸಲಾಗಿದೆ.

1. ಶಿಕ್ಷಾವಲ್ಲಿ

ಇದು ಶಿಕ್ಷಾವನ್ನು ಬೋಧಿಸುತ್ತದೆ. ಜ್ಯೋತಿ ಮೊದಲಾದವುಗಳ ಮೇಲೆ ಮಾಡುವ ಉಪಾಸನಾ ಕ್ರಿಯೆಯನ್ನು ವಿವರಿಸುತ್ತದೆ. ಸಂಪತ್ತು ಮೊದಲಾದ ವಸ್ತುಗಳ ಅಪೇಕ್ಷೆಯುಳ್ಳವರು ಮಾಡಬೇಕಾದ ಹೋಮಗಳ ವಿವರಗಳಿವೆ. ಭೂಃ ಭುವಃ ಮೊದಲಾದ ವ್ಯಾಹೃತಿಗಳ ಮೂಲಕ ತನ್ನೊಳಗಿರುವ ಬ್ರಹ್ಮವನ್ನು ಕಾಣುವ ಉಪಾಸನೆಯನ್ನು ಕಾಣುತ್ತೇವೆ. ಕೊನೆಯಲ್ಲಿ ಗುರುವಿನ ಹತ್ತಿರ ವಿದ್ಯಾಭ್ಯಾಸ ಮಾಡುತ್ತ, ಬ್ರಹ್ಮಚರ್ಯ ವ್ರತ ಮುಗಿಸಿ ಮರಳಿ ತನ್ನ ಮನೆಗೆ ಹೋಗುವ ಶಿಷ್ಯನನ್ನು ಕುರಿತು ಗುರುಗಳ ಉಪದೇಶದೊಂದಿಗೆ ಕೊನೆಯಾಗುವುದು. ಇಲ್ಲಿ ಬರುವ ಗುರುಪದೇಶವು ಎಲ್ಲ ದೇಶ, ಕಾಲಗಳಲ್ಲಿ ಅನ್ವಯಿಸುತ್ತದೆ. ಅದರಲ್ಲಿ ಪ್ರಮುಖವಾದ ವಾಕ್ಯಗಳು ಹೀಗಿವೆ **"ಸತ್ಯಂ ವದ। ಧರ್ಮಂ ಚರ। ಮಾತೃದೇವೋ ಭವ। ಪಿತೃದೇವೋ ಭವ। ಆಚಾರ್ಯ ದೇವೋ ಭವ। ಅತಿಥಿ ದೇವೋ ಭವ।"**[111] ಮುಂತಾಗಿ ಉಪದೇಶಿಸಿದ ವಾಕ್ಯಗಳು ಪ್ರಸಿದ್ಧವಾಗಿವೆ. ಇವು ಪ್ರತಿಯೊಬ್ಬ ವ್ಯಕ್ತಿಯ ಜೀವನದ ದಾರಿದೀಪಗಳಾಗಿವೆ.

2. ಬ್ರಹ್ಮಾನಂದವಲ್ಲಿ

ಪಂಚಕೋಶಗಳ ವಿವರಣ ಇಲ್ಲಿದೆ. ಬ್ರಹ್ಮ ಸಾಕ್ಷಾತ್ಕಾರದಿಂದ ಆನಂದ ಹಾಗೂ ಇತರ ಲೋಕಗಳಿಂದ ಸಿಗುವ ಆನಂದವನ್ನು ಕುರಿತ ವಿವರಿಸುತ್ತ, ಬ್ರಹ್ಮಾನಂದವೇ ಶ್ರೇಷ್ಠ ಎಂದು ಉಪದೇಶಿಸುತ್ತದೆ. ಮಾನವನ ಪರಿಪೂರ್ಣ ಸುಖಕ್ಕಾಗಿ ಅವನನ್ನು ಮೂಲಕೇಂದ್ರವಾದ ಬ್ರಹ್ಮನತ್ತ ತೆಗೆದುಕೊಂಡು ಹೋಗುತ್ತದೆ. ಒಟ್ಟಿನಲ್ಲಿ ಇಲ್ಲಿ ಬ್ರಹ್ಮಾನಂದವು ಹೆಚ್ಚಿನದು ಎಂದು ತೋರಿಸಿ ಕೊಡುತ್ತದೆ. **"ಸತ್ಯಂ ಜ್ಞಾನಂ ಅನಂತಂ"**[112] ಎಂದು ಬ್ರಹ್ಮನ ಲಕ್ಷಣವನ್ನು ಉಪದೇಶಿಸುತ್ತದೆ.

3. ಭೃಗುವಲ್ಲಿ

ಇಲ್ಲಿ ಬ್ರಹ್ಮಾನಂದವನ್ನು ಹೊಂದಬೇಕಾದರೆ ತಪಸ್ಸನ್ನಾಚರಿಸಬೇಕೆಂದು ತಿಳಿಸುವುದು. ಬ್ರಹ್ಮೋಪದೇಶವು ಸುಂದರ ಸರಳವಾದ ಮಾತುಗಳಲ್ಲಿ ವಿವರಣೆ ಒಳಗೊಂಡಿದೆ. ಭೃಗು ಋಷಿ ತಪಸ್ಸು ಮಾಡಿ ಒಂದೊಂದು ಸಲಕ್ಕೆ ಒಂದೊಂದು ವಸ್ತು ಬ್ರಹ್ಮವೆಂದು ಹೇಳುತ್ತ ಹೋಗುತ್ತಾನೆ. ಅನ್ನವೇ ಬ್ರಹ್ಮ, ಪ್ರಾಣವೇ ಬ್ರಹ್ಮ ಹೀಗೆ ಹೇಳುತ್ತ ಕೊನೆಗೆ ಆನಂದವೇ ಬ್ರಹ್ಮ ಎನ್ನುವನು. "ಯಾವುದರಿಂದ ಈ ಎಲ್ಲಾ ಜೀವಿಗಳು ಜನಿಸಿವೆಯೋ ಜನಿಸಿದ ಮೇಲೆ ಯಾವುದರ ಮೂಲಕ ಅವು ಜೀವಿಸುತ್ತವೆಯೋ ಮತ್ತು ಮರಣದ ನಂತರ ಯಾವುದರಲ್ಲಿ ಲೀನವಾಗುತ್ತವೆಯೋ ಅದೇ ಬ್ರಹ್ಮ". ಯಾರು ಆತ್ಮವನ್ನು ಅರಿತುಕೊಳ್ಳುವರೋ ಅವರು ಶಾಶ್ವತವಾದ ಆನಂದವನ್ನು ಹೊಂದುವರು ಎಂಬ ಉಪದೇಶವನ್ನು ಈ ಉಪನಿಷತ್ತಿನಲ್ಲಿ ಕಾಣುತ್ತೇವೆ.

2.15.8 ಐತರೇಯೋಪನಿಷತ್

ಈ ಉಪನಿಷತ್ತು ಋಗ್ವೇದಕ್ಕೆ ಸೇರಿದ ಐತರೇಯಾರಣ್ಯಕದ ಭಾಗವಾಗಿದೆ. ಇದು 4 ಅಧ್ಯಾಯ, 6 ಖಂಡಗಳು, 33 ಮಂತ್ರಗಳನ್ನು ಹೊಂದಿದೆ. ಇದು ಅತ್ಯಂತ ಗೂಢಾರ್ಥಗಳಿಂದ ಕೂಡಿರುವ ಉಪನಿಷತ್ತುಗಳಲ್ಲಿ ಒಂದಾದ ಇತರಾ ಎಂಬಾಕೆಯ ಮಗನಾದ ಐತರೇಯನಿಂದಾಗಿ ಹುಟ್ಟಿದೆ.

ಮೊದಲನೆಯ ಅಧ್ಯಾಯದಲ್ಲಿ, ಪೂರ್ವದಲ್ಲಿ ಆತ್ಮನೊಬ್ಬನೆ ಇದ್ದನು. ಇವನಿಂದಲೇ ಜಗತ್ತಿನ ಸೃಷ್ಟಿಯಾಯಿತು. ಇವನು ಯಾವುದರ ಸಹಾಯವೂ ಇಲ್ಲದೆ ತನ್ನೊಳಗಿನಿಂದಲೇ ಅದನ್ನು ರಚಿಸಿ, ಆನಂತರ ಆ ಸೃಷ್ಟಿಯಲ್ಲಿಯೇ ಅವನು ಬೆರತು ಹೋದನು, ಎಂಬ ವಿವರಣೆ ಇದೆ.

ಎರಡನೆಯ ಅಧ್ಯಾಯದಲ್ಲಿ ಜೀವನಿಗೆ ಜನನ–ಮರಣಗಳಿವೆ. ಅವು ನದಿಯ ಪ್ರವಾಹದಂತೆ ಪುನಃ ಪುನಃ ಉಂಟಾಗುತ್ತವೆ. ಜೀವನಿಗೆ ವೈರಾಗ್ಯವನ್ನು ಹುಟ್ಟಿಸುವುದ ಕ್ಕಾಗಿ ಜನನದಿಂದ ಮರಣದ ವರೆಗಿನ ದುಃಖಗಳನ್ನು ಪ್ರತಿಪಾದಿಸಲಾಗಿದೆ. ಜೀವಿಯ

ನೈಜ ಸ್ವರೂಪವನ್ನು ಅರಿಯುವುದರಿಂದ ಮಾತ್ರ ಸಂಸಾರ ಬಂಧನದಿಂದ ಮುಕ್ತಿ ಹೊಂದುವನು. ವಾಮದೇವ ಋಷಿಯು ತನ್ನ ತಾಯಿಯ ಗರ್ಭದಲ್ಲಿರುವಾಗಲೇ ಆಧ್ಯಾತ್ಮಿಕ ಜ್ಞಾನವನ್ನು ಪಡೆದು ಮುಕ್ತಿ ಹೊಂದಿದನು ಎಂದು ಉಪದೇಶಿಸಲಾಗಿದೆ.

ಮೂರನೇಯ ಅಧ್ಯಾಯದಲ್ಲಿಯೂ ವಾಮದೇವನು ಪಡೆದ ಆತ್ಮ ಜ್ಞಾನದ ಸ್ವರೂಪ, ಅವನು ಆತ್ಮಜ್ಞಾನವನ್ನು ಹೇಗೆ ಹೊಂದಿದನು ಎಂಬುದರ ವಿವರಣೆಯಿದೆ.

ಕೊನೆಯ ನಾಲ್ಕನೇಯ ಅಧ್ಯಾಯದಲ್ಲಿ ಮನಸ್ಸಿಗಿಂತ ಭಿನ್ನವಾದ ಪ್ರಜ್ಞಾನ ಘನವನ್ನು (ಆತ್ಮ) ಕುರಿತು ಹೇಳಲಾಗಿದೆ. ಪ್ರಜ್ಞಾನವೇ ಆತ್ಮವಾಗಿದೆ. ಪ್ರಜ್ಞಾನಕ್ಕೆ ಅನೇಕ ಹೆಸರುಗಳು ಬಂದಿವೆ. ಈ ಪ್ರಜ್ಞಾ ಸ್ವರೂಪವಾದ ಆತ್ಮಕ್ಕೆ ಬ್ರಹ್ಮ, ಇಂದ್ರ, ಪ್ರಜಾಪತಿ, ಮೊದಲಾದ ಹೆಸರುಗಳಿಂದ ಕರೆಯಲಾಗಿದೆ. ಚರಾಚರ ವಸ್ತುಗಳೆಲ್ಲವೂ ಪ್ರಜ್ಞಾನವನ್ನೇ ಆಶ್ರಯಿಸಿವೆ. ಅದನ್ನು ಅರಿತಾಗ ಮಾತ್ರ ಮೋಕ್ಷ. ಅದನ್ನು ಅರಿತುಕೊಂಡ ವಾಮದೇವನು ಮುಕ್ತಿ ಪಡೆದನೆಂದು ಈ ಉಪನಿಷತ್ತು ಸಾರುತ್ತದೆ.

2.15.9 ಛಾಂದೋಗ್ಯೋಪನಿಷತ್

ಈ ಉಪನಿಷತ್ತು ಸಾಮವೇದಕ್ಕೆ ಸೇರಿದೆ. ಇದರಲ್ಲಿ ಎಂಟು ಅಧ್ಯಾಯಗಳಿವೆ. ಒದೊಂದು ಅಧ್ಯಾಯದಲ್ಲಿ ಅನೇಕ ಖಂಡಗಳಿವೆ. ಒಟ್ಟು 154 ಖಂಡಗಳಾಗುತ್ತವೆ. 8 ಅಧ್ಯಾಯಗಳಲ್ಲಿ ಒಟ್ಟಿಗೆ 628 ಮಂತ್ರಗಳಿವೆ. ಈ ಉಪನಿಷತ್ತು ಅತ್ಯಂತ ಪ್ರಾಚೀನತೆಯನ್ನು ಹೊಂದಿದೆ. ಅರ್ಥಗಾಂಭೀರ್ಯ, ಬ್ರಹ್ಮಜ್ಞಾನ ಮೊದಲಾದವುಗಳ ಪ್ರತಿಪಾದನೆಯ ದೃಷ್ಟಿಯಲ್ಲಿ ಬಹಳ ಪ್ರೌಢವೂ, ಮಹತ್ವಪೂರ್ಣವೂ ಆಗಿದೆ.

ಮೊದಲನೆಯ ಅಧ್ಯಾಯದಲ್ಲಿ ಓಂಕಾರದ ಉಪಾಸನೆಯನ್ನು ಕುರಿತು ವಿವರಣೆ ಇದೆ. **"ಓಂ ಇತ್ಯೇತದಕ್ಷರಮುದ್ಗೀಥಮುಪಾಸೀತ। ಓಂ ಇತಿ ಹ್ಯುದ್ಗಾಯತಿ ತಸ್ಯೋಪವ್ಯಾಖ್ಯಾನಮ್।"**[113] ಓಂಕಾರವೆಂಬ ಅಕ್ಷರವನ್ನು ಯಜ್ಞದಲ್ಲಿ ಉದ್ಗೀಥದ ಮೂಲಕ ಸರ್ವ ಪ್ರಥಮ ಉಚ್ಚಾರಣೆ ಮಾಡಿದೆ. ಇದು ಪರಮಾತ್ಮನ ಸಾಕಾರ ಪ್ರತೀಕ. ಈ ಓಂಕಾರದ ವ್ಯಾಖ್ಯೆಯನ್ನು ಇಲ್ಲಿ ಮಾಡಲಾಗಿದೆ. ಸಮಸ್ತ ಸ್ಥಾವರ ಮತ್ತು ಜಂಗಮ ಪ್ರಾಣಿಗಳ, ಪದಾರ್ಥಗಳ ಸಾರಕ್ಕೆ ಪೃಥ್ವಿಯೇ ಕಾರಣವಾಗಿದೆ. ಪೃಥ್ವಿಯಿಂದ ಜಲ, ಜಲದಿಂದ ಔಷಧಿಗಳುಂಟಾಗಿ, ಇದರ ರಸವೇ ಜೀವಿಗಳ ಶರೀರ, ವಾಣಿಯೇ ವೇದಗಳು, ವೇದಗಳ ಸಾರ ಸಾಮವೆಂದು ಇದರ ಗೂಢ ಸ್ವರೂಪವನ್ನು ಮಾರ್ಮಿಕವಾಗಿ ತಿಳಿಸಲಾಗಿದೆ. ಈ ಸಾಮವೇದಕ್ಕೆ ಮೂಲ ಕಾರಣ ಉದ್ಗೀಥ ಎಂದು ಪ್ರತಿಪಾದಿಸಲಾಗಿದೆ. ಉದ್ಗೀಥ ವಿದ್ಯೆಯ ಮಹತ್ವ ಹಾಗೂ ಉದ್ಗೀಥ ಪ್ರಣವಗಳ ತಾದಾತ್ಮವನ್ನು ಕುರಿತು ಹೇಳಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಸಾಮವೇದವನ್ನು ಕುರಿತು ಹೇಳಲಾಗಿದೆ. ಸಾಮಗಳ ಮೇಲೆ ಹಲವು ಬಗೆಯ ಉಪಾಸನೆಗಳನ್ನು ಹೇಳುತ್ತದೆ. ನಾಲ್ಕು ಬಗೆಯ

ಆಶ್ರಮಗಳನ್ನು ಉಲ್ಲೇಖಿಸಲಾಗಿದೆ. ವಿಶ್ವವೇ ಸಾಮವೆಂದು ಪ್ರಸ್ತಾಪಿಸಿ ಪಂಚವಿಧ, ಸಪ್ತವಿಧ ಸಾಮೋಪಾಸನೆಗಳನ್ನು ಬೋಧಿಸಲಾಗಿದೆ. ಬ್ರಹ್ಮನಲ್ಲಿ ಪ್ರತಿಷ್ಠಿತನಾದವನು ಅಮೃತತ್ತ್ವವನ್ನು ಹೊಂದುತ್ತಾನೆ. ಎಂದು ಈ ಅಧ್ಯಾಯದಲ್ಲಿ ಹೇಳಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ಮಧು ವಿದ್ಯೆಯನ್ನು ಕುರಿತು ಬೋಧಿಸಲಾಗಿದೆ. ಸೂರ್ಯನನ್ನು "ಮಧು" ಎಂದು ಭಾವಿಸಿ ಧ್ಯಾನಿಸಬೇಕು ಏಕೆಂದರೆ ಅವನು ದೇವತೆಗಳಿಗೆ ಆನಂದವನ್ನು ನೀಡುವನು. ಗಾಯತ್ರಿ ಮಂತ್ರದ ಮೂಲಕ ಬ್ರಹ್ಮನ ಉಪಾಸನೆಯ ಉಲ್ಲೇಖ ಇಲ್ಲಿದೆ. ಅಲ್ಲದೆ ಪ್ರಸಿದ್ಧವಾದ ಶಾಂಡಿಲ್ಯ ವಿದ್ಯೆಯ ವರ್ಣನೆ ಇಲ್ಲಿದೆ. ಜೀವನವನ್ನೇ ಒಂದು ಯಜ್ಞವೆಂದು ಭಾವಿಸುವ ಮೂಲಕ ಮನುಷ್ಯನು ದೀರ್ಘಕಾಲದವರೆಗೆ ಬದುಕುತ್ತಾನೆ. ಎಂಬುದರ ವಿವರಣೆಗಳನ್ನು ಕಾಣುತ್ತೇವೆ.

ನಾಲ್ಕನೆಯ ಅಧ್ಯಾಯದಲ್ಲಿ ಜಾನಶ್ರುತಿ ಪೌತ್ರಾಯಣನು ದಾನ ಶ್ರೇಷ್ಠನೆಂದು ಅಹಂಕಾರವುಳ್ಳವನಾಗಿದ್ದನು. ಅವನ ಅರಮನೆಯ ಮೇಲೆ ಹಾರಾಡುವ ಎರಡು ಹಂಸ ಪಕ್ಷಿಗಳ ಸಂಭಾಷಣೆಯ ಮೂಲಕ ಬ್ರಹ್ಮಜ್ಞಾನಿಯಾದ ರೈಕ್ವನ ಮಹತ್ವ ಅರಿತು ಅವನಿಂದ ಬ್ರಹ್ಮೋಪದೇಶವನ್ನು ಪಡೆಯುವ ಕಥೆ ಇಲ್ಲಿದೆ.

ಐದನೆಯ ಅಧ್ಯಾಯದಲ್ಲಿ **"ಓಂ ಯೋ ಹ ವೈ ಜ್ಯೇಷ್ಠಂ ಚ ಶ್ರೇಷ್ಠಂ ಚ ವೇದ ಜ್ಯೇಷ್ಠಶ್ಚ ಹ ವೈ ಶ್ರೇಷ್ಠಶ್ಚ ಭವತಿ। ಪ್ರಾಣೋ ವಾವ ಜ್ಯೇಷ್ಠಶ್ಚ ಶ್ರೇಷ್ಠಶ್ಚ"**[114] ಯಾರು ಜ್ಯೇಷ್ಠತೆ ಮತ್ತು ಶ್ರೇಷ್ಠತೆಯನ್ನು ತಿಳಿದಿರುತ್ತಾರೆಯೇ ಅವರು ನಿಶ್ಚಯವಾಗಿ ಜ್ಯೇಷ್ಠ ಮತ್ತು ಶ್ರೇಷ್ಠರಾಗುತ್ತಾರೆ. ಸಕಲ ಇಂದ್ರಿಯಗಳಲ್ಲೆಲ್ಲ ಪ್ರಾಣವೇ ಜ್ಯೇಷ್ಠ ಮತ್ತು ಶ್ರೇಷ್ಠ ಎಂದು ಹೇಳಲಾಗಿದೆ. ಇದರಲ್ಲಿ ಜೈವಲಿಯು ಪಂಚಾಗ್ನಿ ವಿದ್ಯೆಯ ಉಪದೇಶ ಮಾಡಿದ್ದಾನೆ. ಐದು ಜನ ಬ್ರಹ್ಮ ಜಿಜ್ಞಾಸುಗಳು ಕೇಕಯ ರಾಜ ಅಶ್ವಪತಿಯಿಂದ ವೈಶ್ವಾನರ ವಿದ್ಯೆಯ ಉಪದೇಶವನ್ನು ಪಡೆದ ಸಂವಾದವಿದೆ.

ಆರನೆಯ ಅಧ್ಯಾಯವು ಅತ್ಯಂತ ರಸವತ್ತಾಗಿ ಹಾಗೂ ಅತ್ಯುತ್ತಮ ಉಪದೇಶ ಗಳಿಂದ ಕೂಡಿದೆ. ಉದ್ದಾಲಕ ಆರುಣಿಯ ಮಗನಾದ ಶ್ವೇತಕೇತುವಿಗೆ ಆತ್ಮ ವಿದ್ಯೆಯನ್ನು ಬೋಧಿಸುವ ಸುಂದರವಾದ ಸಂವಾದ ಇಲ್ಲಿದೆ. ಲೋಕ ಪ್ರಸಿದ್ಧವಾದ **"ತತ್ತ್ವಮಸಿ"** ಮಹಾವಾಕ್ಯದ ಉಪದೇಶ ಇದರಲ್ಲಿಯೇ ಬರುತ್ತದೆ.

ಏಳನೆಯ ಅಧ್ಯಾಯದಲ್ಲಿ ಸನತ್ಕುಮಾರ ಮತ್ತು ನಾರದರ ನಡುವೆ ನಡೆದ ಸಂಭಾಣೆ ಇದೆ. ಕೇವಲ ವೇದ–ವೇದಾಂಗಗಳು ಮತ್ತು ಲೌಕಿಕ ವಿದ್ಯೆಯನ್ನು ಬಲ್ಲ ನಾರದನಿಗೆ ಮನಃಶಾಂತಿಯಿಲ್ಲ. ಏಕೆಂದರೆ ಅವನಿನ್ನೂ ಆತ್ಮವನ್ನು ತಿಳಿದಿರಲಿಲ್ಲ. ಸನತ್ಕುಮಾರನು ಅವನಿಗೆ ಹಲವಾರು ಉಪಾಸನೆಯ ಮೂಲಕ ಬ್ರಹ್ಮಜ್ಞಾನವನ್ನು ಉಪದೇಶಿಸುವನು.

ಕೊನೆಯ ಅಧ್ಯಾಯದಲ್ಲಿ 'ದಹರ' ವಿದ್ಯೆಯ ಉಪದೇಶವಿದೆ. ವಿದ್ಯೆಯೆಂದರೆ 'ದಹರ'. ಹೃದಯದಲ್ಲಿರುವ ಆತ್ಮನ ಧ್ಯಾನವನ್ನು ಮಾಡುವುದು ಎಂದರ್ಥ. ದೇವತೆಗಳು

ಪ್ರಜಾಪತಿಯ ಹತ್ತಿರ ಹೋಗಿ ಆತ್ಮ ಯಾರು? ಎಂದು ಕೇಳಿದಾಗ, ಬಾವಿಯಲ್ಲಿ ಇಣುಕಿ ನೋಡಿರಿ ಎಂದನು. ಆಗ ದೇವತೆಗಳೆಲ್ಲರು ದೇಹವೇ ಆತ್ಮವೆಂದು ತಿಳಿದರು. ಇಂದ್ರನು– ದೇಹವು ವಿಕಾರವಾಗುವು. ಅದು ಹೇಗೆ ಆತ್ಮವಾಗುವುದು ಎಂದು ಪ್ರಶ್ನಿಸಿದಾಗ ಪ್ರಜಾಪತಿಯು ಸಂತೋಷ ಹೊಂದಿ ಇಂದ್ರನಿಗೆ ಆತ್ಮೋಪದೇಶ ಮಾಡಿದ ಕಥಾ ನಿರೂಪಣೆ ಈ ಅಧ್ಯಾಯದಲ್ಲಿದೆ.

ಎಲ್ಲ ಪಾಪಗಳಿಂದ ಮುಕ್ತನಾಗಿ ಆತ್ಮಜ್ಞಾನಿಯಾದವನು ಬ್ರಹ್ಮಲೋಕವನ್ನು ಹೊಂದಿ ಮುಕ್ತನಾಗುತ್ತಾನೆ ಎಂಬ ಹೇಳಿಕೆಯೊಂದಿಗೆ ಈ ಉಪನಿಷತ್ತು ಕೊನೆಗೊಳ್ಳುವುದು.

2.15.10. ಬೃಹದಾರಣ್ಯಕೋನಪನಿಷತ್

ಈ ಉಪನಿಷತ್ತು ಶುಕ್ಲಯಜುರ್ವೇದದ ಶತಪಥ ಬ್ರಾಹ್ಮಣಕ್ಕೆ ಸೇರಿದೆ. ಇದರ ಹೆಸರೇ ಸೂಚಿಸಿರುವಂತೆ, ಆಕಾರದಿಂದಲೂ ವಿಷಯ ಪ್ರಸ್ತಾವನೆಯಿಂದಲೂ ಬೃಹತ್ತಾಗಿದೆ. ಇದರಲ್ಲಿ 6 ಅಧ್ಯಾಯಗಳಿದ್ದು 47 ಖಂಡಗಳಾಗಿ ವಿಭಾಗಿಸಲ್ಪಟ್ಟಿದೆ. ಇದರಲ್ಲಿ ಒಟ್ಟು 435 ಮಂತ್ರಗಳಿವೆ. ಇಲ್ಲಿ ಖಂಡಗಳಿಗೆ ಬ್ರಾಹ್ಮಣಗಳೆಂದು ಕರೆಯಲಾಗಿದೆ. ಈ ಬ್ರಾಹ್ಮಣಗಳು ಪುನಃ ಚಿಕ್ಕ–ಚಿಕ್ಕ ಪರಿಚ್ಛೇದಗಳಾಗಿ ವಿಂಗಡಿಸಲ್ಪಟ್ಟಿವೆ. ಇವುಗಳಿಗೆ ಕಂಡಿಕೆಗಳೆಂದೂ ಸಹ ಕರೆಯುತ್ತಾರೆ. ಇದನ್ನು ವಿದ್ವಾಂಸರು 3 ಕಾಂಡಗಳಲ್ಲಿ ವಿಭಾಗಿಸಿ ಅವುಗಳಿಗೆ 1. ಮಧು ಕಾಂಡ, 2. ಯಾಜ್ಞವಲ್ಕ್ಯ ಅಥವಾ ಮುನಿಕಾಂಡ ಮತ್ತು 3 ಖಿಲಕಾಂಡ ಎಂದು ಹೆಸರಿಸಿದ್ದಾರೆ. ಪ್ರತಿಯೊಂದು ಕಾಂಡವು ಎರಡೆರಡು ಅಧ್ಯಾಯಗಳನ್ನು ಒಳಗೊಂಡಿದೆ.

ಮೊದಲನೆಯ ಮತ್ತು ಎರಡನೆಯ ಅಧ್ಯಾಯಗಳು ಅನೇಕ ದೇವತೆಗಳಿಂದ ಆಚೆಗಿರುವ ಆತ್ಮದ ವರ್ಣನೆಯನ್ನು ಮಾಡುತ್ತದೆ. ಆತ್ಮ ಎಲ್ಲರ ಅಂತರಾತ್ಮವಾಗಿ ಎಲ್ಲರಿಗೂ ಅತ್ಯಂತ ಸಮೀಪ ಹಾಗೂ ಪ್ರಿಯವಾಗಿದೆ. ಶರೀರವು ಆತ್ಮವನ್ನು ಹೊಂದಿರುವುದರಿಂದಲೇ ಕಾರ್ಯದಲ್ಲಿ ತೊಡಗಿರುತ್ತದೆ. ಆತ್ಮವನ್ನು ಸಾಕ್ಷಾತ್ಕರಿಸಿ ಕೊಳ್ಳಬಯಸುವವನು ಐಹಿಕ ಸುಖಗಳ ಬಯಕೆಗಳನ್ನು ತ್ಯಜಿಸಬೇಕು. ಸಂನ್ಯಾಸ ಆಶ್ರಮವನ್ನು ಸ್ವೀಕರಿಸಿ ಪರಿವ್ರಾಜಕನಾಗಬೇಕು. ತನ್ನ ನೈಜ ಸ್ವರೂಪವನ್ನು ಕುರಿತು ಧ್ಯಾನಿಸಬೇಕು. ಆತ್ಮ ಸಾಕ್ಷಾತ್ಕಾರ ಹೊಂದುವುದೆಂದರೆ ವಿಶ್ವಚೈತನ್ಯವಾದ ಬ್ರಹ್ಮಸಾಕ್ಷಾತ್ಕಾರವೇ ಆಗಿದೆ.

ಮೂರು–ನಾಲ್ಕನೆಯ ಅಧ್ಯಾಯಗಳಲ್ಲಿ ಮುನಿಶ್ರೇಷ್ಠರಾದ ಯಜ್ಞವಲ್ಕ್ಯರ ಅಸಾಧಾರಣ ಶಕ್ತಿಯನ್ನು ವೇದಾಂತದ ಮೂಲತತ್ತ್ವಗಳನ್ನು ಪರಿಣಾಮಕಾರಿಯಾದ ವಿವರಣೆಯನ್ನು ಹೀಗೆ ಕಾಣುತ್ತೇವೆ. ಇಹ ಮತ್ತು ಪರ ಲೋಕಗಳಲ್ಲಿನ ಜೀವನವು ವ್ಯಕ್ತಿಯ ಕರ್ಮಗಳಿಂದ ನಿರ್ಧರಿತವಾಗುತ್ತದೆ. ಒಳ್ಳೆಯ ಕರ್ಮಗಳಿಂದ ಒಳ್ಳೆಯ ಫಲ,

ದುಷ್ಕರ್ಮಗಳಿಂದ ದುಷ್ಪಲವುಂಟಾಗುವುದು. ವೈದಿಕ ಕ್ರಿಯೆಗಳು ಉತ್ತಮ ಉಪಾಸನೆಯಿಂದ ಕೂಡಿದ್ದರೂ ಮೋಕ್ಷವನ್ನು ತಂದು ಕೊಡಲಾರವು. ದೇಹ–ಮನಸ್ಸಾದಿಗಳಿಗೆ ಮೀರಿರುವ ಯಥಾರ್ಥ ಬ್ರಹ್ಮಜ್ಞಾನದಿಂದ ಮಾತ್ರ ಸಂಸಾರದಿಂದ ಮುಕ್ತಿ ದೊರೆಯುವುದು. ಬ್ರಹ್ಮಜ್ಞಾನಕ್ಕಾಗಿ ಜೀವಿಗಳು ತಮ್ಮ ಸಂಸಾರ ಸಂಪತ್ತು ಉತ್ತಮ ಲೋಕಗಳ ಬಯಕೆಗಳನ್ನೆಲ್ಲ ತ್ಯಜಿಸಿ ಪರಿವ್ರಾಜಕ ಜೀವನ ಸ್ವೀಕರಿಸಬೇಕು.

ಯಾವುದು ಸೃಷ್ಟಿಯನ್ನು ಸೃಷ್ಟಿಸಿ ಸ್ಥಾಪಿಸಿರುವುದೋ ಅದು ಸೃಷ್ಟಿಯನ್ನೇ ಮೀರಿದೆ. ಅದು ಅಕ್ಷರವಾಗಿಯೂ, ಸೃಷ್ಟಿಯ ಅಂತರ್ಯಾಮಿಯಾಗಿಯೂ ಇದೆ ಎಂದು ಯಾಜ್ಞವಲ್ಕ್ಯರು ವಿವರಿಸುತ್ತಾರೆ. ಅದರ ಸ್ವರೂಪವನ್ನು ಕುರಿತು ಒಂದು ದೊಡ್ಡ ಪಟ್ಟಿಯನ್ನೇ ನೀಡಿದ್ದಾರೆ. ಅದರ ಸ್ವರೂಪ, ವೈವಿಧ್ಯ, ಗೊಂದಲಗಳಿಂದ ಕೂಡಿದಂತೆ ಕಾಣುತ್ತೇವೆ. ಏಕೆಂದರೆ ಅವರ್ಣನೀಯವಾದುದನ್ನು ವರ್ಣಿಸುವ ಪ್ರಯತ್ನ ಅವರದಾಗಿದೆ. ಆತ್ಮನ ನಿಜ ಸ್ವರೂಪವನ್ನು ಸ್ಥಾಪಿಸುವುದರ ಮೂಲಕ ಜೀವನು ಅನುಭವಿಸುವ ಸಂಕಟಗಳ ವಿವರಣೆ ಕೊಡುತ್ತ ವೈರಾಗ್ಯದ ಪ್ರಚೋದನೆಯನ್ನು ಕೊಡುತ್ತಾರೆ.

ಕೊನೆಯ ಎರಡು ಅಧ್ಯಾಯಗಳಲ್ಲಿ ಪ್ರಣವ ಮೊದಲಾದವುಗಳ ಉಪಾಸನೆಗಳಿವೆ. ಆತ್ಮ ನಿಗ್ರಹ, ಅನುಕಂಪ, ಸತ್ಪಾತ್ರರಿಗೆ ದಾನ ಕೊಡುವುದು, ಪಂಚಾಗ್ನಿವಿದ್ಯೆ, ಪುತ್ರ ಜನನಕ್ಕೆ ಸಂಬಂಧಪಟ್ಟ ಹಲವಾರು ಕ್ರಿಯೆಗಳು ಇಲ್ಲಿವೆ. ವೈದಿಕ ಆಚಾರ್ಯ ಪರಂಪರೆಯ ದೀರ್ಘ ಪಟ್ಟಿಯನ್ನು ಕೊಡುವುದರೊಂದಿಗೆ ಈ ಉಪನಿಷತ್ತು ಕೊನೆಗೊಳ್ಳುವುದು.

ಈ ಉಪನಿಷತ್ತಿನಲ್ಲಿ ನಾಲ್ವರು ಪ್ರಸಿದ್ಧ ವ್ಯಕ್ತಿಗಳು ಬರುತ್ತಾರೆ. ಇವರಲ್ಲಿ ಇರ್ವರು ಪುರುಷರು, ಇರ್ವರು ಮಹಿಳೆಯರಾಗಿದ್ದಾರೆ. ಪುರುಷರಲ್ಲಿ ರಾಜರ್ಷಿ ಜನಕ ಮತ್ತು ತತ್ತ್ವಜ್ಞಾನಿಯಾದ ಋಷಿ ಯಾಜ್ಞವಲ್ಕ್ಯರು, ಸ್ತ್ರೀಯರಲ್ಲಿ ಮೈತ್ರೇಯೀ ಮತ್ತು ಗಾರ್ಗಿ. ಇಲ್ಲಿ ಸ್ತ್ರೀಯರಿಗೆ ಆಧ್ಯಾತ್ಮ ಪ್ರಪಂಚದಲ್ಲಿ ಸಮಾನ ಸ್ಥಾನ ದೊರಕಿದೆ. ಗಾರ್ಗಿ ಯಾಜ್ಞವಲ್ಕ್ಯರಿಗೆ ಪ್ರಶ್ನೆ ಹಾಕುವುದರಲ್ಲಿ ಅಗ್ರಗಣ್ಯಳು. ಇವಳಿಗೆ ವಾಚಕ್ನವೀ, ಪ್ರತಿಭಾಶಾಲೀ ಮತ್ತು ತತ್ತ್ವಶಾಸ್ತ್ರಜ್ಞೆ ಎಂಬ ಬಿರುದುಗಳುಂಟು. ಇವರೆಲ್ಲರ ಸಂವಾದಗಳು ಮಾನವನ ದಿವ್ಯತೆಗೆ ಮಾರ್ಗದರ್ಶನವಾಗಿವೆ. ಬ್ರಹ್ಮನಲ್ಲಿ ಸಕಲ ವಿಶ್ವದ ಐಕ್ಯವನ್ನು ಗಂಭೀರವಾಗಿ ಚರ್ಚಿಸಲಾಗಿದೆ. **"ಅಹಂ ಬ್ರಹ್ಮಾಸ್ಮಿ"**[115] 'ನಾನೇ ಬ್ರಹ್ಮ' ಎಂಬ ಮಹಾವಾಕ್ಯವಿರುವುದು ಇಲ್ಲಿಯೆ.

ಅಡಿಟಿಪ್ಪಣಿಗಳು

1 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–30.

2 ಅದೇ, ಪುಟ 32.

3 ಅದೇ.

4 ಅದೇ.

5 ಅದೇ.

6 ಅದೇ.

7 ಅದೇ.

8 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣೀವಿಲಾಸ ಮುದ್ರಾಣಾಲಯ ಶ್ರೀರಂಗಮ್, 1964. ಬೃಹದಾರಣ್ಯಕ 2.4.10 ಪುಟ–205.

9 ಡಾ. ಶ್ರೀಕಾಂತ ಪಾಂಡೇಯ. 'ಋಗ್ವೇದ ಭಾಷ್ಯ ಭೂಮಿಕಾ' ಭಾರತೀಯ ವಿದ್ಯಾ ಪ್ರಕಾಶನ ವಾರಣಾಸಿ 1985, ಪುಟ–1.

10 ವಿದ್ವಾನ್. ಎಚ್. ವ್ಹಿ. ನಾಗರಾಜ, 'ವೇದ–ವೇದಾಂಗ' ಭವನದ ಗಾಂಧಿ ಕೇಂದ್ರ, ಬೆಂಗಳೂರು–01, 2002. ಪುಟ–112.

11 ಡಾ. ಕೆ. ಕೃಷ್ಣಮೂರ್ತಿ, 'ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ' ಕರ್ನಾಟಕ ಸರ್ಕಾರ ಪಠ್ಯಪುಸ್ತಕ ಇಲಾಖೆ ಬೆಂಗಳೂರು, 1997, ಪುಟ–60,

12 ಅದೇ.

13 ಪಂ. ಚಕ್ರಕೋಡಿ ಈಶ್ವರಶಾಸ್ತ್ರಿ, 'ಮನುಸ್ಮೃತಿ' ಸಮಾಜ ಪುಸ್ತಕಾಲಯ ಧಾರವಾಡ 1969, ಮನು 1.23. ಪುಟ–7,

14 ಡಾ. ಕೆ. ಕೃಷ್ಣಮೂರ್ತಿ, 'ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ' ಕರ್ನಾಟಕ ಸರ್ಕಾರ ಪಠ್ಯಪುಸ್ತಕ ಇಲಾಖೆ ಬೆಂಗಳೂರು, 1997, ಪುಟ–60,

15 ಅದೇ.

16 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–34.

17 ಅದೇ.

18 ಡಾ. ಕೆ. ಕೃಷ್ಣಮೂರ್ತಿ, 'ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ' ಕರ್ನಾಟಕ ಸರ್ಕಾರ ಪಠ್ಯಪುಸ್ತಕ ಇಲಾಖೆ ಬೆಂಗಳೂರು, 1997, ಪುಟ–61.

19 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–33.

20 ವಿದ್ವಾನ್. ಎಚ್. ಪ್ಹಿ. ನಾಗರಾಜ, 'ವೇದ–ವೇದಾಂಗ' ಭವನದ ಗಾಂಧಿ ಕೇಂದ್ರ, ಬೆಂಗಳೂರು–01, 2002. ಪುಟ–2.

21 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–250.

22 ಡಾ. ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು, 'ಉಪನಿಷತ್ತು ಮತ್ತು ವಚನಗಳು ತೌಲನಿಕ ಅಧ್ಯಯನ' ಲಿಂಗಾಯತ ಅಧ್ಯಯನ ಅಕಾಡಮಿ ಬೆಳಗಾವಿ, 2004. ಪುಟ 24.

23 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–70.

24 ಅದೇ.

25 ಡಾ. ಕೆ. ಕೃಷ್ಣಮೂರ್ತಿ, 'ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ' ಕರ್ನಾಟಕ ಸರ್ಕಾರ ಪಠ್ಯಪುಸ್ತಕ ಇಲಾಖೆ ಬೆಂಗಳೂರು, 1997, ಪುಟ–68.

26 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–186.

27 ಡಾ. ಕೆ. ಕೃಷ್ಣಮೂರ್ತಿ, 'ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ' ಕರ್ನಾಟಕ ಸರ್ಕಾರ ಪಠ್ಯಪುಸ್ತಕ ಇಲಾಖೆ ಬೆಂಗಳೂರು, 1997, ಪುಟ–71.

28 ಅದೇ.

29 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–73.

30 ಅದೇ, ಪುಟ–74.

31 ಅದೇ.

32 ಅದೇ, ಪುಟ–65.

33 ಅದೇ, ಪುಟ 262.

34 ವಿದ್ವಾನ್. ಎಚ್. ಪ್ಹಿ. ನಾಗರಾಜ, 'ವೇದ–ವೇದಾಂಗ' ಭವನದ ಗಾಂಧಿ ಕೇಂದ್ರ, ಬೆಂಗಳೂರು–01, 2002. ಪುಟ–23.

35 ಅದೇ, ಪುಟ–22.

36 ಅದೇ, ಪುಟ–25.

37 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣೀವಿಲಾಸ ಮುದ್ರಾಣಾಲಯ ಶ್ರೀರಂಗಮ್, 1964. ಬೃಹದಾರಣ್ಯಕ 1.3.22 ಪುಟ–184.

38 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–254.

39 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣೀವಿಲಾಸ ಮುದ್ರಾಣಾಲಯ ಶ್ರೀರಂಗಮ್, 1964. ಬೃಹದಾರಣ್ಯಕ 6.4.20 ಪುಟ–279.

40 ಅದೇ, ಛಾಂದೋಗ್ಯ 1.6.1 ಪುಟ–85.

41 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ 255.

42 'ಶ್ರೀಮದ್ಭಗವದ್ಗೀತಾ' ಗೀತಾಪ್ರೇಸ್, ಗೋರಖಪುರ, ವಿ.ಶ 2057. ಗೀತೆ 10.22 ಪುಟ–49.

43 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–253.

44 ಡಾ. ಕೆ. ಕೃಷ್ಣಮೂರ್ತಿ, 'ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ' ಕರ್ನಾಟಕ ಸರ್ಕಾರ ಪಠ್ಯಪುಸ್ತಕ ಇಲಾಖೆ ಬೆಂಗಳೂರು, 1997, ಪುಟ–82.

45 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–276.

46 ಅದೇ ಪುಟ–281.

47 ಡಾ. ಕೆ. ಕೃಷ್ಣಮೂರ್ತಿ, 'ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ' ಕರ್ನಾಟಕ ಸರ್ಕಾರ ಪಠ್ಯಪುಸ್ತಕ ಇಲಾಖೆ ಬೆಂಗಳೂರು, 1997, ಪುಟ–91.

48 ಪಾಣಿನಿ ಪ್ರಣೀತಃ 'ಅಷ್ಟಾಧ್ಯಾಯೀ ಸೂತ್ರಪಾಠಃ' ಸಂ ಶ್ರೀನಾರಾಯಣ ಮಿಶ್ರಃ ಚೌಖಂಭಾ ಓರಿಯಂಟಾಲಿಯಾ ವಾರಣಾಸಿ, ಶಿಕ್ಷಾ–41,42. ಪುಟ–91.

49 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–370.

50 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣೀವಿಲಾಸ ಮುದ್ರಾಣಾಲಯ ಶ್ರೀರಂಗಮ್, 1964. ಮುಂಡಕ 1.1.5 ಪುಟ–40.

51 ಡಾ. ಶ್ರೀಕಾಂತ ಪಾಂಡೇಯ. 'ಋಗ್ವೇದ ಭಾಷ್ಯ ಭೂಮಿಕಾ' ಭಾರತೀಯ ವಿದ್ಯಾ ಪ್ರಕಾಶನ ವಾರಣಾಸಿ 1985, ಪುಟ–167.

52 ಪಾಣಿನಿ ಪ್ರಣೀತಃ 'ಅಷ್ಟಾಧ್ಯಾಯೀ ಸೂತ್ರಪಾಠಃ' ಸಂ ಶ್ರೀನಾರಾಯಣ ಮಿಶ್ರಃ

ಚೌಖಂಭಾ ಓರಿಯಂಟಾಲಿಯಾ ವಾರಣಾಸಿ, ಶಿಕ್ಷಾ–42. ಪುಟ–91,

53 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣೀವಿಲಾಸ ಮುದ್ರಾಣಾಲಯ ಶ್ರೀರಂಗಮ್, 1964. ತೈತ್ತರೀಯ 1.2.1 ಪುಟ–53.

54 ಪಾಣಿನಿ ಪ್ರಣೀತಃ 'ಅಷ್ಟಾಧ್ಯಾಯೀ ಸೂತ್ರಪಾಠಃ' ಸಂ ಶ್ರೀನಾರಾಯಣ ಮಿಶ್ರಃ ಚೌಖಂಭಾ ಓರಿಯಂಟಾಲಿಯಾ ವಾರಣಾಸಿ, ಪುಟ–3.

55 ಅದೇ–25. ಪುಟ–87.

56 ಅದೇ–52. ಪುಟ–94.

57 ಅದೇ–32,33. ಪುಟ–89.

58 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–405.

59 ಪಾಣಿನಿ ಪ್ರಣೀತಃ 'ಅಷ್ಟಾಧ್ಯಾಯೀ ಸೂತ್ರಪಾಠಃ' ಸಂ. ಶ್ರೀನಾರಾಯಣ ಮಿಶ್ರಃ ಚೌಖಂಭಾ ಓರಿಯಂಟಾಲಿಯಾ ವಾರಣಾಸಿ, ಶಿಕ್ಷಾ–42. ಪುಟ–91,

60 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–405.

61 ಅದೇ.

62 ಪಾಣಿನಿ ಪ್ರಣೀತಃ 'ಅಷ್ಟಾಧ್ಯಾಯೀ ಸೂತ್ರಪಾಠಃ' ಸಂ ಶ್ರೀನಾರಾಯಣ ಮಿಶ್ರಃ ಚೌಖಂಭಾ ಓರಿಯಂಟಾಲಿಯಾ ವಾರಣಾಸಿ, ಶಿಕ್ಷಾ–41. ಪುಟ–91,

63 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–407.

64 ಅದೇ ಪುಟ–74.

65 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–407.

66 ಡಾ. ಕೆ. ಕೃಷ್ಣಮೂರ್ತಿ, 'ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ' ಕರ್ನಾಟಕ ಸರ್ಕಾರ ಪಠ್ಯಪುಸ್ತಕ ಇಲಾಖೆ ಬೆಂಗಳೂರು, 1997, ಪುಟ–94.

67 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–411.

68 ಅದೇ ಪುಟ–412

.69 ಅದೇ.

70 ಪಾಣಿನಿ ಪ್ರಣೀತಃ 'ಅಷ್ಟಾಧ್ಯಾಯೀ ಸೂತ್ರಪಾಠಃ' ಸಂ ಶ್ರೀನಾರಾಯಣ ಮಿಶ್ರಃ ಚೌಖಂಭಾ ಓರಿಯಂಟಾಲಿಯಾ ವಾರಣಾಸಿ, ಶಿಕ್ಷಾ–41. ಪುಟ–91,

71 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–412.

72 ಡಾ. ಕೆ. ಕೃಷ್ಣಮೂರ್ತಿ, 'ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ' ಕರ್ನಾಟಕ ಸರ್ಕಾರ ಪಠ್ಯಪುಸ್ತಕ ಇಲಾಖೆ ಬೆಂಗಳೂರು, 1997, ಪುಟ–95.

73 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–414.

74 ಡಾ. ಶ್ರೀಕಾಂತ ಪಾಂಡೇಯ, 'ಋಗ್ವೇದ ಭಾಷ್ಯ ಭೂಮಿಕಾ' ಭಾರತೀಯ ವಿದ್ಯಾ ಪ್ರಕಾಶನ ವಾರಣಾಸಿ 1985. ಪುಟ–171.

75 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–32.

76 ವಿದ್ವಾನ್. ಎಚ್. ಪ್ಹಿ. ನಾಗರಾಜ, 'ವೇದ–ವೇದಾಂಗ' ಭವನದ ಗಾಂಧಿ ಕೇಂದ್ರ, ಬೆಂಗಳೂರು–01, 2002. ಪುಟ–41.

77 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–302.

78 ವಿದ್ವಾನ್. ಎಚ್. ಪ್ಹಿ. ನಾಗರಾಜ. 'ವೇದ–ವೇದಾಂಗ' ಭವನದ ಗಾಂಧಿ ಕೇಂದ್ರ, ಬೆಂಗಳೂರು–01, 2002. ಪುಟ–41.

79 ಅದೇ ಪುಟ–42.

80 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–303.

81 ಡಾ. ಕೆ. ಕೃಷ್ಣಮೂರ್ತಿ, 'ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ' ಕರ್ನಾಟಕ ಸರ್ಕಾರ ಪಠ್ಯಪುಸ್ತಕ ಇಲಾಖೆ ಬೆಂಗಳೂರು, 1997, ಪುಟ–86.

82 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–344.

83 ಅದೇ.

84 ಅದೇ.

85 ಸ್ವಾಮಿ ಆದಿದೇವಾನಂದ, 'ಉಪನಿಷತ್ತುಗಳ ಸಾರ ಸಂಗ್ರಹ' ಶ್ರೀ ರಾಮಕೃಷ್ಣಾಶ್ರಮ ಮೈಸೂರು 2006, ಪುಟ–10.

86 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣೀವಿಲಾಸ ಮುದ್ರಾಣಾಲಯ ಶ್ರೀರಂಗಮ್, 1964. ಮುಂಡಕ 2.2.9. ಪುಟ–46

87 ಅದೇ, ಕೇನ. ಶಾಂತಿಮಂತ್ರ ಪುಟ–4.

88 ಅದೇ, ಕೇನ 4.7. ಪುಟ–8.

89 ಅದೇ, ತೈತ್ತಿರೀಯ 2.4.1. ಪುಟ–62.

90 ಅದೇ, ಬೃಹದಾರಣ್ಯಕ 4.1.10. ಪುಟ–188.

91 ಡಾ. ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು, 'ಉಪನಿಷತ್ತು ಮತ್ತು ವಚನಗಳು ತೌಲನಿಕ ಅಧ್ಯಯನ' ಲಿಂಗಾಯತ ಅಧ್ಯಯನ ಅಕಾಡಮಿ ಬೆಳಗಾವಿ, 2004, ಪುಟ–8.

92 ಶ್ರೀ ಸಿದ್ಧೇಶ್ವರ ಸ್ವಾಮಿಗಳು, 'ಕೇನೋಪನಿಷತ್ತು' ಜ್ಞಾನಯೋಗಾಶ್ರಮ ವಿಜಾಪುರ, 1990. ಪುಟ–1.

93 ಡಾ. ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು, 'ಉಪನಿಷತ್ತು ಮತ್ತು ವಚನಗಳು ತೌಲನಿಕ ಅಧ್ಯಯನ' ಲಿಂಗಾಯತ ಅಧ್ಯಯನ ಅಕಾಡಮಿ ಬೆಳಗಾವಿ, 2004. ಪುಟ–6.

94 ಅದೇ ಪುಟ–25.

95 ಅದೇ.

96 ಸ್ವಾಮಿ ಆದಿದೇವಾನಂದ, 'ಉಪನಿಷತ್ತುಗಳ ಸಾರ ಸಂಗ್ರಹ' ಶ್ರೀ ರಾಮಕೃಷ್ಣಾಶ್ರಮ ಮೈಸೂರು 2006, ಪುಟ–11.

97 ಜಿ. ಹನುಮಂತರಾವ್, 'ಉಪನಿಷತ್ತುಗಳ ತತ್ತ್ವ' ಡಿ. ವಿ. ಕೆ. ಮೂರ್ತಿ ಮೈಸೂರು, 1971. ಪುಟ–6.

98 ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001. ಪುಟ–359.

99 'ಶ್ರೀಮದ್ಭಗವದ್ಗೀತಾ' ಗೀತಾಪ್ರೆಸ್, ಗೋರಖಪುರ, ವಿ.ಶ 2057. ಗೀತೆ 4.24, ಪುಟ–24.

100 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣೀವಿಲಾಸ ಮುದ್ರಾಣಾಲಯ ಶ್ರೀರಂಗಮ್, 1964. ಈಶ 2. ಪುಟ–1.

101 ಅದೇ, ಕಠ 1.1.3. ಪುಟ–9.

102 ಅದೇ, ಕಠ 1.1.4. ಪುಟ–9.

103 ಅದೇ, ಪ್ರಶ್ನ 1.3. ಪುಟ–28.

104 ಅದೇ, ಪ್ರಶ್ನ 2.1. ಪುಟ–30.

105 ಅದೆ, ಪ್ರಶ್ನ 3.1. ಪುಟ–32.

106 ಅದೇ, ಪ್ರಶ್ನ 4.1. ಪುಟ–34.

107 ಅದೆ, ಪ್ರಶ್ನ 5.1. ಪುಟ–36.

108 ಅದೇ, ಪ್ರಶ್ನ 6.1. ಪುಟ–37.

109 ಅದೇ, ಮುಂಡಕ 3.1.6. ಪುಟ–47.

110 ಅದೇ, ಮಾಂಡೂಕ 1. ಪುಟ–51.

111 ಅದೇ, ತೈತ್ತಿರೀಯ 1.11.1. ಪುಟ–58.

112 ಅದೇ, ತೈತ್ತಿರೀಯ 2.1.1. ಪುಟ–60.

113 ಅದೇ, ಛಾಂದೋಗ್ಯ 1.1.1. ಪುಟ–79.

114 ಅದೇ, ಛಾಂದೋಗ್ಯ 5.1.1. ಪುಟ–127.

115 ಅದೇ, ಬೃಹದಾರಣ್ಯಕ 1.4.10 ಪುಟ–188.

ಅಧ್ಯಾಯ ೩

ವಚನಸಾಹಿತ್ಯದ ಪರಿಚಯ ಮತ್ತು ದೇವರ ದಾಸಿಮಯ್ಯನವರ ಬದುಕು, ಬರಹ

3.1 ವಚನಸಾಹಿತ್ಯದ ಪರಿಚಯ

3.2 ವಚನಗಳ ಇತಿಹಾಸ

3.3 ವಚನವಾಙ್ಮಯ

3.4 ವಚನ ಪದದ ನಿಷ್ಪತ್ತಿ

3.5 ವಚನ ರಚನಾ ಶೈಲಿ ಹಾಗೂ ತಂತ್ರ

3.6 ವಚನಸಾಹಿತ್ಯದ ಉಗಮ

3.7 ಶಾಕ್ತಪಂಥದ ನಂಟು

3.8 ವಚನ ಪಂಥ

3.9 ವಚನಸಾಹಿತ್ಯ ಸ್ವರೂಪ

3.10 ವಚನಸಾಹಿತ್ಯದ ಹಿನ್ನೆಲೆ

3.11 ವಚನಸಾಹಿತ್ಯದ ವೈಶಿಷ್ಟ್ಯ

3.12 ದೇವರ ದಾಸಿಮಯ್ಯನವರ ಜೀವನ ಮತ್ತು ಸಾಹಿತ್ಯ

3.12.1. ಜನನ ಮತ್ತು ಸ್ಥಳ

3.12.2. ಬಾಲ್ಯ ಮತ್ತು ವಿದ್ಯಾಭ್ಯಾಸ

3.12.3. ವಿವಾಹ

3.12.4. ಸಂಸಾರ ಶ್ರೇಷ್ಟವೋ? ಸಂನ್ಯಾಸ ಶ್ರೇಷ್ಟವೋ?

3.12.5. ಕಾಯಕ

3.12.6. ತವನಿಧಿ

3.12.7. ಜೈನರು ಶೈವರಾದರು

3.13 ದೇವರ ದಾಸಿಮಯ್ಯನವರ ಕಾಲ

3.14 ಜೇಡರ ದಾಸಿಮಯ್ಯ ಮತ್ತು ದೇವರ ದಾಸಿಮಯ್ಯ

3.15 ಆದ್ಯವಚನಕಾರ

3.16 ದೇವರ ದಾಸಿಮಯ್ಯನವರ ಸಾಹಿತ್ಯ

3.17 ದೇವರ ದಾಸಿಮಯ್ಯನವರ ವಚನಗಳ ಪ್ರಕಟಣೆಯ ಇತಿಹಾಸ

3.18 ಅಂಕಿತನಾಮ

3.19 ಬಸವಾದಿ ಶರಣರ ಮೇಲೆ ದೇವರ ದಾಸಿಮಯ್ಯನವರ ವಚನಗಳ ಪ್ರಭಾವ

3.20 ಬಸವಾದಿ ಶರಣರ ದೃಷ್ಟಿಯಲ್ಲಿ ದೇವರ ದಾಸಿಮಯ್ಯನವರು

3.21 ವಚನ ಚಳುವಳಿಯಲ್ಲಿ ದೇವರ ದಾಸಿಮಯ್ಯನವರ ಪಾತ್ರ

3.22 ವಚನಸಾಹಿತ್ಯದ ಸಾರ್ವಭೌಮ ದೇವರ ದಾಸಿಮಯ್ಯನವರು

ಅಧ್ಯಾಯ 3

ವಚನ ಸಾಹಿತ್ಯದ ಪರಿಚಯ ಮತ್ತು ದೇವರ ದಾಸಿಮಯ್ಯನವರ ಬದುಕು, ಬರಹ

ಹಿಂದಿನ ಅಧ್ಯಾಯದಲ್ಲಿ ವೈದಿಕ ಸಾಹಿತ್ಯದ ಪರಿಚಯ ಮಾಡಲಾಗಿದೆ. ಅಲ್ಲಿ ವೇದ, ವೇದಾಂಗ ಮತ್ತು ಉಪನಿಷತ್ತಿನ ಅರ್ಥ, ವ್ಯಾಖ್ಯಾನ, ಸಂಖ್ಯೆ, ಕಾಲ, ಮತ್ತು ಪ್ರಮುಖ ಉಪನಿಷತ್ತುಗಳ ಬಗ್ಗೆ ವಿವರಿಸಲಾಗಿದೆ. ಈ ಅಧ್ಯಾಯದಲ್ಲಿ ವಚನಸಾಹಿತ್ಯದ ಪರಿಚಯ ಮತ್ತು ದೇವರ ದಾಸಿಮಯ್ಯನವರ ಬದುಕು ಬರಹ ಕುರಿತು ಅಧ್ಯಯನ ಮಾಡಲಾಗುತ್ತದೆ. ವಚನಸಾಹಿತ್ಯದ ಪರಿಚಯ, ಪದದ ವ್ಯುತ್ಪತ್ತಿ, ಅರ್ಥ, ಉಗಮ, ಸ್ವರೂಪ, ಹಿನ್ನೆಲೆ, ಮೊದಲಾದ ವಿಷಯಗಳನ್ನು ಚರ್ಚಿಸಲಾಗುತ್ತದೆ. ಹಾಗೂ ದೇವರ ದಾಸಿಮಯ್ಯನವರ ಜೀವನ ಮತ್ತು ಸಾಹಿತ್ಯ, ಅವರ ಜನನ, ಜನ್ಮಸ್ಥಳ, ಕಾಲ, ಜೀವನದ ಸನ್ನಿವೇಶಗಳು, ಪವಾಡಗಳು, ಅವರ ಸಾಹಿತ್ಯ, ಸಾಹಿತ್ಯದಲ್ಲಿ ಅವರ ಪಾತ್ರ, ಅಂಕಿತನಾಮ, ಬಸವಾದಿ ಶರಣರ ಮೇಲೆ ಇವರ ಪ್ರಭಾವ, ಇತ್ಯಾದಿ ವಿಷಯಗಳನ್ನು ಚರ್ಚಿಸಲಾಗುತ್ತದೆ.

3.1 ವಚನಸಾಹಿತ್ಯದ ಪರಿಚಯ

ಹನ್ನೊಂದನೆಯ ಶತಮಾನ ವಚನಸಾಹಿತ್ಯದ ಪ್ರಾರಂಭದ ಕಾಲ. 'ವಚನ' ಎಂಬ ಪದ ಮಾತು, ನುಡಿ ಎಂಬರ್ಥಗಳನ್ನು ಸೂಚಿಸುತ್ತದೆ. ಇದು ಸಾಹಿತ್ಯದ ಒಂದು ರೂಪ. ಸಾಹಿತ್ಯದ ಒಂದು ಪ್ರಕಾರ. ಈ ಶತಮಾನದಲ್ಲಿ ಬೀಜರೂಪದಲ್ಲಿದ್ದ ವಚನ ಸಾಹಿತ್ಯವು ಹನ್ನೆರಡನೆಯ ಶತಮಾನದಲ್ಲಿ ಹೆಮ್ಮರವಾಗಿ ಬೆಳೆಯಿತು. ಇದು ಕನ್ನಡ ಸಾಹಿತ್ಯದ ಕ್ರಾಂತಿಯುಗ. ಈ ಯಗದಲ್ಲಿ ಕಾವ್ಯ ರಚನೆಗೆ ಪ್ರಾಶಸ್ತ್ಯ ದೊರೆತು ನವಮತದ ತತ್ತ್ವಗಳು ಹೊರಹೊಮ್ಮಿದವು. ವಚನ ವಾಙ್ಮಯದ ಜನಪ್ರಿಯತೆಗೆ ಕಾರಣಗಳು ಹಲವಾರು ಇವೆ. ಮುಖ್ಯವಾಗಿ ಅವು ಕ್ಲಿಷ್ಟವಾಗಿರದೆ ಸರಳವಾಗಿವೆ. ಇಲ್ಲಿಯ ಭಾಷೆ, ಶೈಲಿ,

ಲಲಿತವಾಗಿ ಸುಲಭವಾಗಿ ಕನ್ನಡ ಸಾಹಿತ್ಯದ ಸತ್ವ ಸಂಪನ್ನವಾಗಿವೆ. ಸೂಕ್ಷ್ಮವಾಗಿ ವಿಚಾರಿಸಿದರೆ ವಚನಗಳು ಗದ್ಯ–ಪದ್ಯದ ಒಂದು ಸಾಹಿತ್ಯವೆಂದೇ ಹೇಳಬಹುದು.

ದಾಸಿಮಯ್ಯನವರು ಹೇಳಿದ "ಸೂಳ್ನುಡಿ" ಎಂಬ ಪದವು ಸೂಳ್+ನುಡಿ ಎಂಬ ಪದಗಳು ಸೇರಿ ಸಮಾಸಗೊಂಡಿದೆ. ಸೂಳ್+ನುಡಿ ಎಂದರೆ ಒಂದರ ನಂತರ ಒಂದರಂತೆ ಸರದಿಯ ಪ್ರಕಾರ ಆಡುವ ಮಾತು. ಆ ಮಾತುಗಳು ತನ್ನಷ್ಟಕ್ಕೆ ತಾನೇ ಮಾತಾಡಿಕೊಂಡಿದ್ದು ಇರಬಹುದು ಇಲ್ಲದೆ ಇನ್ನೊಬ್ಬರಿಗೆ ಹೇಳುವ ಮಾತಾಗಿರಬಹುದು ಅಥವಾ ಪ್ರಶ್ನೋತ್ತರ ಸಂಭಾಷಣೆಯ ರೂಪದಲ್ಲಿಯಾದರೂ ಇರಬಹುದು. ಅಂತೂ ದೇವರ ದಾಸಿಮಯ್ಯನವರು ಹೇಳುವ "ಸೂಳ್ನುಡಿ" ಎಂಬ ಪದದ ಲಕ್ಷಣಗಳು ವಚನಗಳಲ್ಲಿವೆ. ಶಿವಶರಣರ ಲೋಕಾನುಭವ, ಶಿವಾನುಭವ ವಿಚಾರಬಿಂದುಗಳು ಗದ್ಯ–ಪದ್ಯವೆರಡರ ವಿಲಕ್ಷಣವಾದ ಲಕ್ಷಣಗಳನ್ನು ಮೈಗೂಡಿಸಿಕೊಂಡು ವಚನರೂಪ ತಾಳಿ ಹೊರಬಂದಿದೆ. 'ವಚನ' ಮತ್ತು 'ಸೂಳ್ನುಡಿ' ಎಂಬ ಪದಗಳ ಅರ್ಥದ ವಿವರಣೆಯಂತೆ ದಾಸಿಮಯ್ಯನವರು ವಚನಗಳ ಮಹತ್ವ ಹೇಳುವಾಗ "ನುಡಿಗಡಣ" ಎಂಬ ಪದವು ಉಪಯೋಗಿಸಿದ್ದಾರೆ. ಈ ಪದಕ್ಕೂ ಮೇಲಿನ ಅರ್ಥವನ್ನೇ ಹೇಳಬಹುದು. ನುಡಿ+ಗಡಣ ಎಂದರೆ ಮಾತುಗಳ ಗುಂಪು, ಮಾತಿನ ಸಮೂಹ ಎಂದರ್ಥವಾಗುತ್ತದೆ. ಆದುದ್ದರಿಂದ ಮಾತಿನ ಸಮೂಹವೇ 'ವಚನ' ವೆಂಬರ್ಥ ಪಡೆಯುತ್ತದೆ. ಆ ಮಾತುಗಳು ಅನುಭಾವಯುಕ್ತವಾಗಿರಬೇಕು. ಅವುಗಳಿಂದ ಇನ್ನೊಬ್ಬರಿಗೆ ನೋವನ್ನುಂಟು ಮಾಡದೆ ಏಳಿಗೆಯನ್ನುಂಟು ಮಾಡುತ್ತಿರುವಂತಿರಬೇಕು. ಆ ಮಾತುಗಳು ದೇಶ, ಕಾಲ, ಜಾತಿ ಮೊದಲಾದವುಗಳಿಂದ ಬಿಡುಗಡೆ ಹೊಂದಿರಬೇಕು. ಆಗ ಮಾತ್ರ ಆ ಮಾತುಗಳು 'ವಚನ'ಗಳಾಗಲು ಸಾಧ್ಯ. ಅಂತಹ ವಚನಗಳೇ ಜ್ಯೋತಿರ್ಲಿಂಗಗಳಾಗುತ್ತವೆ. ಆದ್ದರಿಂದ ನಮ್ಮ ಮಾತುಗಳು ಮುತ್ತಿನಂತೆ, ಸ್ಪಟಿಕದ ಸಲಾಕೆಯಂತೆ, ಮಾಣಿಕ್ಯದ ದೀಪ್ತಿಯಂತೆ ಇರಬೇಕೆಂದು ಬಸವಣ್ಣನವರು ಅಭಿಪ್ರಾಯ ಪಟ್ಟಿದ್ದಾರೆ. ಏಕೆಂದರೆ ಎಲ್ಲರ ಮುಖದಿಂದ ಹೊರಟ ಮಾತುಗಳನ್ನು ವಚನಗಳಾಗಿ ಮಾರ್ಪಡಿಸಲು ಪ್ರಯತ್ನಿಸಿದರು. ಅಂದು ಅದು ಯಶಸ್ವಿಯಾಯಿತು.

ದಾಸಿಮಯ್ಯನವರು ಹೇಳಿದ 'ಸೂಳ್ನುಡಿ' ನುಡಿಗಡಣಗಳು ಮಾನವನ ಬದುಕಿಗೆ ಮಾರ್ಗದರ್ಶನೀಯವಾಗಿದೆ. ವಚನಗಳು ಒಬ್ಬ ಶರಣನಿಂದ ಜನ್ಮ ತಾಳಿಲ್ಲ. ಅನೇಕಾನೇಕ ಶರಣರಿಂದ ಜನ್ಮತಾಳಿವೆ. ಕರ್ನಾಟಕ ಸರ್ಕಾರ ಪ್ರಕಟಿಸಿದ ಸಮಗ್ರ ವಚನ ಸಂಪುಟಗಳಲ್ಲಿ ಶರಣರು ಹಾಗೂ ಅವರ ವಚನಗಳ ಸಂಖ್ಯೆಯನ್ನು ಗಮನಿಸಿದರೆ 383 ವಚನಕಾರರಿದ್ದಾರೆ. ಸುಮಾರು 14674 ವಚನಗಳಿವೆ. ಇದರಲ್ಲಿ 36 ಜನ ಸ್ತ್ರೀಯರು, ಅವರು ರಚಿಸಿದ ವಚನಗಳು 1351 ಹೊಂದಿವೆ. ಇಷ್ಟೊಂದು ಸಂಖ್ಯೆಯ ವಚನಕಾರರು ಹುಟ್ಟಿಕೊಂಡಿದ್ದು ಸಾಹಿತ್ಯಲೋಕದ ಒಂದು ವಿಸ್ಮಯವೇ ಸರಿ. ಇದು ಕನ್ನಡದ ಹೆಮ್ಮೆಯೇ ಆಗಿದೆ. ಶರಣರು ತಮ್ಮ ಲೋಕಾನುಭವಗಳನ್ನು ತಮಗೆ ಗೋಚರವಾದಂಥ

ಅನುಭವವನ್ನು ಮಾತಿನ ಸರಣಿಯ ಮೂಲಕ ಹೇಳುತ್ತ ಹೋದರು. ಆದ್ದರಿಂದ ಅವ ರಾಡಿದ ಮಾತುಗಳು 'ವಚನ'ಗಳಾದವು. ಅಲ್ಲದೆ ವಚನಗಳಲ್ಲಿ ಹಲವಾರು ಕಾವ್ಯಾಂಶದ ಗುಣಗಳನ್ನು ಕಾಣಬಹುದು. ಅಲ್ಲಲ್ಲಿ ಪ್ರಾಸ, ಲಯ ಅಲಂಕಾರಗಳೇ ಮೊದಲಾದ ಕಾವ್ಯ ಲಕ್ಷಣಗಳೆಂದು ಹೇಳಲಾಗುವ ಅಂಶಗಳು ಸಹಜವಾಗಿಯೇ ಬಂದಿವೆ.

ವಚನಗಳ ಪ್ರಾಚೀನತೆಯ ಬಗ್ಗೆ ವಿವಾದ ಉಂಟಾಗಲು ದೇವರ ದಾಸಿಮಯ್ಯ ಮೊದಲಾದ ಶರಣರು (ವಚನಕಾರರು) ತಮ್ಮ ವಚನಗಳಲ್ಲಿ ಹಿಂದಿನ ವಚನಕಾರರ ಬಗ್ಗೆ ಸೂಚನೆಯಿಟ್ಟಿರುವುದೇ ಕಾರಣ ಎಂಬ ಭಾವನೆ ಇದೆ. ದೇವರ ದಾಸಿಮಯ್ಯನವರು ಹೇಳುವ 'ಸೂಳ್ನುಡಿ', 'ಮೃಡಶರಣರ ನುಡಿಗಡಣ' ಮೊದಲಾದ ಮಾತುಗಳು ಬಸವಣ್ಣನವರು ಉಪಯೋಗಿಸಿರುವ 'ಆದ್ಯರ ವಚನ', ಇವುಗಳು ಇವರಿಗಿಂತ ಹಿಂದಿದ್ದ ಶಿವಶರಣರ ವಚನಗಳನ್ನೇ ಸೂಚಿಸುತ್ತಿವೆಯೆಂದು ಹೇಳಬಹುದು. ಆದರೆ ಸ್ಪಷ್ಟ ಆಧಾರಗಳಿಲ್ಲದೆ ಇರುವುದರಿಂದ, ದೊರೆತಿರುವ ಆಧಾರಗಳಿಂದ ದೇವರ ದಾಸಿಮಯ್ಯನವರೇ ವಚನವಾಙ್ಮಯದ ಮೂಲಪುರುಷ ಎಂದೂ, ವಚನಸಾರಸ್ವತ ಬ್ರಹ್ಮ ಎಂದೂ ಕರೆಯಬಹುದು.

3.2 ವಚನಗಳ ಇತಿಹಾಸ

ಕ್ರಿ.ಶ. 1008–1050ರಲ್ಲಿ ಆಳಿದ ಚಾಲುಕ್ಯ ಅರಸನಾದ ಜಯಸಿಂಹನ ಕಾಲದಲ್ಲಿ ದೇವರ ದಾಸಿಮಯ್ಯನವರು ಇದ್ದದ್ದು ಸ್ಪಷ್ಟವಾಗುತ್ತದೆ. ಇವರ 188 ವಚನಗಳು ಮತ್ತು ಒಂದು ಸ್ವರವಚನ ದೊರೆತಿವೆ. ಇವರ ನಂತರ ಅಂದರೆ ಬಸವಪೂರ್ವ ವಚನಕಾರರೆಂದರೆ ಓಹಿಲದೇವ, ಉದ್ಭಟದೇವ, ಮಾದಾರ ಚನ್ನಯ್ಯ, ಕೊಂಡಗೊಳಿ ಕೇಶಿರಾಜ, ಡೋಹರ ಕಕ್ಕಯ್ಯ, ಕೆಂಭಾವಿ ಭೋಗಣ್ಣ ಮೊದಲಾದವರು ಬಸವಣ್ಣನವರ ಹಿರಿಯ ಸಮಕಾಲೀನವರು. ಅನಂತರ 12ನೆಯ ಶತಮಾನದಲ್ಲಿ ವಚನಸಾಹಿತ್ಯ ಹೆಮ್ಮರವಾಗಿ ಬೆಳೆಯಿತು. ಈ ಶತಮಾನದಲ್ಲಿ ಸುಮಾರು 205ಜನ ವಚನಕಾರರು ಮತ್ತು 33 ಜನ ವಚನಕಾರ್ತಿಯರು ಬರೆದ ಸುಮಾರು 14 ಸಾವಿರ ವಚನಗಳು ದೊರೆತಿವೆ.

13 ಮತ್ತು 14ನೆಯ ಶತಮಾನದಲ್ಲಿ ವಚನಗಳು ರಚನೆ ಆಗಿಲ್ಲವೆಂದು ಕಾಣುತ್ತದೆ. 15ನೆಯ ಶತಮಾನದಲ್ಲಿ ವಚನಗಳ ಸಂಕಲನ, ಸಂಪಾದನೆ, ವ್ಯಾಖ್ಯಾನಗಳ ಕಾರ್ಯವು ನಡೆಯಿತು. ಈ ಪವಿತ್ರಕಾರ್ಯಕ್ಕೆ ಹಂಪೆಯು ಮುಖ್ಯ ಕೇಂದ್ರವಾಗಿತ್ತು. ಇದು ಸಂಕಲನ ಯುಗ. ಪ್ರೌಢದೇವರಾಯನ (ಕ್ರಿ.ಶ.1419–47) ಆಶ್ರಯದಲ್ಲಿ ಮಹಾಲಿಂಗದೇವ, ಜಕ್ಕಣಾರ್ಯ, ಗುಬ್ಬಿಯ ಮಲ್ಲಣ್ಣ ಈ ಮೂವರು ಬಸವಾದಿ ಪ್ರಮಥರ ವಚನಗಳನ್ನು ಏಕೋತ್ತರಷಟ್‌ಸ್ಥಲ ಪದ್ಧತಿಗನುಗುಣವಾಗಿ ಸಂಕಲಿಸಿದ್ದಾರೆ. ಕಲ್ಲು ಮಠದ ಪ್ರಭು ದೇವರು ಸಂಕಲನಕಾರರಿದ್ದಂತೆ ವ್ಯಾಖ್ಯಾನಕಾರರೂ ಆಗಿದ್ದರು. ಇದೇ ಶತಮಾನದಲ್ಲಿ ಶರಣರ ಬಿಡಿ ವಚನಗಳನ್ನು ಸಂವಾದ ರೂಪದಲ್ಲಿ ಸಂಯೋಜಿಸಿ ಶೂನ್ಯಸಂಪಾದನೆ

ಯನ್ನು ಮೊದಲ ಬಾರಿಗೆ ರೂಪಿಸಿದ್ದ ಕೀರ್ತಿ ಶಿವಗಣಪ್ರಸಾದಿ ಮಹಾದೇವಯ್ಯನಿಗೆ ಸಲ್ಲುತ್ತದೆ.

16ನೆಯ ಶತಮಾನದಲ್ಲಿ ಎಡೆಯೂರು (ಯಡಿಯೂರು) ಸಿದ್ಧಲಿಂಗ ಶಿವಯೋಗಿಗಳ (ಸು.ಕ್ರಿ.ಶ 1550) ಪಾತ್ರ ವಚನ ರಚನೆಯಲ್ಲಿ ಪ್ರಮುಖವಾಗಿದೆ. ಇಲ್ಲಿಯವರೆಗೆ ಇವರ ದೊರೆತ ವಚನಗಳು 701. ಇವರ ವಚನಾಂಕಿತ ಮಹಾಲಿಂಗ ಗುರುಶಿವಸಿದ್ಧೇಶ ಪ್ರಭುವೆ ಎಂದಾಗಿದೆ. 700ಜನ ಶಿಷ್ಯ ಸಂತತಿಯೊಂದಿಗೆ ನಾಡಿನಲ್ಲೆಲ್ಲಾ ಸುತ್ತಿದುಳಿದು ಧರ್ಮ ಜಾಗೃತಿ ಮಾಡಿದ ಮಹಾನುಭಾವರಿವರು. ಇವರ ಶಿಷ್ಯ ಸ್ವತಂತ್ರ ಸಿದ್ಧಲಿಂಗೇಶ್ವರ ಸುಮಾರು 430 ವಚನಗಳು ರಚಿಸಿದ್ದಾರೆ. ಇವರ ವಚನಾಂಕಿತ ನಿಜಗುರು ಸ್ವತಂತ್ರ ಸಿದ್ಧಲಿಂಗೇಶ್ವರ ಎಂದಾಗಿದೆ. ಇನ್ನಿಬ್ಬರು ಶಿಷ್ಯರಾದ ಗುಮ್ಮಳಾಪುರದ ಸಿದ್ಧಲಿಂಗೇಶ್ವರ ಹಾಗೂ ಘನಲಿಂಗದೇವ. ಇವರೂ ವಚನಗಳನ್ನು ರಚಿಸಿದ್ದಾರೆ. ಇವರಲ್ಲಿ ಗುಮ್ಮಳಾಪುರದ ಸಿದ್ದಲಿಂಗೇಶ್ವರರ 18 ವಚನಗಳು, ಘನಲಿಂಗದೇವರ 66 ವಚನಗಳು ದೊರೆತಿವೆ. ಹೀಗೆ ಯಡಿಯೂರು ಸಿದ್ಧಲಿಂಗೇಶ್ವರರ ಶಿಷ್ಯ–ಪ್ರಶಿಷ್ಯರು ಯಡಿಯೂರನ್ನು ಕೇಂದ್ರಮಾಡಿಕೊಂಡು ವಚನಗಳನ್ನು ರಚಿಸಿದ್ದಾರೆ.

ಇದಾದ ನಂತರ 17ನೆಯ ಶತಮಾನದಲ್ಲಿ ವಿರಕ್ತ ಶಿಖಾಮಣಿ ಜೇವರ್ಗಿಯ ಷಣ್ಮುಖ ಸ್ವಾಮಿಗಳು ವಚನಕಾರರಾಗಿ, ಅಖಂಡೇಶ್ವರ ಎಂಬ ಅಂಕಿತದಿಂದ 718 ವಚನಗಳನ್ನು ರಚಿಸಿದ್ದಾರೆ. ನಂತರ ಒಬ್ಬಿಬ್ಬರನ್ನು ಬಿಟ್ಟರೆ ವಚನ ರಚನೆಯಾಗಲಿಲ್ಲ. 19ನೆಯ ಶತಮಾನದಲ್ಲಿ ನಿರುಪಮ ನಿರಾಳ ಮತ್ಪ್ರಭು ಮಹಾಂತಯೋಗಿ ಎಂಬ ಅಂಕಿತದಲ್ಲಿ ವಚನಗಳನ್ನು ರಚಿಸಿದ ಕಡಕೊಳ ಮಡಿವಾಳಪ್ಪನವರು ಅಂತವರಲ್ಲಿ ಒಬ್ಬರು.

20ನೆಯ ಶತಮಾನದಲ್ಲಿ 200ಕ್ಕೂ ಹೆಚ್ಚಿನ ಜನ ಸುಮಾರು 30 ಸಾವಿರಕ್ಕೂ ಹೆಚ್ಚು ವಚನಗಳನ್ನು ಬರೆದಿದ್ದಾರೆ. ಇವರಲ್ಲಿ 80ಕ್ಕೂ ಹೆಚ್ಚು ಮಹಿಳೆಯರಿದ್ದಾರೆ. ಆದರೆ ಈ 20ನೆಯ ಶತಮಾನದ ಸೃಜನಕಾರ್ಯವು ಅಷ್ಟೇ ಸಮೃದ್ಧಿಯಾಗಿ ವ್ಯಾಪಕವಾಗಿ ನಡೆದದ್ದು ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ 12ನೆಯ ಶತಮಾನದ ನಂತರ ಮತೊಮ್ಮೆ ಸುವರ್ಣಯುಗವನ್ನು ಪಡೆಯುತ್ತೆನ್ನಬಹುದು. ವ್ಯತ್ಯಾಸವಿಷ್ಟೆ. ಅಂದಿನ ಉದ್ದೇಶ ಸಮಷ್ಟಿಗತವಾದ ಸಮಾಜ ಸುಧಾರಣೆಯಾಗಿತ್ತು. ಇಂದಿನದು ವ್ಯಷ್ಟಿಗತವಾದ ಅಭಿವ್ಯಕ್ತಿಯ ಮಾಧ್ಯಮವಾಗಿದೆ. ಪ್ರೊ. ಜಿ.ಎಸ್. ಸಿದ್ದಲಿಂಗಯ್ಯನವರು ಹೇಳುವಂತೆ "ಪ್ರಾಚೀನ ವಚನಕಾರರು ಸಾಹಿತ್ಯ ರಚನೆಗೆಂದೇ ಹೊರಟವರಲ್ಲ. ಬಹುಶಃ ಆ ವಚನಕಾರರ ದೃಷ್ಠಿಯಲ್ಲಿ ಸಾಹಿತ್ಯಿಕ ಸಿದ್ಧಿ ಕೇವಲ ಅನುಷಂಗಿಕವಾಗಿತ್ತು. ಇಂದಿನ ವಚನಕಾರರಿಗೆ ವಚನಗಳು ಸಾಹಿತ್ಯರೂಪವಾಗಿಯೇ ಉಳಿದಿದೆ. ಅದರಿಂದಾಗಿಯೇ ಸಣ್ಣಕಥೆ, ಕಾದಂಬರಿಗಳು, ಪ್ರಬಂಧ, ಕವಿತೆಗಳಂತೆ ಇದೂ ಒಂದು ಸಾಹಿತ್ಯ ಪ್ರಕಾರವಾಗಿ ತೋರಿದೆ. ಪ್ರಾಚೀನ ವಚನಗಳ ಕಾಳಜಿಗಳೇ ಬೇರೆ. ಇಂದಿನ ವಚನಗಳ ಕಾಳಜಿಗಳೇ ಬೇರೆ"[1]

ಕೆಲವು ಪ್ರಮುಖ ಆಧುನಿಕ ವಚನಕಾರರೆಂದರೆ ಎಸ್.ವಿ. ರಂಗಣ್ಣ, ಹರ್ಡೆಕರ ಮಂಜಪ್ಪ, ಡಾ.ಜ.ಚ.ನಿ, ಶ್ರೀ ಮೂಜಗಂ, ಮುಂಡರಗಿಯ ಶ್ರೀ ಜಗದ್ಗುರು ಅನ್ನದಾನೀಶ್ವರ ಮಹಾಸ್ವಾಮಿಗಳು, ಡಾ. ಎಸ್ ವಿ ಪರಮೇಶ್ವರ ಭಟ್ಟ, ಡಾ. ಸಿದ್ದಯ್ಯ ಪುರಾಣಿಕ, ಮಹಾದೇವ ಬಣಕಾರ, ಡಾ. ಡಿ.ಎಸ್.ಕರ್ಕಿ ಮೊದಲಾದವರು.

15/16ನೆಯ ಶತಮಾನಗಳಂತೆ ಈ ಶತಮಾನದಲ್ಲಿ ಸುವ್ಯವಸ್ಥಿತ ಸಂಗ್ರಹ, ಸಂಪಾದನೆ, ವಿಮರ್ಶೆ, ವಿಶ್ಲೇಷಣೆ, ವ್ಯಾಖ್ಯಾನ ಮೊದಲಾದ ಕಾರ್ಯಗಳು ನಡೆದಿವೆ. ಈ ಕಾರ್ಯಗಳಲ್ಲಿ ವ್ಯಕ್ತಿಗಳು, ಸಂಘಸಂಸ್ಥೆಗಳು, ಮಠ–ಮಂದಿರಗಳು ವಿಶ್ವವಿದ್ಯಾನಿಲಯಗಳು ಪ್ರಮುಖ ಪಾತ್ರವಹಿಸಿವೆ. ಜೊತೆಗೆ ವಚನಗಳನ್ನು ಬೇರೆ ಬೇರೆ ಭಾಷೆಗಳಿಗೆ ಅನುವಾದ ಮಾಡಲಾಗಿದೆ. ಈ ಕ್ಷೇತ್ರದಲ್ಲಿ ವಚನ ಪಿತಾಮಹ ಫ.ಗು. ಹಳಕಟ್ಟಿಯವರು ಪಾತ್ರ ಪ್ರಮುಖವಾಗಿದೆ. ಹಲವು ಅಪ್ರಕಟಿತ ವಚನಗಳ ತಾಡೋಲೆ ಗರಿಗಳನ್ನು ಸಂಗ್ರಹಿಸಿ, ಸಂಶೋಧನೆ ನಡೆಸಿ ಸಾಮಾನ್ಯರಿಗೆ ತಿಳಿಯುವ ಹಾಗೆ ಟೀಕೆ ಟಿಪ್ಪಣಿ ಸಹಿತ ವಚನಗಳನ್ನು ಪ್ರಕಟಿಸಿದರು.

3.3 ವಚನ ವಾಙ್ಮಯ

ಸಾಹಿತ್ಯಾಕಾಶದಲ್ಲಿ ಕಾಲಕಾಲಕ್ಕೆ ಹಲವಾರು ಸಾಹಿತ್ಯ ಪ್ರಕಾರಗಳು ನಿರಂತರವಾಗಿ ನಕ್ಷತ್ರೋಪಾದಿಯಲ್ಲಿ ಮಿನುಗುತ್ತಲೇ ಇರುತ್ತವೆ. ಅವುಗಳಲ್ಲಿ 11/12 ನೆಯ ಶತಮಾನದಲ್ಲಿ ಬೆಳಗಿದ ವಚನಸಾಹಿತ್ಯ ಅಮೂಲ್ಯವಾದ ಧ್ರುವತಾರೆಯಾಗಿದೆ. ವಚನ ಸಾಹಿತ್ಯವು ಕನ್ನಡದ ಅಪೂರ್ವವಾದ ಸಾಹಿತ್ಯ ರತ್ನವಾಗಿದೆ. ಆದರ ಮಹತ್ವಕ್ಕೆ ಕಾರಣ ವಚನ ವಾಙ್ಮಯವು ದೇಶ, ಕಾಲ, ವಸ್ತು, ರೂಪ, ಭಾಷೆ, ಆಶಯ, ಮೌಲ್ಯ, ಈ ಮೊದಲಾದ ದೃಷ್ಟಿಯಿಂದ ಈ ಹಿಂದೆ ರಚನೆಯಾದ ಕನ್ನಡ ಅಥವಾ ಇನ್ನಾವುದೋ ಭಾಷೆಯ ಸಾಹಿತ್ಯಕ್ಕಿಂತಲೂ ಸಂಪೂರ್ಣ ಭಿನ್ನವಾಗಿರುವುದು. ಇದು ಶರಣರ ನಿಜ ಜೀವನದ ವ್ಯಕ್ತಿನಿಷ್ಠವಾದ ಸಾಹಿತ್ಯವಾಗಿದೆ. ಮಾನವನ ಸಂಪೂರ್ಣ ಬದುಕಿನ ಮೌಲ್ಯಗಳಿಗೆ ಕೈಮರವಾಗಿದೆ. ಇದರ ಸ್ವರೂಪ ದೀರ್ಘಕಾವ್ಯದ ರೀತಿಯಲ್ಲಿ ಸಂಕ್ಷಿಪ್ತತೆಯನ್ನು ಮೈಗೂಡಿಸಿಕೊಂಡು ಛಂದೋಬಂಧದ ಕಟ್ಟಿಗೆ ಒಳಗಾಗದ; ಸ್ವಚ್ಛಂದವಾದ ಸರಳ ಸುಂದರತೆಯಿಂದ ಕೂಡಿದ ಸಾಹಿತ್ಯ ರಾಶಿಯಾಗಿದೆ. ಜನಪದರ ಮೂಲದಿಂದ ಬಂದ ಸರಳತೆ ಸಹಜತೆಯಿಂದ ಒಡಮೂಡಿದ ಸೂರ್ಯ ಕಿರಣೋಪಾದಿಯೇ ಈ ವಚನ ವಾಙ್ಮಯ ರಾಶಿ. ಆದುದ್ದರಿಂದಲೇ ಎಂ.ಆರ್. ಶ್ರೀಯವರು "ವಚನಸಾಹಿತ್ಯ ಎರವಲು ತಂದಿದ್ದಲ್ಲ, ಅದು ಕನ್ನಡದ ಸ್ವಾರ್ಜಿತ ಸ್ವತ್ತು. ವಚನಕಾರರು ಸಂಸ್ಕೃತದ ಆಚಾರ್ಯರಲ್ಲ ಅವರು ಅಚ್ಚ ಕನ್ನಡದ ಬೇಸಾಯಗಾರರು"[2] ಎಂದು ಹೇಳಿದ್ದಾರೆ. ವಚನಕಾರರು ಸಂಸ್ಕೃತದ ಆಚಾರ್ಯರಾಗಲಿಲ್ಲ. ಆದರೆ ವೇದ ಆಗಮಗಳ ರಹಸ್ಯವನ್ನು ಉಪನಿಷತ್ತಿನ ತಿರುಳನ್ನು ಸ್ವಾನುಭವದ ಬೆಳಕನ್ನು ತಿಳಿಯಾದ ಕನ್ನಡದ ಮೂಲಕ ವಚನಸಾಹಿತ್ಯ ಅಭಿವ್ಯಕ್ತಗೊಳಿಸಿದವರು.

ವಚನಸಾಹಿತ್ಯವು ಅತ್ಯಂತ ಜನಪ್ರಿಯವಾದದ್ದು. ಸಾಹಿತ್ಯ ಚರಿತ್ರೆಯಲ್ಲಿ ಇದಕ್ಕೆ ಉನ್ನತ ಸ್ಥಾನ ದೊರೆಕಿದೆ. ಶರಣರ ನುಡಿಗಳು ಅಥವಾ ವಚನಗಳು ವಿಶಿಷ್ಟ ಬಗೆಯ ಆಕರ್ಷಣೆಯಿಂದ ಕೂಡಿವೆ. ಅದಕ್ಕೆ ಮುಖ್ಯ ಕಾರಣವೇನೆಂದರೆ ಅವುಗಳಲ್ಲಿರುವ ಸಹಜತೆ ಮತ್ತು ವಸ್ತು ಗಾಂಭೀರ್ಯ. ವಚನಕಾರರು ಬಳಸಿರುವ ಭಾಷೆಯೂ ಕೂಡ ಸರಳ ಹಾಗೂ ಸುಂದರವಾಗಿವೆ. ವಚನಗಳನ್ನು ವಿದ್ಯಾವಂತರು, ಅವಿದ್ಯಾವಂತರು, ಮತ್ತು ಜನಸಾಮಾನ್ಯರು ಸುಲಭವಾಗಿ ಅರ್ಥಮಾಡಿಕೊಳ್ಳಬಹುದಾಗಿದೆ. ಸಂಸ್ಕೃತ ಅಥವಾ ಇನ್ನಾವುದೋ ಪ್ರಾಚೀನ ಭಾಷೆಗಳಲ್ಲಿರುವ ಅಧ್ಯಾತ್ಮಿಕ ಜ್ಞಾನವನ್ನು ಸರಳ, ಸುಲಲಿತ ಮತ್ತು ಹಿತಮಿತವಾದ ಸ್ವಶೈಲಿಯಲ್ಲಿ ಪ್ರತಿಪಾದಿಸಿದ ಕೀರ್ತಿ ಶರಣರದಾಗಿದೆ. ಶರಣರು ವಚನಗಳ ಮುಖಾಂತರ ಅವಿದ್ಯಾವಂತಾದಿ ಸಾಮಾನ್ಯ ಜನರಿಗೆ ಅಧ್ಯಾತ್ಮಿಕ ವಿಷಯವನ್ನು ಮನಮುಟ್ಟುವಂತೆ ಹೇಳುವ ಮುಖ್ಯ ಉದ್ದೇಶದಿಂದಲೇ ವಚನಗಳನ್ನು ರಚಿಸಿದ್ದಾರೆ.

"ಬಹುಕಾಲದಿಂದಲೂ ಪಂಡಿತರ ತುತ್ತಾಗಿದ್ದ, ವಿಶಿಷ್ಟವರ್ಗದವರ ಸೊತ್ತಾಗಿದ್ದ, ರಾಜ್ಯಲಕ್ಷ್ಮಿಯ ತೊತ್ತಾಗಿದ್ದ ಸರಸ್ವತಿಯ ಸಂಸ್ಕೃತ ಭಂಡಾರವನ್ನು ಕಡೆಗಾಣಿಸಿ ತಮ್ಮ ಅನುಭವದ ಕಮ್ಮಟದಲ್ಲಿಯೇ ಅಚ್ಚೊತ್ತಿದ ವಚನ ನಾಣ್ಯಗಳನ್ನು ಜನಸಾಮಾನ್ಯರಲ್ಲೆಲ್ಲ ಸಲ್ಲುವಂತೆ ಹರಡಿಸಿದವರು ವಚನಕಾರರು. ದೇವವಾಣಿಗೆ ಜನವಾಣಿಯಾಗುವುದು ಅಸಾಧ್ಯವಾದಾಗ ಜನವಾಣಿಯನ್ನೇ ದೇವವಾಣಿಯ ಮಟ್ಟಕ್ಕೇರಿಸಿದ ಪವಾಡ ವೀರಶೈವ ವಚನಕಾರರದು."[3] ವಚನಕಾರರು ಕನ್ನಡಸಾಹಿತ್ಯದ ಇತಿಹಾಸದಲ್ಲಿಯೇ ಯಾರಿಂದಲೂ ಸಾಧ್ಯವಾಗದಂತಹ ಅಪೂರ್ವವಾದ ಸಾಹಿತ್ಯ ಸೃಷ್ಟಿಯನ್ನು ಮಾಡಿರುವುದು ಗಮನಾರ್ಹ ಸಂಗತಿಯಾಗಿದೆ. ವಚನಗಳು ಗದ್ಯದಲ್ಲಿದ್ದರೂ ಅವುಗಳಲ್ಲಿರುವ ಶಬ್ದ, ಪದಗಳ ಲಾಲಿತ್ಯ ಹಾಗೂ ಲಯಬದ್ಧತೆಗಳು ವಚನಗಳನ್ನು ಕಾವ್ಯದ ಮಟ್ಟಕ್ಕೇರಿಸಿವೆ. ವಚನಕಾರರು ವಚನಗಳ ರಚನೆಗೆ ವ್ಯಾಕರಣ ನಿಯಮಗಳನ್ನಾಗಲಿ, ಛಂದಸ್ಶಾಸ್ತ್ರವನ್ನಾಗಲಿ ಗಣನೆಗೆ ತಂದುಕೊಳ್ಳದೆ ತಾವು ಹೇಳಬೇಕೆಂದಿರುವ ಉದ್ದೇಶಿತ ಅನುಭವ ಮತ್ತು ಅನುಭಾವ (ಅರ್ಥ)ವನ್ನು ಸರಳ ಸ್ವಷ್ಟವಾಗಿ ವಿಚಾರಿಸುವುದರತ್ತ ಹೆಚ್ಚಿನ ಗಮನ ಹರಿಸಿರುವುದನ್ನು ಮರೆಯಲಾಗದು. ಕನ್ನಡಸಾಹಿತ್ಯ ಅಥವಾ ಇನ್ನಿತರ ಸಾಹಿತ್ಯದ ಇತಿಹಾಸ ಗಮನಿಸಿದಾಗ ವಚನಸಾಹಿತ್ಯವು ಪ್ರಥಮ ಚಳುವಳಿಯ ಮಾಧ್ಯಮವಾಗಿದೆ ಎನ್ನಬಹುದು. ವರ್ಗ, ವರ್ಣ, ಲಿಂಗಭೇದ, ರಹಿತವಾದ ಸಮಾಜವನ್ನು ಕಟ್ಟುವ ಧಾರ್ಮಿಕಚಳುವಳಿ ಇದಾಗಿದೆ. ಮಾನವ ಬದುಕಿಗೊಂದು ಹೊಸ ಅರ್ಥವನ್ನು ಒದಗಿಸಿ ಚೈತನ್ಯಮೂಡಿಸಲು ಮಿಡಿದ ಆತ್ಮಾನುಭವದ ಅಧ್ಯಾತ್ಮಿಕ ಸಾಹಿತ್ಯವಿದು. ಬದುಕಿನ ಎಲ್ಲ ಸಮಸ್ಯೆಗಳನ್ನು ಬದಿಗೊತ್ತಿ ಅವುಗಳಿಗೊಂದು ಅರ್ಥಪೂರ್ಣವಾದ ಪರಿಹಾರವನ್ನು ಹುಡುಕಿದ ಮಾನವೀಯ ಮೌಲ್ಯವೇ ಈ ವಚನವಾಙ್ಮಯ. ವಚನಕಾರರು, ಧಾರ್ಮಿಕ ಇಲ್ಲವೆ ತಾತ್ವಿಕ ಸಿದ್ಧಾಂತಗಳ ಪರ್ಯಾಲೋಚನೆಯನ್ನು ಮುಂದಿಡುವುದಾಗಿರದೆ ಕಟ್ಟುನಿಟ್ಟಿನ ನೈತಿಕಾಚರಣೆ ಮತ್ತು ಅಂತರಂಗ, ಬಹಿರಂಗ ಪರಿಶುದ್ಧಿಯಿಂದಲೇ

ಧಾರ್ಮಿಕ ಮತ್ತು ಸಾಮಾಜಿಕ ಉತ್ಕರ್ಷ ಸಾಧ್ಯವೆಂದು ನಂಬಿದ್ದರು. ಅಂದಿನ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಮತ್ತು ರಾಜಕೀಯ ಲೋಪದೋಷಗಳನ್ನು ನಗ್ನ ರೂಪದಲ್ಲಿಯೇ ಜನರಿಗೆ ಎತ್ತಿ ತೋರಿಸುವುದಕ್ಕೋಸ್ಕರವೇ ವಚನಸಾಹಿತ್ಯವನ್ನು ನಿರ್ಮಾಣ ಮಾಡಿದ್ದಾರೆ.

ಶರಣರು ತಳೆದ ನಿಲುವು ಹಾಗೂ ವಚನಸಾಹಿತ್ಯವು ಯಾವುದೇ ಒಂದು ಮತಕ್ಕಾಗಲಿ, ವರ್ಣಕ್ಕಾಗಲಿ, ಧರ್ಮಕ್ಕಾಗಲಿ ಸೀಮಿತವಾದುದಲ್ಲ. ಅದು ಇಡೀ ಮಾನವ ಜನಾಂಗದ ಸ್ವತ್ತಾಗಿದೆ. ಮನುಕುಲದ ಉದ್ಧಾರವೇ ಶರಣರ ಜೀವಿತದ ಪರಮೋದ್ದೇಶ ವಾಗಿದೆ. ಅಂತೆಯೇ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿ ಅವರ ಮಾಡಿದ ಕಾರ್ಯಸಾಧನೆಗಳು ಬಹುಕಾಲ ಸ್ಥಿರಸ್ಥಾಯಿಯಾಗಿ ನಿಲ್ಲುವಂಥವು ಗಳಾಗಿವೆ. ಸಕಲ ಜೀವಿಗಳಿಗೆ ಲೇಸನ್ನು ಬಯಸುವ ಸದುದ್ದೇಶದಿಂದ ಸಮಾನತೆಯ, ಸ್ವಾತಂತ್ರ್ಯದ ಕಹಳೆಯೇ ವಚನಗಳು. ಸಹೋದರತ್ವಗಳ ಮೂಲಕ ಸುಂದರ, ಸುಖಿ, ಸಮಾಜ ಕಟ್ಟಬೇಕೆಂಬುವುದೇ ಶರಣರ ಧ್ಯೇಯವಾಗಿದೆ. ಮಾನವನು ತನ್ನ ಅಂತರಂಗ ಬಹಿರಂಗ ಶುದ್ಧಿಯ ಮೂಲಕ ಆತ್ಮಕಲ್ಯಾಣ ಇದರ ಮೂಲಕ ಲೋಕಕಲ್ಯಾಣ ಎಂಬುದು ವಚನಕಾರರ ಸಿದ್ಧಾಂತ.

3.4 ವಚನ ಪದದ ನಿಷ್ಪತ್ತಿ

ವಚನವೆಂದರೆ ಮಾತು, ಮಾತನಾಡುವುದು, ವ್ಯಕ್ತಪಡಿಸುವುದು, ಭಾಷೆಕೊಡುವುದು ಮೊದಲಾದ ಅರ್ಥಗಳಿಂದಲೂ ಸೂಚಿಸುತ್ತದೆ. ಸಂಸ್ಕೃತದ "ವಚ್" ಧಾತುವಿಂದ ನಿಷ್ಪತ್ತಿಯಾದ ವಚನ ಶಬ್ದವನ್ನೇ ಕನ್ನಡದಲ್ಲೂ ಬಳಸಿದ್ದಾರೆ. ಸಂಸ್ಕೃತದಲ್ಲಿ ವಚನ ಎಂಬುದಕ್ಕೆ ಭಾಷಣ, ಮಾತು, ವಾಕ್ಯನಿಯಮ, ಆಜ್ಞೆ, ಹೇಳಿಕೆ, ಜಾಹೀರ ಪ್ರಕಟಣೆ ಮೊದಲಾದ ಅರ್ಥಗಳಿವೆ. ವಿಶೇಷ ಅರ್ಥವನ್ನುಳ್ಳ ಮಾತೇ ವಚನ. ಅನುಭವದಿಂದ ಜನ್ಯವಾದ ಅನುಭಾವಿಕ ಮಾತುಗಳೇ ವಚನ. ಅನುಭಾವಿಗಳಿಂದ ಅನುಭವಿಸಿ ಇತರರು ಅನುಭವಿಸಲು ಹಾಕಿಕೊಟ್ಟ ಸಂಪ್ರದಾಯಕ್ಕೆ ವಚನವೆಂದೂ ಕರೆಯಬಹುದು. ದೈನಂದಿನ ಆಡು ಮಾತಿನಂತೆ ಸರಳ ಸುಂದರ ಮಾತುಗಳಲ್ಲಿ ಕಾವ್ಯಾಂಶದ ಆಕರ್ಷಣೆಗೆ ಒಳಗಾಗದೆ ಕಾವ್ಯಾಂಶದ ಭಾರವನ್ನು ಸಾಮಾನ್ಯರ ಮೇಲೆ ಹೇರದೆ ಹೇಳಿಕೊಂಡಂತಹ ಮಾತಿದು.

3.5 ವಚನ ರಚನಾ ಶೈಲಿ ಹಾಗೂ ತಂತ್ರ

ವಚನ ಪದವನ್ನು ಹಳೆಗನ್ನಡ ಸಾಹಿತ್ಯ ರಚನಾಕಾಲದಲ್ಲಿ ಬಳಸಿರುವುದನ್ನು, ಅನೇಕ ಪಂಡಿತರು ದೃಢಪಡಿಸಿದ್ದಾರೆ. "ಗದ್ಯ ಮತ್ತು ಪದ್ಯಗಳ ಮಿಶ್ರಣವಾದ ಹಳೇಗನ್ನಡದ ಚಂಪೂಕಾವ್ಯಗಳಲ್ಲಿ ಪದ್ಯಗಳ ಮಧ್ಯೆ ಅಲ್ಲಲ್ಲಿ ಬರುವ ಗದ್ಯ ಭಾಗವನ್ನು ವಚನವೆಂದೇ ಕರೆದಿರುವುದನ್ನು ಜ್ಞಾಪಿಸಿಕೊಳ್ಳಬಹುದು."[4] ವಚನವೆಂದರೆ ಗದ್ಯವೆಂಬ ಅರ್ಥವನ್ನು ಈ ಮೇಲಿನ ಉಕ್ತಿಯಿಂದ ತಿಳಿಯಬಹುದು. ಆದರೂ ವಚನ ಪ್ರಕಾರವು

ಹಳೆಗನ್ನಡ ಕಾಲದಲ್ಲಿತ್ತೆಂದು ಹೇಳಲಾಗದು. ವಚನಗಳ ವೈಶಿಷ್ಟ್ಯತೆ ಮುಂದುವರೆಯುತ್ತ ಗೇಯಗೀತಗಳಾದರೂ ಕಾವ್ಯಗಳೆನಿಸಿಕೊಳ್ಳದ ವಿಶೇಷ ಲಕ್ಷಣವು ಉಂಟು. ಸಾಮಾನ್ಯ ವಾಗಿ ಕಾವ್ಯ ಲಕ್ಷಣಗಳುಳ್ಳವನ್ನು ಕಾವ್ಯಗಳೆಂದು ಪರಿಗಣಿಸಲ್ಪಡುತ್ತವೆ. ವಚನಗಳು "ರಾಮಾದಿವತ್ ಪ್ರವರ್ತಿತವ್ಯಂ ನ ರಾವಣಾದಿವತ್" ಎಂದು ಬೋಧಿಸುವ ಕಾವ್ಯ ಗಳಂತೆಯೆ ತತ್ತ್ವ ಬೋಧಕಗಳಾಗಿವೆ. ಹಾಗೆಯೇ ಮಾತಿನಲ್ಲಿ ವ್ಯಕ್ತಪಡಿಸುವಂತ ದ್ದಾದರೂ ಗದ್ಯರೂಪದ ಅಂಶಿಕ ಸ್ವಭಾವವುಳ್ಳದ್ದಾದರೂ ಸಂಪೂರ್ಣ ಗದ್ಯವೆಂದು ಒಪ್ಪಿಕೊಳ್ಳಲಾಗದು. ಪ್ರಸ್ತುತ ಗದ್ಯಶೈಲಿ ಮುಖ್ಯವಾದದ್ದೋ ಶಬ್ದಶೈಲಿ ಮುಖ್ಯ ವಾದದ್ದೋ? ಅಪ್ರಾಸಂಗಿಕ ಚರ್ಚೆಯ ವಿಷಯವಾದರೂ ವಸ್ತುನಿಷ್ಠ ಅಧ್ಯಯನದಲ್ಲಿ ಸ್ವರೂಪವನ್ನು ಅರಿತಲ್ಲಿ ಪ್ರಯೋಜನವೇ ಆಗುತ್ತದೆ. ಕನ್ನಡ ಸಾಹಿತ್ಯದ ಕಣ್ವ ಎನಿಸಿಕೊಂಡಿರುವ ತಿ.ನಂ.ಶ್ರೀಯವರು ವಚನಸಾಹಿತ್ಯದ ಲಕ್ಷಣವನ್ನು "ಪದ್ಯದಷ್ಟು ಬಿಗಿಯಲ್ಲ ಸಾಮಾನ್ಯ ಗದ್ಯದಷ್ಟು ಸಡಿಲವೂ ಅಲ್ಲ" ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ ದ್ದಾರೆ.[5] ವಚನವೆಂಬುದು ನಿರ್ದಿಷ್ಟವಾಗಿ ಪದ್ಯ ಅಥವಾ ಗದ್ಯವೆಂದು ಹೇಳಲಾಗದು. ಅಂದರೆ ವಚನಗಳನ್ನು ಗದ್ಯದಂತೆ ಓದಲೂ, ಪದ್ಯದಂತೆ ಹಾಡಲೂ ಬರುತ್ತವೆ. ಎಂದು ತಿ.ನಂ.ಶ್ರೀಯವರ ಅಭಿಪ್ರಾಯವನ್ನು ದೃಢಪಡಿಸುತ್ತದೆ. ವಚನ ಸ್ವರೂಪವನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಗದ್ಯ ಪದ್ಯತ್ವಕ್ಕಿಂತಲೂ ವಿಶಿಷ್ಟ ಶೈಲಿಯುಳ್ಳ ಹೊಸ ಸಾಹಿತ್ಯ ಪ್ರಕಾರವೆಂದೇ ಪರಿಗಣಿಸಬಹುದು. "ಯಾವ ಒಂದು ಸೂತ್ರದಿಂದಲೂ ವಿವರಿಸಲು ಸಾಧ್ಯವಲ್ಲದ ತಂತ್ರವೊಂದು ವಚನ ಗದ್ಯವನ್ನೇ ಸಾಮಾನ್ಯ ಗದ್ಯದಿಂದ ಬೇರ್ಪಡಿಸಿ ವಚನಗಳನ್ನು "ಗದ್ಯಗೀತ"ಗಳನ್ನಾಗಿ ಮಾರ್ಪಡಿಸಿವೆ.[6] ವಚನಕ್ಕೆ "ಗದ್ಯಗೀತೆ" ಎಂದು ತಿಪ್ಪೇರುದ್ರಸ್ವಾಮಿಯವರು ಕರೆದರೆ ಡಿ.ಎಲ್ ನರಸಿಂಹಾಚಾರ್ಯರು "ಶಿವಶರಣರ ಹೃದಯ ವಿದ್ರಾವಕ ಗೀತೆ"[7] ಎಂದು ಕರೆದಿದ್ದಾರೆ. ರಂ.ಶ್ರೀ ಮುಗಳಿ ಯವರು ವಚನಸಾಹಿತ್ಯವನ್ನು ಕುರಿತು ತಮ್ಮ ಗ್ರಂಥವಾದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ "ವಚನಗಳೆಂದರೆ ನಡುಗನ್ನಡ ಶೈಲಿಯ ಅನುಭಾವ ಗದ್ಯದಲ್ಲಿ ಉಸುರಿದ ಆಧ್ಯಾತ್ಮ ಭಾವಗೀತೆಗಳು"[8] ಎಂದು ಹೇಳಿದ್ದಾರೆ. ಈ ಎಲ್ಲ ಅಭಿಪ್ರಾಯಗಳು ಪ್ರಸ್ತುತ ಸಾಹಿತ್ಯದ ಅನೇಕಾಂತವನ್ನು ಅಭಿವ್ಯಕ್ತಿಸುತ್ತವೆ. ನಿರ್ದಿಷ್ಟವಾಗಿ ವ್ಯಕ್ತಪಡಿಸಲಾಗದ ಅವ್ಯಕ್ತಭಾವ ವಚನಶಾಸ್ತ್ರದ ಶೈಲಿ ಎಂದು ಹೇಳಬಹುದು.

ಕೆಲವು ವಚನಗಳು ಎಲ್ಲಾ ಬಂಧವನ್ನು ಮೀರಿ ಪಾರಮಾರ್ಥಿಕ ನಿಲುವಿನಂತೆ ಶಬ್ದ–ತತ್ತ್ವದ ಚೌಕಟ್ಟಿನಿಂದ ಹೊರಜಿಗಿದು ನಿರಾಧಾರ ವ್ಯಾಪ್ತಿಯಲ್ಲಿ ವಿಹರಿಸುವ ಸಾಹಿತ್ಯವನ್ನೇ ಮಾರ್ಪಡಿಸಿಕೊಂಡಿರುವುದನ್ನು ಕಾಣಬಹುದು. ಜನಪದೀಯ ಶೈಲಿಯ ತತ್ತ್ವ ವ್ಯಕ್ತಿತ್ವದಲ್ಲಿ ಕಾಣಬಹುದು. ಉತ್ತಮ ಕಾವ್ಯದ ಮೂಲಂಶಗಳಾದ ಧ್ವನಿ, ರಸ, ಅಲಂಕಾರ, ಶಬ್ದ ಮೊದಲಾದ ಕಾವ್ಯತತ್ತ್ವಗಳೊಂದಿಗಿನ ಸಾಹಚರ್ಯವುಳ್ಳದ್ದಾದರೂ ಕಾವ್ಯವೆನಿಸಿಕೊಳ್ಳದೆ ಇರುವುದು ಒಂದು ಸೋಜಿಗ. "ವಚನಗಳನ್ನು ಹಾಡುತ್ತಿದ್ದುದ್ದರಿಂದ

ಅವುಗಳನ್ನು 'ಗೀತ' ಎಂಬುದಾಗಿ ವಚನಕಾರರು ಕರೆದು ಕೊಂಡಿದ್ದಾರೆ. ಹರಿಹರನೂ ಹಾಗೆಯೇ ನಿರ್ದೇಶಿಸಿದ್ದಾನೆ. ಆದರೆ 'ಗೀತ'ಗಳು ಪದ್ಯಗಳಲ್ಲ. ನಮಗೆ ತಿಳಿದ ಮಟ್ಟಿಗೆ ವಚನಗಳನ್ನು ಎಲ್ಲಿಯೂ ಪದ್ಯಗಳೆಂದು ಕರೆದಿಲ್ಲ".[9] ಎಂದು ಎಂ.ಚಿದಾನಂದ ಮೂರ್ತಿಯವರು ಅಭಿಪ್ರಾಯ ಪಟ್ಟಿದ್ದಾರೆ. ವಚನಗಳಿಗೆ ಗೀತವೆಂದು ಕರೆದಿಲ್ಲ, ಆದರೆ ಹಾಡಲೂ ಬಹುದು ಎಂದು ಹಿಂದೆಯೆ ನೋಡಿದ್ದೇವೆ. ಬಸವಣ್ಣನವರ "ಹಾಡಿದೊಡೆ ಎನ್ನನ ಒಡೆಯನ ಹಾಡುವೆ....." "ಆನು ಒಲಿದಂತೆ ಹಾಡುವೆ" ಎಂಬ ವಚನಗಳನ್ನು ಗಮನಿಸಿದಾಗ ವಚನಗಳನ್ನು ಹಾಡುತ್ತಿದ್ದರೆಂದು ತಿಳಿದು ಬರುತ್ತದೆ. ಸಾಮಾನ್ಯವಾಗಿ ಹಾಡುಗಳಿಗೆ ಗೀತ, ಪದ್ಯಗಳೆಂದು ಕರೆಯುತ್ತಾರೆ. ಆದರೆ ವಚನಗಳು ಪದ್ಯ ಗದ್ಯಗಳೆರಡನ್ನೂ ಮೀರಿ ನಿಂತಿವೆ.

ಈ ಮೇಲಿನ ಅನೇಕ ವಿದ್ವಾಂಸರ ಅಭಿಪ್ರಾಯಗಳನ್ನು ಗಮನಿಸಿ ವಚನವೆಂದರೆ ಮಾತು, ನುಡಿ, ಹೇಳಿಕೆ, ಭಾಷೆ, ಗೀತ, ಗದ್ಯಗೀತ, ಭಾವಗೀತ ಹೀಗೆ ಹಲವಾರು ಮುಖಗಳುಳ್ಳ ಬಹುಮುಖ ಮಾಧ್ಯಮವೆಂದು ಹೇಳಬಹುದು.

3.6 ವಚನಸಾಹಿತ್ಯದ ಉಗಮ

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ಕವಿ ಕಾವ್ಯ ಪರಿಚಯ ಮಾಡಿಕೊಳ್ಳ ಬೇಕೆನ್ನುವವರಿಗೆ ಸಾಧನ ಸಾಮಗ್ರಿ ಸಿಗುವುದು ತೀರ ವಿರಳ. ನಮ್ಮ ಅನೇಕ ಪ್ರಾಚೀನ ಕವಿಗಳು ಕೃತಿಗಳನ್ನು ರಚಿಸಿ ತಮ್ಮ ಆರಾಧ್ಯ ದೈವಕ್ಕೆ ಅರ್ಪಿಸಿ ಕೃತಾರ್ಥರಾಗುತ್ತಿದ್ದರು. ಪದ್ಯಗಳಲ್ಲಿ ಅಥವಾ ತಮ್ಮ ಕೃತಿಗಳಲ್ಲಿ ತಮ್ಮ ಹೆಸರನ್ನು ಹಾಗೂ ಕೃತಿಯ ಹೆಸರನ್ನು ಸೂಚಿಸಿ ರಚಿಸುವುದು ಅವರ ಸಂಪ್ರದಾಯವಾಗಿತ್ತು. ಆದರೆ ಸಂಪ್ರದಾಯಗಳ ಮಧ್ಯೆ ತಮ್ಮ ಹೆಸರನ್ನು ಹೇಳಿಕೊಳ್ಳದ ಕವಿಗಳೂ ಉಂಟು. ಇದಕ್ಕೆ ಭಕ್ತಿಯ ಆತ್ಮಾರ್ಪಣೆಯೆಂಬ ಪರಾಕಾಷ್ಠೆ ಕಾರಣ. ನಮ್ಮ ಕವಿಗಳ ಚರಿತ್ರೆಯನ್ನು ಮಿಕ್ಕ ಕವಿಗಳ ಉಲ್ಲೇಖದಿಂದ ಸಿದ್ದಪಡಿಸಿಕೊಳ್ಳಬೇಕಾಗುತ್ತದೆ. ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕವಿಗಳನ್ನು ಕುರಿತು ಅವರ ಹೆಸರು, ಮತ, ಸಾಹಿತ್ಯ ಮೊದಲಾದ ವಿಷಯವಾಗಿ ವಿಚಿತ್ರವಾದ ಚರ್ಚೆ ನಡೆಯುತ್ತಲೇ ಇವೆ. ಉದಾಹರಣೆಗೆ :– ದಾಸಿಮಯ್ಯನು ಜೇಡನೋ, ದೇವರ ದಾಸಿಮಯ್ಯನೋ? ಇವನು ರಚಿಸಿದ ವಚನಗಳ ಸಂಖ್ಯೆ ಎಷ್ಟು? ಇವನು ಬಸವಣ್ಣನ ಕಾಲದವನೋ, ಪೂರ್ವಜನೋ? ಇವನ ಹೆಂಡತಿ ಯಾರು ? ಪತ್ನಿ ದುಗ್ಗಳೆ ವಚನಗಾರ್ತಿಯೇ? ಎಂಬ ಹತ್ತು ಹಲವಾರು ವಿಷಯಗಳ ಚರ್ಚೆಗಳು ನಡೆಯುತ್ತಲೇ ಇವೆ.

ವೇದೋಪನಿಷತ್ತುಗಳ ಶ್ರುತಿ–ಸ್ಮೃತಿಗಳಲ್ಲಿಯ ನಿಗೂಢ ತತ್ತ್ವದರ್ಶನಗಳು ಜನಸಾಮಾನ್ಯರಿಗೆ ಎಟಕದೇ ಹೋದಾಗ ಅವುಗಳಲ್ಲಿಯ ರಹಸ್ಯಗಳನ್ನು, ಉಪದೇಶ ಮೃತಗಳನ್ನು ಸಂಸ್ಕರಿಸಿ ಮಾನವತೆಗೆ ಸಹಜವಾಗಿ ಅರ್ಥೈಸಿಕೊಳ್ಳುವಂತೆ ಮಾಡಿದವರು ವಚನಕಾರರು. ಇದೇ ವಚನಸಾಹಿತ್ಯದ ಉಗಮಕ್ಕೆ ಕಾರಣವಾಗಿರಬಹುದು.

ವಚನಕಾರರು ತಮ್ಮ ಕಣ್ಮುಂದೆ ನಡೆದ ಸಂಗತಿಗಳನ್ನು ಮತ್ತು ತಮ್ಮ ಅನುಭವಗಳಿಂದ ತಿಳಿದ ವಿಷಯಗಳನ್ನು ತಮ್ಮ ಆಡುಭಾಷೆಯಲ್ಲಿ ನ್ಯಾಯಬಾಹಿರವಾಗದಂತೆ ಉಸುರಿ ಸರಳ ಮಾರ್ಗದಿಂದ ದ್ವಿಪದಿ, ಚೌಪದಿ, ತ್ರಿಪದಿಗಳಲ್ಲಿ ವಚನಗಳನ್ನು ರಚಿಸಿದ್ದಾರೆ.

ವಚನಸಾಹಿತ್ಯವು ಇದೇ ಕಾಲದಲ್ಲಿ ಉಗಮವಾಯಿತೆಂದು ಹೇಳಲಾಗದು. ಯಾವುದೇ ಸಾಹಿತ್ಯ ಪ್ರಕಾರ ಹುಟ್ಟಿದ ಸರಿಯಾದ ಕಾಲವನ್ನು ಹೇಗೆ ಸೂಚಿಸಲಾಗದೋ ಇದು ಹಾಗೆಯೇ. ವಚನವು ಕೇವಲ ಭಾಷೆಯ ಒಂದು ಕೊಂಡಿ ಮಾತ್ರವಾಗಿರದೇ ಧಾರ್ಮಿಕ ಚಳುವಳಿಯ ಪರಂಪರಾಗತ ಜ್ಞಾನ, ಒಳಹರಿವಿನ ಸಂಸ್ಕರಿತ ರೂಪವೆಂದು ಅಭಿಪ್ರಾಯ ಪಡೆಯಬಹುದು. ಅನೇಕ ತಲೆಮಾರುಗಳ ಸಂಸ್ಕೃತಿಗಳ ಸಂಘರ್ಷಗಳೆಲ್ಲದರ ಒಟ್ಟುರೂಪ ವಚನಗಳ ಉಗಮ ಕಾಲವೆಂದು ಹೇಳಬಹುದು. ವಚನಗಳ ಹುಟ್ಟು ಹೆಚ್ಚಿನದಾಗಿ ಅನುಭವ ಜನ್ಯತತ್ತ್ವಗಳೊಂದಿಗೆ, ವೈದಿಕತತ್ತ್ವ ಮತ್ತು ತಾಂತ್ರಿಕತತ್ತ್ವಗಳ ಸಂಮಿಶ್ರಣದಿಂದ ಹುಟ್ಟಿಕೊಂಡ ರಸಪಾಕ.

3.7 ಶಾಕ್ತ ಪಂಥದ ನಂಟು

ವಚನಗಳಲ್ಲಿ ವೈದಿಕ ಪ್ರಭಾವವು ಹೆಚ್ಚಿದೆಯೆಂದು ಅಥವಾ ತಾಂತ್ರಿಕ ತತ್ತ್ವವನ್ನು ಹೆಚ್ಚು ಬಳಸಿಕೊಂಡಿದ್ದಾರೆಂದು ನಿರ್ಧಾರವಾಗಿ ಹೇಳಲಾಗುವುದಿಲ್ಲ. ಆದರೆ ವಚನಗಳಲ್ಲಿ ಅಲ್ಲಲ್ಲಿ ವೈದಿಕ ಸಾಹಿತ್ಯದ ಉಪಶಾಖೆಗಳಾದ ಉಪನಿಷತ್ತು. ಆಗಮ ಮುಂತಾದವುಗಳ ಅಳವಡಿಕೆಯನ್ನು ಕಾಣಬಹುದು. ತಾಂತ್ರಿಕತತ್ತ್ವದ ಪ್ರಭಾವವನ್ನೂ ಕಾಣಬಹುದು. ಆದರೆ ಸಂಶ್ಲಿಷ್ಟ ರೂಪದಲ್ಲಿದರ ಅಳವಡಿಕೆ ಕಂಡು ಬರುತ್ತದೆ. ಇವೆಲ್ಲದರಕ್ಕಿಂತಲೂ ಹೆಚ್ಚಾಗಿ ಭಕ್ತಿಯೇ ವಚನಗಳ ಉತ್ಪತ್ತಿಗೆ (ಉಗಮಕ್ಕೆ) ಕಾರಣವಾಯಿತು. ಮೊದ ಮೊದಲು ವಚನಸಾಹಿತ್ಯ ತತ್ತ್ವಗಳ ಅನುಷ್ಠಾನಕ್ಕೆ ಪ್ರಾಧಾನ್ಯ ನೀಡಿತ್ತಾದರೂ ನಂತರದಲ್ಲಿ ಭಕ್ತಿಯ ಅಥವಾ ಅನುಭಾವದ ನಿರೂಪಣೆಗೆ ಪ್ರಾಮುಖ್ಯತೆ ನೀಡಿತು.

"ಅತ್ಯಂತ ಗಮನಾರ್ಹ ಸಂಗತಿಯೆಂದರೆ ಉತ್ತರದಲ್ಲಿ ಗೋರಕ್ಷ ಮತ್ತು ದಕ್ಷಿಣದಲ್ಲಿ ಶಂಕರ.....ಶಂಕರರು ವಿವರ್ತಕ್ಕೆ ಸಿಕ್ಕಿಕೊಂಡರೆ ಗೋರಕ್ಷ ಚಕ್ರದಲ್ಲಿ ತೊಡಕಿಕೊಂಡ. ರಾಮಾನುಜ, ಬಸವರು ಸಮಾಜವನ್ನು ಹಿಡಿದುಕೊಂಡು ಬಂದರು. ಧಾರೆಯನ್ನು ಮುಂದುವರೆಸಿದರು. ಅವರು ದೇವರನ್ನು ಮನುಷ್ಯರ ಬಳಿಗೆ ಎಳೆದರು. ಇದೇ ಶಕ್ತಿಯನ್ನು ಹಿಡಿದು ಶೈವಶಕ್ತಿ ವಿಶಿಷ್ಟವಾಗಿ, ವೀರವಾಗಿ ಸಾಮಾಜಿಕ, ಶಿವಕ್ಕಾಗಿ ಹೋರಾಡಿತು. ವೀರಶೈವ ಅದು ದೈವ, ಜಗತ್ತಿನಲ್ಲಿ ಬಗೆಗೆ ಇದ್ದ ಎಲ್ಲ ಭ್ರಾಂತಿಯನ್ನು ಹೊಡೆದು ಹಾಕಿ ಜನತೆಯನ್ನು ಗಟ್ಟಿಯಾದ ನೆಲದ ಮೇಲೆ ನಿಲ್ಲಿಸಿತು."[10] ಮೇಲಿನ ಮಾತು ಶೈವ ಪಂಥದಿಂದ ವೀರಶೈವ ಪಂಥವು ಕವಲೊಡೆಯಿತೆಂದು ಸ್ಪಷ್ಟವಾಗುತ್ತದೆ. ವೀರಶೈವ ಪಂಥವು ವಚನಸಾಹಿತ್ಯವನ್ನು ತನ್ನ ತತ್ತ್ವವಾಗಿಸಿಕೊಂಡಿತ್ತೆಂದು ನಂಬುವು ದಾದರೆ ಶೈವಪಂಥವು ವಚನಗಳಿಗೆ ಶಕ್ತಿ ಒದಗಿಸಿದೆಯೆಂದು ಒಪ್ಪಲೇಬೇಕು. ಏಕೆಂದರೆ

ಗೋರಕ್ಷನಾಥನು ಶಾಕ್ತ/ಶೈವ ಪರಂಪರೆಯ ಶರಣರನ್ನು ಮೇಲಿನ ವಾಕ್ಯದಲ್ಲಿ ಸಾಂಕೇತಿಕವಾಗಿ ವಚನಕಾರರನ್ನಾಗಿ ತೆಗೆದುಕೊಳ್ಳಲಾಗಿದೆ. ಅಲ್ಲದೆ ವೇದ ಪೂರ್ವ ದಿಂದಲೂ ಹರಿಯುತ್ತ ಸಾಗುತ್ತಿದ್ದ ಶೈವ ಪರಂಪರೆಯನ್ನು ವಚನ ಪರಂಪರೆಯಲ್ಲಿ ಸೇರಿಲ್ಲವೆನ್ನಲಾಗದು. ಏಕೆಂದರೆ ವೈದಿಕ ಆಚರಣೆಗಳಿಗೂ ಶೈವ/ಶಕ್ತಿ ಪಂಥ ಆಚರಣೆಗೂ ಸಂಬಂಧವನ್ನು ಪಂಡಿತರೆಲ್ಲರೂ ಒಪ್ಪಿರುವಾಗ ಶೈವರಾಹಿತತ್ತ್ವವನ್ನು ವಚನಗಳಲ್ಲಿ ನಿರೂಪಿಸಲಾಗದು.

ಇವೆಲ್ಲರ ಜೊತೆಗೆ ಇಲ್ಲಿ ಅಳವಡಿಸಿಕೊಂಡಿರುವುದು ಸಮಾನತೆ, ಸಾಮಾನ್ಯತನವನ್ನು ದೇವರಿಗೂ ಜೋಡಿಸಿ ವಿಶೇಷವಾದದ್ದನ್ನು ನಿರ್ವಿಶೇಷವೆಂದು ನಿರೂಪಿಸುವುದು. ಹೀಗಾಗಿ ವಚನಸಾಹಿತ್ಯವು ಹೆಚ್ಚು ಪ್ರಚಾರಗೊಂಡಿತು. ಜೊತೆಗೆ ಶೈವ ಪರಂಪರೆಯ ಭದ್ರಬುನಾದಿಯೊಂದಿಗೆ ಅಂಗಳಕಟ್ಟಲು ಹೊರಟ ವಚನಕಾರರು ಭಕ್ತಿ ಕಟ್ಟಡವನ್ನು ಕಟ್ಟಿದರು. ಇದರಿಂದ ದಕ್ಷಿಣ ಭಾರತದಲ್ಲಿ ಭಕ್ತಿಪಂಥವು ವಿರಾಜಮಾನ ವಾಯಿತು. ಉತ್ತರದಲ್ಲಿ ಭಕ್ತಿ ಪಂಥವು ಮಿಕ್ಕೆಲ್ಲಾ ಧರ್ಮಕ್ಕಿಂತಲೂ ಪ್ರವರ್ಧಮಾನವಾಗುತ್ತ ಸಾಗಿದಂತೆ ದಕ್ಷಿಣದಲ್ಲೂ ಅದರಲ್ಲೂ ಕರ್ನಾಟಕದಲ್ಲಿ ವಚನ ಪರಂಪರೆ ಬೆಳೆಯುತ್ತ ಸಾಗಿತು.

3.8 ವಚನ ಪಂಥ

ಅಂದು ಜನಸಾಮಾನ್ಯರು ಹೊಸ ಸಮಾಜ ವ್ಯವಸ್ಥೆಗೆ ಹಾತೊರೆಯುತ್ತಿದ್ದ ಕಾಲವದು. ಆ ಸನ್ನಿವೇಶದಲ್ಲಿ ಶಿವಭಕ್ತಿ ಪಾರಂಗತರಾದ ಶರಣರಿಗೆ ಪ್ರಗತಿಪರ ವಿಚಾರಗಳನ್ನು ಯಾವುದರ ಮುಖಾಂತರ ಹೊರಹಾಕಬೇಕೆಂಬ ಗೊಂದಲವುಂಟಾಗಿರ ಬಹುದು. ಅವರು ಜನಸಾಮಾನ್ಯರಿಗೆ ತಿಳಿಯವಂತೆ ಹೇಳಬೇಕಾಗಿತ್ತು. ಆದರೆ ಅದು ಹೇಗೆ ಹೇಳುವುದು? ಎಂಬ ಪ್ರಶ್ನೆ ಅವರ ಹೃದಯದಲ್ಲಿ ಮೂಡದೆ ಇರಲಿಲ್ಲ. ಪುರಾಣ ಕಾವ್ಯಗಳ ಸಂಸ್ಕೃತ ಭೂಯಿಷ್ಟ ಭಾಷೆ ಸಾಮಾನ್ಯರಿಗೆ ನಿಲುಕಲಾರದು. ಕಥೆ ಹೇಳಿ ಹೇಳಿ ಬೌದ್ಧ, ಜೈನ ಧರ್ಮಗಳು ಸೋತಿದ್ದವು. ಕಥೆಬೇಡ, ಕಾವ್ಯ ಪುರಾಣ ಬೇಡ, ನೇರವಾಗಿ ಸರಣಿ ಮಾತುಗಳ (ನುಡಿಗಡಣಗಳ) ಮೂಲಕ ಹೇಳೋಣ ಎಂಬ ನಿರ್ಧಾರಕ್ಕೆ ಶಿವಶರಣರು ಬಂದಂತೆ ತೋರುತ್ತದೆ. ಅಂತೆಯೇ ಅವರ ಬೋಧನರೂಪ ಹೇಳಿಕೆಯು ವಚನಗಳಾಗಿ ಪರಿಶೋಭಿಸಿದವು. ವಚನಕಾರರೆಲ್ಲರೂ ಸಾಮಾನ್ಯವಾಗಿ ಧರ್ಮ ಬೋಧಕರು, ಅವರು ಕವಿಗಳಲ್ಲ, ಪುರಾಣ ಪಂಡಿತರಲ್ಲ. ಅವರ ಬೋಧಾತ್ಮಕ ಹೇಳಿಕೆ ಗಳೆಂಬ ವಚನಗಳು ಸರಳ ಕನ್ನಡದಲ್ಲಿ ಮೂಡಿ ಬಂದಿರುವುದರಿಂದ ಜನಸಾಮಾನ್ಯರು ಥಟ್ಟನೆ ಅವುಗಳಿಗೆ ಮಾರು ಹೋದರು. ಬಹು ತೀವ್ರವಾಗಿ ಅವರು ವಚನಗಳಿಗೆ ಸ್ಪಂದಿಸಿದರು. ಜನರ ಈ ಪ್ರತಿಕ್ರಿಯೆಯನ್ನು ಕಂಡು ಶಿವಶರಣರು ಉತ್ಸಾಹಿಗಳಾದರು. ಸಮಾಜದಲ್ಲಿ ವ್ಯಕ್ತಿಗಳ ಪಾತ್ರವೇನು? ಆತ್ಮೋದ್ಧಾರದೊಂದಿಗೆ ಸಾಮಾಜಿಕ ನೆಮ್ಮದಿಯ ಬದುಕು ಹೇಗೆ? ಈ ವಾಸ್ತವ ಬದುಕಿನಲ್ಲಿ ಪಾರಮಾರ್ಥವನ್ನು ಹೇಗೆ ಸಾಧಿಸಬೇಕೆಂಬ

ಮಾರ್ಗವನ್ನು ತಿಳಿಸಲು ವಚನರೂಪವನ್ನು ಬಳಕೆಗೆ ತಂದರು. ಹೀಗೆ ವಿಶಿಷ್ಟ ಸಂದರ್ಭದಲ್ಲಿ "ವಚನ" ರೂಪವು ತಳೆದಂತೆ ತೋರುತ್ತದೆ.

ವಚನಗಳನ್ನು ಮೊದ ಮೊದಲು ಶರಣರು ತಮಗೆ ತಿಳಿದಂತೆ ಹೇಳುತ್ತ ಹೋದರು. ಶೋಕವು ಶ್ಲೋಕವಾಗಿ ಪರಿಣಮಿಸಿ ರಾಮಾಯಣ ಮಹಾ ಕಾವ್ಯವಾದಂತೆ, ಶರಣರು ಸಹಜವಾಗಿ ಆಡಿರುವ ಮಾತುಗಳೇ ವಚನಗಳಾದವು. ಮಾತಿನ ಶೈಲಿಯನ್ನು ವಚನಗಳಲ್ಲಿ ಕಾಣಬಹುದು. ಹೇಳುವುದನ್ನು ಸಂಕ್ಷಿಪ್ತ ಮತ್ತು ಸುಂದರವಾಗಿ ಹೇಳಬೇಕೆಂಬ ಇಚ್ಛೆ ಶಿವಶರಣರದು. ಅದು ಜನರ ಮೇಲೆ ಪರಿಣಾಮ ಬೀರುವುದು ಎಂಬುವುದನ್ನು ಅರಿತು ಅವರು ಅದನ್ನು ಚಾಚೂ ತಪ್ಪದೆ ಅನುಸರಿಸಿದರು. ಆದುದ್ದರಿಂದ ಅವರ ಆಡಿದ ಮಾತು 'ಜ್ಯೋತಿಯಾಯಿತು', ಮುತ್ತಿನಹಾರವಾಯಿತು.

ಹನ್ನೆರಡನೆಯ ಶತಮಾನವನ್ನು ಕನ್ನಡಸಾಹಿತ್ಯದ ಸುವರ್ಣಯುಗವೆಂದೇ ವಿದ್ವಾಂಸರು ಕರೆದಿದ್ದಾರೆ. ಇದಕ್ಕೆ ಕಾರಣವೆಂದರೆ ಅಂದು ಎಲ್ಲ ಸಾಹಿತ್ಯಕ್ಕಿಂತಲೂ ವಚನಸಾಹಿತ್ಯ ವಿಪುಲವಾಗಿ ಶರಣರಿಂದ ಬೆಳೆದು ನಿಂತದ್ದು. ಈ ವಚನಸಾಹಿತ್ಯ ಪೂರ್ವದಲ್ಲಿ ಇತ್ತೆ? ಇದಕ್ಕೆ ಪ್ರೇರಣೆಗಳೇನು? ಇದರ ಉಗಮ ಯಾವಾಗ ಹೇಗೆ? ಆಗಿದೆ ಎಂಬುವುದನ್ನು ಹಲವಾರು ವಿದ್ವಾಂಸರು ಚರ್ಚಿಸಿದ್ದಾರೆ. ಅವರ ಚರ್ಚೆಯ ಸಾರವು ಹೀಗಿದೆ–

ಎಂ.ಆರ್. ಶ್ರೀನಿವಾಸಮೂರ್ತಿಯವರು ವಚನ ರಚನೆಗಳ ರೂಪಿಗೆ ತಮಿಳನಾಡಿನ ಶೈವ ಪಥ ಪ್ರಸಾರ 10ನೆಯ ಶತಮಾನದ "ತೇವಾರಂ" ಎಂಬ ತಮಿಳು ಕೀರ್ತನ ಗ್ರಂಥ ಮತ್ತು ಅದರಿಂದಾದ ತಮಿಳು ಕ್ರಾಂತಿಯ ಪ್ರಭಾವವನ್ನು ತಿಳಿಸುತ್ತಾರೆ. ಆದರೆ ವಚನ ಸಾಹಿತ್ಯ ಅಚ್ಚ ಕನ್ನಡದ್ದೆ ಎಂದು ಸ್ಪಷ್ಟವಾಗಿ ಹೇಳುತ್ತಾರೆ.[11] ಡಿ.ಎಲ್. ನರಸಿಂಹಾಚಾರ್ಯರ ಪ್ರಕಾರ ತಮಿಳಿನ 'ನಾಯನಾರ್' ತೇವಾರಂ ಎಂಬ ಹಾಡುಗಳನ್ನು ವಚನಕಾರರು ಅನುಸರಿಸಿರಬಹುದು. ಗದ್ಯದಲ್ಲಿಯೇ ತಾಳಮಾನಗಳನ್ನಿಟ್ಟುಕೊಂಡು ಅದಕ್ಕೆ ಗೀತವೆಂದು ಕರೆದಿರುವಂತೆ ತೋರುತ್ತದೆ. ಹೀಗಿದ್ದರೆ ಅವರ ಈ ಪ್ರಯತ್ನವೇ ವಚನಗಳ ಆದಿ ಎಂದು ತಿಳಿಯಬಹುದು.[12]

ಡಾ.ಎಲ್ ಬಸವರಾಜುರವರು ವಚನಸಾಹಿತ್ಯವು ಸಂಸ್ಕೃತ ಸಾಹಿತ್ಯದಿಂದ ಸ್ಫೂರ್ತಿಪಡೆದು ರಚಿತವಾಗಿರಬಹುದೆಂದು ಊಹೆ ಮಾಡಿದ್ದಾರೆ. ಸಂಸ್ಕೃತದ ಛಂದೋಗಂಧಿಗಳಾದ ಪದ್ಯ ಪ್ರಕಾರದ ಸ್ತೋತ್ರಗಳು ವಚನಗಳಿಗೆ ಬಾಹ್ಯ ಮಾದರಿಯಾಗಿವೆ. ಎಂದು ಹೇಳಿ ಶರಣರ ವಚನಸಾಹಿತ್ಯ ಪ್ರಕಾರಕ್ಕೆ ಸಂಸ್ಕೃತ ಸ್ತೋತ್ರ ಗದ್ಯ ಸಾಹಿತ್ಯವೇ ಮೂಲ ಮತ್ತು ಪ್ರೇರಕವು ಎಂದಿದ್ದಾರೆ.[13]

ಡಾ.ಎಂ. ಚಿದಾನಂದಮೂರ್ತಿಯವರು ಕನ್ನಡವೇ ವಚನಸಾಹಿತ್ಯಕ್ಕೆ ಮೂಲವಾಗಿದೆ ಎಂದು ಅಭಿಪ್ರಾಯ ನೀಡಿ ಪ್ರಾಚೀನ ವಚನಕಾರ ಜೇಡರ ದಾಸಿಮಯ್ಯನ

ವಚನಗಳನ್ನು ಉದಾಹರಿಸಿ, ಜನತೆಗೆ ಅತ್ಯಂತ ಸಮೀಪವಾಗಿದ್ದ ತ್ರಿಪದಿಯನ್ನೆ ಮಾರ್ಪಡಿಸಿಕೊಂಡು ಮತ ಬೋಧನೆಯನ್ನು ಹೇಳಲು ವಚನ ಶೈಲಿಯ ಬೇರೊಂದು ವಿಧಾನವನ್ನು ವಚನಕಾರರು ರೂಪಿಸಿಕೊಂಡಿರಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿ, ವಚನಸಾಹಿತ್ಯದ ಮೂಲವನ್ನು ತ್ರಿಪದಿಯಲ್ಲಿ ಕಾಣಲು ಪ್ರಯತ್ನಿಸಿದ್ದಾರೆ.[14]

ಹೀಗೆ ವಚನಗಳ ಮೂಲವನ್ನು ಹುಡುಕುವಾಗ 12ನೆಯ ಶತಮಾನಕ್ಕಿಂತ ಹಿಂದಿನ ಗದ್ಯಕಾವ್ಯದ ಕಡೆಗೆ ಗಮನ ಹರಿಯುವುದು ಸಹಜವಾದದ್ದು. ದೇವರ ದಾಸಿಮಯ್ಯನವರಿಗಿಂತ ಪೂರ್ವದಲ್ಲಿ ವಚನಸಾಹಿತ್ಯ ಇದ್ದಿರಬಹುದೆಂಬ ಊಹೆಯನ್ನು ನಾವು ಮಾಡಬಹುದು. ಏಕೆಂದರೆ ಅವರ ವಚನಗಳಲ್ಲಿ ಬರುವ 'ಸೂಳ್ನುಡಿ' ಮತ್ತು 'ನುಡಿಗಡಣ' ಎಂಬ ವಾಕ್ಯಗಳೇ ಸಾಕು. 'ನುಡಿಗಡಣ' ವೆಂದರೆ ಸರದಿಪ್ರಕಾರ ಆಡುವ ಮಾತು, ಸಂಭಾಷಣೆ ಎಂಬ ಅರ್ಥವಾಗುತ್ತದೆ. 'ಸೂಳ್ನುಡಿ' ಎಂಬುದು ಅವರಿಗಿಂತ ಪೂರ್ವದಲ್ಲಿರುವ ವಚನಗಳ ಇರುವಿಕೆಯನ್ನು ತಿಳಿಸುತ್ತದೆ. ಅಲ್ಲದೆ ಅವರ ವಚನಗಳಲ್ಲಿ ಡೋಹರ ಕಕ್ಕಯ್ಯ, ಮಾದರಚನ್ನಯ್ಯ, ಕೆಂಭಾವಿ ಭೋಗಣ್ಣ ಮೊದಲಾದವರನ್ನು ಸ್ಮರಿಸಿರುವುದರಿಂದ ಅವರಿಗಿಂತ ಪೂರ್ವದಲ್ಲಿಯೇ ವಚನಸಾಹಿತ್ಯ ಇತ್ತೆಂದು ಹೇಳಬಹುದು.

'ಸೂಳ್ನುಡಿ' ಮತ್ತು 'ನುಡಿಗಡಣ' ಎಂಬ ಪದಗಳು ಅಚ್ಚಗನ್ನಡದ ಪದಗಳೇ ಆಗಿವೆ. ಅದನ್ನೇ ದೇವರ ದಾಸಿಮಯ್ಯನವರ ವಚನಗಳಲ್ಲಿ ಕಾಣುತ್ತೇವೆ. ಅವರನ್ನೇ ಆದ್ಯವಚನಕಾರರೆಂದು ಹೇಳಬಹುದು.

ಎಲ್. ಬಸವರಾಜುರವರು ಹೇಳಿದಂತೆ ಸಂಸ್ಕೃತ ಪ್ರಭಾವ ಬೀರಿದೆ ಎಂಬುವುದು ಕೆಲವು ವಚನಕಾರರಿಗೆ ಮಾತ್ರ ಅನ್ವಯಿಸುತ್ತದೆ. ಕೆಲವು ವಚನಕಾರರಿಗೆ ಸಂಸ್ಕೃತ ಭಾಷೆಯ ಜ್ಞಾನವಿತ್ತೆಂದು ಅವರವರ ಚರಿತ್ರೆಯ ಆಧಾರದಿಂದ ಹೇಳಬಹುದು. ಉದಾಹರಣೆಗೆ– ದಾಸಿಮಯ್ಯನವರು ಅಂದು ವಿದ್ಯಾಕೇಂದ್ರವಾಗಿರುವ ಶ್ರೀಶೈಲಕ್ಕೆ ಹೋಗಿ ಜ್ಞಾನ ಪಡೆದದ್ದು. ಬಸವಣ್ಣನವರು ಜಾತವೇದಮುನಿ ಹತ್ತಿರ ಜ್ಞಾನದೀಕ್ಷೆ ಪಡೆದದ್ದನ್ನು ಇಲ್ಲಿ ಸ್ಮರಿಸಬಹುದು.

3.9 ವಚನಸಾಹಿತ್ಯದ ಸ್ವರೂಪ

ವಚನಸಾಹಿತ್ಯವು ಶೈಲಿ ಮತ್ತು ಭಾಷೆಗಳ ದೃಷ್ಟಿಯಿಂದ ವಸ್ತುವಿನಲ್ಲಿಯೂ ಸಂಪೂರ್ಣ ಭಿನ್ನವಾದ ಮಾರ್ಗವನ್ನು ಅನುಸರಿಸಿದೆ. ಬೇರೆ ಬೇರೆ ವೃತ್ತಿಗಳಲ್ಲಿದ್ದ ಸಾಮಾನ್ಯ ಜನರು ಸಹ ವಚನ ರಚನೆಗಳನ್ನು ಮಾಡಿದ್ದಾರೆ. ಸಾಹಿತ್ಯವು ಸಾಮಾನ್ಯರಿಗೂ ಸೇರಿದ್ದರಿಂದ ತಾವು ಸಹ ಸಾಹಿತ್ಯಕ್ಕೆ ಕಾಣಿಕೆಯನ್ನು ಸಲ್ಲಿಸಬಹುದೆಂಬ ವಿಶ್ವಾಸ ಅವರಲ್ಲಿ ಮೂಡಿ ವಚನಗಳು ರೂಪಗೊಂಡವು. ಧರ್ಮವು ಬಹಳ ಸರಳ ಬೋಧನೆಗಳಿಂದೊಡಗೂಡಿದ್ದರಿಂದ ಶಿವಭಕ್ತರಲ್ಲಿ ಮೇಲು– ಕೀಳುಗಳಿಲ್ಲವೆಂದೂ

ಎಲ್ಲರೂ ಸಮಾನವೆಂಬ ಭಾವನೆಯು ಪ್ರತಿಯೊಬ್ಬ ಶರಣರಲ್ಲಿ ಮನೆಮಾಡಿಕೊಂಡಿತ್ತು. ಅಂದು ಧರ್ಮದ ಕೇಂದ್ರ ಕಲ್ಯಾಣವಾಗಿತ್ತು. ಅದಕ್ಕೆ ಬಸವಣ್ಣನವರ ಮುಂದಾಳತ್ವದಲ್ಲಿ ಶರಣಧರ್ಮ ಬಹುಬೇಗ ಪ್ರಚಾರಗೊಂಡು ಜನಮನಸೆಳೆಯಿತು. ಜನರು ಜ್ಞಾನ ಪಿಪಾಸುಗಳಾಗಿ ಶರಣಧರ್ಮದ ದೀಕ್ಷೆ ಪಡೆಯಲು ತಂಡೋಪ ತಂಡವಾಗಿ ಕಲ್ಯಾಣದತ್ತ ಬಂದರು. ಕರ್ನಾಟಕವಷ್ಟೇ ಅಲ್ಲ ಹೊರ ಭಾಗಗಳಿಂದಲೂ ನೆರೆಯ ದೂರದ ಪ್ರದೇಶ(ರಾಜ್ಯ)ಗಳಿಂದಲೂ ಜನರು ಬಂದರೆಂದು ನಂತರದ ಹಲವಾರು ಕಾವ್ಯಗಳು, ಪುರಾಣಗಳು ಪ್ರತಿಪಾದಿಸುತ್ತವೆ. ಇಂದಿನ ಬಸವಕಲ್ಯಾಣ ಅಂದು ಹಲವಾರು ರೀತಿಯ ಚಟುವಟಿಕೆಗಳಿಗೆ ಕೇಂದ್ರವಾಗಿತ್ತು. ಅಲ್ಲದೆ ಅದಕ್ಕೆ ಬಸವಣ್ಣನವರು ಪ್ರಮುಖ ವ್ಯಕ್ತಿಯಾದರು.

ಅಂದಿನ ಶತಮಾನ ವಚನಸಾಹಿತ್ಯದ ಸುವರ್ಣಯುಗವಾಯಿತು. ಬಸವಣ್ಣನವರ ನೇತೃತ್ವದಲ್ಲಿ ನಡೆದ ಸಾಮಾಜಿಕ, ಧಾರ್ಮಿಕ ಕ್ರಾಂತಿಯ ಸಂದರ್ಭದಲ್ಲಿ ಕನ್ನಡಸಾಹಿತ್ಯ ಚರಿತ್ರೆಯ ಇತಿಹಾಸದ ಪುಟದಲ್ಲಿ ವಚನ ರೂಪ ಹುಟ್ಟಿಕೊಂಡಿದ್ದು ವಿಶೇಷ ಸಂಗತಿಯಾಗಿದೆ. ಬಸವಣ್ಣನವರಿಗಿಂತ ಪೂರ್ವದಲ್ಲಿಯೇ ವಚನಸಾಹಿತ್ಯದ ಉಗಮವನ್ನು ಕಾಣಬಹುದಾದರೂ ಅದು ಒಂದು ಮಹಾಪೂರವಾಗಿ ಹರಿದದ್ದು ಬಸವಣ್ಣನವರ ಕಾಲದಲ್ಲಿ. ಅಲ್ಲಮಪ್ರಭು, ಸಿದ್ಧರಾಮ, ಚನ್ನಬಸವಣ್ಣ, ಅಕ್ಕಮಹಾದೇವಿ ಇವರು ಪ್ರಮುಖ ವಚನಕಾರರಾಗಿದ್ದರು. ಅಂದಿನ ಸಾಮಾನ್ಯ ಜನತೆಯು ಸಹ ವಚನ ರಚನೆಯಲ್ಲಿ ಪಾಲ್ಗೊಂಡಿದ್ದನ್ನು ಮರೆಯುವಂತಿಲ್ಲ. ಅಂಬಿಗರ ಚೌಡಯ್ಯ, ಡೋಹರ ಕಕ್ಕಯ್ಯ, ನೂಲಿಯ ಚಂದಯ್ಯ ಮೊದಲಾದ ವಚನಕಾರರ ಹೆಸರು ಅವರ ವೃತ್ತಿ ಮತ್ತು ಸಾಮಾಜಿಕ ಸ್ಥಾನವನ್ನು ಗುರ್ತಿಸುತ್ತವೆ. ಲಿಂಗಭೇದವಿಲ್ಲದೆ ಮೇಲು–ಕೀಳು ಎಂಬ ವಿಚಾರ ಮಾಡದೆ ತಮಗೆ ಅನಿಸಿದ್ದನ್ನು ನೇರವಾಗಿ ಸರಳವಾಗಿ ವಚನಗಳಲ್ಲಿ ಅಭಿವ್ಯಕ್ತಿಸಿದರು. ಅಂತರಂಗದ ಅನುಭವಗಳನ್ನು, ತುಮುಲಗಳನ್ನು ನೇರವಾಗಿ ಪ್ರಾಮಾಣಿಕವಾಗಿ ಆಡು ಭಾಷೆಯಲ್ಲಿ ತಿಳಿಯುವಂತೆ ಹೇಳಿದರೂ ಅದು ಸಾಹಿತ್ಯವಾಗುತ್ತದೆ ಎಂಬ ಅಂಶವನ್ನು ವ್ಯಕ್ತಪಡಿಸಿದ್ದು ವಚನಕಾರರ ಸಾಧನೆಯಾಗಿದೆ.

ವಚನಗಳು ಚಂಪೂಕಾವ್ಯಗಳಿಂತ ಹೊರನೋಟ ಹಾಗೂ ಒಳಸತ್ವದಲ್ಲಿ ಭಿನ್ನವಾಗಿವೆ. ತೀವ್ರವಾದ ತಮ್ಮ ವೈಯಕ್ತಿಕ ಅನುಭವಗಳನ್ನು ಸಮಾಜದ ಬಗೆಗಿನ ಅನಿಸಿಕೆಯನ್ನು ವಚನಕಾರರು ತಮ್ಮ ವಚನಗಳಲ್ಲಿ ಹೇಳಿಕೊಂಡರು. ಅಂದು ಜನತೆಯಲ್ಲಿದ್ದ ಅಂಧಾನುಶ್ರದ್ಧೆ ಸಮಾಜದಲ್ಲಿ ತಲೆದೂರಿದ ಅವ್ಯವಸ್ಥೆಯ ಕಾರಣ ಇಡೀ ಸಮಾಜವನ್ನು ಕತ್ತಲೆಯಿಂದ ಬೆಳಕಿನೆಡೆಗೆ ತರಬೇಕಾಗಿತ್ತು. ಧಾರ್ಮಿಕ ಸಾಮಾಜಿಕ ಕಾಂತ್ರಿಯ ಮೂಲಕ ಎಲ್ಲ ಶರಣರು ಜೊತೆಗೂಡಿ ಒಂದು ಅಂದೋಲನವನ್ನೇ ಕೈಗೊಂಡರು. ನವ ಸಮಾಜದ ದರ್ಶನಕ್ಕೆ ಅಭಿವ್ಯಕ್ತಿ ಸಾಧನವಾಗಿ ಹೊಸರೂಪವೇ ಅವಶ್ಯವಾಗಿತ್ತು. ಅದರಲ್ಲಿ ಜನಸಾಮಾನ್ಯರ ಭಾವನೆಗಳು ಅರ್ಥವತ್ತಾಗಿ, ಕಲಾತ್ಮಕವಾಗಿ

ಹೃದ್ಯವಾಗಿ ರೂಪುಗೊಂಡಿರಬೇಕೆಂದು ಶಿವಶರಣರು ಯೋಚಿಸಿ ಎಲ್ಲ ಸಾಹಿತ್ಯಕ್ಕಿಂತ ಭಿನ್ನವಾದ ಹೊಸ ರೂಪದಲ್ಲಿ ವಚನಸಾಹಿತ್ಯವನ್ನು ರೂಪಿಸಿದರು. ಹೀಗೆ ಕಾಲಮಾನದ ಅಗತ್ಯ ಮತ್ತು ನಿರ್ಮಿತಿ ಇವುಗಳ ಸಹಜ ಸಂಯೋಗದ ಸಂಕೇತವಾಗಿ ವಚನ ಸ್ವರೂಪವು ಜನ್ಮತಾಳಿತು.

3.10 ವಚನಸಾಹಿತ್ಯದ ಹಿನ್ನೆಲೆ

ವಚನಸಾಹಿತ್ಯವು ಅನೇಕ ವೈಶಿಷ್ಟ್ಯಗಳಿಂದ ಕೂಡಿರುವ ಸಾಹಿತ್ಯಪ್ರಕಾರ. ವಚನಗಳಲ್ಲಿ ಮೇಲೆದ್ದು ಕಾಣುವುದೆಂದರೆ ಅದರ ಮುಕ್ತರೂಪ. ವಚನಕಾರರು ಹಲವಾರು ವಚನಗಳನ್ನು ರಚಿಸಿದರೂ ಅವುಗಳಲ್ಲಿ ನೇರವಾದ ಸಂಬಂಧಸೂತ್ರಗಳಿಲ್ಲ. ಅಂದರೆ ಒಂದು ವಚನ ಅರ್ಥಮಾಡಿಕೊಳ್ಳಲು ಮತ್ತಾವುದೋ ಒಂದು ವಚನದ ಪೂರ್ವಜ್ಞಾನವು ಅವಶ್ಯಕವಿಲ್ಲ. ಪ್ರತಿವಚನವು ಆಯಾ ವಚನಕಾರನ ಯಾವುದೋ ಒಂದು ಕ್ಷಣದ ಭಾವಗ್ರಹಣ. ಹೀಗಾಗಿ ಅದು ಸ್ವಯಂಪೂರ್ಣವಾದದ್ದು. ಈ ಹಿಂದೆ ಕನ್ನಡಸಾಹಿತ್ಯದಲ್ಲಿ ಮುಕ್ತಕಗಳಿದ್ದವೇ? ಎಂಬುದರ ಬಗ್ಗೆ ನಮಗೆ ಹೆಚ್ಚಿನ ತಿಳಿವಳಿಕೆಯಿಲ್ಲ. ನಾಗವರ್ಮನು 'ಕಾವ್ಯಾವಲೋಕನ'ದಲ್ಲಿ 'ಇಡುಕುಂಗಬ್ಬ' ಎಂಬುದು ಮುಕ್ತಕಗಳೆಂದು ಸ್ಪಷ್ಟವಾಗಿ ಹೇಳುತ್ತಾನೆಯಾದರೂ ಅದರ ಸ್ವರೂಪ ಎಂತಹುದೆಂಬ ಬಗ್ಗೆ ನಮಗೆ ಅರಿವಿಲ್ಲ. ಸಾಮಾನ್ಯ ಜನರ ಬಾಯಿಂದ ಮೂಡಿಬಂದ ಅನುಭವದ ಭಾವನೆಗಳು ಈ ಹಿಂದೆಯೂ ಬಿಡಿ ರಚನೆಗಳಾಗಿ ಹೊಮ್ಮಿ ಬಂದಿರುವ ಸಾಧ್ಯತೆಯಿದೆ. ಆದರೆ ನಮಗೆ ತಿಳಿದಿರುವ ಸುಸ್ಪಷ್ಟ ಮುಕ್ತಕ ಸ್ವರೂಪದ ಮೊದಲು ಶಿಷ್ಟ ಸಾಹಿತ್ಯವೆಂದರೆ ವಚನಗಳೆ.

ವಚನಗಳು ಉದ್ದಿಷ್ಟ ರಚನೆಗಳಲ್ಲ, ಎಂದರೆ ಅವುಗಳು ಹೊರಹೊಮ್ಮಲು ಸಾಹಿತ್ಯಕವಾದ ಉದ್ದೇಶ, ಹಿನ್ನೆಲೆ ಇರಲಿಲ್ಲ. ಅವುಗಳು ಚಳುವಳಿಯೊಂದರ ಆನುಷಂಗಿಕ ಅವತಾರ. ಬಸವಣ್ಣನವರಿಗಿಂತ ಹಿಂದೆಯೇ ಈ ಚಳುವಳಿಯ ಬೀಜಗಳು ಪ್ರಸಾರಗೊಂಡಿದ್ದವೆನ್ನಲು ಆಧಾರಗಳಿವೆ. ಭಾರತದ ಅದರಲ್ಲೂ ಕರ್ನಾಟಕದಲ್ಲಿ ಆಗ ಪ್ರಚಲಿತವಿದ್ದ ಧಾರ್ಮಿಕಾಚರಣೆಗಳು, ನಂಬಿಕೆಗಳು ಸೂಕ್ಷ್ಮ ಹೃದಯಿಗಳಾಗಿದ್ದವರ ಮನಸ್ಸನ್ನು ಕಲಕಿ, ಸಾತ್ವಿಕ ಭಕ್ತಿಪ್ರಧಾನ ಮತವೊಂದನ್ನು ಪ್ರಸಾರಮಾಡಲು ಪ್ರಚೋದನೆಯಿತ್ತವು. ಈ ಪೂರ್ವಕಾರ್ಯವೇ ಬಸವಣ್ಣ ಮುಂತಾದವರು ವ್ಯವಸ್ಥಿತವಾಗಿ ಹೊಸ ಆಂದೋಲನವನ್ನು ಸಂಘಟಿಸಲು ಕಾರಣವಾಯಿತೆಂಬುದನ್ನು ನಾವು ಗುರುತಿಸಬಹುದು.

11 ಮತ್ತು 12 ನೆಯ ಶತಮಾನದ ಧಾರ್ಮಿಕ ಪರಿಸ್ಥಿತಿಯನ್ನು ಅವಲೋಕಿಸಿದರೆ ಕರ್ನಾಟಕದಲ್ಲಿ ಜೈನ ಧರ್ಮದ ಪ್ರಾಬಲ್ಯವು ಎದ್ದು ಕಾಣುತ್ತದೆ. ಜೈನಧರ್ಮದೊಡನೆ ಸ್ಪರ್ಧಿಸುತ್ತಿದ್ದ ಧರ್ಮವೆಂದರೆ ಲಕುಲೀಶ, ಪಾಶುಪತ ಮತ್ತು ಕಾಳಾಮುಖ ಎಂಬ ಶೈವಶಾಖೆಗಳು. ಇವುಗಳಲ್ಲದೆ ತನ್ನ ಹಲವಾರು ಶಾಖೆಗಳೊಂದಿಗೆ ವೈದಿಕಧರ್ಮವೂ,

ಅತ್ಯಲ್ಪ ಸಂಖ್ಯಾತರ ಧರ್ಮವಾಗಿ ಬೌದ್ಧಧರ್ಮವೂ ಪ್ರಚಾರದಲ್ಲಿದ್ದವು. ಶೈವಧರ್ಮದ ಇತರ ಶಾಖೆಗಳ ಅನುಯಾಯಿಗಳಾದ ಕಾಪಾಲಿಕರು, ಗಾಣಾಪತ್ಯರೂ, ಶಾಕ್ತಪಂಥದ ಕೌಲರೂ ಅಲ್ಪ ಪ್ರಮಾಣದಲ್ಲಿ ಇದ್ದರು.

ವೀರಶೈವ ಧರ್ಮದ ಇತಿಹಾಸದಲ್ಲೆಲ್ಲಾ ವಚನಕಾರರ ಉದಯವು ಅತ್ಯಂತ ಮಹತ್ವದ ಘಟನೆಯಾಗಿದೆ. ಅವರಿಂದ ಧಾರ್ಮಿಕವಾಗಿ, ಸಾಮಾಜಿಕವಾಗಿ, ಸಾಹಿತ್ಯಕವಾಗಿ ನಡೆದ ಕ್ರಿಯೆಗಳನ್ನು ಕುರಿತು ಸಾಕಷ್ಟು ಲೇಖನಗಳು ಬಂದಿವೆ. ಆ ಕ್ರಿಯೆಗಳೆಲ್ಲ ಒಂದೊಂದು 'ಕ್ರಾಂತಿ' ಎಂದು ಕರೆಯಿಸಿಕೊಳ್ಳಲು ಯೋಗ್ಯವಾಗಿವೆ. ತಾವು ನಂಬಿದ ಧರ್ಮವನ್ನು ಪ್ರಚಾರಮಾಡಿ ಒಂದು ಹೊಸ ರೀತಿಯ ಸಮಾಜ ಸ್ಥಾಪನೆ ಮಾಡುವುದು ಅವರ ಮುಖ್ಯೋದ್ದೇಶವಾಗಿದ್ದುದರಿಂದ ಹೊಸ ರೀತಿಯ ಸಾಹಿತ್ಯ ಸೃಷ್ಟಿ ಅನಿವಾರ್ಯವಾಯಿತು. ಇದರ ಫಲವೆ ಕನ್ನಡ ಜೀವರತ್ನ ಎಂದು ಕರೆಯಿಸಿಕೊಂಡಿರುವ ವಚನಸಾಹಿತ್ಯ.

3.11 ವಚನಸಾಹಿತ್ಯದ ವೈಶಿಷ್ಟ್ಯ

ವಚನ ಸಾಹಿತ್ಯದ ಆರಂಭ ಮತ್ತು ಪರಾಕಾಷ್ಟತೆ ಕಲ್ಯಾಣ ಚಾಲುಕ್ಯರ ಮತ್ತು ಕಲಚೂರಿಗಳ (ಬಿಜ್ಜಳನ) ಆಡಳಿತದ ಅವಧಿಯಲ್ಲಿ ಬರುತ್ತದೆ. ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಆಂದೋಲನದ ಮುಖಾಂತರ ವಚನಸಾಹಿತ್ಯ ವ್ಯಕ್ತಗೊಂಡಿದೆ. ಅರಸೊತ್ತಿಗೆಯನ್ನು ಎದುರಿಸಿ ನಿಂತು ಸಾಮಾಜಿಕ ಅಂದೋಲನ, ಸಾಮಾಜಿಕ ಅನ್ಯಾಯಗಳ ಬಗ್ಗೆ ಆಕ್ರೋಶ ಇವುಗಳನ್ನು ಆ ಕಾಲದಲ್ಲಿ ಕಾಣಬಹುದಾಗಿದೆ. ಜಾತಿಯ ವ್ಯವಸ್ಥೆಯಲ್ಲಿರುವ ಮೇಲು–ಕೀಳು ಭಾವನೆ, ಮೂಢನಂಬಿಕೆ, ವಿಚಿತ್ರವಾದ ಆಚರಣೆಗಳನ್ನು ವಚನಕಾರರು ಖಂಡಿಸಿದರು. ಸಾಮಾನ್ಯ ಜನತೆಯನ್ನು ದೈವ ಭಕ್ತರನ್ನಾಗಿ ಮಾಡಿ ತಾವೆಲ್ಲ ಸಮಾನರು, ಶಿವನ ಮಕ್ಕಳು ಎಂಬ ವಿಶ್ವಾಸವನ್ನು ಅವರಲ್ಲಿ ಮೂಡಿಸಿದರು. ಇಷ್ಟಲಿಂಗ ಪೂಜೆಯ ಮೂಲಕ ಎಲ್ಲರನ್ನು ಸಮಾನವಾಗಿರಿಸಿ ಕಾಯಕಕ್ಕೆ ಪ್ರಾಮುಖ್ಯ ನೀಡಿ ಸಾಮಾಜಿಕ ಪ್ರಜ್ಞೆಯನ್ನು ಮೂಡಿಸಿದರು. ವಚನಕಾರರ ಒಟ್ಟು ಉದ್ದೇಶ ನವಸಮಾಜವೊಂದರ ನಿರ್ಮಾಣವೇ ಆಗಿತ್ತು. ವಚನಗಳ ಮೂಲಕ ತಮ್ಮ ಅನಿಸಿಕೆಗಳನ್ನು ವ್ಯಕ್ತ ಪಡಿಸಿದರು. ಅವರು ಆ ಕಾಲದ ಇಡೀ ಜೀವನವನ್ನು ಆಂದೋಲನದ ಮೂಲಕ ಪರಿವರ್ತಿಸಿಕೊಂಡರು.

ಹನ್ನೊಂದನೆಯ ಶತಮಾನದಲ್ಲಿ ದಾಸಿಮಯ್ಯನವರಾದರೆ ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು. ಇವರ ನೇತೃತ್ವದಲ್ಲಿ ಸಾಮಾಜಿಕ, ಧಾರ್ಮಿಕ ಚಟುವಟಿಕೆಗಳು ನಡೆದು ಬಂದವು. ಸಾಮಾಜಿಕ ಧಾರ್ಮಿಕ ಕ್ರಾಂತಿಯ ಸಮಯದಲ್ಲಿ ವಚನದ ರೂಪ ಹುಟ್ಟಿಕೊಂಡಿದ್ದು ವಿಶಿಷ್ಟವಾದ ಸಂಗತಿಯಾಗಿದೆ. ರಾಜಾಶ್ರಯವನ್ನು ತಿರಸ್ಕರಿಸಿ ಸಂಸ್ಕೃತದ ಪ್ರಭಾವದಿಂದ ಬಿಡಿಸಿಕೊಂಡು ಸರಳವಾದ, ಸುಂದರವಾದ

ಆಡುಮಾತಿನಲ್ಲಿ ಅಂತರಂಗದ ಅನುಭವದ ತುಮುಲಗಳನ್ನು ನೇರವಾಗಿ ಜನತೆಗೆ ತಿಳಿಸುವುದು ವಚನಸಾಹಿತ್ಯದ ವೈಶಿಷ್ಟ್ಯವಾಗಿದೆ. ಪದ್ಯಗಂಧಿಯಾದ ಗದ್ಯದಂತಿರುವ ವಚನಗಳ ರೂಪ ಕನ್ನಡ ಸಾಹಿತ್ಯದಲ್ಲಿಯೇ ವಿಶಿಷ್ಟವಾದದ್ದು.

ವಚನಸಾಹಿತ್ಯದ ವೈಶಿಷ್ಟ್ಯಗಳನ್ನು ಹೀಗೆ ಪಟ್ಟಿ ಮಾಡಬಹುದು.

1. ವಚನಸಾಹಿತ್ಯವು ರಾಜಾಶ್ರಯದ ಹಂಗನ್ನು ತಿರಸ್ಕರಿಸಿತು.
2. ಸಂಸ್ಕೃತ ಭಾಷೆಯು ಕನ್ನಡದ ಮೇಲಿನ ದಟ್ಟವಾದ ಪ್ರಭಾವ ಕಳೆದುಕೊಂಡಿತು.
3. ಸರಳ ಸುಂದರವಾದ ಆಡುಮಾತಿನ ಧಾಟಿಯಲ್ಲಿ ಸಾಹಿತ್ಯ ರೂಪುಗೊಂಡಿತು.
4. ವಚನಸಾಹಿತ್ಯವು ಸಮಕಾಲೀನ ನಡುಗನ್ನಡ ಭಾಷೆಯನ್ನು ಆರಿಸಿಕೊಂಡಿತು.
5. ವಚನ ರಚನೆಗೆ ಪ್ರತಿಯೊಬ್ಬರು ಅರ್ಹರೆಂಬುದು ಸಾಹಿತ್ಯಲೋಕಕ್ಕೆ ತೋರಿಸಿಕೊಟ್ಟಿತು.
6. ಅಂತರಂಗದ ಅನಿಸಿಕೆಗಳು ವಚನಗಳ ಮೂಲಕ ಅಭಿವ್ಯಕ್ತವಾಗಿದ್ದನ್ನು ಕಾಣಬಹುದು.
7. ಪ್ರತಿಯೊಬ್ಬರು ಮುಚ್ಚು ಮರೆ ಇಲ್ಲದೆ ಸಹಜವಾಗಿ ತಮ್ಮ ಜ್ಞಾನವನ್ನು ಮುಂದಿಟ್ಟಿರುವರು.
8. ಲಿಂಗಭೇದ ಮತ್ತು ಜಾತಿಭೇದವಿಲ್ಲದೆ ಸಾಹಿತ್ಯಾಭಿವ್ಯಕ್ತಿಯಲ್ಲಿ ಎಲ್ಲರೂ ಪಾಲ್ಗೊಂಡರು.
9. ಇಲ್ಲಿ ಮೇಲು–ಕೀಳುಗಳೆಂಬ ಭಾವನೆಗಳಿಲ್ಲದೆ ಸಮಾನ ಆಸೀನರಾಗಿದ್ದರು.
10. ಸ್ವ ಅಭಿಪ್ರಾಯ ಮಂಡನೆಗೆ ಸಮ್ಮತಿಯಿರುತ್ತಿತ್ತು.
11. ಅನುಭಾವದ ಮೂಲಕ ವಚನಗಳು ರಚನೆಗೊಂಡವು.
12. ಒಟ್ಟಿಗೆ ಕುಳಿತುಕೊಂಡು ವಚನ ರಚನೆ ಮತ್ತು ಚಿಂತನೆಗೈಯುತ್ತಿದ್ದರು.
13. ಸಾಮಾಜಿಕ, ಧಾರ್ಮಿಕ ಏಳ್ಗೆಗಾಗಿ ನಿಃಸ್ವಾರ್ಥದಿಂದ ಕಾಯಕ ಮಾಡುತ್ತಿದ್ದರು.
14. ದೇವನೊಬ್ಬ, ನಾಮ ಹಲವು ಎಂಬ ಏಕೇಶ್ವರ ವಾದವನ್ನು ಒಪ್ಪಿಕೊಂಡಿದ್ದರು.
15. ಈಶ್ವರನನ್ನು ತಮಗೆ ತಿಳಿದ ಹೆಸರಿನಿಂದ ಕರೆಯುತ್ತಿದ್ದರು.
16. ತಮ್ಮ ಆರಾಧ್ಯ ದೇವರನ್ನೇ ತಮ್ಮ ವಚನದ ಅಂಕಿತವನ್ನಾಗಿ ಇಟ್ಟಿಕೊಂಡಿದ್ದರು.
17. ಇತ್ತ ಪದ್ಯವೂ ಅಲ್ಲ, ಅತ್ತ ಗದ್ಯವೂ ಅಲ್ಲದೇ ಇದು ವಿಶಿಷ್ಟವಾದ ರಚನೆಯಾಗಿದೆ.

18. ಇದನ್ನು ಕೆಲವರು ಗದ್ಯದಂತೆ ಓದುತ್ತಿದ್ದರೆ, ಮತ್ತೆ ಕೆಲವರು ಪದ್ಯದಂತೆ ಹಾಡುತ್ತಿದ್ದರು.

19. ವಚನಕಾರರು ಯಾರೂ ಕವಿಗಳಲ್ಲ. ಸಹಜವಾಗಿಯೇ ಕವಿತ್ವ ಶಕ್ತಿ ವ್ಯಕ್ತವಾಗಿದೆ.

20. ವಚನಗಳು ಉದ್ದೇಶ ಪೂರ್ವಕ ರಚನೆಗಳಲ್ಲ, ಆದರೆ ಕಾವ್ಯಗುಣ ಸಹಜವಾಗಿ ಅರಳಿದೆ.

21. ಅಂತರಂಗದ ನಿವೇದನೆಯನ್ನು ಇಲ್ಲಿ ಕಾಣಬಹುದು.

2.12 ದೇವರ ದಾಸಿಮಯ್ಯನವರ ಜೀವನ ಮತ್ತು ಸಾಹಿತ್ಯ

ಕ್ರಿ.ಶ.12ನೆಯ ಶತಮಾನದ ಬಸವಾದಿ ಶರಣರು ವಚನಸಾಹಿತ್ಯದ ಮೂಲಕ ದೊಡ್ಡ ಚಳುವಳಿಯನ್ನೇ ಎಬ್ಬಿಸಿದರು. ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ, ಆರ್ಥಿಕ ಮೊದಲಾದ ಬದಲಾವಣೆಗಳನ್ನು ಅಂದಿನ ಕಾಲದಲ್ಲಿ ಕಾಣುತ್ತೇವೆ. ಇದಕ್ಕೆಲ್ಲ ಮೂಲ ಭದ್ರಬುನಾದಿ ಹಾಕಿದವರು ದೇವರ ದಾಸಿಮಯ್ಯನವರು. ಇವರು "ಶ್ರೀ ಬಸವೇಶ್ವರರಿಗಿಂತಲೂ 140 ವರ್ಷಗಳ ಪೂರ್ವದಲ್ಲಿ ಮಹಾಶಿವಶರಣರಾಗಿದ್ದರು.[15] ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿ ದೇವರ ದಾಸಿಮಯ್ಯನವರಿಂದ ವಚನ ಸಾಹಿತ್ಯವು ಪ್ರಾರಂಭಗೊಂಡು ಹತ್ತೊಂಬತ್ತನೆಯ ಶತಮಾನದ ಎಡೆಯೂರು ಸಿದ್ಧಲಿಂಗೇಶ್ವರರವರೆಗೆ ಬೆಳೆದು ಬಂದಿರುವುದನ್ನು ಕಾಣುತ್ತೇವೆ. ವಚನವೆಂಬ ಮಗುವಿಗೆ ಹೆತ್ತ ತಂದೆ ದಾಸಿಮಯ್ಯನವರಾದರೆ, ಅದನ್ನು ರಕ್ಷಿಸಿ ಪೋಷಣೆ ಮಾಡಿದವರು ಬಸವಾದಿ ಶರಣರು. ಅದನ್ನು ಪುನರುಜ್ಜೀವಗೊಳಿಸಿದ್ದು ಎಡೆಯೂರು ಸಿದ್ಧಲಿಂಗೇಶ್ವರರು. ಇದನ್ನು ಅಧ್ಯಯನ ದೃಷ್ಟಿಯಿಂದ ವಿದ್ವಾಂಸರು ಬಸವಪೂರ್ವಯುಗ, ಬಸವಯುಗ ಮತ್ತು ಬಸವೋತ್ತರ ಯುಗವೆಂದು ಕರೆದಿದ್ದಾರೆ.

"ಹಲವಾರು ಸಾಧು-ಸಂತರು, ಶರಣ-ಶರಣೆಯರ ಆಡುಂಬೋಲವೆನಿಸಿ ಕೊಂಡಿರುವ ಕಲಬುರ್ಗಿ ಜಿಲ್ಲೆ ಸಾಹಿತ್ಯ ಕ್ಷೇತ್ರದಲ್ಲೂ ಕೆಲವು ಪ್ರಥಮಗಳನ್ನು ಸ್ಥಾಪಿಸಿದೆ. ಕನ್ನಡ ಸಾಹಿತ್ಯದ ಉಪಲಬ್ಧ ಕೃತಿಗಳಲ್ಲಿ ಈಗ ತಿಳಿದಿರುವ ಮಟ್ಟಿಗೆ ಅತ್ಯಂತ ಪ್ರಾಚೀನವಾದದ್ದು "ಕವಿರಾಜ ಮಾರ್ಗ" ಅದು ನಿರ್ಮಾಣಗೊಂಡಿದ್ದು ಕಲಬುರ್ಗಿ ಜಿಲ್ಲೆಯ ಸೇಡಂ ತಾಲ್ಲೂಕಿನ "ಮಳಖೇಡ"ದಲ್ಲಿ. ಮಳಖೇಡ ಗ್ರಾಮ ಇಂದು ಒಂದು ಚಿಕ್ಕ ಹಳ್ಳಿಯಾದರೂ ಹಿಂದೆ ಅದು ಕರ್ನಾಟಕವನ್ನು ಏಕ ಛತ್ರಾದಿಪತಿಗಳಾಗಿ ಆಳಿದ ರಾಷ್ಟ್ರಕೂಟರ ರಾಜಧಾನಿ ಪಟ್ಟಣವಾಗಿತ್ತು. ಎರಡನೆಯದಾಗಿ ವಿಶ್ವಸಾಹಿತ್ಯಕ್ಕೆ ಕನ್ನಡಿಗರ ವಿಶಿಷ್ಟ ಕಾಣಿಕೆಯೆಂದು ಪಂಡಿತರಿಂದ ಮಾನ್ಯತೆ ಪಡೆದ ವಚನಸಾಹಿತ್ಯದ ಆದ್ಯಪ್ರವರ್ತಕ ಜೇಡರ (ದೇವರ) ದಾಸಿಮಯ್ಯವನರು ಕಲಬುರಗಿ ಜಿಲ್ಲೆಯ ಸುರಪುರ ತಾಲೂಕಿನ ಮುದನೂರು ಗ್ರಾಮದವರು.[16] ಕಲಬುರ್ಗಿ ಜಿಲ್ಲೆ ಕನ್ನಡ ಸಾಹಿತ್ಯಕ್ಕೆ ತವರುಮನೆ

ಎನಿಸಿಕೊಂಡರೆ ವಚನ ಸಾಹಿತ್ಯಕ್ಕೆ ತೂಗು ತೊಟ್ಟಿಲವಾಗಿದೆಯೆಂದು ಹೇಳಲು ಸಂತೋಷವೆನಿಸುತ್ತದೆ.

"ಸುಲಿದ ಬಾಳಿಯ ಹಣ್ಣಿನಂದದಿ
ಕಳೆದ ಸಿಗುರಿನ ಕಬ್ಬಿನಂದದಿ
ಅಳೆದ ಉಷ್ಣದ ಹಾಲಿನಂದದಿ ಸುಲಭವಾಗಿರುವ
ಲಲಿತವಹ ಕನ್ನಡದ ನುಡಿಯಲಿ
ತಿಳಿದು ತನ್ನೊಳು ತನ್ನ ಮೋಕ್ಷವ
ಗಳಿಸಿಕೊಂಡರೆ ಸಾಲದೆ ಸಂಸ್ಕೃತದಲಿನ್ನೇನು?

ಸಂಸ್ಕೃತ ಭಾಷೆಗೆ ತಿಲಾಂಜಲಿಯನ್ನಿತ್ತು ಕನ್ನಡ ಭಾಷೆಗೆ ಆದ್ಯತೆ ನೀಡುವ ಕಾಲ ಅದಾಗಿತ್ತು. ಅಂತಹ ಜನಸಾಮಾನ್ಯರು ಆಡುವ ಕನ್ನಡ ಭಾಷೆಯಲ್ಲಿ ವಚನಗಳನ್ನು ರಚಿಸಿ ಅಂತರಂಗದ ಅನುಭವವನ್ನು ಬಿಚ್ಚಿ ಇಟ್ಟರು ನಮ್ಮ ಶಿವಶರಣರು. ಈ ಪರಂಪರೆಯಲ್ಲಿ ಮೊಟ್ಟ ಮೊದಲಿಗರು ಮುದನೂರಿನ ಜೇಡರ ದಾಸಿಮಯ್ಯನವರು."[17] ವಿಪುಲವಾದ ವಚನ ಸಾಹಿತ್ಯ ಸಾಗರಕ್ಕೆ ಮೂಲಸೆಲೆ ಜೇಡರ ದಾಸಿಮಯ್ಯ. ಈತ ಬಸವಪೂರ್ವ ಯುಗದವನು. ಶೈವ, ವೀರಶೈವವಾಗಿ ರೂಪುಗೊಳ್ಳುತ್ತಿದ್ದ ಸಂಧಿಕಾಲದಲ್ಲಿದ್ದವನು. ಹೀಗಾಗಿ ಈತನ ವಚನಗಳಲ್ಲಿ ವೀರಶೈವದ ಸುಳಿಯನ್ನು ಗುರುತಿಸಬಹುದು. ಅಲ್ಲದೆ ಮುಂದೆ ಬಂದ ಬಸವಾದಿ ವಚನಕಾರರಿಗೆ ಈತನ ವಚನಗಳು ಸ್ಫೂರ್ತಿನೀಡಿವೆ.[18]

3.12.1 ಜನನ ಮತ್ತು ಸ್ಥಳ

ದೇವರ ದಾಸಿಮಯ್ಯನವರು ಸಗರನಾಡೆನಿಸಿಕೊಂಡಿರುವ ಇಂದಿನ ಕರ್ನಾಟಕದ 30 ಜಿಲ್ಲೆಗಳಲ್ಲಿ ಒಂದಾದ ಹೊಸ ಜಿಲ್ಲೆ ಯಾದಗಿರಿ ಜಿಲ್ಲೆಯ ಸುರಪುರ ತಾಲ್ಲೂಕಿನ ಮುದನೂರಿನವರು. ಕ್ರಿ.ಶ. ಹತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಶ್ರೀ ರಾಮನಾಥನ ಭಕ್ತರಾದ 'ಶಂಕರಿ' ಮತ್ತು 'ರಾಮಯ್ಯ'ರೆಂಬ ದಂಪತಿಗಳ ಪವಿತ್ರ ಉದರದಲ್ಲಿ "ಚೈತ್ರ ಮಾಸದ ಶುದ್ಧ ಪಂಚಮಿಯ ದಿನದಂದು[19] ಜನಿಸಿದರು. ಇವರನ್ನು ದಾಸ, ದಾಸಯ್ಯ, ದಾಸಿಮಯ್ಯ, ದಾಸಿದೇವ, ದೇವದಾಸ, ಜೇಡರದಾಸಿಮಯ್ಯ, ದೇವರದಾಸಿಮಯ್ಯ, ದಾಸಿಮಾರ್ಯ ಹೀಗೆ ಮೊದಲಾದ ಹೆಸರುಗಳಿಂದ ಕರೆಯುತ್ತಾರೆ. ಇವರು ದೇವಾಂಗ ಜನಾಂಗದ ಮೂಲ ಪುರುಷನಾದ ದೇವಲನ ಏಳನೆಯ ಅವತಾರ ಎಂದು ಹಲವರು ಒಪ್ಪಿಕೊಂಡಿದ್ದಾರೆ.[20] ವಿದ್ಯಾಧರ, ಪುಷ್ಪದಂತ, ಬೇತಾಳ, ವರರುಚಿ, ಚಿತ್ರಯೋಗಿ, ದೇವಶಾಲಿ, ದೇವದಾಸರೆಂದು ಏಳು ಅವತಾರಗಳು ಹೇಳಲಾಗುತ್ತದೆ. ಈ ಸಪ್ತ ಅವತಾರ ಕುರಿತು ಬ್ರಹ್ಮಾಂಡ ಪುರಾಣದಲ್ಲಿನ ಶ್ಲೋಕಗಳು ಇಂತಿವೆ–

ದೇವಾಂಗಃ ಪ್ರಥಮಾ ಸೃಷ್ಟಿಃ ಶಂಕರಸ್ಯ ಮಹಾತ್ಮನಃ।
ವಿದ್ಯಾಧರೋ ದ್ವಾಪರಾದೌ ಮಧ್ಯೇಭೂತ್ ಪುಷ್ಪದಂತಕಃ॥

ಅಂತೇವತಾರೋ ಬೇತಾಳ ಕಲೌವರರುಚಿ ಸ್ತಥಾ।
ಚಿತ್ರಯೋಗಿ ದೇವಶಾಲೀ ದೇವದಾಸೋಭಿವಂ ಸ್ತತಃ॥[21]

ದೇವಾಂಗನ ಸಪ್ತಾವತಾರಗಳ ಬಗೆಗೆ ಇನ್ನೊಂದು ಶ್ಲೋಕವು ಹೀಗಿದೆ–

ವಿದ್ಯಾಧರಶ್ಚಿತ್ರಯೋಗೀ ಸಾಧುಕೋ ಪುಷ್ಪದಂತಕಃ।
ಬೇತಾಳ ವರರುಚಿರ್ದಾಸೋ ದೇವಾಂಗಃ ಸಪ್ತನಾಮಕಃ॥[22]

ಮದನೂರಿನಲ್ಲಿರುವ ರಾಮತೀರ್ಥ, ಲಕ್ಷಣತೀರ್ಥ, ಸಕ್ಕರೆತೀರ್ಥ, ಮರಳುತೀರ್ಥ ಪಾಂಡವತೀರ್ಥ, ಹಾಲುತೀರ್ಥ ಮತ್ತು ಸಂಗಮತೀರ್ಥಗಳು ದೇವಾಂಗನ ಸಪ್ತಾವತಾರಗಳ ದ್ಯೋತಕವೇ ಆಗಿವೆ. ಅಂದು ಮುದನೂರು ಒಂದು ಚಿಕ್ಕ ಅಗ್ರಹಾರವಾಗಿತ್ತು. ಇದು "ದಕ್ಷಿಣವಾರಣಾಸಿ" ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಹಿಂದಿನ ಕಾಲದಿಂದಲೂ ಈ ಗ್ರಾಮವು ನೈಸರ್ಗಿಕ ಪರಿಸರ ಮತ್ತು ಉಜ್ವಲ ಕ್ರಿಯಾಶೀಲ ಧಾರ್ಮಿಕ ಪರಿಸರಗಳಿಂದ ಕಂಗೊಳಿಸುತ್ತಿದೆ.

3.12.2 ಬಾಲ್ಯ ಮತ್ತು ವಿದ್ಯಾಭ್ಯಾಸ

ದೇವರ ದಾಸಿಮಯ್ಯನವರು ಬಾಲ್ಯವನ್ನು ಆಟ, ಪಾಠ, ಧ್ಯಾನ, ಪೂಜೆಗಳಲ್ಲಿ ತಮ್ಮ ಹುಟ್ಟೂರಾದ ಮುದನೂರಿನಲ್ಲಿ ಕಳೆದರು. ಅಲ್ಲಿ ದೊರೆತ ಅಲ್ಪ ವಿದ್ಯೆಯಿಂದ ಅತೃಪ್ತರಾಗಿ ತಮ್ಮ ಜ್ಞಾನದ ತೃಷೆಯನ್ನು ಇಂಗಿಸುವ ಸಲುವಾಗಿ ಅಂದು ಶ್ರೀಶೈಲ ಸುಪ್ರಸಿದ್ಧ ವಿದ್ಯಾಕೇಂದ್ರವಾಗಿದುದ್ದರಿಂದ ಅಲ್ಲಿಗೆ ಹೋದರು. ಅಲ್ಲಿ ಸೂರ್ಯಸಿಂಹಾಸನ ಪೀಠದ ಮೂರನೆಯ ಜಗದ್ಗುರು ಶ್ರೀ ಚಂದ್ರಗಂಡ ಶಿವಾಚಾರ್ಯರಿಂದ[23] ಶೈವದೀಕ್ಷೆ ಪಡೆದು ಆಧ್ಯಾತ್ಮಿಕ ಜ್ಞಾನವನ್ನು ಸಂಪಾದಿಸಿಕೊಂಡರು.

ಘಟದೊಳಗೆ ತೋರುವ ಸೂರ್ಯನಂತೆ
ಸರ್ವರಲ್ಲಿ ಶಿವನ ಚೈತನ್ಯವಿಪ್ಪುದು
ಇದ್ದರೇನು? ಅದ ಕೂಡುವರೆ
ಗುರುವಿನಿಂದಲ್ಲದಾಗದು ಕಾಣಾ! ರಾಮನಾಥ.[24]

ಎಂದುಸುರಿದ ದಾಸಿಮಯ್ಯನವರು ಗುರು ಕರುಣೆಯಿಂದ ಅವರಲ್ಲಾದ ಪರಿವರ್ತನೆಯನ್ನು ತಾವೇ ಮನೋಜ್ಞವಾಗಿ ಹೇಳಿ ಗುರು ಚರಣವೆಂಬ ಅಗ್ನಿಯ ಮೇಲೆ ತನುವೆಂಬ ತೃಣವನ್ನಿರಿಸಿ ಸರ್ವಾಂಗವೆಲ್ಲ ಲಿಂಗಮಯವನ್ನಾಗಿ ಮಾಡಿಕೊಂಡರು.

ದಾಸಿಮಯ್ಯನವರು ತಮ್ಮ ಆತ್ಮತೃಪ್ತಿಗೆ ಬೇಕಾದ ಜ್ಞಾನವನ್ನು ಸಂಪಾದಿಸಿ ಕೊಂಡರು. ಸಂಸ್ಕೃತ, ಕನ್ನಡ ಮೊದಲಾದ ಭಾಷೆ ಬಲ್ಲವರಾಗಿ ಗುರುವಿನ ಆದೇಶದಂತೆ, ಪುಣ್ಯಕ್ಷೇತ್ರಗಳನ್ನು ದರ್ಶನಗೈಯುತ್ತ, ಜಿಜ್ಞಾಸುಗಳಿಗೆ ಸನ್ಮಾರ್ಗತೋರುತ್ತ ಶರಣ (ವೀರಶೈವ) ತತ್ವವನ್ನು ಪ್ರಚಾರ ಮಾಡಿದರು. ಮಾರ್ಗ ಮಧ್ಯದಲ್ಲಿ ಕುಲೀನರು, ದುಷ್ಟರು ಇವರ ಮೇಲೆ ದಂಡೆತ್ತಿ ಬಂದರೂ ವಿಚಲಿತರಾಗದೆ ಅವರಿಗೆ–

ನಾನೊಂದು ಸುರಗಿಯನೇನೆಂದು ಹಿಡಿವೆನು?
ಏನ ಕಿತ್ತೇನನಿರಿವೆನು?
ಜಗವೆಲ್ಲಾ ನೀನಾಗಿಪ್ಪೆ ಕಾಣಾ! ರಾಮನಾಥ.[25]

ಎಂದು ಸದ್ಬುದ್ಧಿಯ ಬೋಧನೆಗೈದು, ಪವಿತ್ರಾತ್ಮರನ್ನಾಗಿ, ಶಿಷ್ಟರನ್ನಾಗಿ ಮಾಡಿರುವ ಕೀರ್ತಿ, ಗೌರವ ಶರಣ ಸಂಪ್ರದಾಯದಲ್ಲಿ ಮೊಟ್ಟಮೊದಲು ದೇವರ ದಾಸಿಮಯ್ಯನವರಿಗೆ ಸಲ್ಲುತ್ತದೆ.

3.12.3 ವಿವಾಹ

ದೇವರ ದಾಸಿಮಯ್ಯನವರು ಯೌವನಾವಸ್ಥೆಗೆ ಬಂದಾಗ ಇವರ ಮದುವೆ ಪ್ರಸ್ತಾಪ ಬರುತ್ತದೆ. ಆಗ ದಾಸಿಮಯ್ಯನವರು ವಿವಾಹ ಬಗ್ಗೆ ಆಸಕ್ತಿ ತೋರಿಸಲಿಲ್ಲ. ಕೊನೆಗೆ ತಂದೆ–ತಾಯಿ, ಗುರು–ಹಿರಿಯರ ಒತ್ತಾಯಕ್ಕೆ ಮಣಿದು ತಮ್ಮ ಬಾಳ ಸಂಗಾತಿ ಗಾಗಿ ತಮ್ಮ ಮನದ ಇಚ್ಛೆಯಂತೆ ನಡೆಯುವ ಕನ್ಯಾರತ್ನವನ್ನು ಪಡೆಯಲು "ಮರಳು ಮಿಶ್ರಿತ ಅಕ್ಕಿ ಮತ್ತು ಕಬ್ಬು"[26] ಜೊತೆಗೆ ಇಟ್ಟುಕೊಂಡು ಅವು ತೋರಿಸಿ ನೀರು ಮತ್ತು ಸೌದೆಯಿಲ್ಲದೆ ಅಡುಗೆ ಮಾಡಿ ಉಣಬಡಿಸಬೇಕೆಂಬ ಪರೀಕ್ಷೆಯೊಂದಿಗೆ ಅನೇಕ ಊರುಗಳನ್ನು ತಿರುಗುತ್ತ ನಡೆದರು. ಕೊನೆಗೆ ಅಫಜಲಪೂರ ತಾಲೂಕಿನ ಗೊಬ್ಬೂರು ಗ್ರಾಮದ 'ಮಲ್ಲಿನಾಥ ಮತ್ತು ಮಹಾದೇವಿ'[27] ಯವರ ಮಗಳಾದ ದುಗ್ಗಳೆ, ದಾಸಿಮಯ್ಯನವರೊಡ್ಡಿದ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಬಾಳ ಸಂಗಾತಿಯಾದಳು.

ಇನ್ನೊಂದು ಕಡೆಯಲ್ಲಿ ದಾಸಿಮಯ್ಯನವರಿಗೆ ಬರಿ ಹೆಣ್ಣು ಬೇಕಾಗಿರಲಿಲ್ಲ ಒಲವಿನಕಣ್ಣು ಬೇಕಾಗಿತ್ತು. ಅಂತಹ ಸಹಧರ್ಮಿಣಿಗಾಗಿ ನೀರಿಲ್ಲದೆ ಅಡುಗೆ ಮಾಡಬೇಕೆಂಬ ಪರೀಕ್ಷೆಯನ್ನು ಮುಂದಿಟ್ಟುಕೊಂಡು ಅರಸುತ್ತ ಬಂದಾಗ ದುಗ್ಗಳೆ ಅವರ ಪಾದೋದಕದಿಂದ ಅಡುಗೆ ಮಾಡಿ ಬಡಿಸಿ ಕೃತಾರ್ಥಳಾಗಿ ಸಹಧರ್ಮಿಣಿಯಾದಳು.[28] ಇಂತಹ ಪತ್ನಿ ದುಗ್ಗಳೆಯನ್ನು ಕುರಿತು ದಾಸಿಮಯ್ಯನವರು ಹೀಗೆ ಹೇಳಿದ್ದಾರೆ.–

ಬಂದುದನರಿದು ಬಳಸುವಳು
ಬಂದುದ ಪರಿಣಾಮಿಸುವಳು
ಬಂಧು ಬಳಗವ ಮರೆಸುವಳು
ದುಗ್ಗಳೆಯ ತಂದು ಬದುಕಿದೆನು ಕಾಣಾ! ರಾಮನಾಥ.[29]

ಶರಣ ಸಂಪ್ರದಾಯದಲ್ಲಿ ಪತಿಯಿಂದ ಹೊಗಳಿಸಿಕೊಂಡ ಮೊಟ್ಟ ಮೊದಲನೆಯ ಸತಿ ದುಗ್ಗಳೆ. ಪತಿಗೆ ತಕ್ಕ ಸತಿಯಾಗಿ ಮುಂದಿನ ಶರಣೆಯರಿಗೆ ಮಹಾಸಾಧ್ವಿ ಶಿರೋಮಣಿಯಾಗಿದ್ದಾಳೆ. ಸತಿಪತಿಗಳಿಗಳಿಬ್ಬರು ಒಬ್ಬರಿಗೊಬ್ಬರು ಅರಿತುಗೊಂಡು ಅನ್ಯೋನ್ಯವಾಗಿದ್ದು ತಮ್ಮ ಸಂಸಾರವನ್ನು ಅಮೃತಮಯ ಮಾಡಿಕೊಂಡಿದ್ದರು.

ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ
ಸತಿಪತಿಗಳೊಂದಾಗದವನ ಭಕ್ತಿ
ಅಮೃತದೊಳು ವಿಷ ಬೆರೆದಂತೆ ಕಾಣಾ! ರಾಮನಾಥ.[30]

ದಾಸಿಮಯ್ಯನವರು ಪ್ರಾಪಂಚಿಕ, ಪಾರಮಾರ್ಥಿಕಗಳೆರಡನ್ನೂ ಒಟ್ಟಿಗೆ ನಿಭಾಯಿಸುತ್ತ, ಕಾಯಕ, ದಾಸೋಹ ಮತ್ತು ಜ್ಞಾನಬೋಧನೆ ಮಾಡುತ್ತಿದ್ದರು. ದೇವಾಂಗ ಪುರಾಣವು ದಾಸಿಮಯ್ಯನವರ ತಂದೆಯ ಹೆಸರು "ವೀರರುದ್ರ" ಎಂದು ಹೇಳಿದೆ.[31] ಅಲ್ಲಿ ತಾಯಿಯ ಹೆಸರು ಸೂಚಿಸಿಲ್ಲ. ಮತ್ತು ದುಗ್ಗಳೆಯ ತಂದೆ–ತಾಯಿಗಳ ಹೆಸರು "ಸಂಕಣ್ಣ" ಮತ್ತು "ಶಿವದೇವಿ" ಎಂದು ದೇವರ ದಾಸಿಮಾರ್ಯ ಪುರಾಣವು ಹೇಳುತ್ತದೆ.[32] ಆದರೆ ಅನೇಕ ವಿದ್ವಾಂಸರ ಅಭಿಪ್ರಾಯ, ಸಂಶೋಧನೆಯ ಅಭಿಪ್ರಾಯ ದಂತೆ ರಾಮಯ್ಯ ಮತ್ತು ಶಂಕರೀಯವರು ದಾಸಿಮಯ್ಯನವರ ತಂದೆ–ತಾಯಿಗಳೆಂದು, ಮಲ್ಲಿನಾಥ ಮತ್ತು ಮಹಾದೇವಿಯರು ದುಗ್ಗಳೆಯ ತಂದೆ–ತಾಯಿಗಳಾಗಿದ್ದಾರೆಂದು ಒಪ್ಪಿಕೊಳ್ಳಬಹುದು.

3.12.4 ಸಂಸಾರ ಶ್ರೇಷ್ಠವೋ? ಸಂನ್ಯಾಸ ಶ್ರೇಷ್ಠವೋ?

ಒಮ್ಮೆ ದಾಸಿಮಾರ್ಯರು ಬಟ್ಟೆ ನೇಯುತ್ತಿರುವಾಗ ಇವರಲ್ಲಿಗೆ ಯುವಕರಿಬ್ಬರು ಬಂದು ಗ್ರಹಸ್ಥಾಶ್ರಮ ಶ್ರೇಷ್ಟವೋ? ಅಥವಾ ಸಂನ್ಯಾಸಾಶ್ರಮ ಶ್ರೇಷ್ಟವೋ? ಎಂದು ಪ್ರಶ್ನಿಸಿದರು. ಈ ಪ್ರಶ್ನೆಗೆ ದಾಸಿಮಯ್ಯನವರು ಮೌಖಿಕವಾಗಿ ಉತ್ತರಕೊಡದೆ, ಪ್ರಯೋಗಾತ್ಮಕ ಮತ್ತು ಪ್ರತ್ಯಕ್ಷ ನಿದರ್ಶನಗಳ ಮೂಲಕ ಉತ್ತರಿಸುವರು. "ಬೆಳಕಿದ್ದರೂ, ಎಳೆ ಕತ್ತರಿಸಿ ಹೋದುದ್ದರಿಂದ ದೀಪವ ತರಲೂ ಮತ್ತು ಊಟಕ್ಕೆ ಕುಳಿತಾಗ ನೆನ್ನೆ ಮಾಡಿದ ಅಥವಾ ಆರಿದ ಅಂಬಲಿ ಸುಡುತ್ತಿದೆಂದು ಗಾಳಿ ಹಾಕಲು ಹೆಂಡತಿಗೆ ಹೇಳಿದಾಗ ಅದಕ್ಕೆ ಆ ಸತಿಸಾಧ್ವಿಮಣಿ ಮರುಮಾತನಾಡದೆ ದೀಪವ ತಂದು ಕೊಡುವಳು ಮತ್ತು ಗಾಳಿಯನ್ನೂ ಹಾಕುವಳು" ಪತಿಯ ಮಾತಿಗೆ ಚಕಾರವೆತ್ತದ ಇಂಥಹ ಸತಿಯಿದ್ದರೆ ಸಂಸಾರ ಶ್ರೇಷ್ಟ, ವಿರುದ್ಧವಾಗಿ ನಡೆದರೆ ಸಂನ್ಯಾಸವೇ ಶ್ರೇಷ್ಟವೆಂದರು.

ಈ ಕಥೆಯು ಇಡೀ ಶರಣಸಂಕುಲ ದಂಪತಿಗಳಿಗೆ ದಾರಿದೀಪವಾಗಿದೆ. ಇಷ್ಟೇ ಅಲ್ಲ ದಾಸಿಮಯ್ಯನವರ ಜೀವನದ ಪ್ರತಿಯೊಂದು ಸನ್ನಿವೇಶ ಮತ್ತು ವಚನಗಳು ನಂತರದ ಶರಣರ ಮೇಲೆ ಗಾಢವಾದ ಪ್ರಭಾವ ಬೀರಿರುವುದು ಗಮನಾರ್ಹ ಸಂಗತಿಯಾಗಿದೆ.

3.12.5 ಕಾಯಕ

ಉಂಕೆಯ ನಿಗುಚಿ ಸರಿಗೆಯ ಸಮಗೊಳಿಸಿ
ಸಮಗಾಲನಿಕ್ಕಿ ಅಣಿಯೇಳ ಮುಟ್ಟದೆ
ಹಿಡಿದ ಲಾಳಿಯ ಮುಳ್ಳು ಕಂಡಿಕೇಯ ನುಂಗಿತ್ತು
ಈ ಸೀರೆಯ ನೆಯ್ದವ ನಾನೋ ನೀನೋ? ರಾಮನಾಥ.[33]

ದಾಸಿಮಯ್ಯನವರು ಮೊಟ್ಟಮೊದಲು ಕಾಯಕಕ್ಕೆ ಉನ್ನತವಾದ ಮೌಲ್ಯವನ್ನು ತಂದುಕೊಟ್ಟರು. ಕಾಯಕಭಕ್ತಿ ಮತ್ತು ಕಾಯಕಪ್ರೀತಿ ಇವು ದಾಸಿಮಯ್ಯನವರ ಅವಿಭಾಜ್ಯ ಅಂಗಗಳಾಗಿದ್ದವು. ಇವರ ಅಪೂರ್ವವಾದ ಶಿವಭಕ್ತಿ, ದಾಸೋಹಭಾವನೆ, ಕಾಯಕ ಪೂಜ್ಯತೆ, ಶಿವಯೋಗ ಸಾಧನೆ, ಸಮಾಜೋದ್ಧಾರದ ಚಿಂತನೆ ಮೊದಲಾದ ಅಂಶಗಳು ಅವರ ಜೀವನ ಚರಿತ್ರೆ ಹಾಗೂ ಅವರ ವಚನಗಳು ಮೂಲಕ ಅರಿಯಬಹುದು. ಇವರು ಸತ್ಯ, ಶುದ್ಧ ಮನೋಭಾವನೆಯಿಂದ ಬಟ್ಟೆ ನೇಯುವ ವೃತ್ತಿಯಲ್ಲಿ ಪ್ರವೃತ್ತರಾಗಿ ನೇಯ್ಗೆವೃತ್ತಿಯ ಕಾಯಕ ಯೋಗಿಗಳಾದರು.

3.12.6. ತವನಿಧಿ

ದೇವರ ದಾಸಿಮಯ್ಯನವರು ನಿರ್ಮಲನಾದ ಭಕ್ತಿಯಿಂದ ನೇಯ್ದ ವಸ್ತ್ರವನ್ನು ಶಿವನಿಗಿತ್ತು 'ತವನಿಧಿ' ಪಡೆದ ಪವಾಡವು ಜನಜನಿತವಾಗಿದೆ. ಹದಿನಾಲ್ಕು ವರ್ಷಗಳ ವರೆಗೆ[34] ನಿರಂತರವಾಗಿ ವಸ್ತ್ರವನ್ನು ನೇಯ್ದು ಅದನ್ನು ಮಾರುವುದಕ್ಕೆಂದು ಸಂತೆಗೆ ಒಯ್ದಾಗ ಎಲ್ಲರೂ ಉತ್ಸುಕತೆಯಿಂದ ನೋಡಿ ಆನಂದಿಸುತ್ತಾರೆ. ಆದರೆ ಬೆಲೆ ಕಟ್ಟುವ ಶಕ್ತಿ ಯಾರಿಗೂ ಇರಲಿಲ್ಲ. ಬಂದು ನೋಡಿ ಹಿಂದಿರುಗುವರೇ ಹೊರತು ಯಾರಿಗೂ ಕೊಂಡುಕೊಳ್ಳುವ ಧೈರ್ಯವಿರಲಿಲ್ಲ. ಮರಳಿ ಮನೆಗೆ ತೆಗೆದುಕೊಂಡು ಬರುವಾಗ ದಾರಿಯಲ್ಲಿ ವೃದ್ಧಜಂಗಮನೊಬ್ಬನು ಚಳಿಯಿಂದ ನಡುಗುತ್ತ ಬಂದು ದಾಸಿಮಯ್ಯ ನವರಿಗೆ ಹೊದೆಯಲು ವಸ್ತ್ರವನ್ನು ಕೇಳುತ್ತಾನೆ. ದಾಸಿಮಯ್ಯನವರು ತಮ್ಮಲ್ಲಿದ್ದ ಆ ಹೊಸ ವಸ್ತ್ರವನ್ನೇ ಹೊದ್ದುಕೊಳ್ಳಲು ಕೊಡುತ್ತಾರೆ. ಅದನ್ನು ತೆಗೆದುಕೊಂಡ ಆ ವೃದ್ಧಜಂಗಮನು ದಾಸಿಮಯ್ಯನವರ ಎದುರಿನಲ್ಲಿಯೇ ಅದನ್ನು ಹರಿದು ಹಾಕುತ್ತಾನೆ. ಅದನ್ನು ಶಾಂತಚಿತ್ತದಿಂದ ವೀಕ್ಷಿಸಿದ ದಾಸಿಮಯ್ಯನವರ ದೃಢತೆಗೆ ಒಲಿದು ಈಶ್ವರನು ಪ್ರತ್ಯಕ್ಷನಾಗಿ ದಾಸಿಮಯ್ಯನವರಿಗೆ 'ತವನಿಧಿ' ಯನ್ನು ದಯಪಾಲಿಸುತ್ತಾನೆ. ಅಂದಿನಿಂದ ದಾಸಿಮಯ್ಯ ನವರು 'ಜೇಡರ' ಎಂಬ ಜಾತಿವಾಚಕ ಪದವನ್ನು ದೇವರ ಒಲುಮೆಗೆ ಪಾತ್ರರಾಗಿರುವುದ ರಿಂದ 'ದೇವರ ದಾಸಿಮಯ್ಯರೆಂದು' ಈಶ್ವರನಿಂದ 'ತವನಿಧಿ' ಪಡೆದುದಕ್ಕಾಗಿ 'ತವನಿಧಿಯ ದಾಸರೆಂದು' ಪ್ರಸಿದ್ಧರಾದರು.

3.12.6 ಜೈನರು ಶೈವರಾದರು

ದೇವರ ದಾಸಿಮಯ್ಯನವರ ಕೀರ್ತಿ ದಶದಿಕ್ಕುಗಳಿಗೆ ಹರಡಿತ್ತು. ಅಂದು ಆಂಧ್ರಪ್ರದೇಶದ ಪೊಟ್ಟಲಕೆರೆಯನ್ನು ಚಾಲುಕ್ಯ ಚಕ್ರವರ್ತಿ ಮೊದಲನೆಯ ಜಯಸಿಂಹನು ಕ್ರಿ.ಶ. ಸುಮಾರು 1008–1042ವರೆಗೆ ವೈಭವದಿಂದ ರಾಜ್ಯವಾಳಿದನು.[35] ಅವನ ಹೆಂಡತಿ ಸುಗ್ಗಲಾದೇವಿಯು ದಾಸಿಮಯ್ಯನವರ ಶಕ್ತಿ, ಮಹಿಮೆಯನ್ನು ಕೇಳಿ ಅವರನ್ನು ತನ್ನ ಗುರುವನ್ನಾಗಿ ಸ್ವೀಕರಿಸಿ ಶೈವದೀಕ್ಷೆ ಪಡೆದರು. ರಾಜನು ಜೈನನಾದುದ್ದರಿಂದ ಇದನ್ನು ವಿರೋಧಿಸುತ್ತಾನೆ. ಆಗ ಸುಗ್ಗಲಾದೇವಿ ನನ್ನ ಗುರುವಾದ ದಾಸಿಮಯ್ಯನವರನ್ನು ಜೈನರು

ವಾದದಲ್ಲಿ ಗೆದ್ದರೆ ತಾನು ಜೈನಳಾಗುವುದಾಗಿ, ಇಲ್ಲದಿದ್ದರೆ ರಾಜ ಇತರ ಜೈನರೊಡನೆ ಶಿವದೀಕ್ಷೆ ಪಡೆಯಬೇಕೆಂದು ಷರತ್ತನ್ನು ಹಾಕುತ್ತಾಳೆ. ಈ ನಿಮಿತ್ತವಾಗಿ ಅವಳು ದಾಸಿಮಯ್ಯನವರಿಗೆ ಪೊಟ್ಟಲಕೆರೆಗೆ ಆಮಂತ್ರಿಸುವಳು. ಆಗ ಜೈನರಿಗೂ, ದಾಸಿಮಯ್ಯನವರಿಗೂ ಧಾರ್ಮಿಕ ವಿಷಯದ ಮೇಲೆ ಚರ್ಚೆ ನಡೆಯುತ್ತದೆ. ಈಶ್ವರನ ಅಸ್ತಿತ್ವದ ಬಗೆಗೆ ಜೈನರು ಪ್ರಶ್ನೆ ಮಾಡಿದಾಗ ದಾಸಿಮಯ್ಯನವರು ಈಶ್ವರನು ಸರ್ವತ್ರದಲ್ಲಿಯೂ ಇರುವನೆಂದು ಹೇಳುವರು. ವಾದದಲ್ಲಿ ಸೋತ ಜೈನರು ಅವರನ್ನು ಹೊಂಚು ಹಾಕಿ ಕೊಲ್ಲಬೇಕೆಂದು ಒಂದು ಘಟದಲ್ಲಿ ಸರ್ಪವೊಂದನ್ನು ಮುಚ್ಚಿ "ಇದರಲ್ಲಿ ನಿಮ್ಮ ಈಶ್ವರ ಇದ್ದಾನೆಯೇ? ಎಂದು ಪ್ರಶ್ನಿಸುತ್ತಾರೆ. ಸರ್ವತ್ರ ಈಶ್ವರನಿದ್ದಾನೆಂದು ಸಾಧಿಸುತ್ತಿದ್ದ ದೇವರ ದಾಸಿಮಯ್ಯನವರು ಈ ಘಟದಲ್ಲಿಯೂ ಈಶ್ವರನಿದ್ದಾನೆಂದು ಕೈ ಹಾಕಿ ತೆಗೆದಾಗ ಸರ್ಪವು ಲಿಂಗವಾಗಿ ಮಾರ್ಪಡುತ್ತದೆ. ಅದನ್ನು 'ಉತ್ತರೇಶ್ವರ'[36] ಲಿಂಗವೆಂದು ಹೆಸರಿನಿಂದ ಪೊಟ್ಟಲಿಕೆರೆಯಲ್ಲಿ ಪ್ರತಿಷ್ಠಾಪಿಸುತ್ತಾರೆ. ಅಲ್ಲಿದ್ದ ರಾಜನು ಶಿವದೀಕ್ಷೆ ಪಡೆಯುತ್ತಾನೆ. ಅಷ್ಟೆ ಅಲ್ಲದೆ ಅಲ್ಲರುವ 700 ಜೈನ ಬಸದಿಗಳು ಮಂದಿರಗಳಾದವು ಮತ್ತು 20,000 ಜೈನರು[37] ಶೈವರಾಗಿ ಮತಾಂತರ ಹೊಂದಿದರು.

3.13 ದೇವರ ದಾಸಿಮಯ್ಯನವರ ಕಾಲ

ದೇವರ ದಾಸಿಮಯ್ಯನವರ ಜೀವಿತ ಕಾಲದ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಕೆಲವರು 11ನೆಯ ಶತಮಾನವೆಂದರೆ, ಇನ್ನು ಕೆಲವರು 12ನೆಯ ಶತಮಾನವೆಂದು ಹೇಳುತ್ತಾರೆ. ಮತ್ತೆ ಕೆಲವರು 11 ಮತ್ತು 12ನೆಯ ಶತಮಾನಗಳ ಮಧ್ಯದಲ್ಲಿ ಜೀವಿಸಿದ್ದರೆಂದು ಅಭಿಪ್ರಾಯಗಳನ್ನು ಮುಂದಿಟ್ಟಿದ್ದಾರೆ. ದೇವರ ದಾಸಿಮಯ್ಯನವರು ಚಾಲುಕ್ಯದೊರೆ ಒಂದನೆಯ ಜಯಸಿಂಹನ ರಾಣಿಯಾದ ಸುಗ್ಗಲಾದೇವಿಗೆ ಶೈವದೀಕ್ಷೆ ಕೊಟ್ಟು ಗುರುವಾಗಿದ್ದ ಅಂಶವನ್ನು 'ಬಸವಪುರಾಣ', 'ಬಸವರಾಜ ವಿಜಯಂ', ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರ ರತ್ನಾಕರ' ಮೊದಲಾದ ಕಾವ್ಯಗಳು ಉಲ್ಲೇಖಿಸಿವೆ. ಜಯಸಿಂಹ ರಾಜನ ಕಾಲವು ಕ್ರಿ.ಶ. 1008–1042 ಎಂಬುದನ್ನು ವಿದ್ವಾಂಸರು ಗುರುತಿಸಿದ್ದಾರೆ.[38] ಜೇಡರ ದಾಸಿಮಯ್ಯನ ವಚನಗಳಲ್ಲಿ ಉಲ್ಲೇಖವಾಗಿರುವ ಮಾದರ ಚನ್ನಯ್ಯ (ಕ್ರಿ.ಶ.1040–1120), ಡೋಹರ ಕಕ್ಕಯ್ಯ (ಕ್ರಿ.ಶ.1120), ಕೊಂಡಗುಳಿ ಕೇಶಿರಾಜ (ಕ್ರಿ.ಶ.1107) ಇವರ ಕಾಲವನ್ನು ಆಧರಿಸಿ ಜೇಡರದಾಸಿಮಯ್ಯ ಕ್ರಿ.ಶ.ಸು. 1060ಕ್ಕಿಂತಲೂ ಹಿಂದೆ ಇದ್ದವನಲ್ಲ. ಕ್ರಿ.ಶ.1160 (ಬಸವಣ್ಣನವರ ಕಾಲ)ಕ್ಕಿಂತ ಈಚಿನವನಲ್ಲ. ಆದ್ದರಿಂದ ಕ್ರಿ.ಶ.1060–1160ರ ಕಾಲಾವಧಿ ಜೇಡರದಾಸಿಮಯ್ಯನ ಬದುಕಿನ ಅವಧಿಯಾಗಿರಬೇಕೆಂಬುದು ಸರ್ವವಿದಿತವಾಗಿದೆ.[39] ಎಂದು ಡಾ.ಮೃತ್ಯುಂಜಯ ರುಮಾಲೆ ಅಭಿಪ್ರಾಯ ಪಟ್ಟಿದ್ದಾರೆ. ರಾಮರೆಡ್ಡಿಯವರು ದಾಸಿಮಯ್ಯನವರ ಕಾಲ ಕ್ರಿ.ಶ.ಸು. 1020–1100ರ ಮಧ್ಯಕಾಲವೆಂದು ಹೇಳಿದ್ದಾರೆ.[40]

ದೇವರ ದಾಸಿಮಯ್ಯನವರ ಜೀವನ ಮತ್ತು ಸಾಹಿತ್ಯ ಕುರಿತು ಅಧ್ಯಯನಕ್ಕೆ ತೊಡಗಿದ್ದಾಗ ಕರ್ನಾಟಕದ ಹಲವಾರು ಶಿಲಾಶಾಸನಗಳು, ಇವರ ಬಗ್ಗೆ ಉಲ್ಲೇಖಿಸಿರುವುದನ್ನು ಕಾಣುತ್ತೇವೆ. ಅಲ್ಲದೆ ಬಸವಣ್ಣನವರ ವಚನಗಳಲ್ಲಿ, ಹರಿಹರನ ರಗಳೆಯಲ್ಲಿ, ಬಸವಪುರಾಣ, ಬಸವರಾಜವಿಜಯಂ ಮೊದಲಾದ ಕಾವ್ಯಗಳಲ್ಲಿ ದಾಸಿಮಯ್ಯನವರ ಜೀವನದ ಸನ್ನಿವೇಶ ಕುರಿತ ಕಥೆಗಳು ಉಕ್ತವಾಗಿವೆ.

ಡಾ. ಎಂ. ಎಂ. ಕಲಬುರ್ಗಿಯವರು "ಶಾನಗಳಲ್ಲಿ ಶಿವಶರಣರು" ಎಂಬ ಗ್ರಂಥದಲ್ಲಿ ದಾಸಿಮಯ್ಯನವರ ಬಗ್ಗೆ ಉಲ್ಲೇಖಿಸಿರುವ ಶಾಸನಗಳ ಕಾಲ ಹೀಗಿವೆ[41]–

1. ಗೊಬ್ಬೂರು ಶಾಸನ ಕ್ರಿ.ಶ 1148
2. ಬಿದರೆ ಶಾಸನ ಕ್ರಿ.ಶ 1165
3. ಚಿಕ್ಕಮುದನೂರು ಶಾಸನ ಕ್ರಿ.ಶ 1167
4. ಕಿರಿಯಂಡಿ ಶಾಸನ ಕ್ರಿ.ಶ 1197
5. ಅಬ್ಬಲೂರು ಚಿತ್ರಶಾಸನ ಕ್ರಿ.ಶ 1200
6. ಬನವಾಸಿ ಚಿತ್ರ ಶಾಸನ ಕ್ರಿ.ಶ
7. ಗಿಜಿಗನಹಳ್ಳಿ ಶಾಸನ ಕ್ರಿ.ಶ 1201

ಇವುಗಳ ಜೊತೆಗೆ ಡಾ. ಎಚ್. ಎಸ್. ಗಂಗಮ್ಮನವರು ಹಿರಿಯೂರು (ಕ್ರಿ.ಶ.1280)ಶಾಸನ ಮತ್ತು ಮರಡಿಪುರ (ಕ್ರಿ.ಶ. 1280) ಶಾಸನಗಳಲ್ಲಿಯೂ ದಾಸಿಮಯ್ಯನವರ ಉಲ್ಲೇಖವಿರುವುದನ್ನು ಗುರುತಿಸಿದ್ದಾರೆ.[42]

ಈ ಎಲ್ಲಾ ಶಾಸನಗಳನ್ನು ಗಮನಿಸಿದಾಗ ಕ್ರಿ.ಶ.1148ರ ಹೊತ್ತಿಗಾಗಲೇ ದೇವರ ದಾಸಿಮಯ್ಯನವರ ಹೆಸರು ಶಾಸನ ಬದ್ಧವಾಗಿರಬೇಕಾದರೆ ಅವರ ವ್ಯಕ್ತಿತ್ವ ಹಾಗೂ ವಚನಗಳ ಪ್ರಭಾವ ಅಗಾಧವಾದುದೆಂದು ಸ್ಪಷ್ಟವಾಗುತ್ತದೆ. ಮುದನೂರು ಗ್ರಾಮದ ಹತ್ತಿರವಿರುವ ಕ್ರಿ.ಶ.1085ರ ಹಾವಿನಾಳ ಶಾಸನದಲ್ಲಿ "ಶ್ರೀಮಲೆಯ ಚನ್ನಮಲ್ಲಿಕಾರ್ಜುನ ದೇವರ ದಾಸಿಯುಭಯಲಿಪಿ ಲಿಖಿತ" ಎಂಬ ಉಲ್ಲೇಖವಿದೆ.[43]

ದೇವರ ದಾಸಿಮಯ್ಯ ಕಾಲವನ್ನು ಕುರಿತು ವಿದ್ವಾಂಸರು ಚರ್ಚಿಸಿ ತೀರ್ಮಾನಿಸಿದ ಸಾರವನ್ನು ರಮೇಶ ಮಾಳರವರು ಸಂಪಾದಿಸಿದ "ದೇವರ ದಾಸಿಮಯ್ಯನವರ ವಚನ ದರ್ಪಣ" ಎಂಬ ಗ್ರಂಥದಲ್ಲಿ ಹೀಗೆ ಸಂಗ್ರಹಿಸಿದ್ದಾರೆ[44]–

1. ಎಂ. ಗೋವಿಂದ ಪೈ ಕ್ರಿ.ಶ 980–1040
2. ಡಾ. ಎಲ್. ಬಸವರಾಜು ಕ್ರಿ.ಶ 1015–1040
3. ಡಾ. ರಂಶ್ರೀ ಮುಗಳಿ ಕ್ರಿ. ಶ 1015–1042

4.	ಡಾ. ಫ.ಗು ಹಳಕಟ್ಟಿ	ಕ್ರಿ.ಶ 1015–1042
5.	ಎಚ್ ದೇವಿರಪ್ಪ ಮತ್ತು ಆರ್ ರಾಚಪ್ಪ	ಕ್ರಿ.ಶ 1060–1130
6.	ಆರ್. ನರಸಿಂಹಾಚಾರ್ಯ	ಕ್ರಿ.ಶ 1140
7.	ಡಾ. ಎಂ. ಚಿದಾನಂದಮೂರ್ತಿ	ಕ್ರಿ.ಶ 1130–1140
8.	ಡಾ. ಶ್ರೀಕಂಠಶಾಸ್ತ್ರಿ	ಕ್ರಿ.ಶ 11 ನೆಯ ಶತಮಾನ
9.	ಶಾಂತರಸ	ಕ್ರಿ.ಶ 1125 ಕ್ಕಿಂತ ಈಚೆಯವರಲ್ಲ, ಕ್ರಿ.ಶ 1050 ಕ್ಕಿಂತ ಆಚೆಯವರಲ್ಲ.

ದೇವರ ದಾಸಿಮಯ್ಯನವರ ಕುರಿತು ಬಸವಾದಿ ಪ್ರಮಥರು ಗೌರವ ಕೊಟ್ಟಿರುವುದನ್ನು, ಹಾಗೂ ಅವರ ಮೇಲೆ ಪ್ರಭಾವ ಬೀರಿರುವುದನ್ನು ನೋಡಿದರೆ, ದಾಸಿಮಯ್ಯನವರು ಬಸವಪೂರ್ವದವರೆಂಬುದನ್ನು ಎಲ್ಲರೂ ಒಪ್ಪಿಕೊಂಡಿರುತ್ತಾರೆ. ಆದರೆ ಎಷ್ಟು ಪೂರ್ವ? ಎಂಬುದು ವಿದ್ವಾಂಸರ ಚರ್ಚೆಯಾಗಿದೆ.

ದೇವರ ದಾಸಿಮಯ್ಯನವರು ಸುಮಾರು 980–1040ರಲ್ಲಿ ಚಾಲುಕ್ಯ ದೊರೆಯಾದ ಮೊದಲನೆಯ ಜಯಸಿಂಹನ ಅಂದರೆ ಹತ್ತನೆಯ ಶತಮಾನದ ಉತ್ತರಾರ್ಧ ಮತ್ತು ಹನ್ನೊಂದನೆಯ ಶತಮಾನ ಪೂರ್ವಾರ್ಧದಲ್ಲಿ ಬಾಳಿ ಬದುಕಿದರು.

3.14 ದೇವರ ದಾಸಿಮಯ್ಯ ಮತ್ತು ಜೇಡರ ದಾಸಿಮಯ್ಯ

ದೇವರ ದಾಸಿಮಯ್ಯನವರೇ ಜೇಡರದಾಸಿಮಯ್ಯನವರೆಂದು ಹಲವರ ವಾದ. ಇವರಿಬ್ಬರು ಬೇರೆ–ಬೇರೆ ಎಂಬುವುದು ಕೆಲವರ ಅಭಿಪ್ರಾಯ. ಈ ಎರಡು ಹೆಸರುಗಳು ಒಬ್ಬನವೇ ಎಂದು ತಿಳಿದುಕೊಂಡಿರುವವರೇ ಹೆಚ್ಚು ಜನ. ಕೆಲವರು ಇವರಿಬ್ಬರು ಬೇರೆ–ಬೇರೆ; ಓರ್ವ ಬಸವಣ್ಣನವರ ಹಿರಿಯ ಸಮಕಾಲೀನವರು, ಇನ್ನೋರ್ವ ಅವರಿಗಿಂತ ಒಂದುನೂರು ವರ್ಷ ಮೊದಲಿನವರು. ಓರ್ವ ಘಟಸರ್ಪದ ಪವಾಡದಿಂದ ಪ್ರಸಿದ್ಧರಾಗಿದ್ದರೆ. ಇನ್ನೋರ್ವ ತವನಿಧಿ ಪವಾಡದಿಂದ ಪ್ರಸಿದ್ಧರಾಗಿದ್ದಾರೆ. ಇವರಲ್ಲಿ ಒಬ್ಬ ವಚನಕಾರನಲ್ಲ ಇನ್ನೋರ್ವ ವಚನಕಾರ. ಒಬ್ಬ ದೇವೂರು ಗ್ರಾಮದವ ಇನ್ನೋರ್ವ ಮುದನೂರು ಗ್ರಾಮದವ. ಓರ್ವನ ಕಾಯಕ ನೇಯ್ಗೆಯ ಕಾಯಕ. ಇನ್ನೋರ್ವನ ಕಾಯಕ ಗೊತ್ತಿಲ್ಲ. ಎಂಬ ಭಿನ್ನಾಭಿಪ್ರಾಯಗಳಿವೆ. ಆದರೆ ಇವರಿಬ್ಬರೂ ಒಬ್ಬರೇ ಆಗಿದ್ದಾರೆ. ದಾಸಿಮಯ್ಯನವರು ನೇಯ್ಗೆಯ ಕಾಯಕ ಮಾಡುವುದರಿಂದ ಜೇಡನೆಂದು, ದೇವರನ್ನು ಆರಾಧಿಸಿ ತವನಿಧಿ ಪಡೆದುದ್ದರಿಂದ ದೇವರ ಎಂಬ ವಿಶೇಷಣವನ್ನು ಕಾಣುತ್ತೇವೆ. ಜಾಡ ಅಥವಾ ಜೇಡ ಎಂಬುದು ಕಾಯಕ ಸೂಚಕವಾದರೆ ದೇವರ ಎಂಬುದು ಭಕ್ತಿ ಸೂಚಕವಾಗಿದೆ. ಹೆಚ್ಚಿನ ವಿವರಣೆನ್ನು ಈ ಕೆಳಗಿನಂತೆ ಕಾಣಬಹುದು.

ಕನ್ನಡ ಸಾಹಿತ್ಯದಲ್ಲಿ 'ಜೇಡರ ದಾಸಿಮಯ್ಯ', 'ದೇವರ ದಾಸಿಮಯ್ಯ', 'ಮುದನೂರು ದಾಸಿಮಯ್ಯ', 'ತವನಿಧಿಯ ದಾಸಿಮಯ್ಯ' ಮತ್ತು 'ಶಂಕರ

ದಾಸಿಮಯ್ಯ', ಮೊದಲಾದ ಹೆಸರಗಳನ್ನು ಕಾಣುತ್ತೇವೆ. ಇವುಗಳ ಬಗ್ಗೆ ವಿದ್ವಾಂಸರಲ್ಲಿ ಸಾಕಷ್ಟು ಚರ್ಚೆಯೂ ನಡೆದಿದೆ. ಈ ಎಲ್ಲ ಹೆಸರುಗಳಲ್ಲಿರುವರು ಈರ್ವರೆ ಮಾತ್ರ. ಒಬ್ಬ ಶಂಕರ ದಾಸಿಮಯ್ಯನಾದರೆ, ಇನ್ನೋರ್ವ ಜೇಡರ ದಾಸಿಮಯ್ಯ. ಶಂಕರ ದಾಸಿಮಯ್ಯನವರಿಗೆ ನವಿಲೆಯ ದಾಸಿಮಯ್ಯರೆಂದೂ ಕರೆಯುತ್ತಾರೆ. ಜೇಡರ ದಾಸಿಮಯ್ಯನವರಿಗೆ ದೇವರ ದಾಸಿಮಯ್ಯ, ಮುದನೂರಿನ ದಾಸಿಮಯ್ಯ, ತವನಿಧಿಯ ದಾಸಿಮಯ್ಯರೆಂದು ಕರೆಯುತ್ತಾರೆ. ಈ ಈರ್ವರ ಬಗ್ಗೆ ಹಲವಾರು ಕಾವ್ಯಗಳು ಉಲ್ಲೇಖಿಸಿರುತ್ತವೆ. ಇವರು ಬೇರೆ ಬೇರೆ ಎಂಬುದು ನಿರ್ವಿವಾದವಾಗಿದೆ.

ದೇವರ ದಾಸಿಮಯ್ಯನವರ ಬಗ್ಗೆ ವಿದ್ವಾಂಸರು ಭಿನ್ನಾಭಿಪ್ರಾಯ ತಿಳಿಸಿದ್ದಾರೆ. ಇದಕ್ಕೆಲ್ಲ ಕಾವ್ಯಾದಿಸಾಹಿತ್ಯಗಳಲ್ಲಿ ಸಂದರ್ಭಕ್ಕನುಗುಣವಾಗಿ ಜೇಡರ, ದೇವರ, ಮುದನೂರು, ತವನಿಧಿ ಹೀಗೆ ಹೆಸರಿನ ಹಿಂದೆ ವಿಶೇಷ ಪದಗಳನ್ನು ಉಪಯೋಗಿಸಿದ್ದು ಕಾರಣವಾಗಿದೆ. ಇವರ ಬಗ್ಗೆ ಕರ್ನಾಟಕದ ಹಲವಾರು ಶಿಲಾಶಾಸನಗಳು, ಬಸವಾದಿಶರಣರ ವಚನಗಳು, ಹರಿಹರನ ರಗಳೆಗಳು, ಬಸವ ಪುರಾಣ, ಬಸವರಾಜ ವಿಜಯಂ, ಮೊದಲಾದ ಕಾವ್ಯಗಳಲ್ಲಿ ದಾಸಿಮಯ್ಯನವರ ಜೀವನ ಸನ್ನಿವೇಶ ಕುರಿತ ಕಥೆಗಳು ಉಕ್ತವಾಗಿವೆ. ಇಲ್ಲಿ ಸಂದರ್ಭ ಔಚಿತ್ಯವಾಗಿ ಸೂಚಿಸಿರುವ ಹೆಸರು ಒಬ್ಬನಿಗೆ ಸೇರಿವಿಯೋ? ಅಥವಾ ಹಲವರಿಗೆ ಸೇರಿವಿಯೋ? ಎಂಬುದು ವಿದ್ವಾಂಸರಲ್ಲಿ ಗೊಂದಲವನ್ನುಂಟುಮಾಡಿದೆ.

ಶಾಸನಗಳಲ್ಲಿ ದಾಸಿಮಯ್ಯನವರನ್ನು ಕುರಿತು, "ಜಾಡಕುಲತಿಲಕ ಜಾಡರ ದಾಸಿಮಯ್ಯ", "ದಕ್ಷಿಣ ವಾರಣಾಸಿ ಮುದೇನೂರುದಾಸಯ್ಯ", "ತವನಿಧಿಯದಾಸ", "ದೇವರದಾಸಿ" ಎಂಬ ಉಲ್ಲೇಖಿಸಿರುವುದನ್ನು ಕಾಣುತ್ತೇವೆ.[45]

ಬಸವಣ್ಣನವರು ತಮ್ಮ ವಚನಗಳಲ್ಲಿ ದಾಸಿಮಯ್ಯನವರನ್ನು ಕುರಿತು ದಾಸ, ದಾಸಯ್ಯ, ದಾಸಿಮಯ್ಯ, ದಾಸಿದೇವ, ಜೇಡರ ದಾಸಿಮಯ್ಯ, ತವನಿಧಿಯ ದಾಸ. ಹರಿಹರ ದೇವನ ಶಂಕರ ದಾಸಿಮಯ್ಯರಗಳೆ, ಭೀಮಕವಿಯ ಬಸವಪುರಾಣ, ಷಡಕ್ಷರ ದೇವನ ಬಸವರಾಜ ವಿಜಯಂ, ಭೈರವೇಶ್ವರ ಕಾವ್ಯದ ಕಥಾಮಣಿ ಸೂತ್ರರತ್ನಾಕರ ಮುಂತಾದ ಕಾವ್ಯಗಳಲ್ಲಿ ಸಂದರ್ಭೋಚಿತವಾಗಿ ಜೇಡರ ದಾಸಿಮಯ್ಯ, ದೇವರ ದಾಸಿಮಯ್ಯ, ಮುದನೂರು ದಾಸಿಮಯ್ಯನೆಂದು ಹೇಳಲಾಗಿದೆ.

ಅನುಭಾವಿ ಮಹಾಕವಿ ಕಡಕೊಳ್ಳದ ಶ್ರೀ ಮಡಿವಾಳಪ್ಪನವರು ದಾಸಿಮಯ್ಯನವರ ಜೀವನ ಮತ್ತು ನೇಯ್ಗೆ ಕಾಯಕವನ್ನು ಕುರಿತು ತಮ್ಮ ಗೀತೆಯಲ್ಲಿ

ಜೇಡರ ದಾಸ ದೇವರ ದಾಸ ಮುದನೂರ ವಾಸ।
ಈಶ ಧರ್ಮ ಪ್ರಕಾಶ ಶಿವಶರಣ ಅವಿನಾಶ ॥ಪ॥[46]

ಎಂದು ಮೊದಲಾಗಿ ಹೇಳಿದ್ದಾರೆ. ಇಲ್ಲಿ ದಾಸಿಮಯ್ಯನವರ ಹೆಸರಿನ ಹಿಂದೆ ಜೇಡರ, ದೇವರ ಮತ್ತು ಮುದನೂರು ಎಂಬ ವಿಶೇಷ ಪದಗಳನ್ನು ಉಪಯೋಗಿಸಿದ್ದು ಕಾಣುತ್ತೇವೆ. ಜೇಡರ ದಾಸಿಮಯ್ಯ, ದೇವರ ದಾಸಿಮಯ್ಯ ಅಭಿನ್ನರೆಂಬುದಕ್ಕೆ ಆಧಾರ ಇದೊಂದೇ ಸಾಕು.

ಉತ್ತಮ ಕಾವ್ಯಗಳು ತಮ್ಮ ಸಮಕಾಲಿನ ಯುಗಗಳನ್ನು ಪ್ರತಿನಿಧಿಸುತ್ತವೆ. ಆದರೆ ದಾಸಿಮಯ್ಯನವರ ನೈಜಜೀವನದ ಚಿತ್ರಣ ಅವರ ಸಮಕಾಲೀನ ಕಾವ್ಯಗಳಲ್ಲಿ ಕಂಡು ಬರುವುದಿಲ್ಲ. ಅವರು ಲಿಂಗೈಕ್ಯರಾದ ನಂತರದಿಂದ ಕಾವ್ಯಗಳು ರಚನೆಯಾಗುತ್ತ ಬಂದು, ಅವರ ದಿವ್ಯ ವ್ಯಕ್ತಿತ್ವದ ಮಹಿಮೆಯನ್ನು ಹಲವಾರು ದೃಷ್ಟಿಕೋನಗಳಿಂದ ಚಿತ್ರಿಸುತ್ತ ಬಂದಿದೆ. ಮೇಲೆ ನಿರ್ದೇಶಿಸಿದ ಶಾಸನಗಳಲ್ಲಿ, ವಚನಗಳಲ್ಲಿ ಮತ್ತು ಕಾವ್ಯಗಳಲ್ಲಿ ದಾಸಿಮಯ್ಯನವರ ಕುರಿತು ದಾಸ, ದಾಸಯ್ಯ, ದಾಸಿಮಯ್ಯ, ದಾಸಿದೇವ, ಜೇಡರ ದಾಸಿಮಯ್ಯ, ದೇವರ ದಾಸಿಮಯ್ಯ ಎಂದು ಸಂಬೋಧಿಸಲಾಗಿದೆ. ಇದನ್ನು ಗಮನಿಸಿದ ಡಾ. ಆರ್.ಸಿ ಹಿರೇಮಠರವರು "ಒಬ್ಬ ದಾಸಿಮಾರ್ಯರಿಗೆ ಸಂಬಂಧಪಟ್ಟ ಬೇರೆ ಬೇರೆ ಪವಾಡಗಳನ್ನು ಈ ಕವಿಗಳು ಉಲ್ಲೇಖಿಸಿರುವರು. ಈ ಉಲ್ಲೇಖಗಳು ದಾಸಿಮಾರ್ಯರು ಅನೇಕ ಪವಾಡಗಳನ್ನು ಮೆರೆದಿದ್ದರೆಂಬುದನ್ನು ದೃಢಪಡಿಸುತ್ತಿವೆಯಲ್ಲದೆ ಬೇರೆ ಬೇರೆ ದಾಸಿಮಾರ್ಯರನ್ನಲ್ಲ ಎಂದು ದೃಢಪಡಿಸಿದ್ದಾರೆ.[47]

ಈ ಮೇಲಿನ ಕಾವ್ಯಗಳಲ್ಲಿ ಘಟಸರ್ಪ ಪವಾಡದ ಸಂದರ್ಭದಲ್ಲಿ ದೇವರ ದಾಸಿಮಯ್ಯರೆಂದೂ, ತವನಿಧಿಯ ಪವಾಡದ ಸಂದರ್ಭದಲ್ಲಿ ಜೇಡರ ದಾಸಿಮಯ್ಯರೆಂದೂ ಉಲ್ಲೇಖಗೊಂಡಿರುವುದು ಭಿನ್ನರೆಂಬುವುದಕ್ಕೆ ಕಾರಣವಾಗಿಸಿದ್ದಾರೆ. ಘಟಸರ್ಪದ ಪವಾಡ ಕಥೆಯ ಸಂದರ್ಭದಲ್ಲಿ ದಾಸಿಮಯ್ಯನವರು ದೇವರ ಅಸ್ತಿತ್ವವನ್ನು ಸಮರ್ಥಿಸಿದ್ದು ಕಂಡುಬಂದರೆ, ತವನಿಧಿ ಪವಾಡ ಕಥೆಯ ಸಂದರ್ಭದಲ್ಲಿ ಅವರ ಕುಲ ಕಾಯಕವಾದ ನೇಯ್ಗೆ ಕಾಯಕವು ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆದಂತೆ ಕಾಣಬಹುದು. ಘಟಸರ್ಪದ ಪವಾಡದ ಮೂಲಕ ದೇವರ ಅಸ್ತಿತ್ವವನ್ನು ಸ್ಥಾಪಿಸಿದ್ದಕ್ಕಾಗಿಯೇ ಅಥವಾ ವಸ್ತ್ರದಾನ ಮಾಡಿ ದೇವರ ಪ್ರೀತಿಗೆ ಪಾತ್ರನಾಗಿರುವುದರಿಂದ ದೇವರ ದಾಸಿಮಯ್ಯನೆಂದು, ದೇವರಿಂದ 'ತವನಿಧಿ' ಪಡೆದುದಕ್ಕಾಗಿ ತವನಿಧಿಯ ದಾಸಿಮಯ್ಯರೆಂದು, ಇವರ ಜನ್ಮಸ್ಥಳ ಮುದನೂರಾದುದರಿಂದ ಮುದನೂರ ದಾಸಿಮಯ್ಯರೆಂದು, ನೇಯ್ಗೆ ವೃತ್ತಿಯ ಮಾಡುವವರನ್ನು ನೇಕಾರ, ದೇವಾಂಗ, ಹಟಗಾರ, ಜೇಡರು ಮೊದಲಾಗಿ ಕರೆಯುವುದರಿಂದ ಇವರಿಗೆ ಜೇಡರ ದಾಸಿಮಯ್ಯರೆಂದು, ದೇವಾಂಗ ದಾಸಿಮಯ್ಯರೆಂದು ಕುಲವಾಚಕ ಪದದೊಂದಿಗೆ ಕರೆಯುವುದನ್ನು ಕಾಣುಬಹುದು. ಹೀಗೆ ದಾಸಿಮಯ್ಯರನ್ನು ಹಲವಾರು ರೀತಿಗಳಲ್ಲಿ ಸಂಬೋಧಿಸಿರುವುದರಿಂದ ಈ ಎಲ್ಲ ಹೆಸರುಗಳು ದೇವರ ದಾಸಿಮಯ್ಯನವರಿಗೆ ಸಂದಿರುವವಾಗಿವೆ. ಆದುದ್ದರಿಂದ ದೇವರ ದಾಸಿಮಯ್ಯ ಮತ್ತು ಜೇಡರ ದಾಸಿಮಯ್ಯನವರಿಬ್ಬರು ಅಭಿನ್ನರೆಂದು ತಿರ್ಮಾನಿಸಬಹುದು.

3.15 ಆದ್ಯವಚನಕಾರ

ವಚನ ಸಾಹಿತ್ಯವು ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಇದು ಸಮಾಜದ ಸುಧಾರಿತ ಮತವೊಂದರ ಪ್ರಸಾರ ಮಾಧ್ಯಮವಾಗಿ, ದೇವರ ದಾಸಿಮಯ್ಯನವರಿಂದ ಮೊದಲ್ಗೊಂಡು ಇಂದಿನವರೆಗೆ ತುಂಬು ನದಿಯಂತೆ ಹರಿಯುತ್ತ ಬಂದಿದೆ. ಇದು ಬಸವಣ್ಣನವರ ಕಾಲಕ್ಕೆ ಸಮೃದ್ಧವಾಗಿ ಬೆಳೆದು ನಿಂತಿತ್ತು. ಇದರ ಪ್ರಾಚೀನತೆಯು ವಿವಾದಾಸ್ಪದ ವಿಷಯವಾಗಿದೆ. ಏಕೆಂದರೆ ವಚನಕಾರರು ಹಿಂದಿನ ವಚನಗಳ ಬಗ್ಗೆ ಸೂಚನೆ ಇತ್ತಿರುವುದು ಕಂಡು ಬರುತ್ತದೆ. ಇದನ್ನು ಆದ್ಯವಚನ ಕಾರರಲ್ಲಿಯೇ ಕಾಣಬಹುದು. ನಂತರ ಬಸವಾದಿಶರಣರು ಆದ್ಯರನ್ನು ಹಾಗೂ ಅವರ ವಚನಗಳನ್ನು ಕುರಿತು ಪ್ರಶಂಸಿಸಿದ್ದಾರೆ. ಆದ್ದರಿಂದ ವಚನವಾಙ್ಮಯವು ಯಾರಿಂದ ಯಾವಾಗ ಪ್ರಾರಂಭವಾಯಿತ್ತೆನ್ನುವುದು ಸಮಸ್ಯಾತ್ಮಕ ಪ್ರಶ್ನೆಯಾಗಿಯೇ ಉಳಿದಿದೆ. ಆದರೆ ಅನೇಕ ವಿದ್ವಾಂಸರು ದಾಸಿಮಯ್ಯನವರೆ ವಚನಸಾಹಿತ್ಯದ ಆದ್ಯಪ್ರವರ್ತಕ ಎಂದು ಹೆಸರಿಸಿದ್ದಾರೆ.

ದಾಸಿಮಯ್ಯನವರು ಹೇಳಿದ 'ಸೂಳ್ನುಡಿ' 'ನುಡಿಗಡಣ' ಎಂಬ ಮಾತುಗಳು ಬಸವಣ್ಣನವರು ತಮ್ಮ ವಚನಗಳಲ್ಲಿ ಹೇಳಿದ "ಆದ್ಯರ ವಚನ" ಎಂಬ ಪದಗಳು ಇವರಿಗಿಂತ ಹಿಂದಿನ ಶಿವಶರಣರ 'ವಚನ'ಗಳನ್ನೇ ಸೂಚಿಸುತ್ತಿವೆ ಎಂದು ಕೆಲವರು ನಂಬುತ್ತಾರೆ. ಆದರೆ 'ಸೂಳ್ನುಡಿ' 'ನುಡಿಗಡಣ' 'ಆದ್ಯರ ವಚನ' ಎಂಬ ಮಾತುಗಳು ತಮಗಿಂತ ಹಿಂದಿನ ಶಿವಭಕ್ತರ ಮಾತುಗಳು ಉಪದೇಶ ರೂಪದಲ್ಲಿರಬಹುದು ಅಥವಾ ಹಾಡುಗಳು ರೂಪದಲ್ಲಿರಬಹುದು, ಎಂದು ಸೂಚಿಸುವ ಸಾಧ್ಯತೆಗಳು ಹೆಚ್ಚಾಗಿವೆ ಯೆನ್ನಿಸುತ್ತದೆಯೇ ವಿನಃ ವಚನಗಳನ್ನು ಸೂಚಿಸುವಂತೆ ಕಾಣದು. ಬಸವಣ್ಣನವರು ಹೇಳುವ "ಆದ್ಯರ ವಚನ" ಎಂಬಲ್ಲಿ ವಚನ ಎಂಬ ಮಾತು (ಪದ) ನಾವೀಗ ಗುರುತಿಸುವ ವಚನಗಳನ್ನು ಸೂಚಿಸುತ್ತದೆಯೆಂಬುದನ್ನು ನಿಖರವಾಗಿ ಹೇಳಲು ಬರುವಂತಿಲ್ಲ. ಆದ್ಯರು ಎಂಬ ಮಾತನ್ನು ಅವರ ಹಿಂದಿನ ಹಿರಿಯರು, ಪುರಾತನರು ಎಂಬರ್ಥದಲ್ಲಿ ಬಳಸಿರಬಹುದು. ಜೊತೆಗೆ ತಮಗೆ ಪೂಜ್ಯರಾದ ಸಮಕಾಲೀನ ಶಿವಶರಣರನ್ನು ಸೂಚಿಸುವ ಸಂಭವವಿಲ್ಲದಿಲ್ಲ. ಈ ಮಾತುಗಳನ್ನು ಆಧಾರವಾಗಿರಿಸಿ ಕೊಂಡು ದೇವರ ದಾಸಿಮಯ್ಯನವರಿಗಿಂತ ಹಿಂದೆಯೇ 'ವಚನ' ಸಾಹಿತ್ಯವು ಉದಿಸಿತೆಂದು ಹೇಳಲು ಸಾಧ್ಯವಾಗುವುದಿಲ್ಲ. ದಾಸಿಮಯ್ಯನವರಿಗಿಂತಲೂ ಪೂರ್ವದಲ್ಲಿ 'ವಚನಸಾಹಿತ್ಯ'ವಿದ್ದರೆ ಉಪಲಬ್ಧವಾಗಿರಬೇಕಿತ್ತು. ಆದರೆ ಅದರ ಯಾವುದೇ ಕುರುಹುಗಳು ದೊರೆತಿಲ್ಲ. ಆದ್ದರಿಂದ ಅನೇಕ ಸಂಶೋಧಕರ ಹಾಗೂ ಸಂಶೋಧನೆಯ ಅಭಿಪ್ರಾಯದಂತೆ ದೇವರ ದಾಸಿಮಯ್ಯನವರೇ ಆದ್ಯವಚನಕಾರರೆಂದೇ ಹೇಳಬಹುದು.

3.16 ದೇವರ ದಾಸಿಮಯ್ಯನವರ ಸಾಹಿತ್ಯ

ಅರಿವಿನ ಗಾಳಿ ಬೀಸಲು ಕಾರಣಕರ್ತರಾದ ಇವರು ಸಂಸ್ಕೃತ ಹಾಗೂ ಕನ್ನಡ

ಎರಡೂ ಭಾಷೆಗಳಲ್ಲಿ ವಿದ್ವಾಂಸರಾಗಿದ್ದರು "ಕ್ರಿ.ಶ. 1085ರ ಹಾವಿನಾಳ ಶಾಸನದಲ್ಲಿ 'ಶ್ರೀ ಮಲೆಯ ಚೆನ್ನಮಲ್ಲಿಕಾರ್ಜುನ ದೇವರ ದಾಸಿಯುಭಯಲಿಪಿ ಲಿಖಿತ"[48] ಎಂಬ ಉಲ್ಲೇಖವಿದೆ. ಈ ಶಾಸನದಲ್ಲಿ ದಾಸಿಮಯ್ಯನವರ ಹಿಂದೆ ಶ್ರೀ ಮಲೆಯ ಚನ್ನಮಲ್ಲಿಕಾರ್ಜುನ ಎಂಬ ವಿಶೇಷವಿದ್ದುದ್ದು, ಅವರು ಆ ಕಾಲದಲ್ಲಿ ಶ್ರೀಶೈಲಕ್ಕೆ ಹೋಗಿ ವಿದ್ಯೆ ಕಲಿತು ಪಂಡಿತರಾಗಿರುವುದನ್ನು ಸೂಚಿಸಿರುವಂತಿದೆ. ಶಾಸನದಲ್ಲಿ ದೇವರದಾಸಿ ಯುಭಯಲಿಪಿ ಲಿಖಿತ ಎಂದಿರುವುದುರಿಂದ ಇವರು ಸಂಸ್ಕೃತ ಮತ್ತು ಕನ್ನಡ ಉಭಯ ಭಾಷೆಯಲ್ಲಿ ಪಾಂಡಿತ್ಯ ಹೊಂದಿರುವುದನ್ನು ತಿಳಿಸುತ್ತದೆ. "ವೇದೋಕ್ತ ಮೂಲಸ್ತಂಭ" ದಲ್ಲಿ ಉಕ್ತವಾದ ದಾಸಿಮಯ್ಯನವರ 14 ಗ್ರಂಥಗಳು ಅವರ ಸಂಸ್ಕೃತ ಭಾಷಾ ಪಾಂಡಿತ್ಯವನ್ನು ವ್ಯಕ್ತಪಡಿಸುತ್ತವೆ. ಇವರ 14 ಕೃತಿಗಳು ಈ ಕೆಳಗಿನಂತಿದ್ದು ಅವುಗಳು ಉಪಲಭ್ಯವಾಗಿಲ್ಲ, ಬದಲಿಗೆ ಕೃತಿಗಳ ಪಟ್ಟಿ ಶ್ಲೋಕ ರೂಪದಲ್ಲಿ ಹೀಗಿವೆ–

ಅಂಬಾಸ್ತುತಿಂ ಗುರುಸ್ತೋತ್ರಂ ತಥಾ ಶೃಂಗಾರ ನಿರ್ಣಯಂ।
ತಂತುಸೂತ್ರಂ ತಥಾ ಶ್ರವಣಾಂಕುಶಂ ಕಾಲ ವೇದನಾಂ॥
ಏಕವಿಂಶತಿ ಸದ್ದೀಕ್ಷಾ ವಿಧಿರ್ಲಕ್ಷಣ ನಿರ್ಣಯಃ।
ಪಂಡಿತಾರಾಧ್ಯ ಚರಿತಂ ಶೈವ ಸಿದ್ಧಾಂತಮೇವಚ॥
ತಥಾ ವಿಭು ಶಿಖಾರತ್ನಂ ಮೂಲಸ್ತಂಭನ ಭಾಷ್ಯಕಂ।
ತಥಾ ವೀರಾಗಮ ವ್ಯಾಖ್ಯಾಂ ಟೀಕಾಂ ಶೈವಾಗಮಸ್ಯ ಚ॥
ಏತಚ್ಚತುರ್ದಶ ಗ್ರಂಥಾನ್ ತತ್ತ್ವಜ್ಞಾನ ಪ್ರಬೋಧಕಾನ್।
ದೇವದಾಸಾವತಾರೇತು ದೇವಾಂಗ: ಕೃತವಾನಭೂತ್॥[49]

ಇವರ ಈ ಎಲ್ಲ ಸಾಹಿತ್ಯ ಕೃತಿಗಳು ದೊರೆಯದೆ ಇದ್ದದ್ದು ನಮ್ಮ ದುರ್ಭಾಗ್ಯವಾಗಿದೆ. ಆದರೆ ವಚನಸಾಹಿತ್ಯ ಮಾತ್ರ ದೊರೆತದ್ದು ಕನ್ನಡಸಾಹಿತ್ಯ ಚರಿತ್ರೆಗೆ ಕೊಡುಗೆ ಹಾಗೂ ನಮ್ಮ ಪುಣ್ಯವೇ ಸರಿ. ಇವರ ವಚನಗಳ ಸಂಖ್ಯೆ 188 ಇದ್ದರೂ ಇವು ಕನ್ನಡ ಸಾಹಿತ್ಯಲೋಕದಲ್ಲಿ ಧ್ರುವತಾರೆಯಂತೆ ರಾರಾಜಿಸುತ್ತಿವೆ. ತಮ್ಮ ವಚನಗಳಲ್ಲಿ ಉಲ್ಲೇಖಿತವಾದ ಅಂಶಗಳನ್ನು ನಿಜ ಜೀವನದಲ್ಲಿ ಚಾಚೂ ತಪ್ಪದೆ ಪಾಲಿಸಿದ ಶರಣರಿವರು. ಅಧ್ಯಾತ್ಮಿಕ ಸೆಳೆತ ಎಷ್ಟಿತ್ತೊ ಅಷ್ಟೆ ಪ್ರಮಾಣದಲ್ಲಿ ತನ್ನ ಸುತ್ತ ಮುತ್ತಲಿನ ಸಾಮಾಜಿಕ ಅನಿಷ್ಟಗಳು ನಿವಾರಣೆ ಆಗಲೇಬೇಕೆಂಬ ತುಡಿತ ಇವರಲ್ಲಿ ಮನೆಮಾಡಿ ಕೊಂಡಿತ್ತು. ಈ ಕಾರಣದಿಂದಲೇ ಇವರು ಜನಮನದ ಆರಾಧ್ಯ ದೈವರಾಗಿ ಪ್ರತಿಷ್ಠಾಪಿತರಾಗಿದ್ದಾರೆ.

3.17 ದೇವರ ದಾಸಿಮಯ್ಯನವರ ವಚನಗಳ ಪ್ರಕಟಣೆಯ ಇತಿಹಾಸ

1. 1928ರಲ್ಲಿ ಡಾ. ಫ. ಗು ಹಳಕಟ್ಟಿಯವರು ಶಿವಾನುಭವ ಗ್ರಂಥಮಾಲೆಯ 15ನೆಯ ಪುಷ್ಪದಲ್ಲಿ 'ದೇವರ ದಾಸಿಮಯ್ಯನ ವಚನಗಳು' ಎಂಬ ಶೀರ್ಷಿಕೆಯಲ್ಲಿ 147 ವಚನಗಳ ಸಂಪಾದನೆಯನ್ನು ಮಾಡಿದ್ದಾರೆ.

ಕಾಲಾನಂತರ ವಚನಗಳಲ್ಲಿ ಅನೇಕ ಪಾಠಾಂತರ ದೋಷಗಳನ್ನು ಹೊಂದಿರುವುದರಿಂದ ವ್ಯತ್ಯಾಸವಾಗುತ್ತ ಬಂದವು. ಈ ವಚನಗಳೇ ಡಾ. ಜಚನಿಯವರ 'ದೇವರ ದಾಸಿಮಯ್ಯನವರ ಪ್ರಶಸ್ತಿ' ಎಂಬ ಗ್ರಂಥದಲ್ಲಿ ಪ್ರಕಟಗೊಂಡಿವೆ.

2. 1953ರಲ್ಲಿ ಡಾ. ಜಚನಿಯವರು 152 ವಚನಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

3. 1963ರಲ್ಲಿ ಡಾ. ಬಿ. ಎಸ್. ಸಣ್ಣಯ್ಯನವರು 'ಪ್ರಬುದ್ಧ ಕರ್ನಾಟಕ' ಪತ್ರಿಕೆಯ 4ನೆಯ ಸಂಚಿಕೆಯಲ್ಲಿ ಪ್ರಕಟಿಸಿದ್ದಾರೆ.

4. 1970ರಲ್ಲಿ ಡಾ. ಎಲ್. ಬಸವರಾಜುರವರು 'ದೇವರ ದಾಸಿಮಯ್ಯನ ವಚನಗಳು' ಎಂಬ ಶೀರ್ಷಿಕೆಯಲ್ಲಿ 160 ವಚನಗಳನ್ನು ಸಂಪಾದಿಸಿದ್ದಾರೆ. 1995ರಲ್ಲಿ ಪರಿಷ್ಕೃತ ಐದನೆಯ ಮುದ್ರಣದಲ್ಲಿ 150 ವಚನಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.

5. 1974ರಲ್ಲಿ ಹೆಚ್. ದೇವಿರಪ್ಪ ಮತ್ತು ಆರ್. ರಾಚಪ್ಪನವರು 'ಜೇಡರ ದಾಸಿಮಯ್ಯನ ವಚನಗಳು' ಎಂಬ ಶೀರ್ಷಿಕೆಯಲ್ಲಿ 133 ವಚನಗಳನ್ನು ಸಂಪಾದಿಸಿ 18 ವಚನಗಳು ಪ್ರಕ್ಷಿಪ್ತ ಎಂದು ಹೇಳಿ ಪರಿಶಿಷ್ಟದಲ್ಲಿ ಪ್ರಕಟಿಸಿದ್ದಾರೆ.

6. 1979ರಲ್ಲಿ ಬಾಲಚಂದ್ರ ಜಯಶೆಟ್ಟಿಯವರು ದೇವರ ದಾಸಿಮಯ್ಯನವರ 151 ವಚನಗಳು ಹಿಂದಿಯಲ್ಲಿ ಅನುವಾದಿಸಿ ಪ್ರಕಟಿಸಿದ್ದಾರೆ.

7. 1987ರಲ್ಲಿ ಹುಬ್ಬಳ್ಳಿ ಮೂರುಸಾವಿರ ಮಠದಿಂದ ಪ್ರಕಾಶಿತ ಗ್ರಂಥದಲ್ಲಿ ಡಾ. ಆರ್. ಸಿ. ಹಿರೇಮಠರವರು 'ದೇವರ ದಾಸಿಮಯ್ಯನ ವಚನಗಳು' ಎಂಬ ಕೃತಿಯಲ್ಲಿ 163 ವಚನಗಳು ಪ್ರಕಟಗೊಂಡಿವೆ.

8. 1989ರಲ್ಲಿ ಪಿ. ಎಂ ಗಿರಿರಾಜುರವರು 'ಜೇಡರ ದಾಸಿಮಯ್ಯನವರ ಪಟಸ್ಥಲ ವಚನಾಗಮ' ಎಂಬ ಶೀರ್ಷಿಕೆ ಅಡಿಯಲ್ಲಿ 188 ವಚನಗಳನ್ನು ಟೀಕಾ ಸಹಿತವಾಗಿ ಮುದ್ರಿಸಿದ್ದಾರೆ. ಜೊತೆಗೆ ಒಂದು ಸ್ವರ ವಚನವನ್ನು ಕಾಣುತ್ತೇವೆ.

9. 1993ರಲ್ಲಿ ಡಾ. ಎಸ್. ವಿದ್ಯಾಶಂಕರರು 'ಸಮಗ್ರ ವಚನ ಸಂಪುಟ' ಯೋಜನೆಯ ಅಡಿಯ 7ನೆಯ ಸಂಪುಟದಲ್ಲಿ 176 ವಚನಗಳನ್ನು ಸಂಪಾದಿಸಿದ್ದಾರೆ. ಪುನರ್‌ಮುದ್ರಣ 2001ರಲ್ಲಿ ಆಗಿದೆ.

10. 1996ರಲ್ಲಿ ಚಂದ್ರಶೇಖರಯ್ಯನವರು ದೇವರ ದಾಸಿಮಯ್ಯನವರ 156 ವಚನಗಳು ಆಂಗ್ಲ ಭಾಷೆಗೆ ಅನುವಾದಿಸಿ ಪ್ರಕಟಿಸಿದ್ದಾರೆ.

11. 1998ರಲ್ಲಿ ರಮೇಶ ಮಾಳಾರವರು 'ದೇವರ ದಾಸಿಮಯ್ಯನವರ ವಚನ ದರ್ಪಣ' ಎಂಬ ಕೃತಿಯಲ್ಲಿ 150 ವಚನಗಳಿಗೆ ಶ್ರೀ ವಿ. ನಾರಾಯಣರ ಅರ್ಥ, ಬಾವಾರ್ಥ ಮತ್ತು ಗೂಡಾರ್ಥಗಳೊಂದಿಗೆ ಪ್ರಕಟಿಸಿದ್ದಾರೆ.

12. 2004ರಲ್ಲಿ ಬಾಗೂರು ಆರ್. ನಾಗರಾಜಪ್ಪನವರು 'ದೇವರ ದಾಸಿಮಯ್ಯನವರು ಒಂದು ಅಧ್ಯಯನ' ಎಂಬ ಪುಸ್ತಕದಲ್ಲಿ 174 ವಚನಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.
13. 2005ರಲ್ಲಿ ಪ್ರೊ. ಡಿ.ಟಿ. ರಂಗಸ್ವಾಮಿಯವರು 'ದೇವರ ದಾಸಿಮಯ್ಯನವರ ವಚನಗಳು' ಎಂಬ ಪುಸ್ತಕದಲ್ಲಿ 174 ವಚನಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.
14. 2005ರಲ್ಲಿ ದೇವಾಂಗ ಸೇವಾ ಸಮಾಜ ಕರ್ನಾಟಕ (ರಿ) ಬೆಂಗಳೂರಿನ ಸಂಘವು 'ದೇವರ ದಾಸಿಮಯ್ಯನವರ ವಚನಗಳು ಮತ್ತು ಲೇಖನಗಳು' ಎಂಬ ಪುಸ್ತಕದಲ್ಲಿ 176 ವಚನಗಳನ್ನು ಸಂಪಾದಿಸಿ ಪ್ರಕಟಿಸಿದೆ.
15. 2006ರಲ್ಲಿ ಮಾತೆ ಮಹಾದೇವಿಯವರು 'ಜೇಡರ ದಾಸಿಮಯ್ಯನ ವಚನಗಳು' ಎಂಬ ಕೃತಿಯಲ್ಲಿ 177 ವಚನಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ.
16. 2007ರಲ್ಲಿ ಶ್ರೀ ಮಡಿವಾಳ ಸ್ವಾಮಿಗಳು 'ಜೇಡರ ದಾಸಿಮಯ್ಯನವರ ವಚನ ಪದಪ್ರಯೋಗ ಕೋಶ' ದಲ್ಲಿ 176 ವಚನಗಳನ್ನು ಉಲ್ಲೇಖಿಸಿದ್ದಾರೆ.
17. 2010ರಲ್ಲಿ ಶ್ರೀಶೈಲ. ಪ. ಕಳಸದ ಅವರು ದೇವರ ದಾಸಿಮಯ್ಯನವರ 169 ವಚನಗಳನ್ನು ಹಿಂದಿಯಲ್ಲಿ ಅನುವಾದಿಸಿ, ಸರಳಾರ್ಥ ಮತ್ತು ಭಾವಾರ್ಥ ಸಹಿತವಾಗಿ ಬರೆದು ಸಂಪಾದಿಸಿದ್ದಾರೆ.

2.18 ಅಂಕಿತನಾಮ

ಕನ್ನಡಸಾಹಿತ್ಯವನ್ನು ಅಧ್ಯಯನ ಮಾಡಿದಾಗ, ಅಂಕಿತನಾಮವನ್ನು ಸಾಹಿತ್ಯದಲ್ಲಿ ಪ್ರಪ್ರಥಮವಾಗಿ ಶರಣರೆ ಪ್ರಾರಂಭಿಸಿರುವುದು ಗಮನಾರ್ಹ ಸಂಗತಿಯಾಗಿದೆ. ಶರಣರು ತಾವು ಆರಾಧಿಸುತ್ತಿರುವ ಭಗವಂತನಿಗೆ ತಮ್ಮದೆಲ್ಲವನ್ನು ಆತನದು ಎನ್ನುವ ಭಾವನೆಯಿಂದ ಅಂಕಿತನಾಮವನ್ನು ರೂಢಿಗೊಳಿಸಿಕೊಳ್ಳುತ್ತಾರೆ. ಇದರಿಂದ ತನ್ನದೆಲ್ಲವನ್ನು ದೇವರಿಗೆ ಅರ್ಪಿಸುವ ವಿಶಾಲಮತಿ ಶರಣರಲ್ಲಿ ಕಾಣುತ್ತೇವೆ. ಉದಾಹರಣೆಗೆ:– ದೇವರ ದಾಸಿಮಯ್ಯನವರು– ಕಣ್ಣು ಮೀಸಲು ಶಿವನ.....। ಕಾಯ ನಿಮ್ಮ ದಾನ, ಜೀವ ನಿಮ್ಮ ದಾನ.....। ಎಂದು ಮೊದಲಾಗಿ ಹೇಳಿದರೆ, ಬಸವಣ್ಣನವರು– ಎನ್ನ ವಾಮಕ್ಷೇಮ ನಿಮ್ಮದಯ್ಯ....। ವಚನದಲ್ಲಿ ನಿಮ್ಮ ನಾಮಾಮೃತವ ತುಂಬಿ....। ಎಂಬ ಮೊದಲಾದ ವಚನಗಳಲ್ಲಿ ಸಮರ್ಪಣಾ ಭಾವನೆಯನ್ನು ಕಾಣುತ್ತೇವೆ. ಕಾಯ, ಜೀವ, ಇಳೆ, ಬೆಳೆ, ಎತ್ತು, ಬಿತ್ತು ಮೊದಲಾದವುಗಳೆಲ್ಲ ಈಶ್ವರನ ಕೊಡುಗೆಗಳಾಗಿವೆ. ತಾನು ಏನೇ ಮಾಡಲಿ ಅದು ದೇವರಿಗೆ ಸಲ್ಲಲಿ ಎಂಬ ಮನೋಭಾವ ಶರಣರಲ್ಲಿತ್ತು ಎಂಬುದಕ್ಕೆ ಅವರ ವಚನಗಳೇ ಸಾಕ್ಷಿಯಾಗಿವೆ.

ಅತೀ ಪ್ರಾಚೀನವಾದ ಸಂಸ್ಕೃತ ಸಾಹಿತ್ಯದಲ್ಲಿ ಈ ಅಂಕಿತನಾಮವು ಕಂಡು ಬರುವುದಿಲ್ಲ. ಆದರೆ ಸ್ತೋತ್ರಕಾವ್ಯಗಳಲ್ಲಿ ಅಂಕಿತನಾಮವು ಕಂಡುಬರುತ್ತದೆ. ಆದರೆ ಅಲ್ಲಿ ಶರಣರಂತೆ ಒಂದೇ ಅಂಕಿತವಿರದೆ ಅದು ಯಾವ ದೇವತೆಯ ಸ್ತೋತ್ರ(ಸ್ತುತಿ) ವಾಗಿರುತ್ತದೆಯೋ, ಆ ದೇವತೆಯ ಅಂಕಿತದೊಂದಿಗೆ ಪೂರ್ಣವಾಗಿರುವುದನ್ನು ಕಾಣುತ್ತೇವೆ. ಒಬ್ಬನೆ ಕರ್ತೃವು ಅನೇಕ ಸ್ತೋತ್ರಗಳನ್ನು ರಚಿಸಿ ಪ್ರತಿಯೊಂದಕ್ಕೂ ಬೇರೆ ಬೇರೆ ದೇವತೆಯ ಅಂಕಿತನಾಮವಿರುವುದು ನೊಡಬಹುದು. ಆದರೆ ವಚನಸಾಹಿತ್ಯದಲ್ಲಿ ಮಾತ್ರ ಒಬ್ಬನೆ ಅನೇಕ ವಚನಗಳನ್ನು ರಚಿಸಿದರೂ ಒಬ್ಬ ದೇವನ ಅಂಕಿತವಿರುವುದು ಗಮನಾರ್ಹ ಸಂಗತಿಯಾಗಿದೆ.

ಸಂಸ್ಕೃತ ಸಾಹಿತ್ಯದ ಸ್ತೋತ್ರಕಾವ್ಯಕ್ಕೆ ಉದಾಹರಣೆಗಾಗಿ, ಶಂಕರಾಚಾರ್ಯರ 'ಕರಾವಲಂಬನ ಸ್ತೋತ್ರ'ದ ಪ್ರತಿ ಪದ್ಯದ ಕೊನೆಯಲ್ಲಿ "ಲಕ್ಷ್ಮೀನೃಸಿಂಹ ಮಮದೇಹಿ ಕರಾವಲಂಬಂ", 'ಕಾಲಭೈರವಾಷ್ಟಕ'ದ ಕೊನೆಗೆ 'ಕಾಶಿಕಾಪುರಾಧಿನಾಥ ಕಾಲಭೈರವಂಭಜೆ" ಈ ರೀತಿಯಾಗಿ ಕೊನೆಗೆ ನಾಮಾಂಕಿತವಿರುವುದನ್ನು ಗಮನಿಸಬಹುದು.

ವಚನಸಾಹಿತ್ಯದ ಅಂಕಿತಕ್ಕೆ ಉದಾಹರಣೆ ದೇವರ ದಾಸಿಮಯ್ಯನವರ–ರಾಮನಾಥ, ಬಸವಣ್ಣನವರ–ಕೂಡಲಸಂಗಮದೇವ, ಅಲ್ಲಮಪ್ರಭು–ಗುಹೇಶ್ವರ ಹೀಗೆ ಮೊದಲಾದವರು ತಮ್ಮ ಆರಾಧ್ಯ ದೇವನ ಹೆಸರನ್ನೇ ಅಂಕಿತವಾಗಿರಿಸಿಕೊಂಡಿದ್ದಾರೆ. ಅಲ್ಲದೆ ಕೆಲವು ವಚನಕಾರರು ತಮ್ಮ ವಿಶೇಷಣ ಸಹಿತವಾದ ಹೆಸರನ್ನೇ ವಚನಾಂಕಿತವಾಗಿಟ್ಟುಕೊಂಡಿರುವುದನ್ನು ಕಾಣುತ್ತೇವೆ. ಉದಾ:– ಅಂಬಿಗರ ಚೌಡಯ್ಯನವರ ಅಂಕಿತ "ಅಂಬಿಗರ ಚೌಡಯ್ಯ" ಎಂದಿದೆ.

3.18 ಬಸವಾದಿ ಶರಣರ ಮೇಲೆ ದಾಸಿಮಯ್ಯನವರ ವಚನಗಳ ಪ್ರಭಾವ

ದೇವರ ದಾಸಿಮಯ್ಯನವರ ವಚನಗಳ ಪ್ರಭಾವ ಮುಂದಿನ ಹಲವಾರು ಶರಣರ (ವಚನಕಾರರ) ಮೇಲೆ ಬೀರಿವೆ ಎಂಬುದಕ್ಕೆ ಈ ಕೆಳಗಿನ ಹಲವಾರು ವಚನಗಳೇ ಸಾಕ್ಷಿ. ಇಲ್ಲಿಯ ಶರಣರ ವಚನಗಳು ನಕಲೂ ಇರಬಹುದು ಅಥವಾ ಅದೇ ಅರ್ಥವನ್ನು ಹೋಲುವ ಬೇರೆ ಪದಗಳಿಂದ ಕೂಡಿದ ವಚನಗಳೂ ಇರಬಹುದು. ಅವುಗಳಲ್ಲಿ ಕೆಲವುಗಳನ್ನು ಇಲ್ಲಿ ನಾವು ಕಾಣಬಹುದು.

1. **ಅಡಗ ತಿಂಬರು ಕಣಿಕದ ಅಡಿಗೆಯಿರಲಿಕೆ**
   ಕುಡಿವರು ಸುರೆಯ! ಹಾಲಿರಲಿಕೆ
   ಹಡದುಂಬ ವೇಶಿಯನೊಲ್ಲದೆ ಹೆರರ ಮಡದಿಗಳುಪುವ
   ಸತ್ತ ನಾಯ ತಿಂಬ ಹಡ್ಡಿಗರನೇನೆಂಬನೈ! ರಾಮನಾಥ.[50]

ಎಂಬ ದಾಸಿಮಯ್ಯನವರ ಈ ಮೇಲಿನ ವಚನವು ಬಸವಣ್ಣನವರಲ್ಲಿ ಹೀಗೆ ಇಳಿದುಬಂದಿದೆ–

ಅಂಗದಿಚ್ಚೆಗೆ ಮದ್ದು ಮಾಂಸವ ತಿಂಬರು
ಕಂಗಳಿಚ್ಚೆಗೆ ಪರವಧುವ ನೆರೆವರು
ಲಿಂಗ ಲಾಂಛನ ಧಾರಿಯಾದಲ್ಲಿ ಫಲವೇನು?
ಲಿಂಗ ಪಥವ ತಪ್ಪಿ ನಡೆವರು
ಜಂಗಮ ಮುಖದಿಂದ ನಿಂದೆ ಬಂದರೆ ಕೊಂಡ
ಮಾರಿಂಗೆ ಹೋಹುದು ತಪ್ಪದು ಕೂಡಲ ಸಂಗಮದೇವ.[51]

ದಾಸಿಮಯ್ಯನವರ ವಚನವು–

2. ಅಡವಿ ಅರಣ್ಯದಲ್ಲಿ ಮಡಿವನಕ ತಪವಿದ್ದು
ಮಡಿವಾಗ ಮೃಡನ ಮರದಡೆ,
ತುಂಬಿದ ಸಕ್ಕರೆಯ ಮಡುವಿನೊಳಗೊಕ್ಕಂತೆ! ರಾಮನಾಥ.[52]

ಎಂಬದು ಸರ್ವಜ್ಞನವರಲ್ಲಿ–

ಅಡವಿಯಲ್ಲಿ ಮೌನದಲಿ ದೃಢತನದೊಳಿದ್ದರೂ
ನುಡಿಯಲ್ಲಿ ಶಿವನ ಮರೆದಡೆ ಗುಡವಿಲ್ಲ
ದಡಿಗೆಯುಂಡಂತೆ ಸರ್ವಜ್ಞ.[53]

ಇದ್ದಕ್ಕಿದ್ದಂತೆ ಮೂಡಿಬಂದಿದೆ. ಹಾಗೆಯೇ ದಾಸಿಮಯ್ಯನವರ ಮತ್ತೊಂದು ವಚನ–

3. ಉಣ್ಣೆ ಕೆಚ್ಚಲ ಹತ್ತಿ ಉಂಬುದೆ ನೊರೆವಾಲ?
ಪುಣ್ಯಕ್ಷೇತ್ರದಲ್ಲಿ ಹುಟ್ಟಿ ಉಣ್ಣದವನು
ಆ ಉಣ್ಣೆಯಿಂದ ಕರಕಷ್ಟ! ರಾಮನಾಥ.[54]

ಎಂಬ ವಚನವು ಸರ್ವಜ್ಞನವರು ಹೀಗೆ ಅಳವಡಿಸಿಕೊಂಡಿದ್ದಾರೆ–

ಉಣ್ಣೆ ಕೆಚ್ಚಲೊಳಿರ್ದುಉಣ್ಣದು ನೊರೆವಾಲ
ಪುಣ್ಯವ ಮಾಡಿ ಉಣಲೊಲ್ಲದವನಿರವು
ಉಣ್ಣೆಗೂ ಕಷ್ಟ ಸರ್ವಜ್ಞ.[55]

ದಾಸಿಮಯ್ಯನವರ ಇನ್ನೊಂದು ವಚನ–

4. ಎತ್ತಪ್ಪೆ ಶರಣಂಗೆ ತೊತ್ತಪ್ಪೆ ಶರಣಂಗೆ
ಭೃತ್ಯನಾಗಿ ಸದ್ಭಕ್ತರ ಮನೆಯ ಬಾಗಿಲ ಕಾಯ್ದಿಪ್ಪ ಸೊಣಗನಪ್ಪೆ
ಕರ್ತಾರ! ನಿನಗೆ ಕರವೆತ್ತಿ ಹೊಡವಡುವ
ಭಕ್ತರ ಮನೆಯ ಹಿತ್ತಿಲ ಬೇಲಿಯಾಗಿಪ್ಪೆನಯ್ಯಾ ರಾಮನಾಥ.[56]

ಈ ವಚನವು ಸರ್ವಜ್ಞನವರಲ್ಲಿ ಹೀಗೆ ಮೂಡಿಬಂದಿದೆ–

ಎತ್ತಾಗಿ ತೊತ್ತಾಗಿ ಹಿತ್ತಲದ ಗಿಡವಾಗಿ
ಮತ್ತೆ ಪಾದದ ಕೆರವಾಗಿ ಗುರುವಿನ
ಹತ್ತಲಿರು ಎಂದ ಸರ್ವಜ್ಞ.[57]

ದಾಸಿಮಯ್ಯನವರ ಈ ಮೇಲಿನ ವಚನದ ಭಾವ ಬಸವಣ್ಣನವರಲ್ಲಿ ಹೀಗೆ ಮೂಡಿಬಂದಿದೆ–

ಚನ್ನ ಚೇರಮನ ಬಂಟ ನಾನಯ್ಯ
ಎನ್ನ ಚಾಗು ಬೊಲ್ಲನ ಕಾವ ಗೋವನೆಂಬರು
ಕೂಡಲಸಂಗಮ ಶರಣರು ಒಡೆಯರಾಗಿ
ತಮ್ಮ ತೊತ್ತಿನ ಮಗನೆಂದು ಒಲಿದಂತೆನುಡಿವರಯ್ಯ.[58]

5. ಎಣ್ಣೆಯಿದ್ದು ಎಳ್ಳು ನೆನೆಯದ ಭೇದವ
ಕಿಚ್ಚಿದ್ದು ಕಲ್ಲು ಸಿಡಿಯದ ಭೇದವ
ಕಾಮವಿದ್ದು ಕನ್ನೆಯನನುಭವಿಸದ ಭೇದವ
ಪರವಿದ್ದು ಪ್ರಾಣನ ಪ್ರಕೃತಿಯ ಹರಿಯದ ಭೇದವ
ನರರೆತ್ತ ಬಲ್ಲರೈ? ರಾಮನಾಥ.[59]

ದೇವರ ಅಸ್ತಿತ್ವವನ್ನು ಜಗತ್ತಿನಲ್ಲಿ ಅವ್ಯಕ್ತವಾಗಿ ಇರುವ ಕೆಲವು ವಸ್ತುಗಳ ಆಧಾರದ ಮೇಲಿಂದ ಹೇಳಲು ಪ್ರಯತ್ನಿಸಿದ ದಾಸಿಮಯ್ಯನವರ ಈ ಮೇಲಿನ ವಚನದ ಸಾರವನ್ನು ಅಕ್ಕಮಹಾದೇವಿಯ ವಚನದಲ್ಲಿ ಹೀಗೆ ಇಳಿದುಬಂದಿದೆ–

ನೆಲದ ಮರೆಯ ನಿಧಾನದಂತೆ
ಫಲದ ಮರೆಯ ರುಚಿಯಂತೆ
ಶಿಲೆಯ ಮರೆಯ ಹೇಮದಂತೆ
ತಿಲದ ಮರೆಯ ತೈಲದಂತೆ
ಮರದ ಮರೆಯ ತೇಜದಂತೆ
ಭಾವದ ಮರೆಯಲ್ಲಿ ಬ್ರಹ್ಮವಾಗಿಪ್ಪ
ಚೆನ್ನಮಲ್ಲಿಕಾರ್ಜುನನ ನಿಲುವನರಿಯಬಾರದು.[60]

ಅರಿವಿನ ಮಾರಿತಂದೆಯ ವಚನದಲ್ಲಿ ದಾಸಿಮಯ್ಯನವರ ವಚನದ ಭಾವಸಾಮ್ಯವನ್ನು ಹೀಗೆ ಕಂಡುಬಂದಿದೆ–

ಕಲ್ಲಿನೊಳಗಣ ಜ್ಯೋತಿ ಉರಿಯೊಳಗಣ ಉಷ್ಣ
ಹಣ್ಣಿನೊಳಗಣ ಸಾರದ ಸವಿಯಂತೆ
ಸವಿಲೇಪವಾದ ಚಿತ್ತದ ವಿಲಾಸದಂತೆ
ನಿಜಲಿಂಗದಲ್ಲಿ ಘನದ ಬೆಳಗು ತೋರುತ್ತಲಿದೆ
ಸದಾಶಿವಮೂರ್ತಿ ಲಿಂಗದಲ್ಲಿ.[61]

6. ನೆರೆ ನಂಬಿ ಕರೆದಡೆ ನರಿ ಕುದುರೆಯಾಗಿ ಹರಿವೆ?
ಜಗವೆಲ್ಲಾ ಅರಿಯಲು ತೊರೆಯೊಳಗೆ ಬಿದ್ದ ಲಿಂಗ
ಕರೆದಡೆ ಬಂದುದು ಕರಸ್ಥಲಕ್ಕೆ
ನಂಬದೆ ಕರೆದವರ ಹಂಬಲನೊಲ್ಲನಮ್ಮ ರಾಮನಾಥ.[62]

ದಾಸಿಮಯ್ಯನವರ ಈ ಮೇಲಿನ ವಚನದ ಸಾಮ್ಯತೆಯನ್ನು ಬಸವಣ್ಣನವರ ವಚನದಲ್ಲಿ ಹೀಗೆ ನೋಡಬಹುದು–

ನಂಬರು ನಚ್ಚರು ಬರಿದೆ ಕರೆವರು
ನಂಬಲರಿಯರೀ ಲೋಕದ ಮನುಜರು
ನಂಬಿಕರೆದಡೆ ಓ ಎನ್ನನೇ ಶಿವನು?
ನಂಬದೇ ನಚ್ಚದೇ ಬರಿದೆ ಕರೆವರ
ಕೊಂಬ ಮೆಟ್ಟಿ ಕೂಗೆಂದ ಕೂಡಲಸಂಗಮದೇವ.[63]

7. ಒಲವಸವಿಲ್ಲ ಭಕ್ತಿ ಲವಲವಿಕೆಯಿಲ್ಲದ ಪೂಜೆ,
ಸಲೆ ನಿಮ್ಮ ನಂಬಿಯೂ ನಂಬದವನ ಬಾಳುವೆ
ಹೊಲೆಯರ ನಾಯ ಹುಲುಸರವಿಯಿಂದ ಕರಕಷ್ಟ ಕಾಣಾ! ರಾಮನಾಥ.[64]

ದಾಸಿಮಯ್ಯನವರ ಇನ್ನೊಂದು ವಚನದ ಭಾವವನ್ನು ಬಸವಣ್ಣನವರಲ್ಲಿ ಹೀಗೆ ಕಾಣಬಹುದು–

ಒಲವಿಲ್ಲದ ಪೂಜೆ ನೆಮವಿಲ್ಲದ ಮಾಟ
ಆ ಪೂಜೆಯ ಆ ಮಾಟವು
ಚಿತ್ರದ ರೂಹು ಕಾಣಿರಣ್ಣಾ ಚಿತ್ರದ ಕಬ್ಬು ಕಾಣಿರಣ್ಣಾ
ಅಪ್ಪಿದರ ಸುಖವಿಲ್ಲ ಮೆಲಿದರೆ ಸವಿಯಿಲ್ಲಿ
ಕೂಡಲಸಂಗಮದೇವ ನಿಜವಿಲ್ಲದವನ ಭಕ್ತಿ.[65]

8. ಗಂಡನುಳ್ಳಮ್ಮನ ಗೌರಿಯೆಂದು ಕಂಡಡೆ
ಭೂಮಂಡಲಕ್ಕೆ ಅರಸಾಗಿ ಹುಟ್ಟುವನಾತನು
ಗಂಡನುಳ್ಳಮ್ಮನ ಕಂಡು ಒಡವೆರದಾತ
ನರಕದಲ್ಲಿ ದಿಂಡುಗೆಡದಿಪ್ಪನೈ, ರಾಮನಾಥ.[66]

ದಾಸಿಮಯ್ಯನವರ ಸ್ತ್ರೀ ಗೌರವಪರ ಈ ಮೇಲಿನ ವಚನವು ಬಸವಣ್ಣನವರಲ್ಲಿ ಹೀಗೆ ಮೂಡಿಬಂದಿದೆ–

ಎಲ್ಲಿ ನೋಡಿದಡಲ್ಲಿ ಮನವೆಳಸಿದೊಡೆ
ಆಣೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ
ಪರವಧುವನು ಮಹಾದೇವಿಯೆಂಬೆ ಕೂಡಲಸಂಗಮದೇವ.[67]

9. ಗಂಡ ಭಕ್ತನಾಗಿ ಹೆಂಡತಿ ಭವಿಯಾದಡೆ
ಉಂಡ ಊಟ ಇಬ್ಬರಿಗೂ ಸರಿಭಾಗ!
ಸತ್ತ ನಾಯ ತಂದು ಅಟ್ಟದ ಮೇಲಿಳುಹಿ
ಒಬ್ಬರೊಪ್ಪಚ್ಚಿಯ ಹಂಚಿಕೊಂಡು ತಿಂಬಂತೆ! ರಾಮನಾಥ.[68]

ದಾಸಿಮಯ್ಯನವರ ಭಕ್ತಿಪರ ಈ ಮೇಲಿನ ವಚನದ ಸಾಮ್ಯತೆಯನ್ನು ಬಸವಣ್ಣನವರ ವಚನದಲ್ಲಿ ಹೀಗೆ ಕಾಣಬಹುದು–

ಗಂಡ ಶಿವಲಿಂಗ ದೇವರ ಭಕ್ತ
ಹೆಂಡತಿ ಮಾರಿ ಮಸಣಿಯ ಭಕ್ತೆ
ಗಂಡ ಕೊಂಬುದು ಪಾದೋದಕ ಪ್ರಸಾದ
ಹೆಂಡತಿ ಕೊಂಬುದು ಸುರೆ–ಮಾಂಸ
ಭಾಂಡ ಭಾಜನ ಶುದ್ಧವಿಲ್ಲದವರ ಭಕ್ತಿ
ಹೆಂಡದ ಮಡಕೆಯ ಹೊರಗೆ ತೊಳೆದಂತೆ ಕೂಡಲಸಂಗಮದೇವ.[69]

10. ಕೀಳು ಡೋಹರ ಕಕ್ಕ, ಕೀಳು ಮಾದರ ಚೆನ್ನ,
ಕೀಳು ಓಹಿಲದೇವ, ಕೀಳು ಉದ್ಭಟಯ್ಯ.
ಕೀಳಿಂಗಲ್ಲದೆ ಹಯನ ಕರೆಯದು ಕಾಣಾ! ರಾಮನಾಥ.[70]

ದಾಸಿಮಯ್ಯನವರ ಕಿಂಕರತ್ವದಿಂದ ಶಂಕರತ್ವಪ್ರಾಪ್ತಿ ಎನ್ನುವ ಈ ಮೇಲಿನ ವಚನದ ಭಾವಸಾಮ್ಯವನ್ನು ಬಸವಣ್ಣನವರ ವಚನದಲ್ಲಿ ಹೀಗೆ ನೋಡಬಹುದು–

ಮೇಲಾಗಲೊಲ್ಲೇನು ಕಿಳಾಗಲಲ್ಲದೆ
ಕೀಳಿಂಗಲ್ಲದೆ ಹಯನ ಕರೆವುದೆ?
ಮೇಲಾಗಿ ನರಕದೊಳೋಲಾಡಲಾರೇನು
ನಿಮ್ಮ ಶರಣರ ಪಾದಕ್ಕೆ ಕೀಳಾಗಿರಿಸು
ಮಹಾದಾನಿ ಕೂಡಲಸಂಗಮದೇವ.[71]

11. ಜ್ವರ ಬಡಿದ ಬಾಯಿಗೆ ನೊರೆವಾಲು ಉರಸುವದೆ?
ನರಕದಲ್ಲಿ ಬೀಳುವ ಮನುಜರಿಗೆ
ಶಿಭಕ್ತಿಯೆಂಬುದು ಕಿರುಗಹಿ ಕಾಣಾ! ರಾಮನಾಥ.[72]

ದಾಸಿಮಯ್ಯನವರ ನಾಸ್ತಿಕರಿಗೆ ಶಿವಭಕ್ತಿ ರುಚಿಸದು ಎಂಬ ಈ ಮೇಲಿನ ವಚನದ ಸಾರವನ್ನು ಸರ್ವಜ್ಞರಲ್ಲಿ ಹೀಗೆಮೂಡಿದೆ–

ಜ್ವರ ಬಂದ ಮನುಜಂಗೆ ನೊರೆವಾಲು ಕಹಿಯಕ್ಕು
ನರಕಲದಲಿ ಬೀಳ್ವ ಅಧಮಂಗೆ ಶಿವಭಕ್ತಿ
ಹಿರಿದು ಕಹಿಯಕ್ಕು ಸರ್ವಜ್ಞ.[73]

12. **ನಾನೊಂದು ಸುರಗಿಯನೇನೆಂದು ಹಿಡಿವೆನು?**
ಏನ ಕಿತ್ತೇನನಿರಿವೆನು?
ಜಗವೆಲ್ಲಾ ನೀನಾಗಿಪ್ಪೆ ಕಾಣಾ! ರಾಮನಾಥ.[74]

ಈಶ್ವರನು ಜಗತ್ವ್ಯಾಪಕ, ಎನ್ನುವ ದಾಸಿಮಯ್ಯನವರ ವಚನದ ಭಾವಸಾಮ್ಯತೆಯನ್ನು ಬಿಂಬಿಸುವ ಸರ್ವಜ್ಞರ ಇನ್ನೊಂದು ವಚನ–

ಆನೊಂದು ಕೈದುವನು ಏನೆಂದು ಹಿಡಿವೆನು
ಏನ ಬಿಟ್ಟೇನನಿರವೇನು ಜಗವೆಲ್ಲ
ತಾನಾದ ಬಳಿಕ ಸರ್ವಜ್ಞ.[75]

13. **ನೀನೀಶನೀಯದೆ ಮಾನಿಸನೀವನೆ?**
ನೀನೀಸುವ ಕಾರಣ ಮಾನಿಸನೀವನು
ಆ ಮಾನಿಸನ ಹೃದಯದೊಳು ಹೊಕ್ಕು
ನೀನೀಸುವ ಕಾರಣದಿಂದ
ನೀನೆ ಶರಣೆಂಬೆನಯ್ಯಾ ರಾಮನಾಥ.[76]

ಭಕ್ತನ ಶ್ರೇಷ್ಠತೆಯನ್ನು ಸಾರುವ ದಾಸಿಮಯ್ಯನವರ ವಚನದ ಸಾರವನ್ನು ಸರ್ವಜ್ಞರ ವಚನದಲ್ಲಿ ಹೀಗೆ ಕಾಣಬಹುದು–

ಮಾನಿಸನಿಲ್ಲದೆ ನೀನೀಶನೆಂತಾದೆ
ನೀನೀಶನೆನಬೇಡ ಲೊಕಕ್ಕೆ
ಮಾನೀಸನೀಶ ಸರ್ವಜ್ಞ.[77]

ಅದೇ ಅರ್ಥವನ್ನು ಬಿಂಬಿಸುವ ಅಲ್ಲಮಪ್ರಭುದೇವರ ವಚನ ಹೀಗಿದೆ–

ನಾ ದೇವನಲ್ಲದೆ ನೀ ದೇವನೇ?
ನೀ ದೇವನಾದರೆ ಎನ್ನನೇಕೆ ಸಲಹೆ?
ಆರೈದು ಬಂದು ಕುಡಿತೆ ಉದಕವನೆರೆವೆ
ಹಸಿದಾಗ ಬಂದು ತುತ್ತು ಓಗರವನಿಕ್ಕುವೆ
ನಾ ದೇವ ಕಾಣಾ ಗುಹೇಶ್ವರ.[78]

14. **ಮರನೊಳಗಣ ಮಂದಾಗ್ನಿಯ ಉರಿಯದಂತಿರಿಸಿದೆ**
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ
ಶರೀರದೊಳಗಾತ್ಮನನಾರು ಕಾಣದಂತಿರಿಸಿದೆ
ನೀ ಬೆರಸುವ ಭೇದಕ್ಕೆ ಬೆರಗಾದೆನಯ್ಯ! ರಾಮನಾಥ.[79]

ಎಂಬ ವಚನದ ಭಾವಾರ್ಥಹೊಂದಿದ ಅಂಬಿಗರ ಚೌಡಯ್ಯ ಮೊದಲಾದ ಶರಣರ ವಚನಗಳು ಹೀಗಿವೆ–

ಅಗ್ನಿ ದಿಟವೆಂದಡೆ ತಾಹುಸಿ ಕಾಷ್ಠವಿಲ್ಲದೆ
ಕಾಷ್ಠದಲ್ಲಿ ಅಡಗಿ ಸುಡದಿಪ್ಪ ಭೇದವನರಿತಡೆ
ಪ್ರಾಣಲಿಂಗಿಯೆಂಬೆನೆಂದನಂಬಿಗರ ಚೌಡಯ್ಯ.[80]

ಆದಯ್ಯನವರ ವಚನ–

ಕಾಷ್ಠದೊಳಗೆ ಅಗ್ನಿ ಇಪ್ಪಂತೆ
ಹಾಲೊಳಗೆ ತುಪ್ಪವಿದ್ದಂತೆ
ಪಿಂಡದಲ್ಲಿ ಘನಲಿಂಗ ಪೂರ್ಣವಾಗಿಪ್ಪನಾಗಿ ಇಹಪರನಾಸ್ತಿ
ಇಹಪರನಾಸ್ತಿಯಾಗಿ ನಿರ್ವಯಲನೈದಿಪ್ಪನಯ್ಯ
ಸೌರಾಷ್ಟ್ರ ಸೋಮೇಶ್ವರಾ ನಿಮ್ಮ ಶರಣ.[81]

ಲಿಂಗತಂದೆಯವರ ವಚನ–

ಮರದೊಳಗಣ ಬೆಂಕಿ ತನ್ನ ತಾನೆ ಉರಿಯಬಲ್ಲುದೆ?
ಶಿಲೆಯೊಳಗಣ ದೀಪ್ತಿ ಆ ಬೆಳಗ ತನ್ನ ತಾನೆ ಬೆಳಗಬಿಲ್ಲುದೆ?
.....ಬೋಗ ಬಂಕೇಶ್ವರ ಲಿಂಗದ ಸಂಗದ ಶರಣರ ಸುಖ.[82]

ಸರ್ವಜ್ಞರರ ವಚನ–

ಹರತನ್ನೊಳಿರ್ದು ಗುರು ತೊರದಿದೆ ತಿಳಿವುದೆ?
ಮರನೊಳಗೆ ಅಗ್ನಿ ಇರುತಿರ್ದು ತನ್ನ ತಾ
ನರಿಯದೇಕೆಂದು ಸರ್ವಜ್ಞ.[83]

15. ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಗಡ್ಡ ಮೀಸೆ ಬಂದಡೆ ಗಂಡೆಂಬರು
ನಡುವೆ ಸುಳಿವ ಆತ್ಮನು
ಹೆಣ್ಣೂ ಅಲ್ಲ ಗಂಡೂ ಅಲ್ಲ ಕಾಣಾ! ರಾಮನಾಥ.[84]

ದಾಸಿಮಯ್ಯನವರ ಸ್ತ್ರೀ ಸಮಾನತೆಯನ್ನು ಪ್ರತಿಪಾದಿಸುವ ವಚನವು ಗೊಗ್ಗವ್ವೆ ಮತ್ತು ಸತ್ಯಕ್ಕ ಹೀಗೆ ಮೂಡಿಬಂದಿದೆ–

ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಮೀಸೆ ಕಾಸೆ ಬಂದಡೆ ಗಂಡೆಂಬರು
ಈ ಉಭಯದ ಜ್ಞಾನ
ಹೆಣ್ಣೊ ಗಂಡೋ ನಾಸ್ತಿನಾಥಾ?[85]

ಸತ್ಯಕ್ಕಳ ವಚನ–

ಮೊಲೆ ಮುಡಿ ಇದ್ದುದೆ ಹೆಣ್ಣೆಂದು ಪ್ರಮಾಣಿಸಲಿಲ್ಲ
ಕಾಸೆ ಮೀಸೆ ಕಠಾರವಿದ್ದದೆ ಗಂಡೆಂದು ಪ್ರಮಾಣಿಸಲಿಲ್ಲ

ಅದು ಜಗದ ಹಾಗೆ ಬಲ್ಲವರ ನೀತಿಯಲ್ಲ
ಏತರ ಹಣ್ಣಾದಡೂ ಮಧುರವೆ ಕಾರಣ
ಅಂತವಿಲ್ಲದ ಕುಸುಮಕ್ಕೆ ವಾಸನೆಯೆ ಕಾರಣ
ಇದರಂದವ ನೀನೇ ಬಲ್ಲೆ ಶಂಭುಜಕ್ಕೇಶ್ವರಾ.[86]

16. ಮೆಳೆಯ ಮೇಲಣ ಕಲ್ಲು ಜಗದೆರೆಯನಾಗಬಲ್ಲುದೆ?
ಮೆಳೆ ಶಿವಭಕ್ತನಾಗಬಲ್ಲುದೆ?
ನಿಮ್ಮ ತನುಮನಧನವನರಿಯದಿದ್ದಡೆ
ಸದುಭಕ್ತರಹರೆ? ರಾಮನಾಥ.[87]

ದಾಸಿಮಯ್ಯನವರು ಹೇಳಿದ ನಿಜಶಿವಭಕ್ತರ ಅರ್ಥವನ್ನು ಅಲ್ಲಮಪ್ರಭುದೇವರಲ್ಲಿ ಹೀಗೆ ಮೂಡಿಬಂದಿದೆ–

ಹೊಟ್ಟೆಯ ಮೇಲೆ ಕಟೋಗರದ ಮೊಟ್ಟೆಯ ಕಟ್ಟಿದರೇನು?
ಹಸಿವು ಹೋದುದೇ?
ಅಂಗದ ಮೇಲೆ ಲಿಂಗಸ್ಥಾಯತವಾದರೇನು?
ಶಿವಭಕ್ತನಾಗ ಬಲ್ಲನೇ?
ಇಟ್ಟ ಕಲ್ಲು ಮೆಳೆಯ ಮೇಲೆ ಸಿಕ್ಕಿದಡೆ ಆ ಕಲ್ಲುಲಿಂಗವೇ
ಆ ಮೆಳೆ ಭಕ್ತವೇ? ಇಟ್ಟಾತ ಗುರುವೆ?
ಇಂತಪ್ಪನವರ ಕಂಡಡೆ ನಾಚುವೆನಯ್ಯ ಗುಹೇಶ್ವರ.[88]

17. ಸತಿಯರ ಸಂಗವನು ಅತಿಶಯ ಗ್ರಾಸವನು
ಪೃಥ್ವಿಗೀಶ್ವರನ ಪೂಜೆಯನು
ಅರಿವುಳ್ಳಡೆ ಹೆರರ ಕೈಯಿಂದ ಮಾಡಿಸುವರೆ! ರಾಮನಾಥ.[89]

ಎಂಬ ದಾಸಿಮಯ್ಯನವರ ಈ ಮೇಲಿನ ವಚನದ ಭಾವಸಾಮ್ಯತೆಯನ್ನು ಬಸವಣ್ಣನವರು ತಮ್ಮ ವಚನದಲ್ಲಿ ಹೀಗೆ ವ್ಯಕ್ತಪಡಿಸಿದ್ದಾರೆ–

ತನ್ನಾಶ್ರಯದ ರತಿಸುಖವನು ತಾನುಂಬ ಊಟವನು
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೇ?
ತನ್ನ ಲಿಂಗಕ್ಕೆ ಮಾಡುವ ನಿತ್ಯ ನೇಮವನು ತಾ ಮಾಡಬೇಕಲ್ಲದೆ
ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ?
ಕೆಮ್ಮನುಪಚಾರಕ್ಕೆ ಮಾಡುವರಲ್ಲದೆ
ನಿಮ್ಮನೆತ್ತ ಬಲ್ಲರು ಕೂಡಲಸಂಗಮದೇವ.[90]

18. ಸತ್ಯದ ನುಡಿ ತೀರ್ಥ, ಭಕ್ತಿಯ ನಡೆ ತೀರ್ಥ,
ಮುಕ್ತಿಯ ಪ್ರಸಂಗ ಉಳ್ಳಡೆ ತೀರ್ಥ,
ಹರಿವ ನದಿ ಎತ್ತಣಾ ತೀರ್ಥ! ರಾಮನಾಥ.[91]

ಒಳ್ಳೆಯ ಮನಸ್ಸು, ಒಳ್ಳೆಯ ವ್ಯಕ್ತಿತ್ವ ನಿರ್ಮಾಣಕ್ಕೆ ಸತ್ಯಮಾರ್ಗದಲ್ಲಿ ನಡೆದು ಸತ್ಯಕ್ಕೆ ಪ್ರಧಾನ್ಯತೆ ಕೊಟ್ಟ ದಾಸಿಮಯ್ಯನವರ ವಚನದ ಭಾವವು ಸರ್ವಜ್ಞನವರಲ್ಲಿ ಹೀಗೆ ಕಾಣಬಹುದು–

ಸತ್ಯರ ನುಡಿ ತೀರ್ಥ ನಿತ್ಯರ ನಡೆ ತೀರ್ಥ
ಉತ್ತಮರ ಸಂಗವದು ತೀರ್ಥ ಹರೀವ
ನೀರೆತ್ತಣದು ತೀರ್ಥ ಸರ್ವಜ್ಞ.[92]

19. ಸತಿಪತಿಗಳೊಂದಾದ ಭಕ್ತಿ
ಹಿತವಾಗಿಪ್ಪುದು ಶಿವಂಗೆ
ಸತಿಪತಿಗಳೊಂದಾಗದವನ ಭಕ್ತಿ
ಅಮೃತದೊಳು ವಿಷ ಬೆರದಂತೆ ಕಾಣಾ! ರಾಮನಾಥ.[93]

ಸತಿಪತಿಗಳಿಬ್ಬರ ಹರಭಕ್ತಿ ಅಮೃತ ಎಂದು ತಿಳಿಸಿದ ದಾಸಿಮಯ್ಯನವರ ವಚನದ ಸಾಮ್ಯತೆಯನ್ನು ಅಂಬಿಗರ ಚೌಡಯ್ಯ ಮೊದಲಾದ ಶರಣರಲ್ಲಿ ಹೀಗೆ ವ್ಯಕ್ತವಾಗಿದೆ–

ಕೇಳಿರಯ್ಯಾ ಮಾನವರೆ
ಗಂಡ ಹೆಂಡಿರ ಮನಸ್ಸು ಒಂದಾಗಿದ್ದರೆ
ದೇವರ ಮುಂದೆ ನಂದಾದಿವಿಗೆಯ ಮುಡಿಸಿದ ಹಾಗೆ
ಗಂಡ ಹೆಂಡಿರ ಮನಸ್ಸು ಬೇರಾದರೆ
ಗಂಜಳದೊಳಗೆ ಹಂದಿಹೊರಳಾಡಿ.....
ನಮ್ಮ ಅಂಬಿಗರ ಚೌಡಯ್ಯ ನಿಜಶರಣ.[94]

ಅಲ್ಲಮಪ್ರಭುದೇವರ ವಚನ–

ಉಭಯ ದೃಷ್ಟಿಯಿಂದ ದೃಷ್ಟವ ಕಾಂಬಂತೆ
ದಂಪತಿ ಏಕಭಾವವಾಗಿ ನಿಂದಲಿ
ಗುಹೇಶ್ವರ ಲಿಂಗಕ್ಕೆ ಅರ್ಪಿತವಾಯಿತ್ತು
ಸಂಗನ ಬಸವಣ್ಣಾ.[95]

ಸತಿ ಭಕ್ತೆಯಾದರೆ ಹೊಲೆಗಂಜಲಾಗದು
ಪತಿ ಭಕ್ತನಾದರೆ ಕುಲಕ್ಕಂಜಲಾಗದು
ಸತಿ–ಪತಿ ಎಂಬ ಅಂಗಸುಖ ಹಿಂಗಿ
ಸತಿಗೆ–ಪತಿಯುಂಟೇ? ಪತಿಗೆ ಸತಿಯುಂಟೇ?
ಪಾಲುಂಡು ಮೇಲುಂಬರೇ ಗುಹೇಶ್ವರಾ.[96]

20. ಸ್ವಸ್ತಿಕಾಸನದಲ್ಲಿದ್ದು ಅತ್ತಿತ್ತ ಚಲಿಸದೆ
ನೆಟ್ಟೆಲುವ ನೆಟ್ಟನೆ ಮಾಡಿ,
ಅಧೋವಾಮುವನೂರ್ಧ್ವಮುಖಕ್ಕೆ ತಂದು,
ಕಂಠ ಸಂಕೋಚದಿಂದ ಊರ್ಧ್ವವಾಯುವ ನಿಲ್ಲೆಂದು ನಿಲಿಸಿ,
ಮನವ ತೊಡರಿಸಿ,
ಉನ್ಮನಿಯ ಸ್ಥಾನದಲ್ಲಿ ಬಂಧನವಂ ಮಾಡಿ,
ಅಂತರ್ಬಾಹ್ಯ ವ್ಯಾಪಾರವಳಿದು ನಿಂದುದೆ ಯೋಗ ರಾಮನಾಥ.[97]

ದಾಸಿಮಯ್ಯನವರು ಯೋಗ ಸಾಧನೆಗೆ ಪ್ರಾಶಸ್ತ್ಯ ನೀಡಿರುವುದು ಅವರ ವಚನದಲ್ಲಿ ವ್ಯಕ್ತವಾಗಿದೆ. ಅದೇ ಅರ್ಥವನ್ನು ಹೋಲುವ ವಚನವು ಅಲ್ಲಮಪ್ರಭುದೇವರ ಮತ್ತು ಚನ್ನಬಸವಣ್ಣನವರ ವಚನಗಳಲ್ಲಿ ಕಾಣಬಹುದು–

ಸ್ವಸ್ಥ ಪದ್ಮಾಸನದಲ್ಲಿ ಕುಳ್ಳಿರ್ದು ಅತ್ತಿತ್ತ ಚಲಿಸೋಸರಿಸದೆ
ನೆಟ್ಟೆಲವು ನೆಟ್ಟನೆ ಮಾಡಿ
ಅಧೋಗಮನ ವಾಯುವನೂರ್ದ್ವ ಮುಖವಂ ಮಾಡಿ ಮನಶಕಿಸಂದಾನಂಗೊಳಿಸಿ
ಚತುಃಪದ ಮಧ್ಯ ಪೀಠದೊಳಿಪ್ಪ ಜ್ಯೋತಿರ್ಮಯ ಲಿಂಗವಂ
ಕಾಣುತ್ತಿರಲಾ ಬೆಳಗು ಮೂರು ಲೋಕವನ್ನಾವರಿಸಿ
ಕತ್ತಲೆ ಹದಿದು ಬೆಳಗುಳಿದು
ಉದಯಾಸ್ತಮಾನವೆಂಬೆರಡರಿಯದಿರ್ದೆ ಗುಹೇಶ್ವರಾ.[98]

ಚನ್ನಬಸವಣ್ಣನವರ ವಚನ–

ಪಶ್ಚಿಮ ಪದ್ಮಾಸನದಲ್ಲಿ ಕುಳ್ಳಿರ್ದು ನಿಟ್ಟೆಲುವ ನೆಟ್ಟನೆ ಮಾಡಿ
ಅಧೋಮುಖ ಕಮಲವ ಒಲಿದು ಊರ್ಧ್ವಮುಖವ ಮಾಡಿ
ಇಂದ್ರಿಯಂಗಳನು ಏಕಮುಖವ ಮಾಡಿ ಚಂದ್ರಸೂರ್ಯರ ನೊಂದೆ ಠಾವಿನಲ್ಲಿರಿಸಿ
ಅತ್ತಿತ್ತ ಮಿಸುಕದೆ ನಡುಗೀರ ಜ್ಯೋತಿಯ ದೃಢವಾಗಿ ಹಿಡಿದು
ಪರಮಾನಂದದ ಮಠದೊಳಗೆ ಪ್ರಾಣಲಿಂಗಾರ್ಚನೆಯ ಮಾಡುವ
ಮಹಾಮಹಿಮರ ತೋರಿ ಬದುಕಿಸಾ ಕೂಡಲ ಚನ್ನಸಂಗಯ್ಯಾ.[99]

21. ಹೊಲೆಯರ ಬಾವಿಯಲೊಂದು ಎಲು ನಟ್ಟಿದ್ದಡೆ
ಹೊಲೆಯೆಂಬುದು ಲೋಕವೆಲ್ಲ
ಹಲವೆಲುವಿದ್ದ ಬಾವಿ ಒಲವರವ ನುಡಿದಡೆ
ಹೊಲೆಯರ ಬಾವಿಯಿಂದ ಕರಕಷ್ಟ ಕಾಣಾ! ರಾಮನಾಥ.[100]

ದಾಸಿಮಯ್ಯನವರ ವಚನವು ಸರ್ವಜ್ಞನವರಲ್ಲಿ ಹೀಗೆ ಮೂಡಿಬಂದಿದೆ–

ಹಲ್ಲು ಎಲುವೆಂಬುದನೆಲ್ಲವರು ಬಲ್ಲರು
ನಿಲ್ಲದೆ ಎಲುವಿಂದೆಲ್ಲವನಗಿದ ಬಳಿ
ಕೆಲ್ಲಿಹುದು ಶೀಲ ಸರ್ವಜ್ಞ.[101]

22. ಸಾಗರದೊಳಗಣ ಕಿಚ್ಚಿನ ಸಾಕಾರದಂತೆ
ಸಸಿಯೊಳಗಣ ಫಲಪುಷ್ಪ ರುಚಿಯ ಪರಿಮಳದಂತೆ,
ಮನದ ಮರೆಯ ಮಾತು
ನೆನಹಿನಲ್ಲಿ ಅರಿದು, ನಾಲಿಗೆಯು ನುಡಿವಾಗಲಲ್ಲದೆ
ಕಾಣಬಾರದು, ಕೇಳಬಾರದು
ಒಂದಂಗದೊಳಗಡಗಿದ ನೂರೊಂದರ ಪರಿ, ರಾಮನಾಥ.[102]

ದೇವರ ಅಸ್ತಿತ್ವವನ್ನು ಬಿಂಬಿಸುವ ದಾಸಿಮಯ್ಯನವರ ವಚನದ ಭಾವಸಾಮ್ಯತೆಯನ್ನು ಬಸವಣ್ಣನವರಲ್ಲಿ ಮತ್ತು ಆದಯ್ಯನವರಲ್ಲಿ ಹೀಗೆ ಮೂಡಿಬಂದಿದೆ–

ಉದಕದೊಳಗೆ ಬಯ್ಚಿಟ್ಟ ಬಯ್ಕೆಯ ಕಿಚ್ಚಿನಂತಿದ್ದಿತ್ತು
ಸಸಿಯೊಳಗಣ ರಸದ ರುಚಿಯಂತಿದ್ದಿತ್ತು
ನನೆಯೊಳಗಣ ಪರಿಮಳದಂತಿದ್ದಿತ್ತು
ಕೂಡಲ ಸಂಗಮದೇವ ಕನ್ನೆಯ ಸ್ನೇಹದಂತಿದ್ದಿತ್ತು.[103]

ಆದಯ್ಯನವರ ವಚನ–

ಕಡಲೊಳಗಣ ವಡಬ ಹೊದ್ದಿಯೂ ಹೊದ್ದದಂತೆ
ಇಂದುಕಾಂತದೊಳಗೆ ಬಿಂದುವಿದ್ದಿಲ್ಲದಂತೆ
ದರ್ಪಣದೊಳಗಣ ಪ್ರತಿಬಿಂಬ ಮುಟ್ಟಿಯೂ ಮುಟ್ಟದಂತೆ
ಸರ್ವಸಾಕ್ಷಿತವಾದ ಸೌರಾಷ್ಟ್ರ ಸೋಮೇಶ್ವರನು
ಪಿಂಡದೊಳಗಡಗಿ ಇಲ್ಲದಂತಿಪ್ಪನಯ್ಯ.[104]

23. ಹರ ತನ್ನ ಭಕ್ತರ ತಿರಿವಂತೆ ಮಾಡುವ
ಒರದು ನೋಡುವ ಮಿಸುನಿಯ ಚಿನ್ನದಂತೆ
ಅರದು ನೋಡುವ ಚಂದನದಂತೆ
ಅರಿದು ನೋಡುವ ಕಬ್ಬಿನ ಕೋಲಿನಂತೆ
ಬೆದರದೆ ಬೆಚ್ಚದೆ ಇರ್ದಡೆ
ಕರವಿಡಿದೆತ್ತಿಕೊಂಬ ನಮ್ಮ ರಾಮನಾಥನು.[105]

ದಾಸಿಮಯ್ಯನವರ ವಚನದಲ್ಲಿ ವ್ಯಕ್ತವಾದ ಹರನು ತನ್ನ ಭಕ್ತರನ್ನು ಪರೀಕ್ಷಿಸುವ ರೀತಿಯನ್ನು ಅಕ್ಕಮಹಾದೇವಿ ಮತ್ತು ಬಸವಣ್ಣನವರ ಈ ಕೆಳಗಿನ ವಚನಗಳಲ್ಲಿ ಸಾಮ್ಯತೆಯನ್ನು ಕಾಣಬಹುದು–

ಚಂದನವ ಕಡಿದು ಕೊರೆದು ತೈದೊಡೆ ನೊಂದೆನೆಂದು ಕಂಪಬಿಟ್ಟಿತ್ತೆ?
ತಂದು ಸುವರ್ಣವ ಕಡಿದೊರೆದೊಡೆ ಬೆಂದು ಕಳಂಕ ಹಿಡಿದಿತ್ತೆ?
ಸಂದು ಸಂದನು ಕಡಿದು ಕಬ್ಬನು ತಂದು ಗಾಣದಲ್ಲಿಕ್ಕಿ ಅರೆದೊಡೆ

ಬೆಂದು ಪಾಕ ಗೂಳ ಸಕ್ಕರೆಯಾಗಿ ನೊಂದೆನೆಂದು ಸವಿಯಬಿಟ್ಟಿತ್ತೆ?
ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು ನಿಮಗೆ ಹಾನಿ
ಎನ್ನ ತಂದೆ ಚನ್ನಮಲ್ಲಿಕಾರ್ಜುನ ದೇವಯ್ಯ ಕೊಂದಡೆ ಶರಣೆಂಬುದು ಮಾಣೆ.[106]

ಬಸವಣ್ಣನವರ ವಚನ–

ಅರೆವನಯ್ಯ ಸಣ್ಣವಹನ್ನಕ್ಕ
ಬರೆವನಯ್ಯ ಬಣ್ಣಗಾಬನ್ನಕ್ಕ
ಅರೆದರೆ ಸಣ್ಣವಾಗಿ ಬರೆದರೆ ಬಣ್ಣವಾದರೆ
ಕೂಡಲಸಂಗಮದೇವನೋಲಿದು ಸಲಹುವನು.[107]

24. ಹೊಲಬನರಿಯದ ಗುರು
ಸುಲಭನಲ್ಲದ ಶಿಷ್ಯ
ಕೆಲಬಲನ ನೋಡದುಪದೇಶ
ಅಂಧಕನ ಲಾಭ ಹೊಕ್ಕಂತೆ ಕಾಣಾ! ರಾಮನಾಥ.[108]

ದಾಸಿಮಯ್ಯನವರ ಅಯೋಗ್ಯ ಗುರು–ಶಿಷ್ಯರ ಸಂಬಂಧ ಹಾಗೂ ಉಪದೇಶಗಳ ಬಗ್ಗೆ ಇರುವ ವಚನ ಚಂದಿಮರಸ ಮೊದಲಾದ ಶರಣರ ವಚನಗಳಲ್ಲಿ ಸಾಮ್ಯವನ್ನು ಈ ಮುಂದಿನಂತೆ ನೋಡಬಹುದು–

ಅರಿಯದ ಗುರು ಅರಿಯದ ಶಿಷ್ಯಂಗೆ
ಅನುಗ್ರಹವ ಮಾಡಿದಡೇನಪ್ಪುದೆಲವೋ?
ಅಂಧಕನ ಕೈಯ ಅಂದಕ ಹಿಡಿದಂತೆ
ಮುಂದೇನಪ್ಪುದು ಹೇಳಲೇ ಮರುಳೆ?
ಬರುಮಾತಿನ ರಂಜನೆಯನಾಡದಿರು
ಸಿಮ್ಮಲಿಗೆಯ ಚನ್ನರಾಮನೆಂಬ
ಲಿಂಗವು ಹುಸಿಯ ಹೆಸರದವನಲ್ಲ.[109]

ಅಲ್ಲಮಪ್ರಭುದೇವರ ವಚನ–

ಉಪಚಾರದ ಗುರುವಿಂಗೆ ಉಪಚಾರದ ಶಿಷ್ಯ
ಉಪಚಾರದ ಲಿಂಗ ಉಪಚಾರದ ಜಂಗಮ
ಉಪಚಾರದ ಪ್ರಸಾದವಕೊಂಡು ಗುರುವಿಂಗೆ
ಭವದ ಲೆಂಕನಾಗಿ ಅಂಧಕನ ಕೈಯ ಅಂಧಕ
ಹಿಡಿದಂತೆ ಇವರಿಬ್ಬರು ಹೊರಬುಗೆಟ್ಟರು ಕಾಣಾ ಗುಹೇಶ್ವರಾ.[110]

ಅಂಬಿಗರ ಚೌಡಯ್ಯನವರ ವಚನ–

ಅರಿಯದ ಗುರು ಅರಿಯದ ಶಿಷ್ಯಂಗೆ ಅನುಗ್ರಹವ
ಮಾಡಿದಡೇನಪ್ಪದಲ್ಲವೊ ಅಂಧಕನ ಕೈಯನಂಧಕ
ಹಿಡಿದಡೆ ಮುಂದೆನಾರು ಕಾಬರು ಹೇಳಲೆ ಮರುಳೆ
ತೊರೆಯಲದ್ದವನ ನೀಸಲರಿಯದವ ತೆಗೆವ
ತೆರನಂತೆಂದನಂಬಿಗರ ಚೌಡಯ್ಯ.[111]

ಸರ್ವಜ್ಞನವರ ವಚನ–

ಹೊಲನರಿಯದ ಗುರುವು ತಿಳಿಯಲರಿಯದ ಶಿಷ್ಯ
ನೆಲಯನಾರಯ್ಯದುಪದೇಶ ಅಂಧಕನು
ಕೊಳವ ಹೊಕ್ಕಂತೆ ಸರ್ವಜ್ಞ.[112]

ಹೀಗೆ ದೇವರ ದಾಸಿಮಯ್ಯನವರ ವಚನಗಳ ಪ್ರಭಾವ ಹಾಗೂ ಅವುಗಳ ಭಾವಸಾಮ್ಯ, ಅರ್ಥಸಾಮ್ಯವಿದ್ದ ವಚನಗಳು ಬಸವಾದಿ ಶರಣರಲ್ಲಿ ಕಾಣುತ್ತೇವೆ.

3.19 ಬಸವಾದಿ ಶರಣರ ದೃಷ್ಟಿಯಲ್ಲಿ ದೇವರ ದಾಸಿಮಯ್ಯನವರು

ಬಸವಣ್ಣನವರು ತಮ್ಮ ವಚನಗಳಲ್ಲಿ ಅನೇಕ ಜನ ಶರಣರನ್ನು ಹಾಗೂ ಅವರ ಭಕ್ತಿ ಸಾಧನೆಯ ವಿಶೇಷತೆಗಳನ್ನು ಉಲ್ಲೇಖಿಸಿದ್ದಾರೆ. ಈ ದೃಷ್ಟಿಯಲ್ಲಿ ದೇವರ ದಾಸಿಮಯ್ಯನವರನ್ನು. ಬಸವಣ್ಣನವರು ದಾಸ, ದಾಸಯ್ಯ, ದಾಸಿಮಯ್ಯ, ದಾಸಿದೇವ, ಜೇಡರ ದಾಸಿಮಯ್ಯ ಎಂಬ ಹೆಸರುಗಳಿಂದ ತಮ್ಮ ವಚನಗಳಲ್ಲಿ ಸ್ಮರಿಸಿದ್ದಾರೆ. ಇವರ ಜೊತೆಗೆ ಸಿಂಧುಬಲ್ಲಾಳ, ಸಿರಿಯಾಳ, ಬಾಣ, ಮಯೂರ, ಕಕ್ಕಯ್ಯ, ಚನ್ನಯ್ಯ ಮೊದಲಾದ ಶರಣರನ್ನೂ ಸ್ಮರಿಸಿದ್ದಾರೆ. ಉದಾಹರಣೆಗೆ–

ಭಕ್ತಿ ಎಂತಹದಯ್ಯ? ದಾಸಯ್ಯ ಮಾಡಿದಂತಹದು
ಭಕ್ತಿ ಎಂತಹದಯ್ಯ? ಸಿರಿಯಾಳ ಮಾಡಿದಂತಹದು
ಭಕ್ತಿ ಎಂತಹದಯ್ಯ? ಸಿಂಧುಬಲ್ಲಾಳ ಮಾಡಿದಂತಹದು
ಭಕ್ತಿ ಎಂತಹದಯ್ಯ? ಕೂಡಲಸಂಗಮದೇವಾ
ನೀ ಬಾಣನ ಬಾಗಿಲ ಕಾಯ್ದಂತಹದು.[113]

ಭಕ್ತಿಯ ಮಹತ್ವವನ್ನು ದಾಸಿಮಯ್ಯ ಮೊದಲಾದ ಶರಣರ ಉಲ್ಲೇಖದೊಂದಿಗೆ ಬಸವಣ್ಣನವರು ವಿವರಿಸಿದ್ದಾರೆ. ದಾಸಿಮಯ್ಯನವರನ್ನು ಕುರಿತು ಭಕ್ತಿಯ ವೈಶಿಷ್ಟ್ಯವನ್ನು ಅರಿತ ಮಹಾನುಭಾವಿ ಎಂದು ಸ್ತುತಿಗೆ ಒಳಪಟ್ಟಿದ್ದಾರೆ. ಇವರು ಭಕ್ತಿ ವಿಶಿಷ್ಟತೆಯಿಂದ ಪ್ರಸಿದ್ಧರಾಗಿದ್ದರು. ಬಸವಣ್ಣನವರು ಮತ್ತೆ ಮತ್ತೆ ಸ್ಮರಿಸಿಕೊಂಡಿರುವುದನ್ನು ಮುಂದಿನ ಹಲವಾರು ವಚನಗಳಲ್ಲಿ ಕಾಣುತ್ತೇವೆ. ಏಕೈಕ ನಿಷ್ಠೆಯ ಭಕ್ತಿ ಪಡೆಯಬಹುದಾದ ವೈವಿಧ್ಯ ಮತ್ತು ಮಹತ್ವಗಳಿಗೆ ದಾಸಿಮಯ್ಯನವರ ಜೀವನವೇ ಜೀವಂತ ಭಾಷ್ಯ. ಇವರು ತನು, ಮನ, ಧನಗಳನ್ನು ಈಶ್ವರನಿಗೆ ಅರ್ಪಿಸಿದ ನಿಷ್ಠಾವಂತರು.

ಬದುಕಿನಲ್ಲಿ ಬರುವ ಎಲ್ಲಾ ಕಷ್ಟ–ನಷ್ಟಗಳೂ ಭಗವಂತನ ಪರೀಕ್ಷೆಗಳು, ಆ ಪರೀಕ್ಷೆಗಳಲ್ಲಿ ತೇರ್ಗಡೆಯಾದವರು ದಾಸಿಮಯ್ಯನವರು. ಆದುದರಿಂದ ಬಸವಣ್ಣನವರು ದಾಸಿಮಯ್ಯನವರನ್ನು ನೆನೆಯುತ್ತ ತಮ್ಮ ಭಕ್ತಿ ಸಾಧನೆಯನ್ನು ಬಲಪಡಿಸಿಕೊಂಡರು.

ಮುನ್ನಿನವರು ಹೋದ ದಾರಿ ಭಯ ಕಾಣಿರಣ್ಣ,
ಬಲ್ಲಾಳನ ವಧುವಿನೊಡನೆ ಸರಸವಾಡಿದಂದಿಂದ ಭಯ ಕಾಣಿರಣ್ಣ,
ಸಿರಿಯಾಳನ ಮಗನ ಬೇಡಿದಂದಿಂದ ಭಯ ಕಾಣಿರಣ್ಣ,
ದಾಸನ ವಸ್ತ್ರವ ಸೀಳಿದಂದಿಂದ ಭಯ ಕಾಣಿರಣ್ಣ,
ಅಘಟಿತ ಘಟಿತರು ವಿಪರೀತ ಚರಿತರು,
ಕೂಡಲಸಂಗನ ಶರಣರು ನಡೆದ ದಾರಿ ಭಯ ಕಾಣಿರಣ್ಣ.[114]

ಪ್ರಸ್ತುತ ಮೇಲಿನ ವಚನದಲ್ಲಿ ದಾಸಿಮಯ್ಯ ಮೊದಲಾದ ಶರಣರ ಭಕ್ತಿಯ ವೈಶಿಷ್ಟ್ಯವನ್ನು ಸಮರ್ಥಿಸಿದ್ದಾರೆ. ದಾಸಿಮಯ್ಯನವರು ವಸ್ತ್ರವನ್ನು ಸೀಳಿದ ಶಿವನ ಕಠಿಣ ಪರೀಕ್ಷೆಯನ್ನು ಎದುರಿಸಿದ ಏಕೈಕನಿಷ್ಠೆ ಅದ್ಭುತವಾದುದು. ಅವರು ಅಘಟಿತ ಘಟಿತರು ವಿಪರೀತ ಚರಿತರು ಎಂದು ಹೇಳುತ್ತ ಅವರು ನಡೆದ ದಾರಿ ಭಯ ಕಾಣಿರಣ್ಣಾ! ಎಂದು ಉದ್ಗಾರ ತೆಗೆದಿದ್ದಾರೆ.

ಭಕ್ತಿಯಿಲ್ಲದ ಬಡವ ನಾನಯ್ಯ
ಕಕ್ಕಯ್ಯನ ಮನೆಯಲೂ ಬೇಡಿದೆ,
ಚೆನ್ನಯ್ಯನ ಮನೆಯಲೂ ಬೇಡಿದೆ,
ದಾಸಯ್ಯನ ಮನೆಯಲೂ ಬೇಡಿದೆ,
ಎಲ್ಲಾ ಪುರಾತನರು ನೆರೆದು ಭಕ್ತಿ ಭಿಕ್ಷವನಿಕ್ಕಿದರೆ
ಎನ್ನ ಪಾತ್ರೆ ತುಂಬಿತ್ತು, ಕೂಡಲಸಂಗಮದೇವಾ.[115]

ಬಸವಣ್ಣನವರು ಭಕ್ತಿಯಿಲ್ಲದ ಬಡವ ಎಂದು ಹೇಳಿಕೊಳ್ಳುತ್ತಿದ್ದರೂ, ದಾಸಿಮಯ್ಯನವರ ಭಕ್ತಿ ಶ್ರೀಮಂತಿಕೆಯನ್ನು ಇಲ್ಲಿ ಕಾಣುತ್ತೇವೆ. ಬಸವಣ್ಣನವರು ದಾಸಿಮಯ್ಯ ಮೊದಲಾದ ಶರಣರ ಹತ್ತಿರ ಭಕ್ತಿ ಬೀಕ್ಷೆಯನ್ನು ಕೇಳಿದಾಗ ಅವರಿಂದ ಭಿಕ್ಷಾಪಾತ್ರೆ ತುಂಬಿತು ಎನ್ನುತ್ತಾರೆ. ಅಹಂಕಾರವನ್ನು ಅಳಿದು ಈಶ್ವರನಿಗೆ ತಮ್ಮನ್ನು ಅರ್ಪಿಸಿಕೊಂಡಿರುವ ಭಕ್ತಿಸಾಧನೆಯ ರಹಸ್ಯ ಈ ಮೇಲಿನ ವಚನದಲ್ಲಿ ಕಾಣಬಹುದು.

ನೆರೆನಂಬೋ ನೆರೆನಂಬೋ ಧರಧುರವಿಲ್ಲದೆ ಸಾಮವೇದಿಗಳಂತೆ
ನೆರೆನಂಬೋ ನೆರೆನಂಬೋ ದಾಸ ದುಗ್ಗಳೆಯರಂತೆ
ನೆರೆನಂಬೋ ನೆರೆನಂಬೋ ಸಿರಿಯಾಳ ಚಂಗಳೆಯರಂತೆ
ನೆರೆನಂಬೋ ನೆರೆನಂಬೋ ಸಿಂಧುಬಲ್ಲಾಳನಂತೆ
ನೆರೆನಂಬಿದೆಯಾದಡೆ ತನ್ನ ನೀವ ಕೂಡಲಸಂಗಮದೇವ.[116]

ಭಕ್ತಿಸಾಧನೆಯಲ್ಲಿ ನಂಬಿಕೆ, ಶ್ರದ್ಧೆಯಿಂದಿರುವ ದಾಸಿಮಯ್ಯ ಮೊದಲಾದ ಶರಣರನ್ನು ಬಸವಣ್ಣನವರು ಈ ಮೇಲಿನ ವಚನದಲ್ಲಿ ಉಲ್ಲೇಖಿಸಿದ್ದಾರೆ. ದಾಸಿಮಯ್ಯ ಮೊದಲಾದ ಶರಣರನ್ನೇ ಮತ್ತೆ ಮತ್ತೆ ಸ್ಮರಿಸುತ್ತ ಅವರಂತೆ ಸಂಪೂರ್ಣವಾಗಿ ಈಶ್ವರನಲ್ಲಿ ನಂಬಿಕೆಯನ್ನಿಟ್ಟರೆ, ತನ್ನನ್ನೇ ಭಕ್ತರಿಗೆ ಅರ್ಪಿಸಿಕೊಳ್ಳುತ್ತಾನೆ ಎಂದಿದ್ದಾರೆ ಬಸವಣ್ಣನವರು.

ಬಾಣ ಮಯೂರನಂತೆ ಬಣ್ಣಿಸಬಲ್ಲೆನೆ?
ಸಿರಿಯಾಳನಂತೆ ಉಣಲಿಕ್ಕ ಬಲ್ಲೆನೆ?
ದಾಸಿಮಯ್ಯನಂತೆ ಉಡಕೊಡಬಲ್ಲೆನೆ?
ಉಂಡುಟ್ಟು ಕೊಟ್ಟರೆ ಮುಯ್ಯಿಗೆ ಮುಯ್ಯೆನಿಸಿತ್ತು.
ಎನಗೆ ಕೊಟ್ಟರೆ ಧರ್ಮ ಕೂಡಲಸಂಗಮದೇವಾ.[117]

ಈ ಮೇಲಿನ ವಚನದಲ್ಲಿ ಬಸವಣ್ಣನವರು ಶಿವ ಭಕ್ತಿನಿಷ್ಠೆಯನ್ನು ಮೆರೆದ ದಾಸಿಮಯ್ಯ ಮೊದಲಾದ ಶರಣರನ್ನು ಸ್ಮರಿಸಿದ್ದಾರೆ. ಇವರೆಲ್ಲ ಅರ್ಥ, ಪ್ರಾಣ, ಅಭಿಮಾನಗಳನ್ನು ತೊರೆದು ಅತ್ಯಂತ ಕಠಿಣ ಪ್ರಸಂಗಗಳಲ್ಲಿಯೂ ಅಚಲ ನಿಷ್ಠೆಯಿಂದ ಸರ್ವಾರ್ಪಣವನ್ನು ಮಾಡಿದ ವೀರಭಕ್ತರು. ಅವರಿಗೆಲ್ಲ ದೇವರು ಒಲಿದದ್ದು ದೊಡ್ಡದಲ್ಲ, ಅವರಿಂದ ಭಕ್ತಿಸರ್ವಸ್ವವನ್ನು ಪಡೆದು ಅದರ ಪ್ರತಿಫಲವನ್ನು ಕೊಟ್ಟಿದ್ದು ಮುಯ್ಯಿಗೆ ಮುಯ್ಯಿಯಂತಾಯಿತು. ಅದನ್ನು ಬಸವಣ್ಣನವರು ತನಗೆ ಕೊಟ್ಟರೆ ಅದು ನಿನ್ನ ಔದಾರ್ಯ ಅನುಗ್ರಹವಾಗುತ್ತದೆಂದು ಈಶ್ವರನಿಗೆ ಹೇಳಿದ್ದಾರೆ.

ದಾಸಿದೇವ ತನ್ನ ವಸ್ತ್ರವನ್ನಿತ್ತು ತವನಿಧಿಪ್ರಸಾದವ ಪಡೆದ,
ಸಿರಿಯಾಳ ತನ್ನ ಮಗನನ್ನಿತ್ತು ಪ್ರಾಣಪ್ರಸಾದವ ಪಡೆದ,
ಬಲ್ಲಾಳದೇವ ತನ್ನ ಮಧುವನ್ನಿತ್ತು ಸಮತೆ–ಪ್ರಸಾದವ ಪಡೆದ,
ಇವರೆಲ್ಲರೂ ತಮ ತಮಗೆ ಮಾಡಿ ಪಡೆದರು ಸಮ್ಯಕ್‌ಪದವಿಯನ್ನು.
ನಾನೇನನೂ ಅರಿಯದ ಭಕ್ತಿಯ ಬಡವಂತೆ ಕರುಣಿಸು ಕೂಡಲಸಂಗಮದೇವಾ.[118]

ಹಿಂದಿನ ವಚನದ ಭಾವವೇ ಇಲ್ಲಿಯೂ ಸಹ ಬಸವಣ್ಣನವರು ವ್ಯಕ್ತಪಡಿಸಿದ್ದಾರೆ. ದಾಸಿಮಯ್ಯನವರು ನೇಯ್ದ ಅಮೂಲ್ಯವಾದ ವಸ್ತ್ರವನ್ನು ಶಿವನಿಗೆ (ವೃದ್ಧ ಜಂಗಮ) ಸಮರ್ಪಿಸಿ ತವನಿಧಿಯನ್ನು ಪ್ರಸಾದವಾಗಿ ಪಡೆದ ಶಿವ ಭಕ್ತಿನಿಷ್ಠೆಯನ್ನು ಸ್ಮರಿಸಿ, ಬಸವಣ್ಣನವರು ತಾನು ಭಕ್ತಿಯ ಬಡವನೆಂದು ಈಶ್ವರನಲ್ಲಿ ಪ್ರಾರ್ಥಿಸಿ, ನಿನ್ನ ಕರುಣೆಯಿಂದ ಭಕ್ತಿಶ್ರೀಮಂತಿಕೆ ದೊರೆಯಬೇಕಾಗಿದೆ ಎಂದಿದ್ದಾರೆ.

ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ
ಕಷ್ಟದ ಹೊರೆಯ ಹೊರಿಸದಿರಯ್ಯ,
ಕಕ್ಕಯ್ಯನೊಕ್ಕುದನಿಕ್ಕ ನೋಡಯ್ಯಾ,
ದಾಸಯ್ಯ ಶಿವದಾನವನೆರೆಯ ನೋಡಯ್ಯ
ಮನ್ನಣೆಯ ಚೆನ್ನಯ್ಯನೆನ್ನುವ ಮನ್ನಿಸ,
ಉನ್ನತಮಹಿಮ ಕೂಡಲಸಂಗಮದೇವಾ, ಶಿವಧೋ, ಶಿವಧೋ,[119]

ಈ ಮೇಲಿನ ವಚನದಲ್ಲಿ ದಾಸಿಮಯ್ಯ ಮೊದಲಾದ ಶರಣರ ಅಹಂಕಾರವನ್ನು ನಿರಸನಗೊಳಿಸಿಕೊಂಡಿರುವ ಭಕ್ತಿ ಸಾಧನೆಯ ಔನತ್ಯವನ್ನು ಇಲ್ಲಿ ಕಾಣುತ್ತೇವೆ. ಅದಕ್ಕೆ ಬಸವಣ್ಣನವರು, ಉತ್ತಮ ಕುಲದಲ್ಲಿ ಹುಟ್ಟಿದೆನೆಂಬುದೇ ಒಂದು ಕಷ್ಟತನದ ಹೊರೆ, ಕುಲಮದ ಸುಲಭವಾಗಿ ಗೆಲ್ಲುವಂಥದಲ್ಲ. ನಾನು ಉತ್ತಮ ಕುಲದಲ್ಲಿ ಹುಟ್ಟಿದೆನೆಂದುಕೊಂಡರೆ, ದಾಸಿಮಯ್ಯ ಮೊದಲಾದ ಶರಣರು ಅನುಗ್ರಹರೂಪದ ಪ್ರಸಾದ ಕೊಡವುದಿಲ್ಲ ಎಂದಿದ್ದಾರೆ.

ದೇವಾ ನಿಮ್ಮ ಪೂಜಿಸಿ ಚೆನ್ನನ ಕುಲ ಚೆನ್ನಾಯಿತ್ತು;
ದೇವಾ ನಿಮ್ಮ ಪೂಜಿಸಿ ದಾಸನ ಕುಲ ದೇಸೆವಡೆಯಿತ್ತು;
ದೇವಾ ನಿಮ್ಮಡಿಗೆರಗಿದ್ದ ಮಡಿವಾಳ ಮಾಚಯ್ಯ ನಿಮ್ಮಡಿಯಾದ.
ನೀನೊಲಿದ ಕುಲಕ್ಕೆ ನೀನೊಲ್ಲದ ಹೊಲೆಗೆ ಮೇರೆಯುಂಟೆ ದೇವಾ?
ಶ್ವಪಚೋऽಪಿ ಮುನಿಶ್ರೇಷ್ಠೋ ಯಸ್ತು ಲಿಂಗಾರ್ಚನೇ ರತಃ।
ಲಿಂಗಾರ್ಚನವಿಹೀನೋऽಪಿ ಬ್ರಾಹ್ಮಣಃ ಶ್ವಪಚಾಧಮಃ॥ ಎಂದುದಾಗಿ,
ಜಾತಿ ವಿಜಾತಿಯಾದಡೇನು ಆಜಾತಂಗೆ ಶರಣೆನ್ನದವನು?
ಆತನೇ ಹೊಲೆಯ, ಕೂಡಲಸಂಗಮದೇವಾ.[120]

ದಾಸಿಮಯ್ಯನವರು ತಮ್ಮ ಕುಲದ ಪರಿಮಿತಿಯನ್ನು ಮೀರಿ ಬೆಳೆದಿದ್ದನ್ನು ಅದೆಷ್ಟು ಸ್ತುತಿಸಿದರೂ ಬಸವಣ್ಣನವರಿಗೆ ಸಮಾಧಾನವಿಲ್ಲ. ಇವರು ತಮ್ಮ ನಡೆನುಡಿಗಳಿಂದ ಉನ್ನತ ಮಟ್ಟಕ್ಕೆ ಬೆಳೆದು ಶಿವನನ್ನು ಒಲಿಸಿಕೊಂಡಿದ್ದರು. ಶಿವನು ಒಲಿದದ್ದೇ ಕುಲ, ಒಲ್ಲದ್ದೇ ಹೊಲೆ ಎಂದು ಹೇಳುತ್ತ ಆಗಮ ವಾಕ್ಯವನ್ನು ಉದಾಹರಿಸಿದ್ದಾರೆ.

ದಾಸನಂತೆ ತವನಿಧಿಯ ಬೇಡುವವನಲ್ಲ,
ಚೋಳನಂತೆ ಹೊನ್ನಮಳೆಯ ಕರೆಸೆಂಬವನಲ್ಲ,
ಅಂಜದಿರು ಅಂಜದಿರು ಅವರಂದದವ ನಾನಲ್ಲ,
ಎನ್ನ ತಂದೆ ಕೂಡಲಸಂಗಮದೇವಾ
ಸದ್ಭಕ್ತಿಯನೆ ಕರುಣಿಸೆನಗೆ.[121]

ಭಗವಂತನ ಭಕ್ತರು ಈಶ್ವರರನ್ನು ಬಿಟ್ಟು ಬೇರೇನನ್ನು ಬಯಸುವುದಿಲ್ಲ. ಅವರಿಗೆ ಭಕ್ತಿಯೊಂದೇ ಸಾಕು ಎನ್ನುವರು ಬಸವಣ್ಣನವರು. ಅವರು ಈಶ್ವರನಿಗೆ ಹೆದರಬೇಡ ತಾನು ಏನನ್ನೂ ಕೇಳುವುದಿಲ್ಲವೆಂದು ಹೇಳುವುದರ ಜೊತೆಗೆ ದಾಸಿಮಯ್ಯನವರು ತವನಿಧಿ ಪಡೆದಿರುವುದನ್ನು ವ್ಯಕ್ತ ಪಡಿಸಿದ್ದಾರೆ ಮೇಲಿನ ವಚನದಲ್ಲಿ.

ದೇವನಿಂತಹನೆಂದು ತೋರಿಯೆಕೊಡುವೆನು ಗಣಂಗಳಿಗೆ,
ಬಲ್ಲಾಳನ ವಧುವ ಬೇಡಿದಾತನೀ ದೇವ.

ದೇವನಿಂತಹನೆಂದು ತೋರಿಯೆಕೊಡುವೆನು ಗಣಂಗಳಿಗೆ,
ದಾಸನ ವಸ್ತ್ರವ ಬೇಡಿದಾತನೀ ದೇವ.
ದೇವನಿಂತಹನೆಂದು ತೋರಿಯೆಕೊಡುವೆನು ಗಣಂಗಳಿಗೆ,
ಸಿರಿಯಾಳನ ಮಗನ ಬೇಡಿದಾತನೀ ದೇವ,
ಕೂಡಲಸಂಗಮದೇವ ಜಂಗಮಮುಖಿ ಜಿಂಗವಾಗಿ
ಕಾಡಿ ನೋಡುವ ಬೇಡಿ ನೋಡುವ,[122]

ಈಶ್ವರನು ದಾಸಿಮಯ್ಯ ಮೊದಲಾದ ಶರಣರಿಗೆ ಕಾಡಿ, ಬೇಡಿ ಇವರ ಭಕ್ತಿನಿಷ್ಠೆಯನ್ನು ಒರೆಗೆ ಹಚ್ಚಿ ನೋಡಿದ್ದಾನೆಂಬುದನ್ನು ಬಸವಣ್ಣನವರು ಈ ಮೇಲಿನ ವಚನದಲ್ಲಿ ಹೇಳುತ್ತಾ, ದೇವ ಇಂತಹನೆಂಬುದನ್ನು ತೋರಿಸಿಕೊಟ್ಟಿದ್ದಾರೆ.

ದಾಸನ ವಸ್ತ್ರವ ಬೇಡದ ಮುನ್ನ
ತವನಿಧಿಯನಿತ್ತಡೆ ನಿಮ್ಮ ದೇವನೆಂಬೆ,
ಸಿರಿಯಾಳನ ಮಗನ ಬೇಡದ ಮುನ್ನ
ಕಂಚಿಯಪುರವ ಕೈಲಾಸಕ್ಕೊಯ್ದಡೆ ನಿಮ್ಮ ದೇವನೆಂಬೆ.
ಬಲ್ಲಾಳನ ಮಧುವ ಬೇಡದ ಮುನ್ನ
ಸ್ವಯಲಿಂಗವ ಮಾಡಿದಡೆ ನಿಮ್ಮ ದೇವರೆಂಬೆ.
ದೇಹಿ ನೀನು, ವ್ಯಾಪಾರಿಗಳು ನಮ್ಮವರು.
ಬೇಡು ಕೂಡಲಸಂಗಮದೇವಾ ನಮ್ಮವರ ಕೈಯಲು.[123]

ಬಸವಣ್ಣನವರು ಈ ಮೇಲಿನ ವಚನದಲ್ಲಿ ದಾಸಿಮಯ್ಯ ಮೊದಲಾದ ಶರಣರ ಭಕ್ತಿನಿಷ್ಠೆ, ಅದಕ್ಕೆ ಈಶ್ವರನು ಒಲಿದ ಪರಿಯನ್ನು ಸ್ಮರಿಸಿಕೊಳ್ಳುತ್ತಾ ಅದನ್ನು ಚಮತ್ಕಾರವಾಗಿ ಈಶ್ವರನ ವ್ಯವಹಾರಕ್ಕೆ ಹೋಲಿಸಿದ್ದಾರೆ. ಈಶ್ವರನನ್ನು ಭಕ್ತರ ಹತ್ತಿರ ಬಂದು ದೇಹಿ ಹೇಹಿ ಎಂದು ಕೇಳುವುದು ಭಕ್ತಿವ್ಯಾಪಾರವಾಗುತ್ತದೆ. ಅವರ ಬಳಿ ಏನನ್ನೂ ಬೇಡದೆ ಅದರ ಪ್ರತಿಫಲವನ್ನು ಕೊಟ್ಟಿದ್ದರೆ ಅವನು ದೇವನಾಗುತ್ತಿದ್ದ. ಅವರನ್ನು ಪರೀಕ್ಷಿಸುವ ವ್ಯಾಪಾರಿಯಾಗಿರುನೆಂದು ಬಸವಣ್ಣನವರು ಭಗವಂತನಿಗೆ ನಿಂದಿಸಿದ್ದಾರೆ. ಭಗವಂತನಿಗಿಂತ ಭಕ್ತರ ಶಕ್ತಿಯೇ ಮಿಗಿಲಾದದ್ದು ಎಂಬ ಧ್ವನಿ ಇಲ್ಲಿದೆ. ಇದೊಂದು ರೀತಿ ಭಕ್ತರು ಲೀಲಾವಿಲಾಸಿ ಪರಮಾತ್ಮ ನಿಂದಾಸ್ತುತಿಯೂ ಹೌದು, ಸ್ತೋತ್ರಸಾಹಿತ್ಯದಲ್ಲಿ ಇದು ಒಂದು ಬಗೆಯಾಗಿದೆ.

ಎಲ್ಲಿ ಹೊಕ್ಕಲ್ಲಿ ನಿನ್ನ ವಿಕಾರವ ಬಿಡೆ ಮಾಣೆ, ಗುರುವತನವೆ?
ದಾಸನ ವಸ್ತ್ರವನುಡುವುದೊಂದು ಗುರುವತನವೆ?
ಸಿರಿಯಾಳನ ಮಗನ ಬೇಡುವುದೊಂದು ಗುರುವತನವೆ?
ಬಲ್ಲಾಳನ ವಧುನ ಬೇಡುವುದೊಂದು ಗುರುವನನವೇ
ಕೊಡಗವ ಹುಲ್ಲಲ್ಲಿ ಮುಸುಕಿದಂತೆ
ಕೂಡಲಸಂಮದೇವಾ, ನಿಮ್ಮ ಪರಿ.[124]

ಬಸವಣ್ಣನವರು ದಾಸಿಮಯ್ಯ ಮೊದಲಾದ ಶರಣರನ್ನು ಸ್ಮರಿಸುತ್ತ ಈಶ್ವರನ ವಿಕೃತಿಯ ಬಗ್ಗೆ ನಿಂದಾಸುತ್ತಿಯನ್ನು ಚಮತ್ಕಾರವಾಗಿ ವ್ಯಕ್ತಪಡಿಸಿದ್ದಾರೆ. ದಾಸಿಮಯ್ಯನವರು ವಸ್ತ್ರವನ್ನು ಬೇಡಿ ಸೆಳೆದುಕೊಂಡದ್ದು ಒಂದು ಹಿರಿಮೆಯೇ? ಇವರು ಈಶ್ವರನಿಗಾಗಿ ತಮ್ಮ ಜೀವನವನ್ನೇ ಸಮರ್ಪಿಸಿದ್ದಾರೆ. ಅವರ ಹತ್ತಿರ ಹೋಗಿ ಬೇಡುವುದು ಈಶ್ವರನ ವಿಕಾರವನ್ನು ಸೂಚಿಸುತ್ತದೆ. ಎಂದು ಶಿವನನ್ನು ನಿಂದಿಸಿದ್ದಾರೆ. ಹುಲ್ಲಿನಲ್ಲಿ ಮುಚ್ಚಿದ ಕೊಡಗ ಅಲ್ಲಿ ಬಹಳ ಹೊತ್ತು ಇರದೆ ಹೇಗೆ ಹೊರಗೆ ಬರುತ್ತದೆಯೋ ಹಾಗೆ ಆ ಶರಣರ ಭಕ್ತಿನಿಷ್ಠೆಯ ಮುಂದೆ ಶಿವ ಪ್ರಕಟವಾಗಲೇ ಬೇಕಾಗುತ್ತದೆ. ಹೀಗೆ ನಿಂದಿಸುವ ದೂಪದಲ್ಲಿ ಅವರ ಭಕ್ತಿಪಾರಮ್ಯವನ್ನು ಎತ್ತಿ ಹಿಡಿದಿದ್ದಾರೆ.

ಸೋಲಬಲ್ಲರು ಅವರು ಗೆಲಲರಿಯರಯ್ಯಾ;
ತನುಮನಧನದಲ್ಲಿ ವಂಚನೆಯನರಿಯರಯ್ಯಾ;
ದಾಸ–ಸಿರಿಯಾಳನವರು.
ಕೂಡಲಸಂಗನ ಶರಣರು ಉಪಚಾರವನರಿಯರಯ್ಯಾ.[125]

ನಿಷ್ಠಾವಂತ ಭಕ್ತರು ಎಂದಿಗೂ ಸೋಲುವುದಿಲ್ಲ. ಅವರು ಫಲವನ್ನು ಬಯಸದೆ ನುಡಿದಂತೆ ನಡೆದು ತೋರಿಸುತ್ತಾರೆ. ತನು, ಧನ ಮತ್ತು ಧನಗಳೆಂಬ ತ್ರಿವಿಧಗಳನ್ನು ವಂಚನೆಯಿಲ್ಲದೆ ಅರ್ಪಿಸುತ್ತಾರೆ. ಅವರು ತೋರಿಕೆಯ ಔಪಚಾರಿಕ ಭಕ್ತಿಯನ್ನು ಒಪ್ಪುವುದಿಲ್ಲವೆಂದು ಬಸವಣ್ಣನವರು ಈ ಮೇಲಿನ ವಚನದಲ್ಲಿ ವ್ಯಕ್ತಪಡಿಸಿದ್ದಾರೆ.

ವೇಷ ಅವಿಚಾರದಲ್ಲಿ ನಡೆಯಿತ್ತೆಂದು
ಆಸುರದಲ್ಲಿ ಬಗುಳುವ ಕುನ್ನಿ, ಕೇಳಾ
ಹರಿಯನೆ ದಾಸನ ವಸ್ತ್ರವ?
ಉಣ್ಣನೆ ಚೆನ್ನನ ಸಂಗಾತ?
ಪರವಧುವ ಕೊಳ್ಳನೆ ಸಿಂಧುಬಲ್ಲಾಳನ?
ಬೇಡನೆ ಸಿರಿಯಾಳನ ಮಗನ?
ನಡೆವುದು ನುಡಿವುದು ಅವಿಚಾರವೆಂದು
ಭಾವ ವಿಭಾವವೆಂದು ಕಂಡೆನಾದಡೆ
ತಪ್ಪೆನ್ನದು, ಮೂಗ ಕೊಯ್ಯಿ! ಕೂಡಲ ಸಂಗಮದೇವ.[126]

ಬಸವಣ್ಣನವರ ಪ್ರಸ್ತುತ ವಚನದಲ್ಲಿ ಜಂಗಮನ ವರ್ತನೆಯನ್ನು ಕಾಣುತ್ತೇವೆ. ದೇವರ ದಾಸಿಮಯ್ಯನವರು ಕೊಟ್ಟ ವಸ್ತ್ರವನ್ನೇ ಹರಿದೊಗೆದ ಜಂಗಮನ ವರ್ತನೆಯನ್ನು ಸಮರ್ಥಿಸುತ್ತದೆ. ಇಲ್ಲಿಯ ಜಂಗಮ ಸಾಮಾನ್ಯ ಜಂಗಮನಲ್ಲ, ನಡೆದ ಘಟನೆ ಸಾಮಾನ್ಯ ಘಟನೆಯಲ್ಲ. ಇದನ್ನು ಬೇರೆ ಸ್ತರದಲ್ಲಿ ನಿಂತು ನೋಡಬೇಕು. ಇದು ಅವಿಚಾರವೆಂದು ಕಂಡು ವಿಕೃತಿಯೆಂದು ಭಾವಿಸಿದರೆ ಶಿಕ್ಷೆಗೆ ಗುರಿಯಾಗಬೇಕಾಗುತ್ತದೆ.

ಅರ್ಥ ಪ್ರಾಣಾಭಿಮಾನ ಕೊಟ್ಟೆನೆಂಬರಲ್ಲದೆ
ಕೊಟ್ಟ ಭಕ್ತರನಾರನೂ ಕಂಡುದಿಲ್ಲ.
ದಾಸ ತನ್ನ ವಸ್ತ್ರವ ಕೊಟ್ಟನಲ್ಲದೆ, ತನ್ನ ಕೊಟ್ಟುದಿಲ್ಲ.
ಸಿರಿಯಾಳ ತನ್ನ ಮಗನ ಕೊಟ್ಟುದಲ್ಲದೆ ತನ್ನ ಕೊಟ್ಟುದಿಲ್ಲ.
ಇದೆಲ್ಲ ಹೊರಗಣ ಮಾತು.
ಕೂಡಲಸಂಗಮದೇವರಲ್ಲಿ ತನ್ನ ಕೊಟ್ಟ ಸಿಂಧುಮರಾಳ.[127]

ಬಸವಣ್ಣನವರು ಈ ಮೇಲಿನ ವಚನದಲ್ಲಿ ಭಕ್ತಿಯನ್ನು ಮೀರಿದ ಮಹಾ ಸಾಧಕನದ ಸಿಂಧುಮರಾಳ ಎಂದು ಹೇಳುವಾಗ ದಾಸಿಮಯ್ಯ ಮೊದಲಾದ ಶರಣರನ್ನು ಸ್ಮರಿಸಿದ್ದು ಕಾಣಬಹುದು.

ತೊತ್ತಿಂಗೆ ಬಲ್ಲಹನೊಲ್ಲಿದಡೆ ಪದವಿಯಮಾಡದೆ ಮಾಣ್ಬನೆ?
ಜೇಡರ ದಾಸಿಮಯ್ಯನಿಗೊಲಿದಾತ, ಮತ್ತೊಬ್ಬ ದೇವನೇ ಅಯ್ಯಾ?
ಮಾದರ ಚೆನ್ನಯ್ಯಂಗೆ, ಡೋಹರ ಕಕ್ಕಯ್ಯಂಗೆ,
ತೆಲಗು ಬೊಮ್ಮಯ್ಯಂಗೆ ಒಲಿದಾತ ಮತ್ತೊಬ್ಬ ದೇವನೇ ಅಯ್ಯಾ?
ಎನ್ನ ಮನದ ಪಂಚೇಂದ್ರಿಯ ನಿಮ್ಮತ್ತಲಾದಡೆ
ತನ್ನತ್ತ ಮಾಡುವ ಕೂಡಲಸಂಗಮದೇವಾ.[128]

ಸೇವಕನಿಗೆ ರಾಜನು ಒಲಿದು ಅವನಿಗೆ ಬೇಕಾದ ಪದವಿಯನ್ನು ಕೊಡುವಂತೆ, ಶಿವನು ಒಲಿದರೆ ನಮಗಾವ ಕೊರತೆಯೂ ಇರುವುದಿಲ್ಲ ಎನ್ನುವರು ಬಸವಣ್ಣನವರು. ದೇವರ ದಾಸಿಮಯ್ಯ ಮೊದಲಾದ ಶರಣರಿಗೆ ಒಲಿದ ಶಿವನು ತನಗೂ ಒಲಿಯು ತ್ತಾನೆಂಬ ಭರವಸೆ ಅವರಲ್ಲಿತ್ತು. ಅದಕ್ಕೆ ನಿಷ್ಠೆ ಬೇಕು. ದೇಹ ಮನಸ್ಸು, ಸರ್ವೇಂದ್ರಿಯ ಗಳನ್ನು ಶಿವನಿಗೆ ಅರ್ಪಿಸಿದರೆ, ಅವನು ತನ್ನನ್ನೇ ನಮಗೆ ಅರ್ಪಿಸುತ್ತಾನೆ ಎಂದು ಬಸವಣ್ಣನವರು ಈ ಮೇಲಿನ ವಚನದಲ್ಲಿ ವ್ಯಕ್ತಪಡಿಸಿದ್ದಾರೆ.

ಹೀಗೆ ಮೊದಲಾದ ವಚನಗಳಲ್ಲಿ ಬಸವಣ್ಣನವರು ಅನುಭವ ಮಂಟಪದಲ್ಲಿ ಅನೇಕ ಶರಣರ ಸನ್ನಿಧಿಯಲ್ಲಿ, ದೇವರ ದಾಸಿಮಯ್ಯನವರನ್ನು ಕೊಂಡಾಡಿದ್ದು, ಸ್ಮರಿಸಿದ್ದು ಹಾಗೂ ಅವರ ಜೀವನ ವೃತ್ತಾಂತವನ್ನು ತಮ್ಮ ವಚನಗಳಲ್ಲಿ ವ್ಯಕ್ತಪಡಿಸಿದ್ದು ಗಮನಾರ್ಹವಾಗಿದೆ. ಹಾಗೇಯೆ ಸಿದ್ಧರಾಮ, ಅಕ್ಕಮಹಾದೇವಿ, ಕೋಲಶಾಂತಯ್ಯ, ಮೊದಲಾದ ಶರಣರು ದೇವರ ದಾಸಿಮಯ್ಯನವರನ್ನು ಕುರಿತು ತಮ್ಮ ವಚನಗಳಲ್ಲಿ ಸ್ಮರಿಸಿದ್ದನ್ನು ಈ ಕೆಳಗಿನಂತೆ ಕಾಣಬಹುದು.

ಸಿದ್ಧರಾಮ ಶಿವಯೋಗಿಗಳ ವಚನ–

ಕುಂಬಾರರೆಲ್ಲರೂ ಗುಂಡಯ್ಯನಾಗಬಲ್ಲರೇ?
ಮಡಿವಾಳರೆಲ್ಲರೂ ಮಾಚಯ್ಯನಾಗಬಲ್ಲರೆ?
ನೆಯ್ಯ ಬಲ್ಲವರೆಲ್ಲರೂ ದಾಸಿಮಯ್ಯನಾಗಬಲ್ಲರೇ?

ಎನ್ನ ಗುರುವೆ ಕಪಿಲಸಿದ್ಧ ಮಲ್ಲೇಶ್ವರಯ್ಯ
ಪ್ರಾಣಿಗಳ ಕೊಂದು ಪರಿಹರಿಸಬಲ್ಲರೂ
ತೆಲಗು ಜೊಮ್ಮಯ್ಯನಾಗಬಲ್ಲರೆ?[129]

ಅಕ್ಕಮಹಾದೇವಿಯ ವಚನ–

ಅನಿಮಿಷನಲ್ಲಮಯ್ಯ ಮರುಳುಶಂಕರಯ್ಯ
ಕೋಲಶಾಂತಯ್ಯ ಮಾದಾರಧೂಳಯ್ಯ
ಮಿಂಡಮಲ್ಲಿನಾಥ ಚೆನ್ನಬಸವಣ್ಣ
ಚೇರಮರಾಯ, ತೆಲಗು ಜೊಮ್ಮಣ್ಣ, ಕಿನ್ನರಿಯ್ಯ
ಹಲಾಯುಧ, ದಾಸಿಮಯ್ಯ, ಭಂಡಾರಿ ಬಸವರಾಜ ಮುಖ್ಯವಾದ
ಚೆನ್ನಮಲ್ಲಿಕಾರ್ಜುನನ ಶರಣರಿಗೆ ನಮೋ ನಮೋ ಎಂಬೆನು.[130]

ಕೋಲಶಾಂತಯ್ಯನವರ ವಚನ–

ಎನಗುಣಲಿಕ್ಕಿದರಯ್ಯಾ ಸಿರಿಯಾಳ–ಚಂಗಳೆಯರು,
ಎನಗುಡಕೊಟ್ಟರಯ್ಯಾ ದಾಸ–ದುಗ್ಗಳೆಯರು,
ಎನ್ನ ಮುದ್ದಾಡಿಸಿದರಯ್ಯಾ ಅಕ್ಕನಾಗಮ್ಮನವರು,
ಎನ್ನ ಸಲಹಿದರಯ್ಯಾ ಅಮ್ಮವ್ವೆ ಕೊಡಗೂಸು,
ಚೊಳಿಯಕ್ಕ ನಿಂಬವ್ವೆ, ನೀಲಮ್ಮ ಮಹಾದೇವಿ ಮುಕ್ತಾಯಕ್ಕಗಳು
ಇಂತಿವರ ಒಕ್ಕುಮಿಕ್ಕ ತಾಂಬೂಲ ಪ್ರಸಾದವ ಕೊಂಡು ಬದುಕಿದೆನಯ್ಯಾ,
ಪುಣ್ಯಾರಣ್ಯದಹನ ಭೀಮೇಶ್ವರಲಿಂಗ ನಿರಂಗಸಂಗ.[131]

ಚಂದಿಮರಸರ ವಚನ–

ದಾಸಿಮಯ್ಯನೆನೆಗೆ ಸಾಲೋಕ್ಯನಯ್ಯಾ, ಚೆನ್ನಯ್ಯನೆನೆಗೆ ಸಾಮಿಪ್ಯನಯ್ಯಾ,
ಕಕ್ಕಯ್ಯನೆನೆಗೆ ಸಾರೂಪ್ಯನಯ್ಯಾ, ಮಾಚಯ್ಯನೆನೆಗೆ ಸಾಯುಜ್ಯನಯ್ಯಾ,
ದಾಸಯ್ಯನೊಕ್ಕುದ ಕೊಂಡೆನು, ಚೆನ್ನಯ್ಯನ ಮಿಕ್ಕುದ ಕೊಂಡೆನು,
ಕಕ್ಕಯ್ಯನುಂಡು ಮಿಕ್ಕುದ ಕಾದು ಕೊಂಡೆನು,
ಮಾಚಯ್ಯನ ಜ್ಞಾನ ಪ್ರಸಾದವ ಕೊಂಡೆನು,
ಪುರಾತನರೊಳಗಾಗಿ ಬಸವಣ್ಣಡಿಂಗರಿಗ,
ಚನ್ನಬಸವಣ್ಣನ ಹಳೆಯನೆಂದು
ತಮ್ಮೊಕ್ಕುದನಿಕ್ಕಿ ಸಲಹಿದರು ಕಾಣಾ ಸಿಮ್ಮಲಿಗೆಯ ಚನ್ನರಾಮ.[132]

ಸತ್ಯಕ್ಕಳ ವಚನ–

ವಿಶ್ವಾಸದಿಂದ ನಂಬಿದರಯ್ಯಾ ಭಿಲ್ಲಮರಾಯನವರು,
ವಿಶ್ವಾಸದಿಂದ ನಂಬಿದರಯ್ಯಾ ಗೊಲ್ಲಾಳರಾಯನವರು,

ವಿಶ್ವಾಸದಿಂದ ನಂಬಿದರಯ್ಯಾ ಕೆಂಭಾವಿಯ ಬೋಗಣ್ಣ,
ವಿಶ್ವಾಸದಿಂದ ನಂಬಿದರಯ್ಯಾ ಬಳ್ಳೇಶ್ವರ ಮಲ್ಲಯ್ಯಗಳು,
ವಿಶ್ವಾಸದಿಂದ ನಂಬಿದರಯ್ಯಾ ಸಾಮವೇದಿಗಳು,
ವಿಶ್ವಾಸದಿಂದ ನಂಬಿದರಯ್ಯಾ ದಾಸದುಗ್ಗಳೆಯರು,
ವಿಶ್ವಾಸದಿಂದ ನಂಬಿದರಯ್ಯಾ ಸಿಂಧುಬಲ್ಲಾಳರು,
ವಿಶ್ವಾಸದಿಂದ ನಂಬಿದರಯ್ಯಾ ಬಿಬ್ಬಿ ಬಾಚಯ್ಯಗಳು,
ವಿಶ್ವಾಸದಿಂದ ನಂಬಿದರಯ್ಯಾ ಮರುಳ ಶಂಕರದೇವರು,
ಇಂತಿಪ್ಪ ವಿಶ್ವಾಗಳ ಶ್ರೀ ಪಾದಕ್ಕೆ ನಮೋ ನಮೋ ಎನ್ನುತಿರ್ದೆನಯ್ಯ ಶಂಭುಜಕ್ಕೇಶ್ವರಾ.

ಹಿರಿಯತನಕ್ಕೆ ಪಥವೆ ಬಾಣನ ಮನೆಯ ಬಾಗಿಲ ಕಾಯ್ವದು?
ಮಹಂತತನಕ್ಕೆ ಪಥವೆ ನಂಬಿದ ಕುಂಟಣಿಯಾದದ್ದು?
ಕರುಣಿತಣಕ್ಕೆ ಪಥವೆ ಸಿರಿಯಾಳನ ಮಗನ ಕೊಲ್ಲುವುದು?
ದಾನತನಕ್ಕೆ ಪಥವೆ ದಾಸನ ವಸ್ತ್ರವ ಸೀಳುವುದು?
ನಿಮ್ಮ ಹಿರಿತನಕ್ಕಿದು ಪಥವೆ ಬಲ್ಲಾಳನ ವಧುವ ಬೇಡುವುದು?
ನಿಮ್ಮ ಗುರುತಕ್ಕಿದು ಪಥವೆ ನಾರಿಯರಿಬ್ಬರೊಡನೆ ಇಪ್ಪುದು?
ಶಿವಾಶಿವಾ ನಿಮ್ಮ ನಡವಳಿ ಶಂಭುಜಕ್ಕೇಶ್ವರಾ ಅಲ್ಲದಿರ್ದಡೇಕೆ
ಶ್ರುತಿಗಳ ಕೈಯಿಂದ ತತ್ತಲೆನಿಸಿಕೊಂಬೆ?[133]

ಕಡಕೊಳದ ಶ್ರೀ ಮಡಿವಾಳೇಶ್ವರರ ಗೀತ ವಚನ–[134]

ಜೇಡರ ದಾಸ ದೇವರ ದಾಸ ಮುದನೂರ ವಾಸ।
ಈಶ ಧರ್ಮ ಪ್ರಕಾಶ ಶಿವಶರಣ ಅವಿನಾಶ। ।ಪ॥

ಸತ್ವ ರಜೋ ತಮ ಮೂರು ಬಣ್ಣ
ಹತ್ತಿದಾ ಸೀಳು ತಂದಿದ್ದನಣ್ಣಾ।
ಮತ್ತೆ ಸಪ್ತ ವ್ಯಸನ ಹಂಜಿಯ ಕಗ್ಗಂಟ
ಕತ್ತರಿಸಿ ತಾನು ಬಿಟ್ಟಿದ್ದನಣ್ಣ ॥1॥

ಚಿತ್ತ ಮನ ಬುದ್ಧಿ ಅಹಂಕಾರ ಕರಣ
ಚತುಷ್ಟಿ ಎಂಬ ಗೂಟ ನೆಟ್ಟಿದನಣ್ಣ।
ಮತ್ತಾರು ವರ್ಣವ ಹರಿ ಮಗ್ಗವಣ್ಣ
ಸುತ್ತಿ ಸುತ್ತಿ ಲಾಳಿ ಬಗೆದಿದ್ದನಣ್ಣ ॥2॥

ಮುದದಿ ನವನಾಡಿಯೊಳೆರಡು ಕಂಬಿಯಣ್ಣ
ಹದಿನೆಂಟು ಪರಕಿಯ ತಿರುವಿದ್ದನಣ್ಣ।
ಬದಿಯೋಳೋಡವ ವಿಷಯ ಎಳೆಗಳಣ್ಣ
ಹದವರಿತು ಬಿಗಿ ಕಟ್ಟಿದ್ದನಣ್ಣ ॥3॥

ಮುನ್ನ ಮೂವತ್ತಾರು ಶಿವತತ್ತ್ವಗಳ ಮತ್ತೆ ಅಣ್ಣ
ಇನ್ನೂರು ಹದಿನಾರು ಕೀಲಂಗಳಣ್ಣ।
ಚೆನ್ನಾಗಿ ಸಾಧಿಸಿ ನೂರೊಂದು ಸ್ಥಲಗಳ
ಉನ್ನತದಾ ಅಣೆಯ ಕೆತ್ತಿದ್ದನಣ್ಣ ॥4॥

ತನುಮನ ಧನವು ಗುರು ಲಿಂಗ ಚರಕಣ್ಣ
ವಿನಯದೊಳೊಪ್ಪಿಸಿ ವಿರುತಿರ್ದ್ದನಣ್ಣ।
ಚಿನುಮಯ ಶಿವಪ್ರಸಾದ ಮಸವಿದುಂಡು
ಘನಲಿಂಗ ಭಕ್ತಿಯ ಮೆರೆದಿದ್ದನಣ್ಣ ॥5॥

ರಂಜನದಿಂದ ಜಂಗಮ ಜನರಿಗೆ
ಗಂಜಿಯ ದಾಸೋಹ ನಡೆಸಿದಣ್ಣ।
ಬಂಜರ ಬಂಡು ಮಾಯಾ ಪಾಶವು ಹರಿವ
ಹಂಚಿ ಕಾಯಕದಿ ನಡೆಸಿದೆನಣ್ಣ ॥6॥

ನಾನೆಂಬ ಅಹಂಕಾರ ಅಳಿದುಳಿದು ಸಮ್ಯಗ್
ಜ್ಞಾನದ ರೂಪಾಗಿ ಬಾಳಿದನಣ್ಣ।
ಜ್ಞಾನ ಪೂರ್ಣ ಜ್ಯೋತಿ ಮಹಾಂತೇಶ್ವರನ
ಸಾನುರಾಗದ ಪಾದ ನಂಬಿದನಣ್ಣ। ।7॥

3.20 ವಚನ ಚಳುವಳಿಯಲ್ಲಿ ದೇವರ ದಾಸಿಮಯ್ಯನವರ ಪಾತ್ರ

ಕರ್ನಾಟಕವು ಅನೇಕ ಧರ್ಮಗಳ ರಂಗಭೂಮಿಯಾಗಿದೆ. ಒಂದು ಕಡೆ ಉಪನಿಷತ್ತುಗಳು ಹಾಕಿಕೊಟ್ಟ ಉದಾತ್ತ ಆದರ್ಶಗಳು ಮಸಳಿಸಿ ವೈದಿಕ ಧರ್ಮ ಹರಿದು ಹಂಚಿಹೋಗಿತ್ತು. ಧರ್ಮ ಕೇವಲ ಉತ್ತಮರೆನಿಸಿಕೊಂಡ ಸ್ವಾರ್ಥಸಾಧಕರ ಕೈವಾಡವಾಗಿತ್ತು. ವೇದವನ್ನು ಓದುವ ಕೇಳುವ ಹಕ್ಕು ಜನಸಾಮಾನ್ಯರಿಗೆ ಇರಲಿಲ್ಲ. ಮೇಲು ವರ್ಗದವರ ಸೇವೆಯನ್ನು ಮಾಡುವುದೊಂದೇ ಅವರ ಧರ್ಮವಾಗಿತ್ತು. ಯಜ್ಞ ಯಾಗಾದಿ ಹಿಂಸಾಮೂಲ ಕರ್ಮಗಳು ಅರ್ಥರಹಿತವಾದ ಆಡಂಬರಗಳು ಪ್ರಮುಖ ಸ್ಥಾನ ಪಡೆದಿದ್ದವು. ತನ್ಮೂಲಕ ಧರ್ಮದ ಹೆಸರಿನಲ್ಲಿ ಜನತೆಯ ಶೋಷಣೆ ನಿರಾತಂಕವಾಗಿ ಸಾಗಿತ್ತು. ಇವುಗಳನ್ನು ಎದುರಿಸಿ ಪ್ರತಿಭಟಿಸಿ ಜೈನ ಬೌದ್ಧ ಧರ್ಮಗಳೂ ತಮ್ಮ ಅಸ್ತಿತ್ವದ ಅಳಿವು ಉಳಿವಿನ ಮಧ್ಯ ಸೆಣಸಾಡುತ್ತಿದ್ದವು. ಕಾಳಾಮುಖ, ಪಾಶುಪಥ ಮೊದಲಾದ ಶೈವಧರ್ಮದ ಉಗ್ರಪಂಥಗಳ ಅಟ್ಟಹಾಸ ಮಿತಿಮೀರಿತ್ತು. ಇವುಗಳ ಮಧ್ಯೆ ಉನ್ಮತ್ತ ಸಲಗಗಳ ನಡುವೆ ಸಿಲುಕಿದ ಶಿಶುವಿನಂತೆ ಪರಿಹಾರಗಾಣದೆ ಪರಿತಪಿಸುತ್ತಿದ್ದ ಜನತೆ ಕಂಗಾಲಾಗಿತ್ತು ಎಲ್ಲವೂ ನಮ್ಮ ಹಿಂದಿನ ಕರ್ಮ ನಮ್ಮ ಕೈಯಲ್ಲೇನಿದೇ ಎಂಬ ನಿರಾಶಾವಾದ ಒಂದು ಕಡೆ, ಇನ್ನೊಂದು ಕಡೆ ಅವರವರ ಕರ್ಮಗಳಿಗನುಸಾರವಾಗಿ ಮನುಷ್ಯನ ಪಾಲಿಗೆ ಬಂದುದನ್ನು ಅನುಭವಿಸಲೇಬೇಕು ಎಂಬ ಕರ್ಮವಾದದ

ಹೆಸರಿನಲ್ಲಿ ನೂರಾರು ಅಂಧಶ್ರದ್ಧೆಗಳು ಮನೆ ಮಾಡಿಕೊಂಡಿದ್ದವು. ಜ್ಯೋತಿಷ, ಶಕುನ, ತಿಥಿ, ವಾರ, ನಕ್ಷತ್ರ ಎಂಬುದಾಗಿ ಹೆಜ್ಜೆ ಹೆಜ್ಜೆಗೂ ಕ್ಷುಲ್ಲಕ ವಿಷಯಗಳಿಗಾಗಿ ಜನ ಮೊರೆಹೋಗಿದ್ದರು. ನೂರಾರು ಕ್ಷುದ್ರ ಶಕ್ತಿಗಳ ಉಪಾಸನೆ ಪ್ರಾಣಿಬಲಿ ನಿರಾತಂಕವಾಗಿ ಸಾಗಿತ್ತು. ಮಾಯೆ, ಮಂತ್ರ, ಮಾಟ ತಂತ್ರಗಳಲ್ಲಿ ಅಪಾರ ನಂಬಿಕೆ ಜನಮನದಲ್ಲಿ ಮೂಡಿತ್ತು. ವರ್ಣ ವ್ಯವಸ್ಥೆಯಲ್ಲಿ ಬ್ಯಾಹ್ಮಣರಿಗೆ ಮತ್ತು ಕ್ಷತ್ರಿಯರಿಗೆ ಹೆಚ್ಚು ಅನುಕೂಲ, ಅಧಿಕಾರ ಹಾಗೂ ಸಾಮಾಜಿಕ ಅವಕಾಶಗಳು ದೊರೆಯುತ್ತಿದ್ದವು. ವಿದ್ಯಾಭ್ಯಾಸ ಬ್ರಾಹ್ಮಣರ ಕೈವಶವಾಗಿತ್ತು. ತಾವು ಕೈಕೊಂಡ ವೃತ್ತಿಯಿಂದಲೇ ತಮ್ಮ ತಮ್ಮಲಿಯೇ ಮೇಲು ಕೀಳೆಂಬ ಭಾವನೆಗಳು ಉಂಟಾಗಿ ಜೀವನ ನಶ್ವರ, ಮಾಯೆ ಎನ್ನುವ ಮಿಥ್ಯವಾದ, ಕಾಣದ ಸ್ವರ್ಗಪ್ರಾಪ್ತಿ ಅದಕ್ಕಾಗಿ ಬೆಟ್ಟ ಗುಹೆಗಳನ್ನು ಹೊಕ್ಕು ಜಪ, ತಪ, ಮೋಕ್ಷ ಹೀಗೆ ಧರ್ಮದ ಹೆಸರಿನಲ್ಲಿ ನಡೆಯುತ್ತಿದ್ದ ಬೀಭತ್ಸಕರ ಮತಾಚಾರಗಳಿಂದಾಗಿ ಜನತೆಯಲ್ಲಿ ಅಸಂತುಷ್ಟಿ, ಭಯವಿಹ್ವಲತೆಗಳು ಮೂಡಿದ್ದವು. ಇಂಥ ಅಮಾಯಕ ಪರಿಸ್ಥಿತಿಯಲ್ಲಿ ಜನಿಸಿದ ದೇವರ ದಾಸಿಮಯ್ಯನವರು ತಾವು ಪ್ರತ್ಯಕ್ಷ ಕಂಡ ದೃಶ್ಯವನ್ನು ವಚನಗಳ ಮೂಲಕ ವ್ಯಕ್ಯಪಡಿಸಿದ್ದಾರೆ.

ಉದಾಹರಣೆಗೆ–

ಮಂಡೆಯ ಬೊಳಿಸಿಕೊಂಡು
ಮಡಿದು ಗೋಸಿಯ ಕಟ್ಟಿದಡೇನು?
ಕಂಡಕಂಡವರಿಗೆ ಕಯ್ಯೊಡ್ಡಿ ಬೇಡುವ
ಭಂಡರನೊಲ್ಲನೆಮ್ಮ ರಾಮನಾಥ.[135]

ಮುಂಡೆಗೆ ಮುಡಿಕಟ್ಟೇಕೋ?
ಗುಂಡಂಗೇಕೊ ಗುರುಪದ ಭಕ್ತಿ?
ಚಂಡಿಕೆಯ ತಲೆಯ ಚಾಂಡಾಲಂಗೆ
ಅಖಂಡಿತ ಲಿಂಗದ ಅನುವೇಕೆ? ಹೇಳ! ರಾಮನಾಥ?[136]

ಕನ್ನಡ ಸಾಹಿತ್ಯಕ್ಷೇತ್ರದಲ್ಲಿ ವಚನಸಾಹಿತ್ಯಕ್ಕೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಸಂಸ್ಕೃತ ಮುಖಿಯಾಗಿದ್ದ ಕನ್ನಡ ಸಾಹಿತ್ಯವನ್ನು ಸಾಮಾನ್ಯ ಜನತೆಗೆ ತಿಳಿಯುವಂತೆ ಆಡುನುಡಿಯಲ್ಲಿ ರಚಿಸಿದ್ದರಿಂದ ವಚನಸಾಹಿತ್ಯ ಇಂದಿಗೂ ಪ್ರಸ್ತುತವಾಗಿದೆ. ಸರ್ವರ ಚಿಂತನೆ–ಆಲೋಚನೆಗಳಿಗೆ ಮಹತ್ವಕೊಟ್ಟು ಈ ವಚನಸಾಹಿತ್ಯವು ಒಂದು ಚಳುವಳಿಯಾಗಿ ಪರಿಣಮಿಸಿದೆ. ಈ ವಚನ ಚಳುವಳಿಯು ತನ್ನ ಔನ್ನತ್ಯದ ಕಾಲದಲ್ಲಿ ಅತ್ಯಂತ ಸಾಮಾನ್ಯರಿಗೆ ದೀನದಲಿತರಲ್ಲೆ ಕ್ರಾಂತಿ ಉಂಟು ಮಾಡಿದೆ. ಆತ್ಮಗೌರವ, ಆತ್ಮವಿಶ್ವಾಸ, ಊರ ಹೊರಗೆ ವಾಸ ಮಾಡಬೇಕಾದ ಜನ ಊರಲ್ಲೆ ತಲೆ ಎತ್ತಿ ಓಡಾಡುವಂತೆ ಆದದ್ದು ಸಾಮಾನ್ಯ ವಿಷಯವೇನಲ್ಲ. ನೂರಾರು ವರ್ಷಗಳ ಕಾಲ

ಕತ್ತಲೆಯಲ್ಲಿ ಜೀವಿಸಿದ್ದ ಜನರು ಬೆಳಕನ್ನು ಕಂಡಾಗ ಕಣ್ಣು ಮುಚ್ಚುವುದು ಸ್ವಾಭಾವಿಕ. ಆದರೆ ಅಂತಹ ಜನರು ಕಣ್ಣು ತೆರೆಯುವಂತೆ ಮಾಡಿದ ಯಶಸ್ಸು ದೇವರ ದಾಸಿಮಯ್ಯನವರಿಗೆ ಸಲ್ಲುತ್ತದೆ.

ಮಡದಿಯ ಪ್ರಾಣಕ್ಕೆ ಮೊಲೆ ಮುಡಿ ಇದ್ದಿತ್ತೆ?
ಒಡೆಯನ ಪ್ರಾಣಕ್ಕೆ ಇದ್ದಿತ್ತೆ ಯಜ್ಞೋಪವೀತ?
ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೆ ಹಿಡಿಗೋಲ?
ನೀ ತೊಡಕಿಕ್ಕಿದ ತೊಡಕನೀ ಲೋಕದ ಜಡರೆತ್ತ ಬಲ್ಲರೈ ರಾಮನಾಥ.[137]

ಧರ್ಮದ ಮುಖಾಂತರ ಮಾನವೀಯ ಸಂದೇಶಗಳನ್ನು ಬೀರುವುದು ವಚನಕಾರರ ಪ್ರಮುಖ ಉದ್ದೇಶಗಳಲ್ಲೊಂದು. ದಲಿತರು, ಶೋಷಿತರು, ಕೆಳವರ್ಗದವರು ಮೊದಲ ಬಾರಿಗೆ ಸಾಹಿತ್ಯದ ಮುಖಾಂತರ ಮಾತನಾಡಿದ್ದು ಇದೇ ಸಂದರ್ಭದಲ್ಲಿ. ಉದಾಹರಣೆಗೆ–

ಹೊಲೆಯರ ಬಾವಿಯಲ್ಲೊಂದು ಎಲು ನಟ್ಟಿದ್ದಡೆ
ಹೊಲೆಯೆಂಬುದು ಲೋಕವೆಲ್ಲ
ಹಲವೆಲುವಿದ್ದ ಬಾಯಿ ಒಲವರವ ನುಡಿದಡೆ
ಹೊಲೆಯರ ಬಾವಿಯಿಂದ ಕರಕಷ್ಟ ಕಾಣಾ! ರಾಮನಾಥ.[138]

ಅರಮನೆಗಳಿಂದ ಹೊರಬಂದು, ರಾಜಾಶ್ರಯದಿಂದ ದೂರವಾಗಿ, ಪಂಡಿತರ ಕಪಿಮುಷ್ಟಿಯಿಂದ ಪಾರಾಗಿ ಬಂದ ಕನ್ನಡಸಾಹಿತ್ಯ ಸಹಜವಾಗಿ ಉಸಿರಾಡಿದ್ದು, ನೆಲದ ಮಾತಿನಲ್ಲಿ ನಳನಳಿಸಿದ್ದು ವಚನಕಾರರಿಂದ ಮಾತ್ರ. ಅದನ್ನು ಮೊಟ್ಟ ಮೊದಲು ಕೈಗೆತ್ತಿಕೊಂಡವರು ದೇವರ ದಾಸಿಮಯ್ಯನವರು. ದೀನರಾಗಿ ಜೀವಿಸುತ್ತಿದ್ದವರು ತಮ್ಮ ಕೀಳರಿಮೆಯನ್ನು ಹೊಡೆದೋಡಿಸಿ, ಆತ್ಮ ವಿಶ್ವಾಸವನ್ನು ಮೂಡಿಸಿದ ರೀತಿಯು ಅನ್ಯಾದೃಶವಾಗಿದೆ. ಉದಾಹರಣೆಗೆ–

ಕೀಳು ಡೋಹರ ಕಕ್ಕ, ಕೀಳು ಮಾದರ ಚೆನ್ನ
ಕೀಳು ಓಹಿಲದೇವ, ಕೀಳು ಉದ್ಭಟಯ್ಯ
ಕೀಳಿಂಗಲ್ಲದೆ ಹಯನ ಕರೆಯದು ಕಾಣಾ! ರಾಮನಾಥ.[139]

ಈವರೆಗೆ ತಮಗೆ ನಿಷಿದ್ಧವೆಂದು ಪರಿಗಣಿಸಲ್ಪಟ್ಟ ಕ್ಷೇತ್ರಗಳಲ್ಲಿ ಕೂಡಾ ಸಮಾಜದ ಕೆಳಸ್ತರದ ಜನಸಮುದಾಯಕ್ಕೆ ಕ್ರಿಯಾಶೀಲರನ್ನಾಗಿ ಎತ್ತಿ ಹಿಡಿದು ಜಗತ್ತಿಗೆ ತೋರಿಸಿದ ಧೀಮಂತ ವ್ಯಕ್ತಿತ್ವ ದೇವರ ದಾಸಿಮಯ್ಯನವರದು. ಇದು ಎಲ್ಲ ಕಾಲದ ಸಂಘಟನೆಗಳಿಗೆ ಆದರ್ಶವೆನಿಸುವಂತಿದೆ. ಈ ದೃಷ್ಟಿಯಿಂದ ವಚನ ಚಳುವಳಿಯು ನಮ್ಮ ದೇಶದ ಮೊಟ್ಟ ಮೊದಲನೆಯ ಜನತಾ ಚಳುವಳಿಯೂ ಸಾಹಿತ್ಯ ಚಳುವಳಿಯೂ ಆಗಿದೆ. ಹೀಗೆ ಇಡೀ ಸಾಹಿತ್ಯ ಚರಿತ್ರೆಯಲ್ಲಿಯೇ ಅತ್ಯಂತ ಸಮೃದ್ಧಿಯಿಂದ ಮೆರೆದದ್ದು ವಚನ

ಚಳುವಳಿಯದಾಗಿದೆ. ಇದರ ಕೀರ್ತಿ, ಗೌರವಗಳು ದೇವರ ದಾಸಿಮಯ್ಯನವರಿಗೆ ಸಂದಿವೆ.

3.21 ವಚನ ಸಾಹಿತ್ಯದ ಸಾರ್ವಭೌಮ ದೇವರ ದಾಸಿಮಯ್ಯನವರು

ದೇವರ ದಾಸಿಮಯ್ಯನವರದು ಬಹುಮುಖ ವ್ಯಕ್ತಿತ್ವ. ಅಧ್ಯಾತ್ಮಿಕವಾಗಿ ಅತ್ಯಂತ ಎತ್ತರವಾಗಿದ್ದ ಮಹಾನ್ ಶರಣರು. ಜೊತೆಗೆ ನೆಲಮಟ್ಟದ ಚಿಂತನೆಯು ಪರಿವರ್ತನೆ, ವೈಚಾರಿಕತೆಯ ಮಹತ್ವವನ್ನು ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರಿಗೂ ತಿಳಿಸಿಕೊಟ್ಟ ಮಹಾಚೇತನರು.

ಬಸವಾದಿ ಶರಣರ ವಚನಗಳಿಂದ, ಕನ್ನಡದ ಅನೇಕ ಕವಿಗಳು ರಚಿಸಿದ ಸಾಹಿತ್ಯದಿಂದ ಶಿಲಾಶಾಸನಗಳಿಂದ, ಅವುಗಳಲ್ಲದೆ, ದಾಸಿಮಯ್ಯನವರೇ ರಚಿಸಿದ ವಚನಗಳಿಂದಲೂ ದಾಸಿಮಯ್ಯನವರ ಬದುಕು–ಬರಹ ಅರಿಯಬೇಕಾದ ಅನಿವಾರ್ಯತೆ ಇದೆ.

ಭಕ್ತಿ ಎಂತಹದಯ್ಯ? ದಾಸಯ್ಯ ಮಾಡಿದಂತಹದು"
ಭಕ್ತಿಯಿಲ್ಲದ ಬಡವ ನಾನಯ್ಯ.....
ದಾಸಯ್ಯನ ಮನೆಯಲೂ ಬೇಡಿದೆ.[140]

ಭಕ್ತಿ ಭಂಡಾರಿ ಬಸವಣ್ಣನವರು ದೇವರ ದಾಸಿಮಯ್ಯನವರನ್ನು ಕುರಿತು ಹಲವಾರು ವಚನಗಳಲ್ಲಿ ಮುಕ್ತಕಂಠದಿಂದ ಹೊಗಳಿದ್ದನ್ನು ನೋಡಿದರೆ ಇವರ ಪ್ರಭಾವವು ಬಸವಾದಿ ಪ್ರಮಥರ ಮೇಲೆ ಬೀರಿರುವುದನ್ನು ಸಾಕಷ್ಟು ಕಾಣುತ್ತೇವೆ.

ಶರಣ ಸಂಪ್ರದಾಯಕ್ಕೆ ಹುಟ್ಟು ಹಾಕಿ, ವಚನಸಾಹಿತ್ಯದ ಮೂಲಕ ಧರ್ಮೋಪದೇಶಕ್ಕೆ ವ್ಯವಸ್ಥಿತವಾದ ಭದ್ರಬುನಾದಿಯನ್ನು ಹಾಕಿ, ಸಾಧನೆಯ ಮಾರ್ಗ ತೋರಿಸಿಕೊಟ್ಟವರು ದೇವರ ದಾಸಿಮಯ್ಯನವರು. ವಚನಕಾರರಿಗೆ ಅಥವಾ ಬಸವಾದಿ ಪ್ರಮಥರಿಗೆ ಭಕ್ತಿ, ಜ್ಞಾನ, ವಿರತಿಗಳಿಂದ ಮಾರ್ಗ ತೋರಿದ ಕೈದೀವಿಗೆಯಾದರು.

ಕರ್ನಾಟಕ ಮಾತ್ರವಲ್ಲದೆ ಗಡಿನಾಡಿನವರೆಗೂ ಸಂಚರಿಸಿ, ಜಾತಿ, ಮತ, ಕುಲವೆನ್ನದೆ ಎಲ್ಲರನ್ನು ಪ್ರೀತಿಸುವ ಹೃದಯಶ್ರೀಮಂತಿಕೆ ಇವರದಾಗಿತ್ತು. ಮನುಷ್ಯಮಾತ್ರರಿಂದ ಸಾಧ್ಯವಾಗದ ಅನೇಕ ಮಹತ್ಕಾರ್ಯಗಳನ್ನು ಮಾಡಿರುವುದರಿಂದ ಇವರನ್ನು ಮಾನವಶರೀರ ತೊಟ್ಟಿರುವ ಮಾಧವ ಎಂದೇ ಹೇಳಬೇಕು.

ದಾನ–ಧರ್ಮ, ಪರೋಪಕಾರಗಳಂತಹ ಉದಾರಹೃದಯ ಹೊಂದಿರುವ ಇವರು ತಮ್ಮದೆಲ್ಲವನ್ನು ಸಮಾಜೋದ್ಧಾರಕ್ಕಾಗಿ ಉಪಯೋಗಿಸುತ್ತ ಇದೆಲ್ಲವೂ ಭಗವಂತನ ದಾನವೆಂದು ಈ ಕೆಳಗಿನ ವಚನಗಳಲ್ಲಿ ಸ್ತುತಿಸಿದ್ದಾರೆ.

ಇಳೆ ನಿಮ್ಮ ದಾನ ಬೆಳೆ ನಿಮ್ಮ ದಾನ
ಸುಳಿದು ಬೀಸುವ ವಾಯು ನಿಮ್ಮ ದಾನ.....
ಎತ್ತು ನಿಮ್ಮ ದಾನ, ಬಿತ್ತು ನಿಮ್ಮ ದಾನ
ಸುತ್ತಿ ಹರಿವ ಸಾಗರವೆಲ್ಲ ನಿಮ್ಮದಾನ.....
ಕಾಯ ನಿಮ್ಮ ದಾನ, ಜೀವ ನಿಮ್ಮ ದಾನ.....[141]

ಭರತಖಂಡದ ವೈದಿಕ, ಅವೈದಿಕ, ದ್ವೈತ, ಅದ್ವೈತ ಮೊದಲಾದ ಮತಗಳು ಒಪ್ಪಿಕೊಳ್ಳುವ ವಿಷಯಗಳನ್ನು ತಮ್ಮ ಅನುಭವದ ವಚನಗಳ ಮೂಲಕ ಮೇಳೈಸಿ ತೋರಿಸಿದವರೆಂದರೆ. ದಾಸಿಮಯ್ಯನವರು. ಇವರು ವಾದಗ್ರಸ್ತ ವಿಷಯಗಳನ್ನು ತಮ್ಮ ಅನುಭವದಿಂದ ತತ್ವನಿಶ್ಚಯ ಮಾಡಿ ಜನರಿಗೆ ತಿಳಿಸಿ ವಾದವನ್ನು ನಿರ್ವಿವಾದಗೊಳಿಸಿ ತತ್ವಜ್ಞಾನಿಯಾದರು. ಉದಾಹರಣೆಗೆ :– ಯುವರಿಬ್ಬರು ಮಾಡಿದ ಗೃಹಸ್ಥಾಶ್ರಮ ಉತ್ತಮವೋ? ಅಥವಾ ಸಂನ್ಯಾಸಾಶ್ರಮ ಉತ್ತಮವೋ? ಎಂಬ ವಾದವು, ಜೈನರ ಜೊತೆಗೆ ಮಾಡಿದ ಶೈವಧರ್ಮ ಶ್ರೇಷ್ಟವೋ? ಜೈನಧರ್ಮವೋ? ಎಂಬಲ್ಲಿ ಮಾಡಿದ ಪರಿಹಾರವು ಜನಮನದ ಕಣ್ಣಿಗೆ ಕಟ್ಟಿದ ಹಾಗೆ ಮಾಡಿ ಕೀರ್ತಿವಂತರಾಗಿದ್ದಾರೆ.

ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ
ಸತಿಪತಿಗಳೊಂದಾಗದವನ ಭಕ್ತಿ
ಅಮೃತದೊಳು ವಿಷ ಬೆರೆದಂತೆ ಕಾಣಾ! ರಾಮನಾಥ.

ಹೊಲಬನರಿಯದ ಗುರು, ಸುಲಭನಲ್ಲದ ಶಿಷ್ಯ
ಕೆಲಬಲನ ನೋಡದುಪದೇಶ
ಅಂಧಕನ ಲಾಭ ಹೊಕ್ಕಂತೆ ಕಾಣಾ! ರಾಮನಾಥ.[142]

ಈ ರೀತಿಯಾಗಿ ದೇವರ ದಾಸಿಮಯ್ಯನವರು ಮರ್ತ್ಯಲೋಕದಲ್ಲಿ ಮಾಡಬೇಕಾದ ಕಾರ್ಯವನ್ನು ಪೂರೈಸಿ ಬಸವಾದಿ ಪ್ರಮಥರಿಗೆ ದಾರಿದೀಪರಾಗಿದ್ದಾರೆ. ಇವರ ವಚನಗಳಲ್ಲಿ ತತ್ವ, ವಿಮರ್ಶೆ, ವಿಡಂಬನೆ, ಸ್ತುತಿ, ನಿಂದೆ ಮೊದಲಾದ ವಿವಿಧೋಕ್ತಿಗಳನ್ನು ಕಾಣುತ್ತೇವೆ. ಅಲ್ಲದೆ ಮಧುರ, ವಾತ್ಸಲ್ಯ ಮೊದಲಾದ ನವವಿಧ ಭಕ್ತಿರಸಗಳನ್ನು ಕಾಣುತ್ತೇವೆ. ಇವರ ಉಪದೇಶಗಳು ಕಾವ್ಯದ ಕಳೆಯನ್ನೇ ಕನ್ನಡ ಸಾಹಿತ್ಯದಲ್ಲಿ ಅಭಿವ್ಯಂಜಿಸಿವೆ.

ಇವರ ವಚನಗಳ ಸಂಖ್ಯೆ 188 ಇದ್ದರೂ ಇವು ಕನ್ನಡ ಸಾಹಿತ್ಯಲೋಕದಲ್ಲಿ ಧ್ರುವತಾರೆಯಂತೆ ರಾರಾಜಿಸುತ್ತಿವೆ. ಇವರ ವ್ಯಕ್ತಿತ್ವ, ಅನುಭವ ಸಾಹಿತ್ಯ ಮುಂದಿನ ಶರಣರ ಮೇಲೆ ಪ್ರಭಾವ ಬೀರಿದ್ದು ಹಾಗೂ ಇವರನ್ನು ಕೊಂಡಾಡಿದ್ದು ನಮಗೆಲ್ಲ ಸಂತೋಷ ಹಾಗೂ ಹೆಮ್ಮೆಯ ವಿಷಯವಾಗಿದೆ.

ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ

ನಿಮ್ಮ ಶರಣರ ಸೂಳ್ನುಡಿಯ ಒಂದರೆಘಳಿಗೆಯಿತ್ತಡೆ
ನಿನ್ನನಿತ್ತೆ ಕಾಣಾ! ರಾಮಾನಾಥ.[143]

ಯುಗಯಗಗಳಿಂದ ಬಂದ ಗಾಢ–ಗೂಢವಾಗಿದ್ದ ಸಂಸ್ಕೃತ ಮಹಾಮಂತ್ರ ಗಳನ್ನು ವೇದೋಪನಿಷತ್ತುಗಳ ಅರ್ಥವನ್ನು ಮೊಟ್ಟ ಮೊದಲಿಗೆ ಜನಸಾಮಾನ್ಯರಿಗೆ ಅರ್ಥವಾಗುವ ತಿಳಿಗನ್ನಡ ಸಾಹಿತ್ಯಪ್ರಕಾರದ ವಚನಗಳ ಮೂಲಕ ಪ್ರಚಾರ ಗೊಳಿಸಿದ್ದುದರಿಂದ ವಿಶ್ವಮಾನ್ಯರಾದ, ಆದ್ಯವಚನಕಾರರಾದ, ದೇವರದಾಸಿಮಯ್ಯ ನವರು ವಚನ ಸಾಹಿತ್ಯದ ಸಾರ್ವಭೌಮರಾಗಿದ್ದಾರೆ.

ಅಡಿಟಿಪ್ಪಣಿಗಳು

1. ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ, 'ವಚನ ಸಾಹಿತ್ಯ ಒಂದು ಇಣುಕು ನೋಟ' ಬಸವ ಸಮಿತಿ ಬಸವ ಭವನ ಬಸವೇಶ್ವರ ವೃತ್ತ ಬೆಂಗಳೂರು, 1989, ಪುಟ–119.
2. ಎಮ್. ಆರ್. ಶ್ರೀನಿವಾಸಮೂರ್ತಿ, 'ವಚನ ಧರ್ಮಸಾರ' ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು–18, 2003, ಪುಟ–9.
3. ಡಾ. ಪಿ. ವ್ಹಿ. ನಾರಾಯಣ, 'ವಚನ ಪರಿಸರ' ತಂಗಾಳಿ ಬೆಂಗಳೂರು–11, 1994, ಪುಟ–6.
4. ಡಾ. ಎಮ್. ಚಿದಾನಂದಮೂರ್ತಿ 'ವಚನ ಸಾಹಿತ್ಯ' ಪ್ರಸಾರಂಗ ಬೆಂಗಳೂರು ವಿಸ್ವವಿದ್ಯಾಲಯ 1975, ಪುಟ–1.
5. ಅದೇ.
6. ಡಾ. ಪಿ. ವ್ಹಿ. ನಾರಾಯಣ, 'ವಚನ ಪರಿಸರ' ತಂಗಾಳಿ ಬೆಂಗಳೂರು–11, 1994, ಪುಟ–9.
7. ಅದೇ.
8. ರಂ. ಶ್ರೀ. ಮುಗಳಿ, 'ಕನ್ನಡ ಸಾಹಿತ್ಯ ಚರಿತ್ರೆ' ಗೀತಾ ಬುಕ್ ಹೌಸ ಮೈಸೂರು, 1993, ಪುಟ–158.
9. ಡಾ. ಎಮ್. ಚಿದಾನಂದಮೂರ್ತಿ 'ವಚನ ಸಾಹಿತ್ಯ' ಪ್ರಸಾರಂಗ ಬೆಂಗಳೂರು ವಿಸ್ವವಿದ್ಯಾಲಯ 1975, ಪುಟ–2.
10. ಮ. ಸು. ಕೃಷ್ಣಮೂರ್ತಿ 'ಸಿದ್ಧಸಾಹಿತ್ಯ' ಪ್ರಸಾರಂಗ ಮೈಸೂರು ವಿಶ್ವವಿದ್ಯಾಲಯ, 1982, ಪುಟ–30.
11. ಎಮ್. ಆರ್. ಶ್ರೀನಿವಾಸಮೂರ್ತಿ, 'ವಚನ ಧರ್ಮಸಾರ' ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು–18, 2003, ಪುಟ–9.

12. ಡಿ. ಎಲ್. ನರಸಿಂಹಾಚಾರ್ಯ, 'ಕೆಲವು ವಚನಕಾರರು–1' ಪ್ರಬುದ್ಧ ಕರ್ನಾಟಕ, ಮೈಸೂರು, ಪುಟ–5.

13. ಡಾ. ಎಲ್. ಬಸವರಾಜು, 'ಅಲ್ಲಮನ ವಚನ ಚಂದ್ರಿಕೆ' ಮೂರು ಸಾವಿರ ಮಠ ಹುಬ್ಬಳ್ಳಿ, 1986, ಪೀಠಿಕೆ–18.

14. ಡಾ. ಎಮ್. ಚಿದಾನಂದಮೂರ್ತಿ, 'ಲಿಂಗಾಯತ ಅಧ್ಯಯನ' ವಾಗ್ದೇವಿ ಪುಸ್ತಕಗಳು, 67, ದೇವರಾಜ ಅರಸು ರಸ್ತೆ, ಮೈಸೂರು–1, 1986, ಪುಟ–52,

15. ಜ. ಚ. ನಿ. 'ದೇವರ ದಾಸಿಮಾರ್ಯ ಪ್ರಶಸ್ತಿ' ನಿಡುಮಾಮಿಡಿ ಸಂಸ್ಥಾನ 1953, ಪುಟ–44.

16. ಡಾ. ಟಿ. ವ್ಹಿ. ಮಲ್ಲಾಪುರ, 'ಶರಣ ಸರೋಜ' ಕುಮಾರ ವಿರೇಶ ಪ್ರಕಾಶನ ಕಲಬುರ್ಗಿ, 1976, ಪುಟ–17.

17. ಪ್ರೊ. ಬಸವರಾಜ ಸಬರದ, 'ಕಲಬುರ್ಗಿ ಜಿಲ್ಲಾ ದರ್ಶನ' ಪ್ರಸಾರಂಗ ಗುಲಬರ್ಗಾ ವಿ. ವಿ. ಗುಲಬರ್ಗಾ, 2005, ಪುಟ–97.

18. ಪ್ರೊ. ಆರ್. ರಾಚಪ್ಪ, 'ಜೇಡರ ದಾಸಿಮಯ್ಯನ ವಚನಗಳು' ಓಂಕಾರ ಪ್ರಕಾಶನ ವಿಜಯನಗರ ಬೆಂಗಳೂರು 1988, ಪ್ರಸ್ತಾವನೆಯಿಂದ.

19. ಜ. ಚ. ನಿ. 'ದೇವರ ದಾಸಿಮಾರ್ಯ ಪ್ರಶಸ್ತಿ' ನಿಡುಮಾಮಿಡಿ ಸಂಸ್ಥಾನ 1953, ಪುಟ–36

20. 'ಶ್ರೀ ದೇವಾಂಗ ಪುರಾಣ' ಶ್ರೀ ಗಾಯತ್ರಿ ಪೀಠ ಮಹಾಸಂಸ್ಥಾನ ಹೇಮಕೂಟ ಹಂಪಿ, 1998, ಪುಟ–2, ಪೀಠಿಕೆಯಿಂದ.

21. ಅದೇ.

22. ಅದೇ.

23. ಜ. ಚ. ನಿ. 'ದೇವರ ದಾಸಿಮಾರ್ಯ ಪ್ರಶಸ್ತಿ' ನಿಡುಮಾಮಿಡಿ ಸಂಸ್ಥಾನ, 1953, ಪುಟ–42.

24. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–790 ಪುಟ–247,

25. ಅದೇ, ವಚನ ಸಂಖ್ಯೆ–812 ಪುಟ–252.

26. ವಿರೂಪಾಕ್ಷ ಕವಿಕೃತ, 'ಶ್ರೀ ದೇವರ ದಾಸಿಮಾರ್ಯ ಪುರಾಣಮ್' ಶ್ರೀ ದೇವೇಂದ್ರಪ್ಪ. ಗಿ. ಭದ್ರನ್ನವರ ಬನಹಟ್ಟಿ, 1962, ಪುಟ –317.

27. ಸಿದ್ಧಯ್ಯ ಪುರಾಣಿಕ, 'ಶರಣ ಚರಿತಾಮೃತ' ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಮೈಸೂರು 1992, ಪುಟ–41.

28. ಅದೇ.

29. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕೀರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–821 ಪುಟ–254.

30. ಅದೇ, ವಚನ ಸಂಖ್ಯೆ–861 ಪುಟ–263.

31. ಸಿದ್ಧಯ್ಯ ಪುರಾಣಿಕ, 'ಶರಣ ಚರಿತಾಮೃತ' ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಮೈಸೂರು 1992, ಪುಟ–36.

32. ವಿರೂಪಾಕ್ಷ ಕವಿಕೃತ, 'ಶ್ರೀ ದೇವರ ದಾಸಿಮಾರ್ಯ ಪುರಾಣಮ್' ಶ್ರೀ ದೇವೇಂದ್ರಪ್ಪ. ಗಿ. ಭದ್ರನ್ನವರ ಬನಹಟ್ಟಿ, 1962, ಪುಟ–316.

33. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕೀರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–738, ಪುಟ–236.

34. ವಿರೂಪಾಕ್ಷ ಕವಿಕೃತ, 'ಶ್ರೀ ದೇವರ ದಾಸಿಮಾರ್ಯ ಪುರಾಣಮ್' ಶ್ರೀ ದೇವೇಂದ್ರಪ್ಪ. ಗಿ. ಭದ್ರನ್ನವರ ಬನಹಟ್ಟಿ, 1962, ಪುಟ–324.

35. ಸಿದ್ಧಯ್ಯ ಪುರಾಣಿಕ, 'ಶರಣ ಚರಿತಾಮೃತ' ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಮೈಸೂರು 1992, ಪುಟ–41.

36. ಡಾ. ಎಲ್.ಬಸವರಾಜು, 'ದೇವರ ದಾಸಿಮಯ್ಯನ ವಚನಗಳು' ಗೀತಾ ಬುಕ್ಕ ಹೌಸ್ ಮೈಸೂರು, 1995, ಪುಟ–34.

37. ಅದೇ.

38. ಸಿದ್ಧಯ್ಯ ಪುರಾಣಿಕ, 'ಶರಣ ಚರಿತಾಮೃತ' ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಮೈಸೂರು 1992, ಪುಟ–41.

39. ಡಾ. ಮೃತ್ಯುಂಜಯ ರುಮಾಲೆ, 'ಜೇಡರ ದಾಸಿಮಯ್ಯ' ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು 2000, ಪುಟ–4

40. ಡಾ. ರಾಮರೆಡ್ಡಿ. ಎಸ್. ರಡ್ಡೇರ, 'ದೇವರ ದಾಸಿಮಯ್ಯನ ಜೀವನ ಮತ್ತು ಸಾಹಿತ್ಯ' ವೆಂಕಾಮಣಿ ಪ್ರಕಾಶನ ರಾಣೇಬೆನ್ನೂರು, 2005, ಪುಟ–8.

41. ಡಾ. ಎಂ. ಎಂ. ಕಲಬುರ್ಗಿ, 'ಶಾಸನಗಳಲ್ಲಿ ಶಿವಶರಣರು' ಕರ್ನಾಟಕ ವಿ.ವಿ.ಧಾರವಾಡ, 1970, ಪುಟ–35,38.

42. ಗಂಗಮ್ಮ.ಎಚ್.ಸತ್ಯಂಪೇಟ, 'ಮುದುನೂರು ದಾಸಿಮಯ್ಯ–ಒಂದು ಅಧ್ಯಯನ' ಕರ್ನಾಟಕ ವಿ.ವಿ.ಧಾರವಾಡ, 1988, ಪುಟ–15,16.

43. ಡಾ. ರಾಮರೆಡ್ಡಿ. ಎಸ್. ರಡ್ಡೇರ, 'ದೇವರ ದಾಸಿಮಯ್ಯನ ಜೀವನ ಮತ್ತು ಸಾಹಿತ್ಯ' ವೆಂಕಾಮಣಿ ಪ್ರಕಾಶನ ರಾಣೇಬೆನ್ನೂರು, 2005, ಪುಟ–7.

44. ರಮೇಶ ಮಾಳಾ, 'ದೇವರ ದಾಸಿಮಯ್ಯನವರ ವಚನ ದರ್ಪಣ' ಗಾಯತ್ರಿ ಪ್ರತಿಷ್ಠಾನ ಗುಲಬರ್ಗಾ, 1998, ಪುಟ–28.

45. ಡಾ. ಎಂ. ಎಂ. ಕಲಬುರ್ಗಿ, 'ಶಾಸನಗಳಲ್ಲಿ ಶಿವಶರಣರು' ಕರ್ನಾಟಕ ವಿ.ವಿ.ಧಾರವಾಡ, 1970, ಪುಟ–35,40.

46. ಎಸ್ ಎಸ್.ಭಾವಿಕಟ್ಟಿ 'ಶ್ರೀ ಕಡಕೋಳ ಮಡಿವಾಳೇಶ್ವರರ ತತ್ವಪದಗಳ ಸಂಗ್ರಹ ಮಾಲೆ–1' ಶರಣ ಪ್ರಕಾಶನ ಕಲಬುರ್ಗಿ 1985. ಪುಟ–22.

47. ಡಾ. ಆರ್. ಸಿ ಹಿರೇಮಠ 'ಮಹಾಯಾತ್ರೆ' ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ 1997. ಪುಟ 209.

48. ಡಾ. ರಾಮರೆಡ್ಡಿ. ಎಸ್. ರಡ್ಡೇರ, 'ದೇವರ ದಾಸಿಮಯ್ಯನ ಜೀವನ ಮತ್ತು ಸಾಹಿತ್ಯ' ವೆಂಕಾಮಣಿ ಪ್ರಕಾಶನ ರಾಣೇಬೆನ್ನೂರು, 2005, ಪುಟ–8.

49. ಸಿದ್ಧಯ್ಯ ಪುರಾಣಿಕ, 'ಶರಣ ಚರಿತಾಮೃತ' ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಮೈಸೂರು 1992, ಪುಟ–59.

50. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–715 ಪುಟ–231.

51. ಡಾ. ಎಚ್. ತಿಪ್ಪೇರುದ್ರಸ್ವಾಮಿ, 'ಬಸವೇಶ್ವರ ವಚನ ದೀಪಿಕೆ' ಜಗದ್ಗುರು ಶ್ರೀ ಶಿವರತ್ರೀಶ್ವರ ಗ್ರಂಥಮಾಲೆ ಮೈಸೂರು–1995, ವಚನ ಸಂಖ್ಯೆ–106 ಪುಟ–85.

52. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–717 ಪುಟ–231.

53. ಸಂ ಡಾ. ಕೈದಾಳ ರಮಸ್ವಾಮಿ ಗಣೇಶ್, 'ಸರ್ವಜ್ಞನ ವಚನಗಳು' ಸೃಷ್ಟಿ ಪ್ರಕಶನ ಬೆಂಗಳೂರು–560094, 2006, ವಚನ ಸಂಖ್ಯೆ–46 ಪುಟ–9.

54. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–739, ಪುಟ–236

55. ಸಂ ಡಾ. ಕೈದಾಳ ರಮಸ್ವಾಮಿ ಗಣೇಶ್, 'ಸರ್ವಜ್ಞನ ವಚನಗಳು' ಸೃಷ್ಟಿ ಪ್ರಕಶನ ಬೆಂಗಳೂರು–560094, 2006, ವಚನ ಸಂಖ್ಯೆ–351, ಪುಟ–43.

56. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–749, ಪುಟ–237

57. ಸಂ ಡಾ. ಕೈದಾಳ ರಮಸ್ವಾಮಿ ಗಣೇಶ್, 'ಸರ್ವಜ್ಞನ ವಚನಗಳು' ಸೃಷ್ಟಿ ಪ್ರಕಶನ ಬೆಂಗಳೂರು–560094, 2006, ವಚನ ಸಂಖ್ಯೆ–432, ಪುಟ–52.

58. ಡಾ. ಎಚ್. ತಿಪ್ಪೇರುದ್ರಸ್ವಾಮಿ, 'ಬಸವೇಶ್ವರ ವಚನ ದೀಪಿಕೆ' ಜಗದ್ಗುರು ಶ್ರೀ ಶಿವರತ್ರೀಶ್ವರ ಗ್ರಂಥಮಾಲೆ ಮೈಸೂರು–1995, ವಚನ ಸಂಖ್ಯೆ–337, ಪುಟ–216.

59. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–744, ಪುಟ–237.

60. ಸಂ. ಡಾ. ವಿರಣ್ಣ ರಾಜೂರ, 'ಶಿವಶರಣೆಯರ ವಚನ ಸಂಪುಟ, ಸಮಗ್ರ ವಚನ ಸಂಪುಟ–5' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2001, ವಚನ ಸಂಖ್ಯೆ–768 ಪುಟ–80.

61. ಸಂ. ಡಾ. ಎಂ. ಎಂ. ಕಲಬುರ್ಗಿ, 'ಸಂಕಿರ್ಣ ವಚನ ಸಂಪುಟ–1, ಸಮಗ್ರ ವಚನ ಸಂಪುಟ–6' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–349 ಪುಟ–116.

62. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–818, ಪುಟ–253.

63. ಡಾ. ಎಚ್. ತಿಪ್ಪೇರುದ್ರಸ್ವಾಮಿ, 'ಬಸವೇಶ್ವರ ವಚನ ದೀಪಿಕೆ' ಜಗದ್ಗುರು ಶ್ರೀ ಶಿವರತ್ರೀಶ್ವರ ಗ್ರಂಥಮಾಲೆ ಮೈಸೂರು–1995, ವಚನ ಸಂಖ್ಯೆ–116, ಪುಟ–93.

64. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–762, ಪುಟ–241.

65. ಡಾ. ಎಚ್. ತಿಪ್ಪೇರುದ್ರಸ್ವಾಮಿ, 'ಬಸವೇಶ್ವರ ವಚನ ದೀಪಿಕೆ' ಜಗದ್ಗುರು ಶ್ರೀ ಶಿವರತ್ರೀಶ್ವರ ಗ್ರಂಥಮಾಲೆ ಮೈಸೂರು–1995, ವಚನ ಸಂಖ್ಯೆ–126, ಪುಟ–100.

66. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–783, ಪುಟ–246.

67. ಡಾ. ಎಚ್. ತಿಪ್ಪೇರುದ್ರಸ್ವಾಮಿ, 'ಬಸವೇಶ್ವರ ವಚನ ದೀಪಿಕೆ' ಜಗದ್ಗುರು ಶ್ರೀ ಶಿವರತ್ರೀಶ್ವರ ಗ್ರಂಥಮಾಲೆ ಮೈಸೂರು–1995, ವಚನ ಸಂಖ್ಯೆ–445, ಪುಟ–269.

68. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–784, ಪುಟ–246.

69. ಡಾ. ಎಚ್. ತಿಪ್ಪೇರುದ್ರಸ್ವಾಮಿ, 'ಬಸವೇಶ್ವರ ವಚನ ದೀಪಿಕೆ' ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ ಮೈಸೂರು–1995, ವಚನ ಸಂಖ್ಯೆ–104, ಪುಟ–83.

70. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–777, ಪುಟ–244.

71. ಡಾ. ಎಚ್. ತಿಪ್ಪೇರುದ್ರಸ್ವಾಮಿ, 'ಬಸವೇಶ್ವರ ವಚನ ದೀಪಿಕೆ' ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ ಮೈಸೂರು–1995, ವಚನ ಸಂಖ್ಯೆ–359, ಪುಟ–229.

72. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–796, ಪುಟ–249.

73. ಸಂ ಡಾ. ಕೈದಾಳ ರಮಸ್ವಾಮಿ ಗಣೇಶ್, 'ಸರ್ವಜ್ಞನ ವಚನಗಳು' ಸೃಷ್ಟಿ ಪ್ರಕಶನ ಬೆಂಗಳೂರು–560094, 2006, ವಚನ ಸಂಖ್ಯೆ–1012, ಪುಟ–118.

74. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–812, ಪುಟ–252.

75. ಸಂ ಡಾ. ಕೈದಾಳ ರಮಸ್ವಾಮಿ ಗಣೇಶ್, 'ಸರ್ವಜ್ಞನ ವಚನಗಳು' ಸೃಷ್ಟಿ ಪ್ರಕಶನ ಬೆಂಗಳೂರು–560094, 2006, ವಚನ ಸಂಖ್ಯೆ–1277, ಪುಟ–149.

76. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–816, ಪುಟ–253.

77. ಸಂ ಡಾ. ಕೈದಾಳ ರಮಸ್ವಾಮಿ ಗಣೇಶ್, 'ಸರ್ವಜ್ಞನ ವಚನಗಳು' ಸೃಷ್ಟಿ ಪ್ರಕಶನ ಬೆಂಗಳೂರು–560094, 2006, ವಚನ ಸಂಖ್ಯೆ–1720, ಪುಟ–198.

78. ಸಂ. ಡಾ. ಬಿ. ವ್ಹಿ. ಮಲ್ಲಾಪುರ, 'ಅಲ್ಲಮಪ್ರಭುದೇವರ ವಚನ ಸಂಪುಟ, ಸಮಗ್ರ ವಚನ ಸಂಪುಟ–2' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2001, ವಚನ ಸಂಖ್ಯೆ–558 ಪುಟ–150,

79. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–840, ಪುಟ–258.

80. ಸಂ. ಡಾ. ಎಂ. ಎಂ. ಕಲಬುರ್ಗಿ, 'ಸಂಕಿರ್ಣ ವಚನ ಸಂಪುಟ–1, ಸಮಗ್ರ ವಚನ ಸಂಪುಟ–6' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–22 ಪುಟ–9.

81. ಅದೇ, ವಚನ ಸಂಖ್ಯೆ–882 ಪುಟ–266.

82. ಅದೇ, ವಚನ ಸಂಖ್ಯೆ–9 ಪುಟ–5.

83. ಸ.ವ, ವಚನ ಸಂ–2151, ಪುಟ–247.

84. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–845, ಪುಟ–259.

85. ಸಂ. ಡಾ. ವಿರಣ್ಣ ರಾಜೂರ, 'ಶಿವಶರಣೆಯರ ವಚನ ಸಂಪುಟ, ಸಮಗ್ರ ವಚನ ಸಂಪುಟ–5' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2001, ವಚನ ಸಂಖ್ಯೆ–779 ಪುಟ–247.

86. ಅದೇ, ವಚನ ಸಂಖ್ಯೆ–1228 ಪುಟ–370.

87. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–844, ಪುಟ–259.

88. ಸಂ. ಡಾ. ಬಿ. ವ್ಹಿ. ಮಲ್ಲಾಪುರ, 'ಅಲ್ಲಮಪ್ರಭುದೇವರ ವಚನ ಸಂಪುಟ, ಸಮಗ್ರ ವಚನ ಸಂಪುಟ–2' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2001, ವಚನ ಸಂಖ್ಯೆ–179 ಪುಟ–58.

89. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–862, ಪುಟ–263.

90. ಡಾ. ಎಚ್. ತಿಪ್ಪೇರುದ್ರಸ್ವಾಮಿ, 'ಬಸವೇಶ್ವರ ವಚನ ದೀಪಿಕೆ' ಜಗದ್ಗುರು ಶ್ರೀ ಶಿವರಾತ್ರೀಶ್ವರ ಗ್ರಂಥಮಾಲೆ ಮೈಸೂರು–1995, ವಚನ ಸಂಖ್ಯೆ–183 ಪುಟ–133.

91. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–860, ಪುಟ–262.

92. ಸಂ ಡಾ. ಕೈದಾಳ ರಮಸ್ವಾಮಿ ಗಣೇಶ್, 'ಸರ್ವಜ್ಞನ ವಚನಗಳು' ಸೃಷ್ಟಿ ಪ್ರಕಶನ ಬೆಂಗಳೂರು–560094, 2006, ವಚನ ಸಂಖ್ಯೆ–2000, ಪುಟ–230.

93. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–861, ಪುಟ–263.

94. ಸಂ ಡಾ. ಕೈದಾಳ ರಮಸ್ವಾಮಿ ಗಣೇಶ್, 'ಸರ್ವಜ್ಞನ ವಚನಗಳು' ಸೃಷ್ಟಿ ಪ್ರಕಶನ ಬೆಂಗಳೂರು–560094, 2006, ವಚನ ಸಂಖ್ಯೆ–124, ಪುಟ–41.

95. ಸಂ. ಡಾ. ಬಿ. ವ್ಹಿ. ಮಲ್ಲಾಪುರ, 'ಅಲ್ಲಮಪ್ರಭುದೇವರ ವಚನ ಸಂಪುಟ, ಸಮಗ್ರ ವಚನ ಸಂಪುಟ–2' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2001, ವಚನ ಸಂಖ್ಯೆ–964, ಪುಟ–290.

96. ಅದೇ, ವಚನ ಸಂಖ್ಯೆ–148, ಪುಟ–45.

97. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–865, ಪುಟ–263.

98. ಸಂ. ಡಾ. ಬಿ. ವ್ಹಿ. ಮಲ್ಲಾಪುರ, 'ಅಲ್ಲಮಪ್ರಭುದೇವರ ವಚನ ಸಂಪುಟ, ಸಮಗ್ರ ವಚನ ಸಂಪುಟ–2' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2001, ವಚನ ಸಂಖ್ಯೆ–1598, ಪುಟ–474.

99. ಸಂ. ಡಾ. ಬಿ. ವ್ಹಿ. ಮಲ್ಲಾಪುರ, 'ಚನ್ನಬಸವಣ್ಣನವರ ವಚನ ಸಂಪುಟ, ಸಮಗ್ರ ವಚನ ಸಂಪುಟ–3' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2001, ವಚನ ಸಂಖ್ಯೆ–1343 ಪುಟ–474,

100. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–885, ಪುಟ–268.

101. ಸಂ ಡಾ. ಕೈದಾಳ ರಮಸ್ವಾಮಿ ಗಣೇಶ್, 'ಸರ್ವಜ್ಞನ ವಚನಗಳು' ಸೃಷ್ಟಿ ಪ್ರಕಶನ ಬೆಂಗಳೂರು–560094, 2006, ವಚನ ಸಂಖ್ಯೆ–2184, ಪುಟ–251.

102. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–866, ಪುಟ–264.

103. ಡಾ. ಎಚ್. ತಿಪ್ಪೇರುದ್ರಸ್ವಾಮಿ, 'ಬಸವೇಶ್ವರ ವಚನ ದೀಪಿಕೆ' ಜಗದ್ಗುರು ಶ್ರೀ ಶಿವರತ್ರೀಶ್ವರ ಗ್ರಂಥಮಾಲೆ ಮೈಸೂರು–1995, ವಚನ ಸಂಖ್ಯೆ–1, ಪುಟ–3.

104. ಸಂ ಡಾ. ಕೈದಾಳ ರಮಸ್ವಾಮಿ ಗಣೇಶ್, 'ಸರ್ವಜ್ಞನ ವಚನಗಳು' ಸೃಷ್ಟಿ ಪ್ರಕಶನ ಬೆಂಗಳೂರು–560094, 2006, ವಚನ ಸಂಖ್ಯೆ–859, ಪುಟ–260.

105. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–871, ಪುಟ–265.

106. ಸಂ. ಡಾ. ವಿರಣ್ಣ ರಾಜೂರ, 'ಶಿವಶರಣೆಯರ ವಚನ ಸಂಪುಟ, ಸಮಗ್ರ ವಚನ ಸಂಪುಟ–5' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2001, ವಚನ ಸಂಖ್ಯೆ–206, ಪುಟ–61.

107. ಡಾ. ಎಚ್. ತಿಪ್ಪೇರುದ್ರಸ್ವಾಮಿ, 'ಬಸವೇಶ್ವರ ವಚನ ದೀಪಿಕೆ' ಜಗದ್ಗುರು ಶ್ರೀ ಶಿವರತ್ರೀಶ್ವರ ಗ್ರಂಥಮಾಲೆ ಮೈಸೂರು–1995, ವಚನ ಸಂಖ್ಯೆ–686, ಪುಟ–393.

108. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–

884, ಪುಟ–268.

109. ಅದೇ, ವಚನ ಸಂಖ್ಯೆ–553, ಪುಟ–183.

110. ಸಂ. ಡಾ. ಬಿ. ಫ್ಹಿ. ಮಲ್ಲಾಪುರ, 'ಅಲ್ಲಮಪ್ರಭುದೇವರ ವಚನ ಸಂಪುಟ, ಸಮಗ್ರ ವಚನ ಸಂಪುಟ–2' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2001, ವಚನ ಸಂಖ್ಯೆ–332 ಪುಟ–98.

111. ಸ.ವ.ಸಂ–6, ವಚನ ಸಂ–39, ಪುಟ–18.

112. ಸಂ ಡಾ. ಕೈದಾಳ ರಮಸ್ವಾಮಿ ಗಣೇಶ್, 'ಸರ್ವಜ್ಞನ ವಚನಗಳು' ಸೃಷ್ಟಿ ಪ್ರಕಶನ ಬೆಂಗಳೂರು–560094, 2006, ವಚನ ಸಂಖ್ಯೆ–2302, ಪುಟ–264.

113. ಸಂ. ಡಾ. ಎಂ. ಎಂ. ಕಲಬುರ್ಗಿ, 'ಬಸವಣ್ಣನವರ ವಚನ ಸಂಪುಟ, ಸಮಗ್ರ ವಚನ ಸಂಪುಟ–1' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–146 ಪುಟ–38.

114. ಅದೇ, ವಚನ ಸಂಖ್ಯೆ–147 ಪುಟ–39.

115. ಅದೇ, ವಚನ ಸಂಖ್ಯೆ–350 ಪುಟ–84.

116. ಅದೇ, ವಚನ ಸಂಖ್ಯೆ–149 ಪುಟ–39.

117. ಅದೇ, ವಚನ ಸಂಖ್ಯೆ–320 ಪುಟ–78.

118. ಅದೇ, ವಚನ ಸಂಖ್ಯೆ–321 ಪುಟ–78.

119. ಅದೇ, ವಚನ ಸಂಖ್ಯೆ–344 ಪುಟ–83.

120. ಅದೇ, ವಚನ ಸಂಖ್ಯೆ–605 ಪುಟ–151.

121. ಅದೇ, ವಚನ ಸಂಖ್ಯೆ–761 ಪುಟ–190.

122. ಅದೇ, ವಚನ ಸಂಖ್ಯೆ–435 ಪುಟ–105.

123. ಅದೇ, ವಚನ ಸಂಖ್ಯೆ–444 ಪುಟ–107.

124. ಅದೇ, ವಚನ ಸಂಖ್ಯೆ–740 ಪುಟ–185.

125. ಅದೇ, ವಚನ ಸಂಖ್ಯೆ–318 ಪುಟ–77.

126. ಅದೇ, ವಚನ ಸಂಖ್ಯೆ–433 ಪುಟ–105.

127. ಅದೇ, ವಚನ ಸಂಖ್ಯೆ–681 ಪುಟ–171.

128. ಅದೇ, ವಚನ ಸಂಖ್ಯೆ–476 ಪುಟ–115.

129. ಸಂ. ಡಾ. ಎಸ್. ವಿದ್ಯಾಶಂಕರ, 'ಸಿದ್ಧರಾಮೇಶ್ವರ ವಚನ ಸಂಪುಟ, ಸಮಗ್ರ ವಚನ ಸಂಪುಟ–4' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–1455 ಪುಟ–420,

130. ಸಂ. ಡಾ. ವಿರಣ್ಣ ರಾಜೂರ, 'ಶಿವಶರಣೆಯರ ವಚನ ಸಂಪುಟ, ಸಮಗ್ರ ವಚನ

ಸಂಪುಟ–5' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2001, ವಚನ ಸಂಖ್ಯೆ–19 ಪುಟ–7.

131. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–188 ಪುಟ–71.

132. ಅದೇ, ವಚನ ಸಂಖ್ಯೆ–629 ಪುಟ–210.

133. ಸಂ. ಡಾ. ವಿರಣ್ಣ ರಾಜೂರ, 'ಶಿವಶರಣೆಯರ ವಚನ ಸಂಪುಟ, ಸಮಗ್ರ ವಚನ ಸಂಪುಟ–5' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2001, ವಚನ ಸಂಖ್ಯೆ–1230 ಪುಟ–370, ವಚನ ಸಂಖ್ಯೆ–1231 ಪುಟ–370.

134. ಎಸ್. ಎಸ್. ಭಾವಿಕಟ್ಟಿ, 'ಶ್ರೀ ಕಡಕೋಳ ಮಡಿವಾಳೇಶ್ವರರ ತತ್ವಪದಗಳ ಸಂಗ್ರಹ ಮಾಲೆ–1' ಶರಣ ಪ್ರಕಾಶನ ಕಲಬುರ್ಗಿ 1985, ಪುಟ–22.

135. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–832 ಪುಟ–256.

136. ಅದೇ, ವಚನ ಸಂಖ್ಯೆ–843 ಪುಟ–259.

137. ಅದೇ, ವಚನ ಸಂಖ್ಯೆ–833 ಪುಟ–257.

138. ಅದೇ, ವಚನ ಸಂಖ್ಯೆ–885 ಪುಟ–268.

139. ಅದೇ, ವಚನ ಸಂಖ್ಯೆ–777 ಪುಟ–244.

140. ಸಂ. ಡಾ. ಎಂ. ಎಂ. ಕಲಬುರ್ಗಿ, 'ಸಂಕಿರ್ಣ ವಚನ ಸಂಪುಟ–1, ಸಮಗ್ರ ವಚನ ಸಂಪುಟ– 6' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–146 ಪುಟ–38, ವಚನ ಸಂಖ್ಯೆ–350, ಪುಟ–84.

141. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7'

ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001, ವಚನ ಸಂಖ್ಯೆ–734, ಪುಟ–235, ವಚನ ಸಂಖ್ಯೆ–748 ಪುಟ–238, ವಚನ ಸಂಖ್ಯೆ–777 ಪುಟ–244.

142. ಅದೇ, ವಚನ ಸಂಖ್ಯೆ–861 ಪುಟ–263, ವಚನ ಸಂಖ್ಯೆ–884 ಪು–268.

143. ಅದೇ, ವಚನ ಸಂಖ್ಯೆ–772 ಪುಟ–243.

ಅಧ್ಯಾಯ 4
ದಶೋಪನಿಷತ್ತುಗಳ ತಾತ್ತ್ವಿಕ ಅಧ್ಯಯನ

ಅಧ್ಯಾಯ 4
ದಶೋಪನಿಷತ್ತುಗಳ
ತಾತ್ತ್ವಿಕ ಅಧ್ಯಯನ

4.1. ಬ್ರಹ್ಮ
4.2. ಜೀವ
4.3. ಜಗತ್ತು
4.4 ಆತ್ಮ
4.5. ಮೋಕ್ಷ

ಅಧ್ಯಾಯ 4

ದಶೋಪನಿಷತ್ತುಗಳ ತಾತ್ತ್ವಿಕ ಅಧ್ಯಯನ

ಹಿಂದಿನ ಅಧ್ಯಾಯದಲ್ಲಿ ವಚನಸಾಹಿತ್ಯದ ಪರಿಚಯ ಮತ್ತು ದೇವರ ದಾಸಿಮಯ್ಯನವರ ಬದುಕು ಬರಹ ಕುರಿತು ಅಧ್ಯಯನ ಮಾಡಲಾಗಿದೆ. ವಚನಸಾಹಿತ್ಯದ ಪರಿಚಯ, ಪದದ ವ್ಯುತ್ಪತ್ತಿ, ಅರ್ಥ, ಉಗಮ, ಸ್ವರೂಪ, ಹಿನ್ನೆಲೆ, ಮೊದಲಾದ ವಿಷಯಗಳನ್ನು ಚರ್ಚಿಸಲಾಗಿದೆ. ಹಾಗೂ ದೇವರ ದಾಸಿಮಯ್ಯನವರ ಜೀವನ ಮತ್ತು ಸಾಹಿತ್ಯ ಕುರಿತು, ಅವರ ಜನನ, ಜನ್ಮಸ್ಥಳ, ಕಾಲ, ಜೀವನದ ಸನ್ನಿವೇಶಗಳು, ಪವಾಡಗಳು, ಅವರ ಸಾಹಿತ್ಯ, ಸಾಹಿತ್ಯದಲ್ಲಿ ಅವರ ಪಾತ್ರ, ಅಂಕಿತನಾಮ, ಬಸವಾದಿ ಶರಣರ ಮೇಲೆ ಇವರ ಪ್ರಭಾವ, ಹೀಗೆ ಅನೇಕ ವಿಷಯಗಳನ್ನು ಚರ್ಚಿಸಲಾಗಿದೆ. ಪ್ರಸ್ತುತ ನಾಲ್ಕನೆಯ ಅಧ್ಯಾಯದಲ್ಲಿ ದಶೋಪನಿಷತ್ತುಗಳ ತಾತ್ತ್ವಿಕ ಅಧ್ಯಯನ ಮಾಡಲಾಗುತ್ತದೆ. ಈ ಅಧ್ಯಾಯದಲ್ಲಿ ಉಪನಿಷತ್ತಿನಲ್ಲಿ ಬರುವ ಅತ್ಯಂತ ಮಹತ್ವದ ಅಂಶಗಳಾದ ಬ್ರಹ್ಮ, ಜೀವ, ಜಗತ್ತು, ಆತ್ಮ, ಮತ್ತು ಮೋಕ್ಷಗಳನ್ನು ಕುರಿತು ಚರ್ಚಿಸಲಾಗುತ್ತದೆ.

4.1. ಬ್ರಹ್ಮ :–

ಉಪನಿಷತ್ತಿನ ಋಷಿಗಳು ಈ ಜಗತ್ತಿನ ಹಿಂದಿರುವ ಸತ್ಯವನ್ನು ಹುಡುಕುತ್ತ ಹೋಗಿ ಕೊನೆಗೆ ಯಾವ ತತ್ತ್ವಕ್ಕೆ ಬಂದು ನಿಂತಿರುವರೋ ಆ ತತ್ತ್ವವನ್ನು ಅಥವಾ ಜಗತ್ತಿನ ಮೂಲವನ್ನು ಅವರು ಬ್ರಹ್ಮನೆಂದು ಕರೆದರು.

ಸೃಷ್ಟಿಗೆ ಮೂಲ ಕಾರಣವು 'ಬ್ರಹ್ಮ'ನೆಂದು ಉಪನಿಷತ್ತುಗಳು ಕರೆದು, ಅವನಿಗೆ ಆತ್ಮ, ಸತ್, ಅಕ್ಷರ, ಆಕಾಶ, ಭೂಮಾ ಮೊದಲಾದ ಹೆಸರುಗಳಿಂದ ಕರೆದಿರುವುದನ್ನು ಕಾಣುತ್ತೇವೆ. ಅವನಿಂದಲೇ ಜಗತ್ತು ಹುಟ್ಟುತ್ತದೆ, ಅವನಿಂದಲೇ ಜಗತ್ತು ಪೋಷಿಸಲ್ಪಡುತ್ತದೆ. **"ಬ್ರಹ್ಮಾ ದೇವಾನಾಂ ಪ್ರಥಮಃ ಸಂಬಭೂವ ವಿಶ್ವಸ್ಯ ಕರ್ತಾ ಭುವನಸ್ಯ**

ಗೋಪ್ತಾ।"[1] ವಿಶ್ವದ ಸೃಷ್ಟಿ ಪೂರ್ವದಲ್ಲಿ ಎಲ್ಲ ದೇವತೆಗಳಿಂತ ಮೊದಲು ಬ್ರಹ್ಮನೊಬ್ಬನೇ ಇದ್ದನು. ಅವನಿಂದಲೇ ಜಗತ್ತಿನ ಉತ್ಪತ್ತಿಯಾಯಿತೆಂದು ಮುಂಡಕೋಪನಿಷತ್ತು ಸಾರಿದೆ.

"ಈಶಾ ವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್।"[2] ಅವನಿಂದಲೇ ಜಗತ್ತು ಜನಿಸಿ, ಪೋಷಿಸಲ್ಪಡುವುದರಿಂದ ಚರಾಚರಾತ್ಮಕ ವಸ್ತುಗಳೆಲ್ಲ ಅವನಿಂದಲೇ ಆಚ್ಛಾದಿತವಾಗಿವೆ. ಎಂದು ಈಶೋಪನಿಷತ್ತು ಸಹ ಹೇಳಿದೆ.

ಬೃಹದಾರಣ್ಯಕೋಪನಿಷತ್ತು ಸೃಷ್ಟಿಯ ಪೂರ್ವದಲ್ಲಿ ಬ್ರಹ್ಮನೊಬ್ಬನೇ ಇದ್ದನು. ಅವನಿಂದ ಎಲ್ಲವು ಸೃಷ್ಟಿಗೊಂಡವು ಎಂದು ಉಪದೇಶಿಸಿದೆ. ಅಲ್ಲದೆ ಐತರೇಯೋಪನಿಷತ್ತಿನಲ್ಲಿಯ ಉಪದೇಶದಂತೆ ಬ್ರಹ್ಮನು ಸೃಷ್ಟಿಯ ಆದಿಯಲ್ಲಿ ಇದ್ದು, ಅವನಿಂದಲೇ ಸೃಷ್ಟಿರಚನೆಯಾಗಿದೆ. ಉದಾಹರಣೆಗೆ–

ಬ್ರಹ್ಮ ವಾ ಇದಮಗ್ರ ಆಸೀತ್।,
ಆತ್ಮೈವೇದಮಗ್ರ ಆಸೀತ್।,
ಆತ್ಮಾ ವಾ ಇದಮೇಕ ಏವಾಗ್ರ ಆಸೀತ್।[3]

ಬ್ರಹ್ಮನಿಂದ ಸೃಷ್ಟಿಗೊಂಡ ಜಗತ್ತು, ಬ್ರಹ್ಮನಿಂದ ಭಿನ್ನವಾಗದೆ, ಎಲ್ಲ ದೇಶ, ಕಾಲ ಹಾಗೂ ವಸ್ತುಗಳಲ್ಲಿ ವ್ಯಾಪಿಸಿಕೊಂಡಿದ್ದಾನೆ. ಆದುದರಿಂದ ಜಡ–ಚೇತನ, ಸ್ಥಾವರ–ಜಂಗಮ ರೂಪವಾದ ಜಗತ್ತು ಬ್ರಹ್ಮ ಸ್ವರೂಪವೇ ಆಗಿದೆ ಎಂದು ಛಾಂದೋಗ್ಯ ಉಪನಿಷತ್ತು ಸಾರುತ್ತದೆ. ಅಲ್ಲದೆ ಮಾಂಡೂಕ್ಯೋಪನಿಷತ್ತು ಮತ್ತು ಬೃಹದಾರಣ್ಯಕೋಪನಿಷತ್ತು ಸಹ ಜಗತ್ತಿನಲ್ಲಿ ಇರುವುದೆಲ್ಲ ಬ್ರಹ್ಮನೇ ಆಗಿದ್ದಾನೆ ಎಂದಿವೆ. ಉದಾಹರಣೆಗೆ–

ಸರ್ವಂ ಖಲ್ವಿದಂ ಬ್ರಹ್ಮ।,
ಸರ್ವಂ ಹ್ಯೇತದ್ ಬ್ರಹ್ಮ।,
ಬ್ರಹ್ಮೇದಂ ಸರ್ವಂ।[4]

ಬ್ರಹ್ಮನ ಸ್ವರೂಪ :–

ಬ್ರಹ್ಮ ಅಮೃತ ಸ್ವರೂಪನು. ಅವನು ಈ ವಿಶ್ವದ ಒಳಗೆ–ಹೊರಗೆ, ಮೇಲೆ–ಕೆಳಗೆ, ಹಿಂದೆ–ಮುಂದೆ ಮತ್ತು ಎಡ–ಬಲಗಳಲ್ಲಿ ಹರಡಿಕೊಂಡಿದ್ದಾನೆ. ಎಂದು ಮುಂಡಕೋಪನಿಷತ್ತು ಹೇಳುತ್ತದೆ. ಆದುದರಿಂದ ಬ್ರಹ್ಮನು ಸರ್ವವ್ಯಾಪಿ ಎಂದು ಹೇಳಲಾಗುತ್ತದೆ.

ಬ್ರಹ್ಮೈವೇದಮಮೃತಂ ಪುರಸ್ತಾದ್ಬ್ರಹ್ಮ ಪಶ್ಚಾದ್ಬ್ರಹ್ಮ ದಕ್ಷಿಣತಶ್ಚೋತರೇಣ।
ಅಧಶ್ಚೋರ್ಧ್ವಂ ಚ ಪ್ರಸೃತಂ ಬ್ರಹ್ಮೈವೇದಂ ವಿಶ್ವಮಿದಂ ವರಿಷ್ಠಮ್॥[5]

"ಸತ್ಯಂ ಜ್ಞಾನಂ ಅನಂತಂ ಬ್ರಹ್ಮ।", "ವಿಜ್ಞಾನಂ ಆನಂದಂ ಬ್ರಹ್ಮ।", ಪ್ರಜ್ಞಾನಂ

ಬ್ರಹ್ಮ।"[6] ಬ್ರಹ್ಮನು ಸತ್, ಜ್ಞಾನ, ಅನಂತ, ವಿಜ್ಞಾನ, ಆನಂದ ಹೀಗೆ ಮೊದಲಾದ ಸ್ವರೂಪನೆಂದು ಉಪನಿಷತ್ತುಗಳು ಸಾರಿವೆ.

"ಅದೃಶ್ಯಮವ್ಯವಹಾರ್ಯಮಗ್ರಾಹ್ಯಮಲಕ್ಷಣಮಚಿಂತ್ಯಮವ್ಯಪದೇಶ್ಯಮಮೇಕಾತ್ಮ ಪ್ರತ್ಯಯಸಾರಂ ಪ್ರಪಂಚೋಪಶಮಂ ಶಾಂತಂ ಶಿವಮದ್ವೈತಮ್।"[7] ಅಂದರೆ ಬ್ರಹ್ಮನು ಅಖಂಡ, ನಿರ್ಗುಣ, ನಿರಾಕಾರ, ನಿರವದ್ಯ, ನಷ್ಟಪ್ರಪಂಚ, ನಿರಂಜನ, ನಿತ್ಯ, ಶಾಶ್ವತ, ಅದೃಶ್ಯ, ಅವ್ಯವಹಾರ್ಯ, ಅಗ್ರಾಹ್ಯ, ಅಲಕ್ಷಣ, ಅಚಿಂತ್ಯ, ಅವರ್ಣನೀಯ, ಏಕಾತ್ಮ, ಪ್ರತ್ಯಸಾರ, ಪ್ರಪಂಚ, ಶಾಂತನು, ಶಿವನು, ಅದ್ವಯನಾಗಿದ್ದಾನೆ ಎಂದು ಮಾಂಡೂಕವು ಬ್ರಹ್ಮನ ಸ್ವರೂಪ ಕುರಿತು ಹೇಳಿದೆ.

"ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್।", "ನೇಹನಾನಾಸ್ತಿ ಕಿಂಚನ।"[8] ಬ್ರಹ್ಮನು ಏಕಮೇವಾದ್ವಿತೀಯನಾಗಿದ್ದಾನೆ. ಅಂದರೆ ಅವನನ್ನು ಬಿಟ್ಟು ಈ ವಿಶ್ವದಲ್ಲಿ ವ್ಯಕ್ತಿಯಾಗಲೀ ಅಥವಾ ವಸ್ತುವಾಗಲೀ ಇರಲಿಲ್ಲವೆಂದು ಛಾಂದೋಗ್ಯ ಮತ್ತು ಕಠೋಪನಿಷತ್ತುಗಳು ಹೇಳಿವೆ.

ದಿವ್ಯೋ ಹ್ಯಮೂರ್ತಃ ಪುರುಷಃ ಸಬಾಹ್ಯಾಭ್ಯಾಂತರೋ ಹ್ಯಜಃ।
ಅಪ್ರಾಣೋ ಹ್ಯಮನಾಃ ಶುಭ್ರೋ ಹ್ಯಕ್ಷರಾತ್ಪರತಃ ಪರಃ॥[9]

ಅಂದರೆ ಬ್ರಹ್ಮನು ದಿವ್ಯ, ಅಮೂರ್ತ, ಬಾಹ್ಯಾಭ್ಯಾಂತರ, ವ್ಯಾಪ್ತನಾಗಿದ್ದಾನೆ. ಪ್ರಾಣ ಮತ್ತು ಮನಸ್ಸುಗಳಿಲ್ಲದ ಶುಭ್ರವಾದ ಅವನು ಅವ್ಯಾಕೃತ ಪ್ರಕೃತಿಗಿಂತ ಅಧಿಕ, ಸಮಷ್ಟಿಗಿಂತ ಅಧಿಕನಾಗಿದ್ದಾನೆ. ಅಂದರೆ ವ್ಯಾಕೃತ–ಅವ್ಯಾಕೃತ ಮತ್ತು ವ್ಯಷ್ಟಿ–ಸಮಷ್ಟಿಗಳು ಬ್ರಹ್ಮನ ಸೃಷ್ಟಿಯಾದರೂ ಅವುಗಳನ್ನು ಮೀರಿದ ಶಕ್ತಿ, ಸ್ವರೂಪ ಅವನದಾಗಿದೆ.

ಏಷೋsಗ್ನಿಸ್ತಪತ್ಯೇಷ ಸೂರ್ಯ ಏಷ ಪರ್ಜನ್ಯೋ ಮಘವಾನೇಷ ವಾಯುಃ।
ಏಷ ಪೃಥಿವೀ ರಯಿರ್ದೇವಃ ಸದಸಚ್ಚಾಮೃತಂ ಚ ಯತ್॥[10]

ಅವನೇ ಅಗ್ನಿ, ಸೂರ್ಯ, ಮಳೆ, ಇಂದ್ರ, ಭೂಮಿ, ವಾಯು, ರಯಿ, ಮೊದಲಾದ ದೇವತೆ, ಸತ್, ಅಸತ್, ಹಾಗೂ ಅಮೃತ ಸ್ವರೂಪನಾಗಿದ್ದಾನೆ. ಅಂದರೆ ಜಗತ್ತಿನಲ್ಲಿರುವ ಸರ್ವ ವಸ್ತುಗಳು ಅವನೇ ಆಗಿದ್ದಾನೆ.

ಅಣೋರಣೀಯಾನ್ಮಹತೋ ಮಹಿಯಾನ್ ಆತ್ಮಸ್ಯ ಜಂತೋರ್ನಿಹಿತೋ ಗುಹಾಯಾಮ್।[11]
ತಂ ದುರ್ದರ್ಶಂ ಗೂಡಮನುಪ್ರವಿಷ್ಟಂ ಗುಹಾಹಿತಂ ಗಹ್ವರೇಷ್ಠಂ ಪುರಾಣಮ್।[12]

ಬ್ರಹ್ಮನು ಅಣುವಿಗಿಂತ ಅಣು, ಮಹತ್ತಿಗಿಂತ ಮಹತ್ತಾಗಿ, ಅತೀ ಸೂಕ್ಷ್ಮದಿಂದ ಎಲ್ಲ ಪ್ರಾಣಿಗಳ ಹೃದಯ ಗುಹೆಯಲ್ಲಿದ್ದಾನೆ. ಮತ್ತು ಪುರಾಣನೂ ಆಗಿದ್ದಾನೆ. ಜಗತ್ತಿನಲ್ಲಿರುವ ಜಡ–ಚೇತನ ವಸ್ತುಗಳಲ್ಲಿ ವ್ಯಪಿಸಿ, ಸ್ಥೂಲನೂ, ಸೂಕ್ಷ್ಮನೂ ಹಾಗೂ ಪುರಾತನನೂ ಆಗಿದ್ದಾನೆ.

ಏಷ ಸರ್ವೇಶ್ವರ ಏಷ ಸರ್ವಜ್ಞ ಏಷೋಽಂತರ್ಯಾಮ್ಯೇಷ।
ಯೋನಿಃ ಸರ್ವಸ್ಯ ಪ್ರಭವಾಪ್ಯಯೌ ಹಿ ಭೂತಾನಾಮ॥[13]

ಅವನು ಸರ್ವೇಶ್ವರನು, ಸರ್ವಜ್ಞ, ಸರ್ವಾಂತರ್ಯಾಮಿ, ಸರ್ವಕಾರಣ ಹಾಗೂ ಸರ್ವಭೂತಗಳ ಪ್ರಭಾವ ಪ್ರಳಯನಾಗಿದ್ದಾನೆ. ಅಂದರೆ ಬ್ರಹ್ಮನು ಜಡ–ಚೇತಗಳ ಆಧಾರಭೂತನಾಗಿ ಅವುಗಳ ಶಕ್ತಿ, ಸ್ವರೂಪ ಹಾಗೂ ಎಲ್ಲವನ್ನೂ ಅರಿತಿದ್ದಾನೆಂದು ಮಾಂಡೂಕ್ಯೋಪನಿಷತ್ತು ಸಾರಿದೆ.

ಆದುದರಿಂದ ಇಂಥಹ ಬ್ರಹ್ಮನು ಎಲ್ಲಾ ಜೀವಜಂತುಗಳಲ್ಲಿ ಪ್ರಕಾಶಿಸದೆ ಗೂಢನಾಗಿರುವುದರಿಂದ ಇವನನ್ನು ಸೂಕ್ಷ್ಮದರ್ಶಿಗಳು ಏಕಾಗ್ರತೆಯಿಂದ ಕೂಡಿದ ಸೂಕ್ಷ್ಮ ಬುದ್ಧಿಯಿಂದ ಮಾತ್ರ ನೋಡುತ್ತಾರೆಂದು ಕಠೋಪನಿಷತ್ತು ಹೀಗೆ ಹೇಳಿದೆ–

ಏಷ ಸರ್ವೇಷು ಭೂತೇಷು ಗೂಢೋಽಽತ್ಮಾ ನ ಪ್ರಕಾಶತೇ।
ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ॥[14]

ಬ್ರಹ್ಮನ ಭವ್ಯತೆಯು ಯೋಚಿಸಲೂ ಅಸಾಧ್ಯವಾಗಿದೆ. ಅವನ ಸೂಕ್ಷ್ಮತೆಯಂತೂ ಅತೀ ಸೂಕ್ಷ್ಮವಾಗಿದೆ. ದೂರದಲ್ಲಿ ನೋಡುವುದಾದರೆ ಅಂತ್ಯವೇ ಇಲ್ಲದಷ್ಟು ದೂರದಲ್ಲಿದ್ದಾನೆ. ಇಲ್ಲಿ ನಮ್ಮ ಹತ್ತಿರದಲ್ಲೂ ಇದ್ದಾನೆ. ಅವನು ಜೀವಿಗಳ ಹೃದಯಾಂತರಾಳದಲ್ಲೂ ಶೋಭಿಸುತ್ತಿದ್ದಾನೆಂದು ಮುಂಡಕೋಪನಿಷತ್ತು ಹೇಳುವುದು. ಉದಾಹರಣೆಗೆ–

ಬೃಹಚ್ಚ ತದ್ದಿವ್ಯಮಚಿಂತ್ಯರೂಪಂ ಸೂಕ್ಷ್ಮಾಚ್ಚ ತತ್ಸೂಕ್ಷ್ಮತರಂ ವಿಭಾತಿ।
ದೂರಾತ್ಸುದೂರೇ ತದಿಹಾಂತಿಕೇ ಚ ಪಶ್ಯತ್ಸ್ವಿಹೈವ ನಿಹಿತಂ ಗುಹಾಯಾಮ್॥[15]

ಅವನು ನಮ್ಮಿಂದ ಅತ್ಯಂತ ಸಮೀಪನೂ ಅತ್ಯಂತ ದೂರನೂ ಇದ್ದಾನೆ. **"ಆಸೀನೋ ದೂರಂ ವ್ರಜತಿ ಶಯಾನೋನೋ ಯಾತಿ ಸರ್ವತಃ।"**[16] ಕಠೋಪನಿಷತ್ತಿನ ಅರ್ಥವನ್ನೇ ಈಶಾವಾಸ್ಯೋಪನಿಷತ್ತು ಸಹ ಅವನು ಚಲಿಸುತ್ತಾನೆ. ಚಲಿಸುವುದಿಲ್ಲ. ಅವನು ದೂರದಲ್ಲಿಯೂ ಮತ್ತು ಹತ್ತಿರದಲ್ಲಿಯೂ ಇದ್ದು ಎಲ್ಲದರ ಒಳ–ಹೊರಗೆ ತುಂಬಿಕೊಂಡಿದ್ದಾನೆ ಎಂದು ಹೇಳಿದೆ–

ತದೇಜತಿ ತನ್ನೈಜತಿ ತದ್ದೂರೇ ತದ್ವಂತಿಕೇ।
ತದಂತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ॥[17]

ಬ್ರಹ್ಮನ ಉಭಯ ಸ್ವರೂಪ :–

"ನಾಂತಃಪ್ರಜ್ಞಂ ನ ಬಹಿಷ್ಪ್ರಜ್ಞಂ ನೋಭಯತಃಪ್ರಜ್ಞಂ ನ ಪ್ರಜ್ಞಾನಘನ ನ ಪ್ರಜ್ಞಂ ನಾಪ್ರಜ್ಞಮ್।

ಅದೃಶ್ಯಮವ್ಯವಹಾರ್ಯಮಗ್ರಾಹ್ಯಮಲಕ್ಷಣಮಚಿಂತ್ಯಮವ್ಯಪದೇಶ್ಯಮಮೇಕಾತ್ಮ ಪ್ರತ್ಯಯಸಾರಂ ಪ್ರಪಂಚೋಪಶಮಂ ಶಾಂತಂ ಶಿವಮದ್ವೈತಮ್।"[18] ಎಂಬ

ಮಾಂಡೂಕೋಪನಿಷತ್ತಿನ ವಾಕ್ಯದಂತೆ ಅವನು ಅಂತಃಪ್ರಜ್ಞನಲ್ಲ, ಬಹಿಃಪ್ರಜ್ಞನಲ್ಲ, ಉಭಯಪ್ರಜ್ಞನಲ್ಲ, ಪ್ರಜ್ಞಾನಘನನಲ್ಲ, ಪ್ರಜ್ಞನಲ್ಲ, ಅಪ್ರಜ್ಞನಲ್ಲ, ಅವನು ಅದೃಶ್ಯ, ಅವ್ಯವಹಾರ್ಯ, ಅಗ್ರಾಹ್ಯ, ಅಲಕ್ಷಣ, ಅಚಿಂತ್ಯ, ಅವರ್ಣನೀಯ, ಏಕಾತ್ಮ, ಪ್ರತ್ಯಸಾರ, ಅಪ್ರಪಂಚ ಶಾಂತನು, ಶಿವನು, ಅದ್ವಯನಾಗಿದ್ದಾನೆ.

ಅನ್ಯತ್ರ ಧರ್ಮಾದನ್ಯತ್ರಾಧರ್ಮಾದನಯತ್ರಾಸ್ಮಾತ್ಕೃತಾಕೃತಾತ್।
ಅನ್ಯತ್ರ ಭೂತಚ್ಚ ಭವ್ಯಚ್ಚ ಯತ್ತತ್ಪಶ್ಯಸಿ ತದ್ವದ॥[19]

ಕಠೋಪನಿಷತ್ತಿನ ಈ ಮೇಲಿನ ಮಂತ್ರದ ಅಭಿಪ್ರಾಯದಂತೆ ಬ್ರಹ್ಮನು ಧರ್ಮಕ್ಕಿಂತ ಭಿನ್ನನೂ, ಅಧರ್ಮಕ್ಕಿಂತ ಭಿನ್ನನೂ ಆಗಿದ್ದಾನೆ. ಕಾರ್ಯಕಾರಣಗಳಿಗಿಂತ ಭಿನ್ನನೂ ಆಗಿದ್ದಾನೆ. ಭೂತ ಭವಿಷತ್ಕಾಲಗಳಿಗಿಂತಲೂ ಭಿನ್ನನಾಗಿದ್ದಾನೆಂದು ಹೇಳಿದೆ. ಅಂದರೆ ಬ್ರಹ್ಮನ ಸ್ವರೂಪ ದ್ವಯ ಹಾಗೂ ಅದ್ವಯವೂ ಆಗಿದೆ.

ಇಂದ್ರಿಯಗಳ ಸೃಷ್ಟಿಕರ್ತಾ

ಏತಸ್ಮಾಜ್ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿ ಚ।
ಖಂ ವಾಯುರ್ಜ್ಯೋತಿರಾಪಃ ಪೃಥಿವೀ ವಿಶ್ವಸ್ಯ ಧಾರಿಣೀ॥[20]

ಬ್ರಹ್ಮನಿಂದಲೇ ಪ್ರಾಣ, ಮನ, ಸರ್ವೇಂದ್ರಿಯಗಳು, ಆಕಾಶ, ವಾಯು, ಅಗ್ನಿ, ಜಲ ಮೊದಲಾದವುಗಳು ಉತ್ಪನ್ನಗೊಂಡಿವೆ. ಮತ್ತು ಈ ಎಲ್ಲವನ್ನು ಧಾರಣೆ ಮಾಡುವ ಧರಣಿ(ಪೃಥಿವಿ)ಯು ಉತ್ಪನ್ನವಾಗಿದೆ ಎಂದು ಮುಂಡಕೋಪನಿಷತ್ತು ಹೇಳಿದರೂ, ಇದೇ ಉಪನಿಷತ್ತು ಇನ್ನೊಂದು ಕಡೆಗೆ ಅವನನ್ನು ಕಣ್ಣುಗಳಿಂದ ನೋಡಲಾಗುವುದಿಲ್ಲ. ಮಾತುಗಳಿಂದ ಗ್ರಹಿಸಲಾಗುವುದಿಲ್ಲ. ದೇವತಗಳಾಗಲೀ, ತಾಪಸಿಗಳಾಗಲೀ ಅವನನ್ನು ಸಮೀಪಿಸಲಾರರು. ಅವನು ಯಾವ ಕರ್ಮದಿಂದಲೂ ಬಂಧಿತನಲ್ಲ. ಆದರೆ ಚಿತ್ತ ಶುದ್ಧಿಯಿಂದ ದಿವ್ಯಜ್ಞಾನವನ್ನು ಪಡೆದು ತಪೋನಿಷ್ಠರಾಗಿ ನಿಷ್ಕಲ್ಮಷ ಮನಸ್ಸಿನಿಂದ ಧ್ಯಾನಿಸಿದರೆ ಬ್ರಹ್ಮನ ಸಾಕ್ಷಾತ್ಕಾರವಾಗುವುದು ಎನ್ನುವುದು.

ನ ಚಕ್ಷುಷಾ ಗೃಹ್ಯತೇ ನಾಪಿ ವಾಚಾ ನಾನ್ಯೈರ್ದೇವೈಸ್ತಪಸಾ ಕರ್ಮಣಾ ವಾ।
ಜ್ಞಾನಪ್ರಸಾದೇನ ವಿಶುದ್ಧಸತ್ವಸ್ತತಸ್ತು ತಂ ಪಶ್ಯತೆ ನಿಷ್ಕಲಂ ಧ್ಯಾಯಮಾನ॥[21]

ಕೇನೋಪನಿಷತ್ತು 1.1.4 ಮಂತ್ರದಿಂದ 1.1.8 ವರೆಗೆ ಬ್ರಹ್ಮನ ಬಗ್ಗೆ ಬಹು ಸುಂದರವಾಗಿ ಪ್ರತಿಪಾದಿಸಿದೆ. ಯಾವುದನ್ನು ಮಾತಿನಿಂದ ಹೇಳಲಾಗುವುದಿಲ್ಲವೋ ಯಾವುದು ಮಾತನ್ನು ಹೇಳಬಲ್ಲದೋ ಅದೇ ಬ್ರಹ್ಮವೆಂದು ತಿಳಿ. ಇದು ಎಂದು ಉಪಾಸನೆ ಮಾಡಿದರಷ್ಟೆ ಅದು ಬ್ರಹ್ಮವಲ್ಲ. ಯಾವುದು ಮನಸ್ಸಿನಿಂದ ಮನನ ಮಾಡಲಾಗುವುದಿಲ್ಲವೋ ಯಾವುದು ಮನಸ್ಸನ್ನು ಮನನ ಮಾಡುವುದೆಂದು ಹೇಳುವರೋ ಅದೇ ಬ್ರಹ್ಮವೆಂದು ತಿಳಿ. ಇದು ಎಂದು ಉಪಾಸನೆ ಮಾಡುವರೋ ಇದಲ್ಲ. ಯಾವುದು ಕಣ್ಣಿನಿಂದ ಕಾಣುವುದಿಲ್ಲವೋ ಯಾವುದರಿಂದ ನೋಟಗಳು

ನೋಡುತ್ತಾರೋ ಅದೇ ಬ್ರಹ್ಮವೆಂದು ತಿಳಿ. ಅದು ಯಾವುದನ್ನು ಕಿವಿಯಿಂದ ಕೇಳಲಾಗುವುದಿಲ್ಲವೋ ಯಾವುದರಿಂದ ಈ ಶ್ರೋತ್ರವನ್ನು ಕೇಳಬಹುದೋ ಅದೇ ಬ್ರಹ್ಮವೆಂದು ತಿಳಿ. ಯಾವುದನ್ನು ಘ್ರಾಣೇಂದ್ರಿಯದಿಂದ ಮೂಸುವುದಕ್ಕಾಗದೋ ಯಾವುದು ಘ್ರಾಣವನ್ನೂ ತನ್ನ ಕೆಲಸಕ್ಕೆ ಹಚ್ಚುವುದೋ ಅದೇ ಬ್ರಹ್ಮವೆಂದು ತಿಳಿ. ಇದು ಎಂದು ಉಪಾಸನೆ ಮಾಡುತ್ತಾರಷ್ಟೆ ಇದಲ್ಲ.

ಕೇನೋಪನಿಷತ್ತು ಮನಸ್ಸಾದಿ ಇಂದ್ರಿಯಗಳಿಗೆ ಪ್ರೇರಣ ಮತ್ತು ಕಾರಣರಾರು ಎಂದು ಪ್ರಶ್ನೆಯನ್ನು ಎದುರುಗಿಟ್ಟುಕೊಂಡು ಅದಕ್ಕೆಲ್ಲ ಬ್ರಹ್ಮನೇ ಕಾರಣ, ಹಾಗೂ ಆಯಾ ಇಂದ್ರಿಯಗಳಂತೆ ಬ್ರಹ್ಮನಿದ್ದಾನೆಂದು ತಿಳಿಸುತ್ತದೆ.

ಕೇನೇಷಿತಂ ಪತತಿ ಪ್ರೇಷಿತಂ ಮನಃ ಕೇನ ಪ್ರಾಣಃ ಪ್ರಥಮ ಪ್ರೈತಿ ಯುಕ್ತಃ।
ಕೇನೇಷಿತಾಂ ವಾಚಾಮಿಮಾಂ ವದಂತಿ ಚಕ್ಷುಃ ಶ್ರೋತ್ರಂ ಕ ಉ ದೇವೋ ಯುನಕ್ತಿ॥[22]

ಮನಸ್ಸು, ಪ್ರಾಣ, ವಾಕ್, ಚಕ್ಷು ಮತ್ತು ಶ್ರೋತ್ರುಗಳು ಪ್ರಧಾನ ಇಂದ್ರಿಯಗಳಾಗಿವೆ. ಇವುಗಳು ಸ್ವಶಕ್ತಿಯಿಂದ ಚಲಿಸುವುದಿಲ್ಲ. ಅವುಗಳ ಹಿಂದಿರುವ ಕಾರ್ಯಶಕ್ತಿಯು ಬ್ರಹ್ಮನದು. ಇವುಗಳು ತಮ್ಮ ತಮ್ಮ ಕಾರ್ಯಗಳಲ್ಲಿ ತೊಡಗಲು ಬ್ರಹ್ಮನ ಸಹಾಯಬೇಕು. ಈ ಮಂತ್ರವು ಪ್ರಶ್ನಿಸುವುದರ ಜೊತೆಗೆ ಉತ್ತರವು ಸಹ ಹೇಳುತ್ತದೆ. ಶರೀರೇಂದ್ರಿಯಗಳು ಕಾರ್ಯಪ್ರವೃತ್ತಿಯಲ್ಲಿ ತೊಡಗಲು ಪ್ರೇರಕ ಯಾರು? ಎಂದು ಪ್ರಶ್ನಿಸಿ ದೇವನು(ಬ್ರಹ್ಮ) ಎಂದು ಉತ್ತರಿಸುತ್ತದೆ. ಬ್ರಹ್ಮನ ಇಚ್ಛೆಯಂತೆ, ಪ್ರೇರಿತವಾಗಿ ಮನಸ್ಸು ಚಲಿಸುತ್ತದೆ. ಪ್ರಾಣವು ಕ್ರಿಯಾಯುಕ್ತವಾಗಿದೆ. ವಾಕ್ ಮಾತನಾಡುತ್ತದೆ. ಚಕ್ಷು ನೋಡುತ್ತದೆ. ಶ್ರೋತ್ರವು ಕೇಳುತ್ತದೆ. ಒಟ್ಟಿನಲ್ಲಿ ಬ್ರಹ್ಮನ ಪ್ರೇರಣೆಯಿಂದ ಶರೀರೇಂದ್ರಿಗಳು ಕಾರ್ಯಪ್ರವೃತ್ತಿಯಲ್ಲಿ ತೊಡಗುತ್ತವೆ ಎನ್ನುವುದು ಈ ಮಂತ್ರ.

ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೋ ಯದ್ವಾಚೋ ಹ ವಾಚಂ ಸ ಉ ಪ್ರಾಣಸ್ಯ ಪ್ರಾಣಃ।
ಚಕ್ಷುಷಶ್ಚಕ್ಷುರತಿಮುಚ್ಯ ಧೀರಾಃ ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ॥[23]

ಶ್ರೋತ್ರದಿಂದ ಕೇಳುತ್ತೇವೆಂದು ತಿಳಿದುಕೊಂಡರೆ, ಕೇಳುವುದಿಲ್ಲ. ಇದು ಕೇವಲ ಮಾಧ್ಯಮ ಮಾತ್ರ. ಬೇರೆ ಯಾರೋ ಕೇಳುತ್ತಾರೆ ಎನ್ನುವುದನ್ನು **"ಶ್ರೋತ್ರಸ್ಯ ಶ್ರೋತ್ರಂ"** ಎಂದು. ಮನಸ್ಸಿನಿಂದ ಮನನ ಮಾಡುತ್ತೇವೆಂದು ಕೊಂಡರೆ, ಮನಸ್ಸು ಮನನ ಮಾಡುವುದಿಲ್ಲ. ಇದನ್ನು ಮಾಧ್ಯಮವಾಗಿಟ್ಟುಕೊಂಡು ಬೇರೆ ಯಾರೋ ಮನನ ಮಾಡುತ್ತಾರೆ ಎಂಬುವುದನ್ನು **"ಮನಸೋ ಮನೋಯತ್"** ಎಂದು. ವಾಕ್ಕಿನಿಂದ ಮಾತನಾಡುತ್ತೇವೆಂದು ತಿಳಿಯುವುದು ತಪ್ಪು, ವಾಕ್ ಮಾಧ್ಯಮವಾಗಿಟ್ಟುಕೊಂಡು ಬೇರೆ ಯಾರೋ ಮಾತನಾಡುತ್ತಾರೆ **"ವಾಚೋ ಹ ವಾಚಂ"** ಎಂದು. ಪ್ರಾಣವು ಸ್ವಶಕ್ತಿಯಿಂದ ಚಲಿಸುವುದಿಲ್ಲ. ಇದನ್ನು ಮಾಧ್ಯಮವಾಗಿಟ್ಟುಕೊಂಡು ಬೇರೆ ಯಾರೋ ಚಲಿಸುತ್ತಾರೆನ್ನುವುದನ್ನು **"ಪ್ರಾಣಸ್ಯ ಪ್ರಾಣ"** ಎಂದು. ಕಣ್ಣು ನೋಡುತ್ತದೆಂದರೆ ನೋಡುವುದಿಲ್ಲ. ಇದನ್ನು

ಮಾಧ್ಯಮವಾಗಿಟ್ಟುಕೊಂಡು ಬೇರೆ ಯಾರೋ ನೋಡುತ್ತಾರೆಂಬುವುದನ್ನು **"ಚಕ್ಷುಷಃ ಚಕ್ಷುಃ"** ಎಂದಿದೆ ಮಂತ್ರ.

ಇಲ್ಲಿ ಬೇರೆ ಯಾರೋ ಎಂದರೆ ಬ್ರಹ್ಮ. ಇವನು ಶ್ರೋತ್ರಕ್ಕೆ ಶ್ರೋತೃ, ಮನಸ್ಸಿಗೆ ಮನಸ್ಸು, ವಾಕ್ಕಿಗೆ ವಾಕ್ಕು, ಪ್ರಾಣಕ್ಕೆ ಪ್ರಾಣ ಮತ್ತು ಚಕ್ಷುವಿಗೆ ಚಕ್ಷುವಾಗಿದ್ದಾನೆ. ಇಂತಹ ಬ್ರಹ್ಮನ ಇರುವಿಕೆಯನ್ನು ಅರಿತ ಧೀರರು ಈ ಲೋಕದಿಂದ ಬಿಡುಗಡೆ ಹೊಂದಿ ಅಮೃತರಾಗುತ್ತಾರೆ ಎಂದು ಕೇನೋಪನಿಷತ್ತು ಹೇಳಿದರೆ, ಪ್ರಶ್ನೋಪನಿಷತ್ತು ಎಲ್ಲವೂ ಬ್ರಹ್ಮನೇ ಎನ್ನುವುದು. ನೋಡುವವನು, ಮುಟ್ಟುವವನು, ಕೇಳುವವನು, ಆಘ್ರಾಣಿಸುವವನು, ಆಸ್ವಾದಿಸುವವನು, ಮನನ ಮಾಡುವವನು, ನಿಶ್ಚಯಿಸುವವನು, ಕರ್ತೃವು, ವಿಜ್ಞಾತೃ, ಸ್ವಭಾವದವನು ಪುರುಷನೂ ಅವನೇ ಆಗಿದ್ದಾನೆ.

ಏಷ ಹಿ ದ್ರಷ್ಟಾ ಸ್ಪ್ರಷ್ಟಾ ಶ್ರೋತಾ ಘ್ರಾತಾ ರಸಯಿತಾ ಮಂತಾ ಬೋದ್ಧಾ ಕರ್ತಾ ವಿಜ್ಞಾತಾತ್ಮಾ ಪುರುಷಃ।[24]

ಆದುದರಿಂದ ಕಠೋಪನಿಷತ್ತು ಇಂದ್ರಿಯಗಳಿಗಿಂತ ವಿಷಯ ಶ್ರೇಷ್ಠ, ವಿಷಯಗಳಿಗಿಂತ ಮನಸ್ಸು ಶ್ರೇಷ್ಠ, ಮನಸ್ಸಿಗಿಂತ ಬುದ್ಧಿ ಶ್ರೇಷ್ಠ, ಬುದ್ಧಿಗಿಂತ ಮಹತೆಂಬ ಬ್ರಹ್ಮ(ಆತ್ಮ) ಶ್ರೇಷ್ಠ, ಎಂದಿದೆ.

ಇಂದ್ರಿಯೇಭ್ಯಃ ಪರಾ ಹ್ಯರ್ಥಾ ಅರ್ಥೇಭ್ಯಶ್ಚ ಪರಂ ಮನಃ।
ಮನಸಸ್ತು ಪರಾ ಬುದ್ಧಿರ್ಬುದ್ಧೇರಾತ್ಮಾ ಮಹಾನ್ಪರಃ॥[25]

ಓಂಕಾರ ಸ್ವರೂಪ ಬ್ರಹ್ಮ

ಓಮಿತ್ಯೇತದಕ್ಷರಮುದ್ಗೀಥಮುಪಾಸೀತ। ಓಮಿತಿ ಹ್ಯುದ್ಗೀಯತಿ ತಸ್ಯೋಪವ್ಯಾಖ್ಯಾನಮ್।[26]

ಬ್ರಹ್ಮನನ್ನು ಕುರಿತು ಛಾಂದೋಗ್ಯವು ಪ್ರಾರಂಭದ ಮಂತ್ರದಲ್ಲಿ ಓಂಕಾರವನ್ನು ಕುರಿತು ಹೇಳುತ್ತ ಅದರ ವ್ಯುತ್ಪತ್ತಿ ಸಹ ಹೇಳುತ್ತದೆ. ಆ ಓಂಕಾರವೇ ಬ್ರಹ್ಮ. ಅದಕ್ಕೆ ಉದ್ಗೀತ(ವಾಣಿ) ಎಂದು ಕರೆದು ಉಪಾಸನೆ ಮಾಡಲು ಬೋಧಿಸುತ್ತದೆ. ಅದು ವಿಶ್ವವನ್ನೇ ವ್ಯಾಪಿಸಿದೆ.

ಓಂ ಇದು ಅಕ್ಷರವಾಗಿದೆ. ಈ ಸಮಸ್ತ ವಿಶ್ವವು ಅದರ ಮಹಿಮೆ. ಭೂತ, ವರ್ತಮಾನ ಮತ್ತು ಭವಿಷ್ಯತ್ತಾದುದೆಲ್ಲ ಓಂಕಾರವೇ ಆಗಿದೆ. ಅಲ್ಲದೆ ತ್ರಿಕಾಲಾತೀತವಾದುದೂ ಓಂಕಾರವೆಂದು ಮಾಂಡೂಕೋಪನಿಷತ್ತು ಹೀಗೆ ಹೇಳಿದೆ–

ಓಮಿತ್ಯೇತದಕ್ಷರಮಿದಂ ಸರ್ವಂ ತಸ್ಯೋಪವ್ಯಾಖ್ಯಾನಂ ಭೂತಂ ಭವದ್ಭವಿಷ್ಯದಿತಿ।
ಸರ್ವಮೋಂಕಾರ ಏವ। ಯಚ್ಚನ್ಯತ್ತ್ರಿಕಾಲಾತೀತಂ ತದಪ್ಯೋಂಕಾರ ಏವ।[27]

ಕಠೋಪನಿಷತ್ತು ಸಹ ಈ ಅಕ್ಷರ(ಓಂಕಾರ)ವೇ ಬ್ರಹ್ಮ. ಈ ಅಕ್ಷರವೇ ಪರಮ ಶ್ರೇಷ್ಠವಾಗಿದೆ. ಈ ಅಕ್ಷರವನ್ನು ತಿಳಿದುಕೊಂಡರೆ ಎಲ್ಲವನ್ನು ತಿಳಿದಂತಾಗುವುದೆಂದು ಹೇಳಿದೆ–

ಏತದ್ಧ್ಯೇವಾಕ್ಷರಂ ಬ್ರಹ್ಮ ಏತದ್ಧ್ಯೇವಾಕ್ಷರಂ ಪರಮ।
ಏತದ್ಧ್ಯೇವಾಕ್ಷರಂ ಜ್ಞಾತ್ವಾ ಯೋ ಯದಿಚ್ಛತಿ ತಸ್ಯ ತತ್॥[28]

ಮಾಂಡೂಕ್ಯೋಪನಿಷತ್ತು ಮುಂದುವರೆದು ಬ್ರಹ್ಮ(ಆತ್ಮ)ವೇ ಓಂಕಾರವೆಂಬ ಪವಿತ್ರಾಕ್ಷರ ಅದು ಮಾತ್ರಾಯುಕ್ತವಾಗಿದೆ. ಪಾದಗಳೇ ಮಾತ್ರೆಗಳು, ಮಾತ್ರೆಗಳೇ ಪಾದಗಳು. ಅಕಾರ, ಉಕಾರ ಮತ್ತು ಮಕಾರಗಳೇ ಅದರ ಮಾತ್ರೆ(ಪಾದ)ಗಳೆಂದು ಓಂಕಾರದ ಅರ್ಥವನ್ನು ಈ ಕೆಳಗಿನ ಮಂತ್ರದಲ್ಲಿ ತಿಳಿಸಿದೆ–

ಸೋ ಯಮಾತ್ಮಾ ಧ್ಯಕ್ಷರಮೋಂಕಾರ ಧಿಮಾತ್ರಂ ಪಾದಾ ಮಾತ್ರಾ ಮಾತ್ರಾಶ್ಚ ಪಾದಾ ಅಕಾರ ಉಕಾರೋ ಮಕಾರ ಇತಿ।[29]

ತೈತ್ತಿರೀಯೋಪನಿಷತ್ತು ಸಹ ಓಂಕಾರ ಕುರಿತು **"ಓಮಿತಿ ಬ್ರಹ್ಮ। ಓಮಿತೀಗಂ ಸರ್ವಂ।"**[30] ಎಂದು ಹೇಳಿದೆ. **"ಓಮಿತ್ಯೇವಂ ಧ್ಯಾಯಥ ಆತ್ಮಾನಂ।"**[31] ಓಂಕಾರದ ಮೂಲಕ ಬ್ರಹ್ಮನನ್ನು ಧ್ಯಾನಿಸಬೇಕೆನ್ನುವುದು ಮುಂಡಕೋಪನಿಷತ್ತು.

ಸೃಷ್ಟಿಕರ್ತನಾಗಿ ಬ್ರಹ್ಮ :–

ಜಗತ್ತಿನ ರಚನೆಯ(ಸೃಷ್ಟಿಯ) ಪ್ರಾರಂಭದಲ್ಲಿ ಎಲ್ಲ ದೇವತೆಗಳಿಂತ ಮೊದಲು ಬ್ರಹ್ಮನೊಬ್ಬನೇ ಇದ್ದನು. ಅವನಿಂದಲೇ ಜಗತ್ತಿನ ಉತ್ಪತ್ತಿಯಾಯಿತ್ತೆಂದು ಮುಂಡಕೋಪನಿಷತ್ತು ಸಾರುತ್ತದೆ. **"ಬ್ರಹ್ಮಾ ದೇವಾನಾಂ ಪ್ರಥಮಃ ಸಂಬಭೂವ ವಿಶ್ವಸ್ಯ ಕರ್ತಾ ಭುವನಸ್ಯ ಗೋಪ್ತಾ।"**[32] ಜಗತ್ತನ ಸೃಷ್ಟಿ ಪೂರ್ವದಲ್ಲಿ ಬ್ರಹ್ಮನು ತಪಸ್ಸನ್ನಾಚರಿಸಿ, ಜಗತ್ತನ್ನು ಸೃಷ್ಟಿಸಿದನು. **"ಪ್ರಜಾಕಾಮೋ ವೈ ಪ್ರಜಾಪತಿ ಸ ತಪೋsತಪ್ಯತ।"**[33] ಜಗತ್ತನ್ನು ಸೃಷ್ಟಿಸಿ ಅದರಲ್ಲಿಯೇ ಪ್ರವೇಶಿಸಿದನು ಮತ್ತು ಪ್ರಳಯಕಾಲದಲ್ಲಿ ಅವನಲ್ಲಿಯೇ ಲೀನವಾಗುತ್ತದೆ. ಆದುದರಿಂದ ಈಶಾವಾಸ್ಯೋಪನಿಷತ್ತು **"ಈಶಾವಾಸ್ಯಮಿದಂ ಸರ್ವಂ।"**[34] ಎಂದು ಹೇಳಿದೆ. ಅವನು ಸರ್ವವ್ಯಾಪಿ, ಸರ್ವಗತ, ಹಾಗೂ ಅವನು ಸರ್ವತ್ರ ವ್ಯವಸ್ಥಿತನಾಗಿ ದ್ದಾನೆ. **"ಏಷ ಸರ್ವೇಶ್ವರ ಏಷ ಸರ್ವಜ್ಞ ಏಷೋsಂತರ್ಯಾಮ್ಯೇಷ।"**[35] ಅಲ್ಲದೆ ಅವನು ಅಣುವಿಗಿಂತ ಅಣು, ಮಹತ್ತಗಿಂತ ಮಹತ್ತಾಗಿದ್ದಾನೆ. **"ಅಣೋರಣೀಯಾನ್ಮಹತೋ ಮಹಿಯಾನ್ ಆತ್ಮಸ್ಯ ಜಂತೋರ್ನಿಹಿತೋ ಗುಹಾಯಾಮ್।"**[36] ಅವನು ಎಲ್ಲ ಭೂತ(ಜೀವಿ)ಗಳ ಅಂತರಾತ್ಮನಾಗಿ, ಎಲ್ಲ ಕೊರತೆ ಇತಿ–ಮಿತಿಗಳ ಆಚೆ ಇರುವನು. **"ಏಷ ಸರ್ವೇಷು ಭೂತೇಷು ಗೂಢೋssತ್ಮಾ ನ ಪ್ರಕಾಶತೇ।"**[37] ಅವನು ಸೃಷ್ಟಿಯ ಒಡೆಯನೂ, ಸಧಿಷ್ಠಾನನೂ, ಆಗಿರುವುದರಿಂದ ಅವನು ಎಲ್ಲವನ್ನೂ ನೋಡುತ್ತಾನೆ, ಕೇಳುತ್ತಾನೆ. ಹಾಗೂ ತಿಳಿಯುತ್ತಾನೆ ಎನ್ನುವುದು ಪ್ರಶ್ನೋಪನಿಷತ್ತು. **"ಏಷ ಹಿ ದ್ರಷ್ಟಾ ಸ್ಪ್ರಷ್ಟಾ ಶ್ರೋತಾ ಘ್ರಾತಾ ರಸಯಿತಾ ಮಂತಾ ಬೋದ್ಧಾ ಕರ್ತಾ ವಿಜ್ಞಾತಾತ್ಮಾ ಪುರುಷಃ।"**[38]

ಆದರೆ ಅವನನ್ನು ಯಾರೂ ನೋಡಲಾರರು, ಕೇಳಲಾರರು ಹಾಗೂ ಅರಿಯಲಾರರು ಎನ್ನುವುದು ಕೇನೋಪನಿಷತ್ತು.

ನ ತತ್ರ ಚಕ್ಷುರ್ಗಚ್ಛತಿ ನ ವಾಗ್ಗಚ್ಛತಿ ನೋ ಮನಃ।
ನ ವಿದ್ಮೋ ನ ವಿಜಾನೀಮೋ ಯಥೈದನುಶಿಷ್ಯಾತ್॥[39]

ಮುಂಡಕೋಪನಿಷತ್ತು ಸೃಷ್ಟಿ ರಚನೆಯ ಬಗೆಗೆ ದೃಷ್ಟಾಂತದ ಮೂಲಕ ಹೀಗೆ ವಿವರಿಸಿದೆ.–

ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ ಯಥಾ ಪೃಥಿವ್ಯಾಮೋಷಧಯಃ ಸಂಭವಂತಿ।
ಯಥಾ ಸತಃ ಪುರುಷಾತ್ಕೇಶಲೋಮಾನಿ ತಥಾsಕ್ಷರಾತ್ಸಂಭತೀಹ ವಿಶ್ವಮ್॥[40]

ಜೇಡರ ಹುಳುವು ತನ್ನ ಶರೀರದಿಂದ ತಂತುವನ್ನು ಹೊರತೆಗೆದು ಬಲೆ(ಜಾಲ) ತಯಾರಿಸಿಕೊಳ್ಳುವಂತೆ, ಪೃಥ್ವಿಯಲ್ಲಿ ತಾನಾಗಿಯೇ ಸಸ್ಯಗಳು ಹುಟ್ಟುವಂತೆ, ಜೀವಿಯ ಶರೀರದಲ್ಲಿ ರೋಮ, ಉಗುರುಗಳು ಹುಟ್ಟುವಂತೆ, ಬ್ರಹ್ಮನು ತನ್ನ ಸ್ವಶಕ್ತಿಯಿಂದಲೇ ಈ ಜಗತ್ತೂ ಮತ್ತು ಇಲ್ಲಿರುವ ಜೀವರಾಶಿಗಳನ್ನು ಸೃಷ್ಟಿಸಿದನು. ಪ್ರಶ್ನೋಪನಿಷತ್ತು ಸಹ ಬ್ರಹ್ಮನಿಂದ ಈ ವಿಶ್ವವು ಜನಿಸಿದೆ ಎನ್ನುವುದು. ಪಂಚಭೂತಗಳು, ಪ್ರಾಣ, ಮನಸ್ಸು, ಇಂದ್ರಿಯಗಳು, ಅನ್ನ, ತಪಸ್ಸು, ಮಂತ್ರ, ಕರ್ಮ, ಲೋಕ ಮೊದಲಾದವುಗಳು ಬ್ರಹ್ಮನಿಂದಲೇ ಜನಿಸಿವೆ.

ಸ ಪ್ರಾಣಸಸೃಜತ ಪ್ರಾಣಾಚ್ಛ್ರದ್ಧಾಂ ಖಂ ವಾಯುರ್ಜ್ಯೋತಿರಾಪಃ ಪೃಥಿವೀಂದ್ರಿಯಂ
ಮನೋsನ್ನಮನ್ನಾದ್ವೀರ್ಯಂ ತಪೋ ಮಂತ್ರಾಃ ಕರ್ಮ ಲೋಕಾ ಲೋಕೇಷು ಚ
ನಾಮ ಚ।[41]

ಜಗತ್ತಿನ ಸೃಷ್ಟಿಯ ವಿಚಾರ ಕುರಿತು ಜಗತ್ತು ಎಂಬ ಅಧ್ಯಯನದಲ್ಲಿ ಹೆಚ್ಚು ಚರ್ಚಿಸಲಾಗುತ್ತದೆ.

ಬ್ರಹ್ಮಜ್ಞಾನದ ಪರಂಪರೆ

ಅಥರ್ವಣೇಯಾಂ ಪ್ರವದೇತ ಬ್ರಹ್ಮsಥರ್ವಾ ತಾಂ ಪುರೋವಾಚಾಂಗಿರೇ ಬ್ರಹ್ಮವಿದ್ಯಾಮ್।
ಸ ಭಾರದ್ವಾಜಾಯ ಸತ್ಯವಾಹಾಯ ಪ್ರಾಹ ಭಾರದ್ವಾಜೋsಂಗಿರಸೇ ಪರಾವರಮ್।[42]

ಬ್ರಹ್ಮವಿದ್ಯೆಯ ಪರಂಪರೆಯನ್ನು ಕುರಿತು ಮುಂಡಕೋಪನಿಷತ್ತು ಈ ಮೇಲಿನ ಮಂತ್ರದಲ್ಲಿ ಬಹು ಸುಂದರವಾಗಿ ತಿಳಿಸಿದೆ. ಈ ವಿದ್ಯೆಯು ಅನುಕ್ರಮವಾಗಿ ಮೊದಲು ಬ್ರಹ್ಮನಿಂದ ಅಥರ್ವನಿಗೆ ಹೇಳಲ್ಪಟ್ಟಿತ್ತು. ಪುರಾತನವಾದ ಅಥರ್ವನು ಅಂಗಿರಸನಿಗೆ ಬೋಧಿಸಿದನು. ಅವನು ಅದನ್ನು ಸತ್ಯವಾಹನನಾದ ಭಾರದ್ವಾಜನಿಗೆ ಹೇಳಿದನು. ಭಾರದ್ವಾಜನು ವೇದದ ಪರಾವರ ಭಾಗಗಳನ್ನು ಅಂಗಿರಸನಿಗೆ ಹೇಳಿದನು. ಇದು ಯುಗಯುಗಾಂತರಗಳಿಂದ ಶಿಷ್ಯ–ಪ್ರಶಿಷ್ಯರಿಂದ ಇಂದಿನವರೆಗೂ ಜೀವಂತವಾಗಿ

ಹರಿದುಕೊಂಡುಬಂದ ಜೀವನದಿಯಾಗಿದೆ. ಅದರ (ಬ್ರಹ್ಮಜ್ಞಾನದ) ಬೋಧನೆಯೇ ಉಪನಿಷತ್ತಿನ ಧ್ಯೇಯವಾಗಿದೆ.

ಬ್ರಹ್ಮಜ್ಞಾನದ ವಿಧಗಳು

ಈ ಬ್ರಹ್ಮವಿದ್ಯೆಯು ಪರಾ ಮತ್ತು ಅಪರಾ ಎಂದು ವಿಭಾಗಿಸಿ ಅವುಗಳನ್ನು ಅಂಗಿರಸನು ಶೌನಕನಿಗೆ ಹೇಳಿದನು ಎಂದು ಮುಂಡಕೋಪನಿಷತ್ತು ಹೀಗೆ ಹೇಳಿದೆ–

ತಸ್ಮೈ ಸ ಹೋವಾಚ ದ್ವೇ ವಿದ್ಯೇ ವೇದಿತವ್ಯೇ ಇತಿ ಹ ಸ್ಮ।
ಯದ್ಬ್ರಹ್ಮವಿದೋ ವದಂತಿ ಪರಾಚೈವಾಪರಾ ಚ॥[43]

ಗುರು ಶಿಷ್ಯರನ್ನು ಪರಿಕ್ಷಿಸಿ ಉತ್ತಮ, ಮಧ್ಯಮ ಮತ್ತು ಕನಿಷ್ಠವೆಂದು ವಿಭಾಗಿಸಿ ಅವರ ಬುದ್ಧಿಗನುಗುಣವಾಗಿ ಬ್ರಹ್ಮಜ್ಞಾನವನ್ನು ಉಪದೇಶಿಸುವನು. ಆ ವಿದ್ಯೆಯನ್ನು ಮುಂಡಕೋಪನಿಷತ್ತು ಪರ ಮತ್ತು ಅಪರವೆಂದು ದ್ವಿವಿಧವಾಗಿ ವಿಂಗಡಿಸಿ ಅವುಗಳನ್ನು ಮುಂದುವರೆದುಕೊಂಡುಬಂದ ಪದ್ಧತಿ ಹಾಗೂ ಗುರು–ಶಿಷ್ಯರ ಪರಂಪರೆ ಬಗ್ಗೆ ತಿಳಿಸಿದೆ.

ಬ್ರಹ್ಮಜ್ಞಾನದ ಸಾಧನೆ :–

ತಸ್ಯೈ ತಪೋ ದಮಃ ಕರ್ಮೇತಿ ಪ್ರತಿಷ್ಠಾ।
ವೇದಾಃ ಸರ್ವಾಂಗಾನಿ ಸತ್ಯಮಾಯತನಮ್॥[44]

ಕೇನೋಪನಿಷತ್ತಿನ ಈ ಮೇಲಿನ ಮಂತ್ರವು ಬ್ರಹ್ಮಜ್ಞಾನ ಹೊಂದಲು ಸಾಧನೆಯನ್ನು ಹೇಳುತ್ತದೆ. ಸಾಧಕನಾದವನು ಬ್ರಹ್ಮಜ್ಞಾನ ಪಡೆಯಲು ಸಾಧನವೇ ಮುಖ್ಯವೆಂದು ಅರಿತ ಉಪನಿಷತ್ತು ತಪಸ್ಸು, ಧರ್ಮ, ಕರ್ಮಗಳು, ಬ್ರಹ್ಮಜ್ಞಾನಕ್ಕೆ ಪ್ರತಿಷ್ಠೆ. ಹಾಗೆಯೇ ವೇದಗಳು ಅದರ ಅಂಗಗಳು. ಸತ್ಯವು ಅದರ ಆಶ್ರಯ ಎನ್ನುವುದು. ಅಂದರೆ ಸಾಧಕನಲ್ಲಿ ಉತ್ತಮ ಗುಣಗಳು ನೆಲೆಸಿರಬೇಕು. ಬ್ರಹ್ಮಚಾರ್ಯ, ಧ್ಯಾನ, ತಪಸ್ಸು, ದಮ, ಇಂದ್ರಿಯನಿಗ್ರಹ ಮೊದಲಾದವುಗಳು ಬ್ರಹ್ಮಜ್ಞಾನದ ಸೋಪಾನಗಳಾಗಿವೆ. ಇವುಗಳು ಜಿಜ್ಞಾಸುವಿನಲ್ಲಿ ಮನೆಮಾಡಿಕೊಂಡಿರಬೇಕು.

ಯಚ್ಛೇದ್ವಾಂಗಮನಸಿ ಪ್ರಾಜ್ಞಸ್ತದ್ಯಚ್ಛೇತ್ಜ್ಞಾನ ಆತ್ಮನಿ।
ಜ್ಞಾನಮಾತ್ಮನಿ ಮಹತಿ ನಿಯಚ್ಛೇತ್ತದ್ಯಚ್ಛೇಚ್ಛಾಂತ ಆತ್ಮನಿ॥[45]

ಇಂತವನು ವಾಕ್ಕನು ಮನಸ್ಸಿನಲ್ಲಿ ಲಯಮಾಡಿಕೊಳ್ಳಬೇಕು. ಮನಸ್ಸನ್ನು ಪ್ರಕಾಶ ಸ್ವರೂಪವಾದ ಬುದ್ಧಿಯಲ್ಲಿ ಲಯಮಾಡಿಕೊಳ್ಳಬೇಕು. ಬುದ್ಧಿಯನ್ನು ಮಹತ್ ಆತ್ಮನಲ್ಲಿ ಲಯವಮಾಡಿಕೊಳ್ಳಬೇಕು. ಮಹತ್ ಆತ್ಮನನ್ನು ಶಾಂತವಾದ ಆತ್ಮನಲ್ಲಿ ಲಯಮಾಡಿಕೊಳ್ಳಬೇಕು. ಆಗಮಾತ್ರ ಸಾಧಕನಲ್ಲಿ ಬ್ರಹ್ಮಜ್ಞಾನದ ಅರಿವು ನೆಲೆಗೊಂಡು ಆನಂದದಲ್ಲಿರುವನು

ಬ್ರಹ್ಮಜ್ಞಾನದ ಮಾರ್ಗ

ಅನ್ಯಚ್ಛ್ರೇಯೋऽನ್ಯದುತೈವ ಪ್ರೇಯಸ್ತೇ ಉಭೇ ನಾನಾರ್ಥೇ ಪುರುಷಸಿನೀತಃ।
ತಯೋಃ ಶ್ರೇಯ ಆದದಾನಸ್ಯ ಸಾಧು ಭವತಿ ಹ್ರೀಯತೇऽರ್ಥಾದ್ಯ ಉ ಪ್ರೇಯೋ ವೃಣೀತೇ॥[46]

ಕಠೋಪನಿಷತ್ತಿನ ಈ ಮೇಲಿನ ಮಂತ್ರವು ಬ್ರಹ್ಮಜ್ಞಾನದ ಮಾರ್ಗ, ಶ್ರೇಯಸ್ಸು, ಮತ್ತು ಪ್ರೇಯಸ್ಸು ಎಂದು ಹೇಳಿ, ಅವೆರಡು ಭಿನ್ನಪ್ರಯೋಜನವುಳ್ಳವುಗಳಾಗಿವೆ. ಇವೆರಡು ಪುರುಷನನ್ನು ಬಂಧಿಸುತ್ತವೆ. ಇವೆರಡರಲ್ಲಿ ಶ್ರೇಯಸ್ಸನ್ನು ತೆಗೆದುಕೊಳ್ಳುವವನಿಗೆ ಒಳ್ಳೆಯದಾಗುವುದು. ಮತ್ತು ಪ್ರೇಯಸ್ಸನ್ನು ಆರಿಸಿಕೊಂಡವನು ಪುರುಷಾರ್ಥದಿಂದ (ಬ್ರಹ್ಮಜ್ಞಾನದಿಂದ) ಚ್ಯುತನಾಗುವನು ಎಂದಿದೆ.

ಶ್ರೇಯಸ್ಸು ಮತ್ತು ಪ್ರೇಯಸ್ಸುಗಳೆರಡು ಮನುಷ್ಯನ ಸಮೀಪಕ್ಕೆ ಬರುತ್ತವೆ. ಧೀಮಂತನು ಅವುಗಳನ್ನು ಚೆನ್ನಾಗಿ ಪರಿಶೀಲಿಸಿ ವಿವೇಚಿಸುತ್ತಾನೆ. ಧೀಮಂತನು ಪ್ರೇಯಸ್ಸಿಗಿಂತ ಶ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ. ಅವಿವೇಕಿಯು ಯೋಗಕ್ಷೇಮಕ್ಕಾಗಿ ಪ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ ಎನ್ನುವುದು ಈ ಕೆಳಗಿನ ಮಂತ್ರ

ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತಸ್ತೌ ಸಂಪರೀತ್ಯ ವಿವಿನಕ್ತಿ ಧೀರಃ
ಶ್ರೇಯೋ ಹಿ ಧೀರೋऽಭಿ ಪ್ರೇಯಸೋ ವೃಣೀತೇ ಪ್ರೇಯೋ ಯೋಗಕ್ಷೇಮಾದ್ವೃಣೀತೇ॥[47]

ಒಂದು ವಸ್ತುವಿನ ಇರುವಿಕೆಯನ್ನು ಅರಿಯಬೇಕಾದರೆ, ಅದನ್ನು ನೋಡಿರಬೇಕು. ಇಲ್ಲವೆ ಅದರ ಬಗೆಗೆ ಕೇಳಿರಬೇಕು. ಅದರ ಜೊತೆಗೆ ಆ ವಸ್ತು ನಾಮರೂಪಗಳಿಂದ ಕೂಡಿರಬೇಕು. ಆಗ ಮಾತ್ರ ವಸ್ತುವಿನ ಸ್ವರೂಪ ಹೇಳಬಹುದು. ಇಂತಹ ವಸ್ತುವನ್ನು ಅರಿಯಲು ಪ್ರತ್ಯಕ್ಷ, ಶಬ್ದ ಮತ್ತು ಅನುಮಾನ ಪ್ರಮಾಣಗಳ ಸಹಾಯಬೇಕು. ಆದರೆ ಬ್ರಹ್ಮ ಈ ಎಲ್ಲ ಪ್ರಮಾಣಗಳ ಎಲ್ಲೆಮೀರಿ ನಿಂತಿರುವನು.

ನ ತತ್ರ ಚಕ್ಷುರ್ಗಚ್ಛತಿ ನ ವಾಗ್ಗಚ್ಛತಿ ನೋ ಮನಃ।
ನ ವಿದ್ಮೋ ನ ವಿಜಾನೀಮೋ ಯಥೈತದನುಶಿಷ್ಯಾತ್॥[48]

ಬ್ರಹ್ಮನು ಕಣ್ಣಿಗೆ ಕಾಣುವ ರೂಪವಲ್ಲ. ಅವನು ನಿರ್ಗುಣ ನಿರಾಕಾರನಾಗಿದ್ದಾನೆ. ಆಕಾರವಿಲ್ಲದನ್ನು ಕಣ್ಣು ನೋಡದು. ಅವನನ್ನು ಬಾಹ್ಯ ಚಕ್ಷು ಸಾಲದು, ಅಂತಃಚಕ್ಷುವಿನ ಅವಶ್ಯವಿದೆ. **"ನ ತತ್ರ ಚಕ್ಷುರ್ಗಚ್ಛತಿ"** ಅವನಲ್ಲಿಗೆ ಚಕ್ಷು ಚಲಿಸುವುದಿಲ್ಲ ಎನ್ನುವುದು ಈ ವಾಕ್ಯ. ಬ್ರಹ್ಮನು ಮಾತಿಗೆ ಸಿಲುಕುವುದಿಲ್ಲ. ಏಕೆಂದರೆ ಅವನು ಪೂರ್ಣ, ಮಾತು ಅಪೂರ್ಣ. ಆದುದರಿಂದ **"ನ ವಾಗ್ಗಚ್ಛತಿ"** ಅವನಲ್ಲಿಗೆ ವಾಯು ಹೋಗದು ಎನ್ನುವುದು ಉಪನಿಷತ್ತು. ಕಣ್ಣಿಗೆ ಕಾಣದ, ಮಾತಿಗೆ ಸಿಲುಕದ ಬ್ರಹ್ಮನನ್ನು ಮನಸ್ಸು ಮನನ ಮಾಡಲು ಸಾಧ್ಯವಿಲ್ಲ. ಅಂದರೆ ಪ್ರತ್ಯಕ್ಷ, ಮತ್ತು ಶಬ್ದ ಪ್ರಮಾಣಗಳಿಂದ ನಿಲುಕದ ಅವನನ್ನು ಅನುಮಾನ ಪ್ರಮಾಣದಿಂದ ತಿಳಿಯಲು ಬರಲಾರದು. ಅವನು ಇಂದ್ರಿಯಾತೀತನಾಗಿರುವುದರಿಂದ ಅವನನ್ನು ತಿಳಿಯಲು ಹಾಗೂ ತಿಳಿಸಿಕೊಡಲು ಸಾಧ್ಯವಿಲ್ಲ.

"ಅನ್ಯದೇವ ತದ್ವಿದಿತಾದಥೋ ಅವಿದಿತಾದಧಿ।"[49] ಎಂಬ ಕೇನೋಪನಿಷತ್ತಿನ ಮಂತ್ರ ಬ್ರಹ್ಮನನ್ನು ತಿಳಿದಿದ್ದೇವೆ ಎಂದರೆ ಅದಕ್ಕಿಂತಲೂ ಭಿನ್ನನಾಗಿದ್ದಾನೆ, ತಿಳಿದುಕೊಂಡಿಲ್ಲ ಎನ್ನುವುದಕ್ಕಿಂತಲೂ ಭಿನ್ನನಾಗಿದ್ದಾನೆ ಎನ್ನುವುದು.

ನಿರ್ಗುಣ ನಿರಾಕಾರನಾಗಿರುವ ಬ್ರಹ್ಮನನ್ನು ಕೇವಲ ಪ್ರವಚನಗಳಿಂದಾಗಲೀ, ಬುದ್ಧಿಶಕ್ತಿಯಿಂದಾಗಲೀ, ವೇದಗ್ರಂಥಗಳನ್ನು ಪಠಿಸುವುದರ ಮೂಲಕವಾಗಲೀ ಅರಿಯಲು ಸಾಧ್ಯವಿಲ್ಲ. ಯಾರನ್ನು ಅವನೇ ಸ್ವಯಂ ಆರಿಸುತ್ತಾನೆಯೋ ಅವನಿಗೆ ಮಾತ್ರ ಬ್ರಹ್ಮನು ತನ್ನ ತನುವನ್ನು ಪ್ರಕಾಶಪಡಿಸುವನು ಎನ್ನುವುದು ಈ ಕೆಳಗಿನ ಮಂತ್ರ

ನಾಯಮಾತ್ಮಾ ಪ್ರವಚನೇನ ಲಭ್ಯೋ ನಮೇಧಯಾ ನ ಬಹುನಾ ಶ್ರುತೇನ।
ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನುಂ ಸ್ವಾಮ್॥[50]

ಆದುದರಿಂದ ಬ್ರಹ್ಮನು ಬಹುಜನರ ಶ್ರವಣಕ್ಕೂ ಲಭ್ಯನಲ್ಲ. ಶ್ರವಣ ಮಾಡಿದ ಮೇಲೂ ಇವನನ್ನು ಬಹುಜನರು ಅರಿಯರು. ಬ್ರಹ್ಮನ ಬಗ್ಗೆ ಹೇಳುವುದು ಮತ್ತು ಕೇಳುವುದು ಆಶ್ಚರ್ಯ ಎನ್ನುವುದು ಈ ಮುಂದಿನ ಮಂತ್ರ

ಶ್ರವಣಾಯಾಪಿ ಬಹುಭಿರ್ಯೋ ನ ಲಭ್ಯಃ ಶೃಣ್ವಂತೋಽಪಿ ಬಹವೋ ಯಂ ನ ವಿದ್ಯುಃ।
ಆಶ್ಚರ್ಯೋ ವಕ್ತಾ ಕುಶಲೋಽಸ್ಯ ಲಬ್ಧಾಶ್ಚರ್ಯೋ ಜ್ಞಾತಾ ಕುಶಲಾನುಶಿಷ್ಟಃ॥[51]

ಕಠೋಪನಿಷತ್ತು **"ನೈಷಾ ತರ್ಕೇಣ ಮತಿರಾಪನೇಯಾ ಪ್ರೋಕ್ತಾನ್ಯೇನೈವ ಸುಜ್ಞಾನಾಯ ಪ್ರೇಷ್ಠ।"**[52] ಬ್ರಹ್ಮನನ್ನು ತರ್ಕದಿಂದ ನೋಡುತ್ತೇವೆಂದರೆ ಕಾಣನು. ಅನುಭಾವಿಗಳಿಂದ ಹೇಳಲ್ಪಟ್ಟರೆ ಮಾತ್ರ ಬ್ರಹ್ಮನ ಜ್ಞಾನ ಉಂಟಾಗುವುದು ಎನ್ನುವುದು.

ಬ್ರಹ್ಮಜ್ಞಾನವು ಬಲಹೀನರಿಗಾಗಲೀ, ತಪಸ್ಸಿನಲ್ಲಿ ಎಡವುದರಿಂದಾಗಲೀ, ವಿಷಯಗಳನ್ನು ವಕ್ರಮಾರ್ಗದಲ್ಲಿ ಪರಿಶೀಲಿಸುವರಿಂದಾಗಲೀ ಆಗುವುದಿಲ್ಲ. ಆದರೆ ಯಾರು ಬ್ರಹ್ಮಜ್ಞಾನದಲ್ಲಿ ಪರಿಣಿತರಾಗಿದ್ದು ಮೇಲ್ಕಂಡ ಮಾರ್ಗಗಳಲ್ಲಿ ಸರಿಯಾಗಿ ನಡೆಯುವರೋ ಅವರು ಬ್ರಹ್ಮಜ್ಞಾನವನ್ನು ಹೊಂದುವರು ಎಂದಿದೆ. ಈ ಕೆಳಗಿನ ಮಂತ್ರ

ನಾಯಮಾತ್ಮಾ ಬಲಹೀನೇನ ಲಭ್ಯೋ ನ ಚ ಪ್ರಮಾದಾತ್ತಪಸೋ ವಾಽಪ್ಯಲಿಂಗಾತ್।
ಏತೈರುಪಾಯೈರ್ಯತತೇ ಯಸ್ತು ವಿದ್ವಾಂಸ್ತಸ್ಯೈಷ ಆತ್ಮಾ ವಿತತೇ ಬ್ರಹ್ಮ ಧಾಮ॥[53]

ಕಠೋಪನಿಷತ್ತು ಬ್ರಹ್ಮಜ್ಞಾನವನ್ನು ಹೀನ ಮನುಷ್ಯನಿಂದ ಹೇಳಲ್ಪಟ್ಟರೆ ಬ್ರಹ್ಮನನ್ನು ತಿಳಿಯಲು ಸಾಧ್ಯವಾಗದು. ಏಕೆಂದರೆ ಅನೇಕರು ಕರ್ತೃ, ಅಕರ್ತೃ, ಶುದ್ಧ, ಅಶುದ್ಧ, ಹೀಗೆ ಮೊದಲಾಗಿ ಚಿಂತಿಸುತ್ತಾರೆ. ಆದರೆ ಅನನ್ಯನಾದ ಆಚಾರ್ಯನಿಂದ ಹೇಳಲ್ಪಟ್ಟರೆ ಬ್ರಹ್ಮಜ್ಞಾನ ವಿಷಯದಲ್ಲಿ ಗತಿಯಿರುವುದಿಲ್ಲ. ಏಕೆಂದರೆ ಅಣುಪ್ರಮಾಣಕ್ಕಿಂತ ಸೂಕ್ಷ್ಮನಾಗಿರುವ ಬ್ರಹ್ಮನು ಅತರ್ಕ್ಯನಾಗಿದ್ದಾನೆ ಎಂದಿದೆ.

ನ ನರೇಣಾವರೇಣ ಪ್ರೋಕ್ತ ಏಷ ಸುವಿಜ್ಞೇಯೋ ಬಹುದಾ ಚಿಂತ್ಯಮಾನಃ।
ಅನನ್ಯಪ್ರೋಕ್ತೇ ಗತಿರತ್ರ ನಾಸ್ತಿ ಅಣೆಯಾನ್ಹ್ಯತರ್ಕ್ಯಮಣು ಪ್ರಮಾಣಾತ್॥[54]

ಆದ್ದರಿಂದ ಹರಿತವಾದ ಕತ್ತಿಯ ಅಲಗು ದಾಟಲು ಕಷ್ಟವಾಗಿರುವಂತೆ, ಬ್ರಹ್ಮಜ್ಞಾನ ಮಾರ್ಗವು ಕಷ್ಟ ಹಾಗೂ ದುರ್ಗಮವಾಗಿದೆ. ಏಳಿರಿ, ಎಚ್ಚರಗೊಳ್ಳಿರಿ ಶ್ರೇಷ್ಠವಾದ ಆಚಾರ್ಯರನ್ನು ಹೊಂದಿ ತಿಳಿದುಕೊಳ್ಳಿರಿ ಎಂದು ಕಠೋಪನಿಷತ್ತು ಹೀಗೆ ಎಚ್ಚರಿಸಿದೆ

ಉತ್ತಿಷ್ಠತ ಜಾಗ್ರತ ಪ್ರಾಪ್ಯ ವರಾನ್ನಿಬೋಧತ।
ಕ್ಷೂರಸ್ಯ ಧಾರಾ ನಿಶಿತಾ ದುರತ್ಯಯಾ
ದುರ್ಗಂ ಪಥಸ್ತತ್ಕವಯೋ ವದಂತಿ॥[55]

ಬ್ರಹ್ಮಜ್ಞಾನಿಯ ಸ್ವರೂಪ

ಕಠೋಪನಿಷತ್ತು ಬ್ರಹ್ಮಜ್ಞಾನಿಯ ಸ್ವರೂಪದ ಬಗ್ಗೆ ಬಹು ಸುಂದರವಾಗಿ ಹೀಗೆ ಉಪದೇಶಿಸಿದೆ

ಕಾಮಸ್ಯಾಪ್ತಿಂ ಜಗತಃ ಪ್ರತಿಷ್ಠಾಂ ಕ್ರತೋರನಂತ್ಯಮಭಯಸ್ಯ ಪಾರಮ್।
ಸ್ತೋಮಮಹದುರುಗಾಯಂ ಪ್ರತಿಷ್ಠಾಂ ದೃಷ್ಟ್ವಾ ಧೃತ್ಯಾ ಧೀರೋ ನಚಿಕೇತೋ ಽತ್ಯಸ್ರಾಕ್ಷೀಃ॥[56]

ಕಾಮದ ಸಮಾಪ್ತಿಯನ್ನೂ, ಜಗತ್ತಿನ ಆಶ್ರಯವನ್ನೂ, ಉಪಾಸನೆಯ ಆನಂತ್ಯವನ್ನೂ ಅಭಯದ ಸಾರವನ್ನು ಸ್ತುತ್ಯವಾಗಿರುವುದನ್ನೂ ಮಹತ್ತಾದುದನ್ನೂ, ವಿಸ್ತೀರ್ಣವಾಗಿರುವುದನ್ನೂ, ಉತ್ತಮ ಸ್ಥಿತಿಯನ್ನೂ ನೋಡಿ ಧೀರನಾಗಿ ಧೈರ್ಯದಿಂದ ತ್ಯಾಗಮಾಡುತ್ತಾನೆ.

ತಂ ದುರ್ದರ್ಶಂ ಗೂಢಮನುಪ್ರವಿಷ್ಟಂ ಗುಹಾಹಿತಂ ಗಹ್ವರೇಷ್ಠಂ ಪುರಾಣಮ್।
ಅಧ್ಯಾತ್ಮಯೋಗಾಧಿಗಮೇನ ದೇವ ಮತ್ವಾ ಧೀರೋ ಹರ್ಷ ಶೋಕೌ ಜಹಾತಿ॥[57]

ಈ ಮೇಲಿನ ಮಂತ್ರವು ಬ್ರಹ್ಮಜ್ಞಾನಿಯ ಕುರಿತು– ಅತೀ ಸೂಕ್ಷ್ಮನಾಗಿರುವವನೂ, ಪ್ರಾಕೃತ ವಿಷಯಗಳ ಜ್ಞಾನದಿಂದ ಮುಚ್ಚಿ ಹೋಗಿರುವವನೂ, ಗುಹೆ–ಗಹ್ವರದಲ್ಲಿರುವವನೂ, ಪುರಾಣನೂ ಆದ ಬ್ರಹ್ಮನನ್ನು ಅಧ್ಯಾತ್ಮಯೋಗ ಪ್ರಾಪ್ತಿಯಿಂದ ತಿಳಿದುಕೊಂಡ ಜ್ಞಾನಿಯು(ಧೀರನು) ಹರ್ಷಶೋಕಗಳನ್ನು ಬಿಡುತ್ತಾನೆ. ಅಂದರೆ ಜ್ಞಾನಿಯು ಹರ್ಷದಿಂದ ಹಿಗ್ಗುವುದು, ಶೋಕದಿಂದ ಕುಗ್ಗುವುದು ಮಾಡುವುದಿಲ್ಲ ಎಂದಿದೆ.

ಏತಚ್ಛ್ರುತ್ವಾ ಸಂಪರಿಗೃಹ್ಯ ಮರ್ತ್ಯಃ ಪ್ರವೃಹ್ಯ ಧರ್ಮ್ಯಮಣುಮೇತಮಾಪ್ಯ।
ಸ ಮೋದತೇ ಮೋದನೀಯಂ ಹಿ ಲಬ್ಧ್ವಾ.....॥[58]

ಉಪನಿಷತ್ತಿನ ಈ ಮೇಲಿನ ಮಂತ್ರವು ಬ್ರಹ್ಮಜ್ಞಾನಿಯು ಆತ್ಮತತ್ತ್ವವನ್ನು ಆಚಾರ್ಯರಿಂದ ಚೆನ್ನಾಗಿ ಗ್ರಹಿಸಿ, ಧರ್ಮದಿಂದ ಕೂಡಿರುವುದನ್ನು ಶರೀರಾದಿಗಳಿಂದ

ವಿಂಗಡಿಸಿ ಸೂಕ್ಷ್ಮನಾದ ಆತ್ಮನನ್ನು ಹೊಂದಿದ ಜ್ಞಾನಿಯು ಆತ್ಮನನ್ನು ಪಡೆದು ಸಂತೋಷಪಡುತ್ತಾನೆ ಎನ್ನುತ್ತದೆ.

ಯಸ್ತು ಸರ್ವಾಣಿ ಭೂತಾನ್ಯಾತ್ಮನ್ಯೇವಾನುಪಶ್ಯತಿ।
ಸರ್ವಭೂತೇಷು ಚಾತ್ಮನಂ ತತೋ ನ ವಿಜುಗುಪ್ಸತೇ॥[59]

ಬ್ರಹ್ಮಜ್ಞಾನಿಯಾದವನು ಎಲ್ಲವನ್ನು ಆತ್ಮ ದೃಷ್ಟಿಯಿಂದ ನೋಡುತ್ತಾನೆ. ಅವನು ಎಲ್ಲ ಜೀವಿಗಳನ್ನು ಆತ್ಮನಲ್ಲಿ ಹಾಗೂ ತನ್ನನ್ನು ಎಲ್ಲ ಜೀವಿಗಳಲ್ಲಿಯೂ ಕಾಣುವುದರಿಂದ ಅವನು ಯಾವುದರ ಬಗೆಗೂ ಜಿಗುಪ್ಸೆಯನ್ನು ಹೊಂದುವುದಿಲ್ಲವೆಂದು ಈಶಾವಾಸ್ಯೋಪನಿಷತ್ತು ಹೇಳಿದೆ.

ಯಸ್ಮಿನ್ಸರ್ವಾಣಿ ಭೂತಾನ್ಯಾತ್ಮೈವಾಭೂದ್ವಿಜಾನತಃ।
ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ॥[60]

ಬ್ರಹ್ಮಜ್ಞಾನಿಯು ಎಲ್ಲೆಲ್ಲೂ ಆತ್ಮವನ್ನೇ ಕಾಣುವುದರಿಂದ ಅವನಿಗೆ ಮೋಹವಾಗಲೀ, ಶೋಕವಾಗಲೀ ಇರುವುದಿಲ್ಲ. ಏಕೆಂದರೆ ಅವನು ಎಲ್ಲೆಲ್ಲೂ ಏಕತ್ವವನ್ನೇ ಕಾಣುತ್ತಿರುತ್ತಾನೆಂದು ಈಶಾವಾಸ್ಯೋಪನಿಷತ್ತು ಹೇಳಿದೆ.

ಬ್ರಹ್ಮಜ್ಞಾನಿಯು ತಾನು ಬ್ರಹ್ಮನನ್ನು ಚೆನ್ನಾಗಿ ತಿಳಿದಿರುತ್ತೇನೆಂದು ಭಾವಿಸುವುದಿಲ್ಲ. ತಿಳಿದುಕೊಂಡಿಲ್ಲವೆಂದೂ ಭಾವಿಸುವುದಿಲ್ಲ. ತಿಳಿದು ಇರುತ್ತೇನೆ, ತಿಳಿದುಕೊಂಡಿಲ್ಲವೆಂದೂ ಭಾವಿಸುವುದಿಲ್ಲ. ತಿಳಿದೂ ಇರುತ್ತೇನೆಂಬುವುದನ್ನು ನಮ್ಮಲ್ಲಿ ಯಾರು ಅರಿತಿರುತ್ತಾರೋ ಅವರೇ ಅದನ್ನು ಅರಿತಿರುತ್ತಾರೆ.

ನಾಹಂ ಮನ್ಯೇ ಸುವೇದೇತಿ ನೋ ನ ವೇದೇತಿ ವೇದ ಚ।
ಯೋ ನಸ್ತದ್ವೇದ ನೋ ನ ವೇದೇತಿ ವೇದ ಚ ॥[61]

ಬ್ರಹ್ಮನ ಬಗ್ಗೆ ಯಾರು ತಿಳಿದುಕೊಂಡಿಲ್ಲವೆಂದು ಭಾವಿಸುವರೋ ಅವರಿಗೆ ಬ್ರಹ್ಮಜ್ಞಾನವಾಗಿದೆ. ಯಾರು ಬ್ರಹ್ಮನ ಬಗ್ಗೆ ತಿಳಿದುಕೊಂಡಿದ್ದೇನೆಂದುಕೊಳ್ಳುವರೋ ಅವರು ಇನ್ನೂ ತಿಳಿದಿಲ್ಲ. ಅಂದರೆ ತಿಳಿದವನಿಗೆ ತಿಳಿದಿಲ್ಲ, ತಿಳಿಯದವನಿಗೆ ತಿಳಿದಿದೆ ಎಂಬ ಭಾವ.

ಯಸ್ಯಾಮತಂ ತಸ್ಯ ಮತಂ ಮತಂ ಯಸ್ಯ ನ ವೇದ ಸಃ।
ಅವಿಜ್ಞಾತಂ ವಿಜಾನತಾಂ ವಿಜ್ಞಾತಮವಿಜಾನತಾಮ್॥[62]

ಅಂದರೆ ಬ್ರಹ್ಮಜ್ಞಾನಿಯು ಎಂದಿಗೂ ತಾನು ಬ್ರಹ್ಮನನ್ನು ತಿಳಿದಿರುತ್ತೇನೆಂದು ಹೇಳಿಕೊಳ್ಳುವುದಿಲ್ಲ. ಎಂಬುದು ಕೇನೋಪನಿಷತ್ತು ಮಂತ್ರದ ಸಾರವಾಗಿದೆ.

ವಾಯುರನಿಲಮಮೃತಮಥೇದಂ ಭಸ್ಮಾಂತಂ ಶರೀರಮ್।
ಓಂ ಕೃತೋ ಸ್ಮರ ಕೃತಂ ಸ್ಮರ ಕೃತೋ ಸ್ಮರ ಕೃತಂ ಸ್ಮರ॥[63]

ಬ್ರಹ್ಮಜ್ಞಾನಿಯು ತನ್ನ ಪ್ರಾಣ ಸರ್ವವ್ಯಾಪಿಯಾದ ಅಮೃತಾತ್ಮನನ್ನು ಸೇರಲಿ, ಈ ದೇಹ ಬೂದಿಯಾಗಲಿ. ಓಂ ಮನಸ್ಸೆ ಸ್ಮರಿಸು. ಮಾಡಿರುವುದನ್ನು ಸ್ಮರಿಸು, ಓಂ ಮನಸ್ಸೆ ಸ್ಮರಿಸು. ಮಾಡಿರುವುದನ್ನು ಸ್ಮರಿಸು, ಎನ್ನುತ ತನ್ನ ಪ್ರಾಣ, ಮನಸ್ಸು ಸದಾ ಬ್ರಹ್ಮನತ್ತ ಚಲಿಸುವಂತೆ ಪ್ರಾರ್ಥಿಸುತ್ತಾನೆ.

ಹಿರಣ್ಮಯೇ ಪರೇ ಕೋಶೇ ವಿರಜಂ ಬ್ರಹ್ಮ ನಿಷ್ಕಲಮ್।
ತಚ್ಛುಭ್ರಂ ಜ್ಯೋತಿಷಾಂ ಜ್ಯೋತಿಸ್ತದ್ಯದಾತ್ಮ ವಿದೋವಿದುಃ॥[64]

ಬ್ರಹ್ಮಜ್ಞಾನಿಗಳು ಬ್ರಹ್ಮನನ್ನು ಯಾವ ಪರತತ್ತ್ವವು ಬಂಗಾರದ ಕೋಶದಲ್ಲಿ ಅಡಗಿರುವುದೋ ಯಾವುದು ರಜಸ್ಸಿನ ಸಂಪರ್ಕವಿರುವುದಿಲ್ಲವೋ ಯಾವುದು ನಿರವಯವವೋ ಆ ಶುಭ್ರವಾದ ಬ್ರಹ್ಮ ಜ್ಯೋತಿಗಳ ಜ್ಯೋತಿಯೆಂದು ತಿಳಿಯುವರು ಎಂದು ಮುಂಡಕೋಪನಿಷತ್ತು ಸಾರಿದೆ.

ಅನಾತ್ಮಜ್ಞನ ಸ್ವರೂಪ

ಅನಾತ್ಮಜ್ಞ ಎಂದರೆ ಆತ್ಮನನ್ನು ತಿಳಿಯದವನು ಎಂದರ್ಥ. ಅವನು ಅಜ್ಞಾನಿಯಾಗಿದ್ದು ಎಲ್ಲವೂ ತಿಳಿದಂತೆ ಮಾತನಾಡುವನು. ತಾನೇ ಪಂಡಿತ, ಧೀರ ಎಂದು ಕೊಳ್ಳುವನು. ಇಂಥವರ ಬಗ್ಗೆ ಉಪನಿಷತ್ತುಗಳು ಬಹು ಸುಂದರವಾಗಿ ವಿವರಿಸಿವೆ.

ಕಠೋಪನಿಷತ್ತು ಇವನ ಬಗ್ಗೆ ಹೀಗೆ ಹೇಳಿದೆ

ಅವಿದ್ಯಾಯಾಮಂತರೇ ವರ್ತಮಾನಾಃ ಸ್ವಯಂ ಧೀರಾಃ ಪಂಡಿತಮನ್ಯಮಾನಾಃ।
ದಂದ್ರಮ್ಯಮಾಣಾಃ ಪರಿಯಂತಿ ಮೂಢಾ ಅಂಧೇನೈವ ನೀಯಮಾನಾ ಯಥಾಂಧಾಃ॥[65]

ಅವಿದ್ಯೆಯ ಮಧ್ಯದಲ್ಲಿ ಇರುತ್ತ ತಾವೇ ಧೀರರು, ತಾವೇ ಪಂಡಿತರು ಎಂದು ತಿಳಿದುಕೊಂಡು ವಕ್ರಗತಿಯಲ್ಲಿ ನಡೆಯುತ್ತಾರೆ. ಇಂಥವರ ಉಪದೇಶ ಮಾರ್ಗದರ್ಶನ ಪಡೆದರೆ ಕುರುಡನೇ ಕರೆದುಕೊಂಡು ಹೊರಟ ಕುರುಡರ ಹಾಗೆ ಮೂಢರು ತೊಳಲುತ್ತಿರುವರು.

ಇದೇ ಅರ್ಥವನ್ನು ಹೊಂದಿರುವ ಮಂತ್ರವು ಮುಂಡಕೋಪನಿಷತ್ತಿನಲ್ಲಿಯೂ ಕಾಣಬಹುದು–

ಅವಿದ್ಯಾಯಾಂ ಬಹುಧಾ ವರ್ತಮಾನಾ ವಯಂ ಕೃತಾರ್ಥ ಇತ್ಯಭಿಮನ್ಯಂತಿ ಬಾಲಾಃ।
ಯತ್ಕರ್ಮಿಣೋ ನ ಪ್ರವೇದಯಂತಿ ರಾಗಾತ್ ತೇನಾತುರಾಃ ಕ್ಷೀಣಲೋಕಾಶ್ಚ್ಯವಂತೇ॥[66]

ಇವರು ಅವಿದ್ಯೆಯ ಸಂಕೋಲೆಯಲ್ಲಿ ಸಿಲುಕಿ, ಇವರು ಬಯಸಿದ ಸ್ವರ್ಗವು ಸಿಗದೆ, ಇವರು ಕರ್ಮಗಳನ್ನು ಮಾಡುವುದರಲ್ಲಿಯೇ ಮಗ್ನರಾಗಿರುವುದರಿಂದ ಜ್ಞಾನವನ್ನು ಹೊಂದುವುದಿಲ್ಲ. ಅವರ ಆತುರದಲ್ಲಿ ಸಿದ್ಧಿಯು ಇಂದ್ರಿಯಗಳ ಮೂಲಕ ಕರಗಿಹೋಗಿ ಸ್ವರ್ಗದಿಂದ ಕೆಳಗೆ ಉರುಳುತ್ತಾರೆ.

ಇವರು ಏನನ್ನೂ ಅರಿಯದ ಬಾಲಕ(ಮೂಢ)ರಂತೆ ಪ್ರಮಾದವನ್ನು ಮಾಡುತ್ತ ವಿತ್ತಮೋಹದಲ್ಲಿರುವುದರಿಂದ ಸಾಂಪರಾಯವು ಕಾಣುವುದಿಲ್ಲ. ಈ ಲೋಕಮಾತ್ರವಿದೆ, ಪರಲೋಕವಿಲ್ಲವೆಂದು ತಿಳಿದುಕೊಳ್ಳುತ್ತಾರೆ. ಇದರಿಂದ ಇವರು ಪುನಃ ಪುನಃ ನನ್ನ ವಶರಾಗಿತ್ತಾರೆಂದು ಯಮನು ನಚಿಕೇತನಿಗೆ ಹೇಳುತ್ತಾನೆ.

ನ ಸಾಂಪರಾಯಃ ಪ್ರತಿಭಾತಿ ಬಾಲಂ ಪ್ರಮಾದ್ಯಂತಂ ವಿತ್ತಮೋಹೇನ ಮೂಢಮ್।
ಅಯಂ ಲೋಕೋ ನಾಸ್ತಿ ಪರ ಇತಿ ಮಾನಿ ಪುನಃ ಪುನರ್ವಶಮಾಪದ್ಯತೇ ಮೇ॥[67]

ಇವರು ಪ್ರಜ್ಞಾನದಿಂದ ಬ್ರಹ್ಮನನ್ನು ತಿಳಿಯದೆ, ದುರಾಚಾರ ಕೂಡಿದವರಾಗಿ, ಶಾಂತಚಿತ್ತವಿಲ್ಲದೆ ಸಮಾಹಿತನಲ್ಲದೆ ಮನಃಶಾಂತಿ ಎಂದಿಗೂ ಪಡೆಯಲಾರರು.

ನಾವಿರತೋ ದುಶ್ಚರಿತನ್ನಾಶಾಂತೋ ನಾಸಮಹಿತಃ।
ನಾಶಾಂತಮಾನಸೋ ವಾಪಿ ಪ್ರಜ್ಞಾನೇನೈನಮಾಪ್ನುಯಾತ್॥[68]

ಇವರು ಯಾವಾಗಲೂ ಅಯುಕ್ತವಾದ ಮನಸ್ಸಿನಿಂದ ಕೂಡಿದವರಾಗಿ, ಅನಿಪುಣರಾಗಿ, ಅವರ ಇಂದ್ರಿಯಗಳು ಸಾರಥಿಗೆ ತುಂಟ ಕುದುರೆಗಳಂತೆ ವಶವಾಗದೆ ಇರುವವು. ಇವರು ಯಾವಾಗಲೂ ಜ್ಞಾನವಿಲ್ಲದವರಾಗಿ, ನಿಗ್ರಹಿಸದ ಮನಸ್ಸುಳ್ಳವರಾಗಿ, ಅಶುಚಿಯಾಗಿರುವುದರಿಂದ ಅವರು ಬ್ರಹ್ಮ ಪದವಿಯನ್ನು ಹೊಂದದೆ ಸಂಸಾರವನ್ನೇ ಹೊಂದುವರು ಎಂದು ಕಠೋಪನಿಷತ್ತು ಆತ್ಮಜ್ಞಾನ ಹೊಂದಿದವರು ಇಂದ್ರಿಯಗಳ ವಶರಾಗಿ ಪುನಃ ಪುನಃ ಮರ್ತ್ಯಲೋಕವನ್ನು ಹೊಂದುವರು ಎನ್ನುವುದು.

ದೇವತೆ ಹಾಗೂ ರಾಕ್ಷಸರಿಗೆ ಯುದ್ಧ ನಡೆದಾಗ ಬ್ರಹ್ಮನಿಂದ ಅವರಿಗೆ ಜಯ ಸಿಕ್ಕಿತು. ಆದರೆ ಅವರು ಅಹಂಕಾರದಿಂದ, ಅಜ್ಞಾನದಿಂದ ತಮ್ಮಿಂದಲೇ ಜಯ ಸಿಕ್ಕಿತು, ತಮ್ಮ ಮಹಿಮೆ ಎಂದು ಜಂಭ ಪಡುವರು. ಆ ಬ್ರಹ್ಮ ಯಕ್ಷ ರೂಪದಿಂದ ಕಾಣಿಸಿ ಕೊಂಡರೂ ದೇವತೆಗಳೂ ಸಹ ಬ್ರಹ್ಮನ ಮಹಿಮೆ ಅರಿಯದೆ, ತಮ್ಮ ಶಕ್ತಿ ಕಳೆದು ಕೊಂಡರು ಎಂದು ಬ್ರಹ್ಮ/ಆತ್ಮ ಜ್ಞಾನ ಹೊಂದದೆ ಇರುವವರಿಗೆ ಆಗುವ ಗತಿಯನ್ನು ಕೇನೋಪನಿಷತ್ತು ಬ್ರಹ್ಮ(ಯಕ್ಷ) ದೇವತೆಗಳ ದೃಷ್ಟಾಂತದೊಂದಿಗೆ ವಿವರಿಸುವುದು.

ಹೀಗೆ ಉಪನಿಷತ್ತಿನಲ್ಲಿ ಬರುವ ಬ್ರಹ್ಮನ ಸ್ವರೂಪ, ಇಂದ್ರಿಯಗಳ ಸೃಷ್ಟಿಕರ್ತಾ ಬ್ರಹ್ಮ, ಜಗತ್ತಿನ ಸೃಷ್ಟಿಕರ್ತಾ ಬ್ರಹ್ಮ, ಬ್ರಹ್ಮಜ್ಞಾನದ ಪರಂಪರೆ, ವಿಧಗಳು, ಸಾಧನೆಯ ಮಾರ್ಗ, ಮತ್ತು ಬ್ರಹ್ಮಜ್ಞಾನಿಯ ಸ್ವರೂಪ ಈ ಮುಂತಾದ ವಿಷಯಗಳನ್ನು ಅಧ್ಯಯನ ಮಾಡಲಾಗಿದೆ.

4.2. ಜೀವ

ಸೃಷ್ಟಿಯ ಸಮಷ್ಟಿಯ ದೃಷ್ಟಿಯಿಂದ 'ಬ್ರಹ್ಮ' ಎನಿಸಿಕೊಳ್ಳುವಂತೆ, ವ್ಯಷ್ಟಿಯ ದೃಷ್ಟಿಯಿಂದ 'ಜೀವ' ಎನಿಸಿಕೊಂಡಿದ್ದಾನೆ. **"ಏಷ ಹಿ ದ್ರಷ್ಟಾ ಸ್ಪ್ರಷ್ಟಾ ಶ್ರೋತಾ ಘ್ರಾತಾ ರಸಯಿತಾ ಮಂತಾ ಬೋದ್ಧಾ ಕರ್ತಾ ವಿಜ್ಞಾತಾತ್ಮಾ ಪುರುಷಃ।"**[69] ಜೀವಿಯು ಕರ್ತೃ,

ಭೋಕ್ತೃ, ದ್ರಷ್ಟಾ, ಶಾರೀರ, ಪ್ರತ್ಯಗಾತ್ಮ, ವಿಜ್ಞಾನಾತ್ಮ, ಕ್ಷೇತ್ರಜ್ಞ, ಪುರುಷ ಎಂದು ಮೊದಲಾದ ಹೆಸರುಗಳಿಂದ ಕರೆಯಿಸಿಕೊಳ್ಳುತ್ತಾನೆ. ಪ್ರಪಂಚದ ವ್ಯವಹಾರದಲ್ಲಿ ತೊಡಗುವುದರಿಂದ 'ಕರ್ತೃ' ಎನಿಸಿಕೊಳ್ಳುತ್ತಾನೆ. ಅದರಿಂದ ಪ್ರತಿಫಲಿಸುವ ಸುಖ-ದುಃಖಗಳ ಫಲವನ್ನು ಅನುಭವಿಸುವುದರಿಂದ 'ಭೋಕ್ತೃ' ಎನಿಸಿಕೊಳ್ಳುತ್ತಾನೆ. ಈ ನಾಮರೂಪಾತ್ಮಕ ಪ್ರಪಂಚ ನೋಡುವುದರಿಂದ 'ದ್ರಷ್ಟಾ' ಎನಿಸಿಕೊಳ್ಳುತ್ತಾನೆ. ಜೀವಿಯು ಶರೀರ ಹೊಂದಿರುವುದರಿಂದ 'ಶಾರೀರಿ' ಎನಿಸಿಕೊಳ್ಳುತ್ತಾನೆ. ಶರೀರದಲ್ಲಿ ಚೈತನ್ಯ ರೂಪದಿಂದ ಆತ್ಮನಾಗುವುದರಿಂದ ಪ್ರತ್ಯಗಾತ್ಮ ಎನಿಸಿಕೊಳ್ಳುತ್ತಾನೆ. ಶಬ್ದಾದಿ ಪ್ರಮಾಣಗಳಿಂದ ಜ್ಞಾನ ಪಡೆಯುವುದರಿಂದ 'ಪ್ರಮಾತೃ' ಎನಿಸಿಕೊಳ್ಳುತ್ತಾನೆ. ಈ ಎಲ್ಲ ಮೊದಲಾದ ಹೆಸರುಗಳಿಂದ ಜೀವಿಯನ್ನು ಕರೆಯಬಹುದು. ಮೇಲೆ ಹೇಳಿದ ಕರ್ತೃ, ಭೋಕ್ತೃ, ದ್ರಷ್ಟಾ, ಮೊದಲಾದ ಹೆಸರುಗಳು ಆತ್ಮನಿಗೆ ಸಂಬಂಧಿಸಿದರೆ ಶರೀರ ಉಪಾಧಿಯಿಂದ ಜೀವಾತ್ಮನಾಗಿ ಕರ್ತೃ, ಭೋಕ್ತೃ, ದ್ರಷ್ಟಾ, ಮೊದಲಾದ ಹೆಸರುಗಳು ಜೀವಿಯು ಪಡೆದುಕೊಳ್ಳುತ್ತಾನೆ.

ಆತ್ಮ ಮತ್ತು ಅಂತಃಕರಣಗಳೆರೆಡು ಉಳ್ಳವನು 'ಜೀವ' ಎಂದು ಕರೆಯಿಸಿಕೊಳ್ಳುತ್ತಾನೆ ಎಂದು ವೇದಾಂತ ಶಾಸ್ತ್ರದ ಪರಿಭಾಷೆಯಲ್ಲಿ ಹೇಳಲಾದುದರಿಂದ ಇಂದ್ರಿಯಗಳು, ಅಂತಃಕರಣಗಳು ಹಾಗೂ ಶರೀರಗಳ ಉಪಾಧಿಗಳಿಂದ ಕೂಡಿದ ಆತ್ಮನಿಗೆ 'ಜೀವ' ಎಂದು ಕರೆಯುತ್ತಾರೆ.

ಮುಂಡಕೋಪನಿಷತ್ತಿ ಈ ಕೆಳಗಿನ ಮಂತ್ರವು ಪ್ರಜೆ(ಜೀವಿ)ಗಳ ಉತ್ಪತ್ತಿ ಬಗ್ಗೆ ಹೇಳಿದೆ-

ತಸ್ಮಾದಗ್ನಿಃ ಸಮಿಧೋಯಸ್ಯ ಸೂರ್ಯಃ ಸೋಮಾತ್ ಪರ್ಜನ್ಯ ಓಷಧಯಃ ಪೃಥಿವ್ಯಾಮ್।
ಪುಮಾನ್ ರೇತಃ ಸಿಂಚತಿ ಯೋಷಿತಾಯಾಂ ಬಹ್ವೀಃ ಪ್ರಜಾಃ ಪುರುಷಾತ್ ಸಂಪ್ರಸೂತಾಃ॥[70]

ಬ್ರಹ್ಮನಿಂದ ಸೂರ್ಯನನ್ನೇ ಇಂಧನವಾಗಿ ಉಳ್ಳ ದ್ಯುಲೋಕ, ಆ ದ್ಯುಲೋಕವೆಂಬ ಅಗ್ನಿಯಿಂದ ಸೋಮನು ಉತ್ಪನ್ನನಾದ, ಆ ಸೋಮನಿಂದ ಪರ್ಜನ್ಯರೂಪ ಅಗ್ನಿಯು, ಪರ್ಜನ್ಯನಿಂದ ಪೃಥ್ವೀರೂಪದಲ್ಲಿ ಔಷಧಿಗಳು ಹುಟ್ಟಿದವು. ಈ ಔಷಧಿಗಳು ಪುರುಷ ರೂಪನಾದ ಅಗ್ನಿಯಲ್ಲಿ ಆಹುತವಾಗಲು ಆ ಅಗ್ನಿಯು ಯೋಗಿರೂಪವಾದ ಅಗ್ನಿಯಲ್ಲಿ ರೇತಸ್ಸನ್ನು ವಿಸರ್ಜಿಸಲು ಬಹು ಪ್ರಜೆಗಳು ಜನಿಸಿದರು.

ಶಂಕರಾಚಾರ್ಯರು, ಮಾಂಡೂಕ್ಯೋಪನಿಷತ್ತಿನಲ್ಲಿ ಪ್ರತಿಪಾದಿತವಾದ ಆತ್ಮನ ಅವಸ್ಥೆಗಳು 'ಜೀವ'ನದೂ ಆಗಿವೆ ಎಂದಿದ್ದಾರೆ. ಅವುಗಳನ್ನು ತಮ್ಮ ಸಿದ್ಧಾಂತ ಭಾಷ್ಯದಲ್ಲಿ ತಿಳಿಸಿದ್ದು ಅದರ ಸಾರವನ್ನು ಹೀಗೆ ಹೇಳಬಹುದು-

ನಾಂತಃಪ್ರಜ್ಞಂ ನ ಬಹಿಷ್ಪ್ರಜ್ಞಂ ನೋಭಯತಃಪ್ರಜ್ಞಂ ನ ಪ್ರಜ್ಞಾನಘನ ನ ಪ್ರಜ್ಞಂ ನಾಪ್ರಜ್ಞಮ್।
ಅದೃಶ್ಯಮವ್ಯವಹಾರ್ಯಮಗ್ರಾಹ್ಯಮಲಕ್ಷಣಮಚಿಂತ್ಯಮವ್ಯಪದೇಶ್ಯಮಮೇಕಾತ್ಮಪ್ರತ್ಯಯಸಾರಂ
ಪ್ರಪಂಚೋಪಶಮಂ ಶಾಂತಂ ಶಿವಮದ್ವೈತಮ್।[71]

ಜೀವನು ಜಾಗ್ರತ, ಸ್ವಪ್ನ, ಸುಷುಪ್ತಿ ಮತ್ತು ತುರಿಯಾತೀತ ಅವಸ್ಥೆಯನ್ನು ಹೊಂದಿದ್ದಾನೆ. ಜಾಗ್ರತಾವಸ್ಥೆಯಲ್ಲಿ ಸ್ಥೂಲಶರೀರದಿಂದ ವಿಷಯವಸ್ತುಗಳನ್ನು ಅನುಭೋಗಿಸುವ ಜೀವಿಗೆ ವೈಶ್ವಾನರನೆಂದು, ಸ್ವಪ್ನಾವಸ್ಥೆಯಲ್ಲಿ ಸೂಕ್ಷ್ಮಶರೀರದಿಂದ ವಿಷಯವಸ್ತುಗಳನ್ನು ಅನುಭೋಗಿಸುವ ಜೀವಿಗೆ ತೈಜಸನೆಂದು, ಸುಷುಪ್ತಿಯಲ್ಲಿರುವವನು ಏಕೀಭೂತನೂ ಕೇವಲ ಪ್ರಜ್ಞಾಘನನೂ, ಆನಂದಮಯನೂ, ಆನಂದಭೂತನೂ, ಚೇತೋಮುಖನೂ, ಪ್ರಾಜ್ಞನೂ ಆಗಿದ್ದಾನೆ. ಕೊನೆಯದಾದ ತುರೀಯಾವಸ್ಥೆಯ ಜೀವಿಯು ಅಂತಃಪ್ರಜ್ಞನಲ್ಲ, ಬಹಿಃಪ್ರಜ್ಞನಲ್ಲ, ಉಭಯಪ್ರಜ್ಞನಲ್ಲ, ಪ್ರಜ್ಞಾನಘನನಲ್ಲ, ಪ್ರಜ್ಞನಲ್ಲ, ಅಪ್ರಜ್ಞನಲ್ಲ, ಅವನು ಅದೃಶ್ಯ, ಅವ್ಯವಹಾರ್ಯ, ಅಗ್ರಾಹ್ಯ, ಅಲಕ್ಷಣ, ಅಚಿಂತ್ಯ, ಅವರ್ಣನೀಯ, ಏಕಾತ್ಮ, ಪ್ರತ್ಯಸಾರ, ಅಪ್ರಪಂಚ ಶಾಂತನು, ಶಿವನು, ಅದ್ವನಾಗಿದ್ದಾನೆ.

"ಏಷ ಹಿ ದ್ರಷ್ಟಾ ಸ್ಪ್ರಷ್ಟಾ ಶ್ರೋತಾ ಘ್ರಾತಾ ರಸಯಿತಾ ಮಂತಾ ಬೋದ್ಧಾ ಕರ್ತಾ ವಿಜ್ಞಾತಾತ್ಮಾ ಪುರುಷಃ। ಸ ಪರೇsಕ್ಷರ ಆತ್ಮನಿ ಸಂಪ್ರತಿಷ್ಠತೇ।"[72] ಪ್ರಶ್ನೋಪನಿಷತ್ತಿನ ಈ ಮಂತ್ರವು ಜೀವಾತ್ಮನೇ ನೋಡುವವನು, ಮುಟ್ಟುವವನು, ಕೇಳುವವನು, ಮೂಸಿಸುವವನು, ಆಸ್ವಾಧಿಸುವವನು, ಮನನ ಮಾಡುವವನು, ನಿಶ್ಚಯಿಸುವವನು, ಕರ್ತೃವು, ವಿಜ್ಞಾತೃ, ಸ್ವಭಾವದವನು ಪುರುಷನೂ ಆಗಿದ್ದಾನೆ ಎಂದಿದೆ. ಅಂದರೆ ಆ ಪುರುಷನು(ಬ್ರಹ್ಮ) ಜೀವಿಯ ಶರೀರದಲ್ಲಿದ್ದು ಅಚೇತನ ಇಂದ್ರಿಯಗಳನ್ನು ಚೇತನಯುಕ್ತವಾಗಿ ಮಾಡಿ, ಕ್ರಿಯೆಯಲ್ಲಿ ತೊಡಗುವಂತೆ ಮಾಡಿದ್ದಾನೆ. ಆದುದರಿಂದ ಆ ಪುರುಷನೇ ಜೀವಾತ್ಮನೆನಿಸಿಕೊಳ್ಳುತ್ತಾನೆ.

ಆತ್ಮನು ಜೀವಿಗಳ ಹೃದಯದಲ್ಲಿದ್ದಾನೆ. ಇಲ್ಲಿ ನೂರೊಂದು ನಾಡಿಗಳಿವೆ. ಅವುಗಳ ಒಂದೊಂದರಲ್ಲಿ ನೂರು-ನೂರು ನಾಡಿಗಳಿವೆ. ಒಂದೊಂದು ಶಾಖೆಯಲ್ಲಿಯೂ ಎಪ್ಪತ್ತೆರಡು ಸಾವಿರ ನಾಡಿಗಳು ಇರುವವು. ಅವುಗಳಲ್ಲಿ ವ್ಯಾನ ಸಂಚರಿಸುತ್ತದೆ. ಹೀಗೆ ಆತ್ಮನೇ ಜೀವಿಯಾಗಿದ್ದಾನೆ. ಅವನ ಶರೀರದಲ್ಲಿರುವ ನಾಡಿಗಳ ಸಂಖ್ಯೆಯನ್ನು ಕುರಿತು ಈ ಕೆಳಗಿನ ಮಂತ್ರವು ತಿಳಿಸಿದೆ-

ಹೃದಿ ಹ್ಯೇಷ ಆತ್ಮಾ। ಅತ್ರೈತದೇಕಶತಂ ನಾಡೀನಾಂ ತಾಸಾಂ ಶತಂ ಶತಮೇಕೈಕಸ್ಯಾಂ ದ್ವಾಸಪ್ತತಿರ್ದ್ವಾಸಪ್ತತಿಃ ಪ್ರತಿಶಾಖಾನಾಡೀಸಹಸ್ರಾಣಿ ಭವಂತ್ಯಾಸು ವ್ಯಾನಶ್ಚರತಿ।[73]

ಈ ನೂರೊಂದು ನಾಡಿಗಳಲ್ಲಿ ಒಂದಾದ ಸುಷುಮ್ನ ಎಂಬ ನಾಡಿಯಿಂದ ಉದಾನವಾಯು ಊರ್ಧ್ವಗಾಮಿಯಾಗಿ ಪುಣ್ಯದಿಂದ ಅಂದರೆ ಶಾಸ್ತ್ರವಿಹಿತ ಕರ್ಮದಿಂದ ಪುಣ್ಯಲೋಕಕ್ಕೂ, ಪಾಪದಿಂದ ನರಕಕ್ಕೂ, ಪುಣ್ಯಪಾಪಗಳೆರಡರಿಂದ ಮನುಷ್ಯ ಲೋಕಕ್ಕೂ ಒಯ್ಯುತ್ತದೆ ಎಂದು ಪ್ರಶ್ನೋಪನಿಷತ್ತು ಹೇಳಿದೆ-

ಅಥೈಕಯೋರ್ದ್ಧ ಉದಾನಃ ಪುಣ್ಯೇನ ಪುಣ್ಯಂ ಲೋಕ ನಯತಿ ಪಾಪೇನ ಪಾಪಮುಭಾಭ್ಯಾಮೇವ ಮನುಷ್ಯಲೋಕಮ್।[74]

ಕಠೋಪನಿಷತ್ತು ಶರೀರ ಇಂದ್ರಿಯಗಳನ್ನು ಸಂಪೂರ್ಣವಾಗಿ ರಥಕ್ಕೆ ಹೋಲಿಸಿದೆ. ಶರೀರವೆಂಬುದು ರಥ, ಆತ್ಮ(ರಥಿಕ) ಮಾಲಿಕ, ಬುದ್ಧಿ ಎಂಬುದು ಸಾರಥಿ, ಮನಸ್ಸು ಲಗಾಮಾಗಿದೆ. ಇಂದ್ರಿಯಗಳು ಕುದುರೆಗಳು. ಸಾರಥಿಯು ಇಂದ್ರಿಯಗಳು ಶಬ್ದಾದಿ ವಿಷಯಗಳತ್ತ ಹೋಗದಂತೆ ಮನಸ್ಸೆಂಬ ಲಗಾಮನ್ನು(ಕಡಿವಾಣ) ಹಿಡಿತದಲ್ಲಿಟ್ಟುಕೊಂಡಿರಬೇಕು. ಇದರಿಂದ ಸಂಸಾರ ಸಾಗರ ವಿಷಯದಲ್ಲಿ ಬಿದ್ದು ಜರಾ–ಮರಣಗಳ ದುಃಖ ಜೀವಿಗೆ ಇಲ್ಲದಂತಾಗುತ್ತದೆ ಎಂದಿದೆ

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇತು।
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ॥
ಇಂದ್ರಿಯಾಣಿ ಹಯಾನಾಹುರ್ವಿಷಯಾಂ ಸ್ತೇಷು ಗೋಚರಾನ ।
ಆತ್ಮೇಂದ್ರಿಯಮನೋಯುಕ್ತ ಭೋಕ್ತೇತ್ಯಾಹುರ್ಮನೀಷಿಣಃ॥[75]

ಮುಂಡಕೋಪನಿಷತ್ತು ಸಹ ಜೀವಿಯ ಶರೀರವನ್ನು ರಥದ ಚಕ್ರಕ್ಕೆ ಹೋಲಿಸಿ ಈಶ್ವನು ಶರೀರದಲ್ಲಿ ಜೀವ(ಆತ್ಮ) ರೂಪದಲ್ಲಿದ್ದು, ಎಲ್ಲವನ್ನು ನಿಗ್ರಹಿಸುತ್ತಿದ್ದಾನೆ. ಆ ಆತ್ಮ ಸ್ವರೂಪನಾದ ಈಶ್ವರನನ್ನು ಕಾಣಲು ಜೀವಿಯು ಓಂಕಾರವನ್ನು ಧ್ಯಾನಿಸಬೇಕು. ಅವನು ಈ ಜಗತ್ತಿನಲ್ಲಿ ರಥದ ಚಕ್ರದ ನಾಭಿಯಂತೆ ಜೀವಿಗಳಲ್ಲಿ ಇದ್ದಾನೆ. ನಾಭಿಯಲ್ಲಿ ಚಕ್ರದ ಕಾಲುಗಳು ಸೇರಿದಂತೆ, ಶರೀರದಲ್ಲಿರುವ ಪುರುಷನಿಗೆ ಅಂಗಾಂಗಗಳು ಸೇರಿವೆ ಎಂದು ಹೇಳಿದೆ

ಅರಾ ಇವ ರಥನಾಭೌ ಸಂಹತಾ ಯತ್ರ ನಾಡ್ಯಃ
ಸ ಏಷೋ ಂತಶ್ಚರತೇ ಬಹುಧಾ ಜಾಯಮಾನಃ।
ಓಮಿತ್ಯೇವಂ ಧ್ಯಾಯಥ ಆತ್ಮಾನಂ
ಸ್ವಸ್ತಿ ವಃ ಪಾರಾಯ ತಮಸಃ ಪರಸ್ತಾತ್॥[76]

ಆದುದರಿಂದ ಆತ್ಮನು ಪುರವೆಂಬ ಶರೀರದಲ್ಲಿರುವುದರಿಂದ ಪುರುಷನಾಗಿ ಜೀವಿಗಳ ಹೃದಯದಲ್ಲಿದ್ದಾನೆ. **"ಪುರುಷಃ ಪೂರ್ಣಮನೇನ ಸರ್ವಮಿತಿ"** ಬ್ರಹ್ಮನು(ಆತ್ಮ) ಜೀವಿಗಳ ಶರೀರಗಳಲ್ಲಿ ಭೂತ ಮೊದಲಾದ ಕಾಲದಲ್ಲೂ ಬದಲಾಗದೆ ಚೈತನ್ಯ ರೂಪಿಯಾದ ಬ್ರಹ್ಮ(ಆತ್ಮ)ನನ್ನು ಜೀವಾತ್ಮನೆಂದು ಕರೆಯುತ್ತಾರೆ. ಅವನೇ ಜೀವ. ಆದುದರಿಂದ ಬ್ರಹ್ಮ(ಆತ್ಮ)ನು ಶರೀರ ಉಪಾದಿಗಳ ಮೂಲಕ ಜೀವ ಎನಿಸಿಕೊಂಡನು.

ಕೇನೇಷಿತಂ ಪತತಿ ಪ್ರೇಷಿತಂ ಮನಃ ಕೇನ ಪ್ರಾಣಃ ಪ್ರಥಮ ಪ್ರೈತಿ ಯುಕ್ತಃ।
ಕೇನೇಷಿತಾಂ ವಾಚಾಮಿಮಾಂ ವದಂತಿ ಚಕ್ಷುಃ ಶ್ರೋತ್ರಂ ಕ ಉ ದೇವೋ ಯುನಕ್ತಿ॥[77]

ಜೀವಿಯ ಮನಸ್ಸು ಪ್ರವೃತ್ತಿ–ನಿವೃತ್ತಿಗಳ ವಿಷಯದಲ್ಲಿ ಸ್ವತಂತ್ರವಾಗಿಲ್ಲ. ಹಾಗೇನಾಗಿದ್ದರೆ ಅನಿಷ್ಟವಾದ ಚಿಂತನೆ ಮಾಡಿ ಬೇಡವಾದ ದುಃಖವನ್ನುಂಟು ಮಾಡುವ ಕರ್ಮಗಳಲ್ಲಿ ಮನಸ್ಸು ಪ್ರವರ್ತಿಸುತ್ತಿರಲಿಲ್ಲ. ಇದಕ್ಕೆ ಪ್ರೇರಣೆ ಮಾಡುವವರು ಯಾರು? ಪ್ರಾಣವು ಸರ್ವೇಂದ್ರಿಯಗಳಿಗಿಂತ ಪ್ರಧಾನವಾಗಿದ್ದು ಎಲ್ಲಕ್ಕೂ ಚೇತನ ಕೊಟ್ಟು ಕಾರ್ಯ

ಪ್ರವೃತಿಯಲ್ಲಿ ತೊಡಗುವಂತೆ ಮಾಡುತ್ತದೆ. ಇದು ದೇಹದಲ್ಲಿ ಪ್ರಾಣ, ಅಪಾನ, ವ್ಯಾನ, ಸಮಾನ ಮತ್ತು ಉದಾನಗಳಾಗಿ ಕಾರ್ಯ ನಿರ್ವಹಿಸುತ್ತದೆ. ಇದಕ್ಕೆ ಪ್ರೇರಕರಾರು? ಜೀವಿಗಳಾಡುವ ವಾಣಿಗೆ, ಚಕ್ಷುವಿಗೆ, ಶ್ರೋತೃಗಳಿಗೆ ಪ್ರೇರಣೆ ಕೊಡುವವರಾರು? ಇವುಗಳ ಹಿಂದೆ ಒಂದು ಶಕ್ತಿ ಇರಬಹುದು ಅದು ಯಾವುದು? ಎಂಬುದು ಕೇನೋಪನಿಷತ್ತಿನ ಪ್ರಶ್ನೆಯಾಗಿದೆ. ಇದಕ್ಕೆ ಉತ್ತರರೂಪವಾಗಿ ಈ ಎಲ್ಲಕ್ಕೂ ಬ್ರಹ್ಮನೇ ಕಾರಣ ಹಾಗೂ ಪ್ರೇರಣನಾಗಿದ್ದಾನೆ. ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನಗಳೆಂಬ ಪಂಚ ಪ್ರಾಣಗಳಿಗೆ, ಮನ, ಚಿತ್ತ, ಬುದ್ಧಿ ಮತ್ತು ಅಹಂಕಾರಗಳೆಂಬ ಅಂತಃಕರಣಗಳಿಗೆ, ಚಕ್ಷು, ಶೋತ್ರ, ಜೀವ, ಪ್ರಾಣ ಮತ್ತು ತ್ವಕ್‌ಗಳೆಂಬ ಜ್ಞಾನೇಂದ್ರಿಯ ಗಳಿಗೆ, ಮತ್ತು ವಾಕ್, ಪಾಣಿ, ಪಾದ, ಪಾಯು ಮತ್ತು ಉಪಸ್ಥಗಳೆಂಬ ಕರ್ಮೇಂದ್ರಿಯಗಳಿಗೆ ಪ್ರೇರಣೆ ಕೊಡುವವ ಹಾಗೂ ಜೊತೆಗೆ ಇರುವುದರಿಂದ ಬ್ರಹ್ಮ ಜೀವನಾಗಿದ್ದಾನೆ. ಜೀವಿಯು ತನ್ನ ಮೂಲ ಸ್ವರೂಪವನ್ನು ತಿಳಿದುಕೊಂಡರೆ ಎಲ್ಲವನ್ನು ತಿಳಿದು ಕೊಂಡಂತೆ. ಹಾಗೂ ಅಂತಹ ಜೀವಿಗಳು ಮೃತ್ಯುವಿನಿಂದ ಬಿಡುಗಡೆ ಹೊಂದಿ ಅಮೃತರಾಗುತ್ತಾರೆ ಎಂದು ಕೇನೋಪನಿಷತ್ತು ಸಾರಿದೆ.

ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೊ ಯದ್ವಾಚೋ ಹ ವಾಚಂ ಸ ಉ ಪ್ರಾಣಸ್ಯ ಪ್ರಾಣಃ।
ಚಕ್ಷುಷಶ್ಚಕ್ಷುರತಿಮುಚ್ಯ ಧೀರಾಃ ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ॥[78]

ಈ ರೀತಿಯಾಗಿ ಉಪನಿಷತ್ತಿನಲ್ಲಿ ಬರುವ ಜೀವಿಯ ಸ್ವರೂಪವನ್ನು ನೊಡಲಾಗಿದೆ. ಆತ್ಮ(ಬ್ರಹ್ಮ)ನು ಶರೀರರಾದಿ ಇಂದ್ರಿಯಗಳ ಉಪಾದಿಯಿಂದ ಜೀವಾತ್ಮ ಎನಿಸಿಕೊಂಡಿದ್ದಾನೆ. ಬ್ರಹ್ಮನು ಜೀವಿಯ ಶರೀರದಲ್ಲಿರುವುದರಿಂದ ಕೇಳುವವನು, ನೋಡುವವನು, ಎಂದು ಮೊದಲಾದ ಹೆಸರುಗಳಿಂದ ಜೀವಾತ್ಮನಾಗಿ ಕರೆಸಿಕೊಂಡಿದ್ದಾನೆ.

4.3. ಜಗತ್ತು

ಉಪನಿಷತ್ತುಗಳು ಸೃಷ್ಟಿಗೆ ಮೂಲ ಕಾರಣ 'ಬ್ರಹ್ಮ'ನೆಂದು ಕರೆದು, ಅವನಿಗೆ ಆತ್ಮ, ಸತ್, ಅಕ್ಷರ, ಆಕಾಶ, ಭೂಮಾ ಮೊದಲಾದ ಹೆಸರುಗಳಿಂದ ಕರೆದಿರುವುದನ್ನು ಇಗಾಗಲೆ ಕಂಡಿದ್ದೇವೆ. **"ಬ್ರಹ್ಮಾ ದೇವಾನಾಂ ಪ್ರಥಮಃ ಸಂಬಭೂವ ವಿಶ್ವಸ್ಯ ಕರ್ತಾ ಭುವನಸ್ಯ ಗೋಪ್ತಾ।**[79] ಮುಂಡಕೋಪನಿಷತ್ತು ವಿಶ್ವದ ಸೃಷ್ಟಿ ಪೂರ್ವದಲ್ಲಿ ಎಲ್ಲ ದೇವತೆಗಳಿಂತ ಮೊದಲು ಬ್ರಹ್ಮನೊಬ್ಬನೇ ಇದ್ದನು. ಅವನಿಂದಲೇ ಜಗತ್ತಿನ ಉತ್ಪತ್ತಿ ಹಾಗೂ ಅವನಿಂದಲೇ ಪೋಷಿಸಲ್ಪಡುತ್ತದೆಂದು ಸಾರಿದೆ.

ಆದುದರಿಂದ ಈಶಾವಾಸ್ಯೋಪನಿಷತ್ತು **"ಈಶಾ ವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್।"**[80] ಅವನಿಂದಲೇ ಜಗತ್ತು ಜನಿಸಿ, ಪೋಷಿಸಲ್ಪಡುವುದರಿಂದ ಚರಾಚರಾತ್ಮಕ ವಸ್ತುಗಳೆಲ್ಲ ಅವನಿಂದಲೇ ಆಚ್ಛಾದಿತವಾಗಿವೆ ಎಂದು ಹೇಳಿದೆ.

ಮಾಂಡೂಕ್ಯೋಪನಿಷತ್ತು **"ಇದಂ ಸರ್ವಂ ತಸ್ಯೋಪವ್ಯಾಖ್ಯಾನಮ್।"**[81] ಈ ಸಂಪೂರ್ಣ ವಿಶ್ವವು ಬ್ರಹ್ಮನ(ಓಂಕಾರದ) ಮಹಿಮೆಯಾಗಿದೆ ಎಂದಿದೆ.

ಐತರೇಯೋಪನಿಷತ್ತು **"ಆತ್ಮಾ ವಾ ಇದಮೇಕ ಏವಾಗ್ರ ಆಸೀತ್। ನಾನ್ಯತ್ಕಿಂಚನ ಮಿಷತ್। ಸ ಈಕ್ಷತ ಲೋಕನ್ನು ಸೃಜಾ ಇತಿ।"**[82] ಆತ್ಮನೊಬ್ಬನೇ ಸೃಷ್ಟಿಗೆ ಮೊದಲು ಇದ್ದನು. ಅವನಿಗಿಂತ ಬೇರೆಯಾಗಿ ಏನೇನೂ ಇರಲಿಲ್ಲ. ಆಗ ಅವನು ಲೋಕವನ್ನು ಸೃಷ್ಟಿಸುವೆನು ಎಂದು ಅಲೋಚಿಸಿದನು ಎಂದಿದೆ. ಇಲ್ಲಿ ಆತ್ಮ ಎಂದರೆ ಜೀವಾತ್ಮ ಎಂದರ್ಥವಲ್ಲ. ಯಾವನು ಈ ಲೋಕದಲ್ಲಿ ವ್ಯಾಪಿಸಿಕೊಂಡು, ಎಲ್ಲವನ್ನು ತನ್ನಲ್ಲಿ ಅಡಗಿಸಿಕೊಂಡಿರುವನೋ, ಅವನೇ ಆತ್ಮ. ಅವನು ಸ್ವತಃ ಚೇತನನೂ, ಸ್ವಯಂಜ್ಯೋತಿಯೂ ಆಗಿದ್ದಾನೆ. ಇಂಥ ಆತ್ಮನು ಈ ಸೃಷ್ಟಿಗೆ ಮುಂಚೆ ತನಗೆರಡನೆಯದಿಲ್ಲದ ಒಬ್ಬನೇ ಆಗಿದ್ದು, ಅವನು ಒಮ್ಮೆ "ನಾನು ಲೋಕವನ್ನು ಸೃಷ್ಟಿ ಮಾಡುವೆನು" ಎಂದು ಆಲೋಚಿಸಿದನು.

ಎಲ್ಲವನ್ನು ಪಡೆಯುವ, ಎಲ್ಲವನ್ನು ಗ್ರಹಿಸುವ, ಯಾವಾಗಲೂ ಇರುವಂತಹುದು ಯಾವುದು ಇದೆಯೋ ಅದು ಆತ್ಮವಾಗಿದೆ. ಐತರೇಯೋಪನಿಷತ್ತಿನ ಮಂತ್ರವು, ಈ ಜಗತ್ತಿನ ಪೂರ್ವದಲ್ಲಿ ಆತ್ಮನೊಬ್ಬನೆ ಇದ್ದನು. ಅವನಿಲ್ಲದೆ ಬೇರೇನೂ ಇರಲಿಲ್ಲ. ಅವನೇ ಈ ಲೋಕವನ್ನು ಸೃಷ್ಟಿಸಿದನೆಂದು ಹೇಳಿದೆ.

ಬೃಹದಾರಣ್ಯಕೋಪನಿಷತ್ತು **"ಬ್ರಹ್ಮ ವಾ ಇದಮಗ್ರ ಆಸೀತ್।", "ಆತ್ಮೈವೇದಮಗ್ರ ಆಸೀತ್।"**[83] ಸೃಷ್ಟಿಯ ಪೂರ್ವದಲ್ಲಿ ಬ್ರಹ್ಮ(ಆತ್ಮ)ನೊಬ್ಬನೇ ಇದ್ದನು. ಅವನಿಂದ ಎಲ್ಲವು ಸೃಷ್ಟಿಗೊಂಡವು ಎಂದು ಉಪದೇಶಿಸಿದೆ.

ತೈತರೀಯೋಪನಿಷತ್ತು ಅದು ತನ್ನನ್ನು ತಾನೇ ಉತ್ಪತ್ತಿ ಮಾಡಿಕೊಂಡಿದ್ದರಿಂದ ಅದು ಸುಕೃತವೆನಿಸುತ್ತದೆ. ಆ ಸುಕೃತವೇ ರಸ. ರಸವನ್ನೇ ಹೊಂದಿದ ಇವನು ಆನಂದಿತನಾಗುತ್ತಾನೆ. ಆಕಾಶದಲ್ಲಿ ಈ ಆನಂದವು ಇಲ್ಲದೆ ಹೋದರೆ ಯಾರು ತಾನೇ ಅಪಾನಾದಿ ಕ್ರಿಯೆಗಳನ್ನು ಮಾಡಲು ಸಾಧ್ಯ? **"ಅಸದ್ವಾ ಇದಮಗ್ರ ಆಸೀತ್। ತತೋ ವೈ ಸದಜಾಯತ। ತದಾತ್ಮಾನಂ ಸ್ವಯಂ ಕುರುತ। ..... ಯದೇಷ ಆಕಾಶ ಆನಂದೋ ನ ಸ್ಯಾತ್।"**[84] ಇಲ್ಲಿ ಸೃಷ್ಟಿ ಏಕಾಯಿತು? ಎಂದು ಪ್ರಶ್ನಿಸಿದರೆ ಮೂಲವಸ್ತುವಿನ ಆನಂದಕ್ಕಾಗಿ ಆಯಿತು ಎಂಬುದನ್ನು ಈ ಮಂತ್ರವು ಸ್ಪಷ್ಟ ಪಡಿಸಿದೆ.

ಬ್ರಹ್ಮನು ಏಕಮೇವಾದ್ವಿತೀಯನಾಗಿದ್ದಾನೆ. ಅಂದರೆ ಅವನನ್ನು ಬಿಟ್ಟು ಈ ವಿಶ್ವದಲ್ಲಿ ವ್ಯಕ್ತಿಯಾಗಲೀ ಅಥವಾ ವಸ್ತುವಾಗಲೀ ಇರಲಿಲ್ಲವೆಂದು ಛಾಂದೋಗ್ಯ ಮತ್ತು ಕಠೋಪನಿಷತ್ತುಗಳು ಹೀಗೆ ಹೇಳಿವೆ–

ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್।
ನೇಹನಾನಾಸ್ತಿ ಕಿಂಚನ।[85]

ಛಾಂದೋಗ್ಯವು ಆಕಾಶವೇ ಬ್ರಹ್ಮನೆಂದು ಹೇಳಿ **"ಆಕಾಶೋ ವೈ ನಾಮ"**[86] ಎಲ್ಲಕ್ಕೂ ಆಕಾಶವೇ ಆಧಾರ. ಅದರಿಂದ ಪಂಚಮಹಾಭೂತಗಳು ಉತ್ಪನ್ನವಾಗಿ ಮತ್ತು ಆಕಾಶದಲ್ಲಿಯೇ ಲಯವಾಗುತ್ತವೆ. ಜಗತ್ತಿನಲ್ಲಿರುವ ಎಲ್ಲ ವಸ್ತುಗಳಿಗಿಂತ ಆಕಾಶವು ಮಹತ್ತರವಾಗಿದೆ ಎಂದು ಹೇಳುತ್ತ, ಬ್ರಹ್ಮನೇ ಸೃಷ್ಟಿಕರ್ತನೆಂದು ಹೀಗೆ ವಿವರಿಸಿದೆ

ಅಸ್ಯ ಲೋಕಸ್ಯ ಕಾ ಗತಿರಿತ್ಯಾಕಾಶ ಇತಿ ಹೋವಾಚ ಸರ್ವಾಣಿ ಹ ವಾ ಇಮಾನಿ ಭೂತಾನ್ಯಾಕಾಶಾದೇವ ಸಮುಪ್ತದ್ಯಂತ ಆಕಾಶಂ ಪ್ರತ್ಯಸ್ತಂ ಯಂತ್ಯಾಕಾಶೋ ಹ್ಯೇವೈಭ್ಯೋ ಜ್ಯಾಯಾನಾಕಾಶಃ ಪರಾಯಣಮ್।[87]

ಸೃಷ್ಟಿಗೆ ಮೊದಲು ಈ ಜಗತ್ತು ಏಕವೂ ಅದ್ವಿತೀಯವೂ ಆದ ಸತ್ ರೂಪವೇ ಆಗಿತ್ತು. ಈ ವಿಷಯದಲ್ಲಿ ಕೆಲವರು ಪೂರ್ವದಲ್ಲಿ ಈ ಜಗತ್ತು ಏಕವೂ ಅದ್ವಿತೀಯವೂ ಆದ ಅಸತ್ ಸ್ವರೂಪವೇ ಆಗಿತ್ತು ಎಂದು ಹೇಳುತ್ತಾರೆ. ಆ ಅಸತ್ತಿನಿಂದ ಸದ್ವಸ್ತು ಉಂಟಾಯಿತು. ಸೌಮ್ಯನೇ, ಇದು ಹೇಗಾಯಿತು? ಅಸದ್ವಸ್ತುವಿನಿಂದ ಸದ್ವಸ್ತುವು ಹುಟ್ಟುವುದು ಸಾಧ್ಯವೆ? ಸೌಮ್ಯನೆ, ನಿಜವಾದ ಸೃಷ್ಟಿಗೆ ಮೊದಲು ಏಕವೂ ಅದ್ವಿತೀಯವೂ ಆದ ಸತ್ ರೂಪವೇ ಆಗಿತ್ತು ಎಂದು ಛಾಂದೋಗ್ಯವು ಸಂಭಾಷಣೆ ಮೂಲಕ ಸ್ಪಷ್ಟಪಡಿಸಿರುವುದು ಕಾಣುತ್ತೇವೆ. ಅಲ್ಲದೆ, ಛಾಂದೋಗ್ಯದಲ್ಲಿಯೇ ಅಸತ್‌ನಿಂದಲೂ ಸೃಷ್ಟಿಯು ಉಗಮಗೊಂಡು ವೈವಿಧ್ಯಮಯವಾಗಿ ವಿಕಾಸವಾಗಿರುವುದನ್ನು ಕಾಣಬಹುದು. ಉದಾಹರಣೆಗೆ

"ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯ। ತದ್ಧೈಕ ಆಹುರಸದೇವೇದಮಗ್ರ ಆಸೀದೇಕಮೇವಾದ್ವಿತೀಯಂ ತಸ್ಮಾದಸತಃ ಸಜ್ಜಾಯತ।" "ಕುತಸ್ತು ಖಲು ಸೋಮ್ಯೇದವಂ ಸ್ಯಾದಿತಿ ಹೋವಾಚ ಕಥಮಸತಃ ಸಜ್ಜಾಯತೇತಿ। ಖಲ್ವೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್।"[88]

ಛಾಂದೋಗ್ಯೋಪನಿಷತ್ತಿನಲ್ಲಿ ಅಸತ್ತಿನಿಂದಲೇ ಪ್ರಾರಂಭಗೊಂಡ ಸೃಷ್ಟಿಯು ಸತ್ತಾಗಿ ಬೆಳೆದು ಒಂದು ಅಂಡಾಕಾರವಾಗಿ, ಆನಂತರ ಒಡೆದು ಅದರ ಅಂಡ ಕಪಾಲಗಳು ಬೆಳ್ಳಿ, ಚಿನ್ನಗಳಾಗಿ ಮುಂದೆ ಪೃಥ್ವಿ ಲೋಕಾದಿಗಳಾದವು ಎಂದಿದೆ ಈ ಕೆಳಗಿನ ಮಂತ್ರ

"ಆದಿತ್ಯೋ ಬ್ರಹ್ಮೇತ್ಯಾದೇಶಸ್ತಸ್ಯೋಪವ್ಯಾಖ್ಯಾನಮಸದೇವೇದಮಗ್ರ ಆಸೀತ್।..... ಚಾಭವತಾಮ್।", "ತದ್ಯದ್ರಜತಂ ಸೇಯಂ ಪೃಥಿವೀ ಯತ್ಸುವರ್ಣ ಸಾ ದ್ಯೌರ್ಯಜ್ಜರಾಯು ತೇ ಪರ್ವತಾ ಯದುಲ್ಬಂ ಸಮೇಧೋ ನೀಹಾರೋ ಯಾ ಧಮನಯಸ್ತಾ ನದ್ಯೋ ಯದ್ವಾಸ್ತೇಯಮುದಕಂ ಸ ಸಮುದ್ರ।"[89]

ಅಂದರೆ ಜಗತ್ತೆಲ್ಲವೂ ಅಸತ್ತೇ ಆಗಿತ್ತು. ಆನಂತರ ಅದು ಸತ್ ಆಯಿತು. ಅದು ಬೆಳೆದು ಅಂಡಾಕಾರವಾಯಿತು. ಅಂದರೆ ಗೋಲಾಕಾರವಾಯಿತು. ಆ ಅಂಡವು ಕೆಲವು

ವರ್ಷಗಳ ನಂತರ ಒಡೆದು ಬೆಳ್ಳಿ, ಚಿನ್ನಗಳ ಕಪಾಲಗಳಾದವು. ನಂತರ ಆ ಅಂಡದ ಕಪಾಲಗಳ ಬೆಳ್ಳಿಯ ಭಾಗವು ಪೃಥ್ವಿಯಾಯಿತು. ಚಿನ್ನದ ಭಾಗವು ದ್ಯೂಲೋಕವಾಯಿತು. ಜರಾಯು ಪರ್ವತಗಳಾದವು. ಉಲ್ಬವು ಮೇಘಗಳಿಂದ ಕೂಡಿದ ಮಂಜಾಯಿತು. ಧಮರ್ನಗಳು ನದಿಗಳಾದವು. ಮೂತ್ರ ಕೋಶದ ಉದಕವು ಸಮುದ್ರ ವಾಯಿತು ಹೀಗೆಯೇ ಸೃಷ್ಟಿಯ ವಿಕಾಸವನ್ನು ವಿವರಿಸುತ್ತ ಹೋಗಿದೆ.

"ಅಸದ್ವಾ ಇದಮಗ್ರ ಆಸೀತ್। ತತೋ ವೈ ಸದಜಾಯತ।"[90] ಎಂಬ ತೈತ್ತಿರೀಯ ವಾಕ್ಯದಂತೆ ಅಸತ್–ಸತ್ತಿನಿಂದ ಸೃಷ್ಟಿಯ ಕ್ರಮವನ್ನು ರಚನೆಯಾಗಿದೆಯೆಂದು ವ್ಯಕ್ತವಾಗುತ್ತದೆ. ಅಂದರೆ ಸೃಷ್ಟಿ ಪೂರ್ವದಲ್ಲಿ ಕಾಣುತ್ತಿರುವುದೆಲ್ಲ ಅಸತ್ ಆಗಿತ್ತು. ಅದರಿಂದಲೇ ಸತ್ ಉತ್ಪನ್ನವಾಯಿತು. **ತದಾತ್ಮಾನಂ ಸ್ವಯಂ ಕುರುತ।** ಎಂಬಂತೆ ಅದು ತನ್ನನ್ನು ತಾನೇ ಉತ್ಪತ್ತಿ ಮಾಡಿಕೊಂಡಿತು. ಈ ಅವ್ಯಕ್ತವಾದ ಪರಾತ್ಪರ 'ಅಸತ್' ತನ್ನ ಅಂಶದಿಂದಲೇ ಜಗತ್ತನ್ನು ಸೃಷ್ಟಿಸಿಕೊಂಡಿತು. ಅದಕ್ಕೆ ಬೇರೆಯಾದ ಹೊರಗಿನ ದ್ರವ್ಯಗಳ ಸಹಾಯ ಬೇಕಾಗಿಲ್ಲವೆಂದು ಮುಂಡಕೋಪನಿಷತ್ತು ಸಹ ದೃಷ್ಟಾಂತದ ಮೂಲಕ ತಿಳಿಸಿದೆ

ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ ಯಥಾ ಪೃಥಿವ್ಯಾಮೋಷಧಯಃ ಸಂಭವಂತಿ।
ಯಥಾ ಸತಃ ಪುರುಷಾತ್ಕೇಶಲೋಮಾನಿ ತಥಾsಕ್ಷರಾತ್ಸಂಭತೀಹ ವಿಶ್ವಮ್॥[91]

ಅಂದರೆ ಜೇಡರ ಹುಳುವು ತನ್ನ ನಾಭಿಯಿಂದ ತಂತುವನ್ನು ಹೊರತೆಗೆದು ಗೂಡು ರಚಿಸಿ ಅದರಲ್ಲಿಯೇ ಇರುವಂತೆ, ಭೂಮಿಯಲ್ಲಿ ತನ್ನಷ್ಟಕ್ಕೆ ತಾನೆ ಮರಗಿಡಗಳು ಬೆಳೆಯುವಂತೆ, ವ್ಯಕ್ತಿಯ ಶರೀರದ ಮೇಲೆ ಕೇಶ, ರೋಮಗಳೂ ಹುಟ್ಟುವಂತೆ, ಬ್ರಹ್ಮನಿಂದ ಇಡೀ ವಿಶ್ವವು ರಚನೆಯಾಗಿದೆ.

ತಪಸಾ ಚೀಯತೇ ಬ್ರಹ್ಮ ತತೋsನ್ನಮಭಿಜಾತೇ।
ಅನ್ನಾತ್ಪ್ರಾಣೋ ಮನಃ ಸತ್ಯಂ ಲೋಕಾಃ ಕರ್ಮಸು ಚಾಮೃತಮ್॥[92]

ಮುಂಡಕೋಪನಿಷತ್ತಿನ ಈ ಮೇಲಿನ ಮಂತ್ರದಂತೆ ಬ್ರಹ್ಮನು ತಪಸ್ಸನ್ನಾಚರಿಸುವುದರ ಮೂಲಕ ಬೆಳೆದನು. ಅವನಿಂದ ಅನ್ನ ಉಂಟಾಯಿತು. ಅನ್ನದಿಂದ ಪ್ರಾಣ, ಮನಸ್ಸು, ಸತ್ಯ ಲೋಕಗಳು, ಕರ್ಮ ಮತ್ತು ಕರ್ಮದ ಫಲಗಳು ಉಂಟಾದವು.

ಮುಂಡಕೋಪನಿಷತ್ತು ಮತ್ತೆ ಮುಂದುವರೆದು

ಏತಸ್ಮಾಜ್ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿ ಚ।
ಖಂ ವಾಯುರ್ಜ್ಯೋತಿರಾಪಃ ಪೃಥಿವೀ ವಿಶ್ವಸ್ಯ ಧಾರಿಣೀ॥[93]

ಅಂದರೆ ಆ ಅಕ್ಷರ ಪುರುಷನಿಂದ ಪ್ರಾಣ, ಮನ, ಸರ್ವೇಂದ್ರಿಯಗಳು, ಆಕಾಶ, ವಾಯು, ಅಗ್ನಿ, ಜಲ ಮೊದಲಾದವುಗಳು ಉತ್ಪನ್ನಗೊಂಡಿವೆ. ಮತ್ತು ಈ ಎಲ್ಲವನ್ನು ಧಾರಣೆ ಮಾಡುವ ಧರಣಿ(ಪೃಥಿವಿ)ಯು ಉತ್ಪನ್ನವಾಗಿದೆ ಎಂದಿದೆ.

ಛಾಂದೋಗ್ಯವು ಸದ್ವಸ್ತು(ಬ್ರಹ್ಮ) ಬಹುರೂಪನಾಗಬೇಕೆಂದು ಆಲೋಚಿಸಿ ತೇಜಸ್ಸನ್ನು ಸೃಷ್ಟಿಸಿದನು. ತೇಜವು ಸಹ ಬಹುರೂಪವಾಗಬೇಕೆಂದು ಯೋಚಿಸಿ ನೀರು ಸೃಷ್ಟಿಸಿತು. ಆ ನೀರು ಬಹುರೂಪವಾಗಬೇಕೆಂದು ಯೋಚಿಸಿ ಅನ್ನವನ್ನು ಸೃಷ್ಟಿಸಿತು. ಆದುದರಿಂದ ಎಲ್ಲಲ್ಲಿ ಮಳೆಗರೆಯುವುದೋ ಅಲ್ಲಲ್ಲಿ ಅನ್ನ ಉಂಟಾಯಿತು ಎಂದು ಸೃಷ್ಟಿಕ್ರಮವನ್ನು ವಿವರಿಸಿದೆ.

ತೈತ್ತಿರೀಯೋಪನಿಷತ್ತು ಇದನ್ನೇ ಅನುಕ್ರಮವಾಗಿ ಒಂದರಿಂದ ಇನ್ನೊಂದು ಜನಿಸಿವೆ ಎಂದು ಹೇಳುತ್ತ ಕೊನೆಗೆ ಅನ್ನದಿಂದ ಪುರುಷ ಜನಿಸಿದನು ಎಂದು ಈ ಕೆಳಗಿನ ಮಂತ್ರದಲ್ಲಿ ತಿಳಿಸಿದೆ

"ತಸ್ಮಾದ್ವಾ ಏತಸ್ಮಾದಾತ್ಮನ ಆಕಾಶಃ ಸಂಭೂತಃ। ಆಕಾಶಾದ್ವಾಯುಃ। ವಾಯೋರಗ್ನಿಃ। ಅಗ್ನೇರಾಪಃ।ಅದ್ಭ್ಯಃ ಪೃಥಿವೀ। ಪೃಥಿವ್ಯಾ ಓಷಧಯಃ। ಓಷಧೀಭ್ಯೋನ್ನಮ್। ಅನ್ನಾತ್ಪುರುಷಃ। ಸ ವಾ ಏಷ ಪುರುಷೋsನ್ನರಸಮಯಃ।"[94]

ಅವನು ಅಂಭೋಲೋಕ, ಮರೀಚಿಲೋಕ, ಮರಲೋಕ, ಆಪೋಲೋಕ, ಆ ಆಂಭೋಲೋಕವು ದ್ಯುಲೋಕದ ಆಚೆಗೆ ಇರುವುದು. ದ್ಯುಲೋಕವು ಅದರ ಆಶ್ರಯ. ಅಂತರಿಕ್ಷವು ಮರೀಚಿಲೋಕಗಳು. ಪೃಥ್ವಿಯು ಮರಲೋಕ ಪೃಥ್ವಿಯ ಕೆಳಗೆ ಇರುವುದು ಆಪೋಲೋಕ, ಇವುಗಳನ್ನೆಲ್ಲ ಸೃಷ್ಟಿಸಿದನು ಎಂದಿದೆ ಕೆಳಗಿನ ಮಂತ್ರ

ಸ ಇಮಾಂಲ್ಲೋಕಾನಸೃಜತ। ಅಂಭೋ ಮರೀಚೀರ್ಮರಮಾಪೋsಂಭಃ ಪರೇಣ ದಿವಂ ದ್ಯೌಃ ಪ್ರತಿಷ್ಠಾsಂಥರಿಕ್ಷಂ ಮರಿಚಯಃ। ಪೃಥಿವೀ ಮರೋ ಯಾ ಅಧಸ್ತಾತ್ತಾ ಆಪಃ॥[95]

ಆನಂತರ ಜಲ, ವಾಯು, ಅಗ್ನಿ, ಆಕಾಶ, ಮತ್ತು ಭೂಮಿಗಳನ್ನು, ದ್ಯುಲೋಕ, ಮತ್ತು ಅಂತರಿಕ್ಷಲೋಕಗಳನ್ನು ಪಾತಾಳಾದಿ ಲೋಕಗಳನ್ನು ಸೃಷ್ಟಿ ಮಾಡಿದನು. ಈ ಎಲ್ಲ ಲೋಕಗಳ ರಕ್ಷಣೆಗಾಗಿ ಆಯಾ ಲೋಕಪಾಲಕರನ್ನು ಸಹ ಸೃಷ್ಟಿಸಿದನು ಎಂದಿದೆ ಈ ಮುಂದಿನ ಮಂತ್ರ

ಸ ಈಕ್ಷತೇಮೇ ನು ಲೋಕಾ ಲೋಕಪಾಲಾನ್ನು ಸೃಜಾ ಇತಿ।
ಸೋsದ್ಭ್ಯ ಏವ ಪುರುಷಂ ಸಮದ್ಧ್ಯಾಮೂಛಯತ್॥[96]

ಅವನು ಪ್ರಾಣವನ್ನು ಸೃಷ್ಟಿಸಿದನು. ಪ್ರಾಣದಿಂದ ಶ್ರದ್ಧೆ, ಆಕಾಶ, ವಾಯು, ಜ್ಯೋತಿ, ನೀರು, ಪೃಥ್ವಿ, ಇಂದ್ರಿಯಗಳು, ಮನಸ್ಸು, ಅನ್ನ, ಅನ್ನದಿಂದ ತಪಸ್ಸು, ಮಂತ್ರಗಳು, ಕರ್ಮ, ಲೋಕಗಳು ಮತ್ತು ಲೋಕಗಳಲ್ಲಿ ನಾಮಗಳನ್ನು ಸೃಷ್ಟಿಸಿದನು ಎಂದಿದೆ ಪ್ರಶ್ನೋಪನಿಷತ್ತು

ಸ ಪ್ರಾಣಸಸೃಜತ ಪ್ರಾಣಾಚ್ಛ್ರದ್ಧಾಂ ಖಂ ವಾಯುರ್ಜ್ಯೋತಿರಾಪಃ ಪೃಥಿವೀಂದ್ರಿಯಂ ಮನೋsನ್ನಮನ್ನಾದ್ವೀರ್ಯಂ ತಪೋ ಮಂತ್ರಾಃ ಕರ್ಮ ಲೋಕಾ ಲೋಕೇಷು ಚ ನಾಮ ಚ।[97]

ಮುಂಡಕವು ಬ್ರಹ್ಮ ಅಗ್ನಿಯಾದರೆ, ಜಗತ್ತು ಅಂದರೆ ಪಂಚಮಹಾಭೂತಗಳು, ಜಡ–ಚೇತನ ವಸ್ತುಗಳು ಅದರಿಂದ ಹೊರಡುವ ಕಿಡಿಗಳೆಂದು ಅಗ್ನಿ ಮತ್ತು ಅದರಿಂದ ಹೊರಡುವ ಕಿಡಿಗಳ ಉದಾಹರಣೆಯೊಂದಿಗೆ ದೃಢಪಡಿಸಿದೆ.

ತದೇತತ್ಸತ್ಯಂ ಯಥಾ ಸುದೀಪ್ತಾವಕಾದ್ವಿಸ್ಫುಲಿಂಗಾಃ ಸಹಸ್ರಶಃ ಪ್ರಭವಂತೇ ಸರೂಪಾಃ।
ತಥಾಕ್ಷರಾದ್ವಿವಿಧಾಃ ಸೋಮ್ಯ ಭಾವಾಃ ಪ್ರಜಾಯಂತೇ ತತ್ರ ಚೈವಾಪಿಯಂತಿ॥[98]

ಹೀಗೆ ಅಗ್ನಿಯಿಂದ ಹೊರಬಂದ ಕಿಡಿ ಬೆಂಕಿಯನ್ನೇ ಹೋಲುವಂತೆ, ಈ ಜಗತ್ತು ಬ್ರಹ್ಮನನ್ನೇ ಹೋಲುತ್ತದೆ. ಕಿಡಿಯಲ್ಲಿ ಅಗ್ನಿಯು ಒಳ–ಹೊರಗೂ ಆವರಿಸಿದಂತೆ, ಬ್ರಹ್ಮನಿಂದ ಜನಿಸಿದ ಈ ಲೋಕದ ಒಳ–ಹೊರಗೂ ಅವನೇ ತುಂಬಿಕೊಂಡಿದ್ದಾನೆ **"ಸಬಾಹ್ಯಾಭ್ಯಂತರೋ ಹ್ಯಜಃ।"**[99] ಎನ್ನುವುದು ಮುಂಡಕ.

ಬ್ರಹ್ಮನು ಸರ್ವಭೂತಾತ್ಮನಾಗಿರುವುದರಿಂದ ಅವನು ವಿಶ್ವರೂಪಿಯಾಗಿದ್ದಾನೆ ಎಂದು ಮುಂಡಕವು ಜಗತ್ತು ಬ್ರಹ್ಮನೆಂದು ವರ್ಣಿಸಿದೆ. ಬ್ರಹ್ಮನ ಶಿರ ಅಗ್ನಿ, ಚಂದ್ರ ಸೂರ್ಯರು ಅವನ ಕಣ್ಣುಗಳು, ದಿಕ್ಕುಗಳೇ ಅವನ ಕಿವಿಗಳು, ವೇದಗಳೇ ಅವನ ಮಾತು, ವಾಯುವೇ ಪ್ರಾಣ, ವಿಶ್ವವೇ ಅವನ ಹೃದಯವಾಗಿದೆ, ಪೃಥ್ವಿಯೇ ಅವನ ಕಾಲುಗಳಾಗಿವೆ ಎನ್ನುವುದು.

ಅಗ್ನಿಮೂರ್ಧಾ ಚಕ್ಷುಷಿ ಚಂದ್ರಸೂರ್ಯೌ ದಿಶಃ ಶ್ರೋತ್ರೇ ವಾಗ್ವಿವೃತಾಶ್ಚ ವೇದಾಃ।
ವಾಯುಃ ಪ್ರಾಣೋ ಹೃದಯಂ ವಿಶ್ವಮಸ್ಯ ಪದ್ಭ್ಯಾಂ ಪೃಥಿವಿ ಹ್ಯೇಷ ಸರ್ವಭೂತಾಂತರಾತ್ಮ॥[100]

ಈ ರೀತಿಯಾಗಿ ಜಗತ್ತು, ಜಗತ್ತಿನ ಸೃಷ್ಟಿ, ಮತ್ತು ಇಲ್ಲಿರುವ ವಸ್ತುಗಳೆಲ್ಲ ಬ್ರಹ್ಮನಿಂದ ರಚನೆಯಾಗಿವಲ್ಲದೆ ಎಲ್ಲ ವಸ್ತುಗಳಲ್ಲಿ ವ್ಯಾಪಿಸಿಕೊಂಡು ಅವನೇ ಆ ವಸ್ತುಗಳಾಗಿದ್ದನೆಂದು ಉಪನಿಷತ್ತಿನ ಅಧ್ಯಯನದಿಂದ ತಿಳಿಯಾಗಿದೆ.

4.4. ಆತ್ಮ

"ಆತ್ಮ" ಶಬ್ದವು "ಅನ್" ಧಾತುವಿನಿಂದ ನಿಷ್ಪನ್ನಗೊಂಡಿದೆ. 'ಅನ್' ವೆಂದರೆ ಶ್ವಾಸ ತೆಗೆದುಕೊಳ್ಳು ಎಂದರ್ಥವಾಗುತ್ತದೆ. ಇದು ಜೀವಿಗಳ ಶ್ವಾಸ(ಪ್ರಾಣ)ವಾಗಿದೆ. ಬರು–ಬರುತ್ತ ಇದರ ಅರ್ಥ ಜೀವ, ಆತ್ಮ, ಅಥವಾ ವ್ಯಕ್ತಿಯ ಮೂಲಶಕ್ತಿ, ಚೇತನ ಹಲವಾರು ಅರ್ಥಗಳನ್ನು ಹೊಂದಿದೆ. ಶಂಕರರು 'ಆತ್ಮ' ಪದದ ಅರ್ಥವನ್ನು ಪ್ರಾಪ್ತಿಯಾಗು, ತಿನ್ನು, ಅಥವಾ ಉಪಭೋಗಿಸು ಇಲ್ಲವೆ ವ್ಯಾಪಿಸು ಎಂದು ಅರ್ಥೈಸಿದ್ದಾರೆ.–

ಯಚ್ಚಾಪ್ನೋತಿ ಯದಾದತ್ತೇ ಯಚ್ಚತಿ ವಿಷಯಾನಿಹ।
ಯಾಚ್ಚಾಸ್ಯ ಸಂತತೋ ಭಾವತಮಾದಾತ್ಮೇತಿ ಕೀರ್ತ್ಯತೇ॥[101]

"ವಸ್ತುವಿನ ವ್ಯಾಪಕ ಗ್ರಹಣ ಮಾಡುತ್ತ, ವಿಷಯಗಳನ್ನು ಅನುಭವಿಸುತ್ತ ಯಾವಾಗಲೂ ಸದ್ಭಾವವುಳ್ಳದ್ದಾಗಿರುವುದರಿಂದ ಅದಕ್ಕೆ ಆತ್ಮ ಎನ್ನಲಾಗುತ್ತದೆ". "ಆತ್ಮ

ಶಬ್ದವು 'ಅತ್' ಅಥವಾ 'ಅಪ್' ಧಾತುವಿನಿಂದ ನಿಷ್ಪನ್ನವಾಗಿದೆ. 'ಅತ್'ವೆಂದರೆ ಜೊತೆಗೆ ಇರುವುದು. 'ಅಪ್'ವೆಂದರೆ ಪ್ರಾಪ್ತಿಯಿಂದಗೂಡಿದ್ದು. ಆದ್ದರಿಂದ ಯಾವಾಗಲೂ ಗತಿಶೀಲವುಳ್ಳ ಕಾರಣದಿಂದ 'ಆತ್ಮ'ವೆನಿಸಿಕೊಳ್ಳುತ್ತದೆ.[102]

ಎಲ್ಲವನ್ನು ಪಡೆಯುವ, ಎಲ್ಲವನ್ನು ಗ್ರಹಿಸುವ, ಯಾವಾಗಲೂ ಇರುವಂತಹುದು ಯಾವುದು ಇದೆಯೋ ಅದು ಆತ್ಮವಾಗಿದೆ. **"ಆತ್ಮಾ ವಾ ಇದಮೇಕ ಏವಾಗ್ರ ಆಸೀತ್। ನಾನ್ಯತ್ಕಿಂಚನ ಮಿಷತ್। ಸ ಈಕ್ಷತ ಲೋಕನ್ನು ಸೃಜಾ ಇತಿ।"**[103] ಐತರೇಯೋಪನಿಷತ್ತಿನ ಮಂತ್ರವು, ಈ ಜಗತ್ತಿನ ಪೂರ್ವದಲ್ಲಿ ಆತ್ಮನೊಬ್ಬನೆ ಇದ್ದನು. ಅವನಿಲ್ಲದೆ ಬೇರೇನೂ ಇರಲಿಲ್ಲ. ಅವನೇ ಈ ಲೋಕವನ್ನು ಸೃಷ್ಟಿಸಿದನೆಂದು ಹೇಳಿದೆ.

ಆತ್ಮನು ಹೇಗಿದ್ದಾನೆ? ಎಲ್ಲಿದ್ದಾನೆಂದು? ನಮ್ಮಲ್ಲಿ ಪ್ರಶ್ನೆ ಬಂದರೆ, ಅದಕ್ಕೆ ಉತ್ತರ ರೂಪವಾಗಿ ಕಠೋಪನಿಷತ್ತು ಸಂಪೂರ್ಣವಾಗಿ ಆತ್ಮತತ್ತ್ವವನ್ನೇ ಬೋಧಿಸುತ್ತದೆ. ಆಕಾಶಾದಿ ಪಂಚಮಹಾಭೂತಗಳು ಆತ್ಮನಿಂದಲೇ ವ್ಯಕ್ತವಾಗಿವೆ. ಅಲ್ಲದೆ, ಅವನು ಮಹತ್ತಿಗಿಂತಲೂ ಮಹತ್ತಾಗಿ, ಅಣುವಿಗಿಂತಲೂ ಅಣುವಾಗಿದ್ದಾನೆ. ಅಂದರೆ, ಇಲ್ಲಿರುವ ಸರ್ವವಸ್ತುಗಳಲ್ಲಿ ಯಾವುದನ್ನು ಅತ್ಯಂತ ಚಿಕ್ಕದು ಎಂದು ತಿಳಿಯುತ್ತೇವೆಯೋ, ಅದಕ್ಕಿಂತಲೂ ಚಿಕ್ಕದು, ಹಾಗೂ ಯಾವುದು ದೊಡ್ಡದು ಎಂದು ತಿಳಿಯುತ್ತೇವೆಯೋ ಅದಕ್ಕಿಂತಲೂ ದೊಡ್ಡರೂಪನಾಗಿದ್ದಾನೆ. ಇರುವೆಯಲ್ಲಿ ಇರುವೆಗಾತ್ರ. ಆನೆಯಲ್ಲಿ ಆನೆಯಗಾತ್ರ ರೂಪದಲ್ಲಿದ್ದಾನೆ. ಒಟ್ಟಿನಲ್ಲಿ ಆತ್ಮನು ಅತ್ಯಂತ ಚಿಕ್ಕವನೂ ಹೌದು, ಅತ್ಯಂತ ದೊಡ್ಡವನೂ ಹೌದು ಎಂದಿದೆ ಈ ಕೆಳಗಿನ ಮಂತ್ರ

ಅಣೋರಣೀಯಾನ್ಮಹತೋ ಮಹಿಯಾನ್ ಆತ್ಮಸ್ಯ ಜಂತೋರ್ನಿಹಿತೋ ಗುಹಾಯಾಮ್।
ತಮಕ್ರತುಃ ಪಶ್ಯತಿ ವೀತಶೋಕೋ ಧಾತುಪ್ರಸಾದಾನ್ಮಹಿಮಾನಮಾತ್ಮನ॥[104]

ಈ ಆತ್ಮನು ಜೀವಿಗಳ ಹೃದಯ ಗುಹೆಯಲ್ಲಿರುವನು. ನಿಷ್ಕಾಮ ಕರ್ಮ ಸಾಧನೆಯಿಂದ ವ್ಯಕ್ತಿಯ ತನ್ನ ಅಂತರೇಂದ್ರಿಯಗಳ ಮೂಲಕ ಅವನನ್ನು ಅನುಭವಿಸಿದ ಜೀವಿ ಶೋಕರಹಿತನಾಗುತ್ತಾನೆ.

ಪ್ರಶ್ನೋಪನಿಷತ್ತು **"ಏಷ ಹಿ ದ್ರಷ್ಟಾ ಸ್ಪ್ರಷ್ಟಾ ಶ್ರೋತಾ ಘ್ರಾತಾ ರಸಯಿತಾ ಮಂತಾ ಬೋದ್ಧಾ ಕರ್ತಾ ವಿಜ್ಞಾತಾತ್ಮಾ ಪುರುಷಃ।**[105] ನೋಡುವವನು, ಮುಟ್ಟುವವನು, ಕೇಳುವವನು, ಘ್ರಾಣಿಸುವವನು, ಆಸ್ವಾಧಿಸುವವನು, ಮನನ ಮಾಡುವವನು, ನಿಶ್ಚಯಿಸುವವನು, ಕರ್ತೃವು, ವಿಜ್ಞಾತೃ, ಸ್ವಭಾವದವನು ಪುರುಷನೂ ಅವನೇ ಆಗಿದ್ದಾನೆ. ಅಂದರೆ ಆತ್ಮನು ಜೀವಿಯ ಇಂದ್ರಿಯಗಳ ಸಹಕಾರದಿಂದ ದೃಷ್ಟಾ, ಸ್ಪ್ರಷ್ಟಾ, ಮತ್ತು ಶ್ರೋತಾ ಎಂದು ಮೊದಲಾದ ಹೆಸರುಗಳಿಂದ ಕರೆಸಿಕೊಂಡಿದ್ದಾನೆ.

ಇಂದ್ರಿಯೇಭ್ಯಃ ಪರಾ ಹ್ಯರ್ಥಾ ಅರ್ಥೇಭ್ಯಶ್ಚ ಪರಂ ಮನಃ।
ಮನಸಸ್ತು ಪರಾ ಬುದ್ಧಿರ್ಬುದ್ಧೇರಾತ್ಮಾ ಮಹಾನ್ಪರಃ॥[106]

ಈ ಮೇಲಿನ ಮಂತ್ರವು ಆತ್ಮನ ಶ್ರೇಷ್ಠತೆಯನ್ನು ಕುರಿತು ಹೇಳುತ್ತದೆ. ಇಂದ್ರಿಯಗಳಿಗಿಂತ ವಿಷಯ ಶ್ರೇಷ್ಠ, ವಿಷಯಗಳಿಗಿಂತ ಮನಸ್ಸು ಶ್ರೇಷ್ಠ, ಮನಸ್ಸಿಗಿಂತ ಬುದ್ಧಿ ಶ್ರೇಷ್ಠ, ಬುದ್ಧಿಗಿಂತ ಮಹತೆಂಬ ಬ್ರಹ್ಮ(ಆತ್ಮ) ಶ್ರೇಷ್ಠನಾಗಿದ್ದಾನೆ.

ಇಂತಹ ಆತ್ಮನು ಎಲ್ಲಾ ಜೀವಜಂತುಗಳಲ್ಲಿ ಪ್ರಕಾಶಿಸದೆ ಗೂಢನಾಗಿರುವನು. ಇವನನ್ನು ಸೂಕ್ಷ್ಮದರ್ಶಿಗಳು ಏಕಾಗ್ರತೆಯಿಂದ ಕೂಡಿದ ಸೂಕ್ಷ್ಮ ಬುದ್ಧಿಯಿಂದ ಮಾತ್ರ ನೋಡುತ್ತಾರೆಂದು ಕಠೋಪನಿಷತ್ತು ಹೇಳಿದೆ.–

ಏಷ ಸರ್ವೇಷು ಭೂತೇಷು ಗೂಢೋऽssತ್ಮಾ ನ ಪ್ರಕಾಶತೇ।
ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ॥[107]

ಅವನೇ ಅಗ್ನಿ, ಸೂರ್ಯ, ಮಳೆ, ಇಂದ್ರ, ಭೂಮಿ, ವಾಯು, ರಯಿ, ಮೊದಲಾದ ದೇವತೆ, ಸತ್, ಅಸತ್, ಹಾಗೂ ಅಮೃತ ಸ್ವರೂಪನಾಗಿದಾನೆ. ಉದಾಹರಣೆಗೆ –

ಏಷೋऽಗ್ನಿಸ್ತಪತ್ಯೇಷ ಸೂರ್ಯ ಏಷ ಪರ್ಜನ್ಯೋ ಮಘವಾನೇಷ ವಾಯುಃ।
ಏಷ ಪೃಥಿವೀ ರಯಿರ್ದೇವಃ ಸದಸಚ್ಚಾಮೃತಂ ಚ ಯತ್॥[108]

ಆತ್ಮನು ನಮ್ಮಿಂದ ಅತ್ಯಂತ ಸಮೀಪನೂ ಅತ್ಯಂತ ದೂರನೂ ಇದ್ದಾನೆ. **"ಆಸೀನೋ ದೂರಂ ವ್ರಜತಿ ಶಯಾನೋನೋ ಯಾತಿ ಸರ್ವತಃ"**[109] ಕಠೋಪನಿಷತ್ತಿನ ಅರ್ಥವನ್ನೇ ಈಶಾವಾಸ್ಯೋಪನಿಷತ್ತು ಅದು ಚಲಿಸುತ್ತದೆ. ಚಲಿಸುವುದಿಲ್ಲ. ಅದು ದೂರದಲ್ಲಿಯೂ ಇದೆ. ಹತ್ತಿರದಲ್ಲಿಯೂ ಇದ್ದು ಎಲ್ಲದರ ಒಳ–ಹೊರಗೆ ತುಂಬಿಕೊಂಡಿದೆ ಎಂದು ಹೇಳಿದೆ.

ತದೇಜತಿ ತನ್ನೈಜತಿ ತದ್ದೂರೇ ತದ್ವಂತಿಕೇ।
ತದಂತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ॥[110]

ಆತ್ಮನು ದಿವ್ಯ, ಅಮೂರ್ತ, ಬಾಹ್ಯಾಭ್ಯಾಂತರ, ವ್ಯಾಪ್ತನಾಗಿದ್ದಾನೆ. ಪ್ರಾಣ ಮತ್ತು ಮನಸ್ಸುಗಳಿಲ್ಲದ ಶುಭ್ರವಾದ ಅವನು ಅವ್ಯಾಕೃತ ಪ್ರಕೃತಿಗಿಂತ ಅಧಿಕ, ಸಮಷ್ಟಿಗಿಂತ ಅಧಿಕನಾಗಿದ್ದಾನೆಂದು ಹೇಳಿದೆ ಈ ಕೆಳಗಿನ ಮಂತ್ರ

ದಿವ್ಯೋ ಹ್ಯಮೂರ್ತಃ ಪುರುಷಃ ಸಬಾಹ್ಯಾಭ್ಯಾಂತರೋ ಹ್ಯಜಃ।
ಅಪ್ರಾಣೋ ಹ್ಯಮನಾಃ ಶುಭ್ರೋ ಹ್ಯಕ್ಷರಾತ್ಪರತಃ ಪರಃ॥[111]

ಆತ್ಮನ ಸ್ವರೂಪವನ್ನು ಕುರಿತು ಮಾಂಡೂಕ್ಯೋಪನಿಷತ್ತು

ಏಷ ಸರ್ವೇಶ್ವರ ಏಷ ಸರ್ವಜ್ಞಏಷೋऽಂತರ್ಯಾಮ್ಯೇಷ।
ಯೋನಿಃ ಸರ್ವಸ್ಯ ಪ್ರಭವಾಪ್ಯಯೌ ಹಿ ಭೂತಾನಾಮ॥[112]

ಅವನು ಸರ್ವೇಶ್ವರನು, ಸರ್ವಜ್ಞ, ಸರ್ವಾಂತರ್ಯಾಮಿ, ಸರ್ವಕಾರಣ ಹಾಗೂ ಸರ್ವಭೂತಗಳ ಪ್ರಭವ ಪ್ರಲಯನಾಗಿದ್ದಾನೆ.

ಬೃಹಚ್ಚ ತದ್ದಿವ್ಯಮಚಿಂತ್ಯರೂಪಂ ಸೂಕ್ಷ್ಮಾಚ್ಚ ತತ್ಸೂಕ್ಷ್ಮತರಂ ವಿಭಾತಿ।
ದೂರಾತ್ಸುದೂರೇ ತದಿಹಾಂತಿಕೇ ಚ ಪಶ್ಯತ್ಸ್ವಿಹೈವ ನಿಹಿತಂ ಗುಹಾಯಾಮ್॥[113]

ಅಂದರೆ ಆತ್ಮನ ಭವ್ಯತೆಯು ಯೋಚಿಸಲೂ ಅಸಾಧ್ಯವಾಗಿದೆ. ಅವನ ಸೂಕ್ಷ್ಮತೆಯಂತೂ ಅತೀ ಸೂಕ್ಷ್ಮವಾಗಿದೆ. ದೂರದಲ್ಲಿ ನೋಡುವುದಾದರೆ ಅಂತ್ಯವೇ ಇಲ್ಲದಷ್ಟು ದೂರದಲ್ಲಿದ್ದಾನೆ. ಇಲ್ಲಿ ನಮ್ಮ ಹತ್ತಿರದಲ್ಲೂ ಇದ್ದಾನೆ. ಮತ್ತು ಅವರವರ ಹೃದಯಾಂತರಾಳದಲ್ಲೂ ಶೋಭಿಸುತ್ತಿದ್ದಾನೆಂದು ಮುಂಡಕೋಪನಿಷತ್ತು ಹೇಳಿದೆ.

ಆತ್ಮನು ಜಗತ್ತಿನ ಪ್ರತಿಯೊಂದು ವಸ್ತುವಿನ ಒಳ–ಹೊರಗೂ ತುಂಬಿಕೊಂಡಿದ್ದಾನೆ. ಆದುದರಿಂದ ಆತ್ಮನು ಜೀವಿಗಳ ಶರೀರದಲ್ಲಿದ್ದು ಶರೀರ ರಹಿತನಾಗಿ, ಅನಿತ್ಯ ವಸ್ತುಗಳಲ್ಲಿ ನಿತ್ಯವು, ವ್ಯಾಪಕನಾಗಿರುವನು. ಇಂಥ ಆತ್ಮನನ್ನು ಯಾರು ತಿಳಿದುಕೊಳ್ಳುವರೋ ಅವರು ಶೋಕರಹಿತರಾಗುತ್ತಾರೆ.

ಆತ್ಮನು ಹುಟ್ಟುವುದಾಗಲಿ, ಸಾಯುವುದಾಗಲಿ, ಮಾಡುವುದಿಲ್ಲ. ಆತ್ಮನಿಂದ ಯಾವುದು ಹುಟ್ಟಲಿಲ್ಲ. ಆತ್ಮನು ಯಾವುದರಿಂದಲೂ ಹುಟ್ಟಲಿಲ್ಲ. ಆತ್ಮನು ಜನ್ಮರಹಿತ, ನಿತ್ಯ, ಶಾಶ್ವತ, ಪುರಾತನನಾಗಿದ್ದಾನೆ. ಶರೀರನಾಶವಾಗತಕ್ಕದಿದ್ದರೂ ಆತ್ಮನು ಎಂದಿಗೂ ನಾಶಹೊಂದುವವನಲ್ಲ. ಅವನು ಜನನ–ಮರಣರಹಿತನಾಗಿದ್ದಾನೆ. ಏಕೆಂದರೆ ಅನಿತ್ಯವಾದ ಈ ದೇಹಾದಿಗಳು ಘಟದಂತೆ ನಾಶಯುಕ್ತವಾಗಿವೆ. ನಿತ್ಯನಾದ ಆತ್ಮನಲ್ಲಿ ಉತ್ಪತ್ತಿನಾಶಾದಿ ವಿಕಾರಗಳು ಸಂಭವಿಸುವುದಿಲ್ಲ. ಮತ್ತು ನಿತ್ಯನಾದ ಆತ್ಮನ ಉತ್ಪತ್ತಿಯು ಯಾವ ಕಾರಣಗಳಿಂದಲೂ ಆಗುವುದಿಲ್ಲ. ಈ ಆತ್ಮನು ಅದ್ವಿತೀಯನಾದುದರಿಂದ ಆತ್ಮನಿಗೆ ಅನ್ಯವಾದ ಯಾವ ಕಾರ್ಯವೂ ಉತ್ಪತ್ತಿಯಾಗುವುದಿಲ್ಲ. ಆದುದರಿಂದ ಆತ್ಮನು ಷಡ್ವಿಕಾರರಹಿತನೆಂದು ಹೇಳಬಹುದು. ಆತ್ಮನು ಅಜನಾಗಿರುವುದರಿಂದ ಜನ್ಮವಿಲ್ಲ, ನಿತ್ಯನಾಗಿರುವುದರಿಂದ ಶಾಶ್ವತನಲ್ಲ. ಶಾಶ್ವತನಾಗಿರುವುದರಿಂದಪಕ್ಷಯನಲ್ಲ ಎಂದು ಈ ಕೆಳಗಿನ ಮಂತ್ರವು ಆತ್ಮನ ಸ್ವರೂಪವನ್ನು ತಿಳಿಸಿದೆ.–

ನ ಜಾಯತೇ ಮ್ರಿಯತೇ ವಾ ವಿಪಶ್ಚಿನ್ನಯಂ ಕುತಶ್ಚಿನ್ನ ಬಭೂವ ಕಶ್ಚಿತ್।
ಅಜೋ ನಿತ್ಯಃ ಶಾಶ್ವತೋsಯಂ ಪುರಾಣೋ ನ ಹನ್ಯತೇ ಹನ್ಯಮಾನೇ ಶರೀರೇ॥[114]

ಅಂತಹ ಆತ್ಮನು ಜೀವಿಗಳ ಹೃದಯ ಗುಹೆಯಲ್ಲಿ ಕಾಣಿಸದಂತೆ ಇರುವನು. ಅಲ್ಲಿರುವ ಆತ್ಮನನ್ನು ಏಕಾಗ್ರ ಮತ್ತು ಸೂಕ್ಷ್ಮಬುದ್ಧಿಯಿಂದ ಮಾತ್ರ ಅನುಭವಿಸಲು ಸಾಧ್ಯ ಎನ್ನುವುದು ಈ ಮುಂದಿನ ಮಂತ್ರ

ಅಶರೀರಂ ಶರೀರೇಷ್ವನವಸ್ಥೇಷ್ವವಸ್ಥಿತಮ್।
ಮಹಂತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ॥[115]

ಅಂದರೆ ಸರ್ವಜೀವರ ಹೃದಯದಲ್ಲಿರುವ ಆತ್ಮನನ್ನು ಸೂಕ್ಷ್ಮಬುದ್ಧಿಯಿಂದ ಗ್ರಹಿಸಿದ ಹಾಗೂ ಅವನ ವ್ಯಾಪಕತ್ವದ ಸ್ವರೂಪವನ್ನು ಅರಿತು ಅನುಭವಿಸಿದ ಜ್ಞಾನಿಗಳು ದುಃಖದಿಂದ ಬಿಡುಗಡೆಯಾಗಿ ಸದಾ ಸಂತೋಷದಲ್ಲಿರುವರು.

ಸರ್ವಭೂತಗಳ ಒಳ–ಹೊರಗೂ ಒಬ್ಬನಾದ ಆತ್ಮನೆ ಇದ್ದು, ಎಲ್ಲವನ್ನು ತನ್ನ ವಶದಲ್ಲಿ ಇಟ್ಟುಕೊಂಡು ನಾನಾ ರೂಪುಗಳನ್ನು ಹೊಂದುತ್ತ ಬೇರೆ ಬೇರೆಯಾಗಿ ಕಾಣುತ್ತಾನೆ.

ಏಕೋ ವಶೀ ಸರ್ವಭೂತಾಂತರಾತ್ಮಾ ಏಕಂ ರೂಪಂ ಬಹುಧಾ ಯಃ ಕರೋತಿ।
ತಮಾತ್ಮಸ್ಥಂ ಯೋsನುಪಶ್ಯಂತಿ ಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಮ್॥[116]
ಯಥೋದಕಂ ದುರ್ಗೇ ವೃಷ್ಟಂ ಪರ್ವತೇಷು ವಿಧಾವತಿ।
ಏವಂ ಧರ್ಮಾನ್ಪೃಥಕ್ಪಶ್ಯಂಸ್ತಾನೇವಾನುವಿಧಾವತಿ॥[117]

ಯಾವ ರೀತಿಯಾಗಿ ಮಳೆಯ ನೀರು ಎತ್ತರ ಸ್ಥಳವಾದ ಪರ್ವತಗಳಿಂದ ಹರಿದು ಹೊಂಡ, ಹಳ್ಳ, ಕೊಳ್ಳ, ನದಿಯ ಮೂಲಕ ಸಮುದ್ರ ಸೇರುತ್ತದೆಯೋ, ಮಳೆಯ ನೀರು ಒಂದೆಯಾದರೂ ಬೇರೆ ಬೇರೆ ಪ್ರದೇಶಗಳಲ್ಲಿ ಹರಡಿರುವಂತೆ, ಆತ್ಮನು ಒಬ್ಬನೆಯಾಗಿದ್ದರೂ ದೇಹಾದಿ ಉಪಾದಿಗಳಿಂದ ಬೇರೆ ಬೇರೆಯಾಗಿ ಕಾಣುತ್ತಾನೆ.

ಅಗ್ನಿರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ ಪ್ರತಿರೂಪೋ ಬಭೂವ।
ಏಕಸ್ತಥಾ ಸರ್ವಭೂತಾಂತರಾತ್ಮಾ ರೂಪಂ ರೂಪಂ ಪ್ರತಿರೂಪೋ ಬಹಿಶ್ಚ॥[118]
ವಾಯುರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ ಪ್ರತಿರೂಪೋ ಬಭೂವ।
ಏಕಸ್ತಥಾ ಸರ್ವಭೂತಾಂತರಾತ್ಮಾ ರೂಪಂ ರೂಪಂ ಪ್ರತಿರೂಪೋ ಬಹಿಶ್ಚ॥[119]

ಆತ್ಮನ ಇರುವಿಕೆಯನ್ನು ಕಠೋಪನಿಷತ್ತು ಅಗ್ನಿ ಮತ್ತು ವಾಯುವಿನ ದೃಷ್ಟಾಂತಗಳೊಂದಿಗೆ ವಿವರಿಸಿದೆ. ಅಗ್ನಿಯಾಗಲಿ, ವಾಯುವಾಗಲಿ ಜಗತ್ತಿನ ವಸ್ತುಗಳ ಸಂಪರ್ಕದಿಂದ ಅನೇಕ ರೂಪಗಳನ್ನು ಹೊಂದುವಂತೆ, ಆತ್ಮನು ಸಹ ದೇಹಾದಿ ಉಪಾದಿಗಳಿಂದ ಅನೇಕನಾಗಿ ಕಾಣುತ್ತಾನೆ.

ಈ ಮೇಲಿನ ಮಂತ್ರಗಳಲ್ಲಿ ಅನೇಕತ್ವದಲ್ಲಿ ಅತ್ಮನ ಏಕತ್ವದ ಸ್ವರೂಪ ವ್ಯಕ್ತವಾಗಿದೆ. ಸರ್ವಭೂತಗಳಲ್ಲಿ ಆತ್ಮನೊಬ್ಬನಿದ್ದು, ವ್ಯವಹಾರ ದೃಷ್ಟಿಯಿಂದ ಅನೇಕವಾಗಿ ಕಾಣುವನು. ಇದನ್ನು ನೀರು, ಅಗ್ನಿ ಮತ್ತು ವಾಯುಗಳ ಉದಾಹರಣೆಯೊಂದಿಗೆ ವಿವರಿಸಲಾಗಿದೆ.

ಇಂತಹ ಆತ್ಮನ ಅರಿವು ಪ್ರವಚನ ಮಾಡುವುದರಿಂದಾಗಲಿ, ಶಾಸ್ತ್ರಾಧ್ಯಯನ ಮಾಡುವುದರಿಂದಾಗಲಿ ಆಗುವುದಿಲ್ಲ. ಜ್ಞಾನಿಗಳು ಆತ್ಮನ ಅರಿವಿಗಾಗಿ ಯಾವ ಸಾಧನೆಗಳನ್ನು ಹೇಳಿದ್ದಾರೆಯೋ ಅದನ್ನು ಅನುಸರಿಸಿದರೆ ಮಾತ್ರ ಸಾಧ್ಯ. ಕೇವಲ ಗ್ರಂಥಗಳ ಪಠಣದಿಂದಾಗಲಿ, ವೇದಾಧ್ಯಯನ ಮಾಡುವುದರಿಂದಾಗಲಿ ಆತ್ಮನ ಇರುವು

ಮತ್ತು ಹರಿವು ಅನುಭವಕ್ಕೆ ಅಗೋಚರ. ವೇದಗಳನ್ನು ಕಂಠಸ್ಥ ಮಾಡುವುದರಿಂದ, ಅವುಗಳ ಅರ್ಥ ಸ್ಮರಣೆಯಲ್ಲಿಟ್ಟು ಕೊಳ್ಳುವುದರಿಂದ ಆತ್ಮಜ್ಞಾನ ಸಾಧ್ಯವಿಲ್ಲವೆನ್ನುವುದು ಉಪನಿಷತ್ತಿನ ಈ ಕೆಳಗಿನ ಮಂತ್ರಗಳು

ನಾಯಮಾತ್ಮಾ ಪ್ರವಚನೇನ ಲಭ್ಯೋ ನಮೇಧಯಾ ನ ಬಹುನಾ ಶ್ರುತೇನ।
ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನುಂ ಸ್ವಾಮ್॥[120]

ನಾಯಮಾತ್ಮಾ ಬಲಹೀನೇನ ಲಭ್ಯೋ ನ ಚ ಪ್ರಮಾದಾತ್ತಪಸೋ ವಾಽಪ್ಯಲಿಂಗಾತ್।
ಏತೈರುಪಾಯೈರ್ಯತತೇ ಯಸ್ತು ವಿದ್ವಾಂಸ್ತಸ್ಯೈಷ ಆತ್ಮಾ ವಿತತೇ ಬ್ರಹ್ಮ ಧಾಮ॥[121]

ಬಲಹೀನನಿಗೂ, ಬ್ರಹ್ಮಚರ್ಯ ವ್ರತದಿಂದ ತಪಸನ್ನಾಚರಿಸಿದರೂ ಆತ್ಮಜ್ಞಾನ ಪ್ರಾಪ್ತಿಯಾಗುವುದಿಲ್ಲ. ಜ್ಞಾನಿಗಳು ಹೇಳಿದ ಮಾರ್ಗೋಪಾಯವನ್ನು ಕ್ರಮವಾಗಿ ಅನುಸರಿಸಿದಾಗ ಮಾತ್ರ ಆತ್ಮಜ್ಞಾನ ಪ್ರಾಪ್ತವಾಗುತ್ತದೆ. ಆತ್ಮಜ್ಞಾನವು ಕೇವಲ ಹೇಳುವುದರಿಂದಾಗಲಿ ಅಥವಾ ಕೇಳುವುದರಿಂದಾಗಲಿ ಸಾಧ್ಯವಿಲ್ಲ. ಶ್ರವಣ, ಮನನ, ಮತ್ತು ನಿಧಿದ್ಯಾಸನಗಳ ಮೂಲಕ ಸ್ವಯಂ ಸತತ ಪ್ರಯತ್ನದಿಂದ ಆತ್ಮನ ಅರಿವಿನ ಅನುಭವವಾಗುತ್ತದೆ.

ಆದುದರಿಂದ ಆತ್ಮನನ್ನು ಪ್ರತ್ಯಕ್ಷ ಮಾಡಿಕೊಳ್ಳಲು ಜೀವಿಯು ಸತ್ಯದಿಂದಲೂ, ತಪಸ್ಸಿನಿಂದಲೂ, ಸಮ್ಯಗ್ ಜ್ಞಾನದಿಂದಲೂ, ಬ್ರಹ್ಮಚರ್ಯದಿಂದಲೂ ಸಾಧ್ಯವೆಂದು ಉಪನಿಷತ್ತುಗಳು ಹೇಳುವವು. ಆದುದರಿಂದಲೇ **"ಸತ್ಯಂ ಜ್ಞಾನಮನಂತಂ ಬ್ರಹ್ಮ।"**[122] ಸತ್ಯ, ಜ್ಞಾನ, ಮತು ಅನಂತಗಳು ಆತ್ಮ(ಬ್ರಹ್ಮ)ನ ಲಕ್ಷಣಗಳಾಗಿವೆ.

ಸತ್ಯೇನ ಲಭ್ಯಸ್ತಪಸಾ ಹ್ಯೇಷ ಆತ್ಮಾ ಸಮ್ಯಗ್ಜ್ಞಾನೇನ ಬ್ರಹ್ಮಚರ್ಯೇಣ ನಿತ್ಯಮ್।
ಅಂತಃಶರೀರೇ ಜ್ಯೋತಿರ್ಮಯೋ ಹಿ ಶುಭ್ರೋ ಯಂ ಪಶ್ಯಂತಿ ಯತಯಃ ಕ್ಷೀಣದೋಷಾಃ॥[123]

ಆತ್ಮನು ಸತ್ಯರೂಪವುಳ್ಳವನಾಗಿ ಮೂರು ಕಾಲದಲ್ಲಿ ಇರುವವನಾಗಿದ್ದಾನೆ. ಸತ್ಯವೆಂದರೆ ಕೇವಲ ಆಡುವ ಮಾತಲ್ಲ. ಯಾವಾಗಲೂ ಇರುವುದು ಯಾವುದೋ ಅದು ಸತ್ಯ ಅದುವೇ ಆತ್ಮ. ನಾವು ಅದನ್ನು ಪಡೆಯಲು ಸತ್ಯದ ಮಾರ್ಗ ಅನುಸರಿಸಬೇಕು. ತಪಸನ್ನಾಚರಿಸುತ್ತ, ಜ್ಞಾನವುಳ್ಳವನಾಗಿ, ಬ್ರಹ್ಮಚರ್ಯವ್ರತದ ಮೂಲಕ ಭೂತಗಳಲ್ಲಿ ಅಡಗಿರುವ ಜ್ಯೋತಿಸ್ವರೂಪನಾದ ಆತ್ಮನನ್ನು ಅರಿಯಲು ಸಾಧ್ಯ. ಹಾಗೆಯೇ ಮುಂಡಕವು ಮುಂದುವರೆದು ಜಯವು ಅಸತ್ಯಕ್ಕಲ್ಲ, ಅನಾತ್ಮಗಳಿಗಲ್ಲ, ಸತ್ಯಕ್ಕೆ ಮಾತ್ರ ಜಯ, ಅಮೃತಕ್ಕೆ ಜಯ, ಆತ್ಮಕ್ಕೆ ಜಯ. ಉಳಿದೆಲ್ಲವುಗಳಿಗೆ ಎಂದಿಗೂ ಜಯವಿಲ್ಲ. ಏಕೆಂದರೆ ಅವೆಲ್ಲ ಅಸತ್ಯ ವಸ್ತುಗಳಾಗಿವೆ. ಇಂದು ತೋರಿ ನಾಳೆ ಇಲ್ಲದಂತಾಗುತ್ತವೆ.

ಸತ್ಯಮೇವ ಜಯತಿ ನಾನೃತಂ ಸತ್ಯೇನ ಪಂಥಾ ವಿತತೋ ದೇವಯಾನಃ।
ಯೇನಾಕ್ರಮಂತ್ಯೃಷಯೋ ಹ್ಯಾಪ್ತಕಾಮಾ ಯತ್ರ ತತ್ಸತ್ಯಸ್ಯ ಪರಮಂ ನಿಧಾನಮ್॥[124]

ಕಠೋಪನಿಷತ್ತು ಆತ್ಮನ ಇರುವಿಕೆಯ ಸ್ಥಾನ ಹೃದಯವೆಂದು ಗುರ್ತಿಸಿ, ಅಂಗುಷ್ಠ ಗಾತ್ರವಿದ್ದಾನೆಂದು ಹೇಳಿದೆ.–

ಅಂಗುಷ್ಠಮಾತ್ರಃ ಪುರುಷೋ ಮಧ್ಯ ಆತ್ಮನಿ ತಿಷ್ಠತಿ।
ಈಶಾನಂ ಭೂತಭವಸ್ಯ ನ ತತೋ ವಿಜುಗುಪ್ಸತೇ॥[125]

ಆತ್ಮನು ಜೀವಿಗಳ ಹೃದಯದಲ್ಲಿ ತ್ರಿಕಾಲಾಧಿತನಾಗಿ, ಹೆಬ್ಬೆರಳಿನ ಗಾತ್ರದಲ್ಲಿರುವನು. ಅಂಗುಷ್ಠ ಪರಿಮಾವುಳ್ಳ ಆತ್ಮನು ಪುರವೆಂಬ ಶರೀರದಲ್ಲಿರುವುದರಿಂದ ಪುರುಷನಾಗಿ ಜೀವಿಗಳ ಹೃದಯದಲ್ಲಿದ್ದಾನೆ. **"ಪುರುಷಃ ಪೂರ್ಣಮನೇನ ಸರ್ವಮಿತಿ"** ಬ್ರಹ್ಮನು ಜೀವಿಗಳ ಶರೀಗಳಲ್ಲಿ ಭೂತ ಮೊದಲಾದ ಕಾಲದಲ್ಲೂ ಬದಲಾಗದೆ ಆತ್ಮ ರೂಪಿಯಾಗಿರುವುದರಿಂದ ಅವನನ್ನು ಜೀವಾತ್ಮನೆಂದು ಕರೆಯುತ್ತಾರೆ.

ಅಂಗುಷ್ಠಮಾತ್ರಃ ಪುರಷೋsಂತರಾತ್ಮಾ ಸದಾ ಜನಾನಾಂ ಹೃದಯೇ ಸಂನಿವಿಷ್ಟಃ।[126]

ಈ ರೀತಿಯಾಗಿ ಆತ್ಮನ ಸ್ವರೂಪ, ಇರುವಿಕೆ, ಆತ್ಮನು ಜಗತ್ತಿನ ವಸ್ತುಗಳಲ್ಲಿ ಹರಡಿರುವಿಕೆ ಮತ್ತು ಅನೇಕದರಲ್ಲಿ ಏಕವಾಗಿ ಕಾಣುವ ಪದ್ಧತಿ ಈ ಮೊದಲಾದ ಕುರಿತು ನೋಡಲಾಗಿದೆ.

4.5. ಮೋಕ್ಷ

ಸ ಯಥಾ ಸೋಮ್ಯ ವಯಾಂಸಿ ವಾಸೋವೃಕ್ಷಂ ಸಂಪ್ರತಿಷ್ಠಂತ।
ಏವಂ ಹ ವೈ ತತ್ಸರ್ವಂ ಪರ ಆತ್ಮಾನಿ ಸಂಪ್ರತಿಷ್ಠಂತೇ॥[127]

ಪ್ರಶ್ನೋಪನಿಷತ್ತಿನ ಈ ಮೇಲಿನ ಮಂತ್ರವು ಜೀವಾತ್ಮ ಮತ್ತು ಪರಮಾತ್ಮರು ಒಂದೆ ಮರದಲ್ಲಿ ಕುಳಿತ ಎರಡು ಹಕ್ಕಿಗಳೆಂದು ಚಿತ್ರಿಸಿದೆ. ಒಂದು ಹಕ್ಕಿ ಮರದಲ್ಲಿರುವ ಕರ್ಮಗಳೆಂಬ ಹಣ್ಣುಗಳನ್ನು ತಿನ್ನುತ್ತಿದೆ, ಆ ಹಣ್ಣುಗಳಲ್ಲಿ ಕೆಲವು ಸಿಹಿಯಾದರೆ, ಮತ್ತೆ ಕೆಲವು ಕಹಿಯಾಗಿವೆ. ಅಂದರೆ ಈ ಹಕ್ಕಿ ಸುಖ–ದುಃಖಗಳೆಂಬ ಹಣ್ಣುಗಳನ್ನು ಅನುಭವಿಸುತ್ತಿದೆ. ಇನ್ನೊಂದು ಗಂಭೀರದಿಂದ ಕುಳಿತಿದೆ. ಅದು ಯಾವಾಗಲು ಶಾಂತ ತಟಸ್ಥವಾಗಿದೆ. ಆದ್ದರಿಂದ ಜೀವಾತ್ಮನು ಪರಮಾತ್ಮನ ಮಹಿಮೆಗಳನ್ನು ತಿಳಿದಾಗ ಎಲ್ಲ ದುಃಖ ಸಂಕಟಗಳಿಂದ ಮುಕ್ತನಾಗುವನು ಎಂದಿದೆ.

ಕಠೋಪನಿಷತ್ತು ಶರೀರ ಇಂದ್ರಿಯಗಳನ್ನು ಸಂಪೂರ್ಣವಾಗಿ ರಥಕ್ಕೆ ಹೋಲಿಸಿದೆ. ಶರೀರವೆಂಬುದು ರಥ, ಆತ್ಮ(ರಥಿಕ) ಮಾಲಿಕ, ಬುದ್ಧಿ ಎಂಬುದು ಸಾರಥಿ, ಮನಸ್ಸು ಲಗಾಮಾಗಿದೆ. ಇಂದ್ರಿಯಗಳು ಕುದುರೆಗಳು. ಇಂದ್ರಿಯಗಳು ಶಬ್ದಾದಿ ವಿಷಯಗಳತ್ತ ಹೋಗದಂತೆ ಮನಸ್ಸೆಂಬ ಲಗಾಮನ್ನು(ಕಡಿವಾಣ) ಸಾರಥಿಯು ಹಿಡಿತದಲ್ಲಿಟ್ಟುಕೊಂಡಿರಬೇಕು. ಇದರಿಂದ ಸಂಸಾರ ಸಾಗರ ವಿಷಯದಲ್ಲಿ ಬಿದ್ದು ಜರಾ–ಮರಣಗಳ ದುಃಖ ಜೀವಿಗೆ ಇಲ್ಲದಂತಾಗುತ್ತದೆ ಎಂದಿದೆ.–

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇತು।
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ॥
ಇಂದ್ರಿಯಾಣಿ ಹಯಾನಾಹುರ್ವಿಷಯಾಂ ಸ್ತೇಷು ಗೋಚರಾನ ।
ಆತ್ಮೇಂದ್ರಿಯಮನೋಯುಕ್ತ ಭೋಕ್ತೇತ್ಯಾಹುರ್ಮನೀಷಿಣಃ॥[128]

ಮನಸ್ಸು, ಇಂದ್ರಿಯಗಳು ಬುದ್ಧಿಯವಶದಲ್ಲಿಟ್ಟು ವಿಷಯಗಳ ಕಡೆಗೆ ಹರಿಯದೆ ಇರುವ ಸ್ಥಿತಿಯನ್ನು ಮೋಕ್ಷ ಎನ್ನಲಾಗಿದೆ. ಅಂದರೆ ವಿಷಯಗಳಿಂದ ಬಿಡುಗಡೆ ಹೊಂದುವುದೆ ಮೋಕ್ಷ.

ಮುಂಡಕವು ಶರೀರವನ್ನು ರಥದ ಚಕ್ರಕ್ಕೆ ಹೋಲಿಸಿ ಈಶ್ವರನು ಶರೀರದಲ್ಲಿ ಜೀವ(ಆತ್ಮ) ರೂಪದಲ್ಲಿದ್ದು, ಎಲ್ಲವನ್ನು ನಿಗ್ರಹಿಸುತ್ತಿದ್ದಾನೆ. ಆ ಆತ್ಮ ಸ್ವರೂಪನಾದ ಈಶ್ವರನನ್ನು ಕಾಣಲು ಜೀವಿಯು ಓಂಕಾರವನ್ನು ಧ್ಯಾನಿಸಬೇಕು. ಅವನು ಈ ಜಗತ್ತಿನಲ್ಲಿ ರಥದ ಚಕ್ರದ ನಾಭಿಯಂತೆ ಜೀವಿಗಳಲ್ಲಿ ಇದ್ದಾನೆ. ನಾಭಿಯಲ್ಲಿ ಚಕ್ರದ ಕಾಲುಗಳು ಸೇರಿದಂತೆ, ಶರೀರದಲ್ಲಿರುವ ಪುರುಷನಿಗೆ ಅಂಗಾಂಗಗಳು ಸೇರಿವೆ ಎಂದು ಹೇಳಿದೆ.–

ಅರಾ ಇವ ರಥನಾಭೌ ಸಂಹತಾ ಯತ್ರ ನಾಡ್ಯಃ
ಸ ಏಷೋ ಂತಶ್ಚರತೇ ಬಹುಧಾ ಜಾಯಮಾನಃ।
ಓಮಿತ್ಯೇವಂ ಧ್ಯಾಯಥ ಆತ್ಮಾನಂ
ಸ್ವಸ್ತಿ ವಃ ಪಾರಾಯ ತಮಸಃ ಪರಸ್ತಾತ್॥[129]

ಓಂಕಾರ ಧ್ಯಾನದ ಮೂಲಕ ಆತ್ಮನನ್ನು ತಿಳಿದುಕೊಂಡು, ಸರ್ವಜೀವರಲ್ಲಿರುವ ಆತ್ಮನು, ತನ್ನಲ್ಲಿರುವ ಆತ್ಮನು ಒಬ್ಬನೆ ಎಂದು ತಿಳಿದುಕೊಳ್ಳುವ ಸ್ಥಿತಿ ಮೋಕ್ಷ.

ಕೇನೇಷಿತಂ ಪತತಿ ಪ್ರೇಷಿತಂ ಮನಃ ಕೇನ ಪ್ರಾಣಃ ಪ್ರಥಮ ಪ್ರೈತಿ ಯುಕ್ತಃ।
ಕೇನೇಷಿತಾಂ ವಾಚಾಮಿಮಾಂ ವದಂತಿ ಚಕ್ಷುಃ ಶ್ರೋತ್ರಂ ಕ ಉ ದೇವೋ ಯುನಕ್ತಿ॥[130]

ಜೀವಿಯ ಮನಸ್ಸು ಪ್ರವೃತ್ತಿ–ನಿವೃತ್ತಿಗಳ ವಿಷಯದಲ್ಲಿ ಸ್ವತಂತ್ರವಾಗಿಲ್ಲ. ಹಾಗೇನಾಗಿದ್ದರೆ ಅನಿಷ್ಟವಾದ ಚಿಂತನೆ ಮಾಡಿ ಬೇಡವಾದ ದುಃಖವನ್ನುಂಟು ಮಾಡುವ ಕರ್ಮಗಳಲ್ಲಿ ಮನಸ್ಸು ಪ್ರವೃತ್ತಿಸುತ್ತಿರಲಿಲ್ಲ. ಇದಕ್ಕೆ ಪ್ರೇರಣೆ ಮಾಡುವವರು ಯಾರು? ಪ್ರಾಣವು ಸರ್ವೇಂದ್ರಿಗಳಿಗಿಂತ ಪ್ರಧಾನವಾಗಿದ್ದು ಎಲ್ಲಕ್ಕೂ ಚೇತನ ಕೊಟ್ಟು ಕಾರ್ಯ ಪ್ರವೃತಿಯಲ್ಲಿ ತೊಡಗುವಂತೆ ಮಾಡುತ್ತದೆ. ಇದು ದೇಹದಲ್ಲಿ ಪ್ರಾಣ, ಅಪಾನ, ವ್ಯಾನ, ಸಮಾನ ಮತ್ತು ಉದಾನಗಳಾಗಿ ಕಾರ್ಯ ನಿರ್ವಹಿಸುತ್ತದೆ. ಇದಕ್ಕೆ ಪ್ರೇರಕರಾರು? ಜೀವಿಗಳಾಡುವ ವಾಣಿಗೆ, ಚಕ್ಷುವಿಗೆ, ಶ್ರೋತ್ರುಗಳಿಗೆ ಪ್ರೇರಣೆ ಕೊಡುವವರಾರು? ಇವುಗಳ ಹಿಂದೆ ಒಂದು ಶಕ್ತಿ ಇರಬಹುದು ಅದು ಯಾವುದು? ಎಂಬುದು ಕೇನೋಪನಿಷತ್ತಿನ ಪ್ರಶ್ನೆಯಾಗಿದೆ. ಇದಕ್ಕೆ ಉತ್ತರರೂಪವಾಗಿ ಈ ಎಲ್ಲಕ್ಕೂ ಬ್ರಹ್ಮನೇ ಕಾರಣ ಹಾಗೂ ಪ್ರೇರಣನಾಗಿದ್ದಾನೆ. ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನಗಳೆಂಬ ಪಂಚ ಪ್ರಾಣಗಳಿಗೆ, ಮನ, ಚಿತ್ತ, ಬುದ್ಧಿ ಮತ್ತು ಅಹಂಕಾರಗಳೆಂಬ

ಅಂತಃಕರಣಗಳಿಗೆ, ಚಕ್ಷು, ಶೋತ್ರ, ಜೀವ, ಪ್ರಾಣ ಮತ್ತು ತ್ವಕ್‌ಗಳೆಂಬ ಜ್ಞಾನೇಂದ್ರಿಯಗಳಿಗೆ, ಮತ್ತು ವಾಕ್, ಪಾಣಿ, ಪಾದ, ಪಾಯು ಮತ್ತು ಉಪಸ್ಥಗಳೆಂಬ ಕರ್ಮೇಂದ್ರಿಯಗಳಿಗೆ ಪ್ರೇರಣೆ ಕೊಡುವವ ಹಾಗೂ ಜೊತೆಗೆ ಇರುವುದರಿಂದ ಬ್ರಹ್ಮ ಜೀವನಾಗಿದ್ದಾನೆ. ಜೀವಿಯು ತನ್ನ ಮೂಲ ಸ್ವರೂಪವನ್ನು ತಿಳಿದುಕೊಂಡರೆ ಎಲ್ಲವನ್ನು ತಿಳಿದು ಕೊಂಡಂತೆ. ಹಾಗೂ ಅಂತಹ ಜೀವಿಗಳು ಮೃತ್ಯುವಿನಿಂದ ಬಿಡುಗಡೆ ಹೊಂದಿ ಅಮೃತರಾಗುತ್ತಾರೆ ಎಂದು ಕೇನೋಪನಿಷತ್ತು ಸಾರಿದೆ.

ಅನ್ಯಚ್ಛ್ರೇಯ೽ನ್ಯದುತೈವ ಪ್ರೇಯಸ್ತೇ ಉಭೇ ನಾನಾರ್ಥೇ ಪುರುಷಂ ಸಿನೀತಃ।
ತಯೋಃ ಶ್ರೇಯ ಆದದಾನಸ್ಯ ಸಾಧು ಭವತಿ ಹೀಯತೇ೽ರ್ಥಾದ್ಯ ಉ ಪ್ರೇಯೋವೃಣೀತೇ॥[131]

ಕಠೋಪನಿಷತ್ತಿನ ಈ ಮೇಲಿನ ಮಂತ್ರವು ಮೋಕ್ಷದ ಮಾರ್ಗ, ಶ್ರೇಯಸ್ಸು, ಮತ್ತು ಪ್ರೇಯಸ್ಸು ಎಂದು ಹೇಳಿ, ಅವೆರಡು ಭಿನ್ನಪ್ರಯೋಜನವುಳ್ಳವುಗಳಾಗಿವೆ. ಇವೆರಡು ಜೀವಿಯನ್ನು ಬಂಧಿಸುತ್ತವೆ. ಇವೆರಡರಲ್ಲಿ ಶ್ರೇಯಸ್ಸನ್ನು ತೆಗೆದುಕೊಳ್ಳುವವನಿಗೆ ಒಳ್ಳೆಯದಾಗುವುದು. ಮತ್ತು ಪ್ರೇಯಸ್ಸನ್ನು ಆರಿಸಿಕೊಂಡವನು ಮೋಕ್ಷದಿಂದ ಚ್ಯುತನಾಗುವನು ಎಂದಿದೆ.

ಶ್ರೇಯಸ್ಸು ಮತ್ತು ಪ್ರೇಯಸ್ಸುಗಳೆರಡು ಮನುಷ್ಯನ ಸಮೀಪಕ್ಕೆ ಬರುತ್ತವೆ. ಧೀಮಂತನು ಅವುಗಳನ್ನು ಚೆನ್ನಾಗಿ ಪರಿಶೀಲಿಸಿ ವಿವೇಚಿಸುತ್ತಾನೆ. ಧೀಮಂತನು ಪ್ರೇಯಸ್ಸಿಗಿಂತ ಶ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ. ಅವಿವೇಕಿಯು ಯೋಗಕ್ಷೇಮಕ್ಕಾಗಿ ಪ್ರೇಯಸ್ಸನ್ನೇ ಆರಿಸಿಕೊಳ್ಳುತ್ತಾನೆ ಎನ್ನುವುದು ಈ ಕೆಳಗಿನ ಮಂತ್ರ

ಶ್ರೇಯಶ್ಚ ಪ್ರೇಯಶ್ಚ ಮನುಷ್ಯಮೇತಸ್ತೌ ಸಂಪರೀತ್ಯ ವಿವಿನಕ್ತಿ ಧೀರಃ।
ಶ್ರೇಯೋ ಹಿ ಧೀರೋ೽ಭಿ ಪ್ರೇಯಸೋ ವೃಣೀತೇಪ್ರೇಯೋಮಂದೋ ಯೋಗಕ್ಷೇಮಾದ್ವೃಣೀತೇ॥[132]

ಮೋಕ್ಷಾಪೇಕ್ಷಿಯು, ಮೋಕ್ಷ ಸಂಪಾದನೆಗಾಗಿ ಯಾವ ಮಾರ್ಗವನ್ನು ಆರಿಸಿಕೊಳ್ಳಬೇಕು ಎಂಬುವುದನ್ನು ಉಪನಿಷತ್ತು ವಿಭಾಗಿಸಿ ಅವನ ಮುಂದೆ ಇಟ್ಟಿದೆ. ಅದರಲ್ಲಿ ಮೋಕ್ಷ ಸಾದನೆಗೆ ಬೇಕಾದ ಮಾರ್ಗವನ್ನು ಅನುಸರಿಸಬೇಕು ಎಂಬುವುದೇ ಈ ಮೇಲಿನ ಮಂತ್ರಗಳ ಧ್ಯೇಯ.

ಆದುದರಿಂದ ಈಶಾವಾಸ್ಯೋಪನಿಷತ್ತು ಸಹ ವಿದ್ಯೆಯನ್ನು ಎರಡ ವಿಭಾಗವನ್ನಾಗಿ ವಿಂಗಡಿಸಿ, ಅಜ್ಞಾನಕ್ಕೆ ಕರೆದೊಯ್ಯುವ ವ್ಯಾವಹಾರಿಕ ವಿದ್ಯೆಯಿಂದ ಮೃತ್ಯುವನ್ನು ಹೊಂದುತ್ತಾನೆ. ಆತ್ಮ(ಬ್ರಹ್ಮ)ಜ್ಞಾನ ವಿದ್ಯೆಯಿಂದ ಮೋಕ್ಷವನ್ನು ಹೊಂದುತ್ತಾನೆ ಎಂದು ಹೇಳಿದೆ.–

ವಿದ್ಯಾಂ ಚಾವಿದ್ಯಾಂ ಚ ಯಸ್ತದ್ವೇದೋಭಯಂ ಸಹ।
ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಮೃತಮಶ್ನುತೇ॥[133]

ಸರ್ವಭೂತಗಳ ಒಳ–ಹೊರಗೂ ಒಬ್ಬನಾದ ಆತ್ಮನೆ ಇದ್ದು, ಎಲ್ಲವನ್ನು ತನ್ನ ವಶದಲ್ಲಿ ಇಟ್ಟುಕೊಂಡು ಅನೇಕ ರೂಪುಗಳನ್ನು ಹೊಂದುತ್ತ ಬೇರೆ ಬೇರೆಯಾಗಿ ಕಾಣುತ್ತಾನೆ. ಅಂಥಹ ಆತ್ಮನನ್ನು ತಿಳಿದ ಜ್ಞಾನಿಗಳು ಶಾಶ್ವತವಾದ ಸುಖ(ಮೋಕ್ಷ)ವನ್ನು ಹೊಂದುತ್ತಾರೆಂದು ಕಠೋಪನಿಷತ್ತು ಈ ಕೆಳಗಿನ ಮಂತ್ರದಲ್ಲಿ ತಿಳಿಸಿದೆ

ಏಕೋ ವಶೀ ಸರ್ವಭೂತಾಂತರಾತ್ಮಾ ಏಕಂ ರೂಪಂ ಬಹುಧಾ ಯಃ ಕರೋತಿ।
ತಮಾತ್ಮಸ್ಥಂ ಯೋsನುಪಶ್ಯಂತಿ ಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಮ್॥[134]

ಮೋಕ್ಷಾಪೇಕ್ಷಿಯು ಎಲ್ಲವನ್ನು ಆತ್ಮ ದೃಷ್ಟಿಯಿಂದ ನೋಡುತ್ತಾನೆ. ಅವನು ಎಲ್ಲ ಜೀವಿಗಳನ್ನು ಆತ್ಮನಲ್ಲಿ ಹಾಗೂ ತನ್ನನ್ನು ಎಲ್ಲ ಜೀವಿಗಳಲ್ಲಿಯೂ ಕಾಣುವುದರಿಂದ ಅವನು ಯಾವುದರ ಬಗೆಗೂ ಜುಗುಪ್ಸೆಯನ್ನು ಹೊಂದುವುದಿಲ್ಲವೆಂದು ಈಶಾವಾಸ್ಯೋಪನಿಷತ್ತು ಹೇಳಿದೆ.–

ಯಸ್ತು ಸರ್ವಾಣಿ ಭೂತಾನ್ಯಾತ್ಮನ್ಯೇವಾನುಪಶ್ಯತಿ।
ಸರ್ವಭೂತೇಷು ಚಾತ್ಮನಂ ತತೋ ನ ವಿಜುಗುಪ್ಸತೇ॥[135]

ಈಶಾವಾಸ್ಯೋಪನಿಷತ್ತು ಇನ್ನೊಂದು ಮಂತ್ರದಲ್ಲಿ ಬ್ರಹ್ಮಜ್ಞಾನಿಯು ಎಲ್ಲೆಲ್ಲೂ ಆತ್ಮವನ್ನೇ ಕಾಣುವುದರಿಂದ ಅವನಿಗೆ ಮೋಹವಾಗಲೀ, ಶೋಕವಾಗಲೀ ಇರುವುದಿಲ್ಲ. ಏಕೆಂದರೆ ಅವನು ಎಲ್ಲೆಲ್ಲೂ ಏಕತ್ವವನ್ನೇ ಕಾಣುತ್ತಿರುತ್ತಾನೆ. ಆ ಮಂತ್ರ ಹೀಗಿದೆ –

ಯಸ್ಮಿನ್ಸರ್ವಾಣಿ ಭೂತಾನ್ಯಾತ್ಮೈವಾಭೂದ್ವಿಜಾನತಃ।
ತತ್ರ ಕೋ ಮೋಹಃ ಕಃ ಶೋಕ ಏಕತ್ವಮನುಪಶ್ಯತಃ॥[136]

ಈಶಾವಾಸ್ಯೋಪನಿಷತ್ತಿನ ಈ ಮೇಲಿನ ಮಂತ್ರಗಳ ಅಭಿಪ್ರಾಯದಂತೆ, ಸರ್ವಜಿವರಲ್ಲಿ ಹಾಗೂ ತನ್ನಲ್ಲಿ ಏಕಾತ್ಮ ಕಾಣುವವನು ಪ್ರಪಂಚದ ವ್ಯವಹಾರದಲ್ಲಿ ಬೀಳದೆ, ಸುಖಕ್ಕೆ ಹಿಗ್ಗುವುದು, ದಃಖಕ್ಕೆ ಕುಗ್ಗುವುದು ಮಾಡದೆ ತಟಸ್ಥನಾಗಿರುವ ಸ್ಥಿತಿಯೇ ಮೋಕ್ಷ ಎನ್ನಬಹುದು.

"ಬ್ರಹ್ಮ ವಿದ್ ಬ್ರಹ್ಮೈವ ಭವತಿ" ಎಂಬಂತೆ ಬ್ರಹ್ಮನನ್ನು ತಿಳಿದವನು ಬ್ರಹ್ಮನನ್ನೇ ಹೊಂದುತ್ತಾನೆ. ಜೀವಿಯು ಜ್ಞಾನಿಗಳ ಮೂಲಕ ಆತ್ಮಜ್ಞಾನವನ್ನು ಹೊಂದಿ ಮೋಕ್ಷ ಪಡೆಯುವನು. ಉಪನಿಷತ್ತು ಇದನ್ನು ನದಿಯ ದೃಷ್ಟಾಂತದ ಮೂಲಕ ವಿವರಿಸುತ್ತದೆ

ಯಥಾ ನದ್ಯಾ ಸ್ಯಂದಮಾನಾಃ ಸಮುದ್ರೇsಸ್ತಂ ಹಚ್ಛಂತಿ ನಾಮರೂಪೇ ವಿಹಾಯ।
ತಥಾ ವಿದ್ವಾನ್ನಾಮರೂಪಾದ್ವಿಮಿಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಮ್॥[137]

ಅಂದರೆ ಹಲವಾರು ನದಿಗಳು ನಿರಂತರವಾಗಿ ಹರಿದು ಸಮುದ್ರವೆಂಬ ಗಮ್ಯಸ್ಥಳವನ್ನು ಸೇರಿ ತನ್ನ ನಾಮರೂಪಗಳನ್ನು ಕಳೆದುಕೋಳ್ಳುವಂತೆ, ಬ್ರಹ್ಮಜ್ಞಾನ ಹೊಂದಿದ ಜೀವಿಯು ಬ್ರಹ್ಮಾನುಭವ ಅನುಭವಿಸಿ ನಿತ್ಯಸುಖವಾದ ಮೋಕ್ಷ ಹೊಂದುತ್ತಾನೆ.

"ಜ್ಞಾನಪ್ರಸಾದೇನ ವಿಶುದ್ಧಸತ್ವಸ್ತತಸ್ತು ತಂ ಪಶ್ಯತೆ ನಿಷ್ಕಲಂ ಧ್ಯಾಯಮಾನ॥"[138] ಅಂದರೆ ಜೀವಿಯು ಚಿತ್ತ ಶುದ್ಧಿಯಿಂದ ದಿವ್ಯಜ್ಞಾನವನ್ನು ಪಡೆದು ತಪೋನಿಷ್ಠನಾಗಿ ನಿಷ್ಕಲ್ಮಷ ಮನಸ್ಸಿನಿಂದ ಧ್ಯಾನಿಸಿದರೆ, ಬ್ರಹ್ಮಜ್ಞಾನವುಂಟಾಗಿ ಮೋಕ್ಷ ಹೊಂದುವನು.

ಮೋಕ್ಷಾರ್ಥಿಯು ಕಾಮದ ಸಮಾಪ್ತಿಯನ್ನೂ, ಜಗತ್ತಿನ ಆಶ್ರಯವನ್ನೂ, ಉಪಾಸನೆಯ ಆನಂತ್ಯವನ್ನೂ, ಅಭಯದ ಸಾರವನ್ನು ಸ್ತುತ್ಯವಾಗಿರುವುದನ್ನೂ ಮಹತ್ತಾದುದನ್ನೂ, ವಿಸ್ತೀರ್ಣವಾಗಿರುವುದನ್ನೂ, ಉತ್ತಮ ಸ್ಥಿತಿಯನ್ನೂ ನೋಡಿ ಧೀರನಾಗಿ ಧೈರ್ಯದಿಂದ ತ್ಯಾಗಮಾಡುತ್ತಾನೆ ಎನ್ನುವುದು ಈ ಮಂತ್ರ

ಕಾಮಸ್ಯಾಪ್ತಿಂ ಜಗತಃ ಪ್ರತಿಷ್ಠಾಂ ಕ್ರತೋರನಂತ್ಯಮಭಯಸ್ಯ ಪಾರಮ್।
ಸ್ತೋಮಮಹದುರುಗಾಯಂ ಪ್ರತಿಷ್ಠಾಂ ದೃಷ್ಟ್ವಾ ಧೃತ್ಯಾ ಧೀರೋ ನಚಿಕೇತೋೞತ್ಯಸ್ರಾಕ್ಷೀಃ॥[139]

ಜಿಜ್ಞಾಸು ಆತ್ಮತತ್ತ್ವವನನ್ನು ಆಚಾರ್ಯರಿಂದ ಚೆನ್ನಾಗಿ ಗ್ರಹಿಸಿ, ಧರ್ಮದಿಂದ ಕೂಡಿರುವುದನ್ನು ಶರೀರಾದಿಗಳಿಂದ ವಿಂಗಡಿಸಿ ಸೂಕ್ಷ್ಮನಾದ ಆತ್ಮನನ್ನು ತಿಳಿದ ಜ್ಞಾನಿಯು ಮೋಕ್ಷ ಹೊಂದುತ್ತಾನೆ.

ಏತಚ್ಛ್ರುತ್ವಾ ಸಂಪರಿಗೃಹ್ಯ ಮರ್ತ್ಯಃ ಪ್ರವೃಹ್ಯ ಧರ್ಮ್ಯಮಣುಮೇತಮಾಪ್ಯ।
ಸ ಮೋದತೇ ಮೋದನೀಯಂ ಹಿ ಲಬ್ಧ್ವಾ.....॥[140]

ಅಂದರೆ ಆತ್ಮ ಮತ್ತು ಶರೀರದ ಗುಣಧರ್ಮಗಳನ್ನು ವಿಂಗಡಿಸಿ ಯಾವುದು ಸತ್ಯ, ಯಾವುದು ಅಸತ್ಯ ಎಂಬುವುದನ್ನು ಚೆನ್ನಾಗಿ ಗ್ರಹಿಸಿ ಸತ್ಯ, ನಿತ್ಯ ವಸ್ತುವಾದ ಆತ್ಮನ ಚಿಂತನೆಯಲ್ಲಿ ತೊಡಗುವುದೆ ಮೋಕ್ಷ.

"ಬ್ರಹ್ಮವಿದ್ಯಾಂ ಸರ್ವವಿದ್ಯಾ ಪ್ರತಿಷ್ಠಾಮ್।" ಎಂಬ ಮುಂಡಕೋಪನಿಷತ್ತಿನ ಪ್ರಸಿದ್ಧವಾಕ್ಯವು ಬ್ರಹ್ಮವಿದ್ಯೆಯ ಶ್ರೇಷ್ಠತೆಯನ್ನು ತಿಳಿಸುತ್ತದೆ. ಅನ್ಯ ವಿದ್ಯೆಗಳು ಜೀವಿಗೆ ಐಹಿಕ ಉತ್ಕರ್ಷವನ್ನು ನೀಡಿದರೆ, ಬ್ರಹ್ಮವಿದ್ಯೆಯು ಶಾಶ್ವತ ಆನಂದ ನೀಡುತ್ತದೆ. ಅದನ್ನೇ ಮೋಕ್ಷವೆಂದು ಜ್ಞಾನಿಗಳು ಹೇಳುತ್ತಾರೆ. ಮುಂಡಕವು ಮುಂದುವರೆದು ವೇದಾಂತ ವಿಜ್ಞಾನದ ಅರ್ಥವನ್ನು ಚೆನ್ನಾಗಿ ತಿಳಿದು ಸಂನ್ಯಾಸ, ಯೋಗದಿಂದ ಶುದ್ಧ ಸತ್ವವುಳ್ಳವರಾಗಿ ಯತಿಗಳು ಬ್ರಹ್ಮಲೋಕದಲ್ಲಿದ್ದು ಮುಕ್ತಾತ್ಮರಾಗುತ್ತಾರೆ ಎಂದಿದೆ.

ವೇದಾಂತವಿಜ್ಞಾನ ಸುನಿಶ್ಚಿತಾರ್ಥಾಃ ಸನ್ಯಾಸಯೋಗಾದ್ಯತಯಃ ಶುದ್ಧಸತ್ವಾಃ।
ತೇ ಬ್ರಹ್ಮಲೋಕೇಷು ಪರಾಂತಕಾಲೇ ಪರಾಮೃತಾಃ ಪರಿಮುಚ್ಯಂತಿ ಸರ್ವೇ॥[141]

ಬ್ರಹ್ಮನನ್ನು ಕುರಿತು ಇಲ್ಲಿಯೇ (ಈ ಲೋಕದಲ್ಲಿ) ತಿಳಿದುಕೊಳ್ಳದಿದ್ದರೆ ದೊಡ್ಡನಷ್ಟವೇ ಸರಿ. ಧೀರರು (ಜ್ಞಾನಿಗಳು) ಸರ್ವಭೂತಗಳಲ್ಲಿಯೂ ಬ್ರಹ್ಮನನ್ನು ತಿಳಿದುಕೊಂಡು ಈ ಲೋಕದಿಂದ ಬಿಡುಗಡೆಯಾಗಿ ಅಮೃತರಾಗುತ್ತಾರೆ ಎಂದಿದೆ ಈ ಕೆಳಗಿನ ಮಂತ್ರ

ಇಹ ಚೇದವೇದೀದಥ ಸತ್ಯಮಸ್ತಿ ನ ಚೇದಿಹಾವೇದೀನ್ಮಹತೀ ವಿನಷ್ಟಿಃ।
ಭೂತೇಷು ಭೂತೇಷು ವಿಚಿತ್ಯ ಧೀರಾಃ ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ॥[142]

ಯಾರು ನಿಷ್ಠೆಯಿಂದ ಪರಬ್ರಹ್ಮ ತತ್ವವನ್ನು ಅರಿತುಕೊಳ್ಳುವರೋ ಅವರು ಬ್ರಹ್ಮತತ್ವವನ್ನು ಪಡೆಯುತ್ತಾರೆ. ಅವರ ವಂಶದಲ್ಲೇ ಬ್ರಹ್ಮಜ್ಞಾನಿಗಳಲ್ಲದವರು ಜನಿಸುವುದಿಲ್ಲ. ಸಮಸ್ತ ವಿಧವಾದ ಶೋಕ ಮತ್ತು ಪಾಪಗಳಿಂದ ಬಿಡುಗಡೆ ಹೊಂದಿ, ಬಂಧಿಸಲ್ಪಟ್ಟು ಹೃದಯ ತಂತುಗಳಿಂದಲೂ ವಿಮುಕ್ತರಾಗಿ ಅಮೃತರಾಗುವರು.

ಸ ಯೋಹವೈತತ್ಪರಮಂ ಬ್ರಹ್ಮವೇದ ಬ್ರಹ್ಮೈವ ಭವತಿ ನಾಸ್ಯಾ ಬ್ರಹ್ಮವಿತ್ಕುಲೇ ಭವತಿ।
ನರತಿ ಶೋಕಂ ತರತಿ ಪಾಪ್ಮಾನಂ ಗುಹಾ ಗ್ರಂಥಿಭೋ ವಿಮುಕ್ತೋsಮೃತೋ ಭವತಿ॥[143]

ಒಟ್ಟಿನಲ್ಲಿ ಮೋಕ್ಷವೆಂದರೆ ಬಿಡುಗಡೆ. ಅದು ಸಂಸಾರ(ಜಗತ್ತಿನ) ಬಂಧನದಿಂದ ಬಿಡುಗಡೆಯಾಗಲಿ ಅಥವಾ ದೇಹಾದಿ ಇಂದ್ರಿಯಗಳಿಂದ ಬಿಡುಗಡೆಯಾಗಲಿ ಅದು ಮೋಕ್ಷವೇ ಸರಿ. ಇದು ಬ್ರಹ್ಮನನ್ನು ಚೆನ್ನಾಗಿ ಅರಿತು ಸುಖ–ದುಃಖಗಳಿಗೆ ಶರಣಾಗದೆ ದೂರ ಉಳಿದು ಅಹಂ ಬ್ರಹ್ಮಾಸ್ಮಿಯ ಸ್ಥಿತಿಯಲ್ಲಿ ಇರುವುದಾಗಿದೆ. ಈ ರೀತಿಯಾಗಿ ಉಪನಿಷತ್ತಿನಲ್ಲಿ ಪ್ರತಿಪಾದಿಸಿದ ಮೋಕ್ಷದ ಬಗ್ಗೆ ಈ ಅಧ್ಯಯನದ ಮೂಲಕ ಕಾಣುತ್ತೇವೆ.

ಉಪನಿಷತ್ತುಗಳು ತಾತ್ತ್ವಿಕವಾಗಿ ಯೋಚಿಸಲಾರದಷ್ಟು ಸರ್ವತೋಮುಖ ಅಭಿವೃದ್ಧಿ ಹೊಂದಿವೆ. ದಶೋಪನಿಷತ್ತುಗಳಲ್ಲಿನ ಜ್ಞಾನ ಭಂಡಾರ ಅಕ್ಷಯವಾಗುತ್ತಲೇ ಸಾಗಿದೆ. ಆದರೂ 'ಯಥಾದೃಷ್ಟಿ ತಥಾಸೃಷ್ಟಿ' ಎಂಬ ಉಕ್ತಿಯಂತೆ ಉಪನಿಷತ್ತುಗಳ ವಾಕ್ಯಗಳಲ್ಲಿ ತಾತ್ತ್ವಿಕ ವಿಷಯಗಳ ವಿವರಣೆಯನ್ನು ಪರಿಚಯಿಸಲಾಗಿದೆ.

ಅಡಿಟಿಪ್ಪಣಿಗಳು

1. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮುದ್ರಾಣಾಲಯ ಶ್ರೀರಂಗಮ್, 1964,

   ಮುಂಡಕ 1.1.1. ಪುಟ–40.

2. ಅದೇ, ಈಶ 1. ಪುಟ–1.

3. ಅದೇ, ಬೃಹದಾರಣ್ಯಕ 1.4.10 ಪುಟ–188, ಬೃಹದರಣ್ಯಕ 1.4.1 ಪುಟ–185, ಐತರೇಯ 1.1.

   ಪುಟ–75.

4. ಅದೇ, ಛಾಂದೋಗ್ಯ 3.14.1 ಪುಟ–110, ಮಾಂಡೂಕ 2 ಪುಟ–51, ಬೃಹದಾರಣ್ಯಕ 2.5.1. ಪುಟ–206.

5. ಅದೇ, ಮುಂಡಕ 2.2.12. ಪುಟ–46.

6. ಅದೇ, ತೈತ್ತಿರೀಯ 2.1.1 ಪುಟ–60, ಬೃಹದಾರಣ್ಯಕ 3.9.28 ಪುಟ–233 ಐತರೇಯ 3.5.3. ಪುಟ– 77.
7. ಅದೇ, ಮಾಂಡೂಕ 7. ಪುಟ–52.
8. ಅದೇ, ಛಾಂದೋಗ್ಯ 6.2.1, ಪುಟ–142, ಕಠ 2.1.11 ಪುಟ–21.
9. ಅದೇ, ಮುಂಡಕ 2.1.2 ಪುಟ–43.
10. ಅದೇ, ಪ್ರಶ್ನ 2.5 ಪುಟ–31.
11. ಅದೇ, ಕಠ 1.2.20 ಪುಟ–17.
12. ಅದೇ, ಕಠ 1.2.12 ಪುಟ–15.
13. ಅದೇ, ಮಾಂಡೂಕ 6 ಪುಟ–51.
14. ಅದೇ, ಕಠ 1.3.12 ಪುಟ–19.
15. ಅದೇ, ಮುಂಡಕ 3.1.7 ಪುಟ–47.
16. ಅದೇ, ಕಠ 1.2.21 ಪುಟ–17.
17. ಅದೇ, ಈಶ 5 ಪುಟ–1.
18. ಅದೇ, ಮಾಂಡೂಕ 7 ಪುಟ–52.
19. ಅದೇ, ಕಠ 1.2.14 ಪುಟ–15.
20. ಅದೇ, ಮುಂಡಕ 2.1.3 ಪುಟ–44.
21. ಅದೇ, ಮುಂಡಕ 3.1.8 ಪುಟ–47.
22. ಅದೇ, ಕೇನ 1.1 ಪುಟ–4.
23. ಅದೇ, ಕೇನ 1.2 ಪುಟ–4.
24. ಅದೇ, ಪ್ರಶ್ನ 4.9 ಪುಟ–35.
25. ಅದೇ, ಕಠ 1.3.10 ಪುಟ–19.
26. ಅದೇ, ಛಾಂದೋಗ್ಯ 1.1.1 ಪುಟ–79.
27. ಅದೇ, ಮಾಂಡೂಕ 1 ಪುಟ–51.
28. ಅದೇ, ಕಠ 1.2.16 ಪುಟ–16.
29. ಅದೇ, ಮಾಂಡೂಕ 8 ಪುಟ–52.
30. ಅದೇ, ತೈತ್ತಿರೀಯ 1.8 ಪುಟ–57.
31. ಅದೇ, ಮುಂಡಕ 2.2.6 ಪುಟ–46.

32. ಅದೇ, ಮುಂಡಕ 1.1.1 ಪುಟ–40

33. ಅದೇ, ಪ್ರಶ್ನ 1.4 ಪುಟ–28.

34. ಅದೇ, ಈಶ 1 ಪುಟ–1.

35. ಅದೇ, ಮಾಂಡೂಕ 6 ಪುಟ–51

36. ಅದೇ, ಕಠ 1.2.20 ಪುಟ–17.

37. ಅದೇ, ಕಠ 1.3.12 ಪುಟ–19.

38. ಅದೇ, ಪ್ರಶ್ನ 4.9 ಪುಟ–35.

39. ಅದೇ, ಕೇನ 1.3 ಪುಟ–4.

40. ಅದೇ, ಮುಂಡಕ 1.1.7 ಪುಟ–41.

41. ಅದೇ, ಪ್ರಶ್ನ 6.4 ಪುಟ–38.

42. ಅದೇ, ಮುಂಡಕ 1.1.2 ಪುಟ–40.

43. ಅದೇ, ಮುಂಡಕ 1.1.4 ಪುಟ–40.

44. ಅದೇ, ಕೇನ 4.8 ಪುಟ–8.

45. ಅದೇ, ಕಠ 1.3.13 ಪುಟ–19.

46. ಅದೇ, ಕಠ 1.2.1 ಪುಟ–13.

47. ಅದೇ, ಕಠ 1.2.2 ಪುಟ–13

48. ಅದೇ, ಕೇನ 1.3 ಪುಟ–4.

49. ಅದೇ, ಕೇನ 1.4 ಪುಟ–4.

50. ಅದೇ, ಕಠ 1.2.23 ಪುಟ–17, ಮುಂಡಕ 3.2.3 ಪುಟ–48.

51. ಅದೇ, ಕಠ 1.2.7 ಪುಟ–15.

52. ಅದೇ, ಕಠ 1.2.9 ಪುಟ–15.

53. ಅದೇ, ಮುಂಡಕ 3.2.4 ಪುಟ–48.

54. ಅದೇ,ಕಠ 1.2.8 ಪುಟ–15.

55. ಅದೇ,ಕಠ 1.3.14 ಪುಟ–19.

56. ಅದೇ, ಕಠ 1.2.11 ಪುಟ–15

57. ಅದೇ, ಕಠ 1.2.12 ಪುಟ–15.

58. ಅದೇ, ಕಠ 1.2.13 ಪುಟ–16.

59. ಅದೇ, ಈಶ 6 ಪುಟ–2.

60. ಅದೇ, ಈಶ 7 ಪುಟ–2.

61. ಅದೇ, ಕೇನ 2.2 ಪುಟ–5.

62. ಅದೇ, ಕೇನ 2.3 ಪುಟ–6.

63. ಅದೇ, ಈಶ 17 ಪುಟ–3.

64. ಅದೇ, ಮುಂಡಕ 2.2.10 ಪುಟ–46.

65. ಅದೇ, ಕಠ 1.2.5 ಪುಟ–14.

66. ಅದೇ, ಮುಂಡಕ 1.2.9 ಪುಟ–42.

67. ಅದೇ,ಕಠ 1.2.6 ಪುಟ–14.

68. ಅದೇ, ಕಠ 1.2.24 ಪುಟ–17

69. ಅದೇ, ಪ್ರಶ್ನ 4.9 ಪುಟ–35.

70. ಅದೇ, ಮುಂಡಕ 2.1.5 ಪುಟ–44.

71. ಅದೇ, ಮಾಂಡೂಕ 7 ಪುಟ–52.

72. ಅದೇ, ಪ್ರಶ್ನ 4.9 ಪುಟ–35.

73. ಅದೇ, ಪ್ರಶ್ನ 3.6 ಪುಟ–33.

74. ಅದೇ, ಪ್ರಶ್ನ 3.7 ಪುಟ–33.

75. ಅದೇ, ಕಠ 1.3.3,4 ಪುಟ–18.

76. ಅದೇ, ಮುಂಡಕ 2.2.6 ಪುಟ–46.

77. ಅದೇ, ಕೇನ 1.1 ಪುಟ–4.

78. ಅದೇ, ಕೇನ 1.2 ಪುಟ–4.

79. ಅದೇ, ಮುಂಡಕ 1.1.1 ಪುಟ–40.

80. ಅದೇ, ಈಶ 1 ಪುಟ–1.

81. ಅದೇ, ಮಾಂಡೂಕ 1 ಪುಟ–51.

82. ಅದೇ, ಐತರೇಯ 1.1.1 ಪುಟ–72.

83. ಅದೇ, ಬೃಹದಾರಣ್ಯಕ 1.4.10 ಪುಟ–188, ಬೃಹದಾರಣ್ಯಕ 1.4.1 ಪುಟ–185.

84. ಅದೇ, ತೈತ್ತಿರೀಯ 2.7 ಪುಟ–63.

85. ಅದೇ, ಛಾಂದೋಗ್ಯ 6.2.1 ಪುಟ–142 ಕಠ 2.1.11 ಪುಟ–21.

86. ಅದೇ, ಛಾಂದೋಗ್ಯ 8.14.1 ಪುಟ–176.

87. ಅದೇ, ಛಾಂದೋಗ್ಯ 1.9.1. ಪುಟ–88.

88. ಅದೇ, ಛಾಂದೋಗ್ಯ 6.3.1,2 ಪುಟ–142.

89. ಅದೇ, ಛಾಂದೋಗ್ಯ 3.19.1,2. ಪುಟ–115.

90. ಅದೇ, ತೈತ್ತಿರೀಯ 2.7 ಪುಟ–63.

91. ಅದೇ, ಮುಂಡಕ 1.1.7 ಪುಟ–41.

92. ಅದೇ, ಮುಂಡಕ 1.1.8 ಪುಟ–41.

93. ಅದೇ, ಮುಂಡಕ 2.1.3 ಪುಟ–44.

94. ಅದೇ, ತೈತ್ತಿರೀಯ 2.1 ಪುಟ–60.

95. ಅದೇ, ಐತರೇಯ 1.1.2 ಪುಟ–72.

96. ಅದೇ, ಐತರೇಯ 1.1.3 ಪುಟ–72.

97. ಅದೇ, ಪ್ರಶ್ನ 6.4 ಪುಟ–38.

98. ಅದೇ, ಮುಂಡಕ 2.1.1 ಪುಟ–44.

99. ಅದೇ, ಮುಂಡಕ 2.1.2 ಪುಟ–44.

100. ಅದೇ, ಮುಂಡಕ 2.1.4 ಪುಟ–44

101. ಸಾನುವಾದ ಶಂಕರಭಾಷ್ಯ ಸಹಿತ, 'ಕಠೋಪನಿಷದ್' ಗೀತಾಪ್ರೇಸ ಗೋರಖಪುರ, ವಿ.ಶ 2057. ಕಠ 2.1.1 ಶಂಕರಭಾಷ್ಯ.

102. ಶ್ರೀ ಗಜಾನನ ಶಾಸ್ತ್ರಿ ಇತ್ಯಾದಯಃ, 'ವೈದಿಕ ಸಾಹಿತ್ಯ ಕಾ ಇತಿಹಾಸ' ಚೌಖಂಬಾ ಸಂಸ್ಕೃತ ಸಂಸ್ಥಾನ ವಾರಣಾಸಿ, 1994, ಪುಟ 235.

103. ಅದೇ, ಐತರೇಯ 1.1.1 ಪುಟ–72.

104. ಅದೇ, ಕಠ 1.2.20 ಪುಟ–17.

105. ಅದೇ, ಪ್ರಶ್ನ 4.9. ಪುಟ–35.

106. ಅದೇ, ಕಠ 1.3.10 ಪುಟ–19.

107. ಅದೇ, ಕಠ 1.3.12 ಪುಟ–19.

108. ಅದೇ, ಪ್ರಶ್ನ 2.5 ಪುಟ–31.

109. ಅದೇ, ಕಠ 1.2.21 ಪುಟ–17.

110. ಅದೇ, ಈಶ 5 ಪುಟ–1.

111. ಅದೇ, ಮುಂಡಕ 2.1.2 ಪುಟ–44.

112. ಅದೇ, ಮಾಂಡೂಕ 6 ಪುಟ–51.

113. ಅದೇ, ಮುಂಡಕ 3.1.7 ಪುಟ–47.

114. ಅದೇ, ಕಠ 1.2.18 ಪುಟ–16

115. ಅದೇ, ಕಠ 1.2.22 ಪುಟ–17.

116. ಅದೇ, ಕಠ 2.1.12 ಪುಟ–21.

117. ಅದೇ, ಕಠ 2.1.14 ಪುಟ–22.

118. ಅದೇ, ಕಠ 2.2.9 ಪುಟ–23.

119. ಅದೇ, ಕಠ 2.2.10 ಪುಟ–23.

120. ಅದೇ, ಕಠ 1.2.23 ಪುಟ–17, ಮುಂಡಕ 3.2.3 ಪುಟ–48.

121. ಅದೇ, ಮುಂಡಕ 3.2.4 ಪುಟ–48.

122. ಅದೇ, ತೈತ್ತರೀಯ 2.1 ಪುಟ–60.

123. ಅದೇ, ಮುಂಡಕ 3.1.5 ಪುಟ–47.

124. ಅದೇ, ಮುಂಡಕ 3.1.6 ಪುಟ–47.

125. ಅದೇ, ಕಠ 2.1.12 ಪುಟ–21.

126. ಅದೇ, ಕಠ 2.3.17 ಪುಟ–26.

127. ಅದೇ, ಪ್ರಶ್ನ 4.7 ಪುಟ–35.

128. ಅದೇ, ಕಠ 1.3.3 ಪುಟ–18.

129. ಅದೇ, ಮುಂಡಕ 2.2.6 ಪುಟ–46.

130. ಅದೇ, ಕೇನ 1.1 ಪುಟ–4.

131. ಅದೇ, ಕಠ 1.2.1 ಪುಟ–13.

132. ಅದೇ, ಕಠ 1.2.2 ಪುಟ–13.

133. ಅದೇ, ಈಶ 11 ಪುಟ–2.

134. ಅದೇ, ಕಠ 2.1.12 ಪುಟ–21.

135. ಅದೇ, ಈಶ 6 ಪುಟ–2.

136. ಅದೇ, ಈಶ 7 ಪುಟ–2.

137. ಅದೇ, ಮುಂಡಕ 3.2.8 ಪುಟ–46.

138. ಅದೇ, ಮುಂಡಕ 3.1.8 ಪುಟ–47.

139. ಅದೇ, ಕಠ 1.2.11 ಪುಟ–15.

140. ಅದೇ, ಕಠ 1.2.13 ಪುಟ–15.

141. ಅದೇ, ಮುಂಡಕ 3.2.6 ಪುಟ–47.

142. ಅದೇ, ಕೇನ 2.5 ಪುಟ–6.

143. ಅದೇ, ಮುಂಡಕ 3.2.9 ಪುಟ–49.

ಅಧ್ಯಾಯ 5
ದೇವರ ದಾಸಿಮಯ್ಯನವರ ವಚನಗಳ ತಾತ್ತ್ವಿಕ ಅಧ್ಯಯನ

ಅಧ್ಯಾಯ 5
ದೇವರ ದಾಸಿಮಯ್ಯನವರ ವಚನಗಳ ತಾತ್ತ್ವಿಕ ಅಧ್ಯಯನ

5.1 ಈಶ್ವರ
5.2 ಜೀವ
5.3 ಜಗತ್ತು
5.4 ಆತ್ಮ
5.5 ಮೋಕ್ಷ

ಅಧ್ಯಾಯ 5

ದೇವರ ದಾಸಿಮಯ್ಯನವರ ವಚನಗಳ ತಾತ್ತ್ವಿಕ ಅಧ್ಯಯನ

ಹಿಂದಿನ ಅಧ್ಯಾಯದಲ್ಲಿ ಉಪನಿಷತ್ತಿನಲ್ಲಿ ಬರುವ ಅತ್ಯಂತ ಮಹತ್ವದ ಅಂಶಗಳಾದ ಬ್ರಹ್ಮ, ಜೀವ, ಜಗತ್ತು, ಆತ್ಮ, ಮತ್ತು ಮೋಕ್ಷಗಳನ್ನು ಕುರಿತು ತಾತ್ತ್ವಿಕವಾಗಿ ಅಧ್ಯಯನ ಮಾಡಲಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ದೇವರ ದಾಸಿಮಯ್ಯನವರ ವಚನಗಳಲ್ಲಿ ಬರುವ ಈಶ್ವರ, ಜೀವ, ಜಗತ್ತು, ಆತ್ಮ, ಮತ್ತು ಮೋಕ್ಷತತ್ತ್ವಗಳನ್ನು ಕುರಿತು ತಾತ್ತ್ವಿಕವಾಗಿ ಚರ್ಚಿಸಲಾಗುತ್ತದೆ.

5.1. ಈಶ್ವರ

ಅನನ್ಯ ಶಿವಭಕ್ತನಾದ ದಾಸಿಮಯ್ಯನವರಿಗೆ ಈಶ್ವರನೇ ಸರ್ವಸ್ವ. ಹಾಗೆಂದೇ ಈಶ್ವರನ ಸ್ವರೂಪದ ಕುರಿತು ಅವರಲ್ಲಿದ್ದ ಅಚಲವಾದ ಶ್ರದ್ಧೆ, ನಿಷ್ಠೆ, ಭಕ್ತಿ, ಅರಿವುಗಳಿಂದ ಕೂಡಿದ ವಚನಗಳಲ್ಲಿ ವ್ಯಕ್ತಗೊಂಡಿದೆ. ಇವರ ವಚನಗಳಲ್ಲಿ ಈಶ್ವರನು ಸರ್ವಶಕ್ತನು, ಸರ್ವಾಂತರ್ಯಾಮಿಯು, ಸಕಲ ಲೋಕಪಾಲಕನೆಂದು ಚಿತ್ರಿತವಾಗಿದೆ.

ಈಶ್ವರನ ಸ್ವರೂಪ

ಈಶ್ವರನು ಸರ್ವವ್ಯಾಪಕ, ಪ್ರತಿಯೊಂದು ಅಣು-ಅಣುವಿನಲ್ಲಿಯೂ ಇದ್ದಾನೆ. ಅನೇಕ ಮಣಿಗಳನ್ನು ಕೂಡಿಸಿ ಸರವನ್ನಾಗಿ ಮಾಡಿದ ದಾರದಂತೆ, ಸಕಲ ಜೀವಿಗಳಲ್ಲಿ ಈಶ್ವರನು ಆತ್ಮ ರೂಪಿಯಾಗಿ ಅಡಗಿದ್ದಾನೆ. ಮಣಿಗಳು ಬೇರೆ-ಬೇರೆಯಾಗಿದ್ದಂತೆ, ಜೀವಿಯ ಶರೀರಗಳು ವಿಭಿನ್ನವಾಗಿವೆ. ಮಣಿಗಳನ್ನೆಲ್ಲ ಒಂದು ಗೂಡಿಸಿದ ದಾರ ಒಂದೇ ಇದ್ದಂತೆ, ಸರ್ವ ಜೀವರ ಶರೀರದಲ್ಲಿ ಒಬ್ಬನೇ ಈಶ್ವರನಿದ್ದಾನೆ.

ಮಣಿಗಣ ಸೂತ್ರದಂತೆ ತ್ರಿಣೆಯ ನೀನಿಪ್ಪೆಯಯ್ಯ
ಎಣಿಸುವಡೆ ತನ್ನ ಭಿನ್ನ ಆತ್ಮನೊಬ್ಬನೆ.
ಅಣುರೇಣು ಮಧ್ಯದಲ್ಲಿ ಗುಣಭರಿತ ನೀನೆಂದು
ಮಣಿಯುತಿರ್ಪೆನಯ್ಯಾ, ರಾಮನಾಥ.[1]

ಪ್ರಸ್ತುತ ವಚನದಲ್ಲಿ ಈಶ್ವರನ ಏಕತ್ವಭಾವವನ್ನು ಕಾಣುತ್ತೇವೆ. ಜಗತ್ತಿನ ಜಡ–ಚೇತನಗಳಲ್ಲಿ ಈಶ್ವರ ತುಂಬಿಕೊಂಡಿದ್ದಾನೆ. ಇಲ್ಲಿ ವಸ್ತುಗಳು ಅನೇಕವಿದ್ದು, ಭಿನ್ನ–ಭಿನ್ನವಾಗಿ ಕಂಡರೂ ಅವುಗಳಲ್ಲಿರುವ ಚೇತನ ಒಂದೆ. ಅದುವೇ ಈಶ್ವರನೆಂದು ಹೇಳಲಾಗುತ್ತದೆ.

ಈಶ್ವರನು ಜಗತ್ತಿನ ಪ್ರತಿಯೊಂದು ವಸ್ತುವಿನ ಒಳ–ಹೊರಗೂ ತುಂಬಿಕೊಂಡಿದ್ದಾನೆ, ಎನ್ನುವುದನ್ನು ದಾಸಿಮಯ್ಯನವರು ಮಣಿಗಳ ಉದಾಹರಣೆಯೊಂದಿಗೆ ಹಿಂದಿನ ವಚನದಲ್ಲಿ ತಿಳಿಸಿದಂತೆ, ಈ ಕೆಳಗಿನ ವಚನದಲ್ಲಿಯೂ ಈಶ್ವರನು ಅಣುರೇಣುಗಳಲ್ಲಿ ಆತ್ಮ ರೂಪದಲ್ಲಿ ಇರುವನೆಂದು, ಅವನಿಗೆ ನಮಸ್ಕರಿಸಿದ್ದಾರೆ.–

ಅಣುರೇಣು ಮಧ್ಯದ ಪ್ರಣವದಾಧಾರ
ಭುವನಾಧೀಶನೊಬ್ಬನೆಯಯ್ಯ.
ಇದೆ ಪರಿಪೂರ್ಣವೆಂದೆನ್ನದನ್ಯ ದೈವವ ಸ್ಮರಿಸುವ
ಭವಿಯನೆಂತು ಭಕ್ತನೆಂಬೆನೈ? ರಾಮನಾಥ.[2]

ಈ ಮೇಲಿನ ವಚನವು ಸಹ ಮೇಲಿನ ವಚನದ ಅರ್ಥವನ್ನೇ ಹೊಂದಿದ್ದು ಕೊನೆಯ ಎರಡು ಸಾಲಿನಲ್ಲಿ ಈಶ್ವರನೊಬ್ಬನೆ ದೈವ, ಅನ್ಯ ದೈವಗಳೆಲ್ಲ ಅವನ ತೊತ್ತಿನ ಮಕ್ಕಳು. ಆ ದೇವತೆಗಳನ್ನು ಸ್ಮರಿಸುವವರು ಭಕ್ತರೆನಿಸಿಕೊಳ್ಳುವುದಿಲ್ಲ ಎಂದು ಏಕದೇವೋಪಾಸನೆಗೆ ಪ್ರಾಶಸ್ತ್ಯ ಕೊಟ್ಟಿದ್ದಾರೆ. ಇಂತವರು ಮಾತಿಗೆ ನಿಲುಕದ, ಸಾಧಿಸಲು ಸಾಧ್ಯವಾಗದ, ನಿರಾಕಾರನೂ, ಸಗುಣನಲ್ಲದ ನಿರ್ಗುಣನಾಗಿರುವ ಈಶ್ವರನನ್ನು ಅರಿಯರು. ಎಂದು ಮುಂದಿನ ವಚನದಲ್ಲಿ ಕಾಣಬಹುದು. ಉದಾಹರಣೆಗೆ–

ಆಡಬಾರದ ಬಯಲು ಸುಡಬಾರದ ಬಯಲು
ನುಡಿಯಬಾರದ ಬಯಲು ಹಿಡಿಯಬಾರದ ಬಯಲು
ಈ ಒಡಲಿಲ್ಲದ ಬಯಲೊಳಗೆ ಅಡಗಿರ್ದ ಭೇದವ
ಈ ಲೋಕದ ಜಡರೆತ್ತ ಬಲ್ಲರೈ? ರಾಮನಾಥ.[3]

ದಾಸಿಮಯ್ಯನವರು ಈಶ್ವರನು ಬಯಲು ರೂಪನಾಗಿದ್ದಾನೆ. ಅವನ ಬಗ್ಗೆ ಹೇಳೋಣವೆಂದರೆ, ನಾಲಿಗೆಗೆ ಸಿಗನು. ನೋಡೋಣವೆಂದರೆ ಕಣ್ಣಿಗೆ ಕಾಣನು. ನುಡಿಗೆ ಸಿಗದೆ ಇರುವುದರಿಂದ ಆಡಲುಬಾರದು. ಚಕ್ಷುವಿಗೆ ಕಾಣದೆ ಇರುವುದರಿಂದ ನೋಡಲುಬಾರದು. ಎಂದು ಮೊದಲಾಗಿ ತಮ್ಮ ವಚನದಲ್ಲಿ ಹೇಳಿದ್ದಾರೆ.

ಈಶ್ವರನು ನಿರಾಕಾರ, ನಿರ್ಗುಣ, ಅಚಿಂತ್ಯ, ಅವಿನಾಶಿ, ನಾಮರೂಪರರಹಿತನಾಗಿದ್ದಾನೆ. ಹೀಗಿದ್ದೂ ಎಲ್ಲದರಲ್ಲೂ ತುಂಬಿಕೊಂಡಿದ್ದಾನೆ. ಅವನನ್ನು ಜ್ಞಾನನೇತ್ರದಿಂದ ನೋಡಬೇಕು. ಅವನು ಸುಳಿದಾಡುವುದಿಲ್ಲ. ಮಾತಿಗೆ ಸಿಲುಕುವುದಿಲ್ಲ. ಕಣ್ಣಿಗೆ ಕಾಣುವುದಿಲ್ಲ. ಕೈಗೆ ಸಿಗುವುದಿಲ್ಲ. ಮನಕ್ಕೆ ಅತೀತನಾಗಿದ್ದಾನೆ. ಒಟ್ಟಿನಲ್ಲಿ ಹೇಳುವುದಾದರೆ ಮಾನವನ ಇಂದ್ರಿಯಗಳಿಗೆ ಅವನು ಅಗೋಚರನಾಗಿದ್ದಾನೆ. ಅವನು ಬಯಲಾಗಿದ್ದು ಬಯಲೊಳಗೆ ಅಡಗಿದ ಭೇದವ ಬಲ್ಲವರಾರು? ಎಂದು ಪ್ರಶ್ನಿಸುವುದರಮೂಲಕ ಈಶ್ವರನ ಸ್ವರೂಪವನ್ನು ವ್ಯಕ್ತಪಡಿಸಿದ್ದಾರೆ.

ಈಶ್ವರನ ಜ್ಞಾನವಾದಾಗ ಎಲ್ಲವು ಪೂರ್ಣರೂಪವಾಗಿ ಕಾಣುವುದೆಂದು ಅದನ್ನು ದಾಸಿಮಯ್ಯನವರು ಬಯಲು ಎಂದು ತಮ್ಮ ವಚನದಲ್ಲಿ ಹೇಳಿದ್ದಾರೆ.

ಬಯಲು ಬಣ್ಣವ ಮಾಡಿ
ಸ್ವಯವ ನಿಲವ ಮಾಡಿ
ಸುಳಿವಾತನ ಬೆಡಗ ಬಲ್ಲವರಾರೈ ರಾಮನಾಥ.[4]

ನಿರ್ವಿಕಾರ, ನಿರ್ಮಲನಾಗಿರುವ ಈಶ್ವರನು ಮಾನವನ ಶಕ್ತಿಯ ವರ್ಣನೆಗೆ ಸಿಲುಕುವವನಲ್ಲ. ಈಶ್ವರನು ಅಣುರೇಣುತೃಣಕಾಷ್ಠದಲ್ಲಿ ತುಂಬಿಕೊಂಡಿದ್ದರೂ ಅವನ ಇರುವಿಕೆಯನ್ನು ಕಾಣದಂತಿರುವುದು ನಿಜವಾದ ಸಂಗತಿ.

ಈಶ್ವರನ ನಿರ್ಗುಣ ಸ್ವರೂಪ

ಸಾಗರದ ತಳದಲ್ಲಡಗಿದ ಕಿಚ್ಚು ಸಾಗರದಲ್ಲಿಯೇ ಗುಪ್ತವಾಗಿರುವಂತೆಯೂ, ಗಿಡದ ಹೂವು–ಹಣ್ಣುಗಳಲ್ಲಿಯ ಶೋಭೆ, ರುಚಿ ಅವಿಭಾಜ್ಯವಾಗಿರುವಂತೆಯೂ, ಮನದ ಅಭಿಪ್ರಾಯ ಮಾತುಗಳ ಅಭಿವ್ಯಕ್ತಿಯಲ್ಲಿ ಪ್ರಕಟವಾಗುವಂತೆ, ಈಶ್ವರನಿದ್ದಾನೆ ಎಂದು ಈ ಕೆಳಗಿನ ವಚನದಲ್ಲಿ ವ್ಯಕ್ತಪಡಿಸಿದ್ದಾರೆ.–

ಸಾಗರದೊಳಗಣ ಕಿಚ್ಚಿನ ಸಾಕಾರದಂತೆ,
ಸಸಿಯೊಳಗಣ ಫಲಪುಷ್ಪರುಚಿಯ ಪರಿಮಳದಂತೆ,
ಮನದ ಮರೆಯ ಮಾತು
ನೆನಹಿನಲ್ಲಿ ಅರಿದು, ನಾಲಗೆಯ ನುಡಿವಾಗಲಲ್ಲದೆ
ಕಾಣಬಾರದು, ಕೇಳಬಾರದು
ಒಂದಂಗದೊಳಗಡಗಿದ ನೂರೊಂದರ ಪರಿ ರಾಮನಾಥ.[5]

ಈಶ್ವರನ ಸಗುಣ ಸ್ವರೂಪ

ದಾಸಿಮಯ್ಯನವರು ಪ್ರತಿಪಾದಿಸಿದಂತೆ ಸಮಸ್ತ ಜಗತ್ತಿಗೆ ಈಶ್ವರನೇ ಒಡೆಯನು. ಇವನು ನಂದಿಯನ್ನು ತನ್ನ ವಾಹನ ಮಾಡಿಕೊಂಡು, ಜಗತ್ತಿನ ಆಗು–ಹೋಗುಗಳ ಬಗ್ಗೆ ಗಮನಿಸುತ್ತ ಸೃಷ್ಟಿ, ಸ್ಥಿತಿ ಮತ್ತು ಲಯಗಳ ಮೂಲಕ ಜಗತ್ತನ್ನು ನಿಯಂತ್ರಿಸುತ್ತಿದ್ದಾನೆ.

ಇನ್ನುಳಿದ ದೈವಂಗಳೆಲ್ಲ ಅವನ ತೊತ್ತಿನ ಮಕ್ಕಳು. ಅವರು ಅವನು ಬಿತ್ತಿ ಬೆಳೆದಿರುವ ಧಾನ್ಯವನುಂಡು ಬದುಕುತ್ತಿರುವರು. ಎಂದು ಹೇಳಿದ್ದಾರೆ. ಈ ಭಾವವನ್ನು ಬಿಂಬಿಸುವ ವಚನವಿದು–

ಎತ್ತನೇರಿದ ಕರ್ತನೊಬ್ಬನೆ ಜಗಕ್ಕೆಲ್ಲ
ಎತ್ತು ಬೆಳೆದ ಧಾನ್ಯವನುಂಬ
ದೇವರ್ಕಳೆಲ್ಲ ನಿಮ್ಮ ತೊತ್ತಿನ ಮಕ್ಕಳು ಕಾಣಾ! ರಾಮನಾಥ.[6]

ಸಾಮಾನ್ಯವಾಗಿ ಶರಣರು ಈಶ್ವರನಿಗೆ ಆತ್ಮ, ಈಶ್ವರ, ಪುರುಷ ಮೊದಲಾದ ಹೆಸರುಗಳಿಂದ ಕರೆದಿದ್ದಾರೆ. ಮೇಲಿನ ವಚನದಲ್ಲಿ ದೇವರ ದಾಸಿಮಯ್ಯನವರು ಈಶ್ವರನ ಸಗುಣೋಪಾಸನೆ ಮಾಡಿರುವುದನ್ನು ಕಾಣುತ್ತೇವೆ. ದಾಸಿಮಯ್ಯನವರು ಈಶ್ವರನೊಬ್ಬನೆ ಇದ್ದನು, ಅವನೇ ಜಗತ್ತಿನ ಕರ್ತೃ ಎಂದಿದ್ದಾರೆ. ಸೃಷ್ಟಿಯ ಪೂರ್ವದಲ್ಲಿ ಅವನೊಬ್ಬನೆ ಇದ್ದನು, ಮತ್ತೀನ್ನೇನೂ ಇರಲಿಲ್ಲ. ಅವನಿಂದಲೇ ಜಗತ್ತಿನ ಅನೇಕ ಜೀವ–ಜಂತುಗಳು, ಗಿಡ–ಮರಗಳು, ಪ್ರಾಣಿ,ಪಶು–ಪಕ್ಷಿಗಳು ಮೊದಲಾದವುಗಳು ಜನಿಸಿದವು ಎಂದಿದ್ದಾರೆ.

ಪೂರ್ಣ ಸ್ವರೂಪಿಯಾದ ಈಶ್ವರನು ಚೇತನಾಚೇತನ ವಸ್ತುಗಳಲ್ಲಿ ವ್ಯಾಪಿಸಿ ಕೊಂಡಿದ್ದಾನೆ. ಇಲ್ಲಿರುವ ನದಿಗಳು, ಬೆಟ್ಟಗಳು, ಸೂರ್ಯ, ಚಂದ್ರ, ಜೀವಕೋಟಿಗಳು ಅವನಿಂದಲೇ ಜನಿಸಿ ಅವನಲ್ಲಿಯೇ ಅಡಕವಾಗಿವೆ. ಆದುದರಿಂದ ದಾಸಿಮಯ್ಯನವರು ಈಶ್ವರನ ಶರೀರವನ್ನು ಜಗತ್ತಿಗೆ ಹೋಲಿಸಿ, ಇಲ್ಲಿರುವ ಪಂಚಭೂತಗಳು ಅವನ ಶರೀರದ ಅಂಗಗಳಾಗಿವೆ ಎಂದು ಬಿಡಿ ಬಿಡಿಸಿ ಹೇಳಿದ್ದು ದಾಸಿಮಯ್ಯನವರ ವಚನಗಳಲ್ಲಿ ಕಾಣಬಹುದು. ಉದಾಹರಣೆಗೆ–

ಒಂದಾಗಿಹವೈದು ಭೂತ
ಚಂದ್ರ ಸೂರ್ಯರು ನಂದಿವಾಹನ ನಿಮ್ಮ ತನುವಲ್ಲವೆ?
ನಿಂದು ನೋಡಲು ಜಗವಂದ್ಯನಾಗಿಪ್ಪೆ
ಇನ್ನು ನಿಂದಿಸುವೆನಾರನಯ್ಯ? ರಾಮನಾಥ.[7]

ಈಶ್ವರನು ಪಂಚಮುಖವುಳ್ಳವನಾಗಿದ್ದಾನೆಂದು ಆಸ್ತಿಕ ದರ್ಶನಗಳು ಹಾಗೂ ವೀರಶೈವ ಪುರಾಣಗಳು ಒಪ್ಪಿಕೊಂಡಿರುತ್ತವೆ. ಸದ್ಯೋಜಾತ, ವಾಯುದೇವ, ಅಘೋರ, ತತ್ಪುರುಷ, ಮತ್ತು ಈಶಾನ್ಯಗಳೆಂಬ ಪಂಚಮುಖಗಳು. ಈ ಪಂಚಮುಖಗಳಿಂದಲೇ ಆಕಾಶಾದಿ ಪಂಚಭೂತಗಳು ಜನಿಸಿವೆ. ಪಂಚಭೂತಗಳು ಮಿಶ್ರಣ ಅಥವಾ ಪಂಚೀಕರಣಗೊಂಡು ಶರೀರ ನಿರ್ಮಾಣವಾಗಿದೆ. ಆದುದರಿಂದ ಸೂರ್ಯ, ಚಂದ್ರರು ಅವನ ಕಣ್ಣುಗಳಾಗಿವೆ. ಜಗತ್ತು ಅವನ ಶರೀರವಾಗಿದೆ. ಎಂದು ನಿರ್ಗುಣ ಈಶ್ವರನನ್ನು ಸಗುಣ ರೂಪದಲ್ಲಿ ಚಿತ್ರಿಸಿರುವುದನ್ನು ಈ ವಚನದಲ್ಲಿ ಕಾಣುತ್ತೇವೆ. ಹಾಗೆಯೇ ದಾಸಿಮಯ್ಯನವರು ಮುಂದುವರಿದು, ಈ ಜಗತ್ತು ಈಶ್ವರನೇ ಆಗಿರುವುದರಿಂದ

ಯಾರಿಗೂ ಸಹ ದುಃಖವನ್ನು ಕೊಡಲಾಗದು ಎನ್ನುವರು. ಈಶ್ವರ ಮತ್ತು ಜಗತ್ತು ಅಭಿನ್ನವೆಂದು ತಿಳಿದು ಅದನ್ನು ಹರಿತವಾದ ಖಡ್ಗದಿಂದ ಇರಿದು ಛೇದಿಸಲು ಸಾಧ್ಯವಿಲ್ಲ.

ನಾನೊಂದು ಸುರಗಿಯನೇನೆಂದು ಹಿಡಿವೆನು?
ಏನ ಕಿತ್ತೇನನಿರಿವೆನು?
ಜಗವೆಲ್ಲಾ ನೀನಾಗಿಪ್ಪೆ ಕಾಣಾ! ರಾಮನಾಥ.[8]

ಸೃಷ್ಟಿಕರ್ತ ಈಶ್ವರ

ದಾಸಿಮಯ್ಯನವರು ಇಡೀ ಜಗತ್ತಿನ ತುಂಬೆಲ್ಲ ಈಶ್ವರನು ವ್ಯಾಪಿಸಿದ್ದಾನೆ. ಇಳೆ, ಬೆಳೆ, ಎತ್ತು, ಬಿತ್ತು, ಸಮುದ್ರ(ಜಲ), ವಾಯು, ಜೀವ, ಕಾಯ, ಮೊದಲಾದವುಗಳೆಲ್ಲ ಈಶ್ವರನ ಕೊಡುಗೆಗಳಾಗಿವೆ. ಅವುಗಳನ್ನು ಕೊಟ್ಟಿರುವ ಈಶ್ವರನನ್ನು ಸ್ಮರಿಸುತ್ತ ಉಪಯೋಗಿಸು ಎಂದು ತಮ್ಮ ವಚನಗಳಲ್ಲಿ ಹೇಳಿದ್ದಾರೆ. ಉದಾಹರಣೆಗೆ–

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ.....!
ಎತ್ತು ನಿಮ್ಮ ದಾನ ಬಿತ್ತು ನಿಮ್ಮ ದಾನ.....!
ಕಾಯ ನಿಮ್ಮ ದಾನ ಜೀವ ನಿಮ್ಮ ದಾನ....![9]

ಈಶ್ವರನ ಶಕ್ತಿ

ಇಂತಹ ನಿರ್ಗುಣ, ನಿರಾಕಾರ, ಸರ್ವಜ್ಞನಾದ ಈಶ್ವರನನ್ನು ಅಜ್ಞಾನಿಗಳು ಅರಿಯರು. ಇದನ್ನು ಅರಿತ ದಾಸಿಮಯ್ಯನವರು ಮಾಂಸದಲ್ಲಿ ಅಡಗಿದ ಹಾಲಿನಂತೆ, ಹಾಲಿನೊಳಗಿರುವ ತುಪ್ಪದಂತೆ, ಈಶ್ವರನು ಪ್ರಾಣ–ಪ್ರಕೃತಿ(ಚೇತನಾಚೇತನ)ಯೊಳಗೆ ಅಡಗಿದ್ದಾನೆ ಎಂದು ಈ ಕೆಳಗಿನ ವಚನದಲ್ಲಿ ವ್ಯಕ್ತಪಡಿಸಿದ್ದಾರೆ.–

ಅಡಗಿನೊಳಗಣ ಹಾಲು ಅಡಗಿಪ್ಪ ಭೇದವನು
ಬೆಡಗಪ್ಪ ತುಪ್ಪದ ಕಂಪಿನ ಪರಿಯಂತೆ.
ಎಲೆ ಮೃಡನೆ! ನೀನು ಪ್ರಾಣ ಪ್ರಕೃತಿಗಳೊಳಗೆ
ಅಡಗಿಹ ಭೇದವ ಲೋಕದ ಜಡರೆತ್ತ ಬಲ್ಲರೈ? ರಾಮನಾಥ.[10]

ಈಶ್ವರನು, ಹೀಗೆ ಇರುವನೆಂದು ಹೇಳಲು ಸಾಧ್ಯವಿಲ್ಲ. ಏಕೆಂದರೆ, ಅವನು ನಿರ್ಗುಣ, ನಿರಾಕಾರನು. ಆದರೆ ದಾಸಿಮಯ್ಯನವರು ಅವನ ಇರುವಿಕೆಯನ್ನು ಜಗತ್ತಿನಲ್ಲಿರುವ ವಸ್ತುಗಳನ್ನೇ ಎದುರಿಟ್ಟುಕೊಂಡು ಈಶ್ವರನ ಸ್ವರೂಪ ತಿಳಿಸಲು ಪ್ರಯತ್ನಿಸಿದ್ದಾರೆ.

ಈಶ್ವರನ ಜ್ಞಾನ

ಜಗತ್ತಿನಲ್ಲಿ ಬೀಸುವ (ವಾಯು)ಗಾಳಿ ಒಂದೇ ಆಗಿದ್ದರೂ, ದೇಶಕಾಲದಲ್ಲಿ ಭಿನ್ನವಾಗಿ ಬೀಸುವುದು. ಅಲ್ಲದೆ ವಸ್ತುಗಳ ಉಪಾದಿಗಳಿಂದ ಮಠಾಕಾಶ, ಘಟಾಕಾಶ ಹೊಂದುವಂತೆ ಈಶ್ವರನು ಭಿನ್ನನಾಗಿ ಸ್ಥಿತನಾಗಿದ್ದಾನೆ.

ಅಗ್ನಿ ಸುಡಲಲ್ಲದೆ ಸುಳಿಯಲರಿಯದು
ವಾಯು ಸುಳಿಸುವುದಲ್ಲದೆ ಸುಡಲರಿಯದು
ಆ ಅಗ್ನಿ ವಾಯುವ ಕೂಡಿದಲ್ಲದೆ ಅಡಿಯಿಡಲರಿಯದು
ಈ ಪರಿಯಂತೆ ನರರರಿವರೆ ಕ್ರಿಯಾಜ್ಞಾನ ಭೇದವ? ರಾಮನಾಥ.[11]

ಅಂದರೆ ಈಶ್ವರನ ಸ್ವರೂಪವನ್ನು ಕುರಿತು ಅಗ್ನಿ ಮತ್ತು ವಾಯುವಿನ ದೃಷ್ಟಾಂತಗಳೊಂದಿಗೆ ಉದಾಹರಿಸಿ ಅದನ್ನು ಶರಣರು ಕ್ರಿಯಾ ಮತ್ತು ಜ್ಞಾನಕ್ಕೆ ಹೋಲಿಸಿ, ಈ ಎರಡು ಇದ್ದಲ್ಲಿ ಅಜ್ಞಾನ ಸುಳಿಯುವುದಿಲ್ಲ ಅಂದರೆ ಅಡಿಯಡಲಾಗದು, ಆಗ ಮಾತ್ರ ಈಶ್ವರನಜ್ಞಾನ ಸಾಧ್ಯವೆಂದಿದ್ದಾರೆ ದಾಸಿಮಯ್ಯನವರು.

ಹೀಗೆ ಈಶ್ವರನು ಜಗತ್ತನ್ನು ಸೃಷ್ಟಿಸಿ, ಜೀವಿಗಳಿಗಾಗಿ ಇಳೆ, ಬೆಳೆ ಮತ್ತು ನೀರು ಮೊದಲಾದವುಗನ್ನು ದಾನರೂಪವಾಗಿ ಕರುಣಿಸಿ ಅವುಗಳಲ್ಲಿಯೇ ಲೀನವಾಗಿದ್ದಾನೆ. ಆದುದರಿಂದ ಈ ಮೇಲಿನ ವಚನಗಳಲ್ಲಿ ಜಗತ್ತು ಮತ್ತು ಈಶ್ವರನ ಏಕತ್ವಭಾವ ವ್ಯಕ್ತವಾಗಿ ಎಲ್ಲರಲ್ಲಿ, ಎಲ್ಲವೂ ಅವನೇ ಆಗಿದ್ದಾನೆ ಎಂಬ ಭಾವವು ಕಾಣುತ್ತೇವೆ.

5.2 ಜೀವ

ಈಶ್ವರನ ಶಕ್ತಿಯು ಸೃಷ್ಟಿಯ ಚೇತನಾಚೇತನ ವಸ್ತುಗಳಲ್ಲಿ ತುಂಬಿಕೊಂಡು ಮಿಡಿಯುತ್ತಿರುವುದು ಆಶ್ಚರ್ಯವೂ, ಸತ್ಯವೂ ಹೌದು. ಈಶ್ವರನ ಈ ಅದ್ಭುತ ಶಕ್ತಿಯ ಅರಿದೊಡೆ ಶರಣ, ಮರೆದೊಡೆ ಮಾನವ(ಜೀವ)ನಾಗುತ್ತಾನೆ. ಅರಿದೊಡೆ ಹರ, ಮರೆದೊಡೆ ನರ(ಜೀವ), ಅರಿದೊಡೆ ಆತ್ಮ(ಈಶ್ವರ) ಮರೆದೊಡೆ ಜೀವಾತ್ಮ(ಜೀವ) ನಾಗುತ್ತಾನೆ. ಎನ್ನುವುದು ಶರಣಧರ್ಮದ ಮಾರ್ಗವಾಗಿದೆ. ಈ ಮಾರ್ಗ ಅರಿತರೆ ಸುಜ್ಞಾನ, ಮರೆತರೆ ಅಜ್ಞಾನ. ಅಜ್ಞಾನವನ್ನು ಮಿರಿ ಸುಜ್ಞಾನ ಪಡೆದ ಮಾನವ ಮಹಾಮಾನವ, ಮಹಾದೇವನಾಗಲು ಸಾಧ್ಯ ಎನ್ನುವರು ದಾಸಿಮಾರ್ಯಾದಿ ಶರಣರು.

ನಾನು ಯಾರು? ಎಲ್ಲಿಂದ ಬಂದೆ? ಕಾಣುವ ಜಗತ್ತಿನ ಹಿಂದೆ ಅಡಗಿರುವ ಶಕ್ತಿ ಯಾರದು? ಹುಟ್ಟು–ಸಾವಿನ ಆಚೆ ಏನಿದೆ? ಹುಟ್ಟು–ಸಾವಿನ ಮಧ್ಯದ ಜೀವನಕ್ಕೆ ಅರ್ಥವೇನು? ಇಂತಹ ಹಲವಾರು ಪ್ರಶ್ನಗಳ ಮೂಲಕ ಜನರಲ್ಲಿರುವ ಅಜ್ಞಾನವನ್ನು ಹೊಡೆದೋಡಿಸಿ ಜ್ಞಾನದ ಉತ್ತುಂಗ ಶಿಖರಕ್ಕೆ, ದಾಸಿಮಯ್ಯನವರು ತಮ್ಮ ವಚನಗಳ ಮೂಲಕ ಮಾನವನಿಗೆ(ಜೀವಿಗೆ) ಕರೆದೊಯ್ದಿದ್ದಾರೆ.

ಈಶ್ವರ(ಆತ್ಮ)ನು ಜೀವಿಗಳ ಶರೀರಗಳಲ್ಲಿ ವರ್ತಮಾನ, ಭೂತ ಮೊದಲಾದ ಕಾಲದಲ್ಲೂ ಬದಲಾಗದೆ ಚೈತನ್ಯ ರೂಪಿಯಾಗಿ ಇರುವನು. ಆದುದರಿಂದ ಬ್ರಹ್ಮ(ಆತ್ಮ)ನ ಆ ಚೈತನ್ಯ ರೂಪಕ್ಕೆ ಜೀವಾತ್ಮನೆಂದು ಕರೆಯುತ್ತಾರೆ. ಅವನೇ ಜೀವ. ಆದುದರಿಂದ ಈಶ್ವರ(ಆತ್ಮ)ನು ಶರೀರ ಉಪಾದಿಗಳ ಮೂಲಕ ಜೀವ ಎನಿಸಿಕೊಂಡನು. ಜೀವಿಯ ಶರೀರಕ್ಕೆ ದಾಸಿಮಯ್ಯನವರು ಬಂಡಿ, ಗೋಣಿಚೀಲ, ಎಂದು ಕರೆದಿದ್ದಾರೆ, ಮತ್ತೆ

ಕೆಲವಾರು ಜ್ಞಾನಿಗಳು ಮಡಿಕೆ(ಘಟ), ಪಟ, ದೇವಾಲಯ ಎಂದು ಹಲವಾರು ಹೆಸರುಗಳಿಂದ ಕರೆದಿದ್ದಾರೆ.

ಕಡೆಗೀಲಿಲ್ಲದ ಬಂಡಿ ಹೊಡೆಗೆಡೆಯದೆ ಮಾಣ್ಬುದೆ?
ಕಡೆಗೀಲು ಬಂಡಿಗಾಧಾರ.
ಈ ಕಡುದರ್ಪವೇರಿದ ಒಡಲೆಂಬ ಬಂಡಿಗೆ
ಮೃಡ ಭಕ್ತರ ನುಡಿಗಡಣವೆ ಕಡೆಗೀಲು ಕಾಣಾ! ರಾಮನಾಥ.[12]

ಬಂಡಿ ಎಂಬುದು ಮದಭರಿತ ಶರೀರವಾದರೆ, ಕಡೆಗೀಲು ಎಂಬುದು ಜ್ಞಾನಿಗಳ, ಅನುಭಾವಿಗಳ ಆತ್ಮಜ್ಞಾನವನ್ನು ಬೋಧಿಸುವ ಮಾತುಗಳಾಗಿವೆ. ಇಲ್ಲಿ ಬಂಡಿ ಮತ್ತು ಶರೀರಗಳು ಜೀವಂತ ದೃಷ್ಟಾಂತಗಳಾಗಿವೆ. ಇವೆರಡು ಕ್ರಿಯೆಯಿಂದ ಕೂಡಿವೆ. ಈ ಎರಡರಲ್ಲಿ ಬಂಡಿಯ ಚಕ್ರಕ್ಕೆ ಕಬ್ಬಿಣದ ಕಡೆಗೀಲು ಇರದಿದ್ದರೆ ತನ್ನ ಗುರಿ ಸೇರದು. ಹಾಗೆಯೇ ಶರೀರವು ಸಹ ಮೋಕ್ಷವೆಂಬ ಗುರಿ ತಲುಪಲು ಜ್ಞಾನಿಗಳ, ಮೃಡಭಕ್ತರ ನುಡಿಯು ಅವಶ್ಯಕವೆಂದಿದ್ದಾರೆ ದಾಸಿಮಯ್ಯನವರು.

ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ
ಇರುಳೆಲ್ಲಾ ನಡೆದನಾ ಸುಂಕಕಂಜಿ
ಕಳವೆಯಲ್ಲಾ ಹೋಗಿ ಬರಿಗೋಣಿ ಉಳಿಯಿತ್ತು!
ಅಳಿಮನದವನ ಭಕ್ತಿ ಇಂತಾಯಿತ್ತು! ರಾಮನಾಥ.[13]

ಜೀವಿಯ ಶರೀರವೇ ಗೋಣಿಚೀಲ. ಶರಿರವು ನವರಂಧ್ರಗಳಿಂದ ಕೂಡಿರುವುದರಿಂದ ಗೋಣಿಚೀಲ(ಶರೀರವು) ಹರಿದಿದೆ ಎಂದು ಹೇಳಬಹುದು. ಶರೀರದಲ್ಲಿ ಕಳವೆವೆಂಬ ಶಿವನಚೈತನ್ಯ ತುಂಬಿದೆ. ಈಶ್ವರನ ಅರಿವಿಗೆ ಸತ್ಯ, ಧರ್ಮ, ತಪಸ್ಸು, ಜ್ಞಾನ ಮೊದಲಾದ ಸಾಧನೆಗಳೆಂಬುದೆ ಸುಂಕ. ಸಾಧನೆಗೆ ಮನಸ್ಸು ವ್ಯಯ ಮಾಡದೆ ಕತ್ತಲೆಯಲ್ಲಿ(ಅಜ್ಞಾನದಲ್ಲಿ) ತಿರುಗುತ್ತ ದೇಹೇಂದ್ರಿಯಗಳ ಶಕ್ತಿ ಕಳೆದು ಕೊಂಡಾಗ ಏನನ್ನೂ ಮಾಡಲು ಸಾಧ್ಯವಿಲ್ಲ.

ಜೀವಾತ್ಮನ ಸ್ವರೂಪ

ಮಾನವ ಶರೀರದೊಳಗೆ ಕಾಮ, ಕ್ರೋಧಾದಿಗಳೆಂಬ ಕಿಚ್ಚು ತುಂಬಿಕೊಂಡಿದೆ. ಆ ಕಿಚ್ಚಿನಲ್ಲಿ ತಮ್ಮ ಶರೀರವನ್ನು ಸುಟ್ಟುಕೊಳ್ಳದೆ ಅದನ್ನು ಈಶ್ವರನ ಆಲಯವೆಂದು ತಿಳಿದ ದಾಸಿಮಯ್ಯನವರು ದೇಹವೆಂಬ ದೇವಾಲಯದೊಳಗೆ ಅಡಗಿರುವ ಈಶ್ವರನ ಚೇತನವನ್ನು ಜೀವ, ಜೀವಾತ್ಮ ಮೊದಲಾದ ಹೆಸರುಗಳಿಂದ ಕರೆದಿದ್ದಾರೆ.

ನಡೆ ನೋಟ ಸೊಲ್ಲೆಡೆಯಲ್ಲಿ ಒಂದು ಕಿಚ್ಚು
ಮಡದಿ ಪುರುಷರೆಡೆಯಲ್ಲಿ ಒಂದು ಕಿಚ್ಚು
ತಡದುಂಬೆಡೆಯಲ್ಲಿ ಒಂದು ಕಿಚ್ಚು

ಪಡೆದರ್ಥ ಕೆಟ್ಟೆಡೆಯಲ್ಲಿ ಒಂದುಕಿಚ್ಚು
ಕೂಡಿದ ವ್ಯಾಮೋಹದೆಡೆಯಲ್ಲಿ ಒಂದು ಕಿಚ್ಚು
ಇಂತೀ ಐದು ಕಿಚ್ಚ ನಿಕ್ಕಿ
ಬಾಯಲ್ಲಿ ಮಣ್ಣಹೋಯಿದು ಕೆಡೆಸಿದೆ! ರಾಮನಾಥ.[14]

ಈ ಶರೀರದೊಳಗಿದ್ದ ಕಿಚ್ಚು ಶಿವನ ಚೈತನ್ಯ. ಅದು ಅರಿವೆನಿಸಿ ಆತ್ಮನ ನಿರಂಜನ ಬೆಳಕು. ಈ ಬೆಳಕು ದೇಹವನ್ನಾಗಲಿ, ಇಂದ್ರಿಯಗಳನ್ನಾಗಲಿ ಸುಡದೆ ಪ್ರಕಾಶಮಾನವಾಗಿಡುತ್ತ. ಚೇತನಗಳಲ್ಲಿ ವ್ಯಾಪಿಸಿದೆ. ಅಂಥಹ ಕಿಚ್ಚು ಈಶ್ವರನ ಕಿಡಿಯಾಗಿದೆ. ಅದುವೇ ಜೀವನಾಗಿದ್ದಾನೆ.

ಒಡಲೊಳಗಣ ಕಿಚ್ಚು ಒಡಲ ಸುಡದ ಭೇದವ
ಕುಡಿದ ಉದಕದಲ್ಲಿ ಆ ಕಿಚ್ಚು ನಂದದ ಭೇದವ
ಮೃಡ! ನೀ ಪ್ರಾಣ ಪ್ರಕೃತಿಯೊಳಗೆ ಅಡಗಿದ ಭೇದವ
ಲೋಕದ ಜಡರೆತ್ತ ಬಲ್ಲರೈ? ರಾಮನಾಥ.[15]

ಸಾಮಾನ್ಯವಾಗಿ ದೇಹಧಾರಿಯಾದ ಜೀವಿಯು ಹಸಿಯುತ್ತಾನೆ, ಹುಸಿಯುತ್ತಾನೆ, ಇವುಗಳನ್ನು ಮೀರಿ ನಿಲ್ಲುವುದು ಕಷ್ಟ. ಈ ಕಷ್ಟತನದ ಅನುಭಾವ ನಿನಗೇನು ಗೊತ್ತು? ಎಂದು ಈಶ್ವರನಿಗೆ ಪ್ರಶ್ನೆ ಹಾಕುತ್ತ ದಾಸಿಮಯ್ಯನವರು.

ಒಡಲುಗೊಂಡವ ಹಸಿವ ಒಡಲುಗೊಂಡವ ಹುಸಿವ
ಒಡಲುಗೊಂಡವನೆಂದು ನೀನೆನ್ನ ಜಡಿದೊಮ್ಮೆ ನುಡಿಯದಿರ!
ನೀನೆನ್ನಂತೆ ಒಮ್ಮೆ ಒಡಲುಗೊಂಡು ನೋಡ! ರಾಮನಾಥ.[16]

ಹಸಿವು, ಹುಸಿವುಗಳು ದೇಹದ ಗುಣಧರ್ಮಗಳು. ಆದರೆ ಚೈತನ್ಯದ ಗುಣಧರ್ಮಗಳಲ್ಲ. ದೇಹದ ಗುಣಧರ್ಮವನ್ನು ಮೀರಿನಿಂತಾಗ ಮಾತ್ರ ಜೀವಿಯು ಶಿವನಾಗಲು ಸಾಧ್ಯ. ಸಾಧ್ಯವನ್ನು ಸಾಧಿಸಲು ಜೀವಿಯು ಸಾಧನೆ ಮಾಡಬೇಕು. ಹಸಿವು, ಹುಸಿವು ದೇಹದ ನಿಕಟ ಸಂಬಂಧಿಗಳು. ಶಿವನೇ ಅದು ನಿನಗೇನು ಗೊತ್ತು? ನನ್ನ ಹಾಗೆ ಒಮ್ಮೆ ಶರೀರ ಧಾರಣೆ ಮಾಡಿ ನೋಡು ಗೊತ್ತಾಗುತ್ತದೆ ಜೀವಿಯ ಸಂಕಟ. ಅರಿತವರೆ ಬಲ್ಲರು. ಒಮ್ಮೆ ಅನುಭವಕ್ಕೆ ಬಂದರೆ ಸಾಕು, ನಿನ್ನ ಹಾಗೆ ನಿಶ್ಚಿಂತರಾಗಿದ್ದು ದೇಹಧಾರಣೆಯ ಗೋಜಿಗೆ ಹೋಗುವುದಿಲ್ಲ.

ಒಡಲು ತನ್ನ ಮಾತು ಕೇಳದೆ, ಇಂದ್ರಿಯಗಳೆಡೆ ಹರಿಯುತ್ತಿದ್ದರೆ ಎನ್ನೊಡಲು ಹೇಗಾದೀತು? ಹಾಗಾದರೆ ಇನ್ನಾರದು? ಈಶ್ವರನಿಗೆ ನಿನ್ನದೆ ಎಂದು ಹೇಳುವ ದಿಟ್ಟತನದ ಉತ್ತರ ದಾಸಿಮಯ್ಯನವರದು.

ಎನ್ನೊಡಲಾದರೆ ಎನ್ನಿಚ್ಛೆಯಲ್ಲಿರದೆ?
ನಿನ್ನೊಡಲಾದರೆ ನಿನ್ನಿಚ್ಛೆಯಲ್ಲಿರದೆ?

ಅದು ಎನ್ನೊಡಲೂ ಅಲ್ಲ, ನಿನ್ನೊಡಲೂ ಅಲ್ಲ.
ಅದು ನೀ ಮಾಡಿದ ಜಗದ ಬಿನ್ನಾಣದೊಡಲು ಕಾಣಾ! ರಾಮನಾಥ.[17]

ಇಲ್ಲಿ ದಾಸಿಮಯ್ಯನವರು ದೇಹದ ಸ್ವರೂಪ ವಿವರಿಸುತ್ತ, ಒಡಲು ಜೀವಿಯದೂ ಅಲ್ಲ, ಈಶ್ವರನದೂ ಅಲ್ಲವೆಂದು ಹೇಳಿದ್ದಾರೆ. ದೇಹವು ಜೀವಿಯದು ಆಗಿದ್ದರೆ, ಅದು ಅದರ ಅಂಕಿತದಲ್ಲಿರಬೇಕು. ಆದರೆ ಜೀವಿಯ ಅಂಕಿತದಲ್ಲಿರದೆ ಅತೀ ಚಂಚಲದಿಂದ ಕೂಡಿದೆ. ದೇಹವು ಈಶ್ವರನದು ಆಗಿದ್ದರೆ, ಈಶ್ವರನಂತೆ ಶುದ್ಧವಾಗಿರಬೇಕಿತ್ತು. ಆದರೆ ಅದು ಶುದ್ಧವಿಲ್ಲ. ಆದುದರಿಂದ ಅದು ಜಗತ್ತಿನ ರೀತಿ ಎಂದು ದಾಸಿಮಯ್ಯನವರು ವ್ಯಕ್ತಪಡಿಸಿದ್ದಾರೆ.

ಶಿವ ಜೀವರ ಸಂಬಂಧ

ಜೀವಿ(ಶಿಶು) ತಾಯಿಯ ಗರ್ಭದಲ್ಲಿರುವಾಗ ಭೂತ ಭವಿಷತ್ತುಗಳನ್ನು ಅರಿಯುವ ಶಕ್ತಿಯನ್ನು ಹೊಂದಿರುತ್ತದೆ. ತಾಯಿಯ ಗರ್ಭವನ್ನು ಬಿಟ್ಟು ಭೂಮಿಗೆ ಬರುತ್ತಲೇ ಎಲ್ಲವನ್ನು ಮರೆಯುತ್ತದೆ. ದಾಸಿಮಯ್ಯನವರು ತಾಯಿ–ಮಗುವಿನ ಸಂಬಂಧವನ್ನು ಜೀವಾತ್ಮ ಮತ್ತು ಪರಮಾತ್ಮರಿಗೆ ಹೋಲಿಸಿದ್ದಾರೆ. ತಾಯಿಯ ಗರ್ಭ ಬಿಟ್ಟು ಭೂಮಿಗೆ ಬರುವ ಜೀವಿಗೆ 'ಪ್ರಸೂತಿ'ವಾಯು ಅಥವಾ 'ವೈಷ್ಣವಿ'ವಾಯು ಆವರಿಸಿದಾಗ ಎಲ್ಲವನ್ನು ಮರೆಯುತ್ತದೆ. ಅದುವೇ ಅಜ್ಞಾನಾವರಣ. ಅದು ಕಳಚಿಕೊಳ್ಳದೆ ಹೋದರೆ ಜೀವಿಯು ತಾನು ಯಾರೆಂದು ಅರಿಯಲು ಸಾಧ್ಯವಿಲ್ಲ.

ತಾಯ ಗರ್ಭದ ಶಿಶು ತಾಯ ಕುರುಹನರಿಯದು
ಆ ತಾಯಿ ಶಿಶುವಿನ ಕುರುಹನೆಂದೂ ಅರಿಯಳು.
ಮಾಯಾಮೋಹದಲ್ಲಿಪ್ಪ ಭಕ್ತರು ದೇವರನರಿಯರು
ಆ ದೇವರು ಆ ಭಕ್ತರನೆಂದೂ ಅರಿಯನು ಕಾಣಾ! ರಾಮನಾಥ.[18]

ತಾಯಿಗೂ ಶಿಶುವಿಗೂ ಅನ್ಯೋನ್ಯ ಸಂಬಂಧವಿದೆ. ಆದರೆ ತಾಯಿಯು ಗರ್ಭಕೋಶದಲ್ಲಿರುವ ಶಿಶುವಿನ ಕುರುಹು ಅರಿಯಳು. ಹಾಗೆಯೇ ಶಿಶು ಸಹ ತಾಯಿಯ ಸ್ವರೂಪ ತಿಳಿಯದು. ಶಿಶು ತನ್ನ ಗರ್ಭಾವರಣದಿಂದ ಕಳಚಿ ಹೊರ ಬಂದಾಗ ಇಬ್ಬರ ಪರಸ್ಪರ ಪರಿಚಯವಾಗುತ್ತದೆ. ಹಾಗೆಯೇ ಜೀವಿಗೆ ತನ್ನ ಸ್ವರೂಪ ಜ್ಞಾನವಾಗಲಿ ಅಥವಾ ಈಶ್ವರನ ಸಾಕ್ಷಾತ್ಕಾರವಾಗಲಿ ಆಗಬೇಕಾದರೆ, ಪ್ರಪಂಚದ ಅಜ್ಞಾನಾವರಣ ಮಾಯಾಕೋಶ ಕಳಚಿಕೊಳ್ಳಬೇಕೆಂಬುವುದೇ ಈ ವಚನದ ತಾತ್ಪರ್ಯ.

ಜೀವ ಶಿವನಾಗುವ ಬಗೆ

ಕಣ್ಣು ಮೀಸಲು ಶಿವನ, ಕೈ ಮೀಸಲು ಶಿವನ,
ಕಾಲು ಮೀಸಲು ಶಿವನ, ನಾಲಿಗೆ ಮೀಸಲು ಶಿವನ,
ಕಿವಿ ಮೀಸಲು ಶಿವನ, ನಾಸಿಕ ಮೀಸಲು ಶಿವನ,

ತನು ಮನವೆಲ್ಲಾ ಮೀಸಲು ಶಿವನ,
ಈ ಮೀಸಲು ಬೀಸರವಾಗದಂತಿರ್ದಡೆ
ಆತನೇ ಜಗದೀಶ ಕಾಣಾ! ರಾಮನಾಥ.[19]

ಜೀವಿಯ ಶರೀರದ ಪ್ರತಿಯೊಂದು ಇಂದ್ರಿಯಗಳ ಹಿಂದೆ ಈಶ್ವರನ ಶಕ್ತಿ ಅಡಗಿರುವುದರಿಂದ ಜೀವಿ ಎನಿಸಿಕೊಂಡ ಜೀವಿ ಶಿವನಾಗಬೇಕಾದರೆ ತನ್ನ ಶರೀರೇಂದ್ರಿಗಳು ಶಿವನಿಗೆ ಸಲ್ಲಿಸಬೇಕು. ಆದುದರಿಂದ ದಾಸಿಮಯ್ಯನವರು ಶಿವಾರ್ಪಣ ಭಾವನೆಯಿಂದ ಕಣ್ಣು ಮೀಸಲು ಶಿವನ, ಕೈ ಮೀಸಲು ಶಿವನ, ಎಂದು ಹೇಳಿರಬಹುದು. ಆಗ ಜೀವಭಾವ ಹೋಗಿ ಶಿವನಾಗುತ್ತಾನೆ ಎನ್ನುವರು ದೇವರ ದಾಸಿಮಯ್ಯನವರು.

5.3. ಜಗತ್ತು

ದೇವರ ದಾಸಿಮಯ್ಯನವರು ತಮ್ಮ ವಚನದಲ್ಲಿ ಒಡಲಿನ(ದೇಹದ) ಮೂಲಕ ಉದಾಹರಣೆ ಕೊಟ್ಟು, ಅದು ಜಗತ್ತಿನ ಸ್ವತ್ತಾಗಿದೆ ಎನ್ನುವರು.

ಎನ್ನೊಡಲಾದಡೆ ಎನ್ನಿಚ್ಛೆಯಲ್ಲಿರದೆ?
ನಿನ್ನೊಡಲಾದಡೆ ನಿನ್ನಿಚ್ಛೆಯಲ್ಲಿರದೆ?
ಅದು ಎನ್ನೊಡಲೂ ಅಲ್ಲ, ನಿನ್ನೊಡಲೂ ಅಲ್ಲ,
ಅದು ನೀ ಮಾಡಿದ ಜಗದ ಭಿನ್ನಾಣದೊಡಲು ಕಾಣಾ ರಾಮನಾಥ.[20]

ದಾಸಿಮಯ್ಯನವರು ಈಶ್ವರನೊಬ್ಬನೆ ಅವನೆ ಜಗತ್ತಿನ ಕರ್ತೃ ಎಂದಿದ್ದಾರೆ. ಸೃಷ್ಟಿಯ ಪೂರ್ವದಲ್ಲಿ ಅವನೊಬ್ಬನೆ ಇದ್ದನು. ಮತ್ತೀನ್ನೇನೂ ಇರಲಿಲ್ಲ. ಅವನಿಂದಲೇ ಜಗತ್ತಿನ ಅನೇಕ ಜೀವ–ಜಂತುಗಳು, ಗಿಡ–ಮರಗಳು, ಪ್ರಾಣಿ,ಪಶು–ಪಕ್ಷಿಗಳು ಮೊದಲಾದವುಗಳು ಜನಿಸಿದವು ಎಂದಿದ್ದಾರೆ.

ಎತ್ತನೇರಿದ ಕರ್ತನೊಬ್ಬನೆ ಜಗಕ್ಕೆಲ್ಲ
ಎತ್ತು ಬೆಳೆದ ಧಾನ್ಯವನುಂಬ
ದೇವರ್ಕಳೆಲ್ಲ ನಿಮ್ಮ ತೊತ್ತಿನ ಮಕ್ಕಳು ಕಾಣಾ! ರಾಮನಾಥ.[21]

ದಾಸಿಮಯ್ಯನವರು ಸಮಸ್ತ ಜಗತ್ತಿಗೆ ಈಶ್ವರನೇ ಒಡೆಯನು. ಇವನು ನಂದಿಯನ್ನು ತನ್ನ ವಾಹನ ಮಾಡಿಕೊಂಡು, ಜಗತ್ತಿನ ಆಗು–ಹೋಗುಗಳ ಬಗ್ಗೆ ಗಮನಿಸುತ್ತ ಸೃಷ್ಟಿ, ಸ್ಥಿತಿ ಮತ್ತು ಲಯಗಳ ಮೂಲಕ ಜಗತ್ತನ್ನು ನಿಯಂತ್ರಿಸುತಿದ್ದಾನೆ. ಇನ್ನೂಳಿದ ದೈವಂಗಳೆಲ್ಲ ಅವನ ತೊತ್ತಿನ ಮಕ್ಕಳು. ಅವರು ಅವನು ಬಿತ್ತಿ ಬೆಳೆದಿರುವ ಧಾನ್ಯವನುಂಡು ಬದುಕುತ್ತಿರುವರು. ಎಂದು ಹೇಳಿದ್ದಾರೆ.

ಇಂತೆಂದ ಭೂಮಿಯ, ಇಂತೆಂದ ಗಗನವ,
ಇಂತೆಂದ ಸಪ್ತ ಸಾಗರವ,
ಇಂತೀ ಲೋಕದೋಳಗೆ ತಿಂಥಿಣಿಯಾಗಿಪ್ಪ
ಅಚಿಂತನನವರಾರು ಬಲ್ಲರೈ ರಾಮನಾಥ.[22]

ದಾಸಿಮಯ್ಯನವರ ಕಿರಿದಾದ ವಚನಗಳಲ್ಲಿ ಹಿರಿದಾದ ಅರ್ಥವನ್ನು ಕಾಣುತ್ತೇವೆ. ಇದನ್ನು ಇಡೀ ತಮ್ಮ ವಚನಗಳಲ್ಲಿ ಮೈಗೂಸಿಕೊಂಡಿದ್ದಾರೆ. ಈಶ್ವರನ ಲೀಲಾವಿಲಾಸವನ್ನು, ಹಿರಿಮೆಯನ್ನು ಈ ವಚನದಲ್ಲಿ ವ್ಯಕ್ತಪಡಿಸಿದ್ದಾರೆ. ಇಡೀ ಜಗತ್ತಿನ ತುಂಬೆಲ್ಲ ಈಶ್ವರನು ವ್ಯಾಪಿಸಿದ್ದಾನೆ. ಇಳೆ, ಬೆಳೆ, ಎತ್ತು, ಬಿತ್ತು, ಸಮುದ್ರ(ಜಲ), ವಾಯು, ಜೀವ, ಕಾಯ, ಮೊದಲಾದವುಗಳೆಲ್ಲ ಈಶ್ವರನ ಕೊಡುಗೆಗಳಾಗಿವೆ.

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ.....!
ಎತ್ತು ನಿಮ್ಮ ದಾನ ಬಿತ್ತು ನಿಮ್ಮ ದಾನ.....!
ಕಾಯ ನಿಮ್ಮ ದಾನ ಜೀವ ನಿಮ್ಮ ದಾನ....![23]

ದಾಸಿಮಯ್ಯನವರು ಸಹ ತಮ್ಮ ವಚನಗಳಲ್ಲಿ ಪುರಾಣದ ಕಲ್ಪನೆ ನೀಡಿರುವುದನ್ನು ಈ ಕೆಳಗಿನ ವಚನದಲ್ಲಿ ಕಾಣಬಹುದು. ಆನಂತರ ಜಲ, ವಾಯು, ಅಗ್ನಿ, ಆಕಾಶ, ಮತ್ತು ಭೂಮಿಗಳನ್ನು, ದ್ಯುಲೋಕ, ಮತ್ತು ಅಂತರಿಕ್ಷಲೋಕಗಳನ್ನು ಪಾತಾಳಾದಿ ಲೋಕಗಳನ್ನು ಸೃಷ್ಟಿ ಮಾಡಿದನು. ಈ ಎಲ್ಲ ಲೋಕಗಳ ರಕ್ಷಣೆಗಾಗಿ ಆಯಾ ಲೋಕಪಾಲಕರನ್ನು ಸೃಷ್ಟಿಸಿದನು.

ಧರಣಿಯ ಪಸರಿಸಿ ಉರಗನನಡಿಯಿಟ್ಟು
ಶರಧಿಯೇಳಕ್ಕೆ ಎರದನೊಕ್ಕುಡಿತೆ ಉದಕವ
ಹರಿಯಜ ಸುರರಿಗೆ ಪರಿಪರಿಯ ಲೋಕವ ಕೊಟ್ಟು
ಅರಿಯದಂತಿರ್ದ ಕಾಣಾ ! ರಾಮನಾಥ.[24]

ಸಮುದ್ರ, ಭೂಮಿ, ಅಗ್ನಿ, ವಾಯು, ಮೊದಲಾದವುಗಳನ್ನು ಗಮನಿಸಿ ಆಶ್ಚರ್ಯ ವೆನಿಸಿದ ದಾಸಿಮಯ್ಯನವರು ಜಗತ್ತಿನ ಸೃಷ್ಟಿಯ ಅದ್ಭುತವನ್ನು ತಮ್ಮ ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ.

ಸರ್ಪವೂ, ಆಮೆಯೂ, ಅಷ್ಟ ದಿಕ್ ಪಾಲಕರೂ ಭೂಮಿಯನ್ನು ಹೊತ್ತಿದ್ದಾರೆ. ಹಗಲು–ರಾತ್ರಿ ಹೊತ್ತಿರುವವರಿಗೆ ಆಧಾರವೇನು? ಈ ಪ್ರಶ್ನೆಗೆ ಉತ್ತರ ಕೊಡುವವರಿಗೆ ಬಾಜಿ ಕಟ್ಟುತ್ತೇನೆ. ಅಂತಹವರನ್ನು ನನಗೆ ತೋರಯ್ಯ ಎಂದು ರಾಮನಾಥನಲ್ಲಿ ಪ್ರಾರ್ಥಿಸಿದ್ದಾರೆ.

ಸರ್ಪನೂ ಕೂರ್ಮನೂ ದಿಕ್ಕರಿಗಳೆಂಟೂ
ಭೂಮಿಯ ಹೊತ್ತಿರ್ದಪರೆಂದು
ಅಹರ್ನಿಶಾ ಹೊತ್ತಿಪ್ಪವರಿಗೆ ಅತ್ತಲಾಧಾರ ಇತ್ತಲಾಧಾರ
ಉತ್ತರಗುಡುವವರಿಗೆ ಇಕ್ಕುವೆ ಮುಂಡಿಗೆಯ
ಎತ್ತುವರುಳ್ಳಡೆ ತೋರಿರೈ ರಾಮನಾಥ.[25]

ಈಶ್ವರನು ಚೇತನಾಚೇತನ ವಸ್ತುಗಳೆಲ್ಲ ಸೃಷ್ಟಿಸಿ ಅವುಗಳಲ್ಲಿಯೇ ವ್ಯಾಪಿಸಿ ಕೊಂಡಿದ್ದಾನೆ. ಇಲ್ಲಿರುವ ನದಿಗಳು, ಬೆಟ್ಟಗಳು, ಸೂರ್ಯ, ಚಂದ್ರ, ಜೀವಕೋಟಿಗಳು

ಅವನಿಂದಲೇ ಜನಿಸಿ ಅವನಲ್ಲಿಯೇ ಅಡಕವಾಗಿವೆ. ಆದುದರಿಂದ ದಾಸಿಮಯ್ಯನವರು ಈಶ್ವರನ ಶರೀರವನ್ನು ಜಗತ್ತಿಗೆ ಹೋಲಿಸಿ, ಇಲ್ಲಿರುವ ಪಂಚಭೂತಗಳು ಅವನ ಶರೀರದ ಅಂಗಗಳಾಗಿವೆ ಎಂದು ಬಿಡಿ ಬಿಡಿಸಿ ಹೇಳಿದ್ದು ಗಮನಾರ್ಹವಾಗಿದೆ.

ಒಂದಾಗಿಹವೈದು ಭೂತ
ಚಂದ್ರ ಸೂರ್ಯರು ನಂದಿವಾಹನ ನಿಮ್ಮ ತನುವಲ್ಲವೆ?
ನಿಂದು ನೋಡಲು ಜಗವಂದ್ಯನಾಗಿಪ್ಪೆ
ಇನ್ನು ನಿಂದಿಸುವೆನಾರನಯ್ಯ? ರಾಮನಾಥ.[26]

ಹಾಗೆಯೇ ದಾಸಿಮಯ್ಯನವರು ಮುಂದುವರಿದು, ಈ ಜಗತ್ತು ಈಶ್ವರನೇ ಆಗಿರುವುದರಿಂದ ಯಾರಿಗೂ ಸಹ ದುಃಖಿಸಲಾಗದು ಎನ್ನುವರು. ಈಶ್ವರ ಮತ್ತು ಜಗತ್ತು ಅಭಿನ್ನವೆಂದು ತಿಳಿದು ಅದನ್ನು ಹರಿತವಾದ ಖಡ್ಗದಿಂದ ಇರಿದು ಛೇದಿಸಲು ಸಾಧ್ಯವಿಲ್ಲ.

ನಾನೊಂದು ಸುರಗಿಯನೇನೆಂದು ಹಿಡಿವೆನು?
ಏನ ಕಿತ್ತೇನನಿರಿವೆನು?
ಜಗವೆಲ್ಲಾ ನೀನಾಗಿಪ್ಪೆ ಕಾಣಾ! ರಾಮನಾಥ.[27]

5.4 ಆತ್ಮ

ಆತ್ಮನು ನಿರಾಕಾರ, ನಿರ್ಗುಣ, ಅಚಿಂತ್ಯ, ಅವಿನಾಶಿ, ನಾಮರೂಪರರಹಿತ ನಾಗಿದ್ದಾನೆ. ಹೀಗಿದ್ದೂ ಎಲ್ಲದರಲ್ಲೂ ತುಂಬಿಕೊಂಡಿದ್ದಾನೆ. ಅವನನ್ನು ಜ್ಞಾನನೇತ್ರದಿಂದ ನೋಡಬೇಕು. ಅವನು ಸುಳಿದಾಡುವುದಿಲ್ಲ. ಮಾತಿಗೆ ಸಿಲುಕುವುದಿಲ್ಲ. ಕಣ್ಣಿಗೆ ಕಾಣುವುದಿಲ್ಲ. ಕೈಗೆ ಸಿಗುವುದಿಲ್ಲ. ಮನಕ್ಕೆ ಅತೀತನಾಗಿದ್ದಾನೆ. ಒಟ್ಟಿನಲ್ಲಿ ಹೇಳುವುದಾದರೆ ಮಾನವನ ಇಂದ್ರಿಯಗಳಿಗೆ ಅವನು ಅಗೋಚರನಾಗಿದ್ದಾನೆ. ಅವನು ಬಯಲಾಗಿದ್ದು ಬಯಲೊಳಗೆ ಅಡಗಿದ ಭೇದವ ಬಲ್ಲವರಾರು? ಎಂದು ಪ್ರಶ್ನಿಸಿದ್ದಾರೆ ದಾಸಿಮಯ್ಯನವರು.

ಆಡಬಾರದ ಬಯಲು ಸುಡಬಾರದ ಬಯಲು,
ನುಡಿಯಬಾರದ ಬಯಲು ಹಿಡಿಯಬಾರದ ಬಯಲು,
ಈ ಒಡಲಿಲ್ಲದ ಬಯಲೊಳಗೆ ಅಡಗಿರ್ದ ಭೇದವ
ಈ ಲೋಕದ ಜಡರೆತ್ತ ಬಲ್ಲರೈ? ರಾಮನಾಥ.[28]

ದಾಸಿಮಯ್ಯನವರು ಆತ್ಮನು ಬಯಲು ರೂಪನಾಗಿದ್ದಾನೆ. ಅವನ ಬಗ್ಗೆ ಹೇಳೋಣವೆಂದರೆ, ನಾಲಿಗೆಗೆ ಸಿಗ. ನೋಡೋಣವೆಂದರೆ ಕಣ್ಣಿಗೆ ಕಾಣನು. ನುಡಿಗೆ ಸಿಗದೆ ಇರುವುದರಿಂದ ಆಡಲುಬಾರದು. ಚಕ್ಷುವಿಗೆ ಕಾಣದೆ ಇರುವುದರಿಂದ ನೋಡಲುಬಾರದು. ಎಂದು ಮೊದಲಾಗಿ ತಮ್ಮ ವಚನದಲ್ಲಿ ಹೇಳಿದ್ದಾರೆ.

ಬಯಲು ಬಣ್ಣವ ಮಾಡಿ
ಸ್ವಯವ ನಿಲವ ಮಾಡಿ
ಸುಳಿವಾತನ ಬೆಡಗ ಬಲ್ಲವರಾರೈ?ರಾಮನಾಥ.[29]

ನಿರ್ವಿಕಾರ, ನಿರ್ಮಲನಾಗಿರುವ ಆತ್ಮನು ಮಾನವನ ಶಕ್ತಿಯ ವರ್ಣನೆಗೆ ಸಿಲುಕುವವನಲ್ಲ. ಆದರೆ ಆತ್ಮನು ಅಣುರೇಣುತೃಣಕಾಷ್ಠದಲ್ಲಿ ತುಂಬಿಕೊಂಡಿರುವುದು ನಿಜವಾದ ಸಂಗತಿ. ಈ ಇರುವಿಕೆಯನ್ನು ಕಾಣದಂತಿರುವುದು ಆಶ್ಚರ್ಯವೇ ಆಗಿದೆ.

ಆತ್ಮನು ಹೇಗಿದ್ದಾನೆ? ಎಲ್ಲಿದ್ದಾನೆಂದು? ನಮ್ಮಲ್ಲಿ ಪ್ರಶ್ನೆ ಬಂದರೆ, ಆಕಾಶಾದಿ ಪಂಚಮಹಾಭೂತಗಳು ಆತ್ಮನಿಂದಲೇ ವ್ಯಕ್ತವಾಗಿವೆ. ಅಲ್ಲದೆ, ಅವನು ಮಹತ್ತಿಗಿಂತಲೂ ಮಹತ್ತಾಗಿ, ಅಣುವಿಗಿಂತಲೂ ಅಣುವಾಗಿದ್ದಾನೆ. ಅಂದರೆ, ಇಲ್ಲಿರುವ ಸರ್ವವಸ್ತುಗಳಲ್ಲಿ ಯಾವುದನ್ನು ಅತ್ಯಂತ ಚಿಕ್ಕದು ಎಂದು ತಿಳಿಯುತ್ತೇವೆಯೋ, ಅದಕ್ಕಿಂತಲೂ ಚಿಕ್ಕದು, ಹಾಗು ಯಾವುದು ದೊಡ್ಡದು ಎಂದು ತಿಳಿಯುತ್ತೇವೆಯೋ ಅದಕ್ಕಿಂತಲೂ ದೊಡ್ಡರೂಪನಾಗಿದ್ದಾನೆ. ಇರುವೆಯಲ್ಲಿ ಇರುವೆ ಗಾತ್ರ. ಆನೆಯಲ್ಲಿ ಆನೆಯಗಾತ್ರದ ರೂಪದಲ್ಲಿದ್ದಾನೆ. ಒಟ್ಟಿನಲ್ಲಿ ಆತ್ಮನು ಅತ್ಯಂತ ಚಿಕ್ಕವನೂ ಹೌದು, ಅತ್ಯಂತ ದೊಡ್ಡವನೂ ಹೌದು.

ಆತ್ಮನು ನಮ್ಮಿಂದ ಅತ್ಯಂತ ಸಮೀಪನೂ ಅತ್ಯಂತ ದೂರನೂ ಇದ್ದಾನೆ. ಅವನು ಚಲಿಸುತ್ತಾನೆ. ಚಲಿಸುವುದಿಲ್ಲ. ಅವನು ದೂರದಲ್ಲಿಯೂ ಇದ್ದಾನೆ. ಹತ್ತಿರದಲ್ಲಿಯೂ ಇದ್ದು ಎಲ್ಲದರ ಒಳ–ಹೊರಗೆ ತುಂಬಿಕೊಂಡಿದ್ದಾನೆ. ಆತ್ಮನು ಜಗತ್ತಿನ ಪ್ರತಿಯೊಂದು ವಸ್ತುವಿನ ಒಳ–ಹೊರಗೂ ತುಂಬಿಕೊಂಡಿದ್ದಾನೆ, ಎನ್ನುವುದನ್ನು ಶರಣರು ಮಣಿಗಳ ಉದಾಹರಣೆಯೊಂದಿಗೆ ತಿಳಿಸಿ, ಅಣುರೇಣುಗಳಲ್ಲಿ ಈಶ್ವರನು ಆತ್ಮ ರೂಪದಲ್ಲಿ ಇರುವನೆಂದು, ಅವನಿಗೆ ನಮಸ್ಕರಿಸಿದ್ದಾರೆ.

ಮಣಿಗಣ ಸೂತ್ರದಂತೆ ತ್ರಿಣೆಯ ನೀನಿಪ್ಪೆಯಯ್ಯ
ಎಣಿಸುವಡೆ ತನ್ನ ಭಿನ್ನ ಆತ್ಮನೊಬ್ಬನೆ
ಅಣುರೇಣು ಮಧ್ಯದಲ್ಲಿ ಗುಣಭರಿತ ನೀನೆಂದು
ಮಣಿಯುತಿರ್ಪೆನಯ್ಯಾ ರಾಮನಾಥ.[30]

ಆತ್ಮನು ಜೀವಿಗಳ ಶರೀರದಲ್ಲಿದ್ದು ಶರೀರ ರಹಿತನಾಗಿ, ಅನಿತ್ಯ ವಸ್ತುಗಳಲ್ಲಿ ನಿತ್ಯವು, ವ್ಯಾಪಕನಾಗಿರುವನು. ಅಂತಹ ಆತ್ಮನನ್ನು ಏಕಾಗ್ರ ಮತ್ತು ಸೂಕ್ಷ್ಮಬುದ್ಧಿಯಿಂದ ಮಾತ್ರ ಅನುಭವಿಸಲು ಸಾಧ್ಯ. ದಾಸಿಮಯ್ಯನವರು ತಮ್ಮ ವಚನದಲ್ಲಿ ಆತ್ಮನು ಜೀವಿಗಳ ಶರೀರದಲ್ಲಿದ್ದಾನೆಂಬುದನ್ನು, ಪ್ರಕೃತಿಯಲ್ಲಿ ಕಾಣುವ ಮರ, ಹಾಲುಗಳ ಉದಾಹರಣೆಗಳೊಂದಿಗೆ ವಿವರಿಸಿದ್ದಾರೆ. ಮರದಲ್ಲಿ ಅಗ್ನಿ, ಹಾಲಿನಲ್ಲಿ ತುಪ್ಪವಿರುವಂತೆ ಶರೀರದಲ್ಲಿ ಆತ್ಮನಿದ್ದಾನೆ.

ಮರನೊಳಗಣ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರುಸಿದೆ
ಶರೀರದೊಳಗಾತ್ಮನನಾರು ಕಾಣದಂತಿರಿಸಿದೆ.
ನೀ ಬೆರಸಿದ ಭೇದಕ್ಕೆ ಬೆರಗಾದೆನಯ್ಯ! ರಾಮನಾಥ.[31]

ಮರದೊಳಗಿರುವ ಅಗ್ನಿಯಂತೆ, ಹಾಲಿನಲ್ಲಿರುವ ತುಪ್ಪದಂತೆ, ಶರೀರದೊಳಗೆ ಆತ್ಮನಿದ್ದಾನೆ. ಮರದೊಳಗಿರುವ ಅಗ್ನಿ, ಹಾಲಿನಲ್ಲಿರುವ ತುಪ್ಪ ಕ್ರಿಯೆಗಳಿಲ್ಲದೆ ನೋಡಲು ಸಾಧ್ಯವಿಲ್ಲ. ಹಾಗೆಯೇ ಆತ್ಮನನ್ನು ಕಾಣಲು ಭಕ್ತಿ, ಜ್ಞಾನ ವಿರಕ್ತಿಗಳೆಂಬ ಕ್ರಿಯೆಗಳಿಂದ ಸಾಧ್ಯ. ಅಗ್ನಿ, ತುಪ್ಪ, ಮತ್ತು, ಆತ್ಮಗಳು ಚೇತನದ ಪ್ರತೀಕಗಳಾಗಿವೆ. ಇವುಗಳನ್ನು ಹೀಗೆ ಅವ್ಯಕ್ತವಾಗಿ ಮರದಲ್ಲಿ, ಹಾಲಿನಲ್ಲಿ ಮತ್ತು ಶರೀರದಲ್ಲಿ ಕ್ರಮವಾಗಿ ಇಡಲು ಸರ್ವಶಕ್ತನಾದ ಈಶ್ವರನಿಂದಲೇ ಸಾಧ್ಯ.

ಸರ್ವಭೂತಗಳ ಒಳ–ಹೊರಗೂ ಒಬ್ಬನಾದ ಆತ್ಮನೆ ಇದ್ದು, ಎಲ್ಲವನ್ನು ತನ್ನ ವಶದಲ್ಲಿ ಇಟ್ಟುಕೊಂಡು ನಾನಾ ರೂಪಗಳನ್ನು ಹೊಂದುತ್ತ ಬೇರೆ ಬೇರೆಯಾಗಿ ಕಾಣುತ್ತಾನೆ. ಎನ್ನುವದನ್ನು ದಾಸಿಮಯ್ಯನವರು ಜಲಭರಿತ ಘಟ ಮತ್ತು ಸೂರ್ಯನ ದೃಷ್ಟಾಂತದ ಮೂಲಕ ತಿಳಿಸುತ್ತ, ಅವನನ್ನು ಕಾಣಲು (ಗುರು)ಜ್ಞಾನಿಪುರುಷನಿಂದ ಸಾಧ್ಯ ಎನ್ನುವರು.

ಘಟದೊಳಗೆ ತೋರುವ ಸೂರ್ಯನಂತೆ
ಸರ್ವರಲ್ಲಿ ಶಿವನ ಚೈತನ್ಯವಿಪ್ಪುದು
ಇದ್ದರೇನು? ಅದ ಕೂಡುವರೆ
ಗುರುವಿನಿಂದಲ್ಲದಾಗದು ಕಾಣಾ ರಾಮನಾಥ.[32]

ದಾಸಿಮಯ್ಯನವರು ಜೀವಿಯ ಪರಮ ಧ್ಯೇಯವನ್ನು ಈ ವಚನದಲ್ಲಿ ವ್ಯಕ್ತಪಡಿಸುವುದರ ಜೊತೆಗೆ ಆತ್ಮ ಸಾಕ್ಷಾತ್ಕಾರದ ಮಾರ್ಗ ತೋರಿದ್ದಾರೆ. ಅದಕ್ಕಾಗಿ ಜೀವಿಯು ಎಲ್ಲೆಲ್ಲಿಯೂ ಸುತ್ತಾಡದೆ ಗುರುವಿಗೆ ಶರಣಾಗಿ, ಗುರುವಿನಿಂದ ಎಲ್ಲವೂ ಸಾಧ್ಯವೆಂದಿದ್ದಾರೆ.

ಜೀವಿಯು ತನ್ನ ಆತ್ಮನನ್ನು ತಾನೇ ಅರಿತಾಗ ಮಾತ್ರ ಅದರ ಇರುವಿಕೆಯ ಜ್ಞಾನವುಂಟಾಗಿ ಅವನೂ ಅದೇ ಸ್ವರೂಪನಾಗಿ ಪರಮಸುಖದಲ್ಲಿ ಇರುವನು.

ತನ್ನೊಳಗಿನ ಅರಿವು ತನ್ನಲ್ಲಿಯೇ ತೋರಿದಲ್ಲದೆ
ಅನ್ಯರಲ್ಲಿ ತೋರಬಲ್ಲುದೆ?
ತನ್ನಲ್ಲಿ ತಾನೆ ಇದ್ದಿತ್ತು.
ತನ್ನ ತಾನೆ ಪಕ್ವಕ್ಕೆ ಬಂದು
ತನ್ನಲ್ಲಿ ಹಟ್ಟಿದ ನೆನಹಿನ ಬಿನ್ನಾಣವನೇನೆಂಬೆನಯ್ಯಾ ರಾಮನಾಥ.[33]

ಆತ್ಮನ ಅರಿವು ಪ್ರವಚನ ಮಾಡುವುದರಿಂದಾಗಲಿ, ಶಾಸ್ತ್ರಾಧ್ಯಯನ ಮಾಡುವುದರಿಂದಾಗಲಿ ಆಗುವುದಿಲ್ಲ. ಕೇವಲ ಗ್ರಂಥಗಳ ಪಠಣದಿಂದಾಗಲಿ, ವೇದಾಧ್ಯಯನ ಮಾಡುವುದರಿಂದಾಗಲಿ ಆತ್ಮನ ಇರುವು ಮತ್ತು ಹರಿವು ಅನುಭವಕ್ಕೆ ಅಗೋಚರ. ದಾಸಿಮಯ್ಯನವರು ಆತ್ಮಜ್ಞಾನವು ಕೇವಲ ಹೇಳುವುದರಿಂದಾಗಲಿ ಅಥವಾ ಕೇಳುವುದರಿಂದಾಗಲಿ ಸಾಧ್ಯವಿಲ್ಲವೆನ್ನುವರು. ಶ್ರವಣ, ಮನನ, ಮತ್ತು ನಿಧಿದ್ಯಾಸನಗಳ ಮೂಲಕ ಸ್ವಯಂ ಸತತ ಪ್ರಯತ್ನದಿಂದ ಆತ್ಮನ ಅರಿವಿನ ಅನುಭವವಾಗುತ್ತದೆ.

ಮನೆಯಲ್ಲಿ ಅಟ್ಟಿನೆಂದಡೆ ಹೊಟ್ಟೆ ತುಂಬಿದುದುಂಟೆ?
ಕೈಮುಟ್ಟಿ ಉಣ್ಣದನ್ನಕ್ಕರ!
ತಾನು ವಚನಾಗಮದ ಪ್ರಸಂಗವ ಬಲ್ಲೆನೆಂದಡೆ
ಬಲ್ಲವರಾರೂ ಇಲ್ಲವೆಂದಡೆ
ಆತ ತನ್ನ ನುಡಿಗೆ ಸಿಲುಕುವನೆ?
ಇಲ್ಲ ಕಾಣಾ! ರಾಮನಾಥ.[34]

ಅಂಗುಷ್ಠ ಮಾತ್ರ ಆಕಾರವುಳ್ಳ ಆತ್ಮನು ಜ್ಯೋತಿ ಸ್ವರೂಪನಾಗಿದ್ದಾನೆ. ಅವನು ಧೂಮರಹಿತನಾಗಿದ್ದಾನೆ. ಅಂದರೆ ಕಲ್ಮಶರಹಿತನಾಗಿದ್ದಾನೆ. ಅವನು ಇಂದು, ನಾಳೆ ಎಂದಿಗೂ ಆರದ ಶಾಶ್ವತವಿರುವ ಜ್ಯೋತಿಸ್ವರೂಪನಾಗಿದ್ದಾನೆ. ಅವನು ಪರಿಪೂರ್ಣನಾಗಿ ಎಲ್ಲ ಜೀವಕೋಟಿಗಳ ಶರೀರದಲ್ಲಿ ಅಂಗುಷ್ಠ ಗಾತ್ರದಲ್ಲಿದ್ದು ಆತ್ಮಜ್ಯೋತಿ ಎಂದೆನಿಸಿಕೊಂಡಿದ್ದಾನೆ.

ಅರುಹು ಅರಿಯಲೆಂದು
ಕುರುಹ ಕೈಯಲ್ಲಿ ಕೊಟ್ಟ!
ಅರುಹನೆ ಮರೆದು ಕುರುಹನೆ ಹರಿದ!
ಈ ಕುರುಂಬರಿಗಿನ್ನೆತ್ತಣ ಮುಕ್ತಿಯೋ? ರಾಮನಾಥ.[35]

ದೇವರ ದಾಸಿಮಯ್ಯನವರು ಲಿಂಗಕ್ಕೆ ಜ್ಯೋತಿಯೆಂದು ಕರೆದಿದ್ದಾರೆ. ಹೃದಯದಲ್ಲಿರುವ ಆತ್ಮಜ್ಯೋತಿಯು ಕರಸ್ಥಲದ ಜ್ಯೋತಿಯಾಗಿ ಸ್ವೀಕರಿಸಿ, ಅದನ್ನು ಅರಿತುಕೊಂಡಾಗ ಆತ್ಮಜ್ಞಾನದ ಅರಿವು ಆಗುತ್ತದೆ ಎಂದಿದ್ದಾರೆ.

ಕರಸ್ಥಲದ ಜ್ಯೋತಿಯಿದು. ಕರುವಿಟ್ಟ ಎರಕವಿದು.
ಇದರ ನೆಲೆಯ ತಿಳಿ ನೋಡಿದಡೆ ನಿಜಾದಾನಂದವು.
ಹೊರಬುದೊರದ ನಿಸ್ಸಂಗದ ಹೊಲಬನರಿದು
ಕೂಡಿದಾತನೆ ಶರಣ ಕಾಣಾ ರಾಮನಾಥ.[36]

ಜ್ಯೋತಿಸ್ವರೂಪನಾದ ಆತ್ಮನ ಕುರುಹು ಲಿಂಗ. ಅದನ್ನು ಶ್ರೋತ್ರೀಯ ಬ್ರಹ್ಮನಿಷ್ಠನು ಕರುಣಿಸುವನು. ಆ ಕುರುಹಿನಿಂದ ತನ್ನ ನಿಜ ಸ್ವರೂಪವನ್ನು ಹೊಂದದ ಅಜ್ಞಾನಿಗೆ ಮುಕ್ತಿ ಎಲ್ಲಿಯದು? ಧೂಮರಹಿತ ಸ್ವಯಂ ಪ್ರಕಾಶನಾದ ಜ್ಯೋತಿಯಿಂದ

ಅಜ್ಞಾನವು ಕಳೆದು ಹೋಗುತ್ತದೆ. ಲಿಂಗವು ಸಹ ಜ್ಯೋತಿಸ್ವರೂಪವಾಗಿರುವುದರಿಂದ ಅದು ಸಹ ಅಜ್ಞಾನವು ಕಳೆಯುತ್ತದೆ ಎನ್ನುವರು ದಾಸಿಮಯ್ಯನವರು.

ಅಂಗಲಿಂಗದ ಒಳಗೆ ಲಿಂಗಕಂಗಳ ಬೆಳಗು
ಹಿಂಗಲಾಪುದೆ ಹೇಳು ಅಜ್ಞಾನವ!
ಸಂಗಸುಖ ಮಥನದ ಅಸಂಗದಿಂದದನರಿದು
ಹಿಂಗಲಿಕೆ ಹೆಸರೇನು? ರಾಮನಾಥ.[37]

ಆತ್ಮಕ್ಕೆ ಶರಣರು ಲಿಂಗದ ಪರಿಕಲ್ಪನೆ ಕೊಟ್ಟು, ನಿರ್ಗುಣ ನಿರಾಕಾರ ಆತ್ಮನನ್ನು ಸಗುಣ ರೂಪದಲ್ಲಿ ಧ್ಯಾನಿಸಲಿಕ್ಕೆ ಸಾಧನೆ ಮಾಡಿಕೊಂಡರು. ದಾಸಿಮಯ್ಯನವರು ಲಿಂಗಕ್ಕೆ ಕುರುಹು, ಜ್ಯೋತಿ, ಜ್ಞಾನ, ಕ್ರಿಯೆ ಮೊದಲಾದ ಹೆಸರುಗಳಿಂದ ಕರೆದಿರುವುದನ್ನು ಅವರ ವಚನಗಳಲ್ಲಿ ಕಾಣಬಹುದು.

ಮುಂದಿನ ವಚನಗಳಲ್ಲಿ ಆತ್ಮನನ್ನು ಜ್ಯೋತಿ ಎಂದು, ಹೆಣ್ಣು–ಗಂಡುಗಳ ಸ್ವರೂಪನಲ್ಲ, ಅವನು ಲಿಂಗಾತೀತನಾಗಿದ್ದಾನೆ ಎಂದು ದಾಸಿಮಯ್ಯನವರು ತಿಳಿಸಿದ್ದಾರೆ.

ನಿಡಿದೊಂದು ಕೋಲುವನು ಕಡಿದು ಎರಡ ಮಾಡಿ
ಅಡಿಯ ಹೆಣ್ಣ ಮಾಡಿ, ಒಡತನದ ಗಂಡ ಮಾಡಿ
ನಡುವೆ ಹೊಸೆದಡೆ ಹುಟ್ಟಿದ ಕಿಚ್ಚು ಹೆಣ್ಣೊ ಗಂಡೊ? ರಾಮನಾಥ.[38]

ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಗಡ್ಡ ಮೀಸೆ ಬಂದಡೆ ಗಂಡೆಂಬರು
ನಡುವೆ ಸುಳಿವ ಆತ್ಮನು
ಹೆಣ್ಣೂ ಅಲ್ಲ ಗಂಡೂ ಅಲ್ಲ! ರಾಮನಾಥ.[39]

5.5 ಮೋಕ್ಷ

ದೇವರ ದಾಸಿಮಯ್ಯನವರು ತಮ್ಮ ವಚನದಲ್ಲಿ ಘಟ, ಪಟ, ಕಾಂಚನಗಳ ಉದಾಹರಣೆಗಳ ಮೂಲಕ ತನ್ನ ಸ್ವರೂಪಜ್ಞಾನ ಹೊಂದಿದ ಜೀವಿಯು ಈಶ್ವರ ಸ್ವರೂಪಿಯೇ ಸರಿ. ಅದುವೇ ಮೋಕ್ಷವೆಂದು ಹೇಳುತ್ತಾರೆ.

ಘಟವನೊಡೆದು ಬಯಲು ನೋಡಲದೇಕೆ?
ಘಟದೊಳಗಿಪ್ಪದೆ ಬಯಲೆಂದರಿದಡೆ ಸಾಲದೆ?
ಪಟವ ಹರಿದು ತಂತುವ ನೋಡಲದೇಕೆ?
ಆ ಪಟವೆ ತಂತುವೆಂದರಿದಡೆ ಸಾಲದೆ?
ಕಟಕವ ಮುರಿದು ಕಾಂಚನವ ನೋಡಲದೇಕೆ?
ಆ ಕಟಕವೆ ಕಾಂಚನವೆಂದರಿದಡೆ ಸಾಲದೆ?

ತನ್ನನಳಿದು ಘನವ ನೋಡಲದೇಕೆ?
ತಾನೆ ಘನವೆಂದರಿದಡೆ ಸಾಲದೆ? ಹೇಳಾ! ರಾಮನಾಥ.[40]

ಶರೀರಧಾರಿಯಾದ ಜೀವಿಯು ಮೋಕ್ಷವನ್ನು ಸಂಪಾದಿಸಲು ದಾಸಿಮಯ್ಯನವರು ಸರಳ ಮಾರ್ಗವನ್ನು ತಮ್ಮ ವಚನದ ಮೂಲಕ ತಿಳಿಸಿದ್ದಾರೆ. ಈಶ್ವರನನ್ನು ತಿಳಿದುಕೊಂಡಾಗ ಅಥವಾ ತನ್ನ ಸ್ವರೂಪಜ್ಞಾನವಾದಾಗ ಜೀವಿಯು ಮೋಕ್ಷ ಹೊಂದುತ್ತಾನೆ. ಅದಕ್ಕಾಗಿ ಜೀವಿಯು ಎಲ್ಲಿಯೂ ಹೋಗಬೇಕಾಗಿಲ್ಲ. ಎಂದು, ಘಟವನ್ನೊಡೆದು ಬಯಲು ನೋಡುವುದರ ಬದಲು ಘಟದೊಳಗಿದ್ದದ್ದು ಬಯಲೆಂದರಿದರೆ ಸಾಕು, ಪಟವ ಹರಿದು ತಂತುವನ್ನು ಕಾಣುವುದಕ್ಕಿಂತ ಆ ಪಟವೆ ತಂತುವೆಂದು ಅರಿತರೆ ಸಾಕು, ಆಭರಣಗಳನ್ನು ಕೆಡಿಸಿ(ಕರಗಿಸಿ) ಭಿನ್ನವ ನೋಡುವುದಕ್ಕಿಂತ ಆಭರಣವೆ ಚಿನ್ನವೆಂದರಿತರೆ ಸಾಕು, ಹಾಗೆಯೇ ತನು ಬಿಟ್ಟು ಜೀವಿಯು ಈಶ್ವರನನ್ನಾಗಲಿ ಸಂಪಾದಿಸುತ್ತೇನೆಂದು ಹೇಳುವುದರ ಬದಲು ತಾನೇ ಈಶ್ವರ ಅಥವಾ ಮೋಕ್ಷ ಸ್ವರೂಪಿ ಎಂದು ಅರಿತರೆ ಸಾಕು.

ಸರ್ವಭೂತಗಳ ಒಳ–ಹೊರಗೂ ಒಬ್ಬನೇ ಆತ್ಮ ಇದ್ದು, ಎಲ್ಲವನ್ನು ತನ್ನ ವಶದಲ್ಲಿ ಇಟ್ಟುಕೊಂಡು ನಾನಾ ರೂಪಗಳನ್ನು ಹೊಂದುತ್ತ ಬೇರೆ ಬೇರೆಯಾಗಿ ಕಾಣುತ್ತಾನೆ. ಎನ್ನುವದನ್ನು ದಾಸಿಮಯ್ಯನವರು ಜಲಭರಿತ ಘಟ ಮತ್ತು ಸೂರ್ಯನ ದೃಷ್ಟಾಂತದ ಮೂಲಕ ತಿಳಿಸುತ್ತ, ಅವನನ್ನು ಕಾಣಲು (ಗುರು)ಜ್ಞಾನಿಪುರುಷನಿಂದ ಸಾಧ್ಯ ಎನ್ನುವರು.

ಘಟದೊಳಗೆ ತೋರುವ ಸೂರ್ಯನಂತೆ
ಸರ್ವರಲ್ಲಿ ಶಿವನ ಚೈತನ್ಯವಿಪ್ಪುದು
ಇದ್ದರೇನು? ಅದ ಕೂಡುವರೆ
ಗುರುವಿನಿಂದಲ್ಲದಾಗದು ಕಾಣಾ ರಾಮನಾಥ.[41]

ದಾಸಿಮಯ್ಯನವರು ಜೀವಿಯ ಪರಮ ಧ್ಯೇಯವನ್ನು ಈ ವಚನದಲ್ಲಿ ವ್ಯಕ್ತಪಡಿಸುವುದರ ಜೊತೆಗೆ ಆತ್ಮ ಸಾಕ್ಷಾತ್ಕಾರದ ಮಾರ್ಗ ತೋರಿದ್ದಾರೆ. ಅದಕ್ಕಾಗಿ ಜೀವಿಯು ಎಲ್ಲೆಲ್ಲಿಯೂ ಸುತ್ತಾಡದೆ ಗುರುವಿಗೆ ಶರಣಾಗಿ, ಗುರುವಿನಿಂದ ಎಲ್ಲವೂ ಸಾಧ್ಯವೆಂದಿದ್ದಾರೆ. ಹಾಗೆಯೇ ದಾಸಿಮಯ್ಯನವರು ಮುಂದಿನ ವಚನದಲ್ಲಿ ಗುರು ಕರುಣೆಯಿಂದ ಸಂಸಾರ ಭವಬಂಧನದಿಂದ ಬಿಡುಗಡೆಯಾಗುತ್ತದೆ ಎಂದಿದ್ದಾರೆ.

ಗುರು ಕರುಣಿಸಲು ಸಂಸಾರ ವಿಷಯ ಕೆಟ್ಟಿತ್ತು.
ಮಾಯಾ ಪ್ರಪಂಚ ಬಿಟ್ಟಿತ್ತು.
ಮುಂದಣ ಹುಟ್ಟರತು ಹೋಯಿತ್ತು.
ನೆಟ್ಟಗೆ ಗುರು ಪಾದವ ಮುಟ್ಟು ಭವಗೆಟ್ಟೆನು ಕಾಣಾ ರಾಮನಾಥ.[42]

ಮನೆಯ ಕಟ್ಟಿದಲ್ಲದೆ ಒಳಗಿನ ಬಯಲು ನೋಡಲಾಗದು. ಆದರೆ ಒಳಗಿನ ಮತ್ತು ಹೊರಗಿನವುಗಳ ಭಿನ್ನ–ಭಿನ್ನವೆಂದು ತಿಳಿಯಬೇಕಿಲ್ಲ. ನೋಡುವ ಚಕ್ಷು ಸಮದೃಷ್ಟಿಯುಳ್ಳ ಜ್ಞಾನನೇತ್ರವಾಗಿರಬೇಕು. ಮನಸ್ಸು ಪರವೆಂದರೆ ಸಾಲದು, ಪರದಂತೆ ಮನವಿರಬೇಕು. ಕೇವಲ ಮುಖ(ಬಾಯಿ)ದಿಂದ ನಾನು ಆತ್ಮಸ್ವರೂಪಿ ಎಂದು ಹೇಳಿದರೆ,ಮುಕ್ತ ಸ್ವರೂಪನಾದ ಆತ್ಮನಾಗುವುದಿಲ್ಲ. ಆತ್ಮನ ಸ್ಥಿತಿ ಅರಿತು ಅದರಂತೆ ಇರಬೇಕು. ಆಗ ಅವನು ಏನನ್ನೂ ಹೇಳಲಾರನು. ಅದುವೇ ಆತ್ಮನ ಸ್ಥಿತಿ, ಅದುವೇ ಮೋಕ್ಷವೆಂದು ಹೇಳಬಹುದು.

ಮಾಡಿದಲ್ಲದೆ ಮನೆಯೊಳಗಾಗದು ಬಯಲು
ಕಣ್ಣು ಕಂಡಲ್ಲದೆ ಪರವಾಗದು
ಮನ ಪರವೆಂದರೆ ಪರವಾಗದು
ಈ ಪರಿಯ ನರರೆತ್ತ ಬಲ್ಲರೈ? ರಾಮನಾಥ.[43]

ಜೀವಿಯು ತನ್ನ ಆತ್ಮನನ್ನು ತಾನೇ ಅರಿತಾಗ ಮಾತ್ರ ಅದರ ಇರುವಿಕೆಯ ಜ್ಞಾನವುಂಟಾಗಿ ಅವನೂ ಅದೇ ಸ್ವರೂಪನಾಗಿ ಪರಮಸುಖದಲ್ಲಿ ಇರುವನು.

ತನ್ನೊಳಗಿನ ಅರಿವು ತನ್ನಲ್ಲಿಯೇ ತೋರಿದಲ್ಲದೆ
ಅನ್ಯರಲ್ಲಿ ತೋರಬಲ್ಲುದೆ?
ತನ್ನಲ್ಲಿ ತಾನೆ ಇದ್ದಿತ್ತು
ತನ್ನ ತಾನೆ ಪಕ್ವಕ್ಕೆ ಬಂದು
ತನ್ನಲ್ಲಿ ಹಟ್ಟಿದ ನೆನಹಿನ ಬಿನ್ನಾಣವನೇನೆಂಬೆನಯ್ಯಾ ರಾಮನಾಥ.[44]

ಮನೆಯಲ್ಲಿ ಅಟ್ಟೆನೆಂದಡೆ ಹೊಟ್ಟೆ ತುಂಬಿದುದುಂಟೆ?
ಕೈಮುಟ್ಟಿ ಉಣ್ಣದನ್ನಕ್ಕರ!
ತಾನು ವಚನಾಗಮದ ಪ್ರಸಂಗವ ಬಲ್ಲೆನೆಂದಡೆ
ಬಲ್ಲವರಾರೂ ಇಲ್ಲವೆಂದಡೆ
ಆತ ತನ್ನ ನುಡಿಗೆ ಸಿಲುಕುವನೆ?
ಇಲ್ಲ ಕಾಣಾ! ರಾಮನಾಥ.[45]

ತನ್ನ ಅರಿವು ತನಗೆ ಆಗಬೇಕೆ ವಿನಹ ಅನ್ಯರಿಗಾಗದು. ಸಕ್ಕರೆಯ ತಿಂದ ಅನುಭವ ತನಗೆ ಮಾತ್ರ ರುಚಿಸಿದಂತೆ, ಸ್ವಯಂ ಸಿದ್ಧನಾದ ಆತ್ಮಜ್ಞಾನವು ಚಿಂತನ ಶೀಲರಿಗೆ ಮಾತ್ರ ವೇದ್ಯವಾಗುತ್ತದೆ. ಸ್ವಪ್ರಯತ್ನದಿಂದ ಆತ್ಮಜ್ಞಾನ ಸಾಧ್ಯ. ಬೇರೆಯವರು ಆತ್ಮಜ್ಞಾನಿಗಳಾದರೆ ನಮಗೇನು ಪ್ರಯೋಜನ? ಅವರು ಊಟ ಮಾಡಿದರೆ ಅವರ ಹೊಟ್ಟೆ ತುಂಬುತ್ತದೆ, ನಮ್ಮದಲ್ಲ. ಎಂದು ಉದಾಹರಿಸುತ್ತ ನಮ್ಮನ್ನು ನಾವು ಅರಿತು ಮೋಕ್ಷವನ್ನು ಪಡೆಯಬೇಕೆಂದು ದಾಸಿಮಯ್ಯನವರ ನಿಲುವು. ಇದನ್ನೇ ಈ ಕೆಳಗಿನ ವಚನದಲ್ಲಿ ಅವರು ತಿಳಿಸಿದ್ದಾರೆ.

ಸತಿಯರ ಸಂಗವನು ಅತಿಶಯ ಗ್ರಾಸವನು
ಪೃಥ್ವಿಗೀಶ್ವರನ ಪೂಜೆಯನು
ಅರಿವುಳ್ಳಡೆ ಹೆರರ ಕೈಯಿಂದ ಮಾಡಿಸುವರೆ ರಾಮನಾಥ.[46]

ಜಗತ್ತಿನಲ್ಲಿರುವ ಜೀವಿಗಳು ತಮ್ಮ ದೇಹ ಇರುವುದರೊಳಗೆ ಪರಮಪಾವನವಾದ ಮೋಕ್ಷ ರೂಪವಾದ ಈಶ್ವರನನ್ನು ಹೊಂದಲು ಸತ್ಯ ಮಾರ್ಗದಲ್ಲಿ, ತಪಸ್ಸಿನ ಜೊತೆಗೆ ಬ್ರಹ್ಮಚರ್ಯ ವ್ರತವನ್ನಾಚರಿಸುತ್ತ ಅನುಭವಿಗಳ (ಸತ್ಯವಂತರ) ಜೊತೆಗೆ ಆತ್ಮಜ್ಞಾನ ಅಥವಾ ಮೋಕ್ಷದ ಬಗ್ಗೆ ಚಿಂತನೆಗೈಯುತಿದ್ದರೆ ಅದುವೇ ತೀರ್ಥ ಸ್ವರೂಪವಾದ ಮೋಕ್ಷ. ಅದುವೇ ಸತ್ಯ ಸ್ವರೂಪ. ಅದುವೇ ಈಶ್ವರ ಸನ್ನಿಧಿ ಎಂದು ತಮ್ಮ ವಚನದಲ್ಲಿ ಹೇಳಿದ್ದಾರೆ.

ಸತ್ಯರ ನುಡಿ ತೀರ್ಥ, ಭಕ್ತಿಯ ನಡೆ ತೀರ್ಥ,
ಮುಕ್ತಿಯ ಪ್ರಸಂಗ ಉಳ್ಳಡೆ ತೀರ್ಥ,
ಹರಿವ ನದಿ ಎತ್ತಣಾ ತೀರ್ಥ ರಾಮನಾಥ.[47]

ಮುಕ್ತಿ ಅಥವಾ ಈಶ್ವರ ಸನ್ನಿಧಿ ಹೊಂದಲು ದಾಸಿಮಯ್ಯನವರು ಸತ್ಯದ ಮಾರ್ಗವನ್ನು ಅನುಸರಿಸಿದ್ದಾರೆ. ಸತ್ಯರ ಮಾರ್ಗ ಹಿಡಿದು ಅವರ ಅನುಶಾಸನದಲ್ಲಿ ಭಕ್ತಿಮಾರ್ಗವನ್ನು (ತಪಸನ್ನು) ಆಚರಿಸಿ, ಸತ್ಯವಂತರ ಜೊತೆಗೆ ಈಶ್ವರನ ಚಿಂತನೆಗೈದು ಮೋಕ್ಷ ಸಂಪಾದಿಸಿಕೊಂಡಿದ್ದಾರೆ. ಈ ಲೌಕಿಕ ಜೀವನದಿಂದ ಮುಕ್ತಿ ಹೊಂದಲು ನಡೆ–ನುಡಿಗಳು ಸತ್ಯ ಸ್ವರೂಪಗಳಾಗಿದ್ದು, ಭಕ್ತಿ, ವಿರಕ್ತಿಗಳನ್ನುಳ್ಳವರಾಗಿದ್ದಾಗ ಮಾತ್ರ ತೀರ್ಥ ಸ್ವರೂಪವಾದ ಮುಕ್ತಿ ದೊರೆಯುತ್ತದೆ.

ದೇವರ ದಾಸಿಮಯ್ಯನವರ ವಚನಗಳು ತಾತ್ತ್ವಿಕವಾಗಿ ಯೋಚಿಸಲಾರದಷ್ಟು ಸರ್ವತೋಮುಖ ಅಭಿವೃದ್ಧಿ ಹೊಂದಿವೆ. ವಚನಗಳಲ್ಲಿನ ಜ್ಞಾನ ಭಂಡಾರ ಅಕ್ಷಯವಾಗುತ್ತಲೇ ಸಾಗಿದೆ. ಆದರೂ 'ಯಥಾದೃಷ್ಟಿ ತಥಾಸೃಷ್ಟಿ' ಎಂಬ ಉಕ್ತಿಯಂತೆ ವಚನಗಳಲ್ಲಿನ ತಾತ್ತ್ವಿಕ ವಿಷಯಗಳ ವಿವರಣೆಯನ್ನು ಪರಿಚಯಿಸಲಾಗಿದೆ.

ಅಡಿಟಿಪ್ಪಣಿಗಳು

1. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು 2001, ವ.ಸಂ 834, ಪು–257.
2. ಅದೇ, ವ.ಸಂ 719, ಪು–232.
3. ಅದೇ, ವ.ಸಂ 725, ಪು–233.
4. ಅದೇ, ವ.ಸಂ 822, ಪು–254.

5. ಅದೇ, ವ.ಸಂ 886, ಪು–264.

6. ಅದೇ, ವ.ಸಂ 747, ಪು–237.

7. ಅದೇ, ವ.ಸಂ 753, ಪು–239.

8. ಅದೇ, ವ.ಸಂ 812, ಪು–252.

9. ಅದೇ, ವ.ಸಂ 734, ಪು–235. ವ.ಸಂ 748, ಪು–238. ವ.ಸಂ 776, ಪು–244.

10. ಅದೇ, ವ.ಸಂ 716, ಪು–231.

11. ಅದೇ, ವ.ಸಂ 713, ಪು–230.

12. ಅದೇ, ವ.ಸಂ 767, ಪು–242.

13. ಅದೇ, ವ.ಸಂ 872 ಪು–265.

14. ಅದೇ, ವ.ಸಂ 811, ಪು–252.

15. ಅದೇ, ವ.ಸಂ 759, ಪು–240.

16. ಅದೇ, ವ.ಸಂ 757, ಪು–239.

17. ಅದೇ, ವ.ಸಂ 750, ಪು–238.

18. ಅದೇ, ವ.ಸಂ 800, ಪು–249.

19. ಅದೇ, ವ.ಸಂ 768, ಪು–242.

20. ಅದೇ, ವ.ಸಂ 754, ಪು–238.

21. ಅದೇ, ವ.ಸಂ 747, ಪು–237.

22. ಅದೇ, ವ.ಸಂ 730, ಪು–234.

23. ಅದೇ, ವ.ಸಂ 734, ಪು–235. ವ.ಸಂ 748, ಪು–238. ವ.ಸಂ 776, ಪು–244.

24. ಅದೇ, ವ.ಸಂ 807, ಪು–251.

25. ಅದೇ, ವ.ಸಂ 863, ಪು–263.

26. ಅದೇ, ವ.ಸಂ 753, ಪು–239.

27. ಅದೇ, ವ.ಸಂ 812, ಪು–252.

28. ಅದೇ, ವ.ಸಂ 725, ಪು–233.

29. ಅದೇ, ವ.ಸಂ 822, ಪು–254.

30. ಅದೇ, ವ.ಸಂ 834, ಪು–257.

31. ಅದೇ, ವ.ಸಂ 840, ಪು–258.

32. ಅದೇ, ವ.ಸಂ 790, ಪು–247.

33. ಅದೇ, ವ.ಸಂ 798, ಪು–249.

34. ಅದೇ, ವ.ಸಂ 837, ಪು–257.

35. ಅದೇ, ವ.ಸಂ 724, ಪು–233.

36. ಅದೇ, ವ.ಸಂ 770, ಪು–242.

37. ಅದೇ, ವ.ಸಂ 710, ಪು–230.

38. ಅದೇ, ವ.ಸಂ 814, ಪು–253.

39. ಅದೇ, ವ.ಸಂ 845, ಪು–259.

40. ಅದೇ, ವ.ಸಂ 791, ಪು–248.

41. ಅದೇ, ವ.ಸಂ 790, ಪು–247.

42. ಅದೇ, ವ.ಸಂ 786, ಪು–246.

43. ಅದೇ, ವ.ಸಂ 841, ಪು–258.

44. ಅದೇ, ವ.ಸಂ 798, ಪು–249.

45. ಅದೇ, ವ.ಸಂ 837, ಪು–257.

46. ಅದೇ, ವ.ಸಂ 862, ಪು–263.

47. ಅದೇ, ವ.ಸಂ 860, ಪು–262.

ಅಧ್ಯಾಯ 6

ದಶೋಪನಿಷತ್ತು
ಮತ್ತು
ದೇವರ ದಾಸಿಮಯ್ಯನವರ
ವಚನಗಳು

ತೌಲನಿಕ ಅಧ್ಯಯನ

ಅಧ್ಯಾಯ 6

ದಶೋಪನಿಷತ್ತು
ಮತ್ತು
ದೇವರ ದಾಸಿಮಯ್ಯನವರ
ವಚನಗಳು
ತೌಲನಿಕ ಅಧ್ಯಯನ

6.1 ಬ್ರಹ್ಮ
6.2 ಆತ್ಮ
6.3. ಜೀವ
6.4. ಜಗತ್ತು
6.5. ಮೋಕ್ಷ
6.6. ಶಾಂತಿ ಮಂತ್ರಗಳು
6.7. ಸಾಮಾಜಿಕ ಮತ್ತು ಧಾರ್ಮಿಕ ಚಿಂತನ
6.8. ಗುರು–ಶಿಷ್ಯರ ಸಂಬಂಧ
6.9. ನೈತಿಕಾಚರಣೆಗಳು
6.10. ಸ್ತ್ರೀಯರ ಸ್ಥಾನ–ಮಾನ

ಅಧ್ಯಾಯ 6

ದಶೋಪನಿಷತ್ತು
ಮತ್ತು ದೇವರ ದಾಸಿಮಯ್ಯನವರ ವಚನಗಳು
ತೌಲನಿಕ ಅಧ್ಯಯನ

ನಾಲ್ಕನೆಯ ಮತ್ತು ಐದನೆಯ ಅಧ್ಯಾಯಗಳಲ್ಲಿ ದಶೋಪನಿಷತ್ತು ಮತ್ತು ದೇವರ ದಾಸಿಮಯ್ಯನವರ ವಚನಗಳ ತಾತ್ತ್ವಿಕ ಅಧ್ಯಯನ ಮಾಡಲಾಗಿದೆ. ಆ ಎರಡು ಅಧ್ಯಾಯಗಳಲ್ಲಿ ದಶೋಪನಿಷತ್ತು ಮತ್ತು ದೇವರ ದಾಸಿಮಯ್ಯನವರ ವಚನಗಳಲ್ಲಿ ಬರುವ ಅತ್ಯಂತ ಮಹತ್ವದ ಅಂಶಗಳಾದ ಬ್ರಹ್ಮ, ಜೀವ, ಜಗತ್ತು, ಆತ್ಮ, ಮತ್ತು ಮೋಕ್ಷಗಳನ್ನು ಕುರಿತು ಚರ್ಚಿಸಲಾಗಿದೆ. ಪ್ರಸ್ತುತ ಆರನೆಯ ಅಧ್ಯಾಯದಲ್ಲಿ ದಶೋಪನಿಷತ್ತು ಮತ್ತು ದೇವರ ದಾಸಿಮಯ್ಯನವರ ವಚನಗಳ ತೌಲನಿಕ ಅಧ್ಯಯನ ಮಾಡಲಾಗುತ್ತದೆ. ಹಿಂದಿನ ನಾಲ್ಕು ಮತ್ತು ಐದನೆಯ ಅಧ್ಯಾಯದಲ್ಲಿ ಮಂಡಿಸಿದ ತಾತ್ತ್ವಿಕ ಅಧ್ಯಯನವನ್ನು ಈ ಅಧ್ಯಾಯದಲ್ಲಿ ತೌಲನಿಕವಾಗಿ ಚರ್ಚಿಸಲಾಗಿದೆ. ಇಲ್ಲಿ ಸಹ ಬ್ರಹ್ಮ, ಜೀವ, ಜಗತ್ತು, ಮೊದಲಾದ ವಿಷಯಗಳನ್ನು ಚರ್ಚಿಸಲಾಗಿದೆ.

6.1. ಬ್ರಹ್ಮ

ಬ್ರಹ್ಮ ಶಬ್ದಕ್ಕೆ ಮೊಟ್ಟಮೊದಲು ಬ್ರಹ್ಮವೆಂಬ ಅರ್ಥವನ್ನು ಕೊಟ್ಟವರು ಉಪನಿಷತ್ತಿನ ಋಷಿಗಳು. ಅದನ್ನೇ ವಚನಕಾರರು ಈಶ್ವರನೆಂದು ಕರೆದಿದ್ದಾರೆ. ಇವರೀರ್ವರು ಬ್ರಹ್ಮನನ್ನು ಸಗುಣ ಮತ್ತು ನಿರ್ಗುಣ ರೀತಿಯ ಉಪಾಸನೆ ಮಾಡಿರುವು ದನ್ನು ಕಾಣುತ್ತೇವೆ. ಅವರು ಈ ಜಗತ್ತಿನ ಹಿಂದಿರುವ ಸತ್ಯವನ್ನು ಹುಡುಕುತ್ತ ಹೋಗಿ ಕೊನೆಗೆ ಯಾವ ತತ್ತ್ವಕ್ಕೆ ಬಂದು ನಿಂತಿರುವರೋ ಆ ತತ್ತ್ವವನ್ನು ಅವರು ಬ್ರಹ್ಮ ಇಲ್ಲವೆ ಈಶ್ವರನೆಂದು ಕರೆದರು.

ಜಗತ್ತಿಗೆ ಮೂಲ ಕಾರಣವಾದದ್ದು 'ಬ್ರಹ್ಮ' ಎಂದು ಉಪನಿಷತ್ತುಗಳು ಕರೆದು, ಅವನಿಗೆ ಆತ್ಮ, ಸತ್, ಅಕ್ಷರ, ಆಕಾಶ, ಭೂಮಾ ಮೊದಲಾದ ಹೆಸರುಗಳಿಂದ

ಕರೆದಿರುವುದನ್ನು ಕಾಣುತ್ತೇವೆ. ಅವನಿಂದಲೇ ಜಗತ್ತು ಹುಟ್ಟುತ್ತದೆ, ಅವನಿಂದಲೇ ಜಗತ್ತು ಪೋಷಿಸಲ್ಪಡುತ್ತದೆ. **"ಬ್ರಹ್ಮಾ ದೇವಾನಾಂ ಪ್ರಥಮಃ ಸಂಬಭೂವ ವಿಶ್ವಸ್ಯ ಕರ್ತಾ ಭುವನಸ್ಯ ಗೋಪ್ತಾ"**[1] ಜಗತ್ತಿನ ರಚನೆಯ ಪ್ರಾರಂಭದಲ್ಲಿ ಎಲ್ಲಾ ದೇವತೆಗಳಿಗಿಂತ ಪೂರ್ವದಲ್ಲಿ ಬ್ರಹ್ಮನೊಬ್ಬನೆ ಇದ್ದನು. ಅವನಿಂದಲೇ ಜಗತ್ತಿನ ಉತ್ಪತ್ತಿಯಾಯಿತ್ತೆಂದು ಮುಂಡಕವು ಸಾರುತ್ತದೆ.

ಕೇನೋಪನಿಷತ್ತಿನಲ್ಲಿ ಬ್ರಹ್ಮನ ವರ್ಣನೆಯು ಪ್ರಶ್ನೆಯಿಂದ ಪ್ರಾರಂಭವಾಗಿ, ಯಾವುದರ ಮೂಲಕ ಚಕ್ಷು, ಶ್ರೋತ್ರ, ವಾಣಿ ಮೊದಲಾದ ಇಂದ್ರಿಯಗಳು ಶರೀರದ ಜೊತೆಗೆ ಯುಕ್ತವಾಗಿ, ಮನಸ್ಸು ಮತ್ತು ಪ್ರಾಣಗಳಿಗೆ ಯಾರು ಪ್ರೇರೇಪಿಸುತ್ತಾರೆ? ಯಾರಿಂದ ಪ್ರೇರಿತವಾಗಿ ಮನಸ್ಸು ಚಲಿಸುತ್ತದೆ? ಯಾರಿಂದ ಪ್ರೇರಿತವಾಗಿ ಪ್ರಾಣವು ತನ್ನ ಕಾರ್ಯದಲ್ಲಿ ತೊಡಗುತ್ತದೆ? ಯಾರ ಇಚ್ಛೆಯಿಂದ ವ್ಯಕ್ತಿಗಳು ಮಾತನಾಡುತ್ತಾರೆ? ಯಾರು ಕಣ್ಣು ಕಿವಿಗಳನ್ನು ತಮ್ಮ ಕಾರ್ಯದಲ್ಲಿ ತೊಡಗುವಂತೆ ಪ್ರೇರೇಪಿಸುತ್ತಾರೆ? ಎಂದು ಉಪನಿಷತ್ತು ಪ್ರಶ್ನಿಸಿದೆ.

ಕೇನೇಷಿತಂ ಪತತಿ ಪ್ರೇಷಿತಂ ಮನಃ ಕೇನ ಪ್ರಾಣಃ ಪ್ರಥಮ ಪ್ರೈತಿ ಯುಕ್ತಃ।

ಕೇನೇಷಿತಾಂ ವಾಚಾಮಿಮಾಂ ವದಂತಿ ಚಕ್ಷುಃ ಶ್ರೋತ್ರಂ ಕ ಉ ದೇವೋ ಯುನಕ್ತಿ॥[2]

ಜೀವಿಯ ಮನಸ್ಸು ಪ್ರವೃತ್ತಿ–ನಿವೃತ್ತಿಗಳ ವಿಷಯದಲ್ಲಿ ಸ್ವತಂತ್ರವಾಗಿಲ್ಲ. ಹಾಗೇನಾಗಿದ್ದರೆ ಅನಿಷ್ಟವಾದ ಚಿಂತನೆ ಮಾಡಿ ಬೇಡವಾದ ದುಃಖವನ್ನುಂಟು ಮಾಡುವ ಕರ್ಮಗಳಲ್ಲಿ ಮನಸ್ಸು ಪ್ರವರ್ತಿಸುತ್ತಿರಲಿಲ್ಲ. ಇದಕ್ಕೆ ಪ್ರೇರಣೆ ಮಾಡುವವರು ಯಾರು? ಪ್ರಾಣವು ಸರ್ವೇಂದ್ರಿಯಗಳಿಗಿಂತ ಪ್ರಧಾನವಾಗಿದ್ದು ಎಲ್ಲಕ್ಕೂ ಚೇತನ ಕೊಟ್ಟು ಕಾರ್ಯ ಪ್ರವೃತಿಯಲ್ಲಿ ತೊಡಗುವಂತೆ ಮಾಡುತ್ತದೆ. ಇದು ದೇಹದಲ್ಲಿ ಪ್ರಾಣ, ಅಪಾನ, ವ್ಯಾನ, ಸಮಾನ ಮತ್ತು ಉದಾನಗಳಾಗಿ ಕಾರ್ಯ ನಿರ್ವಹಿಸುತ್ತದೆ. ಇದಕ್ಕೆ ಪ್ರೇರಕರಾರು? ಜೀವಿಗಳಾಡುವ ವಾಣಿಗೆ, ಚಕ್ಷುವಿಗೆ, ಶ್ರೋತೃಗಳಿಗೆ ಪ್ರೆರಣೆ ಕೊಡುವವರಾರು? ಇವುಗಳ ಹಿಂದೆ ಒಂದು ಶಕ್ತಿ ಇರಬಹುದು ಅದು ಯಾವುದು? ಎಂಬುದು ಕೇನೋಪನಿಷತ್ತಿನ ಪ್ರಶ್ನೆಯಾಗಿದೆ. ಇದಕ್ಕೆ ಉತ್ತರವು ಈ ಮಂತ್ರದಲ್ಲಿಯೇ ಅಡಕವಾಗಿದೆ. ಇವುಗಳೆಲ್ಲದರ ಹಿಂದೆ ಆತ್ಮನ ಅಥವಾ ಬ್ರಹ್ಮನ ಶಕ್ತಿ ಅಡಗಿದೆ ಎನ್ನುವುದು ಕೇನೋಪನಿಷತ್ತು.

ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನಗಳೆಂಬ ಪಂಚ ಪ್ರಾಣಗಳಿಗೆ, ಮನ, ಚಿತ್ತ, ಬುದ್ಧಿ ಮತ್ತು ಅಹಂಕಾರಗಳೆಂಬ ಅಂತಃಕರಣಗಳಿಗೆ, ಚಕ್ಷು, ಶೋತ್ರ, ಜೀವ, ಪ್ರಾಣ ಮತ್ತು ತ್ವಕ್‌ಗಳೆಂಬ ಜ್ಞಾನೇಂದ್ರಿಯಗಳಿಗೆ, ಮತು ವಾಕ್, ಪಾಣಿ, ಪಾದ, ಪಾಯು ಮತ್ತು ಉಪಸ್ಥಗಳೆಂಬ ಕರ್ಮೇಂದ್ರಿಯಗಳಿಗೆ ಪ್ರೇರಣೆ ಕೊಡುವವ ಹಾಗೂ ಜೊತೆಗೆ ಇರುವವ ಬ್ರಹ್ಮನಾಗಿದ್ದಾನೆ. ಅವನನ್ನು ತಿಳಿದುಕೊಂಡರೆ ಎಲ್ಲವನ್ನು ತಿಳಿದು ಕೊಂಡಂತೆ. ಹಾಗೂ ಅಂತಹ ವ್ಯಕ್ತಿಗಳು ಮೃತ್ಯುವಿನಿಂದ ಬಿಡುಗಡೆ ಹೊಂದಿ ಅಮೃತರಾಗುತ್ತಾರೆ ಎಂದು ಕೇನೋಪನಿಷತ್ತು ಸಾರುತ್ತದೆ.

ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೋ ಯದ್ವಾಚೋ ಹ ವಾಚಂ ಸ ಉ ಪ್ರಾಣಸ್ಯ ಪ್ರಾಣಃ।
ಚಕ್ಷುಷಶ್ಚಕ್ಷುರತಿಮುಚ್ಯ ಧೀರಾಃ ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ॥[3]

ದಾಸಿಮಯ್ಯನವರು ಉಪನಿಷತ್ತಿನ ಮಂತ್ರಗಳಂತೆ ತಮ್ಮ ವಚನಗಳಲ್ಲಿ ಶರೀರಾದಿ ಇಂದ್ರಿಯಗಳಿಗೆ ಪ್ರೇರಕ ಅಷ್ಟೆ ಅಲ್ಲ, ಇಡೀ ಶರೀರೇಂದ್ರಿಯಗಳು ಈಶ್ವರನ ಕೊಡುಗೆಗಳಾಗಿವೆ ಎಂದಿದ್ದಾರೆ.

"ಕಾಯ ನಿಮ್ಮದಾನ ಜೀವನಿಮ್ಮ ದಾನ"[4]

ಯಾವುದು ಮನಸ್ಸು, ಪ್ರಾಣ, ಮಾತುಗಳಿಗೆ ಪ್ರೇರಕವಾಗಿ ಅವುಗಳಿಗೆ ಕಾರ್ಯಪ್ರವೃತ್ತಿಯನ್ನಾಗಿಸುತ್ತದೆಯೋ ಮತ್ತು ಯಾವುದು ಕಣ್ಣು ಮೊದಲಾದ ಇಂದ್ರಿಯಗಳಿಗೆ ಆಜ್ಞೆ ಮಾಡುತ್ತದೆಯೋ, ಅದೇ "ಬ್ರಹ್ಮ" ಅದು ಪ್ರಾಣಕ್ಕೆ ಪ್ರಾಣ, ಕಿವಿಗೆ ಕಿವಿ, ಕಣ್ಣಿಗೆ ಕಣ್ಣಾಗಿದೆ ಎನ್ನುವುದು ಕೇನೋಪನಿಷತ್ತು.

ನ ತತ್ರ ಚಕ್ಷುರ್ಗಚ್ಛತಿ ನ ವಾಗ್ಗಚ್ಛತಿ ನೋ ಮನಃ।
ನ ವಿದ್ಮೋ ನ ವಿಜಾನೀಮೋ ಯಥೈದನುಶಿಷ್ಯಾತ್॥[5]

ಕೇನೋಪನಿಷತ್ತು ಈಶ್ವರನು ಶ್ರೋತೃವಿಗೆ ಶೋತೃವಾಗಿ, ಮನಸ್ಸಿಗೆ ಮನಸ್ಸಾಗಿ, ವಾಕ್ಕಿಗೆ ವಾಕ್ಕಾಗಿ, ಪ್ರಾಣಕ್ಕೆ ಪ್ರಾಣಾಗಿ, ಚಕ್ಷುವಿಗೆ ಚಕ್ಷುನಾಗಿದ್ದಾನೆಂದು ಹೇಳಿದರೆ, ದಾಸಿಮಯ್ಯನವರು ಈಶ್ವರನು ಬಯಲು ರೂಪಾಗಿದ್ದಾನೆ. ಅವನ ಬಗ್ಗೆ ಹೇಳೋಣವೆಂದರೆ, ನಾಲಿಗೆಗೆ ಸಿಗನು. ನೋಡೋಣವೆಂದರೆ ಕಣ್ಣಿಗೆ ಕಾಣನು. ನುಡಿಗೆ ಸಿಗದೆ ಇರುವುದರಿಂದ ಆಡಲುಬಾರದು. ಚಕ್ಷುವಿಗೆ ಕಾಣದೆ ಇರುವುದರಿಂದ ನೋಡಲುಬಾರದು. ಎಂದು ಮೊದಲಾಗಿ ತಮ್ಮ ವಚನದಲ್ಲಿ ನುಡಿದಿದ್ದಾರೆ.

ಆಡಬಾರದ ಬಯಲು ನೋಡಬಾರದ ಬಯಲು
ನುಡಿಯಬಾರದ ಬಯಲು ಹಿಡಿಯಬಾರದ ಬಯಲು
ಈ ಒಡಲಿಲ್ಲದ ಬಯಲೊಳಗೆ ಅಡಗಿರ್ದ ಭೇದವ
ಈ ಲೋಕದ ಜಡರೆತ್ತ ಬಲ್ಲರೈ? ರಾಮನಾಥ.[6]

ನಿರ್ಗುಣ ನಿರಾಕಾರ ನಿರ್ಬಯಲದ ಬ್ರಹ್ಮನನ್ನು ತಿಳಿಯಲು ದೇಹೇಂದ್ರಿಯ ಗಳಿಂದ ಸಾಧ್ಯವಿಲ್ಲ. ಒಡಲಿಲ್ಲದ ಬಯಲೊಳಗೆ ಅಡಗಿರುವುದರ ಲಕ್ಷಣವನ್ನು ಹೇಳೋಣವೆಂದರೆ ನುಡಿಗೆ ಸಿಲುಕುವವನಲ್ಲ. ಹಿಡಿಯಲು ಹೋದರು ಕೈಗೆ ಸಿಗುವವನಲ್ಲ. ಸುಡಲೂ ಬಾರದಂತೆ ಬಯಲೊಳಗೆ ಬಯಲಾಗಿ ಈಶ್ವರ ಅಡಗಿ ಕೊಂಡಿದ್ದಾನೆ. ಅಂತಹ ಈಶ್ವರನನ್ನು ಲೋಕದ ಅಜ್ಞಾನಿ ಜಡಜೀವಿಗಳು ತಿಳಿಯಲಾರರು.

ಅಶಬ್ದಮಸ್ಪರ್ಶಮರೂಪಮವ್ಯಯಂ ತಥಾsರಸಂ ನಿತ್ಯಮಗಂಧವಚ್ಚ ಯಚ್ಚ।
ಅನಾದ್ಯನಂತಂ ಮಹತಃ ಪರಂ ಧ್ರುವಂ ನಿಚಾಯ್ಯ ತಂ ಮೃತ್ಯುಮುಖಾತ್ಪ್ರಮುಚ್ಯತೇ॥[7]

ದಾಸಿಮಯ್ಯನವರ "ಆಡಬಾರದ ಬಯಲು ನೋಡಬಾರದ ಬಯಲು" ಎನ್ನುವ ವಚನಕ್ಕೆ ಸಮಾನಾರ್ಥವನ್ನು ಕಠೋಪನಿಷತ್ತಿನ ಪ್ರಸ್ತುತ ಮಂತ್ರದಲ್ಲಿ ಕಾಣಬಹುದು. ಬ್ರಹ್ಮನು ಅಶಬ್ದ, ಅಸ್ಪರ್ಶ, ಅರೂಪ, ಅವ್ಯಯ, ರಸಹೀನ, ನಿತ್ಯ ಮತ್ತು ಗಂಧ ರಹಿತನಾಗಿದ್ದಾನೆ. ಅನಾದಿ, ಅನಂತ ಮಹತತ್ತ್ವಗಿಂತಲೂ ಶ್ರೇಷ್ಠ ಮತ್ತು ನಿಶ್ಚಲವಾಗಿರುವ ಬ್ರಹ್ಮತತ್ತ್ವವನ್ನು ತಿಳಿದವನು ಮೃತ್ಯುವಿನ ಮುಖದಿಂದ ಬಿಡುಗಡೆ ಹೊಂದುತ್ತಾನೆ.

ಬ್ರಹ್ಮನ ಸ್ವರೂಪವನ್ನು ಹಾಗೂ ಅವನ ನಿಜ ರೂಪದಿಂದ ತಿಳಿದುಕೊಳ್ಳುವುದು ತುಂಬ ಕಷ್ಟ. ಏಕೆಂದರೆ ಅವನು ಮತ್ತೊಂದರಂತೆ ಇರುವ ವಸ್ತುವಲ್ಲ. ಅಂದರೆ ತನ್ನಂತಿರುವ ಅಥವಾ ತನ್ನಂತಿರದ ಎರಡನೆಯ ವಸ್ತುವಲ್ಲ. ಅವನು ತನ್ನ ಸ್ವರೂಪದಲ್ಲಿ ಅವಯವವೇ ಮೊದಲಾದ ಯಾವುದೊಂದು ಇಲ್ಲದ ಒಂದೇ ರೂಪನಾಗಿದ್ದಾನೆ. ಆದ್ದರಿಂದ ಅವನನ್ನು ಏಕ, ಅದ್ವಿತೀಯನೆಂದು ಕರೆಯುತ್ತಾರೆ. ಬ್ರಹ್ಮನು ಸತ್ ಚಿತ್ ಆನಂದ ನಿತ್ಯ ಪರಿಪೂರ್ಣನಾಗಿದ್ದಾನೆ. ನಿರಾಕಾರ, ಸರ್ವಶಕ್ತಿವಂತ, ಅಮರ, ಅಜನ್ಮ, ಅನಾದಿ, ಅನುಪಮ, ಸರ್ವಾಧಾರ, ಸರ್ವೇಶ್ವರನಾಗಿದ್ದಾನೆ. ಅವನು ಸರ್ವಾಂತರ್ಯಾಮಿ, ಕರ್ತೃತ್ವ, ಭೋಕೃತ್ವ ಶಕ್ತಿವುಳ್ಳವನಾಗಿದ್ದಾನೆ. ಅವನು ಸರ್ವಜ್ಞ, ಅಜರ, ಅಭಯ, ನಿತ್ಯ ಪವಿತ್ರ ಜಗತ್‌ಕರ್ತನಾಗಿ ಉಪಾಸ್ಯದೇವನಾಗಿದ್ದಾನೆ.

ಅನೇಜದೇಕಂ ಮನಸೋ ಜವೀಯೋ ನೈನದ್ದೇವಾ ಆಪ್ನುವನ್ಪೂರ್ವಮರ್ಷತ್।
ತದ್ಧಾವತೋsನ್ಯಾನತ್ಯೇತಿ ತಿಷ್ಠತ್ತಸ್ಮಿನ್ನಪೋ ಮಾತರಿಷ್ವಾದಧಾತಿ॥[8]

ಬ್ರಹ್ಮನು ಅಲುಗಾಡದಿರುವ, ತ್ರಿಕಾಲಾತೀತನಾಗಿರುವ ತತ್ತ್ವನಾಗಿದ್ದಾನೆ. ಆದರೂ ಮನಸ್ಸಿಗಿಂತಲೂ ವೇಗವುಳ್ಳವನಾಗಿರುವುದರಿಂದ ಮನಸ್ಸು ಮೊದಲಾದ ಇಂದ್ರಿಯಗಳು ಹಿಡಿಯಲೆತ್ನಿಸಿದರೆ ಸಿಗದೆ ಹೋಗುತ್ತಾನೆ. ಅವನು ಸರ್ವತ್ರವಿದ್ದರೂ ಹುಡುಕಲು ಹೋದವರನ್ನು ಮೀರಿನಿಂತಿದ್ದಾನೆ ಆದರೆ ಅವನ ಆಧಾರದಿಂದ ಜಗತ್ತಿನ ವ್ಯವಹಾರಗಳು ನಡೆದಿವೆ. ಇದೆ ಅರ್ಥವನ್ನಿಟ್ಟುಕೊಂಡು ದಾಸಿಮಯ್ಯನವರು ವ್ಯಾವಹಾರಿಕ ದೃಷ್ಟಾಂತಗಳೊಂದಿಗೆ ದೇಹದೊಳಗೆ (ಆತ್ಮ) ಬ್ರಹ್ಮನಿದ್ದರೂ ಕಾಣಿಸುತ್ತಿಲ್ಲವೆಂದಿದ್ದಾರೆ.

ಮರನೊಳಗಣ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರಿಸಿದೆ
ಶರೀರದೊಳಗಾತ್ಮನನಾರು ಕಾಣದಂತಿರಿಸಿದೆ.
ನೀ ಬೆರಸಿದ ಭೇದಕ್ಕೆ ಬೆರಗಾದೆನಯ್ಯ! ರಾಮನಾಥ.[9]

ಬ್ರಹ್ಮನು ಚಲನರಹಿತನಾಗಿದ್ದು ಮನಸ್ಸಿಗಿಂತಲೂ ವೇಗನಾಗಿದ್ದಾನೆ. ಇಂದ್ರಿಯಗಳಿಗೆ ಅವನು ಸಿಲುಕುವುದಿಲ್ಲ. ಆದರೆ, ಇಂದ್ರಿಯಗಳು ಅವನ ಅಧೀನದಲ್ಲಿವೆ.

ತದೇಜತಿ ತನ್ನೈಜತಿ ತದ್ದೂರೇ ತದ್ವಂತಿಕೇ।
ತದಂತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ॥[10]

ಬ್ರಹ್ಮನು ಚಲಿಸುತ್ತಾನೆ. ಮತ್ತು ಚಲಿಸುವುದಿಲ್ಲ. ಅವನು ದೂರದಲ್ಲಿದ್ದಾನೆ. ಹತ್ತಿರದಲ್ಲಿಯೂ ಇದ್ದಾನೆ. ಬ್ರಹ್ಮನು ಜಗತ್ತಿನ ವಸ್ತುಗಳ ಒಳ ಮತ್ತು ಹೊರಗೂ ಇದ್ದಾನೆ ಎಂಬುದನ್ನು ದಾಸಿಮಯ್ಯನವರ ಮಾತಿನಲ್ಲಿ ಹೇಳುವುದಾದರೆ,

ಮಣಿಗಣ ಸೂತ್ರದಂತೆ ತ್ರಿಣೆಯ ನೀನಿಪ್ಪೆಯಯ್ಯ
ಎಣಿಸುವಡೆ ತನ್ನ ಭಿನ್ನ ಆತ್ಮನೊಬ್ಬನೆ.
ಅಣುರೇಣು ಮಧ್ಯದಲ್ಲಿ ಗುಣಭರಿತ ನೀನೆಂದು
ಮಣಿಯುತಿರ್ಪೆನಯ್ಯಾ ರಾಮನಾಥ.[11]

ಬ್ರಹ್ಮನು ಪೂರ್ಣರೂಪಿಯಾಗಿದ್ದಾನೆ. ಅವನಿಂದ ಸೃಷ್ಟಿಯಾದ ಈ ಜಗತ್ತೂ ಪೂರ್ಣವಾಗಿದೆ. ಕಾಲಾನಂತರ ಅವನಲ್ಲಿಯೇ ಅದು ಲಯ ಹೊಂದುತ್ತದೆ. ಬ್ರಹ್ಮ ಪೂರ್ಣವಾದುದರಿಂದ ಅವನಿಂದ ಹುಟ್ಟಿರುವ ಜಗತ್ತು ಸಹ ಪೂರ್ಣ. ಇಲ್ಲಿರುವ ಜೀವಿಗಳ ಸಹ ಪೂರ್ಣರೂಪರೇ ಆಗಿದ್ದಾರೆ ಎನ್ನುವುದು ಉಪನಿಷತ್ತಿನ ಶಾಂತಿಮಂತ್ರ.

ಪೂರ್ಣಮದ: ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ।
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ॥[12]

ಬ್ರಹ್ಮಜ್ಞಾನವಾದಾಗ ಎಲ್ಲವು ಪೂರ್ಣರೂಪವಾಗಿ ಕಾಣುವುದು. ಇದನ್ನು ದಾಸಿಮಯ್ಯನವರು ಬಯಲು ಎಂದು ತಮ್ಮ ವಚನದಲ್ಲಿ ಕರೆದಿದ್ದಾರೆ.

ಬಯಲು ಬಣ್ಣವ ಮಾಡಿ
ಸ್ವಯವ ನಿಲವ ಮಾಡಿ
ಸುಳಿವಾತನ ಬೆಡಗ ಬಲ್ಲವರಾರೈ? ರಾಮನಾಥ.[13]

ಪೂರ್ಣ ಸ್ವರೂಪಿಯಾದ ಬ್ರಹ್ಮನು ಚೇತನಾಚೇತನ ವಸ್ತುಗಳಲ್ಲಿ ವ್ಯಾಪಿಸಿಕೊಂಡಿದ್ದಾನೆ. ಇಲ್ಲಿರುವ ನದಿಗಳು, ಬೆಟ್ಟಗಳು, ಸೂರ್ಯ, ಚಂದ್ರ, ಜೀವಕೋಟಿಗಳು ಬ್ರಹ್ಮನಿಂದಲೇ ಜನಿಸಿ ಅವನಲ್ಲಿಯೇ ಅಡಕವಾಗಿವೆ. ಆದುದರಿಂದ ಪರ (ದ್ರವ್ಯ)ಧನಕ್ಕೆ ಆಸೆ ಪಡದೆ, ಇಲ್ಲಿರುವುದನ್ನು ತ್ಯಾಗ ಬುದ್ಧಿಯಿಂದ ಸ್ವೀಕರಿಸಬೇಕೆಂದು ಈಶೋಪನಿಷತ್ತು ಉಪದೇಶಿಸಿದೆ.

ಈಶಾ ವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್।
ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯ ಸ್ವಿದ್ಧನಮ್॥[14]

ದಾಸಿಮಯ್ಯನವರು ಸಹ ಇಡೀ ಜಗತ್ತಿನ ತುಂಬೆಲ್ಲ ಈಶ್ವರನು ವ್ಯಾಪಿಸಿದ್ದಾನೆ. ಇಳೆ, ಬೆಳೆ, ಎತ್ತು, ಬಿತ್ತು, ಸಮುದ್ರ(ಜಲ), ವಾಯು, ಜೀವ, ಕಾಯ,

ಮೊದಲಾದವುಗಳೆಲ್ಲ ಈಶ್ವರನ ಕೊಡುಗೆಗಳಾಗಿವೆ. ಅವುಗಳನ್ನು ತ್ಯಾಗದ ಬುದ್ಧಿಯಿಂದ ಉಪಯೋಗಿಸು ಎನ್ನುವಲ್ಲಿ ಸ್ಮರಿಸು ಎಂದು ತಮ್ಮ ವಚನಗಳಲ್ಲಿ ಹೇಳಿದ್ದಾರೆ.

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ.....![15]
ಎತ್ತು ನಿಮ್ಮ ದಾನ ಬಿತ್ತು ನಿಮ್ಮ ದಾನ.....![16]
ಕಾಯ ನಿಮ್ಮ ದಾನ ಜೀವ ನಿಮ್ಮ ದಾನ....![17]

ಸ ಪರ್ಯಗಾಚ್ಛುಕ್ರಮಕಾಯಮವ್ರಣಮಸ್ನಾವಿರಂ ಶುದ್ಧಮಪಾಪವಿದ್ಧಮ್।
ಕವಿರ್ಮನೀಷೀ ಪರಿಭೂಃ ಸ್ವಯಂಭೂರ್ಯಾಥಾತಥ್ಯತೋsರ್ಥಾನ್ಯದಚ್ಛಾಶ್ವತಿಭ್ಯಃ ಸಮಾಭ್ಯಃ॥[18]

ಬ್ರಹ್ಮನು ಸರ್ವವ್ಯಾಪಕನು, ಜ್ಯೋತಿರ್ಮಯನು, ಶರೀರವಿಲ್ಲದವನು, ಪ್ರಾಣವಿಲ್ಲ ದವನು, ನರಗಳಿಲ್ಲದವನು, ಶುದ್ಧನು. ಪಾಪರಹಿತನು, ಕವಿಯು, ಮನೀಷೀಯು, ಸರ್ವೋತ್ತಮನು, ಸ್ವಯಂಭುನಾಗಿದ್ದಾನೆ. ಸ್ಥೂಲ, ಸೂಕ್ಷ್ಮಾದಿ ಶರೀರವಿಲ್ಲದವನು, ಅವಿದ್ಯಾದಿಗಳಿಂದ ರಹಿತನಾದವನು, ಕಾರ್ಯಕಾರಣಗಳ ಗೊಂದಲಕ್ಕೆ ಸಿಗದವನು, ಧರ್ಮಾಧರ್ಮ, ಪಾಪ–ಪುಣ್ಯ, ಸತ್ಯ–ಅಸತ್ಯ, ಮೊದಲಾದ ದ್ವಂದ್ವಗಳಿಗೆ ಸಿಲುಕದೆ, ದೂರದೃಷ್ಟಿ ಉಳ್ಳವನಾಗಿದ್ದಾನೆ. ಇಂದ್ರಿಯಗಳ ಮೇಲೆ ವಿಜಯವನ್ನು ಸಾಧಿಸಿ ಮನಸ್ಸನ್ನು ಆಳುವವನಾಗಿದ್ದಾನೆ. ತನ್ನಿಂದ ತಾನೆ ಸಂಕಲ್ಪದಿಂದ ಜನನ–ಮರಣಾದಿಗಳಿಗೆ ಒಳಗಾದವನು, ಎಂದು ಈಶೋಪನಿಷತ್ತಿನ ಮಂತ್ರವು ತಿಳಿಸುವಂತೆ, ದಾಸಿಮಯ್ಯ ನವರು ಇದಕ್ಕೆ ಸಮನಾರ್ಥ ಹೊಂದುವ ವಿಚಾರವನ್ನು ತಮ್ಮ ವಚನದಲ್ಲಿ ತಿಳಿಯಪಡಿಸಿದ್ದಾರೆ.

ಸಾಗರದೊಳಗಣ ಕಿಚ್ಚಿನ ಸಾಕಾರದಂತೆ
ಸಸಿಯೊಳಗಣ ಫಲಪುಷ್ಪರುಚಿಯ ಪರಿಮಳದಂತೆ
ಮನದ ಮರೆಯ ಮಾತು
ನೆನಹಿನಲ್ಲಿ ಅರಿದು ನಾಲಗೆಯ ನುಡಿವಾಗಲಲ್ಲದೆ
ಕಾಣಬಾರದು ಕೇಳಬಾರದು
ಒಂದಂಗದೊಳಗಡಗಿದ ನೂರೊಂದರ ಪರಿ ರಾಮನಾಥ.[19]

ಬ್ರಹ್ಮ ಸ್ವರೂಪವನ್ನು ಕುರಿತು ಉಪನಿಷತ್ತು, ಅಗ್ನಿ ಮತ್ತು ವಾಯುವಿನ ದೃಷ್ಟಾಂತಗಳೊಂದಿಗೆ ಉದಾಹರಿಸಿದೆ. ಅಗ್ನಿಯು ಜಗತ್ತಿನಲ್ಲಿ ಒಂದೇ ಆಗಿದ್ದರೂ, ಅದರ ಆಕಾರ–ವಿಕಾರ ರೂಪಗಳಲ್ಲಿ ಭಿನ್ನ–ಭಿನ್ನವಾಗಿ ಕಾಣುವಂತೆ, ಹಾಗೂ ವಾಯು ಜಗತ್ತಿನ ತುಂಬೆಲ್ಲ ವ್ಯಾಪಿಸಿ ಜೀವಿಗಳಲ್ಲಿ ಪಂಚಪ್ರಾಣ ಸ್ವರೂಪವಾಗಿ ತೋರುವಂತೆ ಬ್ರಹ್ಮನು ಗೋಚರಿಸುತ್ತಾನೆ ಎನ್ನುತ್ತದೆ.

ಅಗ್ನಿರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ ಪ್ರತಿರೂಪೋ ಬಭೂವ।
ಏಕಸ್ತಥಾ ಸರ್ವಭೂತಾಂತರಾತ್ಮಾ ರೂಪಂ ರೂಪಂ ಪ್ರತಿರೂಪೋ ಬಹಿಶ್ಚ॥[20]

ಭುವನದಲ್ಲಿ ಅಗ್ನಿಯು ಬ್ರಹ್ಮನಂತೆ ಏಕವಾಗಿ ಪ್ರಕಾಶಿಸುತ್ತದೆ. ಆ ಅಗ್ನಿಯಿಂದ ಅನೇಕ ಕಿಡಿಗಳು ಉಂಟಾಗುವುದರಿಂದ ಅದು ಅನೇಕವಾಗಿ ಕಾಣುತ್ತದೆ. ಜಲತುಂಬಿದ ಕೊಡದಲ್ಲಿ ಸೂರ್ಯನು ಪ್ರತಿಬಿಂಬಿತನಾಗಿ ಅನೇಕವಾಗಿ ಕಾಣುವಂತೆ, ಬ್ರಹ್ಮನು ಸಹ ಒಬ್ಬನಾಗಿ ಜೀವಿಗಳ ಉಪಾದಿಗಳಿಂದ ಅನೇಕನಾಗಿ ಕಾಣುತ್ತಾನೆ.

ವಾಯುರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ ಪ್ರತಿರೂಪೋ ಬಭೂವ।
ಏಕಸ್ತಥಾ ಸರ್ವಭೂತಾಂತರಾತ್ಮಾ ರೂಪಂ ರೂಪಂ ಪ್ರತಿರೂಪೋ ಬಹಿಶ್ಚ॥[21]

ಜಗತ್ತಿನಲ್ಲಿ ಬೀಸುವ (ವಾಯು)ಗಾಳಿ ಒಂದೇ ಆಗಿದ್ದರೂ, ದೇಶಕಾಲದಲ್ಲಿ ಭಿನ್ನವಾಗಿ ಬೀಸುವುದು. ಅಲ್ಲದೆ ವಸ್ತುಗಳ ಉಪಾದಿಗಳಿಂದ ಮಠಾಕಾಶ, ಘಟಾಕಾಶ ಹೊಂದುವಂತೆ ಬ್ರಹ್ಮನು ಭಿನ್ನನಾಗಿ ಸ್ಥಿತನಾಗಿದ್ದಾನೆ. ಇಲ್ಲಿ ಭಿನ್ನವಾಗಿರುವ ಎರಡು ಮಂತ್ರಗಳನ್ನು ದಾಸಿಮಯ್ಯನವರು ಒಂದೇ ಮಾತಿನಲ್ಲಿ ಹೀಗೆ ಹೇಳಿದ್ದಾರೆ.–

ಅಗ್ನಿ ಸುಡಲಲ್ಲದೆ ಸುಳಿಯಲರಿಯದು
ವಾಯು ಸುಳಿಯುವುದಲ್ಲದೆ ಸುಡಲರಿಯದು
ಆ ಅಗ್ನಿ ವಾಯುವ ಕೂಡಿದಲ್ಲದೆ ಅಡಿಯಿಡಲರಿಯದು
ಈ ಪರಿಯಂತೆ ನರರರಿವರೆ ಕ್ರಿಯಾಜ್ಞಾನ ಭೇದವ? ರಾಮನಾಥ.[22]

ಬ್ರಹ್ಮ ಸ್ವರೂಪವನ್ನು ಕುರಿತು ಉಪನಿಷತ್ತು ಭಿನ್ನವಾಗಿ ಎರಡು ಮಂತ್ರಗಳಲ್ಲಿ ಅಗ್ನಿ ಮತ್ತು ವಾಯುವಿನ ದೃಷ್ಟಾಂತಗಳೊಂದಿಗೆ ಉದಾಹರಿಸಿದೆ. ಅದನ್ನು ಶರಣರು ಕ್ರಿಯಾ ಮತ್ತು ಜ್ಞಾನಕ್ಕೆ ಹೋಲಿಸಿ, ಈ ಎರಡು ಇದ್ದಲ್ಲಿ ಅಜ್ಞಾನ ಸುಳಿಯುವುದಿಲ್ಲ ಅಂದರೆ ಅಡಿಯಿಡಲಾಗದು, ಆಗ ಮಾತ್ರ ಬ್ರಹ್ಮಜ್ಞಾನ ಸಾಧ್ಯವೆಂದಿದ್ದಾರೆ ದಾಸಿಮಯ್ಯನವರು.

ಮುಂಡಕವು ಬ್ರಹ್ಮನ ಶಿರ ಅಗ್ನಿ, ಚಂದ್ರ ಸೂರ್ಯರು ಅವನ ಕಣ್ಣುಗಳು, ದಿಕ್ಕುಗಳೇ ಅವನ ಕಿವಿಗಳು, ವೇದಗಳೇ ಅವನ ಮಾತು, ವಾಯುವೇ ಪ್ರಾಣ, ವಿಶ್ವವೇ ಅವನ ಹೃದಯವಾಗಿ, ಪೃಥ್ವಿಯೇ ಅವನ ಕಾಲುಗಳಾಗಿ, ಸರ್ವಭೂತಗಳ ಅಂತರಾತ್ಮನೇ ಅವನಾಗಿದ್ದಾನೆಂದು ಬ್ರಹ್ಮನ ಸಗುಣ ರೂಪವನ್ನು ಹೇಳುತ್ತದೆ.

ಅಗ್ನಿಮೂರ್ಧಾ ಚಕ್ಷುಷಿ ಚಂದ್ರಸೂರ್ಯೌ ದಿಶಃ ಶ್ರೋತ್ರೇ ವಾಗ್ವಿವೃತಾಶ್ಚ ವೇದಾಃ।
ವಾಯುಃ ಪ್ರಾಣೋ ಹೃದಯಂ ವಿಶ್ವಮಸ್ಯ ಪದ್ಭ್ಯಾಂ ಪ್ರಥಿವಿ ಹ್ಯೇಷ ಸರ್ವಭೂತಾಂತರಾತ್ಮ॥[23]

ದಾಸಿಮಯ್ಯನವರು ಉಪನಿಷತ್ತಿನ ಸಂಪೂರ್ಣ ಅರ್ಥವನ್ನು ಗ್ರಹಿಸಿ ತಮ್ಮ ವಚನದಲ್ಲಿ ಹಿಡಿದಿಟ್ಟಿದ್ದಾರೆ. ಈಶ್ವರನ ಶರೀರವನ್ನು ಜಗತ್ತಿಗೆ ಹೋಲಿಸಿ, ಇಲ್ಲಿರುವ ಪಂಚಭೂತಗಳು ಅವನ ಶರೀರದ ಅಂಗಗಳಾಗಿವೆ ಎಂದು ಬಿಡಿ ಬಿಡಿಸಿ ಹೇಳಿದ್ದು ಗಮನಾರ್ಹವಾಗಿದೆ.

ಒಂದಾಗಿಹವೈದು ಭೂತ
ಚಂದ್ರ ಸೂರ್ಯರು ನಂದಿವಾಹನ ನಿಮ್ಮ ತನುವಲ್ಲವೆ?

ನಿಂದು ನೋಡಲು ಜಗವಂದ್ಯನಾಗಿಪ್ಪೆ
ಇನ್ನು ನೊಯಿಸುವೆನಾರನಯ್ಯ? ರಾಮನಾಥ.[24]

ಈಶ್ವರನು ಪಂಚಮುಖವುಳ್ಳವನಾಗಿದ್ದಾನೆಂದು ಆಸ್ತಿಕ ದರ್ಶನಗಳು ಹಾಗೂ ವೀರಶೈವ ಪುರಾಣಗಳು ಒಪ್ಪಿಕೊಂಡಿರುತ್ತವೆ. ಸದ್ಯೋಜಾತ, ವಾಯುದೇವ, ಅಘೋರ, ತತ್ಪುರುಷ, ಮತ್ತು ಈಶಾನ್ಯಗಳೆಂಬ ಪಂಚಮುಖಗಳು. ಈ ಪಂಚಮುಖಗಳಿಂದಲೇ ಆಕಾಶಾದಿ ಪಂಚಭೂತಗಳು ಜನಿಸಿವೆ. ಪಂಚಭೂತಗಳು ಮಿಶ್ರಣ ಅಥವಾ ಪಂಚೀಕರಣಗೊಂಡು ಶರೀರ ನಿರ್ಮಾಣವಾಗಿದೆ. ಆದುದರಿಂದ ಸೂರ್ಯ, ಚಂದ್ರರು ಅವನ ಕಣ್ಣುಗಳಾಗಿವೆ. ಜಗತ್ತು ಅವನ ಶರೀರವಾಗಿದೆ. ಎಂದು ನಿರ್ಗುಣ ಈಶ್ವರನನ್ನು ಸಗುಣ ರೂಪದಲ್ಲಿ ಚಿತ್ರಿಸಿರುವುದನ್ನು ಈ ವಚನದಲ್ಲಿ ಕಾಣುತ್ತೇವೆ. ಹಾಗೆಯೇ ದಾಸಿಮಯ್ಯನವರು ಮುಂದುವರಿದು, ಈ ಜಗತ್ತು ಈಶ್ವರನೇ ಆಗಿರುವುದರಿಂದ ಯಾರಿಗೂ ಸಹ ದುಃಖಿಸಲಾಗದು ಎನ್ನುವರು. ಈಶ್ವರ ಮತ್ತು ಜಗತ್ತು ಅಭಿನ್ನವೆಂದು ತಿಳಿದು ಅದನ್ನು ಹರಿತವಾದ ಖಡ್ಗದಿಂದ ಇರಿದು ಛೇದಿಸಲು ಸಾಧ್ಯವಿಲ್ಲ.

ನಾನೊಂದು ಸುರಗಿಯನೇನೆಂದು ಹಿಡಿವೇನು?
ಏನ ಕಿತ್ತೇನನಿರಿವೇನು?
ಜಗವೆಲ್ಲಾ ನೀನಾಗಿಪ್ಪೆ ಕಾಣಾ! ರಾಮನಾಥ.[25]

ಇದನ್ನೇ ಕಠೋಪನಿಷತ್ತಿನಲ್ಲಿ ಬ್ರಹ್ಮನನ್ನು ಕುರಿತು ಹುಟ್ಟು ಸಾವಿಲ್ಲದ ಅವನನ್ನು ಯಾವುದೇ ಶಸ್ತ್ರಗಳಿಂದ ನಾಶಮಾಡಲು ಸಾಧ್ಯವಿಲ್ಲ. ಅವನು ಈ ಎರಡಕ್ಕೂ ಮೀರಿ ನಿಂತಿದ್ದಾನೆಂದು ಹೇಳಲಾಗಿದೆ.

ನ ಜಾಯತೆ ಮ್ರಿಯತೇ ವಾ ವಿಪಶ್ಚಿನ್ನಾಯಂ ಕುತಶ್ಚಿನ್ನ ಬಭೂವ ಕಶ್ಚಿತ್।
ಅಜೋ ನಿತ್ಯಃ ಶಾಶ್ವತೋsಯಂ ಪುರಾಣೋ ನ ಹನ್ಯತೇ ಹನ್ಯಮಾನೇ ಶರೀರೇ॥[26]

ಬ್ರಹ್ಮನು ಹುಟ್ಟುವುದೂ ಇಲ್ಲ, ಸಾಯುವುದೂ ಇಲ್ಲ. ಅವನಿಗೆ ಜನನವೂ ಇಲ್ಲ, ಮರಣವೂ ಇಲ್ಲ. ಅವನು ಜನ್ಮರಹಿತ, ನಿತ್ಯ, ಶಾಶ್ವತ, ಪುರಾತನನಾಗಿದ್ದು ಶರೀರ ನಾಶವಾದರೂ ಅವನು ನಾಶಹೊಂದುವುದಿಲ್ಲ. ಕೊಲ್ಲುತ್ತೇನೆ ಎಂದರೂ ನಾಶವಾಗುವುದಿಲ್ಲ. ಏಕೆಂದರೆ ಜಗತ್ತು ಎಷ್ಟು ಹಳೆಯದೋ ಅಷ್ಟೇ ಹಳಬನು. ಜಗತ್ತಿನಿಂದಲಾಗಲಿ ಅಥವಾ ಜೀವಿಗಳಿಂದಾಗಲಿ ಅವನು ಅಭಿನ್ನನು. ಆದ್ದರಿಂದ ಯಾರನ್ನು ಸಹ ದುಃಖಿಸಲಾಗದು. ಎಲ್ಲವು ಬ್ರಹ್ಮ ಸ್ವರೂಪವೆಂಬುದು ಇಲ್ಲಿ ವ್ಯಕ್ತವಾಗಿದೆ. ದಾಸಿಮಯ್ಯನವರ ವಚನದ ಹಾಗೂ ಉಪನಿಷತ್ತಿನ ಮಂತ್ರವು ಭಿನ್ನಭಿನ್ನವೆನಿಸಿದರೂ ಅರ್ಥ ಒಂದೇ

6.2. ಆತ್ಮ

"ಆತ್ಮ" ಶಬ್ದವು "ಅನ್" ಧಾತುವಿನಿಂದ ನಿಷ್ಪನ್ನಗೊಂಡಿದೆ. 'ಅನ್' ಎಂದರೆ ಶ್ವಾಸ ತಗೆದುಕೊಳ್ಳು ಎಂದರ್ಥವಾಗುತ್ತದೆ. ಇದು ಜೀವಿಗಳ ಶ್ವಾಸ(ಪ್ರಾಣ)ವಾಗಿದೆ.

ಬರು–ಬರುತ್ತ ಇದರ ಅರ್ಥ ಜೀವ, ಆತ್ಮ, ಅಥವಾ ವ್ಯಕ್ತಿಯ ಮೂಲಶಕ್ತಿ, ಚೇತನ ಹಲವಾರು ಅರ್ಥಗಳನ್ನು ಹೊಂದಿದೆ. ಶಂಕರರು 'ಆತ್ಮ' ಪದದ ಅರ್ಥವನ್ನು ಪ್ರಾಪ್ತಿಯಾಗು, ತಿನ್ನು, ಅಥವಾ ಉಪಭೋಗಿಸು ಇಲ್ಲವೆ ವ್ಯಾಪಿಸು ಎಂದು ಅರ್ಥೈಸಿದ್ದಾರೆ.

ಯಚ್ಚಾಪ್ನೋತಿ ಯದಾದತ್ತೇ ಯಚ್ಚತಿ ವಿಷಯಾನಿಹ।
ಯಾಚ್ಚಾಸ್ಯ ಸಂತತೋ ಭಾವತಮಾದಾತ್ಮೇತಿ ಕೀರ್ತ್ಯತೇ॥[27]

"ವಸ್ತುವಿನ ವ್ಯಾಪಕ ಗ್ರಹಣ ಮಾಡುತ್ತ, ವಿಷಯಗಳನ್ನು ಅನುಭವಿಸುತ್ತ ಯಾವಾಗಲೂ ಸದ್ಭಾವವುಳ್ಳದ್ದಾಗಿರುವುದರಿಂದ ಅದಕ್ಕೆ ಆತ್ಮ ಎನ್ನಲಾಗುತ್ತದೆ" "ಆತ್ಮ ಶಬ್ದವು 'ಅತ್' ಅಥವಾ 'ಅಪ್' ಧಾತುವಿನಿಂದ ನಿಷ್ಪನ್ನವಾಗಿದೆ. 'ಅತ್'ವೆಂದರೆ ಜೊತೆಗೆ ಇರುವುದು. 'ಅಪ್'ವೆಂದರೆ ಪ್ರಾಪ್ತಿಯಿಂದಗೂಡಿದ್ದು. ಆದ್ದರಿಂದ ಯಾವಾಗಲೂ ಗತಿಶೀಲವುಳ್ಳ ಕಾರಣದಿಂದ 'ಆತ್ಮ'ವೆನಿಸಿಕೊಳ್ಳುತ್ತದೆ.[28]

ಆತ್ಮಾ ವಾ ಇದಮೇಕ ಏವಾಗ್ರ ಆಸೀತ್। ನಾನ್ಯತ್ಕಿಂಚನ ಮಿಷತ್। ಸ ಈಕ್ಷತ ಲೋಕನ್ನು ಸೃಜಾ ಇತಿ।[29]

ಎಲ್ಲವನ್ನು ಪಡೆಯುವ, ಎಲ್ಲವನ್ನು ಗ್ರಹಿಸುವ, ಯಾವಾಗಲೂ ಇರುವಂತಹುದು ಯಾವುದು ಇದೆಯೋ ಅದು ಆತ್ಮವಾಗಿದೆ. ಐತರೇಯೋಪನಿಷತ್ತಿನ ಮಂತ್ರವು, ಈ ಜಗತ್ತಿನ ಪೂರ್ವದಲ್ಲಿ ಆತ್ಮನೊಬ್ಬನೆ ಇದ್ದನು. ಅವನಿಲ್ಲದೆ ಬೇರೇನೂ ಇರಲಿಲ್ಲ. ಅವನೇ ಈ ಲೋಕವನ್ನು ಸೃಷ್ಟಿಸಿದನೆಂದು ಹೇಳಿದಂತೆ, ದಾಸಿಮಯ್ಯನವರು ಸಹ ಜಗತ್ತಿನ ಕರ್ತಾರನು ಈಶ್ವರನು, ಅವನೊಬ್ಬನೇ ಸೃಷ್ಟಿ ಪೂರ್ವದಲ್ಲಿದ್ದನು. ಅವನಿಂದಲೇ ಎಲ್ಲವು ಉತ್ಪತ್ತಿಯಾದವು ಎಂದು ಹೇಳಿದ್ದಾರೆ.

ಎತ್ತನೇರಿದ ಕರ್ತನೊಬ್ಬನೆ ಜಗಕ್ಕೆಲ್ಲ
ಎತ್ತು ಬೆಳೆದ ಧಾನ್ಯವನುಂಬ
ದೇವರ್ಕಳೆಲ್ಲ ನಿಮ್ಮ ತೊತ್ತಿನ ಮಕ್ಕಳು ಕಾಣಾ! ರಾಮನಾಥ.[30]

ಶಾಸ್ತ್ರಗಳು ಬ್ರಹ್ಮನಿಗೆ ಆತ್ಮ, ಈಶ್ವರ, ಪುರುಷ ಮೊದಲಾದ ಹೆಸರುಗಳಿಂದ ಕರೆದಿವೆ. ಇಲ್ಲಿ ಉಪನಿಷತ್ತು ಆತ್ಮ ನೆಂದು ಹೇಳಿದರೆ, ದಾಸಿಮಯ್ಯನವರು ಈಶ್ವರನೆಂದು ಹೇಳಿದ್ದಾರೆ, ಉಪನಿಷತ್ತು ನಿರ್ಗುಣ ರೂಪ ಹೇಳಿದರೆ, ವಚನವು ಸಗುಣ ರೂಪ ಹೇಳುತ್ತದೆ.

ದೇವರ ದಾಸಿಮಯ್ಯನವರು ಈಶ್ವರನ ಸಗುಣ ಉಪಾಸನೆಯತ್ತ ತಿರುಗಿರುವುದು ಕಾಣುತ್ತೇವೆ. ಉಪನಿಷತ್ತು ಜಗತ್ತಿನ ಸೃಷ್ಟಿಯ ಪೂರ್ವದಲ್ಲಿ ಆತ್ಮನೊಬ್ಬನೆ ಇದ್ದನು ಎನ್ನುವಲ್ಲಿ ದಾಸಿಮಯ್ಯನವರು ಈಶ್ವರನೊಬ್ಬನೆ ಇದ್ದನು, ಅವನೆ ಜಗತ್ತಿನ ಕರ್ತೃ ಎಂದಿದ್ದಾರೆ. ಸೃಷ್ಟಿಯ ಪೂರ್ವದಲ್ಲಿ ಆತ್ಮನೊಬ್ಬನೆ ಇದ್ದನು, ಮತ್ತೇನ್ನೇನ್ನು ಇರಲಿಲ್ಲ. ಅವನಿಂದಲೇ ಜಗತ್ತಿನ ಅನೇಕ ಜೀವ–ಜಂತುಗಳು, ಗಿಡ–ಮರಗಳು, ಪ್ರಾಣಿ, ಪಶು–

ಪಕ್ಷಿಗಳು ಮೊದಲಾದವುಗಳು ಜನಿಸಿದವು. ಎಂಬ ಉಪನಿಷತ್ತಿನ ಮಂತ್ರಾರ್ಥವನ್ನು ಗ್ರಹಿಸಿದ ದಾಸಿಮಯ್ಯನವರು 'ಆತ್ಮ' ಎಂದು ಹೇಳುವಲ್ಲಿ ಈಶ್ವರನೆಂದು ಹೇಳಿದ್ದಾರೆ.

ಆತ್ಮನು ಹೇಗಿದ್ದಾನೆ? ಎಲ್ಲಿದ್ದಾನೆಂದು? ನಮ್ಮಲ್ಲಿ ಪ್ರಶ್ನೆ ಬಂದರೆ, ಅದಕ್ಕೆ ಉತ್ತರ ರೂಪವಾಗಿ ಕಠೋಪನಿಷತ್ತು ಸಂಪೂರ್ಣವಾಗಿ ಆತ್ಮತತ್ತ್ವವನ್ನೇ ಬೋಧಿಸುತ್ತದೆ. ಆಕಾಶಾದಿ ಪಂಚಮಹಾಭೂತಗಳು ಆತ್ಮನಿಂದಲೇ ವ್ಯಕ್ತವಾಗಿವೆ. ಅಲ್ಲದೆ, ಅವನು ಮಹತ್ತಿಗಿಂತಲೂ ಮಹತ್ತಾಗಿ, ಅಣುವಿಗಿಂತಲೂ ಅಣುವಾಗಿದ್ದಾನೆ. ಅಂದರೆ, ಇಲ್ಲಿರುವ ಸರ್ವವಸ್ತುಗಳಲ್ಲಿ ಯಾವುದನ್ನು ಅತ್ಯಂತ ಚಿಕ್ಕದು ಎಂದು ತಿಳಿಯುತ್ತೇವೆಯೋ, ಅದಕ್ಕಿಂತಲೂ ಚಿಕ್ಕದು, ಹಾಗೂ ಯಾವುದು ದೊಡ್ಡದು ಎಂದು ತಿಳಿಯುತ್ತೇವೆಯೋ ಅದಕ್ಕಿಂತಲೂ ದೊಡ್ಡರೂಪನಾಗಿದ್ದಾನೆ. ಇರುವೆಯಲ್ಲಿ ಇರುವೆಗಾತ್ರ. ಆನೆಯಲ್ಲಿ ಆನೆಯಗಾತ್ರದ ರೂಪದಲ್ಲಿದ್ದಾನೆ. ಒಟ್ಟಿನಲ್ಲಿ ಆತ್ಮನು ಅತ್ಯಂತ ಚಿಕ್ಕವನೂ ಹೌದು, ಅತ್ಯಂತ ದೊಡ್ಡವನೂ ಹೌದು.

ಈ ಆತ್ಮನು ಜೀವಿಗಳ ಹೃದಯ ಗುಹೆಯಲ್ಲಿರುವನು. ನಿಷ್ಕಾಮ ಕರ್ಮ ಸಾಧನೆಯಿಂದ ವ್ಯಕ್ತಿಯ ತನ್ನ ಅಂತರೇಂದ್ರಿಯಗಳ ಮೂಲಕ ಅವನನ್ನು ಅನುಭವಿಸಿದ ಜೀವಿ ಶೋಕರಹಿತನಾಗುತ್ತಾನೆ.

ಅಣೋರಣೀಯಾನ್ಮಹತೋ ಮಹಿಯಾನ್ ಆತ್ಮಸ್ಯ ಜಂತೋರ್ನಿಹಿತೋ ಗುಹಾಯಾಮ್।
ತಮಕ್ರತುಃ ಪಶ್ಯತಿ ವೀತಶೋಕೋ ಧಾತುಪ್ರಸಾದಾನ್ಮಹಿಮಾನಮಾತ್ಮನ॥[31]

ಆತ್ಮನು ನಮ್ಮಿಂದ ಅತ್ಯಂತ ಸಮೀಪನೂ ಅತ್ಯಂತ ದೂರನೂ ಇದ್ದಾನೆ. **"ಆಸಿನೋ ದೂರಂ ವ್ರಜತಿ ಶಯಾನೋನೋ ಯಾತಿ ಸರ್ವತಃ"**[32] ಕಠೋಪನಿಷತ್ತಿನ ಅರ್ಥವನ್ನೇ ಈಶಾವಾಸ್ಯೋಪನಿಷತ್ತು ಅದು ಚಲಿಸುತ್ತದೆ. ಚಲಿಸುವುದಿಲ್ಲ. ಅದು ದೂರದಲ್ಲಿಯೂ ಇದೆ. ಹತ್ತಿರದಲ್ಲಿಯೂ ಇದ್ದು ಎಲ್ಲದರ ಒಳ–ಹೊರಗೆ ತುಂಬಿಕೊಂಡಿದೆ, ಎಂದು ಹೇಳಿದೆ.

ತದೇಜತಿ ತನ್ನೈಜತಿ ತದ್ದೂರೇ ತದ್ವಂತಿಕೇ।
ತದಂತರಸ್ಯ ಸರ್ವಸ್ಯ ತದು ಸರ್ವಸ್ಯಾಸ್ಯ ಬಾಹ್ಯತಃ॥[32]

ಈ ಮಂತ್ರದ ಕೊನೆಯ ಸಾಲಿನ ಅರ್ಥವನ್ನು ದಾಸಿಮಯ್ಯನವರ ವಚನದಲ್ಲಿ ಕಾಣಬಹುದು.

ಮಣಿಗಣ ಸೂತ್ರದಂತೆ ತ್ರಿಣೆಯ ನೀನಿಪ್ಪೆಯಯ್ಯ
ಎಣಿಸುವಡೆ ತನ್ನ ಭಿನ್ನ ಆತ್ಮನೊಬ್ಬನೆ.
ಅಣುರೇಣು ಮಧ್ಯದಲ್ಲಿ ಗುಣಭರಿತ ನೀನೆಂದು
ಮಣಿಯುತಿರ್ಪೆನಯ್ಯಾ ರಾಮನಾಥ.[33]

ಆತ್ಮನು ಜಗತ್ತಿನ ಪ್ರತಿಯೊಂದು ವಸ್ತುವಿನ ಒಳ-ಹೊರಗೂ ತುಂಬಿಕೊಂಡಿದ್ದಾನೆ, ಎನ್ನುವುದನ್ನು ಶರಣರು ಮಣಿಗಳ ಉದಾಹರಣೆಯೊಂದಿಗೆ ತಿಳಿಸಿ, ಅಣುರೇಣುಗಳಲ್ಲಿ ಈಶ್ವರನು ಆತ್ಮ ರೂಪದಲ್ಲಿ ಇರುವನೆಂದು, ಅವನಿಗೆ ನಮಸ್ಕರಿಸಿದ್ದಾರೆ.

ಆತ್ಮನು ಜೀವಿಗಳ ಶರೀರದಲ್ಲಿದ್ದು ಶರೀರ ರಹಿತನಾಗಿ, ಅನಿತ್ಯ ವಸ್ತುಗಳಲ್ಲಿ ನಿತ್ಯವು, ವ್ಯಾಪಕನಾಗಿರುವನು. ಇಂಥ ಆತ್ಮನನ್ನು ಯಾರು ತಿಳಿದುಕೊಳ್ಳುವರೋ ಅವರು ಶೋಕರಹಿತರಾಗುತ್ತಾರೆ.

ಅಶರೀರಂ ಶರೀರೇಷ್ವನವಸ್ಥೇಷ್ವವಸ್ಥಿತಮ್।
ಮಹಂತಂ ವಿಭುಮಾತ್ಮಾನಂ ಮತ್ವಾ ಧೀರೋ ನ ಶೋಚತಿ॥[34]

ಆತ್ಮನು ಜೀವಿಗಳ ಹೃದಯ ಗುಹೆಯಲ್ಲಿ ಕಾಣಿಸದಂತೆ ಇರುವನು. ಅಲ್ಲಿರುವ ಆತ್ಮನನ್ನು ಏಕಾಗ್ರ ಮತ್ತು ಸೂಕ್ಷ್ಮಬುದ್ಧಿಯಿಂದ ಮಾತ್ರ ಅನುಭವಿಸಲು ಸಾಧ್ಯ.

ಏಷ ಸರ್ವೇಷು ಭೂತೇಷು ಗೂಢೋಽssತ್ಮಾ ನ ಪ್ರಕಾಶತೇ।
ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ಸೂಕ್ಷ್ಮದರ್ಶಿಭಿಃ॥[35]

ಕಠೋಪನಿಷತ್ತಿನ ಮಂತ್ರಗಳ ಸಾರವನ್ನೇ ದಾಸಿಮಯ್ಯನವರು ತಮ್ಮ ವಚನದಲ್ಲಿ ಆತ್ಮನು ಜೀವಿಗಳ ಶರೀರದಲ್ಲಿದ್ದಾನೆಂಬುದನ್ನು, ಪ್ರಕೃತಿಯಲ್ಲಿ ಕಾಣುವ ಮರ, ಹಾಲುಗಳ ಉದಾಹರಣೆಗಳೊಂದಿಗೆ ವಿವರಿಸಿದ್ದಾರೆ. ಮರದಲ್ಲಿ ಅಗ್ನಿ, ಹಾಲಿನಲ್ಲಿ ತುಪ್ಪವಿರುವಂತೆ ಶರೀರದಲ್ಲಿ ಆತ್ಮನಿದ್ದಾನೆ.

ಮರನೊಳಗಣ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪವ ಕಂಪಿಲ್ಲದಂತಿರುಸಿದೆ
ಶರೀರದೊಳಗಾತ್ಮನನಾರು ಕಾಣದಂತಿರಿಸಿದೆ.
ನೀ ಬೆರಸಿದ ಭೇದಕ್ಕೆ ಬೆರಗಾದೆನಯ್ಯ! ರಾಮನಾಥ.[36]

ಮರದೊಳಗಿರುವ ಅಗ್ನಿಯಂತೆ, ಹಾಲಿನಲ್ಲಿರುವ ತುಪ್ಪದಂತೆ, ಶರೀರದೊಳಗೆ ಆತ್ಮನಿದ್ದಾನೆ. ಮರದೊಳಗಿರುವ ಅಗ್ನಿ, ಹಾಲಿನಲ್ಲಿರುವ ತುಪ್ಪ ಕ್ರಿಯೆಗಳಿಲ್ಲದೆ ನೋಡಲು ಸಾಧ್ಯವಿಲ್ಲ. ಹಾಗೆಯೇ ಆತ್ಮನ್ನು ಕಾಣಲು ಭಕ್ತಿ, ಜ್ಞಾನ ವಿರಕ್ತಿಗಳೆಂಬ ಕ್ರಿಯೆಗಳಿಂದ ಸಾಧ್ಯ. ಅಗ್ನಿ, ತುಪ್ಪ, ಮತ್ತು, ಆತ್ಮಗಳು ಚೇತನದ ಪ್ರತೀಕಗಳಾಗಿವೆ. ಇವುಗಳನ್ನು ಹೀಗೆ ಅವ್ಯಕ್ತವಾಗಿ ಮರದಲ್ಲಿ, ಹಾಲಿನಲ್ಲಿ ಮತ್ತು ಶರೀರದಲ್ಲಿ ಕ್ರಮವಾಗಿ ಇಡಲು ಸರ್ವಶಕ್ತನಾದ ಈಶ್ವರನಿಂದಲೇ ಸಾಧ್ಯ.

ಏಕೋ ವಶೀ ಸರ್ವಭೂತಾಂತರಾತ್ಮಾ ಏಕಂ ರೂಪಂ ಬಹುಧಾ ಯಃ ಕರೋತಿ।
ತಮಾತ್ಮಸ್ಥಂ ಯೋsನುಪಶ್ಯಂತಿ ಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಮ್॥[37]

ಸರ್ವಭೂತಗಳ ಒಳ–ಹೊರಗೂ ಒಬ್ಬನಾದ ಆತ್ಮನೆ ಇದ್ದು, ಎಲ್ಲವನ್ನು ತನ್ನ ವಶದಲ್ಲಿ ಇಟ್ಟುಕೊಂಡು ನಾನಾ ರೂಪುಗಳನ್ನು ಹೊಂದುತ್ತ ಬೇರೆ ಬೇರೆಯಾಗಿ ಕಾಣುತ್ತಾನೆ. ಎನ್ನುವ ಕಠೋಪನಿಷತ್ತಿನ ಅರ್ಥವನ್ನು ದಾಸಿಮಯ್ಯನವರು ಜಲಭರಿತ ಘಟ ಮತ್ತು ಸೂರ್ಯನ ದೃಷ್ಟಾಂತದ ಮೂಲಕ ತಿಳಿಸುತ್ತ, ಅವನನ್ನು ಕಾಣಲು (ಗುರು)ಜ್ಞಾನಿಪುರುಷನಿಂದ ಸಾಧ್ಯ ಎನ್ನುವರು.

ಘಟದೊಳಗೆ ತೋರುವ ಸೂರ್ಯನಂತೆ
ಸರ್ವರಲ್ಲಿ ಶಿವನ ಚೈತನ್ಯವಿಪ್ಪುದು
ಇದ್ದರೇನು? ಅದ ಕೂಡುವರೆ
ಗುರುವಿನಿಂದಲ್ಲದಾಗದು ಕಾಣಾ ರಾಮನಾಥ.[38]

ದಾಸಿಮಯ್ಯನವರು ಜೀವಿಯ ಪರಮ ಧ್ಯೇಯವನ್ನು ಈ ವಚನದಲ್ಲಿ ವ್ಯಕ್ತಪಡಿಸಿದ್ದಾರೆ. ಅವನು ಆತ್ಮ ಸಾಕ್ಷಾತ್ಕಾರ ಮಾಡಿಕೊಂಡು ಆದರ್ಶವ್ಯಕ್ತಿಯಾಗಿ ಬಾಳಬೇಕು. ಅದಕ್ಕಾಗಿ ಎಲ್ಲೆಲ್ಲಿಯೂ ಸುತ್ತುವುದು ಬೇಡ. ಬೇರೆ ಇನ್ಯಾರನ್ನೋ ಆಶ್ರಯಿಸದೆ, ಪ್ರಯೋಜನವಿಲ್ಲ. ಆದರೆ ಎಲ್ಲವು ಗುರುವಿನಿಂದ ಸಾಧ್ಯವೆಂದಿದ್ದಾರೆ.

ಯಥೋದಕಂ ದುರ್ಗೇ ವೃಷ್ಟಂ ಪರ್ವತೇಷು ವಿಧಾವತಿ।
ಏವಂ ಧರ್ಮಾನ್ಪೃಥಕ್ಪಶ್ಯಂಸ್ತಾನೇವಾನುವಿಧಾವತಿ॥[39]

ಯಾವ ರೀತಿಯಾಗಿ ಮಳೆಯ ನೀರು ಎತ್ತರ ಸ್ಥಳವಾದ ಪರ್ವತಗಳಿಂದ ಹರಿದು ಹೊಂಡ, ಹಳ್ಳ, ಕೊಳ್ಳ, ನದಿಯ ಮೂಲಕ ಸಮುದ್ರ ಸೇರುತ್ತದೆ. ಮಳೆಯ ನೀರು ಒಂದೆಯಾದರೂ ಬೇರೆ ಬೇರೆ ಪ್ರದೇಶಗಳಲ್ಲಿ ಹರಡಿರುವಂತೆ, ಆತ್ಮನು ಒಬ್ಬನೆಯಾಗಿದ್ದರೂ ದೇಹಾದಿ ಉಪಾದಿಗಳಿಂದ ಬೇರೆ ಬೇರೆಯಾಗಿ ಕಾಣುತ್ತಾನೆ.

ಅಗ್ನಿರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ ಪ್ರತಿರೂಪೋ ಬಭೂವ।
ಏಕಸ್ತಥಾ ಸರ್ವಭೂತಾಂತರಾತ್ಮಾ ರೂಪಂ ರೂಪಂ ಪ್ರತಿರೂಪೋ ಬಹಿಶ್ಚ॥[40]

ವಾಯುರ್ಯಥೈಕೋ ಭುವನಂ ಪ್ರವಿಷ್ಟೋ ರೂಪಂ ರೂಪಂ ಪ್ರತಿರೂಪೋ ಬಭೂವ।
ಏಕಸ್ತಥಾ ಸರ್ವಭೂತಾಂತರಾತ್ಮಾ ರೂಪಂ ರೂಪಂ ಪ್ರತಿರೂಪೋ ಬಹಿಶ್ಚ॥[41]

ಆತ್ಮನ ಇರುವಿಕೆಯನ್ನು ಕಠೋಪನಿಷತ್ತು ಅಗ್ನಿ ಮತ್ತು ವಾಯುವಿನ ದೃಷ್ಟಾಂತಗಳೊಂದಿಗೆ ವಿವರಿಸಿದೆ. ಅಗ್ನಿಯಾಗಲಿ, ವಾಯುವಾಗಲಿ ಜಗತ್ತಿನ ವಸ್ತುಗಳ ಸಂಪರ್ಕದಿಂದ ಅನೇಕ ರೂಪಗಳನ್ನು ಹೊಂದುವಂತೆ, ಆತ್ಮನು ಸಹ ದೇಹಾದಿ ಉಪಾದಿಗಳಿಂದ ಅನೇಕನಾಗಿ ಕಾಣುತ್ತಾನೆ.

ನಾಯಮಾತ್ಮಾ ಪ್ರವಚನೇನ ಲಭ್ಯೋ ನಮೇಧಯಾ ನ ಬಹುನಾ ಶ್ರುತೇನ।
ಯಮೇವೈಷ ವೃಣುತೇ ತೇನ ಲಭ್ಯಸ್ತಸ್ಯೈಷ ಆತ್ಮಾ ವಿವೃಣುತೇ ತನುಂ ಸ್ವಾಮ್॥[42]

ಆತ್ಮನ ಅರಿವು ಪ್ರವಚನ ಮಾಡುವುದರಿಂದಾಗಲಿ, ಶಾಸ್ತ್ರಾಧ್ಯಯನ ಮಾಡುವುದರಿಂದಾಗಲಿ ಆಗುವುದಿಲ್ಲ. ಜ್ಞಾನಿಗಳು ಆತ್ಮನ ಅರಿವಿಗಾಗಿ ಯಾವ ಸಾಧನೆಗಳನ್ನು ಹೇಳಿದ್ದಾರೆಯೋ ಅದನ್ನು ಅನುಸರಿಸಿದರೆ ಮಾತ್ರ ಸಾಧ್ಯ. ಕೇವಲ ಗ್ರಂಥಗಳ ಪಠಣದಿಂದಾಗಲಿ, ವೇದಾಧ್ಯಯನ ಮಾಡುವುದರಿಂದಾಗಲಿ ಆತ್ಮನ ಇರುವು ಮತ್ತು ಹರಿವು ಅನುಭವಕ್ಕೆ ಅಗೋಚರ. ವೇದಗಳನ್ನು ಕಂಠಸ್ಥ ಮಾಡುವುದರಿಂದ, ಅವುಗಳ ಅರ್ಥ ಸ್ಮರಣೆಯಲ್ಲಿಟ್ಟು ಕೊಳ್ಳುವುದರಿಂದ ಆತ್ಮಜ್ಞಾನ ಸಾಧ್ಯವಿಲ್ಲವೆನ್ನುವುದು ಉಪನಿಷತ್ತು.

ನಾಯಮಾತ್ಮಾ ಬಲಹಿನೇನ ಲಭ್ಯೋ ನ ಚ ಪ್ರಮಾದಾತ್ತಪಸೋ ವಾsಪ್ಯಲಿಂಗಾತ್।
ಏತೈರುಪಾಯೈರ್ಯತತೇ ಯಸ್ತು ವಿದ್ವಾಂಸ್ತಸ್ಯೈಷ ಆತ್ಮಾ ವಿತತೇ ಬ್ರಹ್ಮ ಧಾಮ॥[43]

ಬಲಹೀನನಿಗೂ, ಬ್ರಹ್ಮಚರ್ಯ ವ್ರತದಿಂದ ತಪಸ್ಸನ್ನಾಚರಿಸಿದರೂ ಆತ್ಮಜ್ಞಾನ ಪ್ರಾಪ್ತಿಯಾಗುವುದಿಲ್ಲ. ಜ್ಞಾನಿಗಳು ಹೇಳಿದ ಮಾರ್ಗೋಪಾಯವನ್ನು ಕ್ರಮವಾಗಿ ಅನುಸರಿಸಿದಾಗ ಮಾತ್ರ ಆತ್ಮಜ್ಞಾನ ಪ್ರಾಪ್ತವಾಗುತ್ತದೆ. ಉಪನಿಷತ್ತಿನಂತೆ ದಾಸಿಮಯ್ಯನವರು ಆತ್ಮಜ್ಞಾನವು ಕೇವಲ ಹೇಳುವುದರಿಂದಾಗಲಿ ಅಥವಾ ಕೇಳುವುದರಿಂದಾಗಲಿ ಸಾಧ್ಯವಿಲ್ಲವೆನ್ನುವರು. ಶ್ರವಣ, ಮನನ, ಮತ್ತು ನಿಧಿದ್ಯಾಸನಗಳ ಮೂಲಕ ಸ್ವಯಂ ಸತತ ಪ್ರಯತ್ನದಿಂದ ಆತ್ಮನ ಅರಿವಿನ ಅನುಭವವಾಗುತ್ತದೆ.

ಮನೆಯಲ್ಲಿ ಅಟ್ಟಿನೆಂದಡೆ ಹೊಟ್ಟೆ ತುಂಬಿದುದುಂಟೆ?
ಕೈಮುಟ್ಟಿ ಉಣ್ಣದನ್ನಕ್ಕರ!
ತಾನು ವಚನಾಗಮದ ಪ್ರಸಂಗವ ಬಲ್ಲೆನೆಂದಡೆ
ಬಲ್ಲವರಾರೂ ಇಲ್ಲವೆಂದಡೆ
ಆತ ತನ್ನ ನುಡಿಗೆ ಸಿಲುಕುವನೆ?ಇಲ್ಲ ಕಾಣಾ! ರಾಮನಾಥ.[44]

ಆತ್ಮನನ್ನು ಪ್ರತ್ಯಕ್ಷ ಮಾಡಿಕೊಳ್ಳಲು ಜೀವಿಯು ಸತ್ಯದಿಂದಲೂ, ತಪಸ್ಸಿನಿಂಲೂ, ಸಮ್ಯಗ್ ಜ್ಞಾನದಿಂದಲೂ, ಬ್ರಹ್ಮಚರ್ಯದಿಂದಲೂ ಸಾಧ್ಯವೆಂದು ಉಪನಿಷತ್ತುಗಳು ಹೇಳುವವು. ಆದುದರಿಂದಲೇ **"ಸತ್ಯಂ ಜ್ಞಾನಮನಂತಂ ಬ್ರಹ್ಮ"**[45] ಸತ್ಯ, ಜ್ಞಾನ, ಮತು ಅನಂತಗಳು ಆತ್ಮ(ಬ್ರಹ್ಮ)ನ ಲಕ್ಷಣಗಳಾಗಿವೆ.

ಸತ್ಯೇನ ಲಭ್ಯಸ್ತಪಸಾ ಹ್ಯೇಷ ಆತ್ಮಾ ಸಮ್ಯಗ್ಜ್ಞಾನೇನ ಬ್ರಹ್ಮಚರ್ಯೇಣ ನಿತ್ಯಮ್।
ಅಂತಃಶರೀರೇ ಜ್ಯೋತಿರ್ಮಯೋ ಹಿ ಶುಭ್ರೋ ಯಂ ಪಶ್ಯಂತಿ ಯತಯಃ ಕ್ಷೀಣದೋಷಾಃ॥[46]

ಆತ್ಮನು ಸತ್ಯರೂಪದವನಾಗಿ ಮೂರು ಕಾಲದಲ್ಲಿ ಇರುವವನಾಗಿದ್ದಾನೆ. ಸತ್ಯವೆಂದರೆ ಕೇವಲ ಆಡುವ ಮಾತಲ್ಲ. ಯಾವಾಗಲೂ ಇರುವುದು ಯಾವುದೋ ಅದು ಸತ್ಯ ಅದುವೇ ಆತ್ಮ. ನಾವು ಅದನ್ನು ಪಡೆಯಲು ಸತ್ಯದ ಮಾರ್ಗ ಅನುಸರಿಸಬೇಕು. ತಪಸನ್ನಾಚರಿಸುತ್ತ, ಜ್ಞಾನವುಳ್ಳವನಾಗಿ, ಬ್ರಹ್ಮಚರ್ಯವ್ರತದ ಮೂಲಕ ಭೂತಗಳಲ್ಲಿ

ಅಡಗಿರುವ ಜ್ಯೋತಿಸ್ವರೂಪನಾದ ಆತ್ಮನನ್ನು ಅರಿಯಲು ಸಾಧ್ಯ. ಹಾಗೆಯೇ ಮುಂಡಕವು ಮುಂದುವರೆದು ಜಯವು ಅಸತ್ಯಕ್ಕಲ್ಲ, ಅನಾತ್ಮಗಳಿಗಲ್ಲ, ಸತ್ಯಕ್ಕೆ ಮಾತ್ರ ಜಯ, ಅಮೃತಕ್ಕೆ ಜಯ, ಆತ್ಮಕ್ಕೆ ಜಯ. ಉಳಿದೆಲ್ಲವುಗಳಿಗೆ ಎಂದಿಗೂ ಜಯವಿಲ್ಲ. ಏಕೆಂದರೆ ಅವೆಲ್ಲ ಅಸತ್ಯ ವಸ್ತುಗಳಾಗಿವೆ. ಇಂದು ತೋರಿ ನಾಳೆ ಇಲ್ಲದಂತಾಗುತ್ತವೆ ಎಂದಿದೆ.

ಸತ್ಯಮೇವ ಜಯತಿ ನಾನೃತಂ ಸತ್ಯೇನ ಪಂಥಾ ವಿತತೋ ದೇವಯಾನಃ।
ಯೇನಾಕ್ರಮಂತ್ಯೃಷಯೋ ಹ್ಯಾಪ್ತಕಾಮಾ ಯತ್ರ ತತ್ಸತ್ಯಸ್ಯ ಪರಮಂ ನಿಧಾನಮ್॥[47]

ಕಠೋಪನಿಷತ್ತು ಆತ್ಮನ ಇರುವಿಕೆಯ ಸ್ಥಾನ ಹೃದಯವೆಂದು ಗುರ್ತಿಸಿ, ಅಂಗುಷ್ಠ ಗಾತ್ರವಿದ್ದಾನೆಂದು ಹೇಳಿದೆ. ಆತ್ಮನು ಜೀವಿಗಳ ಹೃದಯದಲ್ಲಿ ತ್ರಿಕಾಲಾಧಿತನಾಗಿ, ಹೆಬ್ಬೆರಳಿನ ಗಾತ್ರದಲ್ಲಿರುವನು.

ಅಂಗುಷ್ಠಮಾತ್ರಃ ಪುರುಷೋ ಮಧ್ಯ ಆತ್ಮನಿ ತಿಷ್ಠತಿ।
ಈಶಾನಂ ಭೂತಭವಸ್ಯ ನ ತತೋ ವಿಜುಗುಪ್ಸತೇ॥[48]

ಅಂಗುಷ್ಠ ಪರಿಮಾಣವುಳ್ಳ ಆತ್ಮನು ಪುರವೆಂಬ ಶರೀರದಲ್ಲಿರುವುದರಿಂದ ಪುರುಷನಾಗಿ ಜೀವಿಗಳ ಹೃದಯದಲ್ಲಿದ್ದಾನೆ. **"ಪುರುಷಃ ಪೂರ್ಣಮನೇನ ಸರ್ವಮಿತಿ"** ಬ್ರಹ್ಮನು ಜೀವಿಗಳ ಶರೀರಗಳಲ್ಲಿ ಭೂತ ಮೊದಲಾದ ಕಾಲದಲ್ಲೂ ಬದಲಾಗದೆ ಆತ್ಮ ರೂಪಿಯಾಗಿರುವುದರಿಂದ ಅವನನ್ನು ಜೀವಾತ್ಮನೆಂದು ಕರೆಯುತ್ತಾರೆ.

ಅಂಗುಷ್ಠಮಾತ್ರಃ ಪುರಷೋsಂತರಾತ್ಮಾ ಸದಾ ಜನಾನಾಂ ಹೃದಯೇ ಸಂನಿವಿಷ್ಟಃ।[49]

ಅಂಗುಷ್ಠ ಪರಿಮಾಣವುಳ್ಳ ಆತ್ಮನು ಜೀವಿಗಳ ಶರೀರದಲ್ಲಿದ್ದರೂ ಕಾಣುವುದಿಲ್ಲ. **"ಶರೀರದೊಳಗಾತ್ಮನನಾರು ಕಾಣದಂತಿರಿಸಿದೆ"** ಅದನ್ನು ಶರಣರು ಲಿಂಗರೂಪದಲ್ಲಿ ಕರಸ್ಥಲಕ್ಕೆ ತಂದುಕೊಂಡು, ಅದನ್ನೇ ಆತ್ಮ, ಈಶ್ವರನೆಂದು ಪೂಜಿಸಿದರು. ಅವರು ಅಂಗದಲ್ಲಿರುವ ಆತ್ಮನನ್ನು ಲಿಂಗದಲ್ಲಿ ಕಂಡುಕೊಂಡಿದ್ದಾರೆ. ಉಪನಿಷತ್ತು ಹೇಳಿದ ಆತ್ಮನ ಗಾತ್ರವು, ಶರಣರು ಪೂಜಿಸಿದ ಲಿಂಗದ ಗಾತ್ರವು ಅಂಗುಷ್ಠ ಮಾತ್ರವೇ ಆಗಿದೆ.

ಉಪನಿಷತ್ತು ಹೇಳಿದ ಆತ್ಮನ ಲಕ್ಷಣಗಳನ್ನು ಲಿಂಗದಲ್ಲಿ ಕಂಡುಕೊಂಡಿದ್ದಾರೆ. ಶರಣರು, ಲಿಂಗವು ಗುರು ಮುಖೇನ ಬಂದದ್ದು ಎಂದು ಹೇಳಿ, ಅದರ ಮೂಲಕ ಸಾಧನೆಗೈದು ಮೋಕ್ಷ ಸಂಪಾದಿಸಿದ್ದಾರೆ. ಅದಕ್ಕೆ ಸಂಬಂಧಿಸಿದ ದಾಸಿಮಯ್ಯನವರ ವಚನಗಳು ಹೀಗಿದೆ.–

ಅರುಹು ಅರಿಯಲೆಂದು
ಕುರುಹ ಕೈಯಲ್ಲಿ ಕೊಟ್ಟ!
ಅರುಹನೆ ಮರದು ಕುರುಹನೆ ಹರಿದ!
ಈ ಕುರುಂಬರಿಗಿನ್ನೆತ್ತಣ ಮುಕ್ತಿಯೋ? ರಾಮನಾಥ.[50]

ಅಂಗುಷ್ಠ ಮಾತ್ರ ಆಕಾರವುಳ್ಳ ಪುರುಷನು ಜ್ಯೋತಿ ಸ್ವರೂಪನಾಗಿದ್ದಾನೆ. ಅವನು ಧೂಮ ರಹಿತವಾಗಿದ್ದಾನೆ. ಅಂದರೆ ಕಲ್ಮಶರಹಿತನಾಗಿದ್ದಾನೆ. ಅವನು ಇಂದು, ನಾಳೆ ಎಂದಿಗೂ ಆರದ ಶಾಶ್ವತವಿರುವ ಜ್ಯೋತಿಸ್ವರೂಪನಾಗಿದ್ದಾನೆ. ಅವನು ಪರಿಪೂರ್ಣನಾಗಿ ಎಲ್ಲ ಜೀವಕೋಟಿಗಳ ಶರೀರದಲ್ಲಿ ಅಂಗುಷ್ಠ ಗಾತ್ರದಲ್ಲಿದ್ದು ಆತ್ಮಜ್ಯೋತಿ ಎಂದೆನಿಸಿಕೊಂಡಿದ್ದಾನೆ.

ಅಂಗುಷ್ಠಮಾತ್ರಃ ಪುರುಷೋ ಜ್ಯೋತಿರಿವಾಧೂಮಕಃ[51]

ಉಪನಿಷತ್ತು ಆತ್ಮನು ಜ್ಯೋತಿಸ್ವರೂಪನೆಂದು ಹೇಳಿರುವಂತೆ, ದೇವರ ದಾಸಿಮಯ್ಯನವರು ಸಹ ಲಿಂಗಕ್ಕೆ ಜ್ಯೋತಿಯೆಂದು ಕರೆದಿದ್ದಾರೆ. ಹೃದಯದಲ್ಲಿರುವ ಆತ್ಮಜ್ಯೋತಿಯು ಕರಸ್ಥಲದ ಜ್ಯೋತಿಯಾಗಿ ಸ್ವೀಕರಿಸಿ, ಅದನ್ನು ಅರಿತುಕೊಂಡಾಗ ಆತ್ಮಜ್ಞಾನದ ಅರಿವು ಆಗುತ್ತದೆ ಎಂದಿದ್ದಾರೆ.

ಕರಸ್ಥಲದ ಜ್ಯೋತಿಯಿದು. ಕರುವಿಟ್ಟ ಎರಕವಿದು.
ಇದರ ನೆಲೆಯ ತಿಳಿ ನೋಡಿದಡೆ ನಿಜಾದಾನಂದವು.
ಹೊರಬುದೊರದ ನಿಸ್ಸಂಗದ ಹೊಲಬನರಿದು
ಕೂಡಿದಾತನೆ ಶರಣ ಕಾಣಾ ರಾಮನಾಥ.[52]

ಜ್ಯೋತಿಸ್ವರೂಪನಾದ ಆತ್ಮನ ಕುರುಹು ಲಿಂಗ. ಅದನ್ನು ಶ್ರೋತ್ರೀಯ ಬ್ರಹ್ಮನಿಷ್ಠನು ಕರುಣಿಸುವನು. ಆ ಕುರುಹಿನಿಂದ ತನ್ನ ನಿಜ ಸ್ವರೂಪವನ್ನು ಹೊಂದದ ಅಜ್ಞಾನಿಗೆ ಮುಕ್ತಿ ಎಲ್ಲಿಯದು? ಧೂಮರಹಿತ ಸ್ವಯಂ ಪ್ರಕಾಶನಾದ ಜ್ಯೋತಿಯಿಂದ ಅಜ್ಞಾನವು ಕಳೆದು ಹೋಗುತ್ತದೆ. ಲಿಂಗವು ಸಹ ಜ್ಯೋತಿಸ್ವರೂಪವಾಗಿರುವುದರಿಂದ ಅದು ಸಹ ಅಜ್ಞಾನವನ್ನು ಕಳೆಯುತ್ತದೆ ಎನ್ನುವರು ದಾಸಿಮಯ್ಯನವರು.

ಅಂಗಲಿಂಗದ ಒಳಗೆ ಲಿಂಗಕಂಗಳ ಬೆಳಗು
ಹಿಂಗಲಾಪುದೆ ಹೇಳು ಅಜ್ಞಾನವ!
ಸಂಗಸುಖ ಮಥನದ ಅಸಂಗದಿಂದದನರಿದು
ಹಿಂಗಲಿಕೆ ಹೆಸರೇನು? ರಾಮನಾಥ.[53]

ಉಪನಿಷತ್ತು ಆತ್ಮನು ಅಂಗುಷ್ಠಗಾತ್ರವೆಂದು ಲಕ್ಷಣ ಹೇಳಿರುವುದರಿಂದ, ಅಂಗುಷ್ಠ ಮಾತ್ರ ಗಾತ್ರವಿರುವ ಆ ಆತ್ಮಕ್ಕೆ ಶರಣರು ಲಿಂಗದ ಪರಿಕಲ್ಪನೆ ಕೊಟ್ಟಿದ್ದಾರೆ. ಆ ಲಿಂಗವು ಅಂಗುಷ್ಠ ಗಾತ್ರದಷ್ಟೆ ಆಕಾರವನ್ನು ಹೊಂದಿದೆ. ಇದು ನಿರ್ಗುಣ ಈಶ್ವರನನ್ನು ಸಗುಣ ರೂಪದಲ್ಲಿ ಧ್ಯಾನಿಸಲಿಕ್ಕೆ ಸಾಧನೆ ಮಾಡಿಕೊಂಡರು. ದಾಸಿಮಯ್ಯನವರು ಲಿಂಗಕ್ಕೆ ಕುರುಹು, ಜ್ಯೋತ, ಜ್ಞಾನ, ಕ್ರಿಯೆ ಮೊದಲಾದ ಹೆಸರುಗಳಿಂದ ಕರೆದಿರುವುದನ್ನು ಅವರ ವಚನಗಳಲ್ಲಿ ಕಾಣಬಹುದು.

6.3. ಜೀವ

ಆತ್ಮನು ಪುರವೆಂಬ ಶರೀರದಲ್ಲಿರುವುದರಿಂದ ಪುರುಷನಾಗಿ ಜೀವಿಗಳ ಹೃದಯದಲ್ಲಿದ್ದಾನೆ. **"ಪುರುಷಃ ಪೂರ್ಣಮನೇನ ಸರ್ವಮಿತಿ"** ಬ್ರಹ್ಮನು(ಆತ್ಮ) ಜೀವಿಗಳ ಶರೀರಗಳಲ್ಲಿ ಭೂತ ಮೊದಲಾದ ಕಾಲದಲ್ಲೂ ಬದಲಾಗದೆ ಚೈತನ್ಯ ರೂಪಿಯಾಗಿರುವ ಬ್ರಹ್ಮ(ಆತ್ಮ)ನನ್ನು ಜೀವಾತ್ಮನೆಂದು ಕರೆಯುತ್ತಾರೆ. ಅವನೇ ಜೀವ. ಆದುದರಿಂದ ಬ್ರಹ್ಮ(ಆತ್ಮ)ನು ಶರೀರ ಉಪಾದಿಗಳ ಮೂಲಕ ಜೀವ ಎನಿಸಿಕೊಂಡನು. ಜೀವಿಯ ಈ ಶರೀರಕ್ಕೆ ಉಪನಿಷತ್ತು ರಥವೆಂದು ಕರೆದರೆ, ದಾಸಿಮಯ್ಯನವರು ಬಂಡಿ, ಗೋಣಿಚೀಲ, ಎಂದು ಕರೆದಿದ್ದಾರೆ, ಮತ್ತೆ ಕೆಲವರು ಜ್ಞಾನಿಗಳು ಮಡಿಕೆ(ಘಟ), ಪಟ, ದೇವಾಲಯ ಎಂದು ಹಲವಾರು ಹೆಸರುಗಳಿಂದ ಕರೆದಿದ್ದಾರೆ.

ಕಠೋಪನಿಷತ್ತು ಶರೀರ ಇಂದ್ರಿಯಗಳನ್ನು ಸಂಪೂರ್ಣವಾಗಿ ರಥಕ್ಕೆ ಹೋಲಿಸಿದೆ. ಶರೀರವೆಂಬುದು ರಥ, ಆತ್ಮ(ರಥಿಕ) ಮಾಲಿಕ, ಬುದ್ಧಿ ಎಂಬುದು ಸಾರಥಿ, ಮನಸ್ಸು ಲಗಾಮಾಗಿದೆ. ಇಂದ್ರಿಯಗಳು ಕುದುರೆಗಳು. ಇಂದ್ರಿಯಗಳು ಶಬ್ದಾದಿ ವಿಷಯಗಳತ್ತ ಹೋಗದಂತೆ ಮನಸ್ಸೆಂಬ ಲಗಾಮ(ಕಡಿವಾಣ)ನ್ನು ಸಾರಥಿಯು ಹಿಡಿತದಲ್ಲಿಟ್ಟುಕೊಂಡಿರಬೇಕು. ಇದರಿಂದ ಸಂಸಾರ ಸಾಗರ ವಿಷಯದಲ್ಲಿ ಬಿದ್ದು ಜರಾ–ಮರಣಗಳ ದುಃಖ ಜೀವಿಗೆ ಇಲ್ಲದಂತಾಗುತ್ತದೆ.

ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇತು।
ಬುದ್ಧಿಂ ತು ಸಾರಥಿಂ ವಿದ್ಧಿ ಮನಃ ಪ್ರಗ್ರಹಮೇವ ಚ॥
ಇಂದ್ರಿಯಾಣಿ ಹಯಾನಾಹುರ್ವಿಷಯಾಂ ಸ್ತೇಷು ಗೋಚರಾನ ।
ಆತ್ಮೇಂದ್ರಿಯಮನೋಯುಕ್ತ ಭೋಕ್ತೇತ್ಯಾಹುರ್ಮನೀಷಿಣಃ॥[54]

ಮುಂಡಕವು ಶರೀರವನ್ನು ರಥದ ಚಕ್ರಕ್ಕೆ ಹೋಲಿಸಿ ಈಶ್ವರನು ಶರೀರದಲ್ಲಿ ಜೀವ(ಆತ್ಮ) ರೂಪದಲ್ಲಿದ್ದು, ಎಲ್ಲವನ್ನು ನಿಗ್ರಹಿಸುತ್ತಿದ್ದಾನೆ. ಆ ಆತ್ಮ ಸ್ವರೂಪನಾದ ಈಶ್ವರನನ್ನು ಕಾಣಲು ಜೀವಿಯು ಓಂಕಾರವನ್ನು ಧ್ಯಾನಿಸಬೇಕು. ಅವನು ಈ ಜಗತ್ತಿನಲ್ಲಿ ರಥದ ಚಕ್ರದ ನಾಭಿಯಂತೆ ಜೀವಿಗಳಲ್ಲಿ ಇದ್ದಾನೆ. ನಾಭಿಯಲ್ಲಿ ಚಕ್ರದ ಕಾಲುಗಳು ಸೇರಿದಂತೆ, ಶರೀರದಲ್ಲಿರುವ ಪುರುಷನಿಗೆ ಅಂಗಾಂಗಗಳು ಸೇರಿವೆ ಎಂದು ಹೇಳುತ್ತದೆ.

ಅರಾ ಇವ ರಥನಾಭೌ ಸಂಹತಾ ಯತ್ರ ನಾಡ್ಯಃ
ಸ ಏಷೋ ಂತಶ್ಚರತೇ ಬಹುಧಾ ಜಾಯಮಾನಃ।
ಓಮಿತ್ಯೇವಂ ಧ್ಯಾಯಥ ಆತ್ಮಾನಂ
ಸ್ವಸ್ತಿ ವಃ ಪಾರಾಯ ತಮಸಃ ಪರಸ್ತಾತ್॥[55]

ಉಪನಿಷತ್ತು, ಪರಮ ಗುರಿಯತ್ತ ರಥವು ಸಾಗಲು ಕುದುರೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳಬೇಕೆಂದು ಹೇಳಿದರೆ, ದಾಸಿಮಯ್ಯನವರು ಶರೀರ ಎನ್ನುವ

ಚಕ್ರಕ್ಕೆ ಕೀಲು ಹಾಕಬೇಕೆಂದಿದ್ದಾರೆ. ಇವರ ದೃಷ್ಟಿಯಲ್ಲಿ ಇಂದ್ರಿಯಗಳು ಕುದುರೆಗಳಾಗದೆ ಚಕ್ರಗಳಾಗಿವೆ. ಇವುಗಳಿಗೆ ತಡೆ ಹಾಕದಿದ್ದರೆ ವಿಷಯಗಳ ಕಡೆಗೆ ಇಳಿ ಮುಖವಾಗಿ ಉರುಳುತ್ತಲೇ ಹೋಗುತ್ತವೆ. ಆದುದರಿಂದ ಚಕ್ರಗಳ ಸಹಿತವಾದ ಶರೀರ ಎನ್ನುವ ರಥವು ಪರಮ ಗುರಿ ತಲುಪುವಂತೆ ಕೀಲು(ಕಡೆಗೀಲು) ಹಾಕಬೇಕು. ಕುದುರೆಗೆ ಲಗಾಮ ಹಾಕಿದಂತೆ, ಚಕ್ರಗಳೆನ್ನುವ ಕುದುರೆಗಳಿಗೆ ಕಡೆಗೀಲು ಹಾಕಬೇಕು. ಇಲ್ಲಿ ಶರಣರ ನುಡಿಗಡಣವನ್ನು ದಾಸಿಮಯ್ಯನವರು ಕಡೆಗೀಲು ಎಂದು ಕರೆದಿದ್ದಾರೆ.

ಕಡೆಗೀಲಗಲದ ಬಂಡಿ ಹೊಡೆಗೆಡೆಯದೆ ಮಾಣ್ಬುದೆ?
ಕಡೆಗೀಲು ಬಂಡಿಗಾಧಾರ
ಈ ಕಡುದರ್ಪವೇರಿದ ಒಡವೆಂಬ ಬಂಡಿಗೆ
ಮೃಡಭಕ್ತರ ನುಡಿಗಡಣವೆ ಕಡೆಗೀಲು ಕಾಣಾ! ರಾಮನಾಥ.[56]

ಬಂಡಿ ಎಂಬುದು ಮದಭರಿತ ಶರೀರವಾದರೆ, ಕಡೆಗೀಲು ಎಂಬುದು ಜ್ಞಾನಿಗಳ, ಅನುಭಾವಿಗಳ ಆತ್ಮಜ್ಞಾನವನ್ನು ಬೋಧಿಸುವ ಮಾತುಗಳಾಗಿವೆ. ಇಲ್ಲಿ ಬಂಡಿ ಮತ್ತು ಶರೀರಗಳು ಜೀವಂತ ದೃಷ್ಟಾಂತಗಳಾಗಿವೆ. ಇವೆರಡು ಕ್ರಿಯೆಯಿಂದ ಕೂಡಿವೆ. ಈ ಎರಡರಲ್ಲಿ ಬಂಡಿಯ ಚಕ್ರಕ್ಕೆ ಕಬ್ಬಿಣದ ಕಡೆಗೀಲು ಇರದಿದ್ದರೆ ತನ್ನ ಗುರಿ ಸೇರದು. ಹಾಗೆಯೇ ಶರೀರವು ಸಹ ಮೋಕ್ಷವೆಂಬ ಗುರಿ ತಲುಪಲು ಜ್ಞಾನಿಗಳ, ಮೃಡಭಕ್ತರ ನುಡಿಯು ಅವಶ್ಯಕವೆಂದಿದ್ದಾರೆ ದಾಸಿಮಯ್ಯನವರು. ಜೀವಿಯ ಶರೀರವನ್ನು ಕುರಿತು ದಾಸಿಮಯ್ಯನವರು ಗೋಣಿಚೀಲು ಎಂದಿದ್ದಾರೆ.

ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ.
ಇರುಳೆಲ್ಲಾ ನಡೆದನಾ ಸುಂಕಕಂಜಿ.
ಅಳಿಮನದವನ ಭಕ್ತಿ ಇಂತಾಯಿತ್ತು! ರಾಮನಾಥ.[57]

ಜೀವಿಯ ಶರೀರವೇ ಗೋಣಿಚೀಲು. ಶರೀರವು ನವರಂದ್ರಗಳಿಂದ ಕೂಡಿರುವುದರಿಂದ ಗೋಣಿಚೀಲು(ಶರೀರವು) ಹರಿದಿದೆ ಎಂದು ಹೇಳಬಹುದು. ಶರೀರದಲ್ಲಿ ಶಿವನಚೈತನ್ಯವೆಂಬ ಕಳವೆ ತುಂಬಿದೆ. ಈಶ್ವರನ ಅರಿವಿಗೆ ಸತ್ಯ, ಧರ್ಮ, ತಪಸ್ಸು, ಜ್ಞಾನ ಮೊದಲಾದ ಸಾಧನೆಗಳೆಂಬುದೆ ಸುಂಕ. ಸಾಧನೆಗೆ ಮನಸ್ಸು ವ್ಯಯ ಮಾಡದೆ ಕತ್ತಲೆಯಲ್ಲಿ(ಅಜ್ಞಾನದಲ್ಲಿ) ತಿರುಗುತ್ತ ದೇಹೇಂದ್ರಿಗಳ ಶಕ್ತಿ ಕಳೆದು ಕೊಂಡಾಗ ಏನನ್ನೂ ಮಾಡಲು ಸಾಧ್ಯವಿಲ್ಲ.

ಐತರೇಯೋಪನಿಷತ್ತು **"ಗರ್ಭೇ ನು ಸನ್ನನ್ವೇಷಾಮವೇದಮಹಂ ದೇವಾನಾಂ ಜನಿಮಾನಿ ವಿಶ್ವಾ"58** ಜೀವಿ(ಶಿಶು) ತಾಯಿಯ ಗರ್ಭದಲ್ಲಿರುವಾಗ ಭೂತ ಭವಿಷ್ಯತ್‌ಗಳನ್ನು ಅರಿಯುವ ಶಕ್ತಿಯನ್ನು ಹೊಂದಿರುತ್ತದೆ. ತಾಯಿಯ ಗರ್ಭವನ್ನು ಬಿಟ್ಟು ಭೂಮಿಗೆ ಬರುತ್ತಲೇ ಎಲ್ಲವನ್ನು ಮರೆಯುತ್ತದೆ. ದಾಸಿಮಯ್ಯನವರು ತಾಯಿ–

ಮಗುವಿನ ಸಂಬಂಧವನ್ನು ಜೀವಾತ್ಮ ಮತ್ತು ಪರಮಾತ್ಮರಿಗೆ ಹೋಲಿಸಿದ್ದಾರೆ. ತಾಯಿಯ ಗರ್ಭ ಬಿಟ್ಟು ಭೂಮಿಗೆ ಬರುವ ಜೀವಿಗೆ 'ಪ್ರಸೂತಿ'ವಾಯು ಅಥವಾ 'ವೈಷ್ಣವಿ'ವಾಯು ಆವರಿಸಿದಾಗ ಎಲ್ಲವನ್ನು ಮರೆಯುತ್ತಾನೆ. ಅದುವೇ ಅಜ್ಞಾನಾವರಣ. ಅದು ಕಳಚಿಕೊಳ್ಳದೆ ಹೋದರೆ ಜೀವಿಯು ತಾನು ಯಾರೆಂದು ಅರಿಯಲು ಸಾಧ್ಯವಿಲ್ಲ.

ತಾಯ ಗರ್ಭದ ಶಿಶು ತಾಯ ಕುರುಹನರಿಯದು
ಆ ತಾಯಿ ಶಿಶುವಿನ ಕುರುಹನೆಂದೂ ಅರಿಯಳು.
ಮಾಯಾಮೋಹದಲ್ಲಿಪ್ಪ ಭಕ್ತರು ದೇವರನರಿಯರು.
ಆ ದೇವರು ಆ ಭಕ್ತರನೆಂದೂ ಅರಿಯನು ಕಾಣಾ! ರಾಮನಾಥ.[59]

ತಾಯಿಗೂ ಶಿಶುವಿಗೂ ಅನ್ಯೋನ್ಯ ಸಂಬಂಧವಿದೆ. ಆದರೆ ತಾಯಿಯ ಗರ್ಭಕೋಶದಲ್ಲಿರುವ ಶಿಶುವಿನ ಕುರುಹು ಅರಿಯಳು. ಹಾಗೆಯೇ ಶಿಶು ಸಹ ತಾಯಿಯ ಸ್ವರೂಪ ತಿಳಿಯದು. ಶಿಶು ತನ್ನ ಗರ್ಭಾವರಣದಿಂದ ಕಳಚಿ ಹೊರ ಬಂದಾಗ ಇಬ್ಬರ ಪರಸ್ಪರ ಪರಿಚಯವಾಗುತ್ತದೆ. ಹಾಗೆಯೇ ಜೀವಿಗೆ ತನ್ನ ಸ್ವರೂಪ ಜ್ಞಾನವಾಗಲಿ ಅಥವಾ ಈಶ್ವರನ ಸಾಕ್ಷಾತ್ಕಾರವಾಗಲಿ ಆಗಬೇಕಾದರೆ, ಪ್ರಪಂಚದ ಅಜ್ಞಾನಾವರಣ ಮಾಯಾಕೋಶ ಕಳಚಿಕೊಳ್ಳಬೇಕೆಂಬುವುದೇ ಈ ವಚನದ ತಾತ್ಪರ್ಯ.

ಕೇನೇಷಿತಂ ಪತತಿ ಪ್ರೇಷಿತಂ ಮನಃ ಕೇನ ಪ್ರಾಣಃ ಪ್ರಥಮ ಪ್ರೈತಿ ಯುಕ್ತಃ।
ಕೇನೇಷಿತಾಂ ವಾಚಾಮಿಮಾಂ ವದಂತಿ ಚಕ್ಷುಃ ಶ್ರೋತ್ರಂ ಕ ಉ ದೇವೋ ಯುನಕ್ತಿ॥[60]

ಜೀವಿಯ ಮನಸ್ಸು ಪ್ರವೃತ್ತಿ–ನಿವೃತ್ತಿಗಳ ವಿಷಯದಲ್ಲಿ ಸ್ವತಂತ್ರವಾಗಿಲ್ಲ. ಹಾಗೇನಾಗಿದ್ದರೆ ಅನಿಷ್ಟವಾದ ಚಿಂತನೆ ಮಾಡಿ ಬೇಡವಾದ ದುಃಖವನ್ನುಂಟು ಮಾಡುವ ಕರ್ಮಗಳಲ್ಲಿ ಮನಸ್ಸು ಪ್ರವರ್ತಿಸುತ್ತಿರಲಿಲ್ಲ. ಇದಕ್ಕೆ ಪ್ರೇರಣೆ ಮಾಡುವವರು ಯಾರು? ಪ್ರಾಣವು ಸರ್ವೇಂದ್ರಿಯಗಳಿಗಿಂತ ಪ್ರಧಾನವಾಗಿದ್ದು ಎಲ್ಲಕ್ಕೂ ಚೇತನ ಕೊಟ್ಟು ಕಾರ್ಯ ಪ್ರವೃತಿಯಲ್ಲಿ ತೊಡಗುವಂತೆ ಮಾಡುತ್ತದೆ. ಇದು ದೇಹದಲ್ಲಿ ಪ್ರಾಣ, ಅಪಾನ, ವ್ಯಾನ, ಸಮಾನ ಮತ್ತು ಉದಾನಗಳಾಗಿ ಕಾರ್ಯ ನಿರ್ವಹಿಸುತ್ತದೆ. ಇದಕ್ಕೆ ಪ್ರೇರಕರಾರು? ಜೀವಿಗಳಾಡುವ ವಾಣಿಗೆ, ಚಕ್ಷುವಿಗೆ, ಶ್ರೋತೃಗಳಿಗೆ ಪ್ರೇರಣೆ ಕೊಡುವವರಾರು? ಇವುಗಳ ಹಿಂದೆ ಒಂದು ಶಕ್ತಿ ಇರಬಹುದು ಅದು ಯಾವುದು? ಎಂಬುದು ಕೇನೋಪನಿಷತ್ತಿನ ಪ್ರಶ್ನೆಯಾಗಿದೆ. ಇದಕ್ಕೆ ಉತ್ತರರೂಪವಾಗಿ ಈ ಎಲ್ಲಕ್ಕೂ ಬ್ರಹ್ಮನೇ ಕಾರಣ ಹಾಗೂ ಪ್ರೇರಣನಾಗಿದ್ದಾನೆ. ಪ್ರಾಣ, ಅಪಾನ, ವ್ಯಾನ, ಉದಾನ ಮತ್ತು ಸಮಾನಗಳೆಂಬ ಪಂಚ ಪ್ರಾಣಗಳಿಗೆ, ಮನ, ಚಿತ್ತ, ಬುದ್ಧಿ ಮತ್ತು ಅಹಂಕಾರಗಳೆಂಬ ಅಂತಃಕರಣಗಳಿಗೆ, ಚಕ್ಷ, ಶೋತ್ರ, ಜೀವ, ಪ್ರಾಣ ಮತ್ತು ತ್ವಕ್‌ಗಳೆಂಬ ಜ್ಞಾನೇಂದ್ರಿಯಗಳಿಗೆ, ಮತ್ತು ವಾಕ್, ಪಾಣಿ, ಪಾದ, ಪಾಯು ಮತ್ತು ಉಪಸ್ಥಗಳೆಂಬ ಕರ್ಮೇಂದ್ರಿಯಗಳಿಗೆ ಪ್ರೇರಣೆ ಕೊಡುವವ ಹಾಗೂ ಜೊತೆಗೆ ಇರುವುದರಿಂದ ಬ್ರಹ್ಮ ಜೀವನಾಗಿದ್ದಾನೆ. ಜೀವಿಯು ತನ್ನ ಮೂಲ ಸ್ವರೂಪವನ್ನು ತಿಳಿದುಕೊಂಡರೆ ಎಲ್ಲವನ್ನು

ತಿಳಿದು ಕೊಂಡಂತೆ. ಹಾಗೂ ಅಂತಹ ಜೀವಿಗಳು ಮೃತ್ಯುವಿನಿಂದ ಬಿಡುಗಡೆ ಹೊಂದಿ ಅಮೃತರಾಗುತ್ತಾರೆ ಎಂದು ಕೇನೋಪನಿಷತ್ತು ಸಾರುತ್ತದೆ.

ಶ್ರೋತ್ರಸ್ಯ ಶ್ರೋತ್ರಂ ಮನಸೋ ಮನೊ ಯದ್ವಾಚೋ ಹ ವಾಚಂ ಸ ಉ ಪ್ರಾಣಸ್ಯ ಪ್ರಾಣಃ।
ಚಕ್ಷುಷಶ್ಚಕ್ಷುರತಿಮುಚ್ಯ ಧೀರಾಃ ಪ್ರೇತ್ಯಾಸ್ಮಾಲ್ಲೋಕಾದಮೃತಾ ಭವಂತಿ॥[61]

ಯಾವುದು ಮನಸ್ಸು, ಪ್ರಾಣ, ಮಾತುಗಳಿಗೆ ಪ್ರೇರಕವಾಗಿ, ಅವುಗಳಿಗೆ ಕಾರ್ಯಪ್ರವೃತ್ತಿಯನ್ನಾಗಿಸುತ್ತದೆಯೋ ಮತ್ತು ಯಾವುದು ಕಣ್ಣು ಮೊದಲಾದ ಇಂದ್ರಿಯಗಳಿಗೆ ಆಜ್ಞೆ ಮಾಡುತ್ತದೆಯೋ, ಅದೇ "ಬ್ರಹ್ಮ". ಅದು ಪ್ರಾಣಕ್ಕೆ ಪ್ರಾಣ, ಕಿವಿಗೆ ಕಿವಿ, ಕಣ್ಣಿಗೆ ಕಣ್ಣಾಗಿದೆಯೋ ಅದೇ ಜೀವಾತ್ಮ ಎನ್ನಬಹುದು.

ದಾಸಿಮಯ್ಯನವರು ಉಪನಿಷತ್ತಿನ ಮಂತ್ರಗಳಂತೆ ತಮ್ಮ ವಚನಗಳಲ್ಲಿ **"ಕಾಯ ನಿಮ್ಮದಾನ ಜೀವನಿಮ್ಮ ದಾನ"**[62] ಅಂದರೆ ಶರೀರಾದಿ ಇಂದ್ರಿಯಗಳಿಗೆ ಪ್ರೇರಕ ಅಷ್ಟೆ ಅಲ್ಲ, ಇಡೀ ಶರೀರೇಂದ್ರಿಯಗಳು ಈಶ್ವರನ ಕೊಡುಗೆಗಳಾಗಿವೆ ಎಂದಿದ್ದಾರೆ.

ಕಣ್ಣು ಮೀಸಲು ಶಿವನ, ಕೈ ಮೀಸಲು ಶಿವನ,
ಕಾಲು ಮೀಸಲು ಶಿವನ, ನಾಲಿಗೆ ಮೀಸಲು ಶಿವನ,
ಕಿವಿ ಮೀಸಲು ಶಿವನ, ನಾಸಿಕ ಮೀಸಲು ಶಿವನ,
ತನು ಮನವೆಲ್ಲಾ ಮೀಸಲು ಶಿವನ,
ಈ ಮೀಸಲು ಬೀಸರವಾಗದಂತಿರ್ದಡೆ
ಆತನೇ ಜಗದೀಶ ಕಾಣಾ! ರಾಮನಾಥ.[63]

ಕೇನೋಪನಿಷತ್ತಿನ ಮಂತ್ರಗಳ ಸಾರವನ್ನು ದಾಸಿಮಯ್ಯನವರ ವಚನಗಳಲ್ಲಿ ಕಂಡುಕೊಳ್ಳಬಹುದು. ಜೀವಿಯು ಶರೀರದ ಪ್ರತಿಯೊಂದು ಇಂದ್ರಿಯಗಳ ಹಿಂದೆ ಈಶ್ವರನ ಶಕ್ತಿ ಅಡಗಿರುವುದರಿಂದ ಜೀವಿ ಎನಿಸಿಕೊಂಡ. ಜೀವಿ ಶಿವನಾಗಬೇಕಾದರೆ ತನ್ನ ಶರೀರೇಂದ್ರಿಯಗಳು ಶಿವನಿಗೆ ಸಲ್ಲಿಸಬೇಕು. ಆದುದರಿಂದ ದಾಸಿಮಯ್ಯನವರು ಶಿವಾರ್ಪಣ ಭಾವನೆಯಿಂದ ಕಣ್ಣು ಮೀಸಲು ಶಿವನ, ಕೈ ಮೀಸಲು ಶಿವನ, ಎಂದು ಹೇಳಿರಬಹುದು. ಆಗ ಜೀವಭಾವ ಹೋಗಿ ಶಿವನಾಗುತ್ತಾನೆ ಎನ್ನುವರು ದೇವರ ದಾಸಿಮಯ್ಯನವರು.

6.4. ಜಗತ್ತು

ಸೃಷ್ಟಿಯ ಉಗಮ ಕುರಿತಂತೆ ಉಪನಿಷತ್ಕಾರರು, ಆದ್ಯವಚನಕಾರರಾದ ದೇವರ ದಾಸಿಮಯ್ಯನವರು ತಮ್ಮದೆಯಾದ ಆಲೋಚನಾ ಕ್ರಮವನ್ನು ವ್ಯಕ್ತಪಡಿಸಿದ್ದಾರೆ. ಸೃಷ್ಟಿಯ ಉಗಮವನ್ನು ಕುರಿತು ತೈತ್ತರೀಯೋಪನಿಷತ್ತು – ಅದು ತನ್ನನ್ನು ತಾನೇ ಉತ್ಪತ್ತಿ ಮಾಡಿಕೊಂಡಿದ್ದರಿಂದ ಅದು ಸುಕೃತವೆನಿಸುತ್ತದೆ. ಆ ಸುಕೃತವೇ ರಸ. ರಸವನ್ನೇ ಹೊಂದಿದ ಇವನು ಆನಂದಿತನಾಗುತ್ತಾನೆ. ಆಕಾಶದಲ್ಲಿ ಈ ಆನಂದವು ಇಲ್ಲದೆ ಹೋದರೆ

ಯಾರು ತಾನೇ ಅಪಾನಾದಿ ಕ್ರಿಯೆಗಳನ್ನು ಮಾಡಲು ಸಾಧ್ಯ? ಎಂದಿದೆ. **"ಅಸದ್ವಾ ಇದಮಗ್ರ ಆಸೀತ್। ತತೋ ವೈ ಸದಜಾಯತ। ತದಾತ್ಮಾನಂ ಸ್ವಯಂ ಕುರುತ। ..... ಯದೇಷ ಆಕಾಶ ಆನಂದೋ ನ ಸ್ಯಾತ್।"**[64] ಇಲ್ಲಿ ಸೃಷ್ಟಿ ಏಕಾಯಿತು? ಎಂದು ಪ್ರಶ್ನಿಸಿದರೆ ಮೂಲವಸ್ತುವಿನ ಆನಂದಕ್ಕಾಗಿ ಆಯಿತು ಎಂಬುದನ್ನು ಈ ಮಂತ್ರವು ಸ್ಪಷ್ಟ ಪಡಿಸುತ್ತದೆ.

ತೈತ್ತರೀಯೋಪನಿಷತ್ತಿನಲ್ಲಿ ಸೃಷ್ಟಿಯನ್ನು ಕುರಿತು ಅದು ತನ್ನನ್ನು ತಾನೇ ಉತ್ಪತ್ತಿ ಮಾಡಿಕೊಂಡಿತು ಎಂದು, ತನ್ನ ಆನಂದಕ್ಕಾಗಿಯೇ ಈ ಎಲ್ಲ ಸೃಷ್ಟಿ ಎಂದು ಹೇಳಿದಂತೆ, ಅನೇಕ ಶರಣರು ಸಹ ತಮ್ಮ ವಚನದಲ್ಲಿ ಹೇಳಿದ್ದಾರೆ. ದೇವರ ದಾಸಿಮಯ್ಯನವರು ತಮ್ಮ ವಚನದಲ್ಲಿ ಒಡಲಿನ(ದೇಹದ) ಉದಾಹರಣೆ ಕೊಟ್ಟು, ಅದು ಜಗತ್ತಿನ ಸೃಷ್ಟಿಯ ಸ್ವತ್ತಾಗಿದೆ ಎನ್ನುವರು.

ಎನ್ನೊಡಲಾದಡೆ ಎನ್ನಿಚ್ಛೆಯಲ್ಲಿರದೆ?
ನಿನ್ನೊಡಲಾದಡೆ ನಿನ್ನಿಚ್ಛೆಯಲ್ಲಿರದೆ?
ಅದು ಎನ್ನೊಡಲೂ ಅಲ್ಲ, ನಿನ್ನೊಡಲೂ ಅಲ್ಲ,
ಅದು ನೀ ಮಾಡಿದ ಜಗದ ಭಿನ್ನಾಣದೊಡಲು ಕಾಣಾ ರಾಮನಾಥ.[65]

ತೈತ್ತರೀಯೋಪನಿಷತ್ತಿನಲ್ಲಿ 'ಅಸತ್'ನಿಂದಾಗಿ ಸೃಷ್ಟಿಕ್ರಮವನ್ನು ಕುರಿತು ಹೇಳುವಂತೆ, ದಾಸಿಮಯ್ಯನವರು ತಮ್ಮ ವಚನದಲ್ಲಿ ಹೀಗೆ ಹೇಳಿದ್ದಾರೆ.

ಆಡಬಾರದ ಬಯಲು ಸೂಡಬಾರದ ಬಯಲು
ನುಡಿಯಬಾರದ ಬಯಲು ಹಿಡಿಯಬಾರದ ಬಯಲು
ಈ ಒಡಲಿಲ್ಲದ ಬಯಲೊಳಗೆ ಅಡಗಿರ್ದ ಭೇದವ
ಈ ಲೋಕದ ಜಡರೆತ್ತ ಬಲ್ಲರೈ? ರಾಮನಾಥ.[66]

ಬಯಲು ಬಣ್ಣವ ಮಾಡಿ
ಸ್ವಯವ ನಿಲವ ಮಾಡಿ
ಸುಳಿವಾತನ ಬೆಡಗ ಬಲ್ಲವರಾರೈ? ರಾಮನಾಥ.[67]

ಉಪನಿಷತ್ಕಾರರು ಹೇಳಿದ 'ಆಸತ್' ಪದದ ಸಮವಾಗಿ ದಾಸಿಮಯ್ಯನವರು 'ಬಯಲು' ಎಂಬ ಪದವನ್ನು ಉಪಯೋಗಿಸಿದ್ದಾರೆ. ಈಶ್ವರನು ತನ್ನಲ್ಲಿ ಸರ್ವಶಕ್ತಿಯನ್ನು ಅಳವಡಿಸಿ ಕೊಂಡವನಾಗಿದ್ದರೂ ಯಾವುದೇ ತೋರಿಕೆಯಿಲ್ಲದ ಸ್ಥಿತಿಯೇ ಬಯಲು, ಅಸತ್, ಶೂನ್ಯ ನಿಃಶೂನ್ಯ, ಏನೊಂದು ಇಲ್ಲದ ಸ್ಥಿತಿ. ಅದು ಏನೊಂದು ಇಲ್ಲದ ಸಾಮಾನ್ಯ ಬಯಲಲ್ಲ, ಎಲ್ಲವನ್ನೂ ಒಳಗೊಂಡ ಬಯಲು. ಅಸತ್ ಎಂದರೆ ಸುಳ್ಳು, ಜೊಳ್ಳು. ಹಾಗೆಯೇ ಬಯಲು ಎಂದರೆ ಏನೂ ಇಲ್ಲ ಎಂದರ್ಥವಲ್ಲ. ಎಲ್ಲವೂ ಅದೇ ಎಂದರ್ಥ. ಅಂದರೆ ಎಲ್ಲಕ್ಕಿಂತ ಪರಿಪೂರ್ಣ ವಸ್ತುವಿಗೆ ಶೂನ್ಯ, ಅಸತ್, ಸತ್, ಅಥವಾ ಬಯಲು ಎನ್ನುತ್ತಾರೆ.

"ಸದೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯ। ತದ್ಧೈಕ ಆಹುರಸದೇವೇದಮಗ್ರ ಆಸೀದೇಕಮೇವಾದ್ವಿತೀಯಂ ತಸ್ಮಾದಸತಃ ಸಜ್ಜಾಯತ।" "ಕುತಸ್ತು ಖಲು ಸೋಮ್ಯೇದವಂ ಸ್ಯಾದಿತಿ ಹೋವಾಚ ಕಥಮಸತಃ ಸಜ್ಜಾಯತೇತಿ। ಖಲ್ವೇವ ಸೋಮ್ಯೇದಮಗ್ರ ಆಸೀದೇಕಮೇವಾದ್ವಿತೀಯಮ್।"[68]

ಸೌಮ್ಯನೆ ಸೃಷ್ಟಿಗೆ ಮೊದಲು ಈ ಜಗತ್ತು ಏಕವೂ ಅದ್ವಿತೀಯವೂ ಆದ ಸತ್ ರೂಪವೇ ಆಗಿತ್ತು. ಈ ವಿಷಯದಲ್ಲಿ ಕೆಲವರು ಪೂರ್ವದಲ್ಲಿ ಈ ಜಗತ್ತು ಏಕವೂ ಅದ್ವಿತೀಯವೂ ಆದ ಅಸತ್ ಸ್ವರೂಪವೇ ಆಗಿತ್ತು ಎಂದು ಹೇಳುತ್ತಾರೆ. ಆ ಅಸತ್ತಿನಿಂದ ಸದ್ವಸ್ತು ಉಂಟಾಯಿತು. ಸೌಮ್ಯನೆ, ಇದು ಹೇಗಾಯಿತು? ಅಸದ್ವಸ್ತುವಿನಿಂದ ಸದ್ವಸ್ತುವು ಹುಟ್ಟುವುದು ಸಾಧ್ಯವೆ? ಸೌಮ್ಯನೆ, ನಿಜವಾದ ಸೃಷ್ಟಿಗೆ ಮೊದಲು ಏಕವೂ ಅದ್ವಿತೀಯವೂ ಆದ ಸತ್ ರೂಪವೇ ಆಗಿತ್ತು ಎಂದು ಛಾಂದೋಗ್ಯವು ಸಂಭಾಷಣೆ ಮೂಲಕ ಸ್ಪಷ್ಟಪಡಿಸಿರುವುದನ್ನು ಕಾಣುತ್ತೇವೆ. ಅಲ್ಲದೆ, ಛಾಂದೋಗ್ಯದಲ್ಲಿಯೇ ಅಸತ್‌ನಿಂದಲೂ ಸೃಷ್ಟಿಯು ಉಗಮಗೊಂಡು ವೈವಿಧ್ಯಮಯವಾಗಿ ವಿಕಾಸವಾಗಿರುವುದನ್ನು ಕಾಣಬಹುದು.

"ಆದಿತ್ಯೋ ಬ್ರಹ್ಮೇತ್ಯಾದೇಶಸ್ತಸ್ಯೋಪವ್ಯಾಖ್ಯಾನಮಸದೇವೇದಮಗ್ರ ಆಸೀತ್।.....ಚಾಭವತಾಮ್।", "ತದ್ಯದ್ರಜತಂ ಸೇಯಂ ಪೃಥಿವೀ ಯತ್ಸುವರ್ಣ ಸಾ ಧ್ಯೌರ್ಯಜ್ಜರಾಯು ತೇ ಪರ್ವತಾ ಯದುಲ್ಬಂ ಸಮೇಧೋ ನೀಹಾರೋ ಯಾ ಧಮನಯಸ್ತಾ ನದ್ಯೋ ಯದ್ವಾಸ್ತೇಯಮುದಕಂ ಸ ಸಮುದ್ರ"[69]

ಈ ಜಗತ್ತೆಲ್ಲವೂ ಅಸತ್ತೇ ಆಗಿತ್ತು. ಆನಂತರ ಅದು ಸತ್ ಆಯಿತು. ಅದು ಬೆಳೆದು ಅಂಡಾಕಾರವಾಯಿತು. ಅಂದರೆ ಗೋಲಾಕಾರವಾಯಿತು. ಆ ಅಂಡವು ಕೆಲವು ವರ್ಷಗಳ ನಂತರ ಒಡೆದು ಬೆಳ್ಳಿ, ಚಿನ್ನಗಳ ಕಪಾಲಗಳಾದವು. ನಂತರ ಆ ಅಂಡದ ಕಪಾಲಗಳ ಬೆಳ್ಳಿಯ ಭಾಗವು ಪೃಥ್ವಿಯಾಯಿತು. ಚಿನ್ನದ ಭಾಗವು ದ್ಯೂಲೋಕವಾಯಿತು. ಜರಾಯು ಪರ್ವತಗಳಾದವು. ಉಲ್ಬವು ಮೇಘಗಳಿಂದ ಕೂಡಿದ ಮಂಜಾಯಿತು. ಧಮ್ಮಗಳು ನದಿಗಳಾದವು. ಮೂತ್ರ ಕೋಶದ ಉದಕವು ಸಮುದ್ರ ವಾಯಿತು ಹೀಗೆಯೇ ಸೃಷ್ಟಿಯ ವಿಕಾಸವನ್ನು ವಿವರಿಸುತ್ತ ಹೋಗಿದೆ.

ಧರಣಿಯ ಪಸರಿಸಿ ಉರಗನನಡಿಯಿಟ್ಟು
ಶರಧಿಯೇಳಕ್ಕೆ ಎರದನೊಕ್ಕುಡಿತೆ ಉದಕವ
ಹರಿಯಜ ಸುರರಿಗೆ ಪರಿಪರಿಯ ಲೋಕವ ಕೊಟ್ಟು
ಅರಿಯದಂತಿರ್ದ ಕಾಣಾ ! ರಾಮನಾಥ.[70]

ಛಾಂದೋಗ್ಯೋಪನಿಷತ್ತಿನಲ್ಲಿ ಅಸತ್ತಿನಿಂದಲೇ ಪ್ರಾರಂಭಗೊಂಡ ಸೃಷ್ಟಿಯು ಸತ್ತಾಗಿ ಬೆಳೆದು ಒಂದು ಅಂಡಾಕಾರವಾಗಿ, ಆನಂತರ ಒಡೆದು ಅದರ ಅಂಡ

ಕಪಾಲಗಳು ಬೆಳ್ಳಿ, ಚಿನ್ನಗಳಾಗಿ ಮುಂದೆ ಪೃಥ್ವಿ ಲೋಕಾದಿಗಳಾದ ಸೃಷ್ಟಿ ಕ್ರಮವನ್ನು ಹೋಲುವಂತೆ ವಚನದಲ್ಲಿಯೂ ಕಂಡುಬರುತ್ತದೆ.

"ಅಸದ್ವಾ ಇದಮಗ್ರ ಆಸೀತ್। ತತೋ ವೈ ಸದಜಾಯತ।" ಎಂಬ ತೈತ್ತರೀಯ ವಾಕ್ಯದಂತೆ ಅಸತ್–ಸತ್ತಿನಿಂದ ಸೃಷ್ಟಿಯ ಕ್ರಮವನ್ನು ರಚನೆಯಾಗಿದೆಯಂದು ವ್ಯಕ್ತವಾಗುತ್ತದೆ. ಅಂದರೆ ಸೃಷ್ಟಿ ಪೂರ್ವದಲ್ಲಿ ಕಾಣುತ್ತಿರುವುದೆಲ್ಲ ಅಸತ್ ಆಗಿತ್ತು. ಅದರಿಂದಲೇ ಸತ್ ಉತ್ಪನ್ನವಾಯಿತು. **ತದಾತ್ಮಾನಂ ಸ್ವಯಂ ಕುರುತ।** ಎಂಬಂತೆ ಅದು ತನ್ನನ್ನು ತಾನೇ ಉತ್ಪತ್ತಿ ಮಾಡಿಕೊಂಡಿತು. ಈ ಅವ್ಯಕ್ತವಾದ ಪರಾತ್ಪರ 'ಅಸತ್' ತನ್ನ ಅಂಶದಿಂದಲೇ ಜಗತ್ತನ್ನು ಸೃಷ್ಟಿಸಿಕೊಂಡಿತು. ಅದಕ್ಕೆ ಬೇರೆಯಾದ ಹೊರಗಿನ ದ್ರವ್ಯಗಳ ಸಹಾಯ ಬೇಕಾಗಿಲ್ಲವೆಂದು ಮುಂಡಕೋಪನಿಷತ್ತು ಸಹ ದೃಷ್ಟಾಂತದ ಮೂಲಕ ತಿಳಿಸಿದೆ.

ಯಥೋರ್ಣನಾಭಿಃ ಸೃಜತೇ ಗೃಹ್ಣತೇ ಚ ಯಥಾ ಪೃಥಿವ್ಯಾಮೋಷಧಯಃ ಸಂಭವಂತಿ।
ಯಥಾ ಸತಃ ಪುರುಷಾತ್ಕೇಶಲೋಮಾನಿ ತಥಾsಕ್ಷರಾತ್ಸಂಭತೀಹ ವಿಶ್ವಮ್॥[71]

ಐತರೇಯೋಪನಿಷತ್ತು ಆತ್ಮನೊಬ್ಬನೇ ಸೃಷ್ಟಿಗೆ ಮೊದಲು ಇದ್ದನು. ಅವನಿಗಿಂತ ಬೇರೆಯಾಗಿ ಏನೇನೂ ಇರಲಿಲ್ಲ. ಆಗ ಅವನು ಲೋಕವನ್ನು ಸೃಷ್ಟಿಸುವೆನು ಎಂದು ಅಲೋಚಿಸಿದನು ಎನ್ನುವುದು. ಇಲ್ಲಿ ಆತ್ಮ ಎಂದರೆ ಜೀವಾತ್ಮ ಎಂದರ್ಥವಲ್ಲ. ಯಾವನು ಈ ಲೋಕದಲ್ಲಿ ವ್ಯಾಪಿಸಿಕೊಂಡು, ಎಲ್ಲವನ್ನು ತನ್ನಲ್ಲಿ ಅಡಗಿಸಿಕೊಂಡಿರುವನೋ, ಅವನೇ ಆತ್ಮ. ಅವನು ಸ್ವತಃ ಚೇತನನೂ, ಸ್ವಯಂಜ್ಯೋತಿಯೂ ಆಗಿದ್ದಾನೆ. ಇಂಥ ಆತ್ಮನು ಈ ಸೃಷ್ಟಿಗೆ ಮುಂಚೆ ತನಗೆರಡನೆಯದಿಲ್ಲದ ಒಬ್ಬನೇ ಆಗಿದ್ದು, ಅವನು ಒಮ್ಮೆ "ನಾನು ಲೋಕವನ್ನು ಸೃಷ್ಟಿ ಮಾಡುವೆನು" ಎಂದು ಆಲೋಚಿಸಿದನು.

ಆತ್ಮಾ ವಾ ಇದಮೇಕ ಏವಾಗ್ರ ಆಸೀತ್। ನಾನ್ಯತ್ಕಿಂಚನ ಮಿಷತ್। ಸ ಈಕ್ಷತ ಲೋಕನ್ನು ಸೃಜಾ ಇತಿ।[72]

ಎಲ್ಲವನ್ನು ಪಡೆಯುವ, ಎಲ್ಲವನ್ನು ಗ್ರಹಿಸುವ, ಯಾವಾಗಲೂ ಇರುವಂತಹುದು ಯಾವುದು ಇದೆಯೋ ಅದು ಆತ್ಮವಾಗಿದೆ. ಐತರೇಯೋಪನಿಷತ್ತಿನ ಮಂತ್ರವು, ಈ ಜಗತ್ತಿನ ಪೂರ್ವದಲ್ಲಿ ಆತ್ಮನೊಬ್ಬನೆ ಇದ್ದನು. ಅವನಿಲ್ಲದೆ ಬೇರೇನೂ ಇರಲಿಲ್ಲ. ಅವನೇ ಈ ಲೋಕವನ್ನು ಸೃಷ್ಟಿಸಿದನೆಂದು ಹೇಳಿದಂತೆ, ದಾಸಿಮಯ್ಯನವರು ಸಹ ಜಗತ್ತಿನ ಕರ್ತಾರನು ಈಶ್ವರನು, ಅವನೊಬ್ಬನೇ ಸೃಷ್ಟಿ ಪೂರ್ವದಲ್ಲಿದ್ದನು. ಅವನಿಂದಲೇ ಎಲ್ಲವು ಉತ್ಪತ್ತಿಯಾದವು ಎಂದು ಹೇಳಿದ್ದಾರೆ.

ಎತ್ತನೇರಿದ ಕರ್ತನೊಬ್ಬನೆ ಜಗಕ್ಕೆಲ್ಲ
ಎತ್ತು ಬೆಳೆದ ಧಾನ್ಯವನುಂಬ
ದೇವರ್ಕಳೆಲ್ಲ ನಿಮ್ಮ ತೊತ್ತಿನ ಮಕ್ಕಳು ಕಾಣಾ! ರಾಮನಾಥ.[73]

ಆನಂತರ ಜಲ, ವಾಯು, ಅಗ್ನಿ, ಆಕಾಶ, ಮತ್ತು ಭೂಮಿಗಳನ್ನು, ದ್ಯುಲೋಕ, ಮತ್ತು ಅಂತರಿಕ್ಷಲೋಕಗಳನ್ನು ಪಾತಾಳಾದಿ ಲೋಕಗಳನ್ನು ಸೃಷ್ಟಿ ಮಾಡಿದನು. ಈ ಎಲ್ಲ ಲೋಕಗಳ ರಕ್ಷಣೆಗಾಗಿ ಆಯಾ ಲೋಕಪಾಲಕರನ್ನು ಸೃಷ್ಟಿಸಿದನು.

ಸ ಇಮಾಂಲ್ಲೋಕಾನಸೃಜತ। ಅಂಭೋ ಮರೀಚೀರ್ಮರಮಾಪೋऽಂಭಃ ಪರೇಣ ದಿವಂ ದ್ಯೌಃ ಪ್ರತಿಷ್ಠಾऽಂಥರಿಕ್ಷಂ ಮರಿಚಯಃ। ಪೃಥಿವೀ ಮರೋ ಯಾ ಅಧಸ್ತಾತ್ತಾ ಆಪಃ॥[74]

ಉಪನಿಷತ್ತಿನ ಸಾರವನ್ನೇ ದಾಸಿಮಯ್ಯನವರು ತಮ್ಮ ವಚನದಲ್ಲಿ ಹೀಗೆ ಹಿಡಿದಿಟ್ಟಿದ್ದಾರೆ–

ಇಂತೆಂದ ಭೂಮಿಯ, ಇಂತೆಂದ ಗಗನವ,
ಇಂತೆಂದ ಸಪ್ತ ಸಾಗರವ,
ಇಂತೀ ಲೋಕದೋಳಗೆ ತಿಂಥಿಣಿಯಾಗಿಪ್ಪ
ಅಚಿಂತನನವರಾರು ಬಲ್ಲರೈ ರಾಮನಾಥ.[75]

ದಾಸಿಮಯ್ಯನವರ ಕಿರಿದಾದ ವಚನಗಳಲ್ಲಿ ಹಿರಿದಾದ ಅರ್ಥವನ್ನು ಕಾಣುತ್ತೇವೆ. ಇದನ್ನು ಇಡೀ ತಮ್ಮ ವಚನಗಳಲ್ಲಿ ಮೈಗೂಡಿಸಿಕೊಂಡಿದ್ದಾರೆ. ಈಶ್ವರನ ಲೀಲಾವಿಲಾಸವನ್ನು, ಹಿರಿಮೆಯನ್ನು ಈ ವಚನದಲ್ಲಿ ವ್ಯಕ್ತಪಡಿಸಿದ್ದಾರೆ. ದಾಸಿಮಯ್ಯನವರು ಸಹ ಇಡೀ ಜಗತ್ತಿನ ತುಂಬೆಲ್ಲ ಈಶ್ವರನು ವ್ಯಾಪಿಸಿದ್ದಾನೆ. ಇಳೆ, ಬೆಳೆ, ಎತ್ತು, ಬಿತ್ತು, ಸಮುದ್ರ(ಜಲ), ವಾಯು, ಜೀವ, ಕಾಯ, ಮೊದಲಾದವುಗಳೆಲ್ಲ ಈಶ್ವರನ ಕೊಡುಗೆಗಳಾಗಿವೆ. ಅವುಗಳನ್ನು ತ್ಯಾಗದ ಬುದ್ಧಿಯಿಂದ ಉಪಯೋಗಿಸು ಎನ್ನುವಲ್ಲಿ ಸ್ಮರಿಸು ಎಂದು ತಮ್ಮ ವಚನಗಳಲ್ಲಿ ಹೇಳಿದ್ದಾರೆ.

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ.....![76]
ಎತ್ತು ನಿಮ್ಮ ದಾನ ಬಿತ್ತು ನಿಮ್ಮ ದಾನ.....![77]
ಕಾಯ ನಿಮ್ಮ ದಾನ ಜೀವ ನಿಮ್ಮ ದಾನ....![78]

ಮೇಲಿನ ವಚನಗಳು ಜಗತ್ತಿನಲ್ಲಿರುವ ಚೇತನಾಚೇತನ ವಸ್ತುಗಳು ಈಶ್ವರನಿಂದಲೇ ಸೃಷ್ಟಿಯಾಗಿವೆ ಎಂಬುದನ್ನು ತಿಳಿಸುತ್ತವೆ. ಇದೆ ಅರ್ಥವನ್ನು ಹೊಂದಿರುವ ಈಶೋಪನಿಷತ್ತಿನ ಮಂತ್ರವನ್ನು ಇಲ್ಲಿ ಉದಾಹರಿಸಬಹುದು.

ಈಶಾ ವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್।
ತೇನ ತ್ಯಕ್ತೇನ ಭುಂಜೀಥಾ ಮಾ ಗೃಧಃ ಕಸ್ಯ ಸ್ವಿದ್ಧನಮ್॥[79]

ಉಪನಿಷತ್ತಿನ ಈ ಮಂತ್ರವು ಪುರಾಣ ಕಲ್ಪನೆ ಹೊಂದಿದಂತೆಯೂ ದಾಸಿಮಯ್ಯನವರು ಸಹ ತಮ್ಮ ವಚನಗಳಲ್ಲಿ ಪುರಾಣದ ಕಲ್ಪನೆ ನೀಡಿರುವುದನ್ನು ಈ ಕೆಳಗಿನ ವಚನದಲ್ಲಿ ಕಾಣಬಹುದು.

ಧರಣಿಯ ಪಸರಿಸಿ ಉರಗನನಡಿಯಿಟ್ಟು
ಶರಧಿಯೇಳಕ್ಕೆ ಎರದನೊಕ್ಕುಡಿತೆ ಉದಕವ
ಹರಿಯಜ ಸುರರಿಗೆ ಪರಿಪರಿಯ ಲೋಕವ ಕೊಟ್ಟು
ಅರಿಯದಂತಿರ್ದ ಕಾಣಾ ! ರಾಮನಾಥ.[80]

ಮೇಲೆ ಹೇಳಿದ ಉಪನಿಷತ್ತಿನ ಮಂತ್ರಗಳ ಹಾಗೂ ವಚನಗಳ ಅರ್ಥವನ್ನು ಮುಂಡಕೋಪನಿಷತ್ತಿನ ಮಂತ್ರದಿಂದ ಇನ್ನಷ್ಟು ಸ್ಪಷ್ಟ ಪಡಿಸಬಹುದು.

ಏತಸ್ಮಾಜ್ಜಾಯತೇ ಪ್ರಾಣೋ ಮನಃ ಸರ್ವೇಂದ್ರಿಯಾಣಿ ಚ।
ಖಂ ವಾಯುರ್ಜ್ಯೋತಿರಾಪಃ ಪೃಥಿವೀ ವಿಶ್ವಸ್ಯ ಧಾರಿಣೀ॥[81]

ಆ ಅಕ್ಷರ ಪುರುಷನಿಂದ ಪ್ರಾಣ, ಮನ, ಸರ್ವೇಂದ್ರಿಯಗಳು, ಆಕಾಶ, ವಾಯು, ಅಗ್ನಿ, ಜಲ ಮೊದಲಾದವುಗಳು ಉತ್ಪನ್ನಗೊಂಡಿವೆ. ಮತ್ತು ಈ ಎಲ್ಲವನ್ನು ಧಾರಣೆ ಮಾಡುವ ಧರಣಿ(ಪೃಥಿವಿ)ಯು ಉತ್ಪನ್ನವಾಗಿದೆ.

6.5. ಮೋಕ್ಷ

ಏಕೋ ವಶೀ ಸರ್ವಭೂತಾಂತರಾತ್ಮಾ ಏಕಂ ರೂಪಂ ಬಹುಧಾ ಯಃ ಕರೋತಿ।
ತಮಾತ್ಮಸ್ಥಂ ಯೋsನುಪಶ್ಯಂತಿ ಧೀರಾಸ್ತೇಷಾಂ ಸುಖಂ ಶಾಶ್ವತಂ ನೇತರೇಷಾಮ್॥[82]

ಸರ್ವಭೂತಗಳ ಒಳ–ಹೊರಗೂ ಒಬ್ಬನಾದ ಆತ್ಮನೆ ಇದ್ದು, ಎಲ್ಲವನ್ನು ತನ್ನ ವಶದಲ್ಲಿ ಇಟ್ಟುಕೊಂಡು ಅನೇಕ ರೂಪುಗಳನ್ನು ಹೊಂದುತ್ತ ಬೇರೆ ಬೇರೆಯಾಗಿ ಕಾಣುತ್ತಾನೆ. ಎನ್ನುವ ಕಠೋಪನಿಷತ್ತಿನ ಅರ್ಥವನ್ನು ದಾಸಿಮಯ್ಯನವರು ಜಲಭರಿತ ಘಟ ಮತ್ತು ಸೂರ್ಯನ ದೃಷ್ಟಾಂತದ ಮೂಲಕ ತಿಳಿಸುತ್ತ, ಅವನನ್ನು ಕಾಣಲು (ಗುರು)ಜ್ಞಾನಿಪುರುಷನಿಂದ ಸಾಧ್ಯ ಎನ್ನುವರು.

ಘಟದೊಳಗೆ ತೋರುವ ಸೂರ್ಯನಂತೆ
ಸರ್ವರಲ್ಲಿ ಶಿವನ ಚೈತನ್ಯವಿಪ್ಪುದು
ಇದ್ದರೇನು? ಅದ ಕೂಡುವರೆ
ಗುರುವಿನಿಂದಲ್ಲದಾಗದು ಕಾಣಾ ರಾಮನಾಥ.[83]

ದಾಸಿಮಯ್ಯನವರು ಜೀವಿಯ ಪರಮ ಧ್ಯೇಯವನ್ನು ಈ ವಚನದಲ್ಲಿ ವ್ಯಕ್ತಪಡಿಸಿದ್ದಾರೆ. ಅವನು ಆತ್ಮ ಸಾಕ್ಷಾತ್ಕಾರ ಮಾಡಿಕೊಂಡು ಆದರ್ಶವ್ಯಕ್ತಿಯಾಗಿ ಬಾಳಬೇಕು. ಅದಕ್ಕಾಗಿ ಎಲ್ಲೆಲ್ಲಿಯೂ ಸುತ್ತುವುದು ಬೇಡ. ಬೇರೆ ಇನ್ನಾರನ್ನೋ ಆಶ್ರಯಿಸಿದರೆ, ಪ್ರಯೋಜನವಿಲ್ಲ. ಆದರೆ ಎಲ್ಲವು ಗುರುವಿನಿಂದ ಸಾಧ್ಯವೆಂದಿದ್ದಾರೆ.

"ಬ್ರಹ್ಮ ವಿದ್ ಬ್ರಹ್ಮೈವ ಭವತಿ" ಎಂಬಂತೆ ಆತ್ಮನನ್ನು ತಿಳಿದವನು ಆತ್ಮವನ್ನೇ ಹೊಂದುತ್ತಾನೆ. ಜೀವಿಯು ಜ್ಞಾನಿಗಳ ಮೂಲಕ ಆತ್ಮಜ್ಞಾನವನ್ನು ಹೊಂದಿ ಮೋಕ್ಷ

ಪಡೆಯುವನು. ಉಪನಿಷತ್ತು ಇದನ್ನು ನದಿಯ ದೃಷ್ಟಾಂತದ ಮೂಲಕ ವಿವರಿಸುತ್ತದೆ. ಹಲವಾರು ನದಿಗಳು ನಿರಂತರವಾಗಿ ಹರಿದು ಸಮುದ್ರವೆಂಬ ಗಮ್ಯಸ್ಥಳವನ್ನು ಸೇರಿ ತನ್ನ ನಾಮರೂಪಗಳನ್ನು ಕಳೆದುಕೊಳ್ಳುವಂತೆ, ಆತ್ಮಜ್ಞಾನ ಹೊಂದಿದ ಜೀವಿಯು ಆತ್ಮಾನುಭವ ಅನುಭವಿಸಿ ನಿತ್ಯಸುಖವಾದ ಮೋಕ್ಷ ಹೊಂದುತ್ತಾನೆ.

ಯಥಾ ನದ್ಯಾ ಸ್ಯಂದಮಾನಾಃ ಸಮುದ್ರೇsಸ್ತಂ ಹಚ್ಛಂತಿ ನಾಮರೂಪೇ ವಿಹಾಯ।
ತಥಾ ವಿದ್ವಾನ್ನಾಮರೂಪಾದ್ವಿಮಿಕ್ತಃ ಪರಾತ್ಪರಂ ಪುರುಷಮುಪೈತಿ ದಿವ್ಯಮ್॥[84]

ಇದೇ ಅರ್ಥವನ್ನು ದೇವರ ದಾಸಿಮಯ್ಯನವರು ತಮ್ಮ ವಚನದಲ್ಲಿ ಘಟ, ಪಟ, ಕಾಂಚನಗಳ ಉದಾಹರಣೆಗಳ ಮೂಲಕ ಹೇಳುತ್ತ ತನ್ನ ಸ್ವರೂಪಜ್ಞಾನ ಹೊಂದಿದ ಜೀವಿಯು ಈಶ್ವರ ಸ್ವರೂಪಿಯೇ ಸರಿ. ಅದುವೇ ಮೋಕ್ಷವೆಂದು ಹೇಳಿದ್ದಾರೆ.

ಘಟವನೊಡೆದು ಬಯಲು ನೋಡಲದೇಕೆ?
ಘಟದೊಳಗಿಪ್ಪುದೆ ಬಯಲೆಂದರಿದಡೆ ಸಾಲದೆ?
ಪಟವ ಹರಿದು ತಂತುವ ನೋಡಲದೇಕೆ?
ಆ ಪಟವೆ ತಂತುವೆಂದರಿದಡೆ ಸಾಲದೆ?
ಕಟಕವ ಮುರಿದು ಕಾಂಚನವ ನೋಡಲದೇಕೆ?
ಆ ಕಟಕವೆ ಕಾಂಚನವೆಂದರಿದಡೆ ಸಾಲದೆ?
ತನ್ನನಳಿದು ಘನವ ನೋಡಲದೇಕೆ?
ತಾನೆ ಘನವೆಂದರಿದಡೆ ಸಾಲದೆ? ಹೇಳಾ! ರಾಮನಾಥ.[85]

ಈಶ್ವರನನ್ನು ತಿಳಿದುಕೊಂಡಾಗ ಅಥವಾ ತನ್ನ ಸ್ವರೂಪಜ್ಞಾನವಾದಾಗ ಜೀವಿಯು ಮೋಕ್ಷ ಹೊಂದುತ್ತಾನೆ. ಅದಕ್ಕಾಗಿ ಜೀವಿಯು ಎಲ್ಲಿಯೂ ಹೋಗಬೇಕಾಗಿಲ್ಲ. ಎಂದು, ಘಟವನ್ನೊಡೆದು ಬಯಲು ನೋಡುವುದರ ಬದಲು ಘಟದೊಳಗಿದ್ದದ್ದು ಬಯಲೆಂದರಿದರೆ ಸಾಕು, ಪಟವ ಹರಿದು ತಂತುವನ್ನು ಕಾಣುವುದಕ್ಕಿಂತ ಆ ಪಟವೆ ತಂತುವೆಂದು ಅರಿತರೆ ಸಾಕು, ಆಭರಣಗಳನ್ನು ಕೆಡಿಸಿ(ಕರಗಿಸಿ) ಚಿನ್ನವ ನೋಡುವುದಕ್ಕಿಂತ ಆಭರಣವೆ ಚಿನ್ನವೆಂದರಿತರೆ ಸಾಕು, ಹಾಗೆಯೇ ತನ್ನು ಬಿಟ್ಟು ಜೀವಿಯು ಈಶ್ವರನನ್ನಾಗಲಿ ಸಂಪಾದಿಸುತ್ತೇನೆಂದು ಹೇಳುವುದರ ಬದಲು ತಾನೇ ಈಶ್ವರ ಅಥವಾ ಮೋಕ್ಷ ಸ್ವರೂಪಿ ಎಂದು ಅರಿತರೆ ಸಾಕು.

ನಾಯಮಾತ್ಮಾ ಬಲಹೀನೇನ ಲಭ್ಯೋ ನ ಚ ಪ್ರಮಾದಾತ್ತಪಸೋ ವಾsಪ್ಯಲಿಂಗಾತ್।
ಏತೈರುಪಾಯೈರ್ಯತತೇ ಯಸ್ತು ವಿದ್ವಾಂಸ್ತಸ್ಯೈಷ ಆತ್ಮಾ ವಿಶತೇ ಬ್ರಹ್ಮ ಧಾಮ॥[86]

ಮೋಕ್ಷವು ಬಲಹೀನನಿಗೂ, ಬ್ರಹ್ಮಚರ್ಯ ವೃತದಿಂದ ತಪಸನ್ನಾಚರಿಸಿದರೂ ಪ್ರಾಪ್ತಿಯಾಗುವುದಿಲ್ಲ. ಜ್ಞಾನಿಗಳು ಹೇಳಿದ ಮಾರ್ಗೋಪಾಯವನ್ನು ಕ್ರಮವಾಗಿ ಅನುಸರಿಸಿದಾಗ ಮಾತ್ರ ಆತ್ಮಜ್ಞಾನ ಪ್ರಾಪ್ತವಾಗುತ್ತದೆ. ಉಪನಿಷತ್ತಿನಂತೆ

ದಾಸಿಮಯ್ಯನವರು ಆತ್ಮಜ್ಞಾನವು ಕೇವಲ ಹೇಳುವುದರಿಂದಾಗಲಿ ಅಥವಾ ಕೇಳುವುದರಿಂದಾಗಲಿ ಸಾಧ್ಯವಿಲ್ಲವೆನ್ನುವರು. ಶ್ರವಣ, ಮನನ, ಮತ್ತು ನಿಧಿಧ್ಯಾಸನಗಳ ಮೂಲಕ ಸ್ವಯಂ ಸತತ ಪ್ರಯತ್ನದಿಂದ ಆತ್ಮನ ಅರಿವಿನ ಅನುಭವವಾಗಿ ಮೋಕ್ಷ ಪ್ರಾಪ್ತಿಯಾಗುತ್ತದೆ.

ಮನೆಯಲ್ಲಿ ಅಟ್ಟಿನೆಂದಡೆ ಹೊಟ್ಟೆ ತುಂಬಿದುದುಂಟೆ?
ಕೈಮುಟ್ಟಿ ಉಣ್ಣದನ್ನಕ್ಕರ!
ತಾನು ವಚನಾಗಮದ ಪ್ರಸಂಗವ ಬಲ್ಲೆನೆಂದಡೆ
ಬಲ್ಲವರಾರೂ ಇಲ್ಲವೆಂದಡೆ
ಆತ ತನ್ನ ನುಡಿಗೆ ಸಿಲುಕುವನೆ?
ಇಲ್ಲ ಕಾಣಾ! ರಾಮನಾಥ.[87]

ಆತ್ಮನನ್ನು ಪ್ರತ್ಯಕ್ಷ ಮಾಡಿಕೊಳ್ಳಲು ಜೀವಿಯು ಸತ್ಯದಿಂದಲೂ, ತಪಸ್ಸಿನಿಂಲೂ, ಸಮ್ಯಗ್ ಜ್ಞಾನದಿಂದಲೂ, ಬ್ರಹ್ಮಚರ್ಯದಿಂದಲೂ ಸಾದ್ಯವೆಂದು ಉಪನಿಷತ್ತುಗಳು ಹೇಳುವವು. ಆದುದರಿಂದಲೇ **"ಸತ್ಯಂ ಜ್ಞಾನಮನಂತಂ ಬ್ರಹ್ಮ"** ಸತ್ಯ, ಜ್ಞಾನ, ಮತ್ತು ಅನಂತಗಳು ಬ್ರಹ್ಮನ ಲಕ್ಷಣಗಳಾಗಿವೆ.

ಸತ್ಯೇನ ಲಭ್ಯಸ್ತಪಸಾ ಹ್ಯೇಷ ಆತ್ಮಾ ಸಮ್ಯಗ್ಜ್ಞಾನೇನ ಬ್ರಹ್ಮಚರ್ಯೇಣ ನಿತ್ಯಮ್।
ಅಂತಃಶರೀರೇ ಜ್ಯೋತಿರ್ಮಯೋ ಹಿ ಶುಭ್ರೋ ಯಂ ಪಶ್ಯಂತಿ ಯತಯಃ ಕ್ಷೀಣದೋಷಾಃ॥[88]

ಆತ್ಮನು ಸತ್ಯರೂಪದವನಾಗಿ ಮೂರು ಕಾಲದಲ್ಲಿ ಇರುವವನಾಗಿದ್ದಾನೆ. ಸತ್ಯವೆಂದರೆ ಕೇವಲ ಆಡುವ ಮಾತಲ್ಲ. ಯಾವಾಗಲೂ ಇರುವುದು ಯಾವುದೋ ಅದು ಸತ್ಯ ಅದುವೇ ಆತ್ಮ. ನಾವು ಅದನ್ನು ಪಡೆಯಲು ಸತ್ಯದ ಮಾರ್ಗ ಅನುಸರಿಸಬೇಕು. ತಪಸನ್ನಾಚರಿಸುತ್ತ, ಜ್ಞಾನವುಳ್ಳವನಾಗಿ, ಬ್ರಹ್ಮಚರ್ಯವ್ರತದ ಮೂಲಕ ಭೂತಗಳಲ್ಲಿ ಅಡಗಿರುವ ಜ್ಯೋತಿಸ್ವರೂಪನಾದ ಆತ್ಮನನ್ನು ಅರಿಯಲು ಸಾಧ್ಯ. ಹಾಗೆಯೇ ಮುಂಡಕವು ಮುಂದುವರೆದು ಜಯವು ಅಸತ್ಯಕ್ಕಲ್ಲ, ಅನಾತ್ಮಗಳಿಗಲ್ಲ, ಸತ್ಯಕ್ಕೆ ಮಾತ್ರ ಜಯ, ಅಮೃತಕ್ಕೆ ಜಯ, ಆತ್ಮಕ್ಕೆ ಜಯ. ಉಳಿದೆಲ್ಲವುಗಳಿಗೆ ಎಂದಿಗೂ ಜಯವಿಲ್ಲ. ಏಕೆಂದರೆ ಅವೆಲ್ಲ ಅಸತ್ಯ ವಸ್ತುಗಳಾಗಿವೆ. ಇಂದು ತೋರಿ ನಾಳೆ ಇಲ್ಲದಂತಾಗುತ್ತವೆ.

ಸತ್ಯಮೇವ ಜಯತಿ ನಾನೃತಂ ಸತ್ಯೇನ ಪಂಥಾ ವಿತತೋ ದೇವಯಾನಃ।
ಯೇನಾಕ್ರಮಂತ್ಯೃಷಯೋ ಹ್ಯಾಪ್ತಕಾಮಾ ಯತ್ರ ತತ್ಸತ್ಯಸ್ಯ ಪರಮಂ ನಿಧಾನಮ್॥[89]

ಆತ್ಮಜ್ಞಾನದ ಮಾರ್ಗ ಸತ್ಯದಿಂದ ಕೂಡಿದೆ. ಅದನ್ನರಿತ ಋಷಿಗಳು ಸತ್ಯವನ್ನು ಅನುಸರಿಸಿ ಸತ್ಯ ಸ್ವರೂಪನಾದ ಈಶ್ವರ ಸನ್ನಿಧಿಯನ್ನು ಹೊಂದಿ ಅಮೃತ ಸದೃಶವಾದ ಮೋಕ್ಷ ಹೊಂದಿದ್ದಾರೆ. ಆದುದರಿಂದ ಆ ಋಷಿಗಳು ಕಂಡ ಮಾರ್ಗವನ್ನು ಅನುಭವಿಸಿ,

ವ್ಯಕ್ತಿಗಳ ಪರಮ ಗುರಿಯಾದ ಸತ್ಯವನ್ನು ಹೊಂದಲು, ಸತ್ಯಕ್ಕೆ ಮಾತ್ರ ಜಯ ಅನೃತಕ್ಕಲ್ಲ ಎಂದು ಸಾರಿದ್ದಾರೆ. **"ಸತ್ಯಂ ವದ ಧರ್ಮಂ ಚರ।"**[90] ಎಂದು ತೈತ್ತಿರೀಯೋಪನಿಷತ್ತು ಸಹ ಉಪದೇಶಿಸಿದೆ.

ಮುಕ್ತಿ ಅಥವಾ ಈಶ್ವರ ಸನ್ನಿಧಿ ಹೊಂದಲು ದಾಸಿಮಯ್ಯನವರು ಸತ್ಯದ ಮಾರ್ಗವನ್ನು ಅನುಸರಿಸಿದ್ದಾರೆ. ಸತ್ಯರ ಮಾರ್ಗ ಹಿಡಿದು ಅವರ ಅನುಶಾಸನದಲ್ಲಿ ಭಕ್ತಿಮಾರ್ಗವನ್ನು (ತಪಸ್ಸನ್ನು) ಆಚರಿಸಿ, ಸತ್ಯವಂತರ ಜೊತೆಗೆ ಈಶ್ವರನ ಚಿಂತನಗೈದು ಮೋಕ್ಷ ಸಂಪಾದಿಸಿಕೊಂಡಿದ್ದಾರೆ.

ಜಗತ್ತಿನಲ್ಲಿರುವ ಜೀವಿಗಳು ತಮ್ಮ ದೇಹ ಇರುವುದರೊಳಗೆ ಪರಮಪಾವನವಾದ ಮೋಕ್ಷ ರೂಪವಾದ ಈಶ್ವರನನ್ನು ಹೊಂದಲು ಉಪನಿಷತ್ತು ಹೇಳಿದಂತೆ, ಸತ್ಯ ಮಾರ್ಗದಲ್ಲಿ, ತಪಸ್ಸಿನ ಜೊತೆಗೆ ಬ್ರಹ್ಮಚರ್ಯ ವ್ರತವನ್ನಾಚರಿಸುತ್ತ ಅನುಭವಿಗಳ (ಸತ್ಯವಂತರ) ಜೊತೆಗೆ ಆತ್ಮಜ್ಞಾನ ಅಥವಾ ಮೋಕ್ಷದ ಬಗ್ಗೆ ಚಿಂತನೆಗೈಯುತ್ತಿದ್ದರೆ ಅದುವೇ ತೀರ್ಥ ಸ್ವರೂಪವಾದ ಮೋಕ್ಷ. ಅದುವೇ ಸತ್ಯ ಸ್ವರೂಪ. ಅದುವೇ ಈಶ್ವರ ಸನ್ನಿಧಿ ಎಂದು ತಮ್ಮ ವಚನದಲ್ಲಿ ಹೇಳಿದ್ದಾರೆ.

ಸತ್ಯರ ನುಡಿ ತೀರ್ಥ, ಭಕ್ತಿಯ ನಡೆ ತೀರ್ಥ,
ಮುಕ್ತಿಯ ಪ್ರಸಂಗ ಉಳ್ಳಡೆ ತೀರ್ಥ,
ಹರಿವ ನದಿ ಎತ್ತಣಾ ತೀರ್ಥ ರಾಮನಾಥ.[91]

ಈ ಲೌಕಿಕ ಜೀವನದಿಂದ ಮುಕ್ತಿ ಹೊಂದಲು ನಡೆ–ನುಡಿಗಳು ಸತ್ಯ ಸ್ವರೂಪಗಳಾಗಿದ್ದು, ಭಕ್ತಿ, ವಿರಕ್ತಿಗಳನ್ನುಳ್ಳವರಾಗಿದ್ದಾಗ ಮಾತ್ರ ತೀರ್ಥ ಸ್ವರೂಪವಾದ ಮುಕ್ತಿ ದೊರೆಯುತ್ತದೆ.

6.6. ಪ್ರಾರ್ಥನೆ/ಶಾಂತಿ ಮಂತ್ರಗಳು

ಪ್ರಾರ್ಥನೆ ಅಥವಾ ಶಾಂತಿಮಂತ್ರ ವ್ಯಕ್ತಿಯು ಶುಭಕಾರ್ಯ ಮಾಡುವ ಪೂರ್ವದಲ್ಲಿ ಅಥವಾ ನಂತರದಲ್ಲಿ ಮಾಡುತ್ತಾನೆ. ಇದು ನೈತಿಕ ಬಲವನ್ನು, ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಪ್ರತಿಯೊಂದು ಉಪನಿಷತ್ತಿನ ಪ್ರಾರಂಭದಲ್ಲಿ ಶಾಂತಿಮಂತ್ರಗಳನ್ನು ಕಾಣುವಂತೆ, ದಾಸಿಮಯ್ಯನವರ ವಚನಗಳಲ್ಲಿ ಸಹ ಸೋತ್ರಸದೃಶವಾದ ಪ್ರಾರ್ಥನಾಪರವಾದ ವಚನಗಳನ್ನು ಕಾಣಬಹುದು.

ಬ್ರಹ್ಮನು ಪೂರ್ಣ ಸ್ವರೂಪ

ಓಂ ಪೂರ್ಣಮದ: ಪೂರ್ಣಮಿದಂ ಪೂರ್ಣಾತ್ಪೂರ್ಣಮುದಚ್ಯತೇ।
ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ॥
ಓಂ ಶಾಂತಿಃ ಶಾಂತಿಃ ಶಾಂತಿಃ॥[92]

ಪೂರ್ಣವೆಂದರೆ ವ್ಯಾಪಕವಾದದ್ದು. ಯಾವಾಗಲೂ ತನ್ನ ಸ್ವರೂಪದಿಂದ ಕದಲುವುದಿಲ್ಲ. ಅದು ಪರಿಪೂರ್ಣವಾಗಿ ತನ್ನ ಸ್ವರೂಪದಲ್ಲಿಯೇ ಇರುವುದು. ಅದು ಕುಗ್ಗುವುದಿಲ್ಲ, ಹಿಗುವುದಿಲ್ಲ, ಕುಂದುವುದಿಲ್ಲ ಮತ್ತು ಹೆಚ್ಚುವುದಿಲ್ಲ. ಅವನೇ ಬ್ರಹ್ಮ. ಅವನು ಪೂರ್ಣನಾಗಿದ್ದಾನೆ. ಅವನಿಂದ ಉತ್ಪತ್ತಿಯಾದ ಚರಾಚರಾತ್ಮಕ ಜಗತ್ತು ಸಹ ಪೂರ್ಣವಾಗಿದೆ. ಏಕೆಂದರೆ ಈ ಪೂರ್ಣರೂಪವಾದ ಜಗತ್ತು ಪೂರ್ಣರೂಪವಾದ ಬ್ರಹ್ಮನಿಂದ ಉತ್ಪತ್ತಿಯಾಗಿದೆ. ಪೂರ್ಣದಿಂದ ಪೂರ್ಣವನ್ನು ತೆಗೆದುಕೊಂಡರೆ ಪೂರ್ಣವೇ ಉಳಿಯುವುದು.**ಶಿಷ್ಯನ ಪ್ರಾರ್ಥನೆ**

ಓಂ ಸಹನಾವವತು ಸಹನೌಭುನಕ್ತು।
ಸಹ ವೀರ್ಯಂ ಕರವಾವಹೈ।
ತೇಜಸ್ವಿನಾವಧೀತಮಸ್ತು ಮಾ ವಿದ್ವಿಷಾವಹೈ।
ಓಂ ಶಾಂತಿಃ ಶಾಂತಿಃ ಶಾಂತಿಃ॥[93]

ಹೇ ಭಗವಂತನೆ, ಗುರುಶಿಷ್ಯರಾದ ನಮ್ಮಿಬ್ಬರನ್ನೂ ಜೊತೆಜೊತೆಗೆ ಕಾಪಾಡು. ಜೊತೆಯಲ್ಲಿಯೇ ಪಾಲಿಸು. ನಮ್ಮಿಬ್ಬರಲ್ಲಿ ಶಕ್ತಿಯನ್ನುಂಟು ಮಾಡು. ನಮ್ಮಲ್ಲಿರುವ ವಿದ್ಯೆಯು ತೇಜಸ್ವಿಯಾಗಲಿ. ನಾವು ಒಬ್ಬರನ್ನೊಬ್ಬರು ದ್ವೇಷಿಸದಿರಲಿ.

ಸಾಧನ ಸಂಪತ್ತು

ಓಂ ಆಪ್ಯಾಯಂತು ಮಮಾಂಗಾನಿ ವಾಕ್ಪ್ರಾಣಶ್ಚಕ್ಷುಃ ಶ್ರೋತ್ರಮಥೋ
ಬಲಮಿಂದ್ರಿಯಾಣಿ ಚ ಸರ್ವಾಣಿ ಸರ್ವಂ ಬ್ರಹ್ಮೌಪನಿಷದಂ
ಬ್ರಹ್ಮ ನಿರಾಕುರ್ಯಾಂ ಮಾ ಮಾ ಬ್ರಹ್ಮ ನಿರಾಕರೋದನಿರಾಕರಣಮ–
ಸ್ತ್ವನಿರಾಕರಣಮಸ್ತು ತದಾತ್ಮನಿ ನಿರತೇ ಯ ಉಪನಿಷತ್ಸು
ಧರ್ಮಾಸ್ತೇ ಮಯಿ ಸಂತು ತೇ ಮಯಿ ಸಂತು।
ಓಂ ಶಾಂತಿಃ ಶಾಂತಿಃ ಶಾಂತಿಃ॥[94]

ಹೇ ಭಗವಂತನೆ, ನನ್ನ ಶರೀರದ ಅಂಗಗಳಾದ ವಾಣಿ, ಪ್ರಾಣ, ಕಣ್ಣು, ಕಿವಿ, ಮೊದಲಾದ ಇಂದ್ರಿಯಗಳಿಗೆ ಶಕ್ತಿ ಹಾಗೂ ವೃದ್ಧಿಯನ್ನುಂಟುಮಾಡು. ಉಪನಿಷತ್ತುಗಳಲ್ಲಿ ಬ್ರಹ್ಮಸ್ವರೂಪ ವ್ಯಕ್ತವಾಗಿದೆ. ನಾನು ನಿರಾಕರಣ ಮಾಡದಂತಿರಲಿ. ನನ್ನನ್ನು ಬ್ರಹ್ಮನು ನಿರಾಕರಿಸದಿರಲಿ. ಅವನ ಜೊತೆಗೆ ಅನ್ಯೋನ್ಯ ಸಂಬಂಧವಿರಲಿ. ಉಪನಿಷತ್ತುಗಳಲ್ಲಿ ಹೇಳಲ್ಪಟ್ಟ ಧರ್ಮಗಳು ನನ್ನಲ್ಲಿರಲಿ.

ಪ್ರಾರ್ಥನೆ

ಓಂ ಶಂ ನೋ ಮಿತ್ರಃ ಶಂ ವರುಣಃ। ಶಂ ನೋ ಭವತ್ವರ್ಯಮಾ। ಶಂ ನೋ ಇಂದ್ರೋ ಬೃಹಸ್ಪತಿಃ।
ಶಂ ನೋ ವಿಷ್ಣುರುರುಕ್ರಮಃ। ನಮೋ ಬ್ರಹ್ಮಣೇ। ನಮಸ್ತೇ ವಾಯೋ। ತ್ವಮೇವ ಪ್ರತ್ಯಕ್ಷಂ ಬ್ರಹ್ಮಾಸಿ।
ತ್ವಾಮೇವ ಪ್ರತ್ಯಕ್ಷಂ ಬ್ರಹ್ಮ ವದಿಷ್ಯಾಮಿ। ಋತಂ ವದಿಷ್ಯಾಮಿ। ಸತ್ಯಂ ವದಿಷ್ಯಾಮಿ।

ತನ್ಮಾಮವತು। ತದ್ವಕ್ತಾರಮವತು। ಅವತು ಮಾಮ। ಅವತು ವಕ್ತಾರಮ್।
ಓಂ ಶಾಂತಿಃ ಶಾಂತಿಃ ಶಾಂತಿಃ॥[95]

ಹಗಲಿಗೂ ಮತ್ತು ಪ್ರಾಣಕ್ಕೂ ಅಭಿಮಾನ ದೇವತೆಯಾದ ಮಿತ್ರನು ನಮಗೆ ಸುಖವನ್ನುಂಟುಮಾಡಲಿ. ರಾತ್ರಿಗೂ ಮತು ಅಪಾನಕ್ಕೂ ಅಭಿಮಾನ ದೇವತೆಯಾದ ವರುಣನು ನಮಗೆ ಸುಖವನ್ನುಂಟುಮಾಡಲಿ. ಚಕ್ಷು ಮತ್ತು ಸೂರ್ಯಮಂಡಲದ ಅಭಿಮಾನ ದೇವತೆಯಾದ ಆರ್ಯನು ನಮಗೆ ಸುಖವನ್ನುಂಟುಮಾಡಲಿ. ಬಾಹು ಮತ್ತು ಶಕ್ತಿಗೂ ಅಭಿಮಾನ ದೇವತೆಯಾದ ಇಂದ್ರನು ನಮಗೆ ಸುಖವನ್ನುಂಟುಮಾಡಲಿ. ವಾಕ್ಕಿಗೂ ಮತ್ತು ಬುದ್ಧಿಗೂ ಅಭಿಮಾನ ದೇವತೆಯಾದ ಬೃಹಸ್ಪತಿ ನಮಗೆ ಸುಖ ವನ್ನುಂಟು ಮಾಡಲಿ. ದೊಡ್ಡ ಪಾದವುಳ್ಳ ವಿಷ್ಣುವು ನಮಗೆ ಸುಖವನ್ನುಂಟುಮಾಡಲಿ.

ಬ್ರಹ್ಮನಿಗೆ ನಮಸ್ಕಾರ. ವಾಯುವಿಗೆ ನಮಸ್ಕಾರ. ನೀನೇ ಪ್ರತ್ಯಕ್ಷವಾದ ಬ್ರಹ್ಮ. ನೀನೇ ಪ್ರತ್ಯಕ್ಷ ಬ್ರಹ್ಮವೆಂದು ಹೇಳುವೆನು. ಋತವೆಂದು ಹೇಳುವೆನು. ಸತ್ಯವೆಂದು ಹೇಳುವೆನು. ಆ ಬ್ರಹ್ಮನು ನನ್ನನ್ನು ಕಾಪಾಡಲಿ. ಆಚಾರ್ಯನನ್ನು ಕಾಪಾಡಲಿ.

ಇಲ್ಲಿ ಎರಡು ವಿಧವಾದ ಪ್ರಾರ್ಥನೆ ಕಾಣುತ್ತೇವೆ. ಮೊದಲನೆಯ ಪ್ರಾರ್ಥನೆ ನಮ್ಮ ಶರೀರೇಂದ್ರಿಯಗಳ ಅಭಿಮಾನಿ ದೇವತೆಗಳದಾಗಿದೆ. ಅವರು ಪ್ರಸನ್ನರಾದರೆ ಗುರುವಿನಿಂದ ವಿದ್ಯೆಯನ್ನು ನಿರ್ವಿಘ್ನವಾಗಿ ಕೇಳಿ ಸ್ಮರಣೆಯಲ್ಲಿಟ್ಟುಕೊಂಡು ಇನ್ನೊಬ್ಬರಿಗೆ ಹೇಳಿಕೊಡುವುದು ಸುಲಭವಾಗುತ್ತದೆ. ಎರಡನೆಯ ಪ್ರಾರ್ಥನೆ ಅಂತರ್ಯಾಮಿಯಾದ ಬ್ರಹ್ಮನ ಕುರಿತಾಗಿದೆ.

ಮನೋವಾಕ್ಕುಗಳ ಒಕ್ಕೂಟ

ಓಂ ವಾಙ್ಮೇ ಮನಸಿ ಪ್ರತಿಷ್ಠಿತಾ ಮನೋ ಮೇ ವಾಚಿ ಪ್ರತಿಷ್ಠಿತಮಾವಿರಾವೀರ್ಮ
ಏಧಿ ವೇದಸ್ಯ ಮ ಆಣೀ ಸ್ಥಃ ಶ್ರುತಂ ಮೇ ಮಾ ಪ್ರಹಾಸಿರನೇನಾಧೀತ್ತೇ–
ನಾಹೋರಾತ್ರಾನ್ಸಂದಾಮ್ಯೃತಂ ವದಿಷ್ಯಾಮಿ ಸತ್ಯಂ ವದಿಷ್ಯಾಮಿ।
ತನ್ಮಾಮವತು ತದ್ವಕ್ತಾರಮವತ್ವವತು ಮಾಮವತು ಅಕ್ತಾರಮವತು ಅಕ್ತಾರಮವತು।
ಓಂ ಶಾಂತಿಃ ಶಾಂತಿಃ ಶಾಂತಿಃ॥[96]

ನನ್ನ ವಾಕ್ಕು ಮನಸ್ಸಿನಲ್ಲಿ ನಿಲ್ಲಲಿ. ನನ್ನ ಮನಸ್ಸು ವಾಕ್ಕಿನಲ್ಲಿ ನಿಲ್ಲಲಿ. ಪ್ರಕಾಶ ಸ್ವರೂಪನಾದ ಈಶ್ವರನೆ ಪ್ರಕಟವಾಗು. ವಾಙ್ಮನಸ್ಸುಗಳೇ ವೇದ ವಿಷಯಕ ಜ್ಞಾನವನ್ನು ಉಳ್ಳವರಾಗಿರಿ. ನಾನು ಶ್ರವಣ ಮಾಡಿದ ಜ್ಞಾನವು ನನ್ನನ್ನು ಬಿಟ್ಟು ಹೋಗದಿರಲಿ. ಅಧ್ಯಯನ ಮಾಡಿದ್ದನ್ನು ಹಗಲು ಇರುಳನ್ನು ಕೂಡಿಸುವಂತಾಗಲಿ. ಸತ್ಯವನ್ನು ಹೇಳುವಂತಾಗಲಿ. ಸತ್ಯವನ್ನು ನುಡಿಯುವಂತಾಗಲಿ. ಅದು ನನ್ನನ್ನು ಕಾಪಾಡಲಿ. ಅದು ಆಚಾರ್ಯನನ್ನು ಕಾಪಾಡಲಿ. ನನ್ನನ್ನು ಕಾಪಾಡಲಿ. ಆಚಾರ್ಯನನ್ನು ಕಾಪಾಡಲಿ. ಆಚಾರ್ಯನನ್ನು ಕಾಪಾಡಲಿ.

ದೇವತೆಗಳಲ್ಲಿ ಪ್ರಾರ್ಥನೆ

ಓಂ ಭದ್ರಂ ಕರ್ಣೇಭಿಃ ಶೃಣುಯಾಮ ದೇವಾಃ। ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ।
ಸ್ಥಿರೈರಂಗೈಸ್ತುಷ್ಟುವಾಂಸಸ್ತನುಭಿರ್ವ್ಯಶೇಮ ದೇವಹಿತಂ ಯದಾಯುಃ।
ಸ್ವಸ್ತಿ ನ ಇಂದ್ರೋ ವೃದ್ಧಶ್ರವಾಃ। ಸ್ವಸ್ತಿ ನಃ ಪೂಷಾ ವಿಶ್ವವೇದಾಃ।
ಸ್ವಸ್ತಿ ನಸ್ತಾರ್ಕ್ಷ್ಯೋ ಅರಿಷ್ಟನೇಮಿಃ। ಸ್ವಸ್ತಿ ನೋ ಬೃಹಸ್ಪತಿರ್ದಧಾತು।
ಓಂ ಶಾಂತಿಃ ಶಾಂತಿಃ ಶಾಂತಿಃ॥[97]

ಹೇ ದೇವತೆಗಳಿರಾ, ನಮ್ಮ ಕಿವಿಗಳು ಒಳ್ಳೆಯದನ್ನೇ ಕೇಳುವಂತಾಗಲಿ. ನಮ್ಮ ಕಣ್ಣುಗಳಿಂದ ಒಳ್ಳೆಯದನ್ನೇ ನೋಡುವಂತಾಗಲಿ. ಸ್ಥಿರವಾದ ಅಂಗಗಳುಳ್ಳ ಶರೀರದಿಂದ ದೇವತೆಯ ಸ್ತುತಿಸುವ ನಮ್ಮ ಆಯುಷ್ಯ ಆರೋಗ್ಯ ದೇವತೆಗಳ ಸೇವೆಗಾಗಿಯೆ ಇರಲಿ.

ಇಂದ್ರನು ನಮಗೆ ಸ್ವಸ್ತಿಯನ್ನುಂಟುಮಾಡಲಿ. ಎಲ್ಲವನ್ನು ತಿಳಿದ ಪೂಷನು ನಮಗೆ ಸ್ವಸ್ತಿಯನ್ನುಂಟುಮಾಡಲಿ. ಅಹಿಂಸೆಯನ್ನು ಕಾಪಾಡುವ ಚಕ್ರ ಸದೃಶ ಶಕ್ತಿಯುಳ್ಳ ಗರುಡ ದೇವನು ನಮಗೆ ಸ್ವಸ್ತಿಯನ್ನುಂಟುಮಾಡಲಿ. ಹಾಗೆಯೇ ಬೃಹಸ್ಪತಿಯು ಸಹ ನಮಗೆ ಸ್ವಸ್ತಿಯನ್ನುಂಟುಮಾಡಲಿ.

ಉಪನಿಷತ್ತಿನಂತೆ ದೇವರ ದಾಸಿಮಯ್ಯನವರ ವಚನಗಳಲ್ಲಿ ಸಹ ದೇವರ ಕುರಿತು ಪ್ರಾರ್ಥನೆ ಮಾಡಿದ್ದು ಕಾಣಬಹುದು. ಇವರ ಸ್ತೋತ್ರರೂಪವಾದ ವಚನಗಳು ಮಾನವ ಜೀವಿಗಳಲ್ಲಿ ಜಾಗ್ರತೆಯನ್ನುಂಟು ಮಾಡುತ್ತವೆ. ಆದುದರಿಂದ ಇವರ ಎಲ್ಲಾ ವಚನಗಳು ಪ್ರಾರ್ಥನೆ/ಶಾಂತಿಮಂತ್ರಗಳ ಸದೃಶವಾಗಿವೆ.

ಉಣ್ಣೆ ಕೆಚ್ಚಲ ಹತ್ತಿ ಉಂಬುದೆ ನೊರೆವಾಲ?
ಪುಣ್ಯ ಕ್ಷೇತ್ರದಲ್ಲಿ ಹುಟ್ಟಿ ಉಣ್ಣದವನು
ಆ ಉಣ್ಣೆಯಿಂದ ಕರಕಷ್ಟ ರಾಮನಾಥ.[98]

ಈ ಭೂಮಿ ಪುಣ್ಯಮಯವಾದುದು. ಇಲ್ಲಿದ್ದು(ಜನಿಸಿ) ಈಶ್ವರನನ್ನು ಕುರಿತು ಪ್ರಾರ್ಥಿಸದಿದ್ದರೆ, ಕೆಚ್ಚಲಿನ ಹಾಲನ್ನು ಉಣ್ಣದ ಉಣ್ಣೆಗಿಂತ ಕನಿಷ್ಟವಾಗುತ್ತದೆ.

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ,
ಸುಳಿದು ಬೀಸುವ ಗಾಳಿ ನಿಮ್ಮ ದಾನ,
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನಂಬೆ? ರಾಮನಾಥ.[99]

ಭೂಮಿ, ಬೆಳೆ, ಬೀಸುವ ಗಾಳಿ, ಮೊದಲಾದವುಗಳು ಜೀವನಕ್ಕೆ ಅವಶ್ಯಕವೆನಿಸಿವೆ. ಇವನ್ನೆಲ್ಲ ಜೀವಿಯ ಮೇಲಿನ ಅನುಕಂಪೆಯಿಂದ ಈಶ್ವರನು ದಯಪಾಲಿಸಿದ್ದಾನೆ. ಈ ಮಹಾದಾನದ ಲಾಭವನ್ನು ಹೊಂದಿಯೂ ಅವನನ್ನು ಮರೆತು ಮತ್ತಾರನ್ನೋ ಸ್ಮರಿಸುವ ಕುನ್ನಿಗಳಲ್ಲದೆ ಮತ್ತಿನ್ನೇನು? ಎನ್ನುವರು ದಾಸಿಮಯ್ಯನವರು.

ಕಾಯ ನಿಮ್ಮ ದಾನ, ಜೀವ ನಿಮ್ಮ ದಾನ,
ಕಾಯ ಜೀವವುಳ್ಳಲ್ಲಿಯೆ ನಿಮ್ಮ ಪೂಜಿಸದ
ನಾಯಿಗಳನೇನೆಂಬೆ ಹೇಳಾ? ರಾಮನಾಥ.[100]

ಜೀವ, ಮತ್ತು ಕಾಯಗಳೆರಡು ಈಶ್ವರನ ಕೊಡುಗೆಗಳಾಗಿವೆ. ಇವುಗಳನ್ನು ಪಡೆದ ನಂತರ ಅವುಗಳು ಸಾರ್ಥಕವಾಗಬೇಕು. ಈಶ್ವರನನ್ನು ಪೂಜಿಸುವ ಕಾಯ(ದೇಹ)ದ ಗುಣಧರ್ಮವಾದರೆ, ಮನದಿಂದ ಅವನನ್ನು ಸ್ಮರಿಸುವ ಜೀವದ ಗುಣಧರ್ಮವಾಗಿದೆ. ಇದು ಕಾಯ, ಜೀವಗಳನ್ನು ಪಡೆದುದರ ಸಾರ್ಥಕ್ಯ. ಕರುಣಾಸಾರನಾದ ಈಶ್ವರನು ಜೀವಿಗಳು ಉಂಡುಟ್ಟು ಚೆನ್ನಾಗಿರಲೆಂದು ಪಂಚ ಮಹಾಭೂತಗಳನ್ನೂ, ಅನ್ನಧಾನ್ಯಗಳನ್ನೂ, ಅವುಗಳನ್ನು ಬಿತ್ತಿ ಬೆಳೆಯಲಿಕ್ಕೆ ಎತ್ತು ಮೊದಲಾದವುಗಳನ್ನು ದಾನವನ್ನಾಗಿ ಕೊಟ್ಟಿದ್ದಾನೆ.

ಎತ್ತು ನಿಮ್ಮ ದಾನ, ಬಿತ್ತು ನಿಮ್ಮ ದಾನ,
ಸುತ್ತಿ ಹರಿವ ಸಾಗರ ನಿಮ್ಮ ದಾನ,
ನಿಮ್ಮ ದಾನವನುಂಡು ಅನ್ಯರ ಹೊಗಳುವ
ಕುನ್ನಿಗಳನೇನಂಬೆ? ರಾಮನಾಥ.[101]

ದೇವರ ದಾಸಿಮಯ್ಯನವರು ತಮ್ಮ ವಚನದಲ್ಲಿ, ಈಶ್ವರನು ಜೀವಿಗಳಿಗಾಗಿ ಅಥವಾ ಮಾನವನಿಗಾಗಿ ಎತ್ತು, ಬಿತ್ತು, ನೀರನ್ನು ಅನುಗ್ರಹಿಸಿದ್ದಾನೆ. ಇವಿಲ್ಲದೆ ಮಾನವನು ಬದುಕುವುದು ಅಸಾಧ್ಯ. ಈಶ್ವರನ ಕಾರುಣ್ಯ ಎಂಥದ್ದು! ಅಂತಹವನನ್ನು ಕೃತಜ್ಞತಾಭಾವದಿಂದ ಪೂಜಿಸದೆ, ಪ್ರಾರ್ಥಿಸದೆ, ಭಜಿಸದೆ ಇದ್ದರೆ ಉಪಕಾರಗೇಡಿಯಾಗುತ್ತಾನೆ.

ಎತ್ತನೇರಿದ ಕರ್ತನೊಬ್ಬನೆ ಜಗಕ್ಕೆಲ್ಲ
ಎತ್ತು ಬೆಳೆದ ಧಾನ್ಯವನುಂಬ
ದೇವರ್ಕಳೆಲ್ಲ ನಿಮ್ಮ ತೊತ್ತಿನ ಮಕ್ಕಳು ಕಾಣಾ! ರಾಮನಾಥ.[102]

ಈ ಜಗತ್ತಿಗೆ ಈಶ್ವರನೊಬ್ಬನೆ ಒಡೆಯನು. ಅವನ ವಾಹನ ಎತ್ತು(ನಂದಿ). ಈಶ್ವರನ ಪ್ರಸಾದ ರೂಪವಾದ ಧಾನ್ಯವನ್ನು ಬೆಳೆಯಲು ಎತ್ತು ಅವಶ್ಯಕ. ಇದನ್ನು ಕರುಣಿಸಿದವನನ್ನು ಕುರಿತು ಪ್ರಾರ್ಥನೆ ಮಾಡಲು ಮರೆಯಬಾರದು. ಈಶ್ವರನು ಘನದಯಾಳುವಾದರೂ ಕೃತಘ್ನರಾದವರು ಅವನನ್ನು ನೆನೆಯಲಾರರು. ಮಾನವರು ದುಃಖ ಅಥವಾ ಸಂಕಟ ಪರಂಪರೆಗೆ ಸಿಕ್ಕಾಗ ಮಾತ್ರ ಈಶ್ವರನ ನೆನಪಾಗುವುದೆಂದಿದ್ದಾರೆ ದಾಸಿಮಯ್ಯನವರು ಈ ಮುಂದಿನ ವಚನದಲ್ಲಿ.–

ಎಡರಡಿಸೆ ಮೃಡ ನಿಮ್ಮ ನೆನೆವರು
ಎಡರಡಿಸಿದ ವಿಪತು ಕಡೆಯಾಗಲೊಡನೆ
ಮೃಡ ನಿಮ್ಮ ನೆಡಹಿಯೂ ಕಣರು ರಾಮನಾಥ.[103]

ಮಾನವಜೀವಿಯ ಸ್ವಭಾವವನ್ನು ದಾಸಿಮಯ್ಯನವರು ತೆರೆದಿಟ್ಟಿದ್ದಾರೆ. ಮಾನವನಿಗೆ ಸಂಕಟ ಕಾಲದಲ್ಲಷ್ಟೆ ಈಶ್ವರನ ಸ್ಮರಣೆ ಬರುವುದು. ಉಳಿದ ವೇಳೆಯಲ್ಲಿ ಅವನನ್ನು ಎಡಹಿ ಬಿದ್ದರೂ ಕಣ್ಣೆತ್ತಿ ನೀಡುವುದಿಲ್ಲ. ಪ್ರಾರ್ಥನೆ ಸತ್ಯ ಶುದ್ಧ ಮನಸ್ಸಿನ ಅಂತರಾಳದಿಂದ ಹೊರಹೊಮ್ಮಬೇಕು. ಲೋಭಿಗೆ, ವಿಕಾರಿಗೆ, ಈಶ್ವರ ಒಲಿಯನು, ಅವರ ಪೂಜಾದಿಗಳು ವ್ಯರ್ಥ.

ಅಡವಿಯಾರಣ್ಯಗಳಲ್ಲಿ ಮಡಿವನಕ್ಕ ತಪವಿದ್ದು
ಮಡಿವಾಗ ಮೃಡನ ಮರೆದಡೆ ತುಂಬಿದ ಸಕ್ಕರೆಯ
ಮಡುವಿನೊಳಗೆ ಹೊಕ್ಕಂತೆ ರಾಮನಾಥ.[104]

ಇಡೀ ಆಯುಷ್ಯವನ್ನೆಲ್ಲ ಅರಣ್ಯದಲ್ಲಿದ್ದು, ಜಪ–ತಪಗಳನ್ನಾಚರಿಸಿ, ಸಾವು ಸಮೀಪಿಸಿದಾಗ ಈಶ್ವರ ಧ್ಯಾನ ಮಾಡದಿದ್ದರೆ, ಸಕ್ಕರೆ ತೆಗೆದುಕೊಂಡು ನೀರಿನ ಮಡುವಿ ನಲ್ಲಿ ಹೊಕ್ಕ ಹಾಗೆ ವ್ಯರ್ಥವಾಗುವುದೆಂದು ದಾಸಿಮಯ್ಯನವರು ಮಾರ್ಮಿಕವಾಗಿ ತಿಳಿಸಿದ್ದಾರೆ. ಪ್ರಾರ್ಥನೆ ಸದಾ ನಡೆಯುತ್ತಿರಬೇಕು. ಪವಿತ್ರ ಮನಸ್ಸಿನಿಂದ ಸಾಗಬೇಕು. ಶ್ರದ್ಧೆ–ನಿಷ್ಠೆಯಿಂದ ಈಶನ ಅಸಾಮಾನ್ಯ ಸಾಮರ್ಥ್ಯವನ್ನು, ಉದಾರಭಾವವನ್ನು ಮನದಲ್ಲಿ ತಂದು, ನಾನಾ ವಿಧವಾಗಿ ಜೀವಿಗಳು(ಭಕ್ತ) ಸ್ತುತಿಸಬೇಕು. ಇಂತಹ ಭಕ್ತರು ಅಡವಿಯಲ್ಲಿರಲಿ ಅಥವಾ ಮನೆಯಲ್ಲಿರಲಿ ಅದು ಅವನಿಗೆ ಸ್ವರ್ಗಸಮಾನವಾಗುತ್ತದೆ. ಕಪಟಿ, ವಿಕಾರಿ, ಭಾವನೆಯ ಭಕ್ತ ಎಲ್ಲಿದ್ದರೂ ಅದು ನರಕಕ್ಕೆ ಸಮಾನ ಎನ್ನುವರು ದಾಸಿಮಯ್ಯನವರು ಈ ಕೆಳಗಿನ ವಚನದಲ್ಲಿ–

ನಿಷ್ಠೆಯುಳ್ಳ ಭಕ್ತ ನಟ್ಟಡವಿಯಲ್ಲಿದ್ದಡೇನು
ಅದು ಪಟ್ಟಣವೆಂದೆನಿಸುವುದು
ನಿಷ್ಠೆಯಿಲ್ಲದ ಭಕ್ತ ಪಟ್ಟಣದಲ್ಲಿದ್ದರೂ
ಅದು ನಟ್ಟಡವಿ ಕಾಣಾ ರಾಮನಾಥ.[105]

6.8. ಗುರು ಶಿಷ್ಯರ ಸಂಬಂಧ

ಪ್ರಾಚೀನ ಕಾಲದಿಂದ ಋಷಿ ಮುನಿಗಳ ಪರಂಪರೆಯಲ್ಲಿ ಗುರು ಶಿಷ್ಯರ ಸಂಬಂಧವು ಅನ್ಯೋನ್ಯವಾಗಿದೆ. ಹಾಗೆಯೇ ಉಪನಿಷತ್ಕಾಲದಲ್ಲಿ ಈ ಸಂಪ್ರದಾಯವು ಮುಂದುವರೆದುಕೊಂಡು ಬಂದಿದೆ. ಉಪನಿಷತ್ಕಾಲದಲ್ಲಿ ವ್ಯಕ್ತಿಯ ಪ್ರಾರಂಭದ ಹಂತವಾದ ಬ್ರಹ್ಮಚರ್ಯ ಆಶ್ರಮದಲ್ಲಿ ಗುರುವಿನಿಂದ ಉಪನಯನ ದೀಕ್ಷೆಹೊಂದಿ ಜ್ಞಾನಾರ್ಜನೆಗೋಸ್ಕರ ಶ್ರೋತ್ರಿಯ ಬ್ರಹ್ಮನಿಷ್ಠ ಸದ್ಗುರುಗಳನ್ನು ಅರಸಿ, ಅವರಿದ್ದಲ್ಲಿಗೆ ಹೋಗಿ ಇಂದ್ರಿಯಗಳನ್ನು ನಿಗ್ರಹಮಾಡಿ, ಬ್ರಹ್ಮಚರ್ಯ ಪಾಲನೆಯಿಂದ ಅವರ ಸೇವೆ ಮಾಡುತ್ತ ಜ್ಞಾನಾರ್ಜನೆ ಮಾಡುತ್ತಿದ್ದನು.

ಪರಿಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಹ್ಮಣೋ, ನಿರ್ವೇದಮಾಯಾನ್ನಾಸ್ತ್ಯಕೃತಃ ಕೃತೇನ।
ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್, ಸಮಿತ್ಪಾಣಿ ಶ್ರೋತ್ರಿಯಂ ಬ್ರಹ್ಮನಿಷ್ಠಮ್॥[106]

ಬ್ರಹ್ಮನನ್ನು ಹುಡುಕಬಯಸುವವರು ಅನೇಕ ಪರೀಕ್ಷೆಗಳಿಗೆ ಒಳಗುತ್ತಾರೆ. ಪ್ರಪಂಚದಲ್ಲಿರುವ ಎಲ್ಲ ಕರ್ಮಗಳನ್ನು ಆಚರಿಸಬೇಕಾಗುತ್ತದೆ. ಮತ್ತು ಅವುಗಳಲ್ಲಿನ ರುಚಿ ಮತ್ತು ಲಾಲಸೆಗಳನ್ನು ತೊರೆಯಬೇಕಾಗುತ್ತದೆ. ಕೈಯಲ್ಲಿ ಅಗ್ನಿ ಮತ್ತು ಸಮಿತ್ತುಗಳನ್ನು ಹಿಡಿದುಕೊಂಡು ಬ್ರಹ್ಮನಿಷ್ಠನಾದ ಗುರುವನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ ಎಂದು ಮುಂಡಕೋಪನಿಷತ್ತು ಹೇಳುತ್ತದೆ. ಪ್ರಶಾಂತಚಿತ್ತನೂ, ಶಮಾನ್ವಿತನೂ, ಸರಿಯಾಗಿ ತನ್ನಲ್ಲಿ ಬಂದವನಿಗೆ ಗುರುವು, ಅಕ್ಷರನೂ, ಸತ್ಯನೂ, ಆದ ಬ್ರಹ್ಮವಿದ್ಯೆಯನ್ನು ಉಪದೇಶಿಸಬೇಕು.

ತಸ್ಮೈ ಸ ವಿದ್ವಾನುಪಸನ್ನಾಯ ಸಮ್ಯಕ್ ಪ್ರಶಾಂತ ಚಿತ್ತಾಯ ಶಮಾನ್ವಿತಾಯ।
ಯೇನಾಕ್ಷರಂ ಪುರುಷಂ ವೇದ ಸತ್ಯಂ ಪ್ರೋವಾಚತಾಂ ತತ್ವತೋ ಬ್ರಹ್ಮವಿದ್ಯಾಂ॥[107]

ಗುರುಗಳು ಶಿಷ್ಯರಿಗೆ ಆಶ್ರಯಕೊಟ್ಟು ಚತುರ್ವೇದ ಮೊದಲಾಗಿ ಬ್ರಹ್ಮ ವಿದ್ಯೆಯನ್ನು ಹೇಳಿಕೊಡುವುದು ಸಂಪ್ರದಾಯವಾಗಿರುವುದರಿಂದ, ಈ ವೇದ ಉಪನಿಷತ್ತು ಸಹ ಬಾಯಿಂದ ಬಾಯಿಗೆ ಬಂದ ವಿದ್ಯೆಗಳೇ ಆಗಿವೆ. ಆದುದರಿಂದ ಇವುಗಳನ್ನು ಶೃತಿಗಳೆಂದು ಕರೆಯುತ್ತಾರೆ. ಗುರುಗಳಲ್ಲಿ ಶಿಷ್ಯರಾಗಿ ಕಲಿತವರೆ ಮುಂದೆ ಅವರು ಗುರುಗಳಾಗಿ ತಮ್ಮ ಶಿಷ್ಯರಿಗೆ ಬೋಧಿಸುತ್ತಿದ್ದರು. ಈ ತೆರನಾಗಿ ಆಚಾರ್ಯ ಪರಂಪರೆಯನ್ನು ನಾವು ಉಪನಿಷತ್ತುಗಳಲ್ಲಿ ಕಾಣುತ್ತೇವೆ.

ಶಿಷ್ಯರು ಗುರುಕುಲದಲ್ಲಿದ್ದು ಗುರುಗಳನ್ನು ಸೇವಿಸುತ್ತ, ಅವರಿಂದ ಜ್ಞಾನವನ್ನು ಗಳಿಸಿದ ಪ್ರತಿರೂಪವಾಗಿ ಗುರುದಕ್ಷಿಣ ಕೊಡುವ ಪದ್ಧತಿಯು ಇತ್ತು. ಛಾಂದೋಪನಿಷತ್ತಿನಲ್ಲಿ ಜಾನಶ್ರುತಿ ಎಂಬ ರಾಜನು ರೈಕ್ವನಿಗೆ ಸಹಸ್ರ ಗೋ, ಕಂಠಹಾರ ಅಶ್ವತರೀರಥ, ಅನೇಕ ಗ್ರಾಮ ಮತ್ತು ಸ್ವತಃ ಮಗಳನ್ನೇ ಕೊಟ್ಟು ಬ್ರಹ್ಮ ವಿದ್ಯೆಯನ್ನು ಪಡೆದುದನ್ನು ಕಾಣುತ್ತೇವೆ.[108]

ಗುರುವಿನಿಂದ ವಿದ್ಯೆ ಕಲಿತ ಶಿಷ್ಯನು ತನ್ನ ಪೂರ್ವಾಶ್ರಮಕ್ಕೆ ಮರಳುವಾಗ ಗುರುಗಳು ಉತ್ತಮ ಆದರ್ಶ ಮಾತಿನ ಮೂಲಕ ಮುಂದೆ ಶಿಷ್ಯನು ಪ್ರಾಪಂಚಿಕ ವ್ಯವಹಾರದಲ್ಲಿ ಹೇಗಿರಬೇಕು ಎಂಬದನ್ನು ಹೇಳುವ ಮಾತು ಆಶೀರ್ವಾದವನ್ನು ತೈತ್ತಿರೀಯೋಪನಿಷತ್ತಿನಲ್ಲಿ ಕಾಣುತ್ತೇವೆ.

ಸತ್ಯವನ್ನು ಹೇಳು. ಧರ್ಮವನ್ನು ಆಚರಿಸು. ಅಧ್ಯಯನದಲ್ಲಿ ಪ್ರಮಾದ ಮಾಡಬೇಡ. ಆಚಾರ್ಯನಿಗೆ ಇಷ್ಟವಾದ ಧನವನ್ನು ತಂದು ಕಂದುಕೊಟ್ಟು ಸಂತತಿಯನ್ನು ವಿಚ್ಛಿನ್ನಗೊಳಿಸದಿರು. ಸತ್ಯದಿಂದ ಕದಲಕೂಡದು. ಧರ್ಮದಿಂದ ಕದಲಕೂಡದು. ಕುಶಲದಿಂದ ಕದಲಕೂಡದು. ಮಂಗಳಯುಕ್ತದಿಂದ ಕದಲಕೂಡದು.

ಸ್ವಾಧ್ಯಾಯ ಪ್ರವಚನಗಳಿಂದ ಕದಲಕೂಡದು. ದೇವಪಿತೃಗಳ ಕಾರ್ಯದಿಂದ ಕದಲಕೂಡದು. ತಾಯಿಯೇ ನಿನಗೆ ದೇವರಾಗಲಿ. ತಂದೆಯೇ ನಿನಗೆ ದೇವರಾಗಲಿ. ಅತಿಥಿಯೇ ನಿನಗೆ ದೇವರಾಗಲಿ. ಯಾವ ಕರ್ಮಗಳು ಅನಿಂದಿತವೋ ಅವುಗಳನ್ನು ಮಾಡಬೇಕು. ಉಳಿದವುಗಳನ್ನು ಮಾಡಬಾರದು. ನಮ್ಮಲ್ಲಿ ಯಾವ ಒಳ್ಳೆಯ ನಡತೆಗಳಿವೆಯೋ ಅವುಗಳನ್ನೇ ಅಭ್ಯಾಸ ಮಾಡಬೇಕು. ಉಳಿದವುಗಳನ್ನು ಅಭ್ಯಾಸ ಮಾಡಬಾರದು. ನಮಗಿಂತ ಉತ್ತಮರಾದ ಯಾವ ಯಾವ ಬ್ರಾಹ್ಮಣರು ಇರುವರೋ ಅವರನ್ನು ಆಸನಾದಿ ಪೂರ್ವಕವಾಗಿ ನೀನು ಆದರಿಸಬೇಕು. ಶ್ರದ್ಧೆಯಿಂದ ಕೊಡಬೇಕು. ಅಶ್ರದ್ಧೆಯಿಂದ ಕೊಡಬಾರದು. ತನ್ನ ಐಶ್ವರ್ಯಕ್ಕೆ ತಕ್ಕಂತೆ ಕೊಡಬೇಕು. ವಿನಯದಿಂದ ಕೊಡಬೇಕು. ಭಯದಿಂದ ಕೊಡಬೇಕು. ಮಿತ್ರಭಾವದಿಂದ ಕೊಡಬೇಕು.[109] ಮೊದಲಾಗಿ ಹೇಳಿರುವ ಪ್ರತಿಯೊಂದು ಮಾತುಗಳು ಮಹತ್ವಪೂರ್ಣವಾಗಿವೆ. ಗುರುಗಳ ಈ ಹಿತವಚನಗಳು ಅಂದಿನ ಧಾರ್ಮಿಕ ಕತೆಯ ಆಚಾರ–ವಿಚಾರಗಳಿಗೆ ಕನ್ನಡಿ ಹಿಡಿದಂತಿವೆ.

ವೇದ–ಉಪನಿಷತ್ತಿನ ಕಾಲದಲ್ಲಿ ಗುರು ಶಿಷ್ಯರ ಸಂಪ್ರದಾಯದ ಶ್ರೇಷ್ಠತೆಯನ್ನು ಕಾಣುತ್ತೇವೆ. ಹಾಗಾಗಿ ನಮ್ಮಲ್ಲಿ ಗುರುಗಳಿಗೆ ಗೌರವಭಾವದಿಂದ ಪೂಜಿಸುತ್ತ ಬಂದಿದ್ದಾರೆ. ಅಂತೆಯೇ ಶರಣರು ಗುರುವಿಗೆ ಉನ್ನತಸ್ಥಾನ ನೀಡಿರುವುದು ಪೂಜನೀಯವಾಗಿದೆ. ಶರಣರು ಮಾನವಜೀವನದ ಅಂತಿಮ ಗುರಿಯನ್ನು ಮೋಕ್ಷವೆಂದು ತಿಳಿಸಿ, ಅದನ್ನು ಪಡೆಯಲು ಗುರುಕೃಪೆಯನ್ನು ಪಡೆಯಬೇಕೆಂದಿದ್ದಾರೆ. ಋಷಿಗಳು, ಶರಣರು, ಸಂತರು, ದಾಸರು, ಕವಿಗಳು, ಗುರುವಿನ ಮಹಿಮೆಯನ್ನು ಸ್ತುತಿಸುತ್ತ ಬಂದು ತಮ್ಮ ಸರ್ವಸ್ವವನ್ನು ಗುರುವಿಗೆ ಸಮರ್ಪಿಸಿದ್ದಾರೆ. "ಜಗದಗಲ ಮುಗಿಲಗಲ ಮಿಗೆಯಗಲ ನಿಮ್ಮಗಲ" ಇರುವ ಈಶ್ವರನ ಸ್ವರೂಪನ್ನು ತಿಳಿಸಿ ಕೊಡುವ ಶಕ್ತಿ ಗುರುವಿನ ಹೊರತು ಇನ್ನಾರಿಂದಲೂ ಆಗದು. ಗುರು, ನರತ್ವ(ಮನವ ಜನ್ಮ)ವನ್ನು ಕಳೆದು ಹರನನ್ನಾಗಿ, ಜೀವಭಾವ ಕಳೆದು ಶಿವಭಾವ ಮೂಡಿಸಿ, ಮಾಂಸಮಯವಾದ ಶರೀರವನ್ನು ಮಂತ್ರಮಯವನ್ನಾಗಿ ಮಾಡಿ, ಭವದುಃಖವೆಂಬ ಬಂಧನದಿಂದ ಬಿಡಿಸಿ ಮೋಕ್ಷದತ್ತ ಕರೆದುಕೊಂಡು ಹೋಗುತ್ತಾನೆ.

ಘಟದೊಳಗೆ ತೋರುವ ಸೂರ್ಯನಂತೆ
ಸರ್ವರಲ್ಲಿ ಶಿವನ ಚೈತನ್ಯವಿಪ್ಪುದು
ಇದ್ದರೇನು? ಅದ ಕೂಡುವರೆ
ಗುರುವಿನಿಂದಲ್ಲದಾಗದು ಕಾಣಾ ರಾಮನಾಥ.[110]

ಗುರುವಿಲ್ಲದೆ ನೇರವಾಗಿ ಈಶ್ವರನ ಜ್ಞಾನ ಅಸಾಧ್ಯ. ಮೊದಲು ಯಾವುದನ್ನು ಕಾಣಬೇಕೋ ಅದನ್ನು ಕಂಡಾಗ ಸರ್ವ ವಸ್ತುಗಳ ಜ್ಞಾನ ಸಹಜವಾಗಿ ಆಗುತ್ತದೆ. ಮಾನವನು ಈಶ್ವರನ ಚಿಂತನೆ ಮಾಡಲು, ಈ ಅವನ ಅನುಗ್ರಹ ಹೊಂದಲು, ಈಶ್ವರನ

ಜ್ಞಾನ ಹೊಂದಲು ಗುರುವಿನ ಮಾರ್ಗದರ್ಶನ ಅವಶ್ಯಕ. ಗುರು ಜ್ಞಾನಿ ಎನಿಸಿಕೊಂಡು ಶ್ರೋತ್ರೀಯ ಮತ್ತು ಬ್ರಹ್ಮನಿಷ್ಠನಾಗಿರಬೇಕು. ಹೀಗಿರದಿದ್ದರೆ ಅಂಧಕನ ಕೈಯ ಅಂಧಕ ಹಿಡಿದಂತಾಗುವುದು, ನೀರಿನಲ್ಲಿ ಮುಳಗಿ ಹೋಗುವವನ ಈಜುಬಾರದವ ತೆಗೆದಂತಾಗು ವುದೆಂದು ದಾಸಿಮಯ್ಯನವರ ಅಭಿಪ್ರಾಯ ಈ ವಚನದಲ್ಲಿ ವ್ಯಕ್ತವಾಗುತ್ತದೆ.–

ಹೊಲಬನರಿಯದ ಗುರು
ಸುಲಭನಲ್ಲದ ಶಿಷ್ಯ
ಕೆಲಬಲನ ನೋಡದುಪದೇಶ
ಅಂಧಕನ ಲಾಭ ಹೊಕ್ಕಂತೆ ಕಾಣಾ! ರಾಮನಾಥ.[111]

ಮಾನವ ಮೊದಲು ಮೋಕ್ಷಾಪೇಕ್ಷೆಯುಳ್ಳ ಅಧಿಕಾರಿಯಾಗಬೇಕು. ತನ್ನ ಶರೀರವನ್ನು ತೃಣವೆಂದು ತಿಳಿದು ಗುರುಚರಣವೆಂಬ ಅಗ್ನಿಗೆ ಅರ್ಪಿಸಬೇಕು. ಆಗ ಮಾನವ ಇಹಲೋಕದ ದುಃಖವನ್ನು ಕಳೆದುಕೊಂಡು ಪರಲೋಕದ ಸುಖವನ್ನು ಪಡೆಯುತ್ತಾನೆಂದು ದಾಸಿಮಯ್ಯನವರು ಈ ಮುಂದಿನ ವಚನದಲ್ಲಿ ತಿಳಿಸಿದ್ದಾರೆ.–

ಉರಿವ ಕೆಂಡದ ಮೇಲೆ ತೃಣವ ತಂದಿರಿಸಿದರೆ
ಆ ತೃಣವ ಕೆಂಡ ನುಂಗಿದಂತೆ
ಗುರುಚರನ ಮೇಲೆ ತನು ತೃಣವನಿರಿಸಿದರೆ
ಆ ತನುವೆಲ್ಲ ಲಿಂಗಮಯ ಕಾಣಾ ರಾಮನಾಥ.[112]

ದಾಸಿಮಯ್ಯನವರು ಹೇಳಿದಂತೆ ಮಾನವರು ನಡೆದುಕೊಂಡರೆ ಜೀವನ್ಮುಕ್ತರೇ ಸರಿ. ಹುಟ್ಟು, ಸಾವುಗಳೇ ಇಲ್ಲದ ಬಂಧನದಿಂದ ಮುಕ್ತರಾಗುತ್ತಾರೆ. ಗುರುವಿನ ಪಾದವು ಅತ್ಯಂತ ಪವಿತ್ರವಾದದ್ದು. ಗುರು ಕರುಣೆಯಿಂದ ಆಶೀರ್ವದಿಸಿದರೆ ಸಾಕು, ದುಃಖವೆ ನಾಶವಾಗುವುದೆನ್ನುವುದು ಈ ವಚನ.–

ಗುರು ಕರುಣಿಸಲು ಸಂಸಾರ ವಿಷಯ ಕೆಟ್ಟಿತ್ತು
ಮಾಯಾ ಪ್ರಪಂಚ ಬಿಟ್ಟಿತ್ತು
ಮುಂದಣ ಹುಟ್ಟರತು ಹೋಯಿತ್ತು
ನೆಟ್ಟಗೆ ಗುರುಪಾದವ ಮುಟ್ಟಿ ಭವಗೆಟ್ಟೆನು ರಾಮನಾಥ.[113]

ಆದ್ದರಿಂದ ಗುರುವೆಂದರೆ ದೊಡ್ಡದು. ಅಜ್ಞಾನ ಅಂಧಕಾರದಿಂದ ಜ್ಞಾನಪ್ರಕಾಶ ದತ್ತ ಕರೆದುಕೊಂಡು ಹೋಗುತ್ತಾನೆ. ಮಾನವ(ಜೀವಿ) ತಾನು ಎಲ್ಲದರಕ್ಕಿಂತಲೂ ಚಿಕ್ಕವನೆಂದು ತಿಳಿದು, ಕಿಂಕರತ್ವದಿಂದ ಶಂಕರನಾಗಲು ಪ್ರಯತ್ನಿಸಬೇಕು. ಕಿಂಕರನಾಗಿ ಹಸುವಿನ ಕಾಲಲ್ಲಿ ಕುಳಿತಾಗ ಮಾತ್ರ ಅಮೃತಸದೃಶವಾದ ಹಾಲು ದೊರೆಯುತ್ತದೆ. ಹಾಗೆಯೇ ಗುರುವಿನ ಶ್ರೀ ಚರಣದ ಹತ್ತಿರ ಕುಳಿತರೆ ಮೋಕ್ಷಸ್ವರೂಪದ ಜ್ಞಾನಾಮೃತವನ್ನು ಗುರುವು ಧಾರೆ ಎರೆಯುತ್ತಾನೆ. ಆಗ ಆನಂದ ಲೋಕವನ್ನು ಜೀವಿಯು(ಶಿಷ್ಯ) ಹೊಂದುವನು.

6.9 ನೈತಿಕಾಚರಣೆಗಳು

ಭಾರತೀಯ ಅಧ್ಯಾತ್ಮಿಕ ಪರಂಪರೆಯಲ್ಲಿ ಧಾರ್ಮಿಕಾಚರಣೆಗಳಿಗೆ ಮಹತ್ವವಿರುವಷ್ಟು ನೈತಿಕಾಚರಣೆಗೂ ಮಹತ್ವವಿದೆ. ಧಾರ್ಮಿಕಾಚರಣೆಯ ಜೊತೆಗೆ ನೈತಿಕಾಚರಣೆಗಳಿಗೆ ಪರಸ್ಪರ ಸಂಬಂಧವಿರುವುದರಿಂದ ಒಂದು ಇನ್ನೊಂದರಿಂದ ಪ್ರತ್ಯೇಕಿಸದಷ್ಟು ಅಭಿನ್ನವಾಗಿ ಬೆಳೆದವು. ಯಾವುದೇ ಧರ್ಮಾಚರಣೆಯು ನೈತಿಕಾಚರಣೆಯನ್ನು ತೊರೆದು ಇನ್ನೊಂದಕ್ಕೆ ಬಾಧೆಯನ್ನುಂಟು ಮಾಡಿದರೆ ಅದು ನಿಜವಾದ ಧರ್ಮಾಚರಣೆಯಲ್ಲ. ವ್ಯಕ್ತಿಯ ಸರ್ವಾಂಗೀಣ ಪ್ರಗತಿಗಾಗಿ ನೈತಿಕಾಚರಣೆಯ ಅವಶ್ಯಕವಿದೆ. ಉಪನಿಷತ್ತಿನ ಋಷಿಗಳು ತಮ್ಮ ಪೂರ್ವದಲ್ಲಿದ್ದ ಕರ್ಮ ಪ್ರಧಾನವಾದ ಆಚರಣೆಗಳನ್ನು ತೊರೆದು ಉನ್ನತವಾದ ನೈತಿಕಾಚರಣೆಯ ನೆಲೆಯಲ್ಲಿ ತಮ್ಮ ಧರ್ಮಾಚರಣೆಯನ್ನು ರೂಢಿಸಿಕೊಂಡು ಬಂದರು. ಆಗ ಧಾರ್ಮಿಕ, ಸಾಮಾಜಿಕ ಮತ್ತು ನೈತಿಕಾಚರಣೆಗಳು ಒಂದಕ್ಕೊಂದು ಬೆರೆತುಕೊಂಡು ಮುನ್ನಡೆದವು. ಸತ್ಯ, ಅಸ್ತೇಯ, ಬ್ರಹ್ಮಚರ್ಯ, ದಾನ, ಅಪರಿಗ್ರಹ, ಪರೋಪಕಾರ, ದಯೆ, ಶೀಲ, ಯೋಗ, ದಮ, ಕ್ಷಮೆ, ಮೊದಲಾದ ನೈತಿಕಾಚರಣೆಗಳನ್ನು ಉಪನಿಷತ್ತುಗಳಲ್ಲಿ ಕಾಣುತ್ತೇವೆ.

ನೇತ್ರಾದಿ ಇಂದ್ರಿಯಗಳ ಮೂಲಕ ಗ್ರಹಿಸಿದ ಅನುಭವವನ್ನು ಅಥವಾ ಒಂದು ಸಂಗತಿಯನ್ನು ಇದ್ದ ಹಾಗೆ ಹೇಳುವುದು ಸತ್ಯ. ಆ ಇಂದ್ರಿಯಾತೀತವಾದ, ತ್ರಿಕಾಲಾಬಾಧಿತವಾದ, ಸಾರ್ವತ್ರಿಕ ಸತ್ಯವೆಂದರೆ ಈಶ್ವರ. ಅವನೊಬ್ಬನೇ ಸತ್ಯ, ಉಳಿದೆಲ್ಲವು ಅಸತ್ಯವೆಂದು ಉಪನಿಷತ್ತುಗಳು ಸಾರುತ್ತವೆ. ಉಪನಿಷತ್ತಿನ ಮಂತ್ರಗಳಲ್ಲಿ ಹೇಳಿರುವ ಸತ್ಯವನ್ನು ತಿಳಿದುಕೊಂಡು ಅದನ್ನು ಯಾರು ಸತ್ಯಕಾಮರಾಗಿ, ನಿಯಮಿತರಾಗಿ ಆಚರಿಸುತ್ತಾರೆಯೋ ಅವರು ಸುಕೃತದ ಲೋಕಕ್ಕೆ ಹೋಗುತ್ತಾರೆ. ಇಲ್ಲಿ ಸತ್ಯ ಎಂಬುದಕ್ಕೆ ಎರಡರ್ಥಗಳಿವೆ. ಒಂದು 'ಸತ್ಯ'ವೆಂದರೆ ಈಶ್ವರ ಇಲ್ಲವೆ ಪರಬ್ರಹ್ಮ ಎಂದರ್ಥ. ಇನ್ನೊಂದು ಸತ್ಯ ನುಡಿಯುವುದು. ಅಥವಾ ಆಚರಿಸುವುದು. ಇಲ್ಲಿ ಒಂದು ಧಾರ್ಮಿಕವಾದರೆ, ಇನ್ನೊಂದು ನೈತಿಕವಾಗಿದೆ.

ತದೇತತ್ಸತ್ಯಂ ಮಂತ್ರೇಷು ಕರ್ಮಾಣಿ ಕವಯೋ ಯಾನ್ಯಪಶ್ಯಂ
ಸ್ತಾನಿ ತ್ರೇತಾಯಾಂ ಬಹುದಾ ಸಂತತಾನಿ।
ತಾನ್ಯಾಚರಥ ನಿಯತಂ ಸತ್ಯಕಾಮಾ
ಏಷ ವಃ ಪಂಥಾಃ ಸುಕೃತಸ್ಯ ಲೋಕೇ॥[114]

ಶಾಸ್ತ್ರಗಳಲ್ಲಿ ಹೇಳಿರುವ ರೀತಿಯಲ್ಲಿ ವಸ್ತುವನ್ನು ಅರಿತುಕೊಳ್ಳುವುದೇ ಸತ್ಯವಾಗಿದೆ. ಅದನ್ನೇ ಅನುಷ್ಠಾನ ಮಾಡಿದರೆ ಧರ್ಮವೆನಿಸುವುದು. **ಅಥೋ ಅಬಲೀಯಾನ್ಬಲೀಯಾಂ ಸಮಶಂ ಸತೇ ಧರ್ಮೇಣ ಯಥಾ ರಾಜ್ಞೈವಂ ಯೋ ವೈ ಸ ಧರ್ಮಃ ಸತ್ಯಂ ವೈ ತತ್ತಸ್ಮಾತ್ಸತ್ಯಂ ವದಂತಮಾಹುರ್ಧರ್ಮ ವದತೀತಿ ಧರ್ಮಂ ವಾ ವದಂತಂ ಸತ್ಯಂ ವದತೀತ್ಯೇತದ್ಧಚೈವೈತದುಭಯಂ ಭವತಿ।"**[115] ಅಂದರೆ

ದುರ್ಬಲನಾದವನೂ ಸಹ ರಾಜನ ಮೂಲಕ ಹೇಗೆ ಜಯಿಸಲ್ಪಡುವನೋ ಹಾಗೆಯೇ ಮನುಷ್ಯನು ಧರ್ಮದಿಂದ ಜಯಿಸುತ್ತಾನೆ. ಆ ಧರ್ಮವೇ ಸತ್ಯ. ಆದುದರಿಂದ ಸತ್ಯವಾದಿಯು ಅಥವಾ ಧರ್ಮವಾದಿಯು ಪ್ರತಿಯೊಂದು ವಿಷಯದಲ್ಲಿ ಸತ್ಯವನ್ನೇ ಹೇಳುತ್ತಾನೆ. ಪಾರಮಾರ್ಥಿಕ ಸತ್ಯದ ಪ್ರಾಪ್ತಿಗೆ ಲೌಕಿಕ ಬದುಕಿನ ಸತ್ಯಾಚರಣೆ ಅವಶ್ಯಕ. ಆದುದರಿಂದ ಮುಂಡಕೋಪನಿಷತ್ತು ಯಾವಾಗಲೂ ಸತ್ಯವೇ ಗೆಲ್ಲುತ್ತದೆ ಅಸತ್ಯವಲ್ಲ ಎಂಬುದನ್ನು ಸ್ಪಷ್ಟ ಪಡಿಸುತ್ತದೆ.

ಸತ್ಯಮೇವ ಜಯತಿ ನಾನೃತಂ ಸತ್ಯೇನ ಪಂಥಾ ವಿತತೋ ದೇವಯಾನಃ।
ಯೇನಾಕ್ರಮಂತ್ಯೃಷಯೋ ಹ್ಯಾಪ್ತಕಾಮಾ ಯತ್ರ ತತ್ಸತ್ಯಸ್ಯ ಪರಮಂ ನಿಧಾನಮ್॥[116]

ಅಂದರೆ ಸತ್ಯವೇ ಜಯ ಹೊಂದುತ್ತದೆ, ಅನೃತವಲ್ಲ. ಸತ್ಯದ ಮಾರ್ಗವನ್ನು ಹಿಡಿದು ಹೋಗಿರುವ ಆಪ್ತಕಾಮ ಋಷಿಗಳು ದೇವಯಾನವೆಂಬ ಸತ್ಯವನ್ನು ಹೊಂದಿದ್ದಾರೆ. ಆದುದರಿಂದ ಸತ್ಯವೆಂಬುದು ನೈತಿಕಾಚರಣೆಯಲ್ಲಿ ಅತೀ ಪ್ರಮುಖ ವಾಗಿದೆ. ಉಪನಿಷತ್ಕಾಲದಲ್ಲಿ ಗುರುಗಳು ಶಿಷ್ಯನಿಗೆ ವಿದ್ಯೆಯನ್ನು ಕಲಿಸಿದ ನಂತರ ಪೂರ್ವಾಶ್ರಮಕ್ಕೆ ತೆರಳುವಾಗ ಬೋಧಿಸಿದ ನೈತಿಕಾಚರಣೆ ಪ್ರಸಿದ್ಧಿ ಹೊಂದಿದೆ. ಅದನ್ನು ತೈತ್ತಿರೀಯೋಪನಿಷತ್ತು ಹೀಗೆ ಸಾರುತ್ತದೆ.–

ಸತ್ಯಂ ವದ। ಧರ್ಮಂ ಚರ। ಸ್ವಾಧ್ಯಾಯಾನ್ಮಾ ಪ್ರಮದಃ। ಆಚಾರ್ಯಾಯ ಪ್ರಿಯಂ ಧನಮಾಹೃತ್ಯ ಪ್ರಜಾತಂತುಂ ಮಾ ವ್ಯವಚ್ಛೇತ್ಸೀಃ। ಸತ್ಯಾನ್ನ ಪ್ರಮದಿತವ್ಯಂ। ಧರ್ಮಾನ್ನ ಪ್ರಮದಿತವ್ಯಮ್।[117]

ಅಂದರೆ ಸತ್ಯವನ್ನು ನುಡಿ. ಧರ್ಮದಂತೆ ನಡೆ. ಅಧ್ಯಯನವನ್ನು ಕಡೆಗಾಣಿಸಬೇಡ. ಆಚಾರ್ಯನಿಗೆ ಇಷ್ಟವಾದ ಧನವನ್ನು ತಂದು ಕಂದುಕೊಟ್ಟು ಸಂತತಿಯನ್ನು ವಿಚ್ಛಿನ್ನಗೊಳಿಸದಿರು. ಸತ್ಯದಿಂದ ನಡೆಯಲಿಕ್ಕೆ ತಪ್ಪಬೇಡ. ಧರ್ಮವನ್ನು ಬಿಟ್ಟು ನಡೆಯಬೇಡ. ಹೀಗೆ ಮೊದಲಾಗಿ ಮಾಡಿದ ಉಪದೇಶವು ಮಾನವ ಬದುಕಿನಲ್ಲಿ ನೈತಿಕತೆಯನ್ನು ಮೂಡಿಸುತ್ತದೆ.

ಛಾಂದೋಗ್ಯೋಪನಿಷತ್ತು ತಪಸ್ಸು, ದಾನ, ಋಜುತ್ವ, ಸತ್ಯ ಮತ್ತು ಅಹಿಂಸೆಗಳೆಂಬ ಐದು ಯಜ್ಞದಲ್ಲಿ ಕೊಡುವ ದಕ್ಷಿಣೆಗಳೆಂದು ತಿಳಿಸಿದೆ. **"ಅಥ ಯತ್ತಪೋ ದಾನಮಾರ್ಜವಮಹಿಂಸಾ ಸತ್ಯ ವಚನಮಿತಿ ತಾ ಅಸ್ಯ ದಕ್ಷಿಣಾಃ।"**[118] ಯಾವ ಜಂತುವನ್ನು ಹಿಂಸೆ ಮಾಡದೆ ಬದುಕಿರುವವರೆಗೂ ಅಹಿಂಸೆಯನ್ನು ಆಚರಿಸುತ್ತಿದ್ದರೆ ಅವನು ಬ್ರಹ್ಮಲೋಕವನ್ನು ಹೊಂದುತ್ತಾನೆ. ಹಿಂದಿರುಗುದಿಲ್ಲ ಎನ್ನುವುದು ಛಾಂದೋಗ್ಯವು.– **"ಸರ್ವೇಂದ್ರಿಯಾಣಿ ಸಂಪ್ರತಿಷ್ಠಾಪ್ಯಾಹಿಂಸನ್ಸರ್ವಭೂತಾನ್ಯನ್ಯತ್ರ ತೀರ್ಥೇಭ್ಯಃ ಸ ಖಲ್ವೇವಂ ವರ್ತಯನ್ಯಾವದಾಯುಷಂ ಬ್ರಹ್ಮಲೋಕಮಭಿಸಂಪದ್ಯತೇ ನ ಚ ಪುನರಾವರ್ತತೇ ನ ಚ ಪುನರಾವರ್ತತೇ"**[119]

ಉಪನಿಷತ್ಕಾಲದಲ್ಲಿ ಕಟ್ಟಿಕೊಂಡಿದ್ದ ಗುರುಕುಲಗಳು ಅನ್ನದಾನ, ವಿದ್ಯಾದಾನ, ವಸತಿಗಳಂತಹ ಪರೋಪಕಾರದ ದೃಷ್ಟಿಯಿಂದಲೇ ಪೋಷಣೆ ಮಾಡುತ್ತಿರುವುದನ್ನು ಕಾಣುತ್ತೇವೆ. ಇವನ್ನು ರಾಜ–ಮಹಾರಾಜರು ಉದಾರ ಆಶ್ರಯವಿತ್ತು ಬೆಳೆಸಿಕೊಂಡು ಬರುತ್ತಿದ್ದರು. ಜಾನಶೃತಿ, ಪೌತ್ರಾಯಣರು ಶ್ರದ್ಧೆಯಿಂದಲೂ ಬಹುವಾಗಿ ದಾನ ಮಾಡಿದವರಾಗಿಯೂ, ಅನೇಕ ಕಡೆಗಳಲ್ಲಿ ಅನ್ನ ಛತ್ರಗಳನ್ನು ಕಟ್ಟಿಸಿದರು. ಋಷಿ–ಮುನಿಗಳು ಮಾಡುವ ಯಾಗ–ಯಜ್ಞಾದಿಗಳಿಗೆ ನಾನಾ ವಿಧವಾದ ದಾನ ಮಾಡಿರುವ ಉದಾಹರಣೆಗಳನ್ನು ಕಾಣುತ್ತೇವೆ. ಮೋಕ್ಷ ಸಾಧನೆಗೆ ಅಥವಾ ಉತ್ತಮ ಲೋಕಗಳನ್ನು ಹೊಂದಲು ದಾನ ಉಪಾಧೇಯ ಕಾರಣವಾಗಿದೆ. ಒಬ್ಬರಿಗಿಂತಲೂ ಇನ್ನೊಬ್ಬರು ಸ್ಪರ್ಧಿಸಿ ದಾನ ಮಾಡಿರುವ ಆಖ್ಯಾನಗಳಿವೆ. ಗೋವು, ವಸ್ತ್ರ, ಸುವರ್ಣ, ಅನ್ನ, ಕನ್ಯಾ, ಭೂಮಿ, ಗ್ರಾಮ, ರಾಜ್ಯ ಮೊದಲಾದವುಗಳು ದಾನದ ವಸ್ತುಗಳಾಗಿವೆ. ದಾನಗಳನ್ನು ಶ್ರದ್ಧೆಯಿಂದ, ವಿನಯದಿಂದ, ಅಹಂಭಾವವಿಲ್ಲದೆ ಕೊಡಬೇಕೆಂದು ತೈತ್ತಿರೀಯ ಉಪನಿಷತ್ತಿನಲ್ಲಿ ಉಪದೇಶಪರವಾದ ದಾನಲಕ್ಷಣವು ವ್ಯಕ್ತವಾಗಿದೆ.

ಶ್ರದ್ಧಯಾ ದೇಯಮ್। ಅಶ್ರದ್ಧಯಾ ದೇಯಮ್। ಶ್ರಿಯಾ ದೇಯಮ್।
ಹ್ರಿಯಾ ದೇಯಮ್। ಭಿಯಾ ದೇಯಮ್। ಸಂವಿದಾ ದೇಯಮ್।[120]

ಉಂಕೆಯ ನಿಗುಚಿ ಸರಿಗೆಯ ಸಮಗೊಳಿಸಿ
ಸಮಗಾಲನಿಕ್ಕಿ ಅಣಿಯೋಳ ಮುಟ್ಟದೆ
ಹಿಡಿದ ಲಾಳಿಯ ಮುಳ್ಳು ಕಂಡಿಕೇಯ ನುಂಗಿತ್ತು
ಈ ಸೀರೆಯ ನೆಯ್ದವ ನಾನೋ ನೀನೋ? ರಾಮನಾಥ॥[121]

ಪ್ರಸ್ತುತ ವಚನದಲ್ಲಿ ದೇವರ ದಾಸಿಮಯ್ಯನವರ ನಿರಹಂಕಾರತ್ವವು ವ್ಯಕ್ತವಾಗುವುದರೊಂದಿಗೆ ಜನರೊಂದಿಗೆ ಕೂಡಿ ಅವರ ನೋವು–ನಲಿವುಗಳನ್ನು ಕಂಡ ಇವರು ಅನುಭಾವದಲ್ಲಿ ವಿಶ್ವಕವಿ. ಇವರು ಕ್ರಾಂತಿಪುರುಷರಲ್ಲದೆ ತತ್ತ್ವಜ್ಞಾನಿ, ಪ್ರವಾದಿ, ಸಮಾಜಸುಧಾರಕರಾಗಿದ್ದರು. ಅವರಿಟ್ಟ ಹೆಜ್ಜೆ, ಅವರಾಡಿದ ಮಾತು ಒಂದೇ ಆಗಿತ್ತು. ಅವರ ನಡೆ–ನುಡಿಗಳೆಲ್ಲವು ಲೋಕದ ಉದ್ಧಾರಕ್ಕಾಗಿಯಾಗಿವೆ.

ಸತ್ಯರ ನುಡಿ ತೀರ್ಥ, ಭಕ್ತಿಯ ನಡೆ ತೀರ್ಥ,
ಮುಕ್ತಿಯ ಪ್ರಸಂಗ ಉಳ್ಳಡೆ ತೀರ್ಥ,
ಹರಿವ ನದಿ ಎತ್ತಣಾ ತೀರ್ಥ ರಾಮನಾಥ.[122]

ಈ ವಚನ ವ್ಯಕ್ತಿಯ ನೈತಿಕಾಚರಣೆಯ ಉತ್ತಮ ನಿದರ್ಶನ. ಉಪನಿಷತ್ತು ಹೇಳಿದಂತೆ, ಸತ್ಯ ಮಾರ್ಗದಲ್ಲಿ, ತಪಸ್ಸಿನ ಜೊತೆಗೆ ಬ್ರಹ್ಮಚರ್ಯ ವ್ರತವನ್ನಾಚರಿಸುತ್ತ ಅನುಭವಿಗಳ (ಸತ್ಯವಂತರ) ಜೊತೆಗೆ ಆತ್ಮಜ್ಞಾನ ಅಥವಾ ಮೋಕ್ಷದ ಬಗ್ಗೆ ಚಿಂತನೆಗೈಯುತಿದ್ದರೆ ಅದುವೇ ತೀರ್ಥ ಸ್ವರೂಪವಾದ ಮೋಕ್ಷ. ಅದುವೇ ಸತ್ಯ ಸ್ವರೂಪ.

ಅದುವೇ ಈಶ್ವರ ಸನ್ನಿಧಿ ಎಂದು ತಮ್ಮ ವಚನದಲ್ಲಿ ಹೇಳುವುದರೊಂದಿಗೆ ನೈತಿಕತೆಯಿಂದ ಮೋಕ್ಷದ ದಾರಿ ತೋರಿಸಿದ್ದಾರೆ. ಆದುದರಿಂದ ವ್ಯಕ್ತಿ ಈ ಲೌಕಿಕ ಜೀವನದಿಂದ ಮುಕ್ತಿ ಹೊಂದಲು ನಡೆ–ನುಡಿಗಳು ಸತ್ಯ ಸ್ವರೂಪಗಳಾಗಿದ್ದು, ಭಕ್ತಿ, ವಿರಕ್ತಿಗಳನ್ನುಳ್ಳವರಾಗಿದ್ದಾಗ ಮಾತ್ರ ತೀರ್ಥ ಸ್ವರೂಪವಾದ ಮುಕ್ತಿ ದೊರೆಯುತ್ತದೆ.

ದಾಸಿಮಯ್ಯನವರು ಮಾತ್ರವಲ್ಲದೆ ಹೆಂಡತಿಯಾದ ದುಗ್ಗಳೆಯು ಸಹ ಗಂಡನಿಗಿಂತ ನೈತಿಕಾಚರಣೆಯಲ್ಲಿ ಉತ್ತಮ ಸ್ಥಾನ ಗಳಿಸಿರುವುದು ಈ ಕೆಳಗಿನ ವಚನದಿಂದ ಅರಿಯಬಹುದು.

ಬಂದುದನರಿದು ಬಳಸುವಳು
ಬಂದುದ ಪರಿಣಾಮಿಸುವಳು
ಬಂಧು ಬಳಗವ ಮರೆಸುವಳು
ದುಗ್ಗಳೆಯ ತಂದು ಬದುಕಿದೆನು ಕಾಣಾ! ರಾಮನಾಥ.[123]

ಶರಣ ಸಂಪ್ರದಾಯದಲ್ಲಿ ಪತಿಯಿಂದ ಹೊಗಳಿಸಿಕೊಂಡ ಮೊಟ್ಟ ಮೊದಲನೆಯ ಸತಿ ದುಗ್ಗಳೆ. ಪತಿಗೆ ತಕ್ಕ ಸತಿಯಾಗಿ ಮುಂದಿನ ಶರಣೆಯರಿಗೆ ಮಹಾಸಾಧ್ವಿ ಶಿರೋಮಣಿಯಾಗಿದ್ದಾಳೆ. ಸತಿಪತಿಗಳಿಗಳಿಬ್ಬರು ಒಬ್ಬರಿಗೊಬ್ಬರು ಅರಿತುಗೊಂಡು ಅನ್ಯೋನ್ಯವಾಗಿದ್ದು ತಮ್ಮ ಸಂಸಾರವನ್ನು ಅಮೃತಮಯ ಮಾಡಿಕೊಂಡಿದ್ದರು.

ಗಂಡನುಳ್ಳಮ್ಮನ ಗೌರಿಯೆಂದು ಕಂಡಡೆ
ಭೂಮಂಡಲಕ್ಕೆ ಅರಸಾಗಿ ಹುಟ್ಟುವನಾತನು
ಗಂಡನುಳ್ಳಮ್ಮನ ಕಂಡು ಒಡವೆರದಾತ
ನರಕದಲ್ಲಿ ದಿಂಡುಗೆಡದಿಪ್ಪನೈ ರಾಮನಾಥ.[124]

ದಾಸಿಮಯ್ಯನವರ ಆದರ್ಶ ವ್ಯಕ್ತಿಯಾಗಿದ್ದು ಏಕಪತ್ನಿ ವ್ರತಸ್ಥರಾಗಿ, ಉಳಿದೆಲ್ಲ ಸ್ತ್ರೀಯರಿಗೆ ಗೌರವ ಕೊಟ್ಟಿರುವುದನ್ನು ಇಲ್ಲಿ ಕಾಣಬಹುದು.

ದೇವರ ದಾಸಿಮಯ್ಯನವರ ಲೋಕಾನುಭವ, ಜೀವಾನುಭವ ಅಪೂರ್ವವಾದುದು. ಅವರ ವಚನಗಳಲ್ಲಿ ಜೀವನಾಧಾರಕ್ಕಾಗಿ ನಾಣ್ನುಡಿ ತಂಬಿವೆ. "ಹುಣಸೆಯ ಹೂವೆಲ್ಲ ಕಾಯಾಗಬಲ್ಲುದೆ?", "ಕೆನೆಯಿಲ್ಲದ ಮೊಸರು ಕಡೆದರೆ ಅಲ್ಲಿ ಒಂದು ಹನಿ ತುಪ್ಪವಿಲ್ಲ", "ಕತ್ತೆ ಬಲ್ಲುದೆ ಕತ್ತುರಿಯ ವಾಸನೆಯ?", "ತೊತ್ತು ಬಲ್ಲಳೆ ಗುರುಹಿರಿಯರುತ್ತಮರೆಂಬುದು?", "ತಾಯಿಗರ್ಭದ ಶಿಶು ತಾಯಿಯ ಕುರುಹನರಿಯದು", "ಉಣ್ಣೆ ಕೆಚ್ಚಲೊಳಗಿದ್ದು ಉಣ್ಣದದು ನೊರೆವಾಲು", "ಜ್ವರ ಬಡಿದ ಬಾಯಿಗೆ ನೊರೆವಾಲು ರುಚಿಸುವುದೆ?", "ಬತ್ತಿದ ಕೆರೆಯಲ್ಲಿ ತಾವರೆಯ ಬಿತ್ತಿದಂತೆ", ಎಂಬ ಮೊದಲಾದ ವಚನಗಳಲ್ಲಿ ನಾಣ್ನುಡಿಗಳ ಮೂಲಕ ದಾಸಿಮಯ್ಯನವರು ಲೋಕದ ಕಷ್ಟ–ಕಾರ್ಪಣ್ಯಗಳಿಗೆ ಪರಿಹಾರ ಸೂಚಿಸಿ, ನೈತಿಕಾಚರಣೆಯನ್ನು ಬದ್ರಗೊಳಿಸಿದ್ದಾರೆ.

6.10. ಸ್ತ್ರೀಯರ ಸ್ಥಾನಮಾನ

ವೇದಗಳಲ್ಲಿ ಸ್ತ್ರೀಯರ ಸ್ಥಾನಮಾನಗಳನ್ನು ಕುರಿತು ಚರ್ಚಿಸಲಾಗಿದೆ. ಯಜುರ್ವೇದದಲ್ಲಿ ಸ್ತ್ರೀ ಬಗೆಗೆ ಚರ್ಚಿತ ವಿಷಯ ಅಲ್ಪ. ಅಥರ್ವೇದದಲ್ಲಿ ಸ್ತ್ರೀ ಬಗೆಗೆ ಚರ್ಚಿತ ವಿಷಯ ಹೆಚ್ಚಾಗಿದ್ದರೂ ಋಗ್ವೇದದಲ್ಲಿ ಬರುವಷ್ಟು ವಿಷಯ ಅಲ್ಲಿಲ್ಲ. ಒಟ್ಟಿನಲ್ಲಿ ಋಗ್ವೇದದಲ್ಲಿ ಎಲ್ಲಾ ರೀತಿಯಿಂದ ಸ್ತ್ರೀಯರ ಧರ್ಮ, ಸಂಸ್ಕೃತಿ ಮತ್ತು ಲಕ್ಷಣಗಳನ್ನು ಕುರಿತು ಹೇಳಿದೆ. ಅಷ್ಟೇ ಅಲ್ಲದೆ ವೇದಗಳಲ್ಲಿ ಬರುವ ಸೂಮಾರು ಸೂಕ್ತಗಳನ್ನು ಸ್ತ್ರೀಯರೇ ರಚಿಸಿದ್ದಾರೆ. ಲೋಪಾಮುದ್ರಾ, ವಿಶ್ವಾವರ, ಸಿಕತಾ, ನಿವಾವರೀ, ಘೋಷಾ ಮೊದಲಾದವರು ಪ್ರಮುಖರಾಗಿದ್ದಾರೆ. ಇವರು ಬ್ರಹ್ಮಜ್ಞಾನಿಗಳಲ್ಲದೆ ಕವಯಿತ್ರಿಯರೂ ಆಗಿದ್ದರು. ಋಗ್ವೇದದಲ್ಲಿ ಪುರುಷ ಸೂಕ್ತವಿರುವಂತೆ ಶ್ರೀಸೂಕ್ತವೂ ಇರುವುದನ್ನು ನೋಡಿದರೆ ವೈದಿಕ ಸಂಸ್ಕೃತಿಯಲ್ಲಿ ಸ್ತ್ರೀಯರಿಗೆ ಇರುವ ಪ್ರಾಶಸ್ತ್ಯ ವ್ಯಕ್ತವಾಗುತ್ತದೆ.

ಉಪನಿಷತ್ಕಾಲಕ್ಕೆ ಸ್ತ್ರೀಯರಿಗೆ ಎಲ್ಲ ದೃಷ್ಟಿಯಿಂದ ಅತ್ಯುನ್ನತ ಸ್ಥಾನ ದೊರಕಿರುವುದು ಗಮನಾರ್ಹವಾಗಿದೆ. ಉಪನಿಷತ್ಕಾಲದ ಸ್ತ್ರೀಯರು ಕೇವಲ ಕೌಟುಂಬಿಕ ಜೀವನದ ಜೊತೆಗೆ ಭಾಗವಹಿಸದೆ ಅಂದಿನ ಸಾಮಾಜಿಕ, ಆರ್ಥಿಕ ಮೊದಲಾದ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಿಕೊಂಡರು. ಉದಾಹರಣೆಗೆ, ಮೈತ್ರೇಯಿ, ಕಾತ್ಯಾಯಿನಿ, ಗಾರ್ಗಿ, ಜಾಬಾಲಿ, ಮೊದಲಾದ ಸ್ತ್ರೀಯರು ಪ್ರಮುಖರು. ಇವರಲ್ಲಿ ಯಾಜ್ಞವಲ್ಕ್ಯರ ಪತ್ನಿಯಾದ ಮೈತ್ರೇಯಿಯು ತನ್ನ ಸದ್ಗುಣಗಳಿಂದ ಲೌಕಿಕ ಜೀವನದಲ್ಲಿ ಮಾತ್ರವಲ್ಲದೆ ಅಲೌಕಿಕ ಜೀವನದಲ್ಲಿಯೂ ವೈರಾಗ್ಯದಿಂದ ಪತಿಯೊಂದಿಗೆ ಬ್ರಹ್ಮಜ್ಞಾನ ಪಡೆದು ಬ್ರಹ್ಮಜ್ಞಾನಿಯಾದಳು. ಗಾರ್ಗಿಯು ಯಾಜ್ಞವಲ್ಕ್ಯರಂತಹ ಪ್ರಕಾಂಡ ಪಂಡಿತರಿಗೆ ತುಂಬಿದ ಸಭೆಯಲ್ಲಿ ಪ್ರಶ್ನಿಸುವಂತ ದಿಟ್ಟತನವು ಮೆಚ್ಚುವಂತಹುದಾಗಿದೆ. ಇದರಿಂದ ಉಪನಿಷತ್ಕಾಲದಲ್ಲಿ ಸ್ತ್ರೀಯರ ಜ್ಞಾನ, ಪ್ರತಿಭೆ, ಸ್ಥಾನಮಾನಗಳು ಅತ್ಯುನ್ನತವಾಗಿದ್ದವೆಂದು ಹೇಳಬಹುದು.

ಶರಣರಲ್ಲಿ ಶರಣತತ್ತ್ವಕ್ಕೆ ಅಡಿಪಾಯ ಹಾಕಿದ ಆದ್ಯವಚನಕಾರರಾದ ದೇವರ ದಾಸಿಮಯ್ಯನವರು ಮೊಟ್ಟ ಮೊದಲು ಸ್ತ್ರೀಗೆ ಉನ್ನತ ಸ್ಥಾನವನ್ನು ಕೊಟ್ಟು ಗೌರವಿಸಿದ್ದಾರೆ. ಆಕೆಯನ್ನು, ಪರಸತಿಯನ್ನು ಪಾರ್ವತಿಯನ್ನಾಗಿ ಕಂಡು ಪೂಜಿಸಿದ್ದಾರೆ ಎಂಬುವುದಕ್ಕೆ ಅವರ ಈ ವಚನವೇ ಸಾಕ್ಷಿ.

ಗಂಡನುಳ್ಳಮ್ಮನ ಗೌರಿಯೆಂದು ಕಂಡಡೆ
ಭೂಮಂಡಲಕ್ಕೆ ಅರಸಾಗಿ ಹುಟ್ಟುವನಾತನು
ಗಂಡನುಳ್ಳಮ್ಮನ ಕಂಡು ಒಡವೆರದಾತ
ನರಕದಲ್ಲಿ ದಿಂಡುಗೆಡದಿಪ್ಪನೈ ರಾಮನಾಥ.[125]

ಚಾರಿತ್ರ್ಯಶೀಲ ಸಂಪನ್ನಳಾದ ಪತಿವ್ರತಾ ಸ್ತ್ರೀಯನ್ನು ಪಾರ್ವತಿ ಎಂದು

ಗೌರವಬುದ್ಧಿ ಹೊಂದಿದವರು ಜಗತ್ತಿನ ಒಡೆಯರಾಗುತ್ತಾರೆ. ಒಂದು ವೇಳೆ ಆಕೆಯನ್ನು ಕಾಮದೃಷ್ಟಿಯಿಂದ ನೋಡಿದರೆ ಅವರು ನರಕದಲ್ಲಿ ಬೀಳುತ್ತಾರೆ.

"ಗುರು ನಿರೂಪವ ಮರೆದು ಪರ ವಧುವನೆರವರು", "ಪರದಾರಿ ಪಂಚಮ ಪಾತಕ", "ದಾಸಿ ವೇಶಿ ಮದ್ದು ಮಾಂಸ ಸುರೆ ಭಂಗಿ ಹೊಗೆ ಅನ್ಯದೈವ ಭವಿಸಂಗ ಇಷ್ಟುಳ್ಳನ್ನಕ್ಕ ಅವ ಭಕ್ತನಲ್ಲ", ಪರವಧುವ ನೆರೆಯದೆ ಪರಧನವ ತುಡುಕದೆ ಪರದೈವದಿಚ್ಛೆವಡೆಯದೆ.....", "ವೇಶಿಯರ ಎಂಜಲ ಹೇಸದೆ ತಿಂಬ ದೋಷಿಗಳನೇನೆಂಬೆನೈ" ಮೊದಲಾದ ವಚನಗಳ ಮೂಲಕ ದಾಸಿಮಯ್ಯನವರು ವ್ಯಭಿಚಾರವನ್ನು ಖಂಡಿಸಿದ್ದಾರೆ. ಅವಳು ಅಬಲೆ, ಅವಳೊಬ್ಬ ಭೋಗದ ವಸ್ತು ಎಂದು ಭಾವಿಸಿ ಕೇವಲ ಕಾಮದೃಷ್ಟಿಯನ್ನು ಬೀರುತ್ತ ದೌರ್ಜನ್ಯವನ್ನು ನಡೆಸುವುದನ್ನು ಪ್ರಭಲವಾಗಿ ಖಂಡಿಸುವುದರ ಮೂಲಕ ಸ್ತ್ರೀಯರಿಗೆ ಗೌರವವನ್ನು ಕೊಟ್ಟಿದ್ದಾರೆ. "ಸತಿಪತಿಗಳೊಂದದ ಭಕ್ತಿ...." ಎಂಬ ವಚನ, ಅವರ ಮತ್ತು ದುಗ್ಗಳೆಯ ಅನೂನ್ಯ ಸಂಬಂಧ ಇವು ನೀತಿಬೋಧಕ ವಚನಗಳಾಗಿವೆ. ಇವರ ನೀತಿಮಾರ್ಗ ಬೋಧಿಸಿದ ಆಧ್ಯಾತ್ಮ ಜ್ಞಾನವು ಕೇವಲ ಪುರುಷರಿಗಾಗಲಿ ಅಥವಾ ಸ್ತ್ರೀಯರಿಗಾಗಲಿ ಸೀಮಿತವಾದುದಲ್ಲ. ಅದು ಇಬ್ಬರಿಗೂ ಅನ್ವಯಿಸುತ್ತದೆ. ಸಮಾಜಕ್ಕೆ ಹೆಣ್ಣು–ಗಂಡುಗಳು ಈಶ್ವರನ ಕೊಡುಗೆಗಳಾಗಿವೆ. ಈ ಭೇದವನ್ನು ದೇಹವನ್ನು ಗುರ್ತಿಸಿ ಹೇಳಬಹುದೇ ವಿನಾ ಚೈತನ್ಯವಾಗಲಿ, ಆತ್ಮವನ್ನಾಗಲಿ ಗುರ್ತಿಸಿ ಹೇಳಲು ಸಾಧ್ಯವಿಲ್ಲ. ದಾಸಿಮಯ್ಯನವರು ಆತ್ಮದೃಷ್ಟಿ ಇಟ್ಟುಕೊಂಡು ಸ್ತ್ರೀಯರನ್ನು ನೊಡಿದ್ದರೆ, ನೊಡಲು ಹೇಳಿದ್ದಾರೆ. ಇದನ್ನೇ ದಾಸಿಮಯ್ಯನವರು –

ಮೊಲೆ ಮುಡಿ ಬಂದಡೆ ಹೆಣ್ಣೆಂಬರು
ಗಡ್ಡ ಮೀಸೆ ಬಂದಡೆ ಗಂಡೆಂಬರು
ನಡುವೆ ಸುಳಿವ ಆತ್ಮನು
ಗಂಡೂ ಅಲ್ಲ ಹೆಣ್ಣು ಅಲ್ಲ ಕಾಣಾ! ರಾಮನಥ.[126]

ಎಂಬ ವಚನದಲ್ಲಿ ತಿಳಿಸಿದ್ದಾರೆ.

ಅಡಿಟಿಪ್ಪಣಿಗಳು

1. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಮುಂಡಕ 1.1.1, ಪುಟ–40.
2. ಅದೇ, ಕೇನ 1.1, ಪುಟ–4.
3. ಅದೇ, ಕೇನ 1.2, ಪುಟ–4.
4. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–776, ಪುಟ–244.
5. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಕೇನ 1.3, ಪುಟ–4.
6. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–725, ಪುಟ–233.
7. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಕಠ 1.3.15. ಪುಟ–19.
8. ಅದೇ, ಈಶ 4, ಪುಟ–1.
9. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–840, ಪುಟ–258.
10. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಈಶ 5, ಪುಟ–1.
11. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–834, ಪುಟ–257.
12. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಈಶ ಶಾಂತಿಮಂತ್ರ ಪುಟ–1, ಬೃಹದಾರಣ್ಯಕ ಶಾಂತಿಮಂತ್ರ ಪುಟ–178.
13. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–822, ಪುಟ–254.
14. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಈಶ 1, ಪುಟ–1.

15. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–734, ಪುಟ–235.

16. ಅದೇ, ವಚನ ಸಂಖ್ಯೆ–748, ಪುಟ–238.

17. ಅದೇ, ವಚನ ಸಂಖ್ಯೆ–776, ಪುಟ–244.

18. 'ದಶೋಪನಿಷದಃ' (ಮೂಲಮಾತ್ರವಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಈಶ 8, ಪುಟ–2.

19. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–866, ಪುಟ–264.

20. 'ದಶೋಪನಿಷದಃ' (ಮೂಲಮಾತ್ರವಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಕಠ 2.2.9, ಪುಟ–23.

21. ಅದೇ, ಕಠ 2.2.10, ಪುಟ–23.

22. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–713, ಪುಟ–230.

23. 'ದಶೋಪನಿಷದಃ' (ಮೂಲಮಾತ್ರವಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಮುಂಡಕ 2.1.4, ಪುಟ–44.

24. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–753, ಪುಟ–239.

25. ಅದೇ, ವಚನ ಸಂ–812, ಪುಟ–252.

26. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಕಠ 1.2.18, ಪುಟ–16.

27. ಸಾನುವಾದ ಶಂಕರಭಾಷ್ಯ ಸಹಿತ, 'ಕಠೋಪನಿಷದ್' ಗೀತಾಪ್ರೇಸ ಗೋರಖಪುರ, ವಿ.ಶ 2057. ಕಠ 2.1.1 ಶಂಕರಭಾಷ್ಯ.

28. ಶ್ರೀ ಗಜಾನನ ಶಾಸ್ತ್ರಿ ಇತ್ಯಾದಯಃ, 'ವೈದಿಕ ಸಾಹಿತ್ಯ ಕಾ ಇತಿಹಾಸ, ಚೌಖಂಬಾ ಸಂಸ್ಕೃತ ಸಂಸ್ಥಾನ ವಾರಣಾಸಿ, 1994, ಪುಟ 235.

29. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಐತರೇಯ 1.1.1. ಪುಟ–72.

30. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–747, ಪುಟ–237.

31. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಕಠ 1.2.20. ಪುಟ–17.
32. ಅದೇ, ಈಶ 5, ಪುಟ–1.
33. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–834, ಪುಟ–257.
34. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಕಠ 1.2.22. ಪುಟ–17.
35. ಅದೇ, ಕಠ 1.3.12. ಪುಟ–19.
36. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–840, ಪುಟ–258.
37. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಕಠ 2.1.12. ಪುಟ–21.
38. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–790, ಪುಟ–247.
39. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಕಠ 2.1.14. ಪುಟ–22.
40. ಅದೇ, ಕಠ 2.2.9. ಪುಟ–23.
41. ಅದೇ, ಕಠ 2.2.10. ಪುಟ–23.
42. ಅದೇ, ಕಠ 1.2.23. ಪುಟ–17, ಮುಂಡಕ 3.2.3. ಪುಟ–48.
43. ಅದೇ, ಮುಂಡಕ 3.2.4. ಪುಟ–48.
44. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–837, ಪುಟ–257.
45. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ತೈತ್ತಿರೀಯ 2.1. ಪುಟ–60.
46. ಅದೇ, ಮುಂಡಕ 3.1.5. ಪುಟ–47.
47. ಅದೇ, ಮುಂಡಕ 3.1.6. ಪುಟ–47.
48. ಅದೇ, ಕಠ 2.1.12. ಪುಟ–21.
49. ಅದೇ, ಕಠ 2.3.17. ಪುಟ–26

50. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕೀರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–724, ಪುಟ–233.

51. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಕಠ 3.1.13. ಪುಟ–22.

52. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕೀರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–770, ಪುಟ–242.

53. ಅದೇ, ವಚನ ಸಂ–710, ಪುಟ–230.

54. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಕಠ 1.3.3. ಪುಟ–18.

55. ಅದೇ, ಮುಂಡಕ 2.2.6. ಪುಟ–46.

56. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕೀರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–767, ಪುಟ–242.

57. ಅದೇ, ವಚನ ಸಂ–872, ಪುಟ–265.

58. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಐತರೇಯ 4.5. ಪುಟ–77.

59. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕೀರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–800, ಪುಟ–249.

60. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಕೇನ 1.1. ಪುಟ–4.

61. ಅದೇ, ಕೇನ 1.2. ಪುಟ–4.

62. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕೀರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–776, ಪುಟ–244.

63. ಅದೇ, ವಚನ ಸಂಖ್ಯೆ–768, ಪುಟ–242.

64. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ತೈತ್ತರೀಯ 2.7. ಪುಟ–63.

65. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕೀರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–750, ಪುಟ–238.

66. ಅದೇ, ವಚನ ಸಂ–725, ಪುಟ–233.

67. ಅದೇ, ವಚನ ಸಂ–822, ಪುಟ–254.

68. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಛಾಂದೋಗ್ಯ 6.3.1,2. ಪುಟ–142.

69. ಅದೇ, ಛಾಂದೋಗ್ಯ 3.19.1,2. ಪುಟ–115.

70. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–802, ಪುಟ–251.

71. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಮುಂಡಕ 1.1.7. ಪುಟ–41.

72. ಅದೇ, ಐತರೇಯ 1.1.1. ಪುಟ–72.

73. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–747, ಪುಟ–237.

74. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಐತರೇಯ 1.1.2. ಪುಟ–72.

75. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–730, ಪುಟ–234.

76. ಅದೇ, ವಚನ ಸಂಖ್ಯೆ–734, ಪುಟ–235.

77. ಅದೇ, ವಚನ ಸಂಖ್ಯೆ–748, ಪುಟ–238.

78. ಅದೇ, ವಚನ ಸಂಖ್ಯೆ–776, ಪುಟ–244.

79. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಈಶ 1. ಪುಟ–1.

80. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–807, ಪುಟ–251.

81. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಮುಂಡಕ 2.1.3. ಪುಟ–44.

82. ಅದೇ, ಕಠ 2.2.12. ಪುಟ–23.

83. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಖ್ಯೆ–790, ಪುಟ–247.

84. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಮುಂಡಕ 3.2.8. ಪುಟ–49.

85. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಂಖ್ಯೆ–791, ಪುಟ–248.

86. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಮುಂಡಕ 3.2.4. ಪುಟ–48.

87. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಂಖ್ಯೆ–837, ಪುಟ–257.

88. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಮುಂಡಕ 3.1.5. ಪುಟ–47.

89. ಅದೇ, ಮುಂಡಕ 3.1.6. ಪುಟ–47.

90. ಅದೇ, ತೈತ್ತೀರಿಯ 1.11.1. ಪುಟ–58.

91. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಂಖ್ಯೆ–860, ಪುಟ–262.

92. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಈಶ ಶಾಂತಿಮಂತ್ರ ಪುಟ–1, ಬೃಹದಾರಣ್ಯಕ ಶಾಂತಿಮಂತ್ರ ಪುಟ–178.

93. ಕಠ, ಶಾಂತಿಮಂತ್ರ ಪುಟ–9.

94. ಕೇನ ಶಾಂತಿಮಂತ್ರ ಪುಟ–4, ಛಾಂದೋಗ್ಯ ಶಾಂತಿಮಂತ್ರ ಪುಟ–79.

95. ತೈತ್ತಿರೀಯ, ಶಾಂತಿಮಂತ್ರ ಪುಟ–53.

96. ಐತರೇಯ, ಶಾಂತಿಮಂತ್ರ ಪುಟ–72.

97. ಪ್ರಶ್ನ ಶಾಂತಿಮಂತ್ರ ಪುಟ–28, ಮುಂಡಕ ಶಾಂತಿಮಂತ್ರ ಪುಟ–40 ಮತ್ತು ಮಾಂಡೂಕ್ಯ, ಶಾಂತಿಮಂತ್ರ ಪುಟ–51.

98. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಂಖ್ಯೆ–739, ಪುಟ–236.

99. ಅದೇ, ವಚನ ಸಂಖ್ಯೆ–734, ಪುಟ–235.

100. ಅದೇ, ವಚನ ಸಂಖ್ಯೆ–776, ಪುಟ–244.

101. ಅದೇ, ವಚನ ಸಂಖ್ಯೆ–748, ಪುಟ–238.

102. ಅದೇ, ವಚನ ಸಂಖ್ಯೆ–747, ಪುಟ–237.

103. ಅದೇ, ವಚನ ಸಂಖ್ಯೆ–751, ಪುಟ–247.

104. ಅದೇ, ವಚನ ಸಂಖ್ಯೆ–717, ಪುಟ–231.

105. ಅದೇ, ವಚನ ಸಂಖ್ಯೆ–823, ಪುಟ–264.

106. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಮುಂಡಕ 1.2.12. ಪುಟ–43.

107. ಅದೇ, ಮುಂಡಕ 1.2.12. ಪುಟ–43.

108. ಅದೇ, ಛಾಂದೋಗ್ಯ 4.2.1 ರಿಂದ 4. ಪುಟ–116.

109. ಅದೇ, ತೈತ್ತಿರೀಯ 1.11.1 ರಿಂದ 4. ಪುಟ–58.

110. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕೀರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಂಖ್ಯೆ–790, ಪುಟ–247.

111. ಅದೇ, ವಚನ ಸಂಖ್ಯೆ–884, ಪುಟ–268.

112. ಅದೇ, ವಚನ ಸಂಖ್ಯೆ–748, ಪುಟ–246.

113. ಅದೇ, ವಚನ ಸಂಖ್ಯೆ–786, ಪುಟ–246.

114. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣಿವಿಲಾಸ ಮಯದ್ರಾಣಾಲಯ ಶ್ರೀರಂಗಮ್, 1964. ಮುಂಡಕ 1.2.1 ಪುಟ–41.

115. ಅದೇ, ಬೃಹದಾರಣ್ಯಕ 1.4.14. ಪುಟ–189.

116. ಅದೇ, ಮುಂಡಕ 3.1.6. ಪುಟ–47.

117. ಅದೇ, ತೈತ್ತಿರೀಯ 1.11.1. ಪುಟ– 58.

118. ಅದೇ, ಛಾಂದೋಗ್ಯ 3.17.4. ಪುಟ–113.

119. ಅದೇ, ಛಾಂದೋಗ್ಯ 3.17.4. ಪುಟ–113.

120. ಅದೇ, ತೈತ್ತಿರೀಯ 1.11.3. ಪುಟ– 59.

121. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕೀರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001. ವಚನ ಸಂಖ್ಯೆ–738, ಪುಟ–236.

122. ಅದೇ, ವಚನ ಸಂಖ್ಯೆ–860, ಪುಟ–262.

123. ಅದೇ, ವಚನ ಸಂಖ್ಯೆ–821, ಪುಟ–254.

124. ಅದೇ, ವಚನ ಸಂಖ್ಯೆ–783, ಪುಟ–246.

125. ಅದೇ

126. ಅದೇ, ವಚನ ಸಂಖ್ಯೆ–845, ಪುಟ–259.

ಅಧ್ಯಾಯ 7

ಉಪಸಂಹಾರ

ಅಧ್ಯಾಯ 7

ಉಪಸಂಹಾರ

ಭಾರತೀಯ ಸಂಸ್ಕೃತಿಯ ಪರಂಪರೆಯಲ್ಲಿ ಉಪನಿಷತ್ತುಗಳ ಸ್ಥಾನ ಸರ್ವಶ್ರೇಷ್ಠವಾಗಿವೆ. ಇವು ಉನ್ನತವಾದ ಆಧ್ಯಾತ್ಮಿಕ, ತಾತ್ತ್ವಿಕ, ನೈತಿಕ, ಮೊದಲಾದ ತತ್ತ್ವಗಳನ್ನು ಒಳಗೊಂಡು ಮಹತ್ವಪೂರ್ಣವಾಗಿವೆ. ಸು. ಕ್ರಿ.ಪೂ. 2000 ವರ್ಷಗಳ ಹಿಂದೆಯೇ ನಮ್ಮ ಋಷಿಗಳಿಂದ ಆವಿಷ್ಕಾರಗೊಂಡ ಇವುಗಳ ತತ್ತ್ವಗಳು ಇಂದಿಗೂ ಜೀವಂತವಾಗಿ ಜನಮನದಲ್ಲಿ ನೆಲೆನಿಂತಿವೆ. ಕನ್ನಡಸಾಹಿತ್ಯದಲ್ಲಿಯ ವಚನವಾಙ್ಮಯವು ಸಹ ಉಪನಿಷತ್ತಿನಷ್ಟೇ ಮಹತ್ವಪೂರ್ಣವಾಗಿದೆ. ವಚನಗಳು ವಿದ್ವಾಂಸರಿಂದ ಮಾನ್ಯತೆ ಪಡೆದು ಕನ್ನಡದ ಉಪನಿಷತ್ತುಗಳೆಂದೇ ಗೌರವ, ಹೆಗ್ಗಳಿಕೆಗೆ ಪಾತ್ರವಾಗಿವೆ.

ಉಪನಿಷತ್ತು ಮತ್ತು ವಚನಗಳು ಮನುಕುಲಕ್ಕೆ ವಿಶೇಷ ಕೊಡುಗೆಗಳಾಗಿವೆ, ಅಮರ ಸಂದೇಶಗಳಾಗಿವೆ. ಇಲ್ಲಿರುವ ತತ್ತ್ವಗಳು ಅಥವಾ ಸಂದೇಶಗಳು ದೇಶ, ಕಾಲಗಳನ್ನು ಮೀರಿ ಮಾನವ ಕಲ್ಯಾಣಕಾರಿಯಾಗಿವೆ. ಇಂದು ಇವುಗಳೆರಡು ತಮ್ಮ ಉನ್ನತ ತತ್ತ್ವಗಳಿಂದ ಮಾನವರನ್ನು ಸುಸಂಸ್ಕೃತರನ್ನಾಗಿಮಾಡಲು ಸಶಕ್ತವಾಗಿವೆ. ಅವುಗಳನ್ನು ಅರಿತು ಆಚರಿಸಿದರೆ ಮಾನವನ ಬಾಳು ಬೆಳಗುತ್ತದೆ. ಅಂಥವನ ನಡೆ–ನುಡಿ, ಆಚಾರ–ವಿಚಾರಗಳು ಎಲ್ಲರಿಗೆ ಆದರ್ಶಮಯವಾಗಿತ್ತವೆ.

ಆದುದರಿಂದ ಉಪನಿಷತ್ತುಗಳಲ್ಲಾಗಲಿ ಅಥವಾ ವಚನಗಳಲ್ಲಾಗಲಿ ಪ್ರಸ್ತಾಪಿಸಿರುವ ತಾತ್ತ್ವಿಕ ಅಂಶಗಳ ಪ್ರತಿಪಾದನೆಯ ಭಾಷೆ, ಶೈಲಿ, ಮೊದಲಾದವುಗಳಲ್ಲಿ ಭಿನ್ನತೆಯನ್ನು ಕಂಡು ಬಂದರೂ, ನದಿಗಳೆಲ್ಲ ಹರಿದು ಸಮುದ್ರ ಸೇರುವಂತೆ, ಅವೆರಡರ ಗುರಿ ಮಾನವ ಕಲ್ಯಾಣವೇ ಆಗಿದೆಂದು ಹೇಳುವುದರಲ್ಲಿ ಸಂದೇಹವಿಲ್ಲ.

ಉಪನಿಷತ್ತು ಹಾಗೂ ವಚನಗಳು ಅನೇಕ ದೃಷ್ಟಿಯಿಂದ ಉತ್ಕೃಷ್ಟ ಮತ್ತು

ವೈಶಿಷ್ಟ್ಯಪೂರ್ಣತೆಯಿಂದ ಕೂಡಿವೆ. ಇಂತಹ ಸಾಹಿತ್ಯ ಜಗತ್ತಿನ ಇತಿಹಾಸದ ಪುಟಗಳಲ್ಲಿ ಈ ಸಾಹಿತ್ಯ ಅತ್ಯಂತ ವಿಶಿಷ್ಟವಾಗಿದೆ. ಅಂದರೆ ಶ್ರೇಷ್ಠವಾದ ತತ್ತ್ವಚಿಂತನ ಸಾಹಿತ್ಯ ತುಂಬಿಕೊಂಡಿರುವಂತಹ ಈ ಎರಡೂ ಪ್ರಕಾರಗಳು ಅತ್ಯಮೂಲ್ಯವಾಗಿವೆ.

ಉಪನಿಷತ್ತು ಮತ್ತು ವಚನಗಳಲ್ಲಿ ಬರುವ ವಿಷಯಗಳು ಸಾಗರ ಸದೃಶವಾಗಿವೆ. ಸಾಧ್ಯವಾದ ಮಟ್ಟಿಗೆ ದಶೋಪನಿಷತ್ತು ಮತ್ತು ದೇವರ ದಾಸಿಮಯ್ಯನವರ ವಚನಗಳನ್ನು ಕುರಿತು ತಾತ್ತ್ವಿಕ ದೃಷ್ಟಿಯಿಂದ ಮಾತ್ರ ತೌಲನಿಕ ಅಧ್ಯಯನ ಮಾಡಲಾಗಿದೆ.

ಜ್ಞಾನದ ಉತ್ತುಂಗ ಶಿಖರಪ್ರಾಯವಾಗಿರುವ ಈ ಎರಡು ಸಾಹಿತ್ಯರಾಶಿಗಳ ಅಧ್ಯಯನವು ವರ್ತಮಾನದ ಹಲವು ಜ್ವಲಂತ ಸಮಸ್ಯೆಗಳ ಪರಿಹಾರವನ್ನು ಸೂಚಿಸಬಲ್ಲದೆಂಬುದನ್ನು ಇಲ್ಲಿ ಪ್ರತಿಪಾದಿಸಿದ್ದೇನೆ. ಉಪನಿಷತ್ತುಗಳ ಮತ್ತು ವಚನವಾಙ್ಮಯದ ವಿಷಯ ವಿಸ್ತಾರವು ಅಗಾಧವಾಗಿರುವುದರಿಂದ, ಮಹಾಪ್ರಬಂಧದ ವ್ಯಾಪ್ತಿಯ ಪರಿಮಿತಿಗೆ ಅನುಗುಣವಾಗಿ ದಶೋಪನಿಷತ್ತುಗಳಲ್ಲಿನ ಪ್ರಧಾನ ತತ್ತ್ವಗಳು ಮತ್ತು ನೂರಾರು ವಚನಕಾರರಲ್ಲಿ ದೇವರ ದಾಸಿಮಯ್ಯನ ವಚನಗಳನ್ನು ಆಯ್ಕೆಮಾಡಿ ಅವರ ವಚನಗಳಲ್ಲಿ ಪ್ರತಿಪಾದಿತವಾದ ತತ್ತ್ವಗಳನ್ನು ತೌಲನಿಕ ಅಧ್ಯಯನ ಮಾಡಲಾಗಿದೆ. ಆತ್ಮಕಲ್ಯಾಣ ಮತ್ತು ಲೋಕಕಲ್ಯಾಣ ಸಾಧನೆಗೆ ಇಲ್ಲಿ ವಿವರಿಸಲಾದ ಅಂಶಗಳು ಬದುಕಿಗೆ ಬೆಳಕು ನೀಡುವಂತಾದರೆ ಈ ಮಹಾಪ್ರಬಂಧದ ಉದ್ದೇಶ ಸಾರ್ಥಕವಾಗುತ್ತದೆ.

ಗ್ರಂಥ ಋಣ

1. ಉಪನಿಷತ್ ಸಾಹಿತ್ಯಕ್ಕೆ ಸಂಬಂಧಿಸಿದ ಗ್ರಂಥಗಳು

1. ಡಾ. ಎನ್. ಎಸ್. ಅನಂತರಂಗಾಚಾರ್, 'ವೈದಿಕ ಸಾಹಿತ್ಯ ಚರಿತ್ರೆ' ಡಿ. ವಿ. ಕೆ. ಮೂರ್ತಿ, ಮೈಸೂರು–4, 2001.
2. ಡಾ. ಎನ್. ಎಸ್. ಅನಂತರಂಗಾಚಾರ್, 'ಉಪನಿಷತ್ತು' ಭವನದ ಗಾಂಧಿ ಕೇಂದ್ರ, ಬೆಂಗಳೂರು–01, 2002.
3. ವಿದ್ವಾನ್. ಎಚ್. ವ್ಹಿ. ನಾಗರಾಜ, 'ವೇದ–ವೇದಾಂಗ' ಭವನದ ಗಾಂಧಿ ಕೇಂದ್ರ, ಬೆಂಗಳೂರು–01, 2002.
4. ಸೋಮನಾಥಾನಂದ, 'ಉಪನಿಷತ್ ಪರಿಚಯ ಪ್ರಸಾರಾಂಗ ಮೈಸೂರು ವಿ. ವಿ. ಮೈಸೂರು–6, 1988.
5. ಸೋಮನಾಥಾನಂದ, 'ಉಪನಿಷತ್ ಭಾವಧಾರೆ' ಶ್ರೀ ರಾಮಕೃಷ್ಣಾಶ್ರಮ ಮೈಸೂರು–20, 1995.
6. ಸ್ವಾಮಿ ರಂಗನಾಥಾನಂದ, 'ಉಪನಿಷತ್ತುಗಳ ಸಂದೇಶ' ಶ್ರೀ ರಾಮಕೃಷ್ಣಾಶ್ರಮ ಮೈಸೂರು–20, 2001.
7. ಸ್ವಾಮಿ ಆದಿದೇವಾನಂದ, 'ಈಸ್ಯಾವಾಸ್ಯೋಪನಿಷತ್' ಶ್ರೀ ರಾಮಕೃಷ್ಣಾಶ್ರಮ ಮೈಸೂರು–20, 1988.
8. ಸ್ವಾಮಿ ಆದಿದೇವಾನಂದ, 'ಕೇನೋಪನಿಷತ್' ಶ್ರೀ ರಾಮಕೃಷ್ಣಾಶ್ರಮ ಮೈಸೂರು–20, 1980.
9. ಸ್ವಾಮಿ ಆದಿದೇವಾನಂದ, 'ಕಠೋಪನಿಷತ್' ಶ್ರೀ ರಾಮಕೃಷ್ಣಾಶ್ರಮ ಮೈಸೂರು–20, 1981.
10. ಸ್ವಾಮಿ ಆದಿದೇವಾನಂದ, 'ಪ್ರಶ್ನೋಪನಿಷತ್' ಶ್ರೀ ರಾಮಕೃಷ್ಣಾಶ್ರಮ ಮೈಸೂರು–20, 1957.
11. ಸ್ವಾಮಿ ಆದಿದೇವಾನಂದ, 'ಶ್ವೇತಾಶ್ವೇತರೋಪನಿಷತ್' ಶ್ರೀ ರಾಮಕೃಷ್ಣಾಶ್ರಮ ಮೈಸೂರು–20, 2003.
12. ಸ್ವಾಮಿ ಆದಿದೇವಾನಂದ, 'ಛಾಂದೋಗ್ಯೋಪನಿಷತ್' ಶ್ರೀ ರಾಮಕೃಷ್ಣಾಶ್ರಮ ಮೈಸೂರು–20, 1961.
13. ಜಿ.ಹನುಮಂತರಾವ್, 'ಉಪನಿಷತ್ತುಗಳ ತತ್ತ್ವ' ಡಿ. ವಿ. ಕೆ. ಮೂರ್ತಿ, ಮೈಸೂರು–4, 1971.

14. ಶ್ರೀ ಸಿದ್ಧೇಶ್ವರ ಸ್ವಾಮಿಗಳು, 'ಮುಂಡಕೋಪನಿಷತ್ತು' ಜ್ಞಾನಯೋಗಾಶ್ರಮ ವಿಜಾಪುರ, 1982.

15. ಶ್ರೀ ಸಿದ್ಧೇಶ್ವರ ಸ್ವಾಮಿಗಳು, 'ಮಾಂಡೂಕ್ಯೋಪನಿಷತ್ತು' ಜ್ಞಾನಯೋಗಾಶ್ರಮ ವಿಜಾಪುರ, 1989.

16. ಶ್ರೀ ಸಿದ್ಧೇಶ್ವರ ಸ್ವಾಮಿಗಳು, 'ಕೇನೋಪನಿಷತ್ತು' ಜ್ಞಾನಯೋಗಾಶ್ರಮ ವಿಜಾಪುರ, 1990.

17. ಸ್ವಾಮಿ ಶಂಕರಾನಂದ ಪರಮಹಂಸ, 'ದಶೋ್ಯಪನಿಷದ್ಭಾಷ್ಯರತ್ನಮಾಲಾ' ಶ್ರೀ ಜಡಿಸಿದ್ಧಾಶ್ರಮ ಹುಬ್ಬಳ್ಳಿ, 1954.

18. ಸ್ವಾಮಿ ಶಂಕರಾನಂದ ಪರಮಹಂಸ, 'ತೈತ್ತಿರಿಯೋಪನಿಷತ್' ಶ್ರೀ ಜಡಿಸಿದ್ಧಾಶ್ರಮ ಹುಬ್ಬಳ್ಳಿ, 1955.

19. ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು, 'ಉಪನಿಷತ್ತುಗಳ ಮೊದಲನೆಯ ಪರಿಚಯ' ಅದ್ಯಾತ್ಮ ಪ್ರಕಾಶ ಕಾರ್ಯಾಲಯ ಹೊಳೆನರಸೀಪುರ–573211, 2001.

20. ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು, 'ಈಶಾವಾಸ್ಯೋಪನ್ಯಾಸ ಮಂಜರಿ' ಅದ್ಯಾತ್ಮ ಪ್ರಕಾಶ ಕಾರ್ಯಾಲಯ ಹೊಳೆನರಸೀಪುರ–573211, 2002.

21. ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು, 'ಕೇನೋಪನ್ಯಾಸ ಮಂಜರಿ' ಅದ್ಯಾತ್ಮ ಪ್ರಕಾಶ ಕಾರ್ಯಾಲಯ ಹೊಳೆನರಸೀಪುರ–573211, 2005.

22. ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು, 'ಕಾಠಕೋಪನ್ಯಾಸ ಮಂಜರಿ' ಅದ್ಯಾತ್ಮ ಪ್ರಕಾಶ ಕಾರ್ಯಾಲಯ ಹೊಳೆನರಸೀಪುರ–573211, 2002.

23. ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು, 'ಪ್ರಶ್ನೋಪನ್ಯಾಸ ಮಂಜರಿ' ಅದ್ಯಾತ್ಮ ಪ್ರಕಾಶ ಕಾರ್ಯಾಲಯ ಹೊಳೆನರಸೀಪುರ–573211, 1997.

24. ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು, 'ಮುಂಡಕೋಪನ್ಯಾಸ ಮಂಜರಿ' ಅದ್ಯಾತ್ಮ ಪ್ರಕಾಶ ಕಾರ್ಯಾಲಯ ಹೊಳೆನರಸೀಪುರ–573211, 1998.

25. ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು, 'ಮಾಂಡೂಕ್ಯೋಪನ್ಯಾಸ ಮಂಜರಿ' ಅದ್ಯಾತ್ಮ ಪ್ರಕಾಶ ಕಾರ್ಯಾಲಯ ಹೊಳೆನರಸೀಪುರ–573211, 2005.

26. ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು, 'ಬ್ರಹ್ಮವಿದ್ಯೆ' ಅದ್ಯಾತ್ಮ ಪ್ರಕಾಶ ಕಾರ್ಯಾಲಯ ಹೊಳೆನರಸೀಪುರ–573211, 2005.

27. ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು, 'ಶಾಂಕರ ವೇದಾಂತ ಸಾರ' ಅದ್ಯಾತ್ಮ ಪ್ರಕಾಶ ಕಾರ್ಯಾಲಯ ಹೊಳೆನರಸೀಪುರ–573211, 2000.

28. ಶ್ರೀ ಸಚ್ಚಿದಾನಂದೇಂದ್ರಸರಸ್ವತೀ ಸ್ವಾಮಿಗಳು, 'ವೇದಾಂತ ಸಂದೇಶಗಳು' ಅದ್ಯಾತ್ಮ ಪ್ರಕಾಶ ಕಾರ್ಯಾಲಯ ಹೊಳೆನರಸೀಪುರ–573211, 2010.

29. ಎಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ, 'ಐತರೇಯೋಪನ್ಯಾಸ ಮಂಜರಿ' ಅದ್ಯಾತ್ಮ ಪ್ರಕಾಶ ಕಾರ್ಯಾಲಯ ಹೊಳೆನರಸೀಪುರ–573211, 2000.

30. ಎಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ, 'ತೈತ್ತರೀಯೋಪನ್ಯಾಸ ಮಂಜರಿ' ಅದ್ಯಾತ್ಮ ಪ್ರಕಾಶ ಕಾರ್ಯಾಲಯ ಹೊಳೆನರಸೀಪುರ–573211, 2000.

31. ಎಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ, 'ಛಾಂದೋಗ್ಯೋಪನ್ಯಾಸ ಮಂಜರಿ' ಅದ್ಯಾತ್ಮ ಪ್ರಕಾಶ ಕಾರ್ಯಾಲಯ ಹೊಳೆನರಸೀಪುರ–573211, 1999.

32. ಎಚ್. ಎಸ್. ಲಕ್ಷ್ಮೀನರಸಿಂಹಮೂರ್ತಿ, 'ಬೃಹದಾರಣ್ಯಕೋಪನ್ಯಾಸ ಮಂಜರಿ' ಅದ್ಯಾತ್ಮ ಪ್ರಕಾಶ ಕಾರ್ಯಾಲಯ ಹೊಳೆನರಸೀಪುರ–573211, 2009.

33. ಹೊಸಕೆರೆ ಚಿದಂಬರಯ್ಯ, 'ವೇದಾಂತ ಜೀವಾಳ' ಅದ್ವೈತ ವೇದಾಂತ ಪ್ರಕಾಶನ ಬೆಂಗಳೂರು–82, 2004.

34. ಎಂ. ಸಿ. ರಾಮರಾವ್, 'ಅಷ್ಟೋಪನಿಷತ್' ಅದ್ವೈತ ವೇದಾಂತ ಪ್ರಕಾಶನ ಬೆಂಗಳೂರು–82, 1978.

35. ಸ್ವಾಮಿ ಪ್ರಭುಪಾದ, 'ಈಶೋಪನಿಷದ್' ಅಂತರಾಷ್ಟ್ರೀಯ ಕೃಷ್ಣಪ್ರಜ್ಞಾ ಸಂಘ ಬೆಂಗಳೂರು, 1984.

36. ಪಂ. ಸುಧಾಕರ ಚತುರ್ವೇದಿ, 'ಉಪನಿಷದ್ ಭಾಷ್ಯ–1' ಆರ್ಯ ಸಮಾಜ ಬೆಂಗಳೂರು, 1993.

37. ಆರ್. ಡಿ. ಹೆಗಡೆ, 'ಉಪನಿಷತ್ತುಗಳ ಅರ್ಥಲೋಕ' ನವಕರ್ನಾಟಕ ಪ್ರಕಾಶನ ಬೆಂಗಳೂರು, 1997.

38. ಡಾ. ದೇವಿಪ್ರಸಾದ ಚಟ್ಟೋಪಾಧ್ಯಾಯ, 'ಭಾರತೀಯ ದರ್ಶನಗಳು' ನವಕರ್ನಾಟಕ ಪ್ರಕಾಶನ ಬೆಂಗಳೂರು, 1996.

39. ಡಾ. ಕೆ. ಕೃಷ್ಣಮೂರ್ತಿ, 'ಸಂಸ್ಕೃತ ಭಾಷಾಶಾಸ್ತ್ರ ಮತ್ತು ಸಾಹಿತ್ಯ ಚರಿತ್ರೆ' ಕರ್ನಾಟಕ ಸರ್ಕಾರ ಪಠ್ಯಪುಸ್ತಕ ಇಲಾಖೆ ಬೆಂಗಳೂರು, 1997.

40. ಸಾನುವಾದ ಶಂಕರಭಾಷ್ಯ ಸಹಿತ, 'ಈಶಾವಾಸ್ಯೋಪನಿಷದ್' ಗೀತಾಪ್ರೇಸ ಗೋರಖಪುರ, ವಿ.ಶ 2057.

41. ಸಾನುವಾದ ಶಂಕರಭಾಷ್ಯ ಸಹಿತ, 'ಕೇನೋಪನಿಷದ್' ಗೀತಾಪ್ರೇಸ ಗೋರಖಪುರ, ವಿ.ಶ 2055.

42. ಸಾನುವಾದ ಶಂಕರಭಾಷ್ಯ ಸಹಿತ, 'ಕಠೋಪನಿಷದ್ ಗೀತಾಪ್ರೇಸ ಗೋರಖಪುರ, ವಿ.ಶ 2057.

43. ಸಾನುವಾದ ಶಂಕರಭಾಷ್ಯ ಸಹಿತ, 'ಪ್ರಶ್ನೋಪನಿಷದ್' ಗೀತಾಪ್ರೇಸ ಗೋರಖಪುರ, ವಿ.ಶ 2057.

44. ಸಾನುವಾದ ಶಂಕರಭಾಷ್ಯ ಸಹಿತ, 'ಮುಂಡಕೋಪನಿಷದ್' ಗೀತಾಪ್ರೇಸ ಗೋರಖಪುರ, ವಿ.ಶ 2055.

45. ಸಾನುವಾದ ಶಂಕರಭಾಷ್ಯ ಸಹಿತ, 'ಐತರೇಯೋಪನಿಷದ್' ಗೀತಾಪ್ರೇಸ ಗೋರಖಪುರ, ವಿ.ಶ 2056.

46. ಸಾನುವಾದ ಶಂಕರಭಾಷ್ಯ ಸಹಿತ, 'ಶ್ವೇತಶ್ವೇತರೋಪನಿಷದ್' ಗೀತಾಪ್ರೇಸ ಗೋರಖಪುರ, ವಿ.ಶ 2057.

47. ಸಾನುವಾದ ಶಂಕರಭಾಷ್ಯ ಸಹಿತ, 'ಛಾಂದೋಗ್ಯೋಪನಿಷದ್' ಗೀತಾಪ್ರೇಸ ಗೋರಖಪುರ, ವಿ.ಶ 2058.

48. ಸಾನುವಾದ ಶಂಕರಭಾಷ್ಯ ಸಹಿತ, 'ಬೃಹದಾರಣ್ಯಕೋಪನಿಷದ್' ಗೀತಾಪ್ರೇಸ ಗೋರಖಪುರ, ವಿ.ಶ 2058.

49. ಪಂ. ಹರಿರಘುನಾಥ ಭಾಗವತ, 'ಈಶಾವಾಸ್ಯೋಪನಿಷದಃ' ಚೌಖಂಬಾ ಸಂಸ್ಕೃತ ಪ್ರತಿಷ್ಠಾನ ದಿಲ್ಲಿ, 1991.

50. 'ದಶೋಪನಿಷದಃ' (ಮೂಲಮಾತ್ರಮ್) ಶ್ರೀ ವಾಣೀವಿಲಾಸ ಮುದ್ರಾಣಾಲಯ ಶ್ರೀರಂಗಮ್, 1964.

51. ಶ್ರೀ ಗೋವಿಂದ ಶಾಸ್ತ್ರಿಣಾ ಟಿಪ್ಪಣೀಭಿಃ ಸಮಲಂಕೃತಾಃ, 'ಈಶಾದಿದಶೋಪನಿಷದಃ ಶಂಕರಭಾಷ್ಯಯುತಾಃ' ಮೋತಿಲಾಲ ಬನಾರಸಿದಾಸ ವಾರಣಾಸಿ, 1992.

52. ಡಾ. ಗಂಗಸಾಗರರಾಯಃ, 'ಅಷ್ಟಾವಿಂಶತ್ಯುಪನಿಷದಃ' ರತ್ನಾ ಪಬ್ಲಿಕೇಶನ್ಸ ವಾರಣಾಸಿ, 1985.

53. ಡಾ. ಸತ್ಯವೃತ ಸಿದ್ಧಾಂತಾಲಂಕಾರ, 'ಏಕಾದಶೋಪನಿಷದಃ' ವಿಜಯಕೃಷ್ಣ ಲಖನಪಾಲ ನಯಿದಿಲ್ಲಿ–1, 1979.

54. ಡಾ. ಸತ್ಯವೃತ ಸಿದ್ಧಾಂತಾಲಂಕಾರ, 'ಉಪನಿಷದ್ ಪ್ರಕಾಶ' ವಿಜಯಕೃಷ್ಣ ಲಖನಪಾಲ ನಯಿದಿಲ್ಲಿ–1, 1981.

55. ಶ್ರೀ ಗಜಾನನ ಶಾಸ್ತ್ರಿ ಇತ್ಯಾದಯಃ, 'ವೈದಿಕ ಸಾಹಿತ್ಯ ಕಾ ಇತಿಹಾಸ' ಚೌಖಂಬಾ ಸಂಸ್ಕೃತ ಸಂಸ್ಥಾನ ವಾರಣಾಸಿ, 1994.

56. ಬಿ. ಎನ್. ಚೌಬೆ, 'ಉಪನಿಷದ್ ರಹಸ್ಯ' ಭಾಸ್ಕರ ಪ್ರೇಸ ದೇಹರಾಡೂನ, 2002.

57. ಡಾ. ವೇದವತಿ ವೈದಿಕ, 'ಶ್ವೇತಾಶ್ವೇತರ ಉಪನಿಷದ್ ದಾರ್ಶನಿಕ ಅಧ್ಯಯನ' ನೇಶನಲ ಪಬ್ಲಿಶಿಂಗ ಹೌಸ್ ನಯಿದಿಲ್ಲಿ, 1984.

58. ಚಿಂತಾಮಣಿ ಗಂಗಾಧರಭಾನು, 'ಮುಂಡಕೋಪನಿಷತ್' ದಾಮೋದರ ಸಾಮವರಾಮ ಆಣಿ ಮಿತ್ರಮಂಡಳಿ ಮುಂಬಯಿ, 1913.

59. ಗುರುದತ್ತ, 'ಈಶ–ಕೇನ–ಕಠ–ಉಪನಿಷದ್' ಶಾಶ್ವತ ಸಂಸ್ಕೃತಿ ಪರಿಷದ್ ನಯಿದಿಲ್ಲಿ, 1982.

60. ರಾಮಕೃಷ್ಣ ಮಠ, 'ತೈತ್ತರೀಯ–ಮಂತ್ರಕೋಶಃ–1' ಶ್ರೀ ರಾಮಕೃಷ್ಣ ಮಠ, ಮದ್ರಾಸ–4, 1980.

61. ಶ್ರೀ ರಾಮಶರಣ ತ್ರಿಪಾಠಿಶಾಸ್ತ್ರಿ, 'ಶ್ರೀ ಸದಾನಂದ ಪ್ರಣೀತ ವೇದಾಂತಸಾರಃ' ಚೌಖಂಬಾ ವಿದ್ಯಾಭವನ ವಾರಣಾಸಿ, 1983.

62. ಗುರುದತ್ತ, 'ಮುಂಡಕ–ಮಾಂಡೂಕ್ಯ ಉಪನಿಷದ್' ಶಾಶ್ವತ ಸಂಸ್ಕೃತಿ ಪರಿಷದ್ ನಯಿದಿಲ್ಲಿ, 1981.

63. ಡಾ. ದೇವೇಂದ್ರನಾಥ ಪಾಂಡೇಯ, 'ಕಠೋಪನಿಷದ್' ಹಂಸಾ ಪ್ರಕಾಶನ್ ಜಯಪುರ, 1997.

64. ಡಾ. ಸುರೇಂದ್ರದೇವ ಶಾಸ್ತ್ರಿ, 'ಕಠೋಪನಿಷದ್' ಚೌಖಂಬಾ ವಿದ್ಯಾಭವನ ವಾರಣಾಸಿ, 1983.

65. ಡಾ. ಶಶಿತಿವಾರಿ, 'ಮುಂಡಕೋಪನಿಷದ್' ಮೇಹರಚಂದ ಪಬ್ಲಿಕೇಶನ್ಸ ನಯಿದಿಲ್ಲಿ, 1992.

66. ಶ್ರೀ ಕನ್ಹೈಯಾಲಾಲ ಜೋಶಿ, 'ತೈತ್ತಿರಿಯೋಪನಿಷದ್ ಶಂಕರ ಭಾಷ್ಯ ಸಹಿತ' ಚೌಖಂಬಾ ಓರಿಯಂಟಲಿಯಾ ವಾರಣಾಸಿ, 1985.

67. ಡಾ. ರಾಧಾಕೃಷ್ಣನ್, 'ಉಪನಿಷದೊಂಕಾ ಸಂದೇಶ' ರಾಜಪಾಲ ಅಂಡ್ ಸನ್ಸ ದಿಲ್ಲಿ, 1990.

69. ಪ್ರೊ. ಕೆ. ಟಿ. ಪಾಂಡುರಂಗಿ, 'ಉಪನಿಷದ್ ದರ್ಶನ' ಮಿಂಚಿನ ಬಳ್ಳಿ ಕಾರ್ಯಾಲಯ ಧಾರವಾಡ, 1964.

70. ಶ್ರದ್ಧಾನಂದ ಸ್ವಾಮಿಗಳು, 'ಲಾಕ್ಷಣಿಕ ರತ್ನಮಾಲೆ' ಜ್ಞಾನಯೋಗ ಪೀಠ ಕೋಟ್ನೂರು, 1999.

71. ಡಾ. ಶ್ರೀಕಾಂತ ಪಾಂಡೇಯ, 'ಋಗ್ವೇದ ಭಾಷ್ಯ ಭೂಮಿಕಾ' ಭಾರತೀಯ ವಿದ್ಯಾ ಪ್ರಕಾಶನ ವಾರಣಾಸಿ, 1985

72. 'ಶ್ರೀಮದ್ಭಗವದ್ಗೀತಾ' ಗೀತಾಪ್ರೇಸ್, ಗೋರಖಪುರ, ವಿ.ಶ 2057.

73. ಡಾ. ರಘುವೀರ ವೇದಾಲಂಕಾರ, 'ವೈದಿಕದರ್ಶನ' ನಾಗಪ್ರಕಾಶನ ದಿಲ್ಲಿ, 1987.

74. ಜಿ. ಹನುಮಂತರಾವ್, 'ಉಪನಿಷತ್ತುಗಳ ತತ್ತ್ವ' ಡಿ. ವಿ. ಕೆ. ಮೂರ್ತಿ ಮೈಸೂರು, 1971.

75. ಪಂ. ಚಕ್ರಕೋಡಿ ಈಶ್ವರಶಾಸ್ತ್ರಿ, 'ಮನುಸ್ಮೃತಿ' ಸಮಾಜ ಪುಸ್ತಕಾಲಯ ಧಾರವಾಡ, 1969.

76. ಪರಾಗ, 'ವೇದಾಂಗ ಆರಣ್ಯಕಗಳು' ಸಮಾಜ ಪುಸ್ತಕಾಲಯ ಧಾರವಾಡ, 1985.

77. ಸಂ ಶ್ರೀನಾರಾಯಣ ಮಿಶ್ರಃ, ಪಾಣಿನಿ ಪ್ರಣೀತಃ 'ಅಷ್ಟಾಧ್ಯಾಯೀ ಸೂತ್ರಪಾಠಃ' ಚೌಖಂಭಾ ಓರಿಯಂಟಾಲಿಯಾ ವಾರಣಾಸಿ.

78. ಎಮ್. ಎಮ್. ಪಂಡಿತರಾಜ್ ಡಾ. ಗೋಪಾಲಶಾಸ್ತ್ರಿ, ಪಾಣಿನಿ 'ಅಷ್ಟಾಧ್ಯಾಯಿ' ಚೌಖಂಭಾ ಸುರಭಾರತಿ ವಾರಣಾಸಿ, 1997.

79. ಶ್ರೀ ನಾರಾಯಣ, 'ಮಿಶ್ರಃ ಪಾಣಿನೀಯಶಿಕ್ಷಾ' ಚೌಖಂಭಾ ಪಬ್ಲಿಶರ್ಸ ವಾರಣಾಸಿ, 1998.

80. Dr. B. B. Paliwal, 'Message of the Upnishads' Daimand Pocket books(p)LTD New delhi, 2005.

81. Swami Gambhiranand, 'Kathopanishd' Advait Ashrm Calcutta, 1980.

82. Sri. Aurobondo, 'The Upanishads-1' Sri. Aurobondo Ashram Pandicherry, 1981.

83. V. M. Bedekar & G. B. Palsule, 'Sixty Upanishads of the veda' Mothilal banasidas publishers delhi, 1990.

84. S. N. Shsrma, 'A History of Pandicher, Vedik Literature' The Chowkhamba Sanskrit Series office Varanasi, 1973.

2. ವಚನಸಾಹಿತ್ಯಕ್ಕೆ ಸಂಬಂಧಿಸಿದ ಗ್ರಂಥಗಳು

1. ಸಂ. ಡಾ. ಎಂ. ಎಂ. ಕಲಬುರ್ಗಿ, 'ಬಸವಣ್ಣನವರ ವಚನ ಸಂಪುಟ, ಸಮಗ್ರ ವಚನ ಸಂಪುಟ–1' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001.

2. ಸಂ. ಡಾ. ಬಿ. ವ್ಹಿ. ಮಲ್ಲಾಪುರ, 'ಅಲ್ಲಮಪ್ರಭುದೇವರ ವಚನ ಸಂಪುಟ, ಸಮಗ್ರ ವಚನ ಸಂಪುಟ–2' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001.

3. ಸಂ. ಡಾ. ಬಿ. ವ್ಹಿ. ಮಲ್ಲಾಪುರ, 'ಚೆನ್ನಬಸವಣ್ಣನವರ ವಚನ ಸಂಪುಟ, ಸಮಗ್ರ ವಚನ ಸಂಪುಟ–3' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001.

4. ಸಂ. ಡಾ. ಎಸ್. ವಿದ್ಯಾಶಂಕರ, 'ಸಿದ್ಧರಾಮೇಶ್ವರ ವಚನ ಸಂಪುಟ, ಸಮಗ್ರ ವಚನ ಸಂಪುಟ–4' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001.

5. ಸಂ. ಡಾ. ವೀರಣ್ಣ ರಾಜೂರ, 'ಶಿವಶರಣೆಯರ ವಚನ ಸಂಪುಟ, ಸಮಗ್ರ ವಚನ ಸಂಪುಟ–5' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001.

6. ಸಂ. ಡಾ. ಎಂ. ಎಂ. ಕಲಬುರ್ಗಿ, 'ಸಂಕಿರ್ಣ ವಚನ ಸಂಪುಟ–1, ಸಮಗ್ರ ವಚನ ಸಂಪುಟ–6' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001.

7. ಸಂ. ಡಾ. ಎಸ್. ವಿದ್ಯಾಶಂಕರ, 'ಸಂಕಿರ್ಣ ವಚನ ಸಂಪುಟ–2, ಸಮಗ್ರ ವಚನ ಸಂಪುಟ–7' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001.

8. ಸಂ. ಡಾ. ಬಿ. ಆರ್. ಹಿರೇಮಠ, 'ಸಂಕಿರ್ಣ ವಚನ ಸಂಪುಟ–3, ಸಮಗ್ರ ವಚನ ಸಂಪುಟ–8' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001.

9. ಸಂ. ಡಾ. ಬಿ. ಆರ್. ಹಿರೇಮಠ, 'ಸಂಕಿರ್ಣ ವಚನ ಸಂಪುಟ–4, ಸಮಗ್ರ ವಚನ ಸಂಪುಟ–9' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001.

10. ಸಂ. ಡಾ. ವೀರಣ್ಣ ರಾಜೂರ, 'ಸಂಕಿರ್ಣ ವಚನ ಸಂಪುಟ–5, ಸಮಗ್ರ ವಚನ ಸಂಪುಟ–10' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001.

11. ಸಂ. ಎಸ್. ಶಿವಣ್ಣ, 'ಸಂಕಿರ್ಣ ವಚನ ಸಂಪುಟ–6, ಸಮಗ್ರ ವಚನ ಸಂಪುಟ–11' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001.

12. ಸಂ. ಡಾ. ವೀರಣ್ಣ ರಾಜೂರ, 'ಸಂಕಿರ್ಣ ವಚನ ಸಂಪುಟ–7, ಸಮಗ್ರ ವಚನ ಸಂಪುಟ–12' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001.

13. ಸಂ. ಡಾ. ವೀರಣ್ಣ ರಾಜೂರ, 'ಸಂಕಿರ್ಣ ವಚನ ಸಂಪುಟ–8, ಸಮಗ್ರ ವಚನ ಸಂಪುಟ–13' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001.

14. ಸಂ. ಡಾ. ವೀರಣ್ಣ ರಾಜೂರ, 'ಸಂಕಿರ್ಣ ವಚನ ಸಂಪುಟ–9, ಸಮಗ್ರ ವಚನ ಸಂಪುಟ–14' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001.

15. ಶ್ರೀ ಸಿದ್ದೇಶ್ವರ ಸ್ವಾಮಿಗಳು, 'ಅಲ್ಲಮಪ್ರಭುದೇವರ ವಚನ–ನಿರ್ವಚನ–1' ಜೆ. ಎಸ್. ಎಸ್. ಗ್ರಂಥಮಾಲೆ, ಮೈಸೂರು, 1998.

16. ಡಾ. ಎಲ್. ಬಸವರಾಜು, 'ಬಸವಣ್ಣನವರ ಷಟ್ಸ್ಥಲದ ವಚನಗಳು' ಶ್ರೀ ಶರಣ ಬಸವೇಶ್ವರ ಗ್ರಂಥ ವಿಶ್ವವಿದ್ಯಾಲಯ ಗುಲಬರ್ಗಾ, 1990.

17. ಡಾ. ಎಲ್. ಬಸವರಾಜು, 'ಅಲ್ಲಮನ ವಚನ ಚಂದ್ರಿಕೆ' ಮೂರು ಸಾವಿರ ಮಠ ಹುಬ್ಬಳ್ಳಿ, 1986.

18. ವಿರೂಪಾಕ್ಷ ಕವಿಕೃತ 'ಶ್ರೀ ದೇವರ ದಾಸಿಮಾರ್ಯ ಪುರಾಣಮ್' ಶ್ರೀ ದೇವೇಂದ್ರಪ್ಪ. ಗಿ. ಭದ್ರನ್ನವರ ಬನಹಟ್ಟಿ, 1962.

19. ಡಾ. ಎಲ್. ಬಸವರಾಜು, 'ದೇವರ ದಾಸಿಮಯ್ಯನ ವಚನಗಳು' ಗೀತಾ ಬುಕ್ಕ ಹೌಸ್ ಮೈಸೂರು, 1995.

20. ಕವಿತಾ ಕೃಷ್ಣ, 'ದಾಸ ಕುಲ ದೀಪಕ ದೇವರ ದಾಸಿಮಯ್ಯ' ಬನಶಂಕರಿ ಪ್ರಕಾಶನ ತುಮುಕೂರು, 1998.

21. ಪ್ರೊ. ಡಿ. ಟಿ. ರಂಗಸ್ವಾಮಿ, 'ದೇವರ ದಾಸಮಯ್ಯ' (ವಿಮರ್ಶೆ), ವಸ್ತ್ರ ಪ್ರಕಾಶನ ಹೊಸದುರ್ಗ, 2003.

22. ಪ್ರೊ. ಡಿ. ಟಿ. ರಂಗಸ್ವಾಮಿ, 'ದೇವಾಂಗ ಕುಲ ದೀಪಕ ದೇವರ ದಾಸಿಮಯ್ಯ' ಚಿನ್ಮೂಲಾದ್ರಿ ಪ್ರಕಾಶನ ಚಿತ್ರದುರ್ಗ, 1999.

23. ಪ್ರೊ. ಡಿ. ಟಿ. ರಂಗಸ್ವಾಮಿ, 'ದೇವರ ದಾಸಿಮಯ್ಯನವರ ವಚನಗಳು' ಶ್ರೀ ಗಾಯತ್ರಿ ಪೀಠ ಹಂಪೆ, 2005.

24. ಸಂ. ರಮೇಶ ಮಾಳಾ, 'ದೇವರ ದಾಸಿಮಯ್ಯನವರ ವಚನ ದರ್ಪಣ' ಗಾಯತ್ರಿ ಪ್ರತಿಷ್ಠಾನ ಗುಲಬರ್ಗಾ, 1998.

25. ಸಂ. ರಮೇಶ ಮಾಳಾ, 'ತವನಿಧಿ' ಗಾಯತ್ರಿ ಪ್ರತಿಷ್ಠಾನ ಗುಲಬರ್ಗಾ, 2005.

26. ಆರ್. ರಾಚಪ್ಪ, 'ಶರಣ ಕ್ಷೇತ್ರ ಮುದನೂರು' ಬಸವಾದಿ ಶರಣರಸಾಹಿತ್ಯ ಕೇಂದ್ರ, ವಿ. ವಿ. ಗುಲಬರ್ಗಾ, 1999.

27. ಮಾತೆ ಮಹಾದೇವಿ, 'ಜೇಡರ ದಾಸಯ್ಯನ ವಚನಗಳು' ವಿಶ್ವ ಕಲ್ಯಾಣ ಮಿಷನ್ ಬೆಂಗಳೂರು, 2006.

28. ಸಿದ್ಧಯ್ಯ ಪುರಾಣಿಕ, 'ಶರಣ ಚರಿತಾಮೃತ' ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ ಮೈಸೂರು, 1992.

29. ಡಾ. ಬಸವಲಿಂಗ ಸೊಪ್ಪಿಮಠ, 'ಒಡಲೊಳಗಣ ಕಿಚ್ಚು' ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು–18, 1996.

30. ಎಮ್. ಆರ್. ಶ್ರೀನಿವಾಸಮೂರ್ತಿ, 'ವಚನ ಧರ್ಮಸಾರ' ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು–18, 2003.

31. ಡಾ. ರಾಮರೆಡ್ಡಿ. ಎಸ್. ರಡ್ಡೇರ, 'ದೇವರ ದಾಸಿಮಯ್ಯನ ಜೀವನ ಮತ್ತು ಸಾಹಿತ್ಯ' ವೆಂಕಾಮಣಿ ಪ್ರಕಾಶನ ರಾಣೇಬೆನ್ನೂರು, 2005.

32. ಡಾ. ರಾಮರೆಡ್ಡಿ. ಎಸ್. ರಡ್ಡೇರ, 'ಸಗರ ನಾಡಿನ ಶಿವಶರಣರು' ಕರ್ನಾಟಕ ವಿ. ವಿ. ಧಾರವಾಡ, 2000.

33. ಗಂಗಮ್ಮ. ಎಚ್. ಸತ್ಯಂಪೇಟ, 'ಮುದುನೂರು ದಾಸಿಮಯ್ಯ–ಒಂದು ಅಧ್ಯಯನ' ಕರ್ನಾಟಕ ವಿ.ವಿ.ಧಾರವಾಡ, 1988.

34. ಫ. ಗು. ಹಳಕಟ್ಟಿ, 'ದೇವರ ದಾಸಿಮಯ್ಯನ ವಚನಗಳು' ಶಿವಾನುಭವ ಗ್ರಂಥಮಾಲೆ ವಿಜಾಪುರ, 1928.

35. ಫ. ಗು. ಹಳಕಟ್ಟಿ, 'ಶಿವಶರಣರ ಚರಿತ್ರೆಗಳು' ಶಿವಾನುಭವ ಗ್ರಂಥಮಾಲೆ ವಿಜಾಪುರ, 1951.

36. ಫ. ಗು. ಹಳಕಟ್ಟಿ, 'ವಚನಶಾಸ್ತ್ರಸಾರ' ಶಿವಾನುಭವ ಗ್ರಂಥಮಾಲೆ ವಿಜಾಪುರ, ಭಾಗ–1 1923, ಭಾಗ–2 1938, ಭಾಗ–3 1939.

37. ಡಾ. ಫ. ಗು. ಹಳಕಟ್ಟಿ, 'ಹರಿಹರನ ರಗಳೆಗಳು' ಸಮಾಜ ಪುಸ್ತಕಾಲಯ ಧಾರವಾಡ 1968.

38. ವಿವಿಧ ಸಂಪಾದಕರು, 'ಫ. ಗು. ಹಳಕಟ್ಟಿ ಸಮಗ್ರ ಸಾಹಿತ್ಯ' ವಚನ ಪಿತಾಮಹ ಡಾ. ಫ. ಗು. ಹಳಕಟ್ಟಿ ಸಂಶೋಧನ ಕೇಂದ್ರ ಬಿ. ಎಲ್. ಡಿ. ಇ. ಸಂಸ್ಥೆ ವಿಜಾಪುರ, 2007.

39. ಡಾ. ಎಚ್. ತಿಪ್ಪೆರುದ್ರಸ್ವಾಮಿ, 'ವಚನ ಚಳುವಳಿ' ಶ್ರೀ ಶರಣ ಬಸವೇಶ್ವರ ಗ್ರಂಥ ವಿಶ್ವವಿದ್ಯಾಲಯ ಗುಲಬರ್ಗಾ, 1987.

40. ಡಾ. ಎಚ್. ತಿಪ್ಪೆರುದ್ರಸ್ವಾಮಿ, 'ಬಸವೇಶ್ವರ ವಚನ ದೀಪಿಕೆ' ಜೆ. ಎಸ್. ಎಸ್. ಗ್ರಂಥಮಾಲೆ ಮೈಸೂರು, 1995.

41. ರಂ. ಶ್ರೀ. ಮುಗಳಿ, 'ಕನ್ನಡ ಸಾಹಿತ್ಯ ಚರಿತ್ರೆ' ಗೀತಾ ಬುಕ್ ಹೌಸ ಮೈಸೂರು, 1993.

42. ಡಾ. ಸ್ನೇಹಾ ಭೂಸನೂರ, 'ಶಂಕರ ದಾಸಿಮಯ್ಯ' ಜೆ. ಎಸ್. ಎಸ್. ಗ್ರಂಥಮಾಲೆ ಮೈಸೂರು, 2003.

43. ಡಾ. ಆರ್. ಸಿ. ಹಿರೇಮಠ, ಡಾ. ಎಮ್. ಎಸ್. ಸುಂಕಾಪುರ, 'ಶಾಂತಲಿಂಗ ದೇಶಿಕ ಕೃತ ಕಥಾಮಣಿ ಸೂತ್ರ ರತ್ನಾಕರ–1, 2' ಕರ್ನಾಟಕ ವಿ. ವಿ. ಧಾರವಾಡ, 1964, 1968.

44. ಪ್ರೊ. ಕೆ. ಜಿ. ನಾಗರಾಜಪ್ಪ, 'ದೇವಾಂಗ ಸಂಸ್ಕೃತಿ' ಪಣತಿ ಪ್ರಕಾಶನ ಬೆಂಗಳೂರು 2003.

45. ಡಾ. ಮೃತ್ಯುಂಜಯ ರುಮಾಲೆ, 'ಜೇಡರ ದಾಸಿಮಯ್ಯ' ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು, 2000.

46. ಬಾಗೂರು ಆರ್. ನಾಗರಾಜಪ್ಪ, 'ದೇವರ ದಾಸಿಮಯ್ಯನವರು–ಒಂದು ಅಧ್ಯಯನ' ವಸ್ತ್ರ ಪ್ರಕಾಶನ ಹೊಸದುರ್ಗ, 2004.

47. ಪಿ. ಎಮ್. ಗಿರಿರಾಜು, 'ಶ್ರೀ ಜೇಡರ ದಾಸಮಯ್ಯದೇವ ಷಟಸ್ಥಲ ವಚನಾಗಮ' ಶರಣ ಸಂತಾನ ಮೈಸೂರು, 1989.

48. ಡಾ. ಶಿವಕುಮಾರ ಶಿವಾಚಾರ್ಯ ಮಹಾಸ್ವಾಮಿಗಳು, 'ಉಪನಿಷತ್ತು ಮತ್ತು ವಚನಗಳು ತೌಲನಿಕ ಅಧ್ಯಯನ' ಲಿಂಗಾಯತ ಅಧ್ಯಯನ ಅಕಾಡಮಿ ಬೆಳಗಾವಿ, 2004.

49. ಡಾ. ಎಂ. ಎಂ. ಕಲಬುರ್ಗಿ, 'ಶಾಸನಗಳಲ್ಲಿ ಶಿವಶರಣರು' ಕರ್ನಾಟಕ ವಿ. ವಿ. ಧಾರವಾಡ, 1970.

50. ಡಾ. ಎಸ್. ವಿದ್ಯಾಶಂಕರ, 'ವಚನಾನುಶೀಲನ' ಸ್ನೇಹ ಪ್ರಕಾಶನ ಬೆಂಗಳೂರು, 1989.

51. ಬಿ. ಮಹಾದೇವಪ್ಪ, 'ಅರಿವು–ಆಚಾರ' ಅರಿವು–ಆಚಾರ ಪ್ರಕಟನಾಲಯ ಯಾದಗಿರಿ, 1999.

52. ರಮೇಶ ಬಾಬು ಯಾಳಗಿ, 'ಕರಿಯನಿತ್ತಡೆ ಒಲ್ಲೆ' ಹಿರೇಮಠ ಹಾರಕೂಡ 2002.

53. ಡಾ. ಸಂಗಮೇಶ ಸವದತ್ತಿಮಠ, 'ಶಿವಶರಣರ ಲೊಕನೀತಿ' ಹಿರೇಮಠ ಹಾರಕೂಡ 2002.

54. ಡಾ. ಟಿ. ವ್ಹಿ. ಮಲ್ಲಾಪುರ, 'ಶರಣ ಸರೋಜ' ಕುಮಾರ ವಿರೇಶ ಪ್ರಕಾಶನ ಕಲಬುರ್ಗಿ 1976.

55. ಡಾ. ಸಿ. ನಾಗಭೂಷಣ, 'ಶರಣ ಸಾಹಿತ್ಯ ಸಂಸ್ಕೃತಿ ಕೆಲವು ಅಧ್ಯಯನಗಳು' ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು–18, 2000.

56. ಡಾ. ಸಂಗಮೇಶ ಸವದತ್ತಿಮಠ, 'ವೀರಶೈವ ವಿನ್ಯಾಸ' ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು–18, 2000.

57. ಡಾ. ಎಸ್. ಎಮ್. ಹಿರೇಮಠ, 'ಅನುಭವ ಮಂಟಪ ದರ್ಶನ' ಅನ್ನದಾನೀಶ್ವರ ಮಠ ಮುಂಡರಗಿ, 1990.

58. ಡಾ. ಎಸ್. ಎಮ್. ಹಿರೇಮಠ, 'ವಚನಕಾರರ ಕಾವ್ಯ ಮಿಮಾಂಸೆ' ಅಶ್ವಿನಿ ಪ್ರಕಾಶನ ಗುಲಬುರ್ಗಾ, 1999.

59. ಡಾ. ಪಿ. ವ್ಹಿ. ನಾರಾಯಣ, 'ವಚನ ಸಾಹಿತ್ಯ–ಒಂದು ಪರಿಚಯ' ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ಮೈಸೂರು, 2000.

60. ಡಾ. ಪಿ. ವ್ಹಿ. ನಾರಾಯಣ, 'ವಚನ ಪರಿಸರ' ತಂಗಾಳಿ ಬೆಂಗಳೂರು–11, 1994.

61. ಡಾ. ವಿಜಯಕುಮಾರ ಮಹಾನುಭಾವಿಗಳು, 'ದಾಸಿಮಯ್ಯನವರ ವಚನಗಳ ವ್ಯಾಖ್ಯಾನ' ಪ್ರಭುದೇವ ಗ್ರಂಥಮಾಲೆ ಮಾವಿನಗುಂಡಿ, ಉತ್ತರಕನ್ನಡ ಜಿಲ್ಲೆ, 2008.

62. ಡಾ. ವಿಜಯಕುಮಾರ ಮಹಾನುಭಾವಿಗಳು, 'ಶಿವಾನುಭಾವಿ ದಾಸಿಮಯ್ಯ' ಪ್ರಭುದೇವ ಗ್ರಂಥಮಾಲೆ ಮಾವಿನಗುಂಡಿ, ಉತ್ತರಕನ್ನಡ ಜಿಲ್ಲೆ, 1998.

63. ಬಾಲಚಂದ್ರ ಜಯಶೆಟ್ಟಿ, 'ಜೇಡರ ದಾಸಿಮಯ್ಯಾ ಕೆ ವಚನ' ವೀರಶೈವ

ಅಧ್ಯಯನ ಸಂಸ್ಥಾ ಡಂಬಳ, 1979.

64. ಶ್ರೀಶೈಲ. ಪ. ಕಳಸದ, 'ದೇವರ ದಾಸಮಯ್ಯಾ ಕೆ ವಚನ' ಗಾಯತ್ರಿ ಪೀಠ ಹಂಪೆ 2010.

65. ಪ್ರೊ. ಜಿ. ಎಸ್. ಸಿದ್ಧಲಿಂಗಯ್ಯ, 'ವಚನ ಸಾಹಿತ್ಯ ಒಂದು ಇಣುಕು ನೋಟ' ಬಸವ ಸಮಿತಿ ಬಸವ ಭವನ ಬಸವೇಶ್ವರ ವೃತ್ತ ಬೆಂಗಳೂರು, 1989.

66. ಡಾ. ಎಮ್ ಚಿದಾನಂದಮೂರ್ತಿ, 'ವಚನ ಪರಿಸರ' ಪ್ರಸಾರಂಗ ಬೆಂಳೂರು ವಿ. ವಿ. ಬೆಂಳೂರು, 1975.

67. ಮ. ಸು. ಕೃಷ್ಣಮೂರ್ತಿ, 'ಸಿದ್ಧಸಾಹಿತ್ಯ' ಪ್ರಸಾರಂಗ ಮೈಸೂರು ವಿ. ವಿ. ಮೈಸೂರು, 1975.

68. ಡಿ. ಎಲ್. ನರಸಿಂಹಾಚಾರ್ಯ, 'ಕೆಲವು ವಚನಕಾರರು' ಪ್ರಬುದ್ಧ ಕರ್ನಾಟಕ, ಮೈಸೂರು ವಿ. ವಿ. ಮೈಸೂರು.

69. ಡಾ. ಎಮ್. ಚಿದಾನಂದಮೂರ್ತಿ, 'ಲಿಂಗಾಯತ ಅಧ್ಯಯನ' ವಾಗ್ದೇವಿ ಪುಸ್ತಕಗಳು, 67, ದೇವರಾಜ ಅರಸು ರಸ್ತೆ, ಮೈಸೂರು–1, 1986,

70. ಜ. ಚ. ನಿ. 'ದೇವರ ದಾಸಿಮಾರ್ಯ ಪ್ರಶಸ್ತಿ' ನಿಡುಮಾಮಿಡಿ ಸಂಸ್ಥಾನ, 1953.

71. ಪ್ರೊ. ಬಸವರಾಜ ಸಬರದ, 'ಕಲಬುರ್ಗಿ ಜಿಲ್ಲಾ ದರ್ಶನ' ಪ್ರಸಾರಂಗ ಗುಲಬುರ್ಗಾ ವಿ. ವಿ. ಗುಲಬುರ್ಗಾ, 2005.

72. ಪ್ರೊ. ಆರ್. ರಾಚಪ್ಪ, 'ಜೇಡರ ದಾಸಿಮಯ್ಯನ ವಚನಗಳು' ಓಂಕಾರ ಪ್ರಕಾಶನ ವಿಜಯನಗರ ಬೆಂಗಳೂರು, 1988.

73. 'ಶ್ರೀ ದೇವಾಂಗ ಪುರಾಣ' (ಕನ್ನಡ ವಚನ) ಶ್ರೀ ಗಾಯತ್ರಿ ಪೀಠ ಮಹಾಸಂಸ್ಥಾನ ಹೇಮಕೂಟ ಹಂಪಿ, 1998.

74. ಎಸ್. ಎಸ್. ಭಾವಿಕಟ್ಟಿ, 'ಶ್ರೀ ಕಡಕೋಳ ಮಡಿವಾಳೇಶ್ವರರ ತತ್ವಪದಗಳ ಸಂಗ್ರಹ ಮಾಲೆ–1' ಶರಣ ಪ್ರಕಾಶನ ಕಲಬುರ್ಗಿ, 1985.

75. ಡಾ. ಆರ್. ಸಿ. ಹಿರೇಮಠ, 'ಮಹಾಯಾತ್ರೆ' ಪ್ರಸಾರಂಗ ಕನ್ನಡ ವಿ. ವಿ. ಹಂಪಿ, 1997.

76. Chandrashekharaiah, 'Vachanas of devara dasimayya' J.S.S. Granthamala Mysore-04, 1996.

77. Dr. H. T. Sasnur, 'Eleventh and Twenth Century Kannad Literature' Ramakrishna Academy of Education and cultre Bijapur, 1991.

3. ಶಬ್ದಕೋಶಗಳು

1. ಪಂ. ಚಂದ್ರಶೇಖರ ಮತ್ತು ಅನಿಲಕುಮಾರ ಉಪಧ್ಯಾಯ, 'ವೈದಿಕ ಕೋಶ' ನಾಗಪ್ರಕಶನ ದಿಲ್ಲಿ, 1995.
2. ಶ್ರೀ ಶ್ರೀನಿವಾಸ ಗೋಪಾಲಾಚಾರ್ಯ, 'ಶಬ್ದಾರ್ಥಕೌಸ್ತುಭಃ, ಭಾಗ 1–6' ಬೆಂಗಳೂರು ಪ್ರೇಸ್ ಬೆಂಗಳೂರು–1984.
3. ಜಿ. ಎಸ್. ಶಿವರುದ್ರಪ್ಪ, ಕೇ. ವಿ. ನಾರಾಯಣ, 'ಕಾವ್ಯಾರ್ಥ ಪದಕೋಶ' ಕಾಮಧೇನು ಪ್ರಕಾಶನ ನಾಗಪ್ಪ ರಸ್ತೆ, ಶೇಷಾದ್ರಿಪುರಂ ಬೆಂಗಳೂರು–1999.
4. ಸಂ. ಡಾ. ಎಸ್. ವಿದ್ಯಾಶಂಕರ, 'ವಚನ ಪರಿಭಾಷಾ ಕೋಶ' ಕನ್ನಡ ಪುಸ್ತಕ ಪ್ರಾಧಿಕಾರ ಬೆಂಗಳೂರು, 2001.
5. ಸಂ. ತ. ಸು. ಶಾಮರಾಯ, 'ಶಿವಶರಣ ಕಥಾರತ್ನ ಕೋಶ' ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಮೈಸೂರು, 1962.
6. ಸಂ. ಫ. ಗು. ಹಳಕಟ್ಟಿ, 'ಶಿವಾನುಭವ ಶಬ್ದಕೋಶ' ಸಮಾಜ ಪುಸ್ತಕಾಲಯ ಧಾರವಾಡ, 1972.
7. ಶ್ರೀ ಮಡಿವಾಳ ಸಾಮಿಗಳು, 'ಜೇಡರ ದಾಸಿಮಯ್ಯನವರ ವಚನ ಪದಪ್ರಯೋಗ ಕೋಶ' ಲಿಂಗಾಯತ ಅಧ್ಯಯನ ಅಕಾಡಮಿ ಬೆಳಗಾವಿ, 2007.
8. ಎಸ್. ವಿ. ಹಂಜಿ, 'ಸಂಸ್ಕೃತ ಕನ್ನಡ ಶಬ್ದಕೋಶ' ಬಿ.ಜಿ.ಎಸ್. ಪಬ್ಲಿಕೇಷನ್ ಗದಗ, 2005.

4. ಪತ್ರಿಕೆಗಳು

1. ಸಂ. ಹನುಮಾನ ಪ್ರಸಾದ ಪೋದ್ದಾರ, 'ಉಪನಿಷತ್ ಅಂಕ ಕಲ್ಯಾಣ ಪತ್ರಿಕೆ' 23 ನೆಯ ವಿಶೇಷಾಂಕ, ಗೀತಾಪ್ರೇಸ್ ಗೋರಖಪುರ.
2. ಸಂ. ರಾಮಸ್ವಾಮಿ, 'ಹಂಪೆಯನುಡಿ' ಮಾಸಪತ್ರಿಕೆ, ಟಿ.ದಾಸರಹಳ್ಳಿ, ಬೆಂಗಳೂರು.
3. ಸಂ. ಕೆ. ಸಿ. ತಿಮ್ಮಶೆಟ್ಟಿ, 'ಹೇಮತುಂಗ' ಮಾಸಪತ್ರಿಕೆ, ಎಸ್.ಆರ್.ನಗರ, ಬೆಂಗಳೂರು.
4. ಸಂ. ಡಿ. ಲಿಂಗರಾಜು, 'ನೇಕಾರವಾಣಿ' ಮಾಸಪತ್ರಿಕೆ, ಬಸವೇಶ್ವರನಗರ, ಬೆಂಗಳೂರು.
5. ಸಂ. ಹೆಚ್. ರಾಜಶೇಖರ್, 'ದೇವಾಂಗ ಜ್ಯೋತಿ' ಮಾಸಪತ್ರಿಕೆ, ಟಿ. ದಾಸರಹಳ್ಳಿ, ಬೆಂಗಳೂರು.
6. ಸಂ. ಎ. ವಿ. ನಾಗರಾಜ್, 'ದೇವಾಂಗ ಘರ್ಜನೆ' ಮಾಸಪತ್ರಿಕೆ, ಎಸ್.ಆರ್.ನಗರ, ಬೆಂಗಳೂರು.